ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಪ್ರೊ. ಶ್ರೀಮತಿ ಗಂಗಾಂಬಿಕಾ ಅಪ್ಪಾಸಾಹೇಬ ಚೌಗಲಾ

ಕೆ.ಎಲ್.ಇ. ಸಂಸ್ಥೆಯ

ಜಿ.ಆಯ್. ಬಾಗೇವಾಡಿ ಪದವಿ ಹಾಗೂ ಸ್ನಾತಕೋತ್ತರ ವಿಭಾಗ

ನಿಪ್ಪಾಣಿ, ತಾ. ಚಿಕ್ಕೋಡಿ, ಜಿ. ಬೆಳಗಾವಿ

ಕರ್ನಾಟಕ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಸಹ ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೧೪-೧೫

ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಪ್ರೊ. ಶ್ರೀಮತಿ ಗಂಗಾಂಬಿಕಾ ಅಪ್ಪಾಸಾಹೇಬ ಚೌಗಲಾ

ಕೆ.ಎಲ್.ಇ. ಸಂಸ್ಥೆಯ
ಜಿ.ಆಯ್. ಬಾಗೇವಾಡಿ ಪದವಿ ಹಾಗೂ ಸ್ನಾತಕೋತ್ತರ ವಿಭಾಗ
ನಿಪ್ಪಾಣಿ, ತಾ. ಚಿಕ್ಕೋಡಿ, ಜಿ. ಬೆಳಗಾವಿ
ಕರ್ನಾಟಕ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಸಹ ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೧೪-೧೫

ಮಾರ್ಗದರ್ಶಕರ ದೃಢೀಕರಣ ಪತ್ರ

ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ಶ್ರೀಮತಿ ಜೆ.ಎ. ಚೌಗಲಾ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಹೆಬ್ಬಾಳೆ ನಾಗೇಶ್

ದಿನಾಂಕ: 26.12.2014

ಸ್ಥಳ: ವಿದ್ಯಾರಣ್ಯ

ಡಾ. ಹೆಬ್ಬಾಳೆ ಕೆ. ನಾಗೇಶ್
ಮಾರ್ಗದರ್ಶಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಂಶೋಧಕರ ಪ್ರಮಾಣ ಪತ್ರ

ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ ಎಂಬ ಮಹಾಪ್ರಬಂಧವನ್ನು **ಡಾ.ಹೆಬ್ಬಾಲೆ ಕೆ. ನಾಗೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ: 26.12.2014
ಸ್ಥಳ: ವಿದ್ಯಾರಣ್ಯ

ಶ್ರೀಮತಿ ಜಿ.ಎ. ಚೌಗಲಾ
ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನನ್ನ ಮನದಾಳದ ಮಾತು

ಸಂತಿ ನನ್ನ ಚಿಕ್ಕೋಡಿ । ಹಂಪಿ ನನ್ನ ಚಿಂಚಣಗಿ
ನಾಮಾಡಿ ನಾಹ್ಯಾಂಗ ಉಣಲಿ ಹಡೆದವ್ವ । ನಿನಗ
ಸಂತೋಷದ ಸುದ್ದಿ ಕಳುವೇನ ।

ಕನ್ನಡ ವಿಶ್ವವಿದ್ಯಾಲಯದಲ್ಲಿ 'ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ' ಎಂಬ ವಿಷಯವನ್ನು ಕುರಿತು ಸಂಶೋಧನೆ ಕೈಗೊಂಡು ಮಹಾಪ್ರಬಂಧವನ್ನು ಸಲ್ಲಿಸಲು ನನಗೆ ಅವಕಾಶ ಕಲ್ಪಿಸಿಕೊಟ್ಟ ಕುಲಪತಿಗಳಾದ ಡಾ.ಹಿ.ಚಿ. ಬೋರಲಿಂಗಯ್ಯ ಅವರಿಗೆ, ಕುಲಸಚಿವರಾದ ಡಾ.ವಿಜಯ್ ಪೂಣಚ್ಚ ತಂಬಂಡ ಹಾಗೂ ಸಮಾಜ ವಿಜ್ಞಾನ ನಿಕಾಯದ ಡೀನ್ ಆದ ಡಾ.ಕೆ.ಎಂ. ಮೇತ್ರಿ, ಅಲ್ಲದೆ ಸಲಹೆಗಳನ್ನು ನೀಡಿದ ಡಾ. ರಹಮತ್ ತರಿಕೇರೆ ಅವರಿಗೆ ನನ್ನ ವಿನಯಪೂರ್ವಕ ಕೃತಜ್ಞತೆಗಳು.

ಸಂಶೋಧನಾ ಅಧ್ಯಯನವನ್ನು ಕೈಗೊಳ್ಳುವವರಿಗೆ ಸದಾ ಶ್ರೇಯಸ್ ಬಯಸುವ ಸಹೃದಯ ಮಾರ್ಗದರ್ಶಕರಾದ ಡಾ. ಹೆಬ್ಬಾಲೆ ಕೆ. ನಾಗೇಶ್ ಅವರಿಗೆ ಹೃದಯಪೂರ್ವಕ ವಂದನೆಗಳು. ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟ ಹಿತನುಡಿ ಹಾಗೂ ಸಹಕಾರ ನೀಡುವ ಮೂಲಕ ಪ್ರೇರಣೆ ನೀಡಿದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಸಿ.ಟಿ. ಗುರುಪ್ರಸಾದ್ ಅವರಿಗೆ ಹಾಗೂ ವಿಭಾಗದ ಪ್ರಾಧ್ಯಾಪಕರುಗಳಾದ ಡಾ.ಮಂಜುನಾಥ ಬೇವಿನಕಟ್ಟಿ, ಡಾ. ಗಣೇಶ್ ಮೊಗಳ್ಳಿ, ಡಾ. ಸ.ಚಿ. ರಮೇಶ್ ಅವರಿಗೆ ನನ್ನ ನಮನಗಳು. ಹಾಗೆಯೇ ಆಡಳಿತ ಸಿಬ್ಬಂದಿಗಳಾದ ಶ್ರೀ ಅಜಿತ್ ಹಡಪದ, ಶ್ರೀ ರೆಡ್ಡಿ ಅವರ ಸಹಕಾರಕ್ಕೆ ನನ್ನ ಆತ್ಮೀಯ ಕೃತಜ್ಞತೆಗಳು.

ಜನಪದ ಮಹಿಳೆಯನ್ನು ಸ್ಮರಿಸಿಕೊಳ್ಳುತ್ತಾ ಭಾರತ ದೇಶದ ಹಲವು ಧರ್ಮಗಳ ನೆಲೆವೀಡು. ಪ್ರತಿ ೪೦ ಕಿ.ಮೀ.ಗೆ ಇಲ್ಲಿಯ ಭಾಷೆ, ತಿಂಡಿ-ತಿನಿಸು, ಸಂಪ್ರದಾಯ, ಆಚರಣೆ, ನಂಬಿಕೆ, ಪದ್ಧತಿಗಳಲ್ಲಿ ಬದಲಾವಣೆ ಕಂಡರೂ, ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸುವದೇ ಇಲ್ಲಿನ ಮಣ್ಣಿನ ವಿಶೇಷ ಗುಣ. ಅಂತೆಯೇ ಭಾರತೀಯರು ಪೂಜಿಸುವ ದೇವರುಗಳಿಗೆ ಇತಿಯಿಲ್ಲ ಮಿತಿಯಿಲ್ಲ. ಈ ನಿಟ್ಟಿನಲ್ಲಿ ನಾನು 'ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ' ಮಹಾಪ್ರಬಂಧದ ವಿಷಯವನ್ನು ಆಯ್ಕೆ ಮಾಡಿಕೊಂಡಾಗ ನನಗೆ ಮಾರ್ಗದರ್ಶಕರಾಗಿ ದೊರಕಿದ್ದು ಡಾ. ಹೆಬ್ಬಾಲೆ ಕೆ. ನಾಗೇಶ್.

ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಅಧ್ಯಯನ ಮಾಡಬೇಕಾದ ಸಂದರ್ಭದಲ್ಲಿ ಮನೆಯಲ್ಲಿ ಕುಳಿತು ಮಾಡುವ ವಿಷಯವಲ್ಲ ನಾನು ಪ್ರತಿಯೊಂದು ಹಳ್ಳಿಗೆ ಕ್ಷೇತ್ರಕಾರ್ಯಕ್ಕೆ ಹೋಗಿಯೇ ಮಾಡಬೇಕು. ಇಂತಹ ಕ್ಷೇತ್ರಕಾರ್ಯದಲ್ಲಿ ಮತ್ತು ಬರವಣಿಗೆಯ ಸಂದರ್ಭದಲ್ಲಿ ಅನೇಕ ಕ್ಲಿಷ್ಟ ಸಮಸ್ಯೆಗಳು ತಲೆದೋರಿದಾಗ ಈ ಮಹಾಪ್ರಬಂಧದ ರಚನೆಯ ಪ್ರತಿ ಹಂತದಲ್ಲೂ ಪ್ರೋತ್ಸಾಹಿಸಿ

ಸೂಕ್ತ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದ ಡಾ. ಹೆಬ್ಬಾಲೆ ಕೆ. ನಾಗೇಶ್ ಅವರನ್ನು ಮತ್ತೊಮ್ಮೆ ಕೃತಜ್ಞತೆಯಿಂದ ನೆನೆಯುತ್ತೇನೆ.

ಪಿಎಚ್.ಡಿ. ಪ್ರವೇಶ ಪರೀಕ್ಷೆಗೆ ಅನುಮತಿಯಿತ್ತ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷರಾದ ಡಾ. ಪ್ರಭಾಕರಣ್ಣಾ ಕೋರೆ, ಎಂ.ಪಿ. ಹಾಗೂ ಉಪಕಾರ್ಯಾಧ್ಯಕ್ಷರಾದ ಶ್ರೀ ಅಶೋಕಣ್ಣಾ ಬಾಗೇವಾಡಿ, ನಿರ್ದೇಶಕರಾದ ಶ್ರೀ ಮಹಾಂತೇಶಣ್ಣಾ ಕವಟಗಿಮಠ, ಎಂ.ಎಲ್.ಸಿ. ಆಡಳಿತ ಮಂಡಳಿಯ ಎಲ್ಲ ನಿರ್ದೇಶಕರಿಗೂ ಸ್ಥಾನಿಕ ಆಡಳಿತ ಮಂಡಳಿಯ ಎಲ್ಲ ಸದಸ್ಯರಿಗೂ ನನ್ನ ವಿನಯಪೂರ್ವಕ ಕೃತಜ್ಞತೆಗಳು.

'ಮದುವೆಯೆಂಬ ಸಂಸಾರದ ನೊಗ ಹೊತ್ತು ನಿಂತಾಗ' ಕುಟುಂಬದಲ್ಲಿ ಬರುವ ಎಲ್ಲ ಸಮಸ್ಯೆಗಳನ್ನು ಬದಿಗಿಟ್ಟು, ನಾನು ಕ್ಷೇತ್ರಕಾರ್ಯಕ್ಕೆ ಹೊರಟಾಗ ನನ್ನ ಉಸಿರಿಗೆ ಉಸಿರಾಗಿ ನಿಂತ ನನ್ನ ಮುದ್ದು ಮಗ ಓಂಕಾರ ಮಹಾದೇವ ಬೆಂಡವಾಡೆ ಹಾಗೂ ನನ್ನ ಮಗನ ಜೀವದಂತಿರುವ ನನ್ನ ಸಹೋದರನ ಮಗನಾದ ವಿಜಯ ಚೌಗಲಾ ಇವರಿಬ್ಬರು ಫೋಟೋ ತೆಗೆಯುವಲ್ಲಿ, ವಿಡಿಯೋ ರೆಕಾರ್ಡಿಂಗ್ ಮಾಡುವಲ್ಲಿ, ಅಚ್ಚುಕಟ್ಟಾಗಿ ಲ್ಯಾಪಟಾಪಿಗೆ ಜೋಡಿಸುವಲ್ಲಿ ಬಹಳ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅವರಿಗೆ ನನ್ನ ಪ್ರೀತಿಯ ಕೃತಜ್ಞೆತೆಗಳು. ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಸಹಕಾರ ನೀಡಿದ ಪತಿ ಶ್ರೀ ಮಹಾದೇವ ಬೆಂಡವಾಡೆ ವಕೀಲರು ಮತ್ತು ನೋಟರಿ, ಬಾರ್ ಕೌನ್ಸಿಲ್ ಪ್ರೆಸಿಡೆಂಟ್ ಇವರಿಗೂ ಕೃತಜ್ಞೆತೆಗಳು.

'ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿದಂತೆ' ಎಂದು ಮೂಗು ಮುರಿಯುವ ಇಂದಿನ ಸಮಾಜದಲ್ಲಿ ನಾನು ಹುಟ್ಟಿದಾಗ ನನ್ನ ತಂದೆ 'ಹೆಣ್ಣು ಪುಣ್ಯದ ಫಲವೆಂದು' ಸಂತಸಪಟ್ಟಿದ್ದರು. ಸ್ನಾತಕೋತ್ತರ ಪದವಿಯತನಕ ನನಗೊಬ್ಬಳಿಗೆ ಶಿಕ್ಷಣ ನೀಡಲಿಲ್ಲ. ನನ್ನ ಚಿಕ್ಕಪ್ಪಂದಿರ ಹೆಣ್ಣು ಮಕ್ಕಳಿಗೆ ಉನ್ನತ ವ್ಯಾಸಂಗ ನೀಡಿದ್ದು ಅವರ ಉದಾರ, ದೂರದೃಷ್ಟಿ ಎದ್ದು ಕಾಣುತ್ತದೆ. ಅಪ್ಪ ಕಾಯಕಯೋಗಿ, ಶ್ರಮಜೀವಿ, ಪರೋಪಕಾರಿ ಬೇರೆಯವರ ಮಕ್ಕಳಿಗೂ ಶಿಕ್ಷಣ ನೀಡುವಲ್ಲಿ ಸಹಕಾರಿಯಾದರು. ಭೌತಿಕವಾಗಿ ಅವರಿರದಿದ್ದರೂ ನಮ್ಮೆಲ್ಲರಿಗೆ ಬದುಕನ್ನು ಕಲಿಸಿ, ಬದುಕನ್ನು ಬೆಳೆಸಿ, ಭವಿಷ್ಯವನ್ನೇ ರೂಪಿಸಿದ ರೂವಾರಿ ಅಪ್ಪ, ಲಿಂಗೈಕ್ಯ ಶ್ರೀ ಅಪ್ಪಾಸಾಹೇಬ ಭೀ. ಚೌಗಲಾ ಸಾ. ಚಿಂಚಣಿ ಇವರನ್ನು ಅಂತರಂಗದಲ್ಲಿ ಸ್ಮರಿಸುವೆ.

ನಾನು ಕನ್ನಡ ವಿಶ್ವವಿದ್ಯಾಲಯ, ಹಂಪಿಗೆ ಭೇಟಿ ಕೊಟ್ಟಾಗ, ಕ್ಷೇತ್ರಕಾರ್ಯಕ್ಕೆ ಹೋದಾಗ ನನ್ನ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದ ಪ್ರೀತಿಯ ಅತ್ತಿಗೆಯಂದಿರಾದ ಶ್ರೀಮತಿ ಸವಿತಾ ಚೌಗಲಾ, ಶೈಲಾ ಚೌಗಲಾ, ಸುಜಾತಾ ಚೌಗಲಾ, ಸಾರಿಕಾ ಚೌಗಲಾ, ಕಲಾವತಿ ಇವರಿಗೆ ಕೃತಜ್ಞತೆಗಳು ಹಾಗೂ ಸಹೋದರರಾದ ಸುರೇಶ, ಸಂಗಮೇಶ, ರವೀಂದ್ರ, ಶಿವಾನಂದ, ಸುಭಾಷ, ಬಸವರಾಜ. ಸಂಜಯ, ರಾಜೇಂದ್ರ, ವೀರೇಂದ್ರ, ಮಹೇಶ, ಸಹೋದರಿಯರಾದ ಸಂಗೀತಾ, ಸುನಿತಾ, ಸುರೇಖಾ, ನಿರ್ಮಲಾ, ಕಾಂಚನಾ, ಶಾಂತಾ, ಕೃಷ್ಣಾ, ಹೇಮಾ ಹಾಗೇನೆ ಅಪ್ಪನ ಜೀವದಂತಿರುವ ನನ್ನ ಚಿಕ್ಕಪ್ಪಂದಿರಾದ ಶ್ರೀ ಲಕ್ಷ್ಮಣ, ಶ್ರೀ ಕಲ್ಲೇಶ, ಶ್ರೀ ರಾಮಚಂದ್ರ ಮತ್ತು ನನ್ನ ಎಲ್ಲ ಚಿಕ್ಕಮ್ಮಂದಿರು ಹಾಗೂ ನನ್ನ ತಾಯಿಯ ಸಹಕಾರಕ್ಕೆ ಕೃತಜ್ಞತೆಗಳು.

ಸಂಶೋಧನ ಕಮ್ಮಟದಲ್ಲಿ ಭಾಗವಹಿಸುವ ಸಂದರ್ಭ ಬಂದಾಗ ನನ್ನ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯರಾದ ಡಾ. ವಿಜಯ ಬೆಂಗೇರಿಯವರ ಸಹಕಾರಕ್ಕೆ ಮತ್ತು ಈಗಿನ ಪ್ರಾಚಾರ್ಯರಾದ ಡಾ. ಎಂ.ಬಿ. ಕೋಥಳಿ ಸರ್ ಇವರಿಗೆ ಕೃತಜ್ಞತೆಗಳು.

ಸದಾ ನನ್ನ ಅಭ್ಯುದಯವನ್ನೇ ಬಯಸುವ ಆತ್ಮೀಯ ಸಹೋದ್ಯೋಗಿಗಳಾದ ಪ್ರೊ. ವಿಜಯ ಧಾರವಾಡ, ಕನ್ನಡ ವಿಭಾಗದ ಮುಖ್ಯಸ್ಥರು, ಪ್ರೊ. ಬಿ.ಎಂ. ಹಿರೇಮಠ, ಡಾ. ಬಿ.ಎಸ್. ಕಾಂಬಳೆ, ಡಾ. ಖರಾಬೆ, ಡಾ. ಜಾಗನೂರೆ, ಪ್ರೊ. ವನಕಿ, ಡಾ. ಕಮತಿ, ಡಾ. ಮಹೇಶ ಗುರುನಗೌಡರ, ಡಾ. ಹೆಚ್.ಸಿ. ಚೆನ್ನಪ್ಪಗೋಳ ಎಲ್ಲ ರೀತಿಯ ಹಿರಿ ಕಿರಿಯರ ಸಹಕಾರಕ್ಕೆ ಕೃತಜ್ಞತೆಗಳು. ಹಾಗೆಯೇ ಆಫೀಸ್ ಸಿಬ್ಬಂದಿಗಳಾದ ಶ್ರೀ ಪಿ.ಎ. ಕಾಂಬಳೆ, ಶ್ರೀ ಎಮ್.ಎಸ್. ಮಧಾಳೆ ಇವರಿಗೆ ನನ್ನ ಕೃತಜ್ಞತೆಗಳು.

ನನ್ನ ಪ್ರಾಣಕ್ಕೆ ಪ್ರಾಣದಂತಿರುವ ಪ್ರೀತಿಯ ಸಹೋದ್ಯೋಗಿಗಳಾದ ಪ್ರೊ. ಶ್ರೀಮತಿ ಕಿಶೋರಿ ಜೋಶಿ, ಪ್ರೊ. ಸಂಗೀತಾ ಸಪ್ತಸಾಗರ, ಪ್ರೊ. ಅನಿತಾ ಜಾಧವ ಇವರೆಲ್ಲರೂ ಮರಾಠಿ ಲೇಖನಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಡುವಲ್ಲಿ ಸಹಕಾರಿಯಾದರು. ಪ್ರೊ. ಬಸವರಾಜೇಶ್ವರಿ, ಪ್ರೊ. ಉಮಾ, ಪ್ರೊ. ಹಸೀನಾ, ಪ್ರೊ. ಪ್ರೇಂಕಜ, ಪ್ರೊ. ಶಿವಲೀಲಾ, ಪ್ರೊ. ಶ್ರೀದೇವಿ, ಪ್ರೊ. ಲಿಗಾಡೆ, ಪ್ರೊ. ಹೇಮಾ, ಡಾ. ಮಲ್ಲಮ್ಮಾ, ಡಾ. ಮಹಾದೇವಿ, ಪ್ರೊ. ಶುಭಂ, ಪ್ರೊ. ಭಾಗ್ಯಲಕ್ಷ್ಮೀ, ಪ್ರೊ. ಗೀತಾ, ಪ್ರೊ. ಸೀಮಾ, ಪ್ರೊ. ಗಿರಿಜಾ, ಪ್ರೊ. ಜ್ಯೋತಿ, ಪ್ರೊ. ಜಯಶ್ರೀ, ಪ್ರೊ. ವೀಣಾ, ಪ್ರೊ. ರೇಶ್ಮಾ ಇವರೆಲ್ಲರೂ ನನಗೆ ಸ್ಫೂರ್ತಿಯಾಗಿ ಪ್ರೇರಕ ಶಕ್ತಿಯಾಗಿ ಸಹಕಾರ ನೀಡಿದ್ದಕ್ಕೆ ಕೃತಜ್ಞತೆ ಹೇಳದಿದ್ದರೆ ತಪ್ಪಾದೀತು.

'ಕನ್ನಡದ ಕಲ್ಪವೃಕ್ಷ' ಚಿಂಚಣಿಯ ಸಿದ್ದ ಸಂಸ್ಥಾನ ಮಠದ ಮಹಾಸ್ವಾಮೀಜಿಯಾದ ಶ್ರೀ ಅಲ್ಲಮಪ್ರಭುಗಳು ಕೇವಲ ಮಠಕಷ್ಟೇ ಸೀಮಿತವಾಗಿಲ್ಲ, 'ಅಲ್ಲಮಪ್ರಭು ಜನ ಕಲ್ಯಾಣ ಸಂಸ್ಥೆ'ಯನ್ನು ಹುಟ್ಟುಹಾಕಿ, 'ಗಡಿ ಕನ್ನಡ ಜಾಗೃತ ಪುಸ್ತಕ ಮಾಲೆ'ಯೆಂಬ ಪ್ರಕಾಶನದಡಿಯಲ್ಲಿ ೪೦ಕ್ಕೂ ಹೆಚ್ಚು ಪುಸ್ತಕಗಳನ್ನು ಹೊರ ತಂದಿದ್ದಾರೆ. ನನ್ನ ಮಹಾಪ್ರಬಂಧದ ಉದ್ದಕ್ಕೂ ಅವರ ಆಶೀರ್ವಾದವಿದ್ದುದರಿಂದಲೇ ಇದನ್ನು ಮುಗಿಸಲು ಸಾಧ್ಯವಾಯ್ತು ಅವರಿಗೆ ನನ್ನ ಭಕ್ತಿ ಪೂರ್ವಕ ನಮನಗಳು.

ಅಕ್ಷರ ಸಂಯೋಜನೆ ಮತ್ತು ಪುಟವಿನ್ಯಾಸ ಮಾಡಿದ ಬಸವರಾಜ ಹೆಚ್.ಬಿ., ಕರಡು ತಿದ್ದುವಲ್ಲಿ ಸಹಕರಿಸಿದ ಪಾತಲಿಂಗಪ್ಪ, ಓಬಳಪ್ಪ ಕೆ.ಎ., ಶ್ರೀ ಮಲ್ಲಿಕಾರ್ಜುನ ಹಾಗೂ ಅಂದವಾಗಿ ಮುದ್ರಣ ಮಾಡಿದ ಮಂಜುನಾಥ ಅವರಿಗೆ ಕೃತಜ್ಞತೆಗಳು.

ಕೊನೆಯದಾಗಿ ತೆರೆದ ಕಣ್ಣಿನಿಂದ, ತೆರೆದ ಹೃದಯದಿಂದ ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡು, ಮುಕ್ಕೋಟಿ ದೇವರನ್ನು ಪೂಜಿಸುವ ಸಮಸ್ತ ಚಿಕ್ಕೋಡಿ ತಾಲೂಕಿನ ಜನಪದರಿಗೆ ನನ್ನ ಬಾಗಿದ ಶಿರ ಮುಗಿದ ಕೈ.

ಪ್ರೊ. ಶ್ರೀಮತಿ ಜಿ.ಎ. ಚೌಗಲಾ

ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ

ಪರಿವಿಡಿ

ಅಧ್ಯಾಯ ಒಂದು

ಪ್ರಸ್ತಾವನೆ

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಭಾರತೀಯ ಸಂಸ್ಕೃತಿಯಲ್ಲಿ ಜನಪದ ಸಾಹಿತ್ಯ ಪರಂಪರೆ ಬಹು ಮಹತ್ವಪೂರ್ಣ ಅಂಗವಾಗಿದೆ. ಆದಿಮಾನವನ ಮೂಲ ನೆಲೆಯನ್ನು ತಿಳಿಸಿಕೊಡುವ ಜನಪದ ಸಾಹಿತ್ಯ, ಸಂಸ್ಕೃತಿಯು ಮನುಕುಲದ ಬೆಳವಣಿಗೆಯನ್ನು ವಿಸ್ತಾರವಾದ ನೆಲೆಯಲ್ಲಿ ಹಂತ ಹಂತವಾಗಿ ತಿಳಿಸಿಕೊಡುವಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿದೆ. ಜನಪದವು ಜನರಿಂದ ಸೃಷ್ಟಿಯಾಗಿರುವಂತದ್ದು. ನಾಗರಿಕತೆಯ ಲೋಕದಿಂದ ದೂರದಲ್ಲಿಯೇ ವಾಸಿಸುತ್ತಿರುವ, ಅಶಿಕ್ಷಿತ ಸಾಮಾನ್ಯ ಜನರು ತಮ್ಮ ಸೃಜನಶೀಲ ದೃಷ್ಟಿಕೋನದಿಂದ ತಾವೇ ಸೃಷ್ಟಿಸಿ, ಪೋಷಿಸಿ, ಬೆಳೆಸಿಕೊಂಡು ಬಂದು ಇಂದಿನ ಆಧುನಿಕ ಯುಗಕ್ಕೆ ಮರೆಯಲಾರದಂತಹ ಕಾಣಿಕೆ ನೀಡಿದ್ದಾರೆ. ಇಂತಹ ಜನಪದರಲ್ಲಿ ಹಬ್ಬ, ಆಚರಣೆ, ಜಾತ್ರೆ, ಸಂಪ್ರದಾಯ, ನಂಬಿಕೆ, ವಿಧಿ–ವಿಧಾನ, ಸಂಸ್ಕಾರ, ಕ್ರೀಡೆ ಮುಂತಾದ ಹಲವು ಬಗೆಯ ವಿಧಾನಗಳನ್ನು ತಮ್ಮ ಜೀವನದುದ್ದಕ್ಕೂ ಮುಂದುವರೆಸಿಕೊಂಡು ಬಂದಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಜನಸಮ್ಮುಖವಾಗಿಯೇ ಇವರ ವಿಧಿ–ವಿಧಾನಗಳು ಬೆಳೆದು ಬಂದಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಜನಪದರು ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮರೆಯಲಾಗದಂತಹ ಗುರುತನ್ನು ಮೂಡಿಸುವಲ್ಲಿ ಅತ್ಯಂತ ಯಶಸ್ವಿಯನ್ನು ಕಂಡುಕೊಂಡಿದ್ದಾರೆ. ಪ್ರಸ್ತುತ ಆಧುನಿಕ ಸಾಹಿತ್ಯದಲ್ಲಿ ಜನಪದವೆಂಬುದು ಎಲ್ಲದಕ್ಕೂ ಮೂಲವೆಂದು ಗುರುತಿಸಲಾಗಿದೆ. ಸಂಸ್ಕೃತಿಯ ಅನನ್ಯತೆ, ಬದುಕಿನ ತಿರುವುಗಳನ್ನು ತಾವು ಆಚರಿಸಿಕೊಂಡು ಬರುತ್ತಿರುವ ಪ್ರತಿಯೊಂದು ಅಂಶಗಳಿಗೂ ಒಂದೊಂದು ಪ್ರಾಧಾನ್ಯತೆ ನೀಡುತ್ತಾ ಪ್ರಕೃತಿಯ ಸಕಲ ಜೀವರಾಶಿಗಳಲ್ಲಿ ದೈವತ್ವವನ್ನು ಕಾಣುತ್ತ, ಸೂರ್ಯ–ಚಂದ್ರರ ಸಾಕ್ಷಿಯಾದಿಯಾಗಿ ಆತ್ಮತೃಪ್ತಿಯ ಬದುಕನ್ನು ಸವೆಸಿದವರು ನಮ್ಮ ಜನಪದರು. ಇಂತಹ ಜನಪದ ನಿಷ್ಕಲ್ಮಶವಾದ ವೈಶಿಷ್ಟಪೂರ್ಣ ಬದುಕನ್ನು ಅಧ್ಯಯನ ಮಾಡುವುದು ಅತ್ಯಂತ ಸೂಕ್ತವೂ, ಸಮರ್ಪಕವೂ ಆಗಿದೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿದ್ವಾಂಸರು 'ದೇಸಿ' ಅಥವಾ ಜನಪದೀಯ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯ ಎಂದೆರಡು ಭಾಗಗಳಾಗಿ ವಿಂಗಡಿಸಿಕೊಂಡು ಅಮೂಲಾಗ್ರವಾಗಿ ನಿರಂತರ ಅಧ್ಯಯನ ಮಾಡಿಕೊಂಡು ಬಂದಿದ್ದಾರೆ. ಶಿಷ್ಟ ಸಾಹಿತ್ಯದ ಮೂಲ ಬೇರು

ಜನಪದ ಸಾಹಿತ್ಯ. ಈ ಜನಪದೀಯ ಅಧ್ಯಯನ ಕುರಿತಾಗಿ ಅನೇಕ ಭಾರತೀಯ ಹಾಗೂ ಪಾಶ್ಚಿಮಾತ್ಯ ವಿದ್ವಾಂಸರು ಹಲವಾರು ವಿಭಿನ್ನ ನೆಲೆಗಳಲ್ಲಿ ಅಭ್ಯಾಸ ಮಾಡಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ಜನಪದರ ಪ್ರತಿಯೊಂದು ಚಲನೆಯೂ ಸಹ ಸಾಹಿತ್ಯವಾಗಿ ರೂಪಗೊಂಡಿರುವುದು ಇದರ ಹೆಚ್ಚುಗಾರಿಕೆಯನ್ನು ತಿಳಿಸುತ್ತದೆ. ಬಹುಶಾಸ್ತ್ರೀಯ ನೆಲೆಗಳನ್ನು ಅಳವಡಿಸುವ ಮೂಲಕ ಜನಪದವನ್ನು ಅಧ್ಯಯನ ಮಾಡಿ ಜನಪದಕ್ಕೆ ಜಾಗತಿಕ ಮಟ್ಟದಲ್ಲಿ ಉನ್ನತ ಸ್ಥಾನವನ್ನು ದೊರಕಿಸಿಕೊಡುವಲ್ಲಿ ಯಶಸ್ವಿಯಾಗಿದೆ. ಒಂದು ಸಾಹಿತ್ಯವನ್ನು ವಿವಿಧ ಆಯಾಮಗಳಿಂದ ಅಧ್ಯಯನ ಮಾಡುವುದರಿಂದ ಅದರಲ್ಲಿನ ಶ್ರೇಷ್ಟ ಅಂಶಗಳು ಬೆಳಕಿಗೆ ಬರಲು ಪೂರಕವಾಗುತ್ತದೆ. ಅನೇಕ ವಿದ್ವಾಂಸರು, ಪ್ರಾಧ್ಯಾಪಕರು, ಸಂಶೋಧಕರು ಈ ಜನಪದವನ್ನು ವಿಭಿನ್ನ ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಹೊಸ ಹೊಸ ಅನ್ವೇಷಣೆಗಳ ಮೂಲಕ ಜನಪದ ಸಾಹಿತ್ಯಕ್ಕೆ ನೂತನ ರೂಪವನ್ನು ನೀಡುವ ಪ್ರಯತ್ನ ನಡೆಸಿರುವುದು ನಿಜಕ್ಕೂ ಶ್ಲಾಘನೀಯವಾದ ಸಂಗತಿ. ತುಂಬು ಹೊಳೆಯಾಗಿ ಹರಿಯುತ್ತಿರುವ ಜನಪದ ಕ್ಷೇತ್ರ ಎಲ್ಲಾ ದೃಷ್ಟಿಯಿಂದಲೂ ಅಧ್ಯಯನಗಳಿಗೆ ಯೋಗ್ಯತೆಯನ್ನು ಪಡೆದಿದೆ. ಸಾಮಾಜಿಕ, ಮಾನಸಿಕ, ಆರ್ಥಿಕ, ಧಾರ್ಮಿಕ, ರಾಜಕೀಯ, ವೈಜ್ಞಾನಿಕ, ವೈಚಾರಿಕ, ಪ್ರಗತಿಪರ ಚಿಂತನೆ ಮತ್ತು ಸಾಂಸ್ಕೃತಿಕವಾಗಿ ಜನಪದ ಸಾಹಿತ್ಯ ತನ್ನನ್ನು ತಾನು ಅಧ್ಯಯನ ವೀಕ್ಷಣೆಗೆ ಒಳಪಡಿಸಿಕೊಂಡಿದೆ. ಬಂಗಾರ ಉಜ್ಜಿದಷ್ಟು ಹೊಳೆಯುತ್ತದೆ. ಕಲ್ಲು ಕಡೆದಷ್ಟು ಉತ್ತಮ ಶಿಲೆಯಾಗಿ ರೂಪುಗೊಳ್ಳುತ್ತದೆ. ಹಾಗೆಯೇ ಜನಪದವನ್ನು ವಿವಿಧ ಆಯಾಮಗಳಲ್ಲಿ ಅಧ್ಯಯನ ಮಾಡಿದಾಗ ಅದರೊಳಗೆ ಅಡಗಿರುವ ಅಂತಸತ್ವದ ಗುಣ ನಮಗೆ ಕಾಣುತ್ತದೆ. ಈ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯವು ಸಾಗರೋಪಾದಿಯಲ್ಲಿ ತನ್ನ ವಿಸ್ತಾರವನ್ನು ಪಡೆದುಕೊಂಡಿದೆ. ಇನ್ನು ವಿಶಾಲ ವ್ಯಾಪ್ತಿಯನ್ನು ಪಡೆಯುತ್ತಲೇ ಮುಂದುವರೆದಿದೆ.

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ಚಿಕ್ಕೋಡಿ ತಾಲೂಕಿನ ಜಾತ್ರೆಗಳಲ್ಲಿ ಅಡಕವಾಗಿರುವ ಜನಪದಿಯ ಮೌಲ್ಯಗಳಾದ ಆಚರಣೆಗಳು, ಪದ್ಧತಿಗಳು, ಒಡಪುಗಳು, ಗಾದೆ, ಜನಪದ ಹಾಡುಗಳು, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಲಿಂಗ ತಾರತಮ್ಯ, ಮಹಿಳಾ ಸಂವೇದನೆಗಳು ಹೀಗೆ ಒಟ್ಟಾರೆ ಅಧ್ಯಯನ ಕ್ರಮವನ್ನು ಮಹಾನ್ವೇಷಣೆ ಎಂದು ಗುರಿತಿಸಿಕೊಳ್ಳಲಾಗಿದೆ.

ಜನಪದರಲ್ಲಿ ಆಚರಿಸಲ್ಪಡುವ ಪ್ರತಿಯೊಂದು ಆಚರಣೆಗೆ ಅದರದೇ ಆದ ವಿಶೇಷ ಸ್ಥಾನಮಾನಗಳು ಇವೆ. ಪ್ರತಿಯೊಂದು ಆಚರಣೆಯನ್ನು ಜನಪದರು ಅತ್ಯಂತ ವೈಭವದಿಂದ ತಮ್ಮ ಸಂಸ್ಕೃತಿಯನ್ನು ಬಿಂಬಿಸುವಂತೆ ಆಚರಿಸಲ್ಪಡುತ್ತಾರೆ. ನಂಬಿಕೆ, ಸಂಪ್ರದಾಯದಂತಹ ವಿಚಾರಗಳಲ್ಲಿ ತಮ್ಮ ಪರಂಪರೆಯನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ಆ ಕಾರಣಕ್ಕಾಗಿಯೇ ಜನಪದರು ಆಚರಿಸುವ ಎಲ್ಲಾ ಆಚರಣೆಗಳು ವೈಶಿಷ್ಟ್ಯಪೂರ್ಣವಾಗಿವೆ ಎಂದು ಹೇಳಬಹುದು.

ಇಂತಹ ಜನಪದರ ಆಚರಣೆಗಳಲ್ಲಿ ಜಾತ್ರೆಗಳು ಪ್ರತಿ ಹಂತದಲ್ಲಿ ವಿಶೇಷ ಮಹತ್ವವನ್ನು ಪಡೆದುಕೊಂಡಿವೆ. ಜನಪದರ ಸಾಂಸ್ಕೃತಿಕ ಪರಂಪರೆಗೆ ಜಾತ್ರೆಗಳು ಭದ್ರವಾದ ತಳಹದಿಯಾಗಿವೆ ಎಂದು ಹೇಳಬಹುದು. ಇಂತಹ ಜನಪದರ ಆಚರಣೆಗಳಲ್ಲಿ ಜಾತ್ರೆಗಳು ಪ್ರತಿ ಹಂತದಲ್ಲಿ ವಿಶೇಷ ಮಹತ್ವವನ್ನು ಪಡೆದುಕೊಂಡಿವೆ. ಜಾತ್ರೆಗಳು ಆಯಾ ಪ್ರದೇಶದ, ಜನಜೀವನದ ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಪ್ರತಿಯೊಂದು ವರ್ಗದ ಜನತೆಯು ಒಂದೆಡೆ ಸೇರಿ ಸಾಂಸ್ಕೃತಿಕ ಐಕ್ಯತೆಯನ್ನು ಪ್ರತಿಪಾದಿಸುವ ಕೇಂದ್ರ ಸ್ಥಳವಾಗಿ ಜಾತ್ರೆಗಳು ಕಂಡುಬರುತ್ತವೆ. ಹೀಗೆ ವಿಭಿನ್ನ ನೆಲೆಯ ಸಂಸ್ಕೃತಿಯನ್ನು ಪ್ರತಿಪಾದಿಸುವ ಜಾತ್ರೆಗಳ ಅಧ್ಯಯನ ಇಂದಿಗೂ ಪ್ರಸ್ತುತವೆನಿಸುತ್ತವೆ. ಇದಕ್ಕೆ ಪ್ರತಿಯಾಗಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಜಾತ್ರೆಗಳ ಅಧ್ಯಯನ ಪ್ರಸ್ತುತ ಸಂದರ್ಭದಲ್ಲಿ ಬಹಳ ಮಹತ್ವಪೂರ್ಣವೆಂದೇ ಭಾವಿಸಲಾಗಿದೆ. ಈ ಕುರಿತಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

"ಜಾತ್ರೆ ಎಂದರೆ ಒಂದು ನಿರ್ದಿಷ್ಟ ಜನಪದ ವರ್ಗವೊಂದು ನಿರ್ದಿಷ್ಟ ಕಾರಣಕ್ಕಾಗಿ ನಿರ್ದಿಷ್ಟ ದೈವವೊಂದಕ್ಕೆ ಸಾಂಪ್ರದಾಯಿಕ ಪೂಜೆ-ಪುನಸ್ಕಾರಾದಿ ಆಚರಣೆಗಳಿಂದ ನಡೆದುಕೊಳ್ಳುವುದಕ್ಕೆ ಜಾತ್ರೆ ಎಂದು ಕರೆಯಲಾಗುತ್ತದೆ (ಜಾತ್ರೆಗಳ ವೀಕ್ಷಣೆ ಅಂಬಳಿಕೆ ಹಿರಿಯಣ್ಣ, ಪು.ಸಂ.೨೦)". ಸಮಾಜದ ಒಳಿತಿಗಾಗಿ ಸಾಮಾಜಿಕ ಹೊಂದಾಣಿಕೆಯಿಂದ, ವಿಶೇಷ ದಿನಗಳಲ್ಲಿ ಜನರು ಸಂಭ್ರಮ, ಉತ್ಸಾಹದಿಂದ ನಡೆಸುವ ಸಂಪ್ರದಾಯ ಆಚರಣೆಗಳೇ ಹಬ್ಬ-ಜಾತ್ರೆಗಳು. ಇಂಗ್ಲಿಷಿನ 'Festival' ಪದವು ಹಬ್ಬ ಮತ್ತು ಜಾತ್ರೆ ಎಂಬ ಅರ್ಥವನ್ನು ಒಳಗೊಂಡಿದೆ. "Festival is a complex unit of costumes and other Folklore to celebrate a special occasion usually annually and of public interest" ಎಂಬ ಆರ್.ಎಸ್.ಬಾಗ್ಸ್ ಅವರ ವಿವರಣೆಯಂತೆ Festival ಎಂದರೆ ಸಂಪ್ರದಾಯ ರೂಢಿ ಹಾಗೂ ಕಲಾಪ್ರದರ್ಶನಗಳನ್ನು ಜರುಗಿಸುವ ಒಂದು ವಿಶೇಷ ಸಂದರ್ಭ. ವರ್ಷಕ್ಕೊಮ್ಮೆ ನಿಗದಿತ ದಿನದಂದು ಆಚರಿಸುವಂತಹ ವಿಶೇಷ ಮಹತ್ವವಾಗಿದೆ. ಸಾಮಾಜಿಕ ಆಸಕ್ತಿಯುಳ್ಳಂತಹ ಈ ಲಕ್ಷಣಗಳು ನಮ್ಮ ಜನಪದರ ಹಬ್ಬ-ಜಾತ್ರೆಗಳಲ್ಲಿ ಕಂಡುಬರುತ್ತವೆ. ಜಾತ್ರೆಗಳು ನಡೆಯುವಾಗಲೆಲ್ಲ ಹಬ್ಬವಿರುತ್ತದೆ. ಆದರೆ ಹಬ್ಬಗಳು ನಡೆಯುವಾಗಲೆಲ್ಲ ಜಾತ್ರೆಗಳು ಇರಬೇಕಾಗಿಲ್ಲ. ಯುಗಾದಿ, ಶಿವರಾತ್ರಿ, ಗೌರಿ ಹಬ್ಬಗಳಂತಹ ಸಮಯದಲ್ಲಿ ಜಾತ್ರೆ ಜರುಗುವುದಿಲ್ಲ. ಅಮ್ಮನವರ ಹಬ್ಬ, ಸುಗ್ಗಿ ಹಬ್ಬ ಮುಂತಾದ ಸಂದರ್ಭಗಳಲ್ಲಿ ಜಾತ್ರೆ ಸೇರಿಕೊಂಡಿರುತ್ತದೆ. ಈ ಹಬ್ಬಗಳನ್ನು ಮನೆ ಮನೆಯಲ್ಲಿ ಸಾರ್ವತ್ರಿಕವಾಗಿಯೇ ಆಚರಿಸಬಹುದು. ಆದರೆ ಜಾತ್ರೆಯು ಸಾಂಘಿಕವಾಗಿ ನಡೆಯುವಂತದ್ದು. ಎಲ್ಲಿಂದಲೋ ಜನ ಜಾತ್ರೆಗೆ ಬಂದು ನೆರೆಯುವರು. ಕನ್ನಡದಲ್ಲಿ ಹಬ್ಬ ಮತ್ತು ಜಾತ್ರೆಗಳ ಭೇದವನ್ನು ಸೂಚಿಸುವ ಗಾದೆ ಇದೆ. ಹಬ್ಬದೂಟ ಚಂದ, ಜಾತ್ರೆ ನೋಟ ಚಂದ, ಹೀಗೆ ಜಾತ್ರೆಗಳಿಗೆ ಸಂಬಂದಿಸಿದಂತೆ ವಿಚಾರವಂತರು ಒಂದೊಂದು ರೀತಿಯಲ್ಲಿ

ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ವಿದ್ವಾಂಸರ ಅಭಿಪ್ರಾಯದಂತೆ ಈ ಜಾತ್ರೆಗಳ ಆಚರಣೆಯೂ ಸಹ ಅಷ್ಟೇ ಭಿನ್ನವಾಗಿ ಆಚರಿಸಲ್ಪಡುತ್ತಿರುವುದು ಸತ್ಯಕ್ಕೆ ಹತ್ತಿರವಾದ ಸಂಗತಿಯಾಗಿದೆ.

ಇದು ವೈಜ್ಞಾನಿಕ ಯುಗ. ಮನುಷ್ಯನು ಭೂಮಿಯ ಆಚೆಗಿನ ಗ್ರಹ, ಉಪಗ್ರಹ, ನಕ್ಷತ್ರ, ನಿಹಾರಿಕೆಗಳ ಬಗ್ಗೆ ಅನ್ವೇಷಣೆಯಲ್ಲಿ ತೊಡಗಿದ್ದಾನೆ. ದೂರದರ್ಶಕದ ಕಣ್ಣಲ್ಲಿ ಇಡೀ ಆಕಾಶ ಕಾಯಗಳನ್ನೆಲ್ಲ ಶೋಧಿಸುವ ಈ ಮನುಷ್ಯನ ಮನಸ್ಸು ಎಷ್ಟು ದುರ್ಬಲವಾದುದೆಂದರೆ ತನ್ನ ಶೋಧನೆಗೆ ಸಾಧನವಾಗಿರುವ ದೂರದರ್ಶಕವನ್ನು ಬಳಸುವ ಮುಂಚೆ ಅದನ್ನು ದೂಪ–ದೀಪಗಳಿಂದ ಪೂಜಿಸಿ ರಾಹು, ಕೇತುಗಳನ್ನು ಅಳೆದು ಸುರಿದು ಒಳ್ಳೆಯ ಮುಹೂರ್ತದಲ್ಲಿ ಅದನ್ನು ಕೈಗೆತ್ತಿ ಕಣ್ಣಿಗೆ ಹಿಡಿಯುತ್ತಾನೆ. ಈ ನಡಾವಳಿಕೆಯ ಹಿಂದಿರುವ ತನ್ನ ದೌರ್ಬಲ್ಯಗಳನ್ನು ಮೆಟ್ಟಿಕೊಳ್ಳಲು ಇಂತಹ ಆಚರಣೆಗೆ ವೈಜ್ಞಾನಿಕ ವಿಶ್ಲೇಷಣೆಯ ಅರ್ಥ ರೂಪಿಸಿ ರಕ್ಷಣೆ ಪಡೆಯಲು ಹವಣಿಸುತ್ತಾನೆ. ಈ ಸ್ಥಿತಿಯನ್ನು ಮನಃಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿದರೆ ಗೊತ್ತಾಗುವ ಅಂಶವೆಂದರೆ ಮನುಷ್ಯನ ಮನಸ್ಸಿನಲ್ಲಿ ಮನೆ ಮಾಡಿಕೊಂಡಿರುವ ಭೀತಿ. ಈ ಭೀತಿ ಪರಂಪರಾಗತವಾದುದು. ಈ ಭೀತಿಯೇ ಮಾನವ ಜನಾಂಗದ ಎಲ್ಲಾ ಆರಾಧನೆಗಳ ಮೂಲ ಕರ್ತೃ. ಆರಾಧನೆ ಎಂದರೆ ಆಚರಣೆ. ಆಚರಣೆ ಎಂದರೆ ಅಭಿನಯ ಅಥವಾ ಪುನರಾಭಿನಯ. ಧರ್ಮವ್ಯಕ್ತಿ ಅಥವಾ ಶಕ್ತಿಯೊಂದರ ನಡಾವಳಿಯ ಅಭಿನಯ. ಅಭಿನಯ ನಡಾವಳಿಕೆಯಾದುದರಿಂದ ಅದಕ್ಕೊಂದು ಸಂದರ್ಭ ಸೇರಿ ಪುರಾಣವಾಗುತ್ತದೆ. ಈ ಪುರಾಣದ ಪುನರಾಭಿನಯದ ಹಿಂದೆ ನಿರ್ದಿಷ್ಟ ಕಾಲ, ಸ್ಥಳ, ವೇಷಭೂಷಣ ಇತ್ಯಾದಿಗಳಲ್ಲಿ ಅವಿನಾಭಾವವಾಗಿ ಕೂಡಿಕೊಂಡಿರುತ್ತವೆ. ಜಾತ್ರೆಗಳು ನಿರ್ದಿಷ್ಟ ಪುರಾಣಗಳ ಪುನರಾಭಿನಯ ರೂಪಗಳು. ಈ ಪುನರಾಭಿನಯ ತನ್ನೊಳಗಿನ ಜಾನಪದೀಯ ಮೂಲದ್ರವವಾದ ನಂಬಿಕೆಗಳನ್ನು ಉಳಿಸಿಕೊಂಡು ಬದುಕಿನ ಸ್ಥಿತಿಗತಿಗನುಗುಣವಾಗಿ ರೂಪ, ಪುನರ್‌ರೂಪಗಳನ್ನು ಪಡೆಯುತ್ತ ನಡೆಯುತ್ತದೆ. ಯಾವುದೇ ಜಾತ್ರೆಯನ್ನು ಗಮನಿಸಿದರೂ ವಿಶಿಷ್ಟ ರೀತಿಯಲ್ಲಿ ಮೈಗೂಡಿಸಿಕೊಂಡಿರುತ್ತದೆ. ಈ ಅರ್ಥದಲ್ಲಿಯೇ ಜಾತ್ರೆಗಳು ಆಯಾ ನಿರ್ದಿಷ್ಟ ಸಮಾಜಗಳ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಕೀರ್ಣಾವಸ್ಥೆಯ ಮೂರ್ತರೂಪಗಳು.

ಜಾತ್ರೆಗಳು ಜನಪದ ಜೀವನದ ಮೂಲದ್ರವ್ಯಗಳೇ ಆಗಿರುವುದರಿಂದ ಆಧುನಿಕ ಪರಿಸರದಲ್ಲಿ ಜಾತ್ರೆಗಳ ಸ್ಥಿತಿಗತಿ ಕುರಿತು ವಿವೇಚಿಸುವ ಮುಂಚೆ ನಮ್ಮ ಜಾನಪದದ ಸ್ವರೂಪ, ವಿರೂಪಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯಗತ್ಯ. ಜನಪದ ಮೊದಲಿಗೆ ತನ್ನ ಪ್ರದೇಶದ ಅಥವಾ ಸಂಸ್ಕೃತಿಯ ಪರಿಧಿಯ ಒಳಗೆ ಕೆಲಸ ಮಾಡುವಂತದ್ದು. ಎಲ್ಲಾ ಜನಪದ ಪರಂಪರೆಗಳ ಮೂಲ ಸ್ವಭಾವವೂ ಇದೇ ಆಗಿದೆ. ಆದರೆ ನಮ್ಮ ಜನಪದರಲ್ಲಿ

ಅದರ ಮೂಲದ್ರವ್ಯವಾದ ಚಲನಶೀಲತೆಯೇ ಉಡುಗಿಹೋಗಿದೆ. ಕಾರಣ ಅನ್ಯ ಸಂಸ್ಕೃತಿಯ ಆಕ್ರಮಣ. ಒಂದು ಸಂಸ್ಕೃತಿಯ ಮೇಲೆ ಅನ್ಯ ಸಂಸ್ಕೃತಿಯ ಪ್ರಭಾವ ಆದಾಗ ಆ ಪ್ರಭಾವವನ್ನು ಸಂಬಂಧಿಸಿದ ಜನಪದ ಚಲನಶೀಲತೆಯಲ್ಲಿ ಸ್ವೀಕರಿಸಿದಾಗ ಅದನ್ನು ಸಂಸ್ಕೃತೀಕರಣ ಎನ್ನಬಹುದು. ಆದರೆ ಮೂಲ ಸಂಸ್ಕೃತಿಯ ಜೀವ ದ್ರವವನ್ನೇ ಕೊಂದು ಆ ಸಂಸ್ಕೃತಿಯನ್ನು ತನ್ನ ಅಧೀನ ಸಂಸ್ಕೃತಿಯನ್ನಾಗಿಸಿಕೊಂಡು ಆಳುವ ಮುಖಾಂತರ ತನ್ನ ಸ್ವಾರ್ಥ ತುಂಬಿಕೊಳ್ಳುವ ಕಸುಬು ನಡೆದಾಗ ಅದನ್ನು ಸಂಸ್ಕೃತೀಕರಣ ಅರ್ಥದಲ್ಲಿ ಸ್ವೀಕರಿಸುವುದು ತಪ್ಪಾಗುತ್ತದೆ. ಕರ್ಮ ಸಿದ್ಧಾಂತ ಮತ್ತು ಚಾತುರ್ವರ್ಣ ನೀತಿಗಳು ಎಂದು ಪುರಾಣಗಳ ಮೂಲಕ ನಮ್ಮ ಜನಪದರ ಬದುಕಿನ ಮೇಲೆ ಆಕ್ರಮಣ ಮಾಡಿದವೋ ಅಂದಿನಿಂದಲೇ ನಮ್ಮ ಜನಪದರ ಕ್ರಿಯಾಶೀಲತೆ ಕುಂದುತ್ತ ಬಂದಿದೆ. ಆಕ್ರಮಣ ಸಂಸ್ಕೃತಿಯ ಕಟ್ಟು–ಬಂಧನಗಳಿಗನುಗುಣವಾಗಿ ಜೀವನವನ್ನು ಹೊರೆಯುವ, ಎಣಗುವ ನೀತಿಬದ್ಧತೆಗೆ ನಮ್ಮ ಜನಪದರ ಬದುಕು ಬಲಿಯಾಯಿತು.

ಆಧುನಿಕ ಯುಗದ ಸಂದರ್ಭದಲ್ಲಿ ಜಾತ್ರೆಗಳ ಸ್ವರೂಪ ಹಲವು ಬದಲಾವಣೆಗೆ ಒಳಗಾಗಿರುವಂತೆ ಕಂಡುಬಂದರೂ ಈ ಬದಲಾವಣೆ ಚಾತುರ್ವರ್ಣ ನೀತಿಯ ಕರ್ಮಸಿದ್ಧಾಂತದ ಚೌಕಟ್ಟಿನಲ್ಲಿ ಆದ ಚೌಕಾಸಿಯ ಹೊಂದಾಣಿಕೆಯೇ ಹೊರತು ಬದಲಾವಣೆಯಲ್ಲ. ಜಾತ್ರೆಯ ಮೂಲ ದ್ರವ್ಯವಾದ ಧಾರ್ಮಿಕ ಆಚರಣೆಯ ಸ್ವರೂಪವನ್ನೇ ಪರಿಶೋಧಿಸಿದಾಗ ಅದರ ಮೂಲ ಆಶಯ ಆಧುನಿಕತೆಯ ಪ್ರಭಾವದಲ್ಲಿ ತನ್ನ ಮೊದಲಿನ ತೀವ್ರತೆಯನ್ನು ಕಡಿಮೆ ಮಾಡಿಕೊಂಡು ಕೇವಲ ಸಂಕೇತ ಮಟ್ಟಕ್ಕಿಳಿದಿರುವುದು, ಇಳಿಯುತ್ತಿರುವುದು ಕಂಡುಬರುತ್ತದೆ. ಹಿಂದೆ ನೆಡಿಯಾಡಿಸುವಾಗ ವ್ಯಕ್ತಿಯ ಬೆನ್ನಿಗೆ ಕಬ್ಬಿಣದ ಕೊಂಡಿ ಸಿಕ್ಕಿಸಿ ಸಿಡಿಯಾಡಿಸುತ್ತಿದ್ದರು. ಆಧುನಿಕ ಕಾನೂನು ಇದಕ್ಕೆ ಅಡ್ಡಿಯಾಗಿರುವುದರಿಂದ ಮತ್ತು ಜನಮನದಲ್ಲಿ ಎಚ್ಚರ ಮೂಡಬೇಕಾಗಿರುವುದರಿಂದ ಈ ಕೊಂಡಿಸಿಡಿಯು ಒಟ್ಟುಸಿಡಿಯ ರೂಪವಾಗಿ ಪರಿವರ್ತಿತವಾಗಿದೆ. ಅದೇ ರೀತಿ ಬೇವಿನುಡಿಗೆಯ ಹರಕೆಯು ಸಹ ಸೌಮ್ಯವಾಗಿರುವುದು ಕಂಡುಬರುತ್ತದೆ. ನೂರಾರು ಕೋಣಗಳನ್ನು ಬಲಿ ತೆಗೆದುಕೊಳ್ಳುತ್ತಿದ್ದ ಮಾರಿ ಜಾತ್ರೆಗಳು ಕಾನೂನಿನ ಕಟ್ಟುಪಾಡಿನಿಂದ ಆ ಸಂಪ್ರದಾಯವೂ ಹೊಸ ರೂಪದಲ್ಲಿ ಆಚರಣೆಯಲ್ಲಿರುವುದನ್ನು ಗಮನಿಸಬಹುದು.

ಕರ್ನಾಟಕದಾದ್ಯಂತ ಆಚರಿಸಲಾಗುತ್ತಿರುವ ಜಾತ್ರೆಗಳ ವೈಶಿಷ್ಟ್ಯತೆಗಳನ್ನು ಹಲವಾರು ಲೇಖಕರು, ವಿದ್ವಾಂಸರು, ಸಾಧ್ಯವಾದಷ್ಟು ಮಟ್ಟಿಗೆ ಅಧ್ಯಯನ ಮಾಡಿ ಈಗಾಗಲೇ ಕೆಲವು ಕೃತಿಗಳನ್ನು ರಚಿಸಿರುವುದು ಎಲ್ಲರಿಗೂ ತಿಳಿದಿರುವಂತಹ ವಿಷಯುವೇ ಆಗಿದೆ. ಪ್ರತಿಯೊಂದು ಪ್ರದೇಶಕ್ಕೂ ಐತಿಹಾಸಿಕ ಪರಂಪರೆಯ ಮಹತ್ವ ಮತ್ತು ಪ್ರಾದೇಶಿಕ ವೈಶಿಷ್ಟ್ಯತೆಗಳಿರುವುದನ್ನು

ಸಹ ಗಮನಿಸಬಹುದು. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಆಚರಿಸುವ ಜಾತ್ರೆಗಳು ನಿರಂತರವಾಗಿ ತನ್ನ ಸ್ಥಿರತೆಯನ್ನು ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗಿದೆ.

ಈ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಕುರಿತು ಅನ್ವೇಷಣಾ ರೂಪದಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದು, ಚಿಕ್ಕೋಡಿ ತಾಲೂಕಿನಲ್ಲಿ ಆಚರಿಸಲಾಗುವ ಜಾತ್ರೆಗಳನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡುವುದರ ಮೂಲಕ ಜಾತ್ರೆಗಳ ಸವಿವರ ಹಾಗೂ ಮಹತ್ವಗಳನ್ನು ಇಲ್ಲಿ ಪ್ರಸ್ತಾಪಿಸಲಾಗುತ್ತದೆ. ಚಿಕ್ಕೋಡಿ ತಾಲೂಕು ಬಹುತೇಕ ಗ್ರಾಮೀಣ ಪ್ರದೇಶದಿಂದ ಕೂಡಿದ್ದು, ಇಲ್ಲಿನ ಜನಪದರ ಜೀವನ, ಇತಿಹಾಸ, ಪರಂಪರೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ತನ್ನದೇ ಅದ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಅನಾದಿ ಕಾಲದಿಂದಲೂ ಜನಪದರ ಜೀವಾಳವಾಗಿರುವ ಜಾತ್ರೆಗಳು ಹೇಗೆ ಭಿನ್ನವಾದ ನೆಲೆಯಲ್ಲಿ ವೈವಿಧ್ಯತೆಯನ್ನು ಪಡೆದಿದೆ? ಇದಕ್ಕೆ ಪೂರಕವಾಗಿ ಇಲ್ಲಿನ ಜನಪದರು ಜಾತ್ರೆಗಳನ್ನು ತಮ್ಮ ಬದುಕಿನ ಒಂದು ಅಂಗವಾಗಿ ಹೇಗೆ ಸ್ವೀಕರಿಸಿಕೊಂಡು ಮುಂದುವರೆಸುತ್ತಿದ್ದಾರೆ? ಎಂಬುದು ಮುಖ್ಯವಾದ ಸಂಗತಿ. ಸಾಮಾಜಿಕವಾಗಿ, ಧಾರ್ಮಿಕವಾಗಿ ಜಾತ್ರೆಗಳು ಜನಸಾಮಾನ್ಯರನ್ನು ಒಂದುಗೂಡಿಸುವಲ್ಲಿ ಅವುಗಳ ಮಹತ್ವವೇನು? ಎಂಬುದನ್ನು ತಿಳಿಯಬೇಕಾದುದು ಅತ್ಯಗತ್ಯ. ಅದರಂತೆ ಚಿಕ್ಕೋಡಿ ಭಾಗದ ಜಾತ್ರೆಗಳು ಜನರಿಗೆ ಹೇಗೆ ಪೂರಕ ವಾತಾವರಣ ಕಲ್ಪಿಸಿಕೊಟ್ಟಿವೆ? ಪರಸ್ಪರ ಸಾಮುದಾಯಿಕ ಭಾವನೆಯಿಂದ ಗ್ರಾಮೀಣ ಜನತೆಯು ಹೇಗೆ ಜಾತ್ರೆಗಳನ್ನು ಆಚರಿಸುತ್ತಾರೆ? ಎಂಬುದು ಗಮನಿಸಬೇಕಾದ ವಿಷಯವಾಗಿದೆ.

ಚಿಕ್ಕೋಡಿ ತಾಲೂಕಿನಲ್ಲಿ ಆಚರಿಸಲಾಗುವ ಯದೂರು ಕ್ಷೇತ್ರದ ಜಾತ್ರೆ, ಶ್ರೀಮಲ್ಲಿಕಾರ್ಜುನನ ಜಾತ್ರೆ, ಹಾಲಸಿದ್ಧನಾಥನ ಜಾತ್ರೆ ಮುಂತಾದ ಹಲವು ಜಾತ್ರೆಗಳು ಅವುಗಳು ನಡೆಯುವ ಸಂದರ್ಭ, ಸೇರುವ ಭಕ್ತರು, ಸಾಮಾಜಿಕ ಸಹಿಷ್ಣುತೆಯ ಕೇಂದ್ರಗಳಾಗಿ ಜಾತ್ರೆಗಳು ಹೇಗೆ ಕಾರ್ಯೋನ್ಮುಖವಾಗಿ ಸಮಾಜವನ್ನು ಪ್ರತಿಬಿಂಬಿಸುತ್ತವೆ ಎಂಬುದು ಜಾತ್ರೆಗಳ ಅಧ್ಯಯನಕ್ಕೆ ಪ್ರೇರಣೆ ನೀಡಿದೆ. ವಿಶಾಲ ವ್ಯಾಪ್ತಿಯನ್ನು ಹೊಂದಿರುವ ಚಿಕ್ಕೋಡಿ ತಾಲೂಕು ಪಕ್ಕದ ಮಹಾರಾಷ್ಟ್ರದಿಂದಲೂ ಪ್ರಭಾವಗೊಂಡು ಭಾಷೆ, ಸಂಸ್ಕೃತಿ, ಸಾಹಿತ್ಯ, ಕಲೆ ಮುಂತಾದ ವಿಷಯಗಳಲ್ಲಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಪ್ರಸ್ತುತ ಅಧ್ಯಯನಕ್ಕೆ ಕಾರಣವಾಗಿದೆ. ಕರ್ನಾಟಕದಲ್ಲಿ ಆಚರಿಸಲಾಗುವ ಜಾತ್ರೆಗಳಿಗೂ ಚಿಕ್ಕೋಡಿ ಭಾಗದಲ್ಲಿ ಆಚರಿಸಲಾಗುವ ಜಾತ್ರೆಗಳಿಗೂ ಕೆಲವು ಸಾಮ್ಯತೆ, ಭಿನ್ನತೆಗಳಿದ್ದರೂ ಅಧ್ಯಯನದ ಸಂದರ್ಭದಲ್ಲಿ ಅಂತಹ ವಿಷಯಗಳನ್ನು ಸಂಗ್ರಹಿಸಿ ಯಥಾವತ್ತಾದ ನಿರೂಪಣೆಯನ್ನು ನೀಡಲಾಗುತ್ತದೆ. ಜಾತ್ರೆಗಳು ಸಾಂಸ್ಕೃತಿಕ ಕೇಂದ್ರಬಿಂದುಗಳಾಗಿರುವುದರಿಂದ ಸಮಾಜದ ಸಾಮರಸ್ಯವನ್ನು ಕಾಪಾಡುವುದರ ಜೊತೆ ಜೊತೆಯಲ್ಲಿಯೇ ಜನಪದರ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ

ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಪ್ರಸ್ತುತ ಆಧುನಿಕ ಯುಗದ ಪ್ರಭಾವಗಳಿಂದ ಜಾತ್ರೆಗಳ ಮೇಲೆ ಉಂಟಾಗಿರುವಂತಹ ಪರಿಣಾಮ ಮತ್ತು ಪ್ರಭಾವಗಳನ್ನು ಸಹ ಅಧ್ಯಯನ ಮಾಡಲಾಗುತ್ತದೆ.

ಅಧ್ಯಯನದ ವಿಧಾನ

ಜಾತ್ರೆಗಳ ಅಧ್ಯಯನವನ್ನು ಜಾನಪದೀಯ ನೆಲೆಯಲ್ಲಿ ಅಧ್ಯಯನ ಮಾಡುತ್ತಿರುವುದರಿಂದ ಜನಪದರನ್ನು ಮುಖ್ಯವಾಗಿಟ್ಟುಕೊಂಡು ವಿವಿಧ ದೃಷ್ಟಿಕೋನಗಳಿಂದ ಅಭ್ಯಾಸ ಮಾಡುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ದೊರೆಯಬಹುದಾದ ಮೂಲ ಆಧಾರಗಳು, ಸಾಂಪ್ರದಾಯಿಕ ಆಚರಣೆಗಳು, ಕ್ಷೇತ್ರಕಾರ್ಯ ಸಮೀಕ್ಷೆಯ ಆಧಾರಗಳನ್ನಿಟ್ಟುಕೊಂಡು ಸಂದರ್ಶನಗಳ ಮೂಲಕ ವಿಷಯ ಸಂಗ್ರಹಿಸಿ, ವೈಜ್ಞಾನಿಕವಾಗಿಯೂ ಜಾತ್ರೆಗಳನ್ನು ಅವಲೋಕಿಸಿ ಸಮಗ್ರವಾಗಿ ಅಧ್ಯಯನ ನಡೆಸಲಾಗುವುದು.

ಈ ಮೊದಲೇ ತಯಾರಿಸಿಕೊಂಡಂತಹ ನೀಲಿ ನಕಾಶೆಯಂತೆ ಅಗತ್ಯ ಮಾಹಿತಿಯನ್ನು ಪಡೆಯುವುದು. ಚಿಕ್ಕೋಡಿ ಭಾಗದ ಜನಪದರನ್ನು ನೇರವಾಗಿ ಸಂಪರ್ಕಿಸಿ, ಈ ಭಾಗದಲ್ಲಿ ಆಚರಿಸಲಾಗುವ ಜಾತ್ರೆಗಳಿಗೆ ಸಂಬಂಧಿಸಿದಂತಹ ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಚಿಕ್ಕೋಡಿ ಪ್ರದೇಶದ ಜಾತ್ರೆ ಸಮಯದಲ್ಲಿ ಸ್ವತಃ ಭೇಟಿ ನೀಡುವ ಮೂಲಕ ಅಲ್ಲಿನ ಆಚಾರ–ವಿಚಾರಗಳನ್ನು ಪರಿಶೀಲಿಸುವುದರೊಂದಿಗೆ ಜಾತ್ರೆಯ ಸಂದರ್ಭ, ಸ್ಥಳ ಅವಲೋಕನ, ಆರಾಧನೆ, ರೀತಿ–ನೀತಿ, ಸಂಪ್ರದಾಯ ಗ್ರಹಿಕೆ, ಊರುಗಳ ಜನರು ಭಾಗವಹಿಸುವಿಕೆಯನ್ನು ಕುರಿತು ಅವಲೋಕಿಸಿ, ಪ್ರಸ್ತುತ ಅಧ್ಯಯನಕ್ಕೆ ಬೇಕಾದ ವಿಷಯವನ್ನು ಟಿಪ್ಪಣಿ ಮಾಡಿಕೊಳ್ಳುವುದರ ಮೂಲಕ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ವಿಷಯವನ್ನು ಸಂಗ್ರಹಿಸಿಕೊಳ್ಳಲಾಗುವುದು. ಜಾತ್ರೆಗಳ ಬಗ್ಗೆ ದೊರೆಯಬಹುದಾದ ಲಿಖಿತ ಮತ್ತು ಮೌಖಿಕ ಆಕರಗಳನ್ನು ಸಹ ಸಂಗ್ರಹ ಮಾಡಿಕೊಳ್ಳಲಾಗುವುದು. ಈ ಪ್ರದೇಶದ ಜಾತ್ರೆಗಳ ಬಗ್ಗೆ ವಿವರಗಳನ್ನೊಳಗೊಂಡಿರುವ ಶಾಸನ, ಗ್ರಂಥಗಳು, ನಿಯತಕಾಲಿಕೆಗಳೂ, ಸುದ್ದಿ ಪತ್ರಿಕೆಗಳು ಹಾಗೂ ಮಾಧ್ಯಮಗಳಿಂದ ವಿಷಯವನ್ನು ಸಂಗ್ರಹಿಸಲಾಗುತ್ತದೆ. ಈ ಎಲ್ಲಾ ಮಾಹಿತಿಗಳಿಂದ ಜಾತ್ರೆಯ ಬಗೆಗೆ ಒಂದು ನಿರ್ದಿಷ್ಟ ಸ್ವರೂಪ ತಿಳಿದಂತಾಗುತ್ತದೆ.

ಅಧ್ಯಯನದ ಸ್ವರೂಪ

೨೧ನೇ ಶತಮಾನದಲ್ಲಿರುವ ನಾವುಗಳು ಅದೆಷ್ಟೋ ಮರೆಯುತ್ತಿದ್ದೇವೆ. ನಮ್ಮ ಪೂರ್ವಜರು ನಡೆಸಿದಂತಹ ಜೀವನದ ಹಾದಿಯನ್ನು ಪಕ್ಕಕ್ಕೆ ಸರಿಸಿ ನಮ್ಮದೇ ಆದ ದಾರಿಯಲ್ಲಿ

ಪಯಣಿಸುತ್ತಿದ್ದೇವೆ. ಜಾಗತೀಕರಣ, ವೈಜ್ಞಾನೀಕರಣ, ಯಾಂತ್ರೀಕರಣದಂತಹ ಪೆಡಂಭೂತಗಳ ಬಲೆಗೆ ಸಿಲುಕಿಕೊಂಡು ತಮ್ಮ ಅಸ್ತಿತ್ವವನ್ನು ಮರೆಯುತ್ತಿದ್ದೇವೆ ಎಂಬ ಅನುಮಾನ ನಮ್ಮನ್ನು ಕಾಡುತ್ತಿದೆ. ನೂರಾರು ವರ್ಷಗಳ ಕಾಲ ಬಾಳಿ-ಬದುಕಿ ಹೋದಂತಹ ನಮ್ಮ ಹಿರಿಯರು ನಮಗೆಂದೇ ಕೆಲವು ಕೊಡುಗೆಗಳನ್ನು ನೀಡಿ ಹೋಗಿದ್ದಾರೆ. ಅವುಗಳೆಂದರೆ: ನಂಬಿಕೆ, ಸಂಪ್ರದಾಯ, ಸಾಹಿತ್ಯ, ಸಂಗೀತ, ರೀತಿ-ನೀತಿ, ಆಚಾರ-ವಿಚಾರ, ಹಬ್ಬ-ಹರಿದಿನ, ಜಾತ್ರೆ-ಉತ್ಸವ, ಕಲೆ-ವಾಸ್ತುಶಿಲ್ಪ ಹೀಗೆ ಬದುಕಿನ ಎಲ್ಲ ಅಂಗಗಳಲ್ಲಿ ನಮ್ಮ ಹಿರಿಯರ ನೆನಪುಗಳೇ ಕಾಣಿಸುತ್ತವೆ. ಅದೇ ರೀತಿಯಲ್ಲಿ ಜಾತ್ರೆಗಳು ಸಹ ಜನಪದರ ಜೀವನದ ಜೀವಾಳವಾಗಿವೆ. ಸಾಮಾಜಿಕವಾಗಿ, ರಾಜಕೀಯವಾಗಿ ಪ್ರಬಲರಾಗುತ್ತಿರುವ ಇಂದಿನ ಜನರು ಹಳೆಯದನ್ನೆಲ್ಲ ಗಾಳಿಗೆ ತೂರಿ ನವೀನ ಬದುಕಿನತ್ತ ಹೆಜ್ಜೆ ಇಡುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಉತ್ತಮ ಬೆಳವಣಿಗೆ. ಆದರೆ ಒಮ್ಮೆ ನಾವು ನಮ್ಮ ಹಿಂದಿನ ಜೀವನವನ್ನು ನೋಡಿಕೊಂಡಾಗ ಅಲ್ಲಿ ನಮಗೆ ತಿಳಿದಿರುವಂತಹ ಅಥವಾ ನಾವಾಗಿಯೇ ಬಿಟ್ಟು ಹೋದಂತಹ ಅದೆಷ್ಟೋ ವಿಷಯಗಳಿರುತ್ತವೆ. ಒಮ್ಮೆ ಮುಂದಕ್ಕೆ ಹೋದರೆ ಹಿಂದಕ್ಕೆ ಬರಲಾರದಂತಹ ಅಥವಾ ನಾವಾಗಿಯೇ ಬಿಟ್ಟು ಹೋದಂತಹ ಅದೆಷ್ಟೋ ವಿಷಯಗಳಿರುತ್ತವೆ. ಒಮ್ಮೆ ಮುಂದಕ್ಕೆ ಹೋದರೆ ಹಿಂದಕ್ಕೆ ಬರಲಾರದಂತಹ ಸಂದಿಗ್ಧ ಪರಿಸ್ಥಿತಿಯಲ್ಲಿರುವ ನಾವು ಒಮ್ಮೆಲೇ ಹಿಂದಿನ ಜೀವನವನ್ನು ಮರೆತರೆ ಮಾನವೀಯತೆಗೆ, ಮನುಷ್ಯತ್ವಕ್ಕೆ ಬೆಲೆ ಎಲ್ಲಿದೆ. ನಾವಿಂದು ಸವೆಸಿರುವ ದಾರಿ ಅಲ್ಪವಷ್ಟೆ, ಇನ್ನೂ ಮುಂದಿನ ದಾರಿ ಬಹು ದೀರ್ಘವಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಜನಪದರ ಜೀವಾಳವೆನಿಸಿದ ಜಾತ್ರೆಗಳನ್ನು ಅಧ್ಯಯನ ಮಾಡುವುದರಿಂದ ನಮ್ಮ ಸಂಸ್ಕೃತಿಯ ನೆಲೆ-ಬೆಲೆಯನ್ನು ತಿಳಿಯಬಹುದು. ಆದ್ದರಿಂದ ನಮ್ಮ ಮುಂದಿನ ಭವಿಷ್ಯದ ದಿನಗಳಲ್ಲಿ ಮುಂದಿನ ಪೀಳಿಗೆಯವರಿಗೆ ಈ ಸಂದರ್ಭದ ಸ್ಥಿತಿಗತಿಯನ್ನು ತಿಳಿಯಲು ಸಹಾಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಅಧ್ಯಯನ ಅತ್ಯಂತ ಪ್ರಮುಖವಾಗಿದ್ದು, ಈ ಸಂದರ್ಭದಲ್ಲಿ ಇಂತಹ ಅಧ್ಯಯನದಿಂದ ಸಮಾಜಕ್ಕೆ ಉತ್ತಮ ಕೊಡುಗೆ ನೀಡುವುದೇ ಆಗಿದೆ.

ಅದರಂತೆ ಅಧ್ಯಾಯ ಒಂದರಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವವನ್ನು ಹೇಳಿ ಈ ಶೀರ್ಷಿಕೆ ಅಡಿಯಲ್ಲಿ ಯಾವ ಕ್ರಮದಿಂದ ಅಧ್ಯಯನ ನಡೆಸಲಾಗುತ್ತದೆ, ಈ ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಅಧ್ಯಯನದ ಉದ್ದೇಶ ಏನು ಎಂಬುದನ್ನು ವಿವೇಚಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಇಲ್ಲಿಯವರೆಗೆ ನಡೆದಿರುವ ಅಧ್ಯಯನಗಳ ಬಗ್ಗೆ ಸಮೀಕ್ಷೆ ಮಾಡಲಾಗಿದೆ. ಚಿಕ್ಕೋಡಿ ತಾಲೂಕು ಮತ್ತು ಬೆಳಗಾವಿ ಜಿಲ್ಲೆ ಇನ್ನಿತರೆ ಕರ್ನಾಟಕದ ಪ್ರಾದೇಶಿಕ ಜಾತ್ರೆಗಳ ವೈಶಿಷ್ಟ್ಯತೆಯ ಬಗ್ಗೆ ಕುರಿತು ಅವಲೋಕಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಬೆಳಗಾವಿ ಬಗ್ಗೆ ಚಿಕ್ಕೋಡಿ ತಾಲೂಕಿನ ಐತಿಹಾಸಿಕ ಪರಂಪರೆ, ಭೌಗೋಳಿಕ ಪರಿಸರ, ಸಂಪತ್ತು, ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ ಹಾಗೂ ಜನಪದರ ಅಂಕಿ-ಅಂಶಗಳ ಮುನ್ನೋಟವನ್ನು ಹೇಳಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಜಾತ್ರೆ ಎಂಬ ಪದದ ವಿಶ್ಲೇಷಣೆ, ಜಾತ್ರೆಗಳು ಉಗಮಗೊಂಡ ರೀತಿ, ಜಾತ್ರೆಗಳ ಸ್ವರೂಪ, ಅರ್ಥ, ಹಿನ್ನೆಲೆಗಳನ್ನು ವಿಶ್ಲೇಷಣಾತ್ಮಕವಾಗಿ ಅವಲೋಕನ ಮಾಡಲಾಗಿದೆ. ಜೊತೆಗೆ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಸಹ ಉಲ್ಲೇಖಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಜಾತ್ರೆ ವರ್ಗೀಕರಣ ಮಾಡಲಾಗಿದೆ. ಅಂದರೆ ಚಿಕ್ಕೋಡಿ ಭಾಗದಲ್ಲಿ ಆಚರಿಸಲ್ಪಡುವಂತಹ ಜಾತ್ರೆಗಳಲ್ಲಿ ಪುರುಷ ದೇವತೆಗಳ ಜಾತ್ರೆಗಳು, ಸ್ತ್ರೀ ದೇವತೆಗಳ ಜಾತ್ರೆಗಳು, ಸಾಧು-ಸಂತರ ಜಾತ್ರೆಗಳು, ಅನ್ಯಧರ್ಮೀಯ ಜಾತ್ರೆಗಳು ಮುಂತಾದ ಇನ್ನಿತರೆ ದೈವಗಳ ಜಾತ್ರೆಗಳನ್ನು ಒಂದೊಂದಾಗಿ ವರ್ಗೀಕರಿಸಿ ಅವುಗಳ ವಿವರಣೆಯನ್ನು ನೀಡಲಾಗಿದೆ.

ಆರನೇ ಅಧ್ಯಾಯದಲ್ಲಿ ವಿಭಿನ್ನ ತಾಣಗಳಾಗಿ ಅಥವಾ ಕೇಂದ್ರಗಳಾಗಿ ಜಾತ್ರೆಗಳು ಹೇಗೆ ಮಹತ್ವ ಪಡೆದಿವೆ ಎಂಬುದನ್ನು ಹೇಳಲಾಗಿದೆ. ಅಂದರೆ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕ ಕೇಂದ್ರಗಳಾಗಿ ಜಾತ್ರೆಗಳು ಯಾವ ರೀತಿ ಪ್ರಾಮುಖ್ಯತೆಯನ್ನು ಪಡೆಯುತ್ತವೆ, ಚಿಕ್ಕೋಡಿ ತಾಲೂಕಿನಲ್ಲಿ ಆಚರಿಸಲಾಗುವ ಜಾತ್ರೆಗಳು ಯಾವ ವೈಶಿಷ್ಟ್ಯವನ್ನು ಪಡೆದುಕೊಂಡಿವೆ. ಯಾವ ಭಿನ್ನತೆಯನ್ನು ಪಡೆದುಕೊಂಡಿವೆ ಎಂಬ ವಿಚಾರವನ್ನು ಚರ್ಚೆಗೆ ಗುರಿಪಡಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಜಾತ್ರೆಗಳು ಮತ್ತು ಆಧುನಿಕತೆಯ ಸಮಕಾಲೀನ ಸಂದರ್ಭದಲ್ಲಿ ಚಿಕ್ಕೋಡಿ ಜಾತ್ರೆಯ ವೈಶಿಷ್ಟ್ಯತೆಯನ್ನು ವಿಶ್ಲೇಷಿಸಲಾಗಿದೆ. ಜಾಗತೀಕರಣದ ಸಂದರ್ಭದಲ್ಲಿ ಜಾತ್ರೆಗಳು ಯಾವ ಸ್ಥಾನವನ್ನು ಪಡೆಯುತ್ತಿವೆ, ಹೇಗೆ ಆಚರಣೆಯಾಗುತ್ತಿವೆ, ಭಾಷೆ, ಸಂಸ್ಕೃತಿ, ಧರ್ಮ, ಮತ್ತಿತರ ಹಿನ್ನೆಲೆಯಲ್ಲಿ ಹೇಗೆ ತನ್ನ ರೂಪಗಳನ್ನು ಬದಲಾವಣೆ ಮಾಡಿಕೊಳ್ಳುತ್ತಿವೆ ಎಂದು ತಿಳಿಸಲಾಗಿದೆ.

ಎಂಟನೇ ಅಧ್ಯಾಯದಲ್ಲಿ ಜನಪದರ ಗ್ರಹಿಕೆಯಲ್ಲಿ ಜಾತ್ರೆಗಳು ಅಂದರೆ ಜನಪದರು ಜಾತ್ರೆಗಳನ್ನು ನಂಬಿಕೆ, ಸಂಪ್ರದಾಯ, ಒಗಟು, ಗಾದೆ, ಹಾಡುಗಳಲ್ಲಿ ಹೇಗೆ ಕಟ್ಟಿಕೊಟ್ಟಿದ್ದಾರೆ, ಜನಪದರ ದೃಷ್ಟಿಯಲ್ಲಿ ಅವುಗಳಿಗಿರುವ ಮಾನ್ಯತೆಗಳೇನು ಎಂಬುದನ್ನು ತಿಳಿಸಲಾಗಿದೆ.

ಒಂಬತ್ತನೇ ಅಧ್ಯಾಯದಲ್ಲಿ ಸಮಾರೋಪವನ್ನು ಹೇಳಿ, ಜಾತ್ರೆಗಳು ಜನಪದರ ಜೀವನದಲ್ಲಿ ಗುರುತಿಸಬಹುದಾದಂತಹ ಕಾರ್ಯವನ್ನು ಹೇಗೆ ಮಾಡುತ್ತಿವೆ ಹಾಗೂ ಇದೇ ಅಧ್ಯಯನದ ಫಲಿತಗಳನ್ನು ಇಲ್ಲಿ ವೀಕ್ಷಿಸಬಹುದಾಗಿದೆ.

ಒಟ್ಟಾರೆಯಾಗಿ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲೂಕಿನ ಜಾತ್ರೆಗಳು ಅತ್ಯಂತ ಪ್ರಾಚೀನ ಪರಂಪರೆ ಹೊಂದಿದ್ದು, ವಿವಿಧ ನೆಲೆಯಲ್ಲಿ ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದಿವೆ. ಕಾಲ, ದೇಶ, ಸಂದರ್ಭಕ್ಕನುಗುಣವಾಗಿ ಜಾತ್ರೆಗೆ ಜನಪದರಿಗೆ ಹೇಗೆ ಮುಖ್ಯವಾಗುತ್ತವೆ, ಇದರಿಂದ ಜನಪದರ ಜೀವನದಲ್ಲಿ ಉಂಟಾಗಬಹುದಾದ ಸನ್ನಿವೇಶಗಳು, ಬದಲಾವಣೆಗಳು, ರೂಪಾಂತರಗಳನ್ನು ಸಮರ್ಪಕವಾಗಿ ಅಧ್ಯಯನ ನಡೆಸಲಾಗುತ್ತದೆ. ಅತ್ಯಂತ ವೇಗವಾಗಿ ಸಾಗುವ ಇಂದಿನ ಯಾಂತ್ರಿಕ ಜೀವನದಲ್ಲಿ ಅಷ್ಟೇ ವೇಗದ ಗತಿಯಲ್ಲಿ ಜಾತ್ರೆಗಳು ಸಹ ತನ್ನ ಹಳೆಯ ದೇಹಕ್ಕೆ ಹೊಸ ಮುಖವಾಡವನ್ನು ಹಾಕಿಕೊಂಡಂತೆ ಹೊಸ ಹೊಸ ಬದಲಾವಣೆಗಳೊಂದಿಗೆ ಜನರನ್ನು ಕೊಂಡೊಯ್ಯುತ್ತವೆ ಎಂಬುದು ಗಮನಿಸಬೇಕಾದ ವಿಷಯ. ಜನ ಸಮ್ಮುಖವಾಗಿ ಬೆಳೆದುಬಂದಂತಹ ಜಾತ್ರೆಗಳು ಕಾಲಗರ್ಭಕ್ಕೆ ಸೇರಿಕೊಂಡು ವಿಶಾಲವಾಗಿರುವಂತದು. ಸಂಕ್ಷಿಪ್ತವಾಗಿ ಪರಸ್ಪರ ನಂಬಿಕೆ, ಪ್ರೀತಿ, ಆದರ್ಶಗಳನ್ನು ಮೀರಿ ಬೆಳೆಯುತ್ತಿವೆ. ಸರ್ವಧರ್ಮ ಸಮನ್ವಯಕ್ಕೆ ಉತ್ತಮ ಉದಾಹರಣೆ ಎಂದರೆ ಜಾತ್ರೆಗಳು ಎಂದು ಹಿರಿಯರು ಹೇಳಿದ ಮಾತಿನ ನೆನಪು ಇನ್ನೂ ಮಾಸಿಲ್ಲ. ಆದರೆ ಅಂತಹ ಸರ್ವಧರ್ಮ ಸಮನ್ವಯತೆಯನ್ನು ಇಂದಿನ ಜಾತ್ರೆಗಳಲ್ಲಿ ಹೇಗೆ ಗುರುತಿಸಿಕೊಳ್ಳಲಾಗುತ್ತಿದೆ ಎಂಬುದು ಅತ್ಯಂತ ಚರ್ಚಾಸ್ಪದ ವಿಷಯ. ಅದೇನೆ ಇದ್ದರೂ ಜನಪದೀಯ ದೃಷ್ಟಿಯಿಂದ ಜಾತ್ರೆಗಳನ್ನು ಅಭ್ಯಾಸ ಮಾಡಿ ಚಿಕ್ಕೋಡಿ ಭಾಗದ ಜನರಿಗೆ ಈ ಮೂಲಕ ಸವಿವರಗಳೊಂದಿಗೆ ತಮ್ಮ ಜಾತ್ರೆಗಳ ಮಹತ್ವವನ್ನು ತಿಳಿಸುವುದೇ ಆಗಿದೆ. ಇದರಿಂದ ಕೇವಲ ಇಂದಿಗಷ್ಟೇ ಅಲ್ಲ ಮುಂದಿನ ಜನಾಂಗಕ್ಕೆ ಇದೊಂದು ಉತ್ತಮ ಆಕರವಾಗಬಹುದೆಂಬ ಆತ್ಮವಿಶ್ವಾಸದ ಆಶಯ ಇದರಲ್ಲಿದೆ.

ಅಧ್ಯಾಯ ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಎರಡು

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ಜನಪದ ಜಾತ್ರೆಗಳ ಬಗ್ಗೆ ಸುಮಾರು ಎರಡು-ಮೂರು ದಶಕಗಳಿಂದಲೂ ಅಧ್ಯಯನ ಮಾಡಿಕೊಂಡು ಬರಲಾಗಿದೆ. ಪ್ರಾದೇಶಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಜಾತ್ರೆಗಳ ಆಚರಣೆಯನ್ನು ಕುರಿತು ಹಲವು ಜಾನಪದ ವಿದ್ವಾಂಸರ ಅಧ್ಯಯನದ ಕಾರ್ಯ ಸ್ಮರಣೀಯ. ಪ್ರಸ್ತುತ ಪ್ರಬಂಧವಾದ "ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಮಹಾನ್ವೇಷಣೆ" ಎಂಬುದರ ಕುರಿತು ಇದಕ್ಕಿಂತಲೂ ಮುಂಚಿತವಾಗಿ ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳ ಬಗ್ಗೆ ಸಮೀಕ್ಷೆ ಮಾಡುವುದು ಸೂಕ್ತವೆನಿಸುತ್ತದೆ.

ಅಂಬಳಿಕೆ ಹಿರಿಯಣ್ಣ ರವರು "ಹಬ್ಬ-ಜಾತ್ರೆಗಳು" ಎನ್ನುವ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯ ಕೆಲವೊಂದು ಅಧ್ಯಾಯಗಳು ಜಾತ್ರೆಗಳು ಹುಟ್ಟುವ ಸಂದರ್ಭ ಮತ್ತು ಅದರ ಸಾಂಸ್ಕೃತಿಕ ಹಿನ್ನೆಲೆಯನ್ನು ಒಳಗೊಂಡಿವೆ. ಈ ಕೃತಿಯು ಮುಖ್ಯವಾಗಿ ಜಾತ್ರೆಗಳಿಗೂ ಮತ್ತು ಹಬ್ಬಗಳಿಗೂ ಅವಿನಾಭಾವ ಸಂಬಂಧವಿದೆ. ಹಬ್ಬಗಳೂ ಜಾತ್ರೆಯಾಗಿ ರೂಪಿತವಾಗುತ್ತವೆ ಅಥವಾ ಹಬ್ಬಗಳೇ ಜಾತ್ರೆಗಳಾಗಿ ಮಾರ್ಪಟ್ಟಿವೆ. ಈ ದೃಷ್ಟಿಯಿಂದ ಹಬ್ಬಗಳು-ಜಾತ್ರೆಗಳು ಆಚರಣೆಯ ಸಂದರ್ಭದಲ್ಲಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ" ಎಂಬಂತೆಯೇ ಅಭಿಪ್ರಾಯಪಡುತ್ತಾರೆ.

ಚಂದ್ರಶೇಖರ ದಾಮ್ಲೆ 'ಜಾತ್ರೆ' ಎಂಬ ಕೃತಿಯಲ್ಲಿ ಜನರ ಸಂಸ್ಕೃತಿ ಮತ್ತು ಪರಂಪರೆಯನ್ನು ಕಟ್ಟಿಕೊಡುವಂತವುಗಳಾಗಿದ್ದು, ಜನಪದ ಜೀವನದ ಪ್ರತೀಕವಾಗಿವೆ. ಹಾಗಾಗಿ ಕರಾವಳಿ ಪ್ರದೇಶದಲ್ಲಿ ಆಚರಿಸುವ ಹಬ್ಬಗಳು-ಜಾತ್ರೆಗಳನ್ನು ಮತ್ತು ಪ್ರದೇಶಗಳನ್ನು ಉಲ್ಲೇಖಿಸುತ್ತಾರೆ. ಸುಳ್ಯ, ಕುಕ್ಕನೂರು, ಉಬರಡ್ಕ ಮತ್ತು ಮಿತ್ತೂರು ಗ್ರಾಮಗಳ ಜಾತ್ರಾ ವೈಶಿಷ್ಟ್ಯವನ್ನು ಅಥವಾ ಗ್ರಾಮಗಳ ಸಾಂಸ್ಕೃತಿಕ ವೈವಿಧ್ಯತೆಯನ್ನು ಚರ್ಚಿಸುತ್ತಾರೆ.

ಡಾ.ಹಿ.ಚಿ.ಬೋರಲಿಂಗಯ್ಯ ಅವರು 'ಉಜ್ಜನಿ ಚೌಡಮ್ಮ' ಎಂಬ ಕೃತಿಯಲ್ಲಿ ಗ್ರಾಮದೇವತೆಯ ಜಾತ್ರೆ-ಹಬ್ಬಹರಿದಿನಗಳು, ನಂಬಿಕೆ ಮತ್ತು ಸಂಪ್ರದಾಯಗಳನ್ನು ಕುರಿತು ಸವಿಸ್ತಾರವಾಗಿ ಉಲ್ಲೇಖಿಸುತ್ತಾರೆ.

ಸಿ.ಎಸ್.ಶಿವಕುಮಾರ ಸ್ವಾಮಿಯವರು 'ಕರ್ನಾಟಕ ಜಾತ್ರೆಗಳು' ಎನ್ನುವ ಶೀರ್ಷಿಕೆಯಡಿಯಲ್ಲಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ತುಳು ನಾಡಿನ

ಭಾಗದ ಜಾತ್ರೆಗಳ ಆಚರಣೆಯನ್ನು ವೈವಿಧ್ಯಮಯವಾಗಿ ವಿಶ್ಲೇಷಣೆ ಮಾಡಿದ್ದಾರೆ. ಧರ್ಮದ ನೆಲೆಯಿಂದ, ಸಾಂಸ್ಕೃತಿಕ ನೆಲೆಯಿಂದ ಮತ್ತು ಸಮಾಜದ ನೆಲೆಯಿಂದ, ಆರ್ಥಿಕ ನೆಲೆಯಿಂದ ದೇಶೀಯ ಸೊಗಡಿನೋಪಾದಿಯಲ್ಲಿ ವಿಚಾರ ಮಾಡುತ್ತಾರೆ.

ದಲಿತ ಕವಿ ಸಿದ್ಧಲಿಂಗಯ್ಯನವರ 'ಗ್ರಾಮ ದೇವತೆಗಳು' ಎನ್ನುವ ಪ್ರಬಂಧ ಗ್ರಾಮ ಅಧ್ಯಯನಗಳಲ್ಲಿ ಅತ್ಯಂತ ಮಹತ್ವಪೂರ್ಣವಾದ ಕೃತಿಯಾಗಿದೆ. ಗ್ರಾಮದೇವತೆಯ ಆರಾಧನೆ, ಜನರ ನಂಬಿಕೆ ಮತ್ತು ಸಂಪ್ರದಾಯಗಳನ್ನು ಕುರಿತು ಗ್ರಾಮೀಣ ಜನರಲ್ಲಿ ರೂಪುಗೊಳ್ಳುವ ಹಬ್ಬಗಳು-ಜಾತ್ರೆಗಳ ಹುಟ್ಟನ್ನು ವಿಶದೀಕರಿಸಿದ್ದಾರೆ.

ಹಂಪ ನಾಗರಾಜಯ್ಯರವರು 'ಕರ್ನಾಟಕ ಜಾತ್ರೆಗಳು' ಎನ್ನುವ ತಮ್ಮ ಕೃತಿಯಲ್ಲಿ ಪ್ರಾದೇಶಿಕ ಹಿನ್ನೆಲೆ ಮತ್ತು ಜನಪದ ಸಂಸ್ಕೃತಿಯ ಬಗ್ಗೆ ಹೆಚ್ಚು ಮಹತ್ವ ವಹಿಸಿರುವುದನ್ನು ಕಾಣಬಹುದಾಗಿದೆ. ಜಾತ್ರೆಗಳು ಆಧುನಿಕತೆಯ ಸಂದರ್ಭದಲ್ಲಿ ಗ್ರಾಮೀಣ ಜನರ ಜೀವನದ ಸ್ಥಿತ್ಯಂತರವನ್ನು ಗಮನಿಸಿರುವುದನ್ನು ಈ ಕೃತಿಯಲ್ಲಿ ಕಾಣಬಹುದು.

ತಿಮ್ಮಪ್ಪ ಎ.ಕೆ ಅವರ 'ಶಿವಮೊಗ್ಗ ಜಿಲ್ಲೆಯ ಜಾತ್ರೆಗಳು' ಎನ್ನುವ ಈ ಸಂಶೋಧನ ಪ್ರಬಂಧದಲ್ಲಿ ಗ್ರಾಮದೇವತೆಗಳ ಜಾತ್ರೆಗಳು-ಹಬ್ಬಗಳು, ನಂಬಿಕೆ ಮತ್ತು ಸಂಪ್ರದಾಯಗಳನ್ನು ಉಲ್ಲೇಖಿಸಿದ್ದಾರೆ. ಅಲ್ಲದೇ ಸ್ಥಳೀಯ ಜಾತ್ರೆಗಳು ಮನರಂಜನೆ ಮತ್ತು ಕೇವಲ ಧಾರ್ಮಿಕತೆ ಮಾತ್ರ ಪ್ರಸ್ತುತ ಸಂದರ್ಭದಲ್ಲಿ ಮಹತ್ವ ಪಡೆದುಕೊಳ್ಳುತ್ತಿವೆ ಅಷ್ಟೇ ಎಂದು ಅಭಿಪ್ರಾಯಪಡುತ್ತಾರೆ.

ಈ ಮೇಲಿನ ಎಲ್ಲ ಅಧ್ಯಯನಗಳ ಬರಹಗಳು ಮುಖ್ಯವಾಗಿ ಒಂದು ಗ್ರಾಮ, ಆ ಗ್ರಾಮದ ದೇವತೆ ಅಥವಾ ಸಮಾಜವನ್ನು ಮತ್ತು ಸಮುದಾಯವನ್ನು ಪ್ರತಿನಿಧಿಸುವ ಜಾತ್ರೆಗಳಾಗಿ ಕಂಡುಬರುವುದಲ್ಲದೆ, ಅವುಗಳ ಬಗ್ಗೆ ಸಂಕ್ಷಿಪ್ತ ಮತ್ತು ನೇರ ಸಂಕೀರ್ಣತೆಯನ್ನು ಒಳಗೊಂಡಿರುವಂತಹವು. ಆದರೆ ವರ್ತಮಾನ ಕಣ್ಣಿನಿಂದ ಗ್ರಹಿಸಿದಾಗ ಜಾತ್ರೆಗಳು ಪರಂಪರೆ ಮತ್ತು ವಾಸ್ತವವನ್ನು ಅರಿಯಲು ಸಹಕಾರಿಯಾಗಿವೆ.

ಹಾಗಾಗಿ ಇಲ್ಲಿಯವರೆಗೂ ಅಧ್ಯಯನಗಳ ಸಮೀಕ್ಷೆಯನ್ನು ಆಧರಿಸಿದಾಗ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೂ ನಡೆದಿರುವ ಅಧ್ಯಯನಗಳು ಪೂರ್ಣವೆಂದು ಹೇಳುವುದಿಲ್ಲ. ತೀರಾ ವಿರಳವೆಂದೇ ಭಾವಿಸಲಾಗಿದೆ. ಆದುದರಿಂದ ಈಗಾಗಲೇ ಪ್ರಕಟಗೊಂಡಿರುವ ಲೇಖನಗಳು ಮತ್ತು ಸಂಶೋಧನಾ ಬರಹಗಳನ್ನು ಆಧರಿಸಿ ಈ ಪ್ರಸ್ತುತ ಪ್ರಬಂಧವನ್ನು ರೂಪಿಸಲಾಗಿದೆ.

ಅಧ್ಯಾಯ ಮೂರು

ಜಾತ್ರೆ ನಡೆದು ಬಂದ ದಾರಿ

ಜಾತ್ರೆಯ ಅರ್ಥ, ವಿವೇಚನೆ, ಸ್ವರೂಪ

ಅಧ್ಯಾಯ ಮೂರು

ಜಾತ್ರೆ ನಡೆದು ಬಂದ ದಾರಿ

ಜಾತ್ರೆಯ ಅರ್ಥ, ವಿವೇಚನೆ, ಸ್ವರೂಪ

ಪ್ರಕೃತಿಯಲ್ಲಿ ಮನುಷ್ಯನ ಜನನ ಆಶ್ಚರ್ಯಕರವಾದುದು. ಸಾವಿರಾರು ವರ್ಷಗಳ ಹಿಂದೆ ಕೇವಲ ಪ್ರಾಣಿ–ಪಕ್ಷಿಗಳೇ ಹೆಚ್ಚಾಗಿ ವಾಸವಾಗಿದ್ದು, ಅತ್ಯಂತ ಸಣ್ಣ ಪ್ರಮಾಣದ ಹಾಗೂ ಅತ್ಯಂತ ದೊಡ್ಡ ಪ್ರಮಾಣದ ಜೀವಿಗಳು ಈ ಪ್ರಕೃತಿಯಲ್ಲಿ ವಾಸಿಸುತ್ತಿದ್ದ ಕಾಲವೊಂದಿತ್ತು, ಅದು ಈಗ ಮನುಕುಲದ ಇತಿಹಾಸದ ಗರ್ಭದೊಳಗೆ ಅಡಗಿರುವ ವಿಸ್ಮಯಕಾರಿ ವಿಷಯ. ಮಾನವನ ಉಗಮವನ್ನು ತಿಳಿಯಲು ಹೊರಟಾಗ ಆದಿಮಾನವನ ಕಾಲದಿಂದಲೂ ಹಂತ ಹಂತವಾಗಿ ಬೆಳವಣಿಗೆಯಾಗುತ್ತಾ ನಿಸರ್ಗದ ಜೊತೆಗೆ ತಾನೂ ಒಬ್ಬನಾಗಿ ಮಾನವ ಬೆಳೆದನು. ತನ್ನ ಅಗಾಧ ಶಕ್ತಿ ಪರಿಶ್ರಮದಿಂದಾಗಿ ಕಲಿಕೆಯ ಮೂಲಕ ಮಾತನಾಡುವ ಶಕ್ತಿಯನ್ನು ಪಡೆದ. ಇದು ಪ್ರಕೃತಿಯ ಸಕಲ ಜೀವರಾಶಿಗಳಲ್ಲಿ ಮಾನವನಿಗೆ ಸಿಕ್ಕಂತಹ ವಿಶೇಷ ಫಲ, ಕೊಡುಗೆ. ಇದರಿಂದಾಗಿ ಮಾನವ ಪ್ರಕೃತಿಯಲ್ಲಿ ತನ್ನ ಇರುವಿಕೆಯನ್ನು ಸ್ಥಾಪಿಸಲು ನಾನಾ ರೀತಿಯ ಪ್ರಯೋಗಗಳನ್ನು, ಪವಾಡಗಳನ್ನು ಮಾಡಿದ. ಅದೆಲ್ಲದರ ಫಲವೇ ನಾವಿಂದು ಜೀವಿಸಿರುವುದಕ್ಕೆ ಕಾರಣ. ಪ್ರಕೃತಿಯ ಕೂಸಾದ ಮನುಷ್ಯನ ಮೂಲ ರೂಪ ವಾನರ. 'ಮಂಗನಿಂದ ಮಾನವ' ಎಂಬಂತಹ ಪ್ರಸಿದ್ಧ ಗಾದೆಮಾತು ಹೇಳುವಂತೆ ಅಲ್ಲಿಂದಲೇ ಇವನ ಪ್ರಯಾಣ ಪ್ರಾರಂಭವಾಯಿತು. ಹಳೆ ಶಿಲಾಯುಗ, ನವ ಶಿಲಾಯುಗ ಹೀಗೆ ಯುಗ ಯುಗಾಂತರವಾಗಿ ಮಾನವ ತನ್ನ ಜೀವನದ ದಿನಗಳನ್ನು ಸವೆಸಿ ಕೊನೆಗೆ ನಿಸರ್ಗದ ಜೊತೆ ಕೊಡುಕೊಳ್ಳುವಿಕೆ ನಡೆಸಿ, ಹೋರಾಡಿ, ಕದನ ಮಾಡಿ ಸೋತು, ಗೆದ್ದು, ಕೆಲವುಗಳನ್ನು ಕಳೆದುಕೊಂಡು, ಕೆಲವುಗಳನ್ನು ಪಡೆದುಕೊಂಡು ಬದುಕಿನ ಏಳು–ಬೀಳುಗಳೊಂದಿಗೆ ಜೀವನವನ್ನು ಅಂಗೈಯಲ್ಲಿಟ್ಟುಕೊಂಡು ಹಾಗೆಯೇ ಜೀವಿಸಿದ ಮಾನವ ನಿಜಕ್ಕೂ ಬುದ್ಧಿವಂತನೇ ಆಗಿದ್ದಾನೆ. ಅಲೆಮಾರಿಯಾಗಿ ಅಲೆಯುತ್ತಿದ್ದವನು ಒಂದೆಡೆ ನೆಲೆನಿಂತು, ಪ್ರಕೃತಿಯಲ್ಲಿನ ಜೀವಿಗಳೊಂದಿಗೆ ತಾನೂ ಬೆರೆತು, ಋತುಮಾನಗಳಿಗೆ ಹೊಂದಿಕೊಂಡು ಗಾಳಿ, ನೀರು, ಮತ್ತು ಬೆಳಕು ಇವುಗಳನ್ನು ಸಮರ್ಪಕವಾಗಿ ಬಳಸಿಕೊಂಡು, ಉಪಯೋಗಿಸಿಕೊಂಡು ತನ್ನ ಸ್ವ ಬೆಳವಣಿಗೆಯನ್ನು ತಾನೇ ಹೊಂದಿದ್ದಾನೆ. ಅವನ ಏಳಿಗೆಗೆ ಪ್ರಕೃತಿಯ ಸಕಲ ಜೀವರಾಶಿಯೂ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಒಂದಲ್ಲ ಒಂದು ವಿಧವಾಗಿ ನೆರವಾಗಿವೆ. ಇದಕ್ಕೆ ಸಾಕ್ಷಿ ಇಂದಿನ ನಮ್ಮ ಜೀವವೇ ಆಗಿದೆ.

ಅತೀ ಬುದ್ಧಿವಂತನೆನಿಸಿಕೊಂಡಿರುವ ಈ ಮಾನವ ಕೆಲವು ಕೆಟ್ಟ ಕೆಲಸಗಳನ್ನು ಮಾಡಿದ್ದಾನೆ ಹಾಗೂ ಮಾಡುತ್ತಿದ್ದಾನೆ. ಒಳ್ಳೆಯ ಕೆಲಸವನ್ನು ಮಾಡಿದ್ದಾನೆ, ಮಾಡುತ್ತಿದ್ದಾನೆ. ಅದೇನೆ ಇದ್ದರೂ ತನ್ನ ಬೆಳವಣಿಗೆಗೆ ಸಾಕಷ್ಟು ಪ್ರಯತ್ನ ಪಟ್ಟು ಬೆಳೆದುಬಂದಿರುವುದಕ್ಕೆ ಅವನನ್ನು ಗೌರವಿಸಲೇಬೇಕು. ಎಲ್ಲಿ? ಹೇಗೆ? ಯಾಕೆ? ಎಂಬ ವಿಚಾರಗಳನ್ನು ಚರ್ಚಿಸದೆ ಸ್ವಂತ ಪ್ರಯತ್ನದಿಂದ ಬೆಳೆದುಬಂದ ಮಾನವನ ಜಾಣ್ಮೆ ಮೆಚ್ಚುವಂತದ್ದೆ, ಹೀಗಾಗಿ ಮನುಕುಲದ ಉಗಮವಾಯಿತು.

ಮುಂದೆ ಪ್ರತಿನಿತ್ಯವೂ ಹೊಲ, ಮನೆ, ಬೇಟೆ, ಆಹಾರ ಮುಂತಾಗಿ ಕೆಲಸ ಮಾಡುವುದೇ ಆದರೆ ಮಾನಸಿಕವಾಗಿ ಪ್ರಜ್ಞೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಅದನ್ನು ಸರಿಪಡಿಸುವ ಸಲುವಾಗಿ ದೇವರನ್ನು ಸೃಷ್ಟಿಸಿಕೊಂಡು ಇದಕ್ಕೆ ಇತಿಹಾಸದಲ್ಲಿ ಬೇರೆಯ ಕಲ್ಪನೆಯನ್ನೇ ಕೊಡುತ್ತದೆ. ಅಂದರೆ ಮನುಷ್ಯ ಅಲೆಮಾರಿಯಿಂದ ನೆಲೆಯೂರಿ ನಿಂತಾಗ ಕೆಲವು ಸಂದರ್ಭಗಳು ಎದುರಾಗುತ್ತಿದ್ದವು. ಅಂತಹ ವೇಳೆಯಲ್ಲಿ ತನ್ನ ಕುಟುಂಬವನ್ನು ಒಂಟಿಯಾಗಿ ಬಿಟ್ಟು ಹೋಗುವುದು, ಮರಳಿ ಬರುವ ಹೊತ್ತಿಗೆ ಅವರಿಗೆ ಯಾವುದಾದರೂ ಅನಾಹುತಗಳಾಗಿ ಕುಟುಂಬವೆಲ್ಲ ನಾಶವಾಗುತ್ತಿದ್ದವು. ಆಗ ಕುಟುಂಬವನ್ನು ರಕ್ಷಿಸಿಕೊಳ್ಳಲು ಭಯದಿಂದ ಎಂಬ ದೇವರನ್ನು ಸೃಷ್ಟಿಸಿಕೊಂಡ ಆ ದೇವರ ಮುಖಾಂತರ ತನ್ನ ಬೇಕು ಬೇಡಗಳನ್ನು ಈಡೇರಿಸಿಕೊಂಡ, ಆಹಾರಕ್ಕಾಗಿ ವಲಸೆ ಹೋದಾಗ ಅವನ ಅಮೂರ್ತ ಕಲ್ಪನೆಯ ದೇವರಿಗೆ ತನ್ನೆಲ್ಲವನ್ನು ಅರ್ಪಿಸಿ ಬರುತ್ತಿದ್ದ, ಮತ್ತೆ ಮರಳಿ ಬಂದಾಗ ಅವನ ಕುಟುಂಬ ಜೀವಂತವಿರುವುದನ್ನು ಕಂಡು ಸಂತೋಷಿಸಿ ಆ ದೇವರ ಮೇಲಿನ ಭಕ್ತಿ ಇನ್ನಷ್ಟು ಹೆಚ್ಚಾಯಿತು. ನಂತರ ಅದು ಒಂದು ನಂಬಿಕೆಯಾಗಿ, ಸಂಪ್ರದಾಯವಾಗಿ, ಆಚರಣೆಯ ರೂಪತಾಳಿ ದೇವರಿಗೆ ಪೂಜೆ–ಪುನಸ್ಕಾರ, ನೈವೇದ್ಯ ತನೆಗೆ ಗೊತ್ತಿರದ ಯಾವುದೇ ಒಂದು ಅಮೂರ್ತ ರೂಪವನ್ನು ದೇವರು ಎಂದು ಹೇಳಿ, ಅದರಿಂದ ತನ್ನ ರಕ್ಷಣೆ ಮಾಡಿಕೊಂಡು ನೆಮ್ಮದಿಯ ಬದುಕನ್ನು ನಡೆಸಲಾರಂಭಿಸಿದ. ಅಂತಹ ಬದುಕಿಗೆ ಹಬ್ಬ–ಹರಿದಿನ, ಜಾತ್ರೆ–ಉತ್ಸವ, ನಂಬಿಕೆ, ಸಂಪ್ರದಾಯ, ಆಚರಣೆ, ರೀತಿ–ನೀತಿಗಳು, ದೇವರು–ದೆವ್ವ, ತ್ಯಾಗ–ಬಲಿದಾನ ಇಂತಹ ಜೀವನದ ನಾನಾ ರೂಪಗಳನ್ನು ತಾನೇ ಸೃಷ್ಟಿಸಿಕೊಂಡು ಅವರ ಬದ್ಧತೆಗೆ ಒಳಗಾಗಿಯೇ ತನ್ನ ಬದುಕನ್ನು ನಡೆಸಿಕೊಂಡು ಬಂದ. ಅದು ತಲೆಮಾರಿನಿಂದ ತಲೆಮಾರಿಗೆ, ಪರಂಪರೆಯಿಂದ ಪರಂಪರೆ ಹಾಗೆಯೇ ಮುಂದುವರೆದು ಪೀಳಿಗೆಯಿಂದ ಪೀಳಿಗೆಯವರಿಗೆ ಮಾರ್ಗದರ್ಶಿಯಾಗಿ, ಕೊಡುಗೆಯಾಗಿ ಬೆಳೆಯಿತು. ಪ್ರಸ್ತುತಕ್ಕೂ ಅದನ್ನು ನಮ್ಮ ಜನಪದರ ಬದುಕಿನಲ್ಲಿ ಕಾಣುತ್ತೇವೆ.

ತನ್ನ ಆಚರಣೆಗಳಿಗೆ ಧಾರ್ಮಿಕ ಚೌಕಟ್ಟನ್ನು ಹಾಕಿಕೊಂಡ ಮಾನವ ಅದನ್ನು ಪ್ರತಿನಿತ್ಯದ ಚಟುವಟಿಕೆಗಳಲ್ಲಿ ಬಳಸಿಕೊಂಡ ಮತ್ತು ಬೆಳೆಸಿಕೊಂಡು ಬಂದ. ಹಾಗೆ ಬಂದಂತಹ

ಪದ್ಧತಿಗಳು, ಜಾತ್ರೆಗಳು ಸಹ ಒಂದು ವಿಧಾನ. ತಾನು ಅಥವಾ ಜನಪದರು ತಮ್ಮಿಷ್ಟದ ದೈವವನ್ನು ಒಂದು ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಅಥವಾ ಮರು ದೇವಸ್ಥಾನಗಳಲ್ಲಿ ಸ್ಥಾಪಿಸಿಕೊಂಡ ದೇವರನ್ನು ಮೆರವಣಿಗೆ, ಉತ್ಸವಗಳನ್ನು ನಡೆಸುವುದರ ಮೂಲಕ ದೇವರನ್ನು ಕೊಂಡಾಡುವುದು. ತಮ್ಮ ಕಷ್ಟ ಸುಖಗಳನ್ನು ದೇವರಲ್ಲಿ ತೋಡಿಕೊಂಡು ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು ರೂಢಿಯಲ್ಲಿದೆ. ಕಾಲದಿಂದ ಕಾಲಕ್ಕೆ ಸಂದರ್ಭದಿಂದ ಸಂದರ್ಭಕ್ಕೆ ಬದಲಾವಣೆಗಳನ್ನು ಸಹ ಕಂಡಿತು. ಇಂದು ಜನಪದರ ಜೀವನದಲ್ಲಿ ಜಾತ್ರೆಗಳು ಜನರ ಜೀವಾಳವಾಗಿ ಅತ್ಯಂತ ಮುಖ್ಯವಾದ ಆಚರಣಾ ವಿಭಾಗಗಳಾಗಿವೆ.

ಜಾತ್ರೆ ಪದದ ಅರ್ಥ

ಜಾತ್ರೆ ಎಂಬುದು 'ಯಾತ್ರೆ' ಎಂಬ ಪದದ ತದ್ಭವ ರೂಪ. ಪ್ರಾಚೀನ ಕಾಲದ ಸಂದರ್ಭದಲ್ಲಿ ಜನರು ತಮ್ಮ ಜೀವಿತದ ಕೊನೆ ಭಾಗದಲ್ಲಿ ಅಥವಾ ತಮ್ಮ ಮನೋಭಿಲಾಷೆ ಈಡೇರಿಕೆಗಾಗಿ ಪವಿತ್ರ ದೇವಸ್ಥಾನಗಳ ಪ್ರದೇಶಗಳಿಗೆ ಹೋಗಿ ದೇವರ ದರ್ಶನವನ್ನು ಮಾಡಿಕೊಂಡು ಬರುವುದು ಒಂದು ಪದ್ಧತಿಯಾಗಿತ್ತು. ದೇವಸ್ಥಾನ ಅಥವಾ ದೇವರಿರುವ ಸ್ಥಾನವೆಂದರೆ ಅಲ್ಲಿ ನೂರಾರು ವಿವಿಧ ರೀತಿಯ ಭಕ್ತರು ಸೇರುತ್ತಾರೆ. ಮತ, ಧರ್ಮ, ಪಂಗಡಗಳೆನ್ನದೆ ಜನರು ಇಂತಹ ಪವಿತ್ರ ಸ್ಥಳಗಳನ್ನು ನೋಡುವುದರಿಂದ ಮತ್ತು ದೇವರ ದರ್ಶನ ಮಾಡುವುದರಿಂದ ಪುಣ್ಯ ಲಭಿಸುತ್ತದೆ. ದೇವರಿಗೆ ಹತ್ತಿರವಾಗುತ್ತೇವೆ. ಸ್ವರ್ಗ ದೊರಯುತ್ತದೆ ಎಂಬ ನಂಬಿಕೆಯಿಂದ ಜನರು ಯಾತ್ರೆಗಳನ್ನು ಮಾಡುತ್ತಿದ್ದರು. ಕೆಲವು ಭಕ್ತರು ದೈವ ಪರವಶರಾಗಿ ಯಾತ್ರಾ ಸ್ಥಳಗಳಲ್ಲೇ ಇದ್ದು, ತಮ್ಮ ಮುಂದಿನ ಜೀವನ ನಡೆಸುತ್ತಿದ್ದರು. ಇನ್ನೂ ಕೆಲವರು ಜೀವನದ ಮೇಲೆ ವಿರಕ್ತಿ ಹೊಂದಿ ಸಂಸಾರದ ಜಂಜಾಟಗಳಿಂದ ಮುಕ್ತಿ ಹೊಂದಲು ಸನ್ಯಾಸಿಗಳಾಗಿ ದೇಶಾಂತರ ಹೋಗುವುದು ಇದರಿಂದ ದೇವರ ಕೃಪೆಗೆ ಪಾತ್ರರಾಗುತ್ತೇವೆ ಎಂಬ ನಂಬಿಕೆಗಳಿಂದ ಇಂತಹ ಯಾತ್ರೆಗಳನ್ನು ಮಾಡುತ್ತಿದ್ದರು. ಕ್ರಮೇಣ ಯಾತ್ರಾ ಸ್ಥಳಗಳಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿ ತಂಡೋಪ ತಂಡವಾಗಿ ಕಾಣುತ್ತಿದ್ದರು. ಹೀಗೆ ತಂಡೋಪ ತಂಡಗಳು ಸೇರಿ ದೇವರನ್ನು ಭಜಿಸುವುದು, ಆರಾಧಿಸುವುದು, ದೇವರನ್ನು ಕೊಂಡಾಡಿ ಮೆರವಣಿಗೆ ಮಾಡುವುದು ಇಂತಹ ಕೆಲವು ಆಚರಣೆಗಳು ಜಾರಿಗೆ ಬಂದವು. ಮುಂದೆ ಯಾತ್ರೆ ಎಂಬುದು ಜನಸಾಮಾನ್ಯರ ನಾಲಿಗೆಗೆ ನಿಲುಕದೆ 'ಜಾತ್ರೆ'ಯಾಗಿ ರೂಪಾಂತರ ಹೊಂದಿತು. ಅಲ್ಲಿಂದ 'ಯಾತ್ರೆ' ಹೋಗಿ 'ಜಾತ್ರೆ'ಯಾಯಿತು. ಮುಂದುವರೆದಂತೆ 'ಜಾತ್ರೆ' ಎಂಬ ಪದವೇ ನಿರ್ದಿಷ್ಟವಾಗಿ ನಿತ್ಯ ನಿರಂತರವಾಗಿ ಬಳಕೆಯಲ್ಲಿ ಜಾರಿಯಾಯಿತು. ಹೀಗೆ 'ಜಾತ್ರೆ' ಎಂಬ ಪದ ನಿಷ್ಪನ್ನ ಹೊಂದಿ ಜನಪದರ ಜೀವನದಲ್ಲಿ ಮಹತ್ವದ ಸ್ಥಾನ ಪಡೆಯಿತು ಎನ್ನಬಹುದು.

ಜಾತ್ರೆಯ ಬಗೆಗೆ ಅನೇಕ ದೇಶೀಯ ಹಾಗೂ ವಿದೇಶಿಯ ವಿದ್ವಾಂಸರು ಅನೇಕವಾಗಿ ಅಧ್ಯಯನ ನಡೆಸಿದ್ದು, ಹಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. 'ಜಾತ್ರೆ' ಎಂಬ ಪದಕ್ಕೆ ಇಂಗ್ಲೀಷಿನಲ್ಲಿ 'Festival' ಎಂಬುದಾಗಿ ಹೇಳಬಹುದು. ಅಂದರೆ ಹಬ್ಬ ಎಂಬ ಪರ್ಯಾಯ ಅರ್ಥವನ್ನು ಇದು ಸೂಚಿಸುತ್ತಿದ್ದು ಮೂಲತಃ ಜಾತ್ರೆ ಎಂದರೆ ಅಲ್ಲಿ ಹಬ್ಬದ ವಾತಾವರಣವೇ ಇರುತ್ತದೆ. ಸಿ.ಎಫ್.ಫಾಟಿಕ್‌ರವರು 'Folklore is a lively fossil which refuses to die' ಎನ್ನುತ್ತಾರೆ. ಅಂದರೆ ಸಮಾಜದ ಒಳಿತಿಗಾಗಿ, ಸಮಾಜದ ಉದ್ಧಾರಕ್ಕಾಗಿ ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಆಚರಿಸುವ ಸಂಭ್ರಮದ ಆಚರಣೆಗಳನ್ನು, ಸಂಪ್ರದಾಯಗಳನ್ನು ಜಾತ್ರೆ ಅಥವಾ ಹಬ್ಬ ಎಂದು ಹೇಳಬಹುದು. ಹಾಗೆಯೇ ಆರ್.ಎಸ್.ಬಾಗ್ಸ್‌ರವರು 'Festival is a complex unit of customs and other folklore to celebrate a special occasion usually annually and of public interest' ಎಂದು ಅಭಿಪ್ರಾಯಿಸುತ್ತಾರೆ (ಮೈಲಾರದ ಜಾತ್ರೆಗಳ ಅಧ್ಯಯನ: ಎಂ.ಎನ್.ವೆಂಕಟೇಶ್, ಪು.೫). ಮುಂದುವರೆದಂತೆ ಅಲನ್‌ತಂಡಸ್‌ರವರು Folk any group of people what so ever who share attest one common factor ಎನ್ನುತ್ತಾ ಒಂದು ನಿರ್ದಿಷ್ಟ ದೈವವೊಂದಕ್ಕೆ ಸಾಂಪ್ರದಾಯಿಕವಾಗಿ ಪೂಜೆ, ಪುನಸ್ಕಾರ, ಯಜ್ಞ, ನೈವೇದ್ಯ, ಹರಕೆ ಮುಂತಾದ ಆಚರಣೆಗಳಿಂದ ನಡೆದುಬಂದಿರುವುದು ಜಾತ್ರೆಯ ಪ್ರಮುಖ ಲಕ್ಷಣವಾಗಿದೆ.

ಪುರಾಣಗಳಲ್ಲಿ ಹಬ್ಬಗಳನ್ನು ಚರಿತ್ರೆಗಳೆಂದೇ ಹೇಳಲಾಗಿದೆ. ಅಂದರೆ ಯಾವುದೇ ಜನಪದರ ಹಬ್ಬ ಹರಿದಿನಗಳು ಆಚರಿಸಿದರೂ ಅಲ್ಲಿ ಮನೆಯ ಹಿರಿಯ-ಕಿರಿಯ, ಸಂಬಂಧಿಕರು, ಬಂಧುಗಳು ಜೊತೆಗೆ ಊರಿನ ಜನರೆಲ್ಲರೂ ಸೇರಿ ಆಚರಿಸುವುದರಿಂದ ಅಲ್ಲಿ ಚರಿತ್ರೆಯ ವಾತಾವರಣವನ್ನು ಕಾಣುತ್ತೇವೆ. ಹಾಗಾಗಿ 'Festival' ಎಂಬ ಪದಕ್ಕೆ ಸಾಂಕೇತಿಕವಾಗಿ ಹಬ್ಬ ಎಂದು ಅರ್ಥೈಸಿದರೂ ಸಾಂಘಿಕವಾಗಿ ಅದನ್ನು ಜಾತ್ರೆ ಎಂದು ಮತ್ತೊಂದು ವಿಧದಲ್ಲಿ ಅರ್ಥ ಮಾಡಿಕೊಳ್ಳಬಹುದಾಗಿದೆ. ಮಾನವನು ತನ್ನ ಜೀವನದ ಏಕಾಂತತೆಯನ್ನು ಹೋಗಲಾಡಿಸಿಕೊಳ್ಳಲು ತನ್ನ ಆತ್ಮೀಯರನ್ನು, ಬಂಧು-ಬಳಗದೊಂದಿಗೆ ಸಂತೋಷದ ಕ್ಷಣವನ್ನು ಅನುಭವಿಸಲಿಕ್ಕೆ ಕೆಲವು ನಿರ್ದಿಷ್ಟ ದಿನಗಳನ್ನು ಗುರ್ತಿಸಿಕೊಂಡು ಆ ದಿನಗಳಲ್ಲಿ ಮನೆಯಲ್ಲಿ, ಊರಲ್ಲಿ ಹಬ್ಬವನ್ನು ಆಚರಿಸುವುದರ ಮೂಲಕ, ದೇವರನ್ನು ಕೊಂಡಾಡುವುದರ ಮೂಲಕ ತನ್ನ ಹಾಗೂ ತನ್ನವರ ಅಂದರೆ ಸುಖ-ದುಃಖಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದರಿಂದ ಮಾನಸಿಕವಾಗಿ ನೆಮ್ಮದಿಯನ್ನು ಪಡೆಯಬಹುದೆಂಬ ಅಪಾರ ನಂಬಿಕೆ ಜನಪದರಲ್ಲಿದೆ. ಇಂತಹ ಕೆಲವು ಆಚರಣೆಗಳು ವ್ಯಕ್ತಿಯ ಕಲ್ಯಾಣಕ್ಕಾಗಿ, ಸಮಾಜದ ಕಲ್ಯಾಣಕ್ಕಾಗಿ, ಲೋಕ ಕಲ್ಯಾಣದ ಆಚರಣೆಗಳೂ ಆಗಿರುತ್ತವೆ. ಉದ್ದೇಶ ಮನರಂಜನೆ,

ಸಂತೋಷಪಡುವುದೇ ಆಗಿದ್ದರೂ ಅದರ ಮುಖಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ. ಕನ್ನಡ ವಿಶ್ವಕೋಶದಲ್ಲಿ ಬಹುಶಃ ಹಬ್ಬ ಆಚರಣೆಗಳು ವಿಜಯೋತ್ಸವಗಳಿಗಿರಬೇಕು. ದುಷ್ಟ ಶಕ್ತಿಯನ್ನು ದಮನ ಮಾಡಿದುದರ ಜ್ಞಾಪಕಾರ್ಥವಾಗಿ ಇವು ಆಚರಣೆಯಲ್ಲಿ ಬಂದಿರಬೇಕು ಎಂಬ ಅಭಿಪ್ರಾಯ ಹೇಳುತ್ತದೆ.

ಜಾತ್ರೆಯ ಕುರಿತಾಗಿ ಹತ್ತಾರು ಅಭಿಪ್ರಾಯಗಳು ಮಾಡಿದ್ದರೂ ನಮ್ಮಲ್ಲಿ ಹಿರಿಯ ವಿದ್ವಾಂಸರಾದ ದೇ.ಜೆ.ಗೌ. ಅವರು ತನ್ನ ಅಪೂರ್ವ ಅಧ್ಯಯನದ ಮೂಲಕ ಒಂದು ನಿರ್ದಿಷ್ಟ ಹೇಳಿಕೆಯನ್ನು ನೀಡುತ್ತಾರೆ. ಅದೇನೆಂದರೆ "ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನು ಒಲಿಸಿಕೊಳ್ಳುವ ಸತ್ಯ ಪ್ರಯತ್ನಗಳ ಫಲವಾಗಿ ಹಬ್ಬಗಳು ಹುಟ್ಟಿದವು. ಪ್ರಾರಂಭದಲ್ಲಿ 'ಯಾತ್ರೆ' ಎಂದು ಪ್ರಸಿದ್ಧಿ ಪಡೆದ ಆಚರಣೆಯು ಬಹುಶಃ ಪುಣ್ಯಕ್ಷೇತ್ರಗಳಲ್ಲಿ ನಡೆಯುತ್ತಿರುವಂತವುಗಳು ಎಂದು ಭಾವಿಸಲಾಗಿತ್ತು. ಪಾಪ ಪರಿಹಾರಾರ್ಥವಾಗಿ ವಿವಿಧ ಪ್ರದೇಶಗಳಿಂದ ಜನರು ಅಂತಹ ಕ್ಷೇತ್ರಗಳಿಗೆ ಬರುತ್ತಿದ್ದರು. ನಂತರ ಕೆಲವು ಹಳ್ಳಿಗಳಲ್ಲಿ ನಿಯತ ಅಥವಾ ಅನಿಯತ ಕಾಲಗಳಲ್ಲಿ ಅದ್ದೂರಿಯಿಂದ ಜರುಗುತ್ತಿದ್ದ ದೊಡ್ಡ ದೊಡ್ಡ ಹಬ್ಬಗಳಲ್ಲಿ ನೆಂಟರಿಷ್ಟರ ಜೊತೆಗೆ ಶ್ರದ್ಧಾವಂತ ಜನರೂ ಬರಲಾರಂಭಿಸಿದರು. ದೇವರು ಪ್ರಭಾವಶಾಲಿಯಿದ್ದರಂತೂ ಜನರ ಗದ್ದಲವೂ ಅಧಿಕವಾಗಿರುತ್ತಿತ್ತು. ಒಂದು ದಿನದ ಹಬ್ಬ ಮೂರು ಅಥವಾ ಅದಕ್ಕಿಂತ ಹೆಚ್ಚು ದಿನಗಳಿಗೆ ಹೆಚ್ಚುತ್ತಾ ಕುಣಿತ, ಬರವಣಿಗೆಗಳು ಸೇರಿಕೊಂಡು ಅತ್ಯಂತ ವೈಭವವಾಗಿ, ಆಕರ್ಷಕವಾಗಿದ್ದು, ಅಂಗಡಿ ಮುಗ್ಗಟ್ಟುಗಳು ಸೇರಿದ್ದು ಇದನ್ನು ನೋಡಿದ ಜನರು ಮಂಕಾಗಿ ಅದು ಜಾತ್ರೆ ಎಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತನ ಜೀವನಾಡಿಯಂತಿರುವ ದನಗಳು ನೆರೆಯುವ ಸಂದರ್ಭ ಬಂದಾಗ ಆ ಪದದ ಅರ್ಥ ತುಂಬಾ ವಿಶಾಲವಾಯಿತು.

ಧಾರ್ಮಿಕ ಸ್ವರೂಪದ ಹಬ್ಬ, ಕಾಲಕ್ರಮೇಣ ಸಾಂಸ್ಕೃತಿಕ ಮಹತ್ವವನ್ನು ಪಡೆದು ವಾಣಿಜ್ಯ ಮುಖವನ್ನು ರೂಢಿಸಿಕೊಂಡು ಜಾತ್ರೆಯಾಯಿತು (ಜಾನಪದ ಅಧ್ಯಯನ: ದೇ.ಜೆ.ಗೌ, ಪು.೩೪೨). ಜಾತ್ರೆಗಳು ವಲಸೆಗಾರರ ಲಕ್ಷಣವೂ ಆಗಿದೆ ಎನ್ನಬಹುದು. ಕಾರಣ ಜಾತ್ರೆಗಳಲ್ಲಿ ಊರಿನ ಜನರೊಂದಿಗೆ ದೂರದೂರಿನ ಜನರೂ ಬಂದು ಪಾಲ್ಗೊಳ್ಳುವುದರಿಂದ ಅದನ್ನು ಹಾಗೆ ಕರೆದಿರಬಹುದು. ಎಸ್.ಎಸ್.ಹಿರೇಮಠರು 'ಜಾತ್ರೆಗಳು ವಲಸೆಗಾರರಾದ ದ್ರಾವಿಡರು, ಜಾತ್ರೆಗಳು ತಾತ್ಕಾಲಿಕತೆ ಸಾಮೂಹಿಕವಾಗಿ ಸೇರುವಿಕೆ, ವಲಸೆಗಾರರ ಸ್ವಭಾವಕ್ಕೆ ಅನುಗುಣವಾಗಿವೆ. ಹಬ್ಬಗಳು ಕಡ್ಡಾಯ ಮತ್ತು ನಿಯಮಿತವಾಗಿರುವಂತೆ ಜಾತ್ರೆಗಳಿಗೆ ಇರುವುದಿಲ್ಲ. ಇದು ವಲಸೆಗಾರರ ಅನಿಶ್ಚಿತ ಬದುಕಿಗೆ ಸಹಜವಾದ ಸ್ಥಿತಿ ಎಂದು ಅಭಿಪ್ರಾಯಪಟ್ಟಿದ್ದಾರೆ(ಜಾತ್ರೆಗಳು:ಎಸ್.ಎಸ್.ಹಿರೇಮಠ, ಪು.೧೫). ಹಬ್ಬ ಮುಖ್ಯವಾಗಿ ಪ್ರತಿ

ಜನಪದರ ಕುಲದೇವತೆಯ ಆರಾಧನೆಯಾಗಿದ್ದು, ಅದು ಕೌಟುಂಬಿಕ ವಲಯಕ್ಕೆ ಸೀಮಿತವಾಗುವಂತಹದು ಎಂದು ಡಾ.ದೇವೇಂದ್ರ ಕುಮಾರ ಹಕಾರಿ ಅವರು ಸ್ಪಷ್ಟಪಡಿಸುತ್ತಾರೆ (ಕರ್ನಾಟಕ ಜಾತ್ರೆಗಳು:ಸಿ.ಎಸ್.ಶಿವಕುಮಾರಸ್ವಾಮಿ, ಪು.೭೯, ಪು.೭೯). ಹೀಗೆ ವಿವಿಧ ವಿದ್ವಾಂಸರು ಜಾತ್ರೆ ಬಗೆಗಿನ ಅಭಿಪ್ರಾಯವನ್ನು ತಮ್ಮದೇ ರೀತಿಯಲ್ಲಿ ಹೇಳುತ್ತಾರೆ.

ಜಾತ್ರೆಗಳು ನಡೆದು ಬಂದ ದಾರಿ

ಜನಪದರು ಸೃಷ್ಟಿಸಿದ ಆಚರಣೆಗಳಲ್ಲಿ, ಸಂಪ್ರದಾಯಗಳಲ್ಲಿ ಜಾತ್ರೆಯು ಒಂದು ಜನಪದರ ಬದುಕಿನ ರೂಪಕ್ಕೆ ನಿರೀಕ್ಷೆಯಾಗಿ ಅವರು ರೂಢಿಸಿಕೊಂಡು ಬಂದಿರುವ ಇಂತಹ ಅನೇಕ ಕ್ರಿಯೆಗಳು ಜೀವಂತವಾಗಿರುವುದೇ ಆಗಿದೆ. ಜಾತ್ರೆಗಳು ಜನಪದರ ಧಾರ್ಮಿಕ, ಆರ್ಥಿಕ, ಸಾಮಾಜಿಕ ಬೆಳವಣಿಗೆಗಳ ಕೇಂದ್ರಬಿಂದು. ಜನಪದರಲ್ಲಿ ಕ್ರಾಂತಿಯನ್ನು ಮೂಡಿಸಿ ಪರಸ್ಪರ ಜನಸಾಮಾನ್ಯರಲ್ಲಿ ಒಗ್ಗಟ್ಟಿನ ಕಲ್ಪನೆಯನ್ನು ಬೆಳೆಸಿಕೊಂಡು ಬರುವಲ್ಲಿ ಪ್ರಮುಖವೆನಿಸುತ್ತದೆ. ಜಾತ್ರೆಗಳ ಸುತ್ತಮುತ್ತ ವಿಸ್ತಾರವಾದ ಜನಜೀವನ ಇರುತ್ತದೆ. ಜಾತ್ರೆಗಳನ್ನು ಜನಪದರು ತಮ್ಮ ಬಿಡುವಿನ ವೇಳೆಯಲ್ಲಿ ಆಚರಿಸುವುದೇ ಹೆಚ್ಚು ಮನೆಗಳಲ್ಲಿ ಮತ್ತು ಊರಲ್ಲಿ ಸುಗ್ಗಿಯ ಕಾಲವನ್ನು ಸಂಪೂರ್ಣವಾಗಿ ಮುಗಿಸಿಕೊಂಡು ವಿಶ್ರಾಂತಿ ಪಡೆಯುವ ಸಂದರ್ಭದಲ್ಲಿ ಮನಸ್ಸಿಗೆ ಮುದ ನೀಡುವ ಆಚರಣೆಗಾಗಿ, ತಮ್ಮ ಬಂಧು–ಬಳಗವನ್ನೆಲ್ಲ ಕರೆಸಿಕೊಂಡು ಊರಿನ ಜನರೆಲ್ಲ ಸೇರಿ ಸಡಗರದಿಂದ ಆಚರಿಸುವ ಒಂದು ವಿಧಾನ. ಹೊಲದಲ್ಲಿರುವ ಬೆಳೆಯೆಲ್ಲ ಅಥವಾ ಫಸಲನ್ನು ಮನೆಗಳಿಗೆ ತಂದುಕೊಂಡು ಆ ವರ್ಷದ ಫಸಲನ್ನು ಸಮೃದ್ಧಿಯಾಗಿ ನೀಡಿದರ ಪ್ರತಿಫಲವಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಲು ದೇವರನ್ನು ಕೊಂಡಾಡಲು ಹರಕೆ ಬರುವಿಕೆಗಳನ್ನು ತೀರಿಸಲು ಜನಪದರೆಲ್ಲ ಕೂಡಿ ಆಚರಿಸುವುದು ರೂಢಿ. ಜಾತ್ರೆ ಎಂದರೆ ಅಲ್ಲಿ ಕ್ರೀಡೆಗಳು, ಆಟಗಳು, ಮನೋರಂಜನೆ, ಹಾಡು, ಕುಣಿತ, ಭಜನೆ ಮುಂತಾದ ಸಾಂಸ್ಕೃತಿಕ ಕಲೆಗಳ ಪ್ರದರ್ಶನಗಳು ಹೇರಳವಾಗಿರುತ್ತವೆ. ಮನೋರಂಜನೆಯ ಕೇಂದ್ರಬಿಂದುವಾಗಿ ಜನಪದರಲ್ಲಿ ಧಾರ್ಮಿಕ ನಂಬಿಕೆಯನ್ನು ಗಟ್ಟಿ ಮಾಡಲು, ಜೀವನಕ್ಕೆ ಬೇಕಾಗುವಂತಹ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಜಾತ್ರೆಗಳು ಜನಪದರಿಂದ ಸಾಕಷ್ಟು ನೆರವಾಗುತ್ತವೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಮಾಜವನ್ನು ತಿದ್ದುವ, ಸಾಮಾಜಿಕ ಕಳಕಳಿಯನ್ನು ಮೂಡಿಸುವ ಕೆಲಸವನ್ನು ಮಾಡುವಲ್ಲಿ ಜಾತ್ರೆಗಳು ಪ್ರಮುಖವಾಗುತ್ತವೆ. ಬಡವ–ಬಲ್ಲಿಗ, ಮಕ್ಕಳು–ಮುದುಕರು, ಹೆಣ್ಣು–ಗಂಡು ಹೀಗೆ ಎಲ್ಲಾ ವಯೋಮಾನದವರು ಸೇರಿ ತಮ್ಮ ನೋವು–ನಲಿವುಗಳನ್ನು ಹಂಚಿಕೊಳ್ಳುವ ಸುಸಂದರ್ಭ ಮುಖ್ಯ ತಾಣವೆಂದರೆ ಜಾತ್ರೆಗಳಾಗಿವೆ. ಜೀವನದ ಅಗತ್ಯತೆಗಳನ್ನು ಪರಿಚಯಿಸುವ ಜಾತ್ರೆಗಳು ಎಲ್ಲಾ ವರ್ಗದವರಿಗೂ ಬದುಕಿನ ಮಾರ್ಗದರ್ಶನವನ್ನು ನೀಡುವಂತಹ ಕೇಂದ್ರಗಳಾಗಿವೆ ಎಂದರೆ ಅತಿಶಯವಾಗುವುದಿಲ್ಲ.

ಜಾತ್ರೆಗಳು ಸಾಮಾನ್ಯವಾಗಿ ವಿಶಾಲವಾದ ಪ್ರದೇಶದಲ್ಲಿ ನಡೆಯುವುದು ಹೆಚ್ಚು. ಕಾರಣ ಅಲ್ಲಿ ಸೇರುವ ಭಕ್ತಾದಿಗಳು, ಜನಪದರ ಅಪಾರ ಸಂಖ್ಯೆಯಲ್ಲಿ ಸೇರುವುದರಿಂದ ಜಾತ್ರೆಗಳು ನಡೆಯುವ ಪ್ರದೇಶದಲ್ಲಿ ಮೂಲಭೂತವಾಗಿ ಜನಪದರಿಗೆ ಬೇಕಾಗುವ ಸೌಲಭ್ಯಗಳಿರಲೇಬೇಕು. ನೀರು, ಗಾಳಿ, ಆಹಾರ ಆ ಪ್ರದೇಶಕ್ಕೆ ಸಂಚಾರ ಮಾರ್ಗವೂ ಸುಲಲಿತವಾಗಿದ್ದು ಬಂದು ಹೋಗುವವರಿಗೆ ಅತ್ಯಂತ ಉಪಯುಕ್ತವಾಗಿರುತ್ತದೆ. ವಾಹನಗಳಲ್ಲಿ, ಬಂಡಿಗಳಲ್ಲಿ ಸಾಮಾನು ಸರಂಜಾಮುಗಳನ್ನು ತರುವವರಿಗೆ, ಅಂಗಡಿ ವ್ಯಾಪಾರಸ್ಥರಿಗೆ ತಮ್ಮ ವಸ್ತುಗಳನ್ನು ಸಾಗಿಸಲು ಸಂಪರ್ಕದ ದಾರಿಯಿದ್ದರೆ ಅಲ್ಲಿ ಎಲ್ಲಾ ರೀತಿಯಿಂದಲೂ ಜಾತ್ರೆಗಳು ಯಶಸ್ವಿಯಾಗಿ ಆಚರಿಸಲಾಗುತ್ತದೆ. ಜಾತ್ರೆಗಳಲ್ಲಿ ಕೇವಲ ನೋಡುಗರು, ಭಕ್ತರು, ವ್ಯಾಪಾರ ಮಾಡುವವರು, ಕೊಂಡುಕೊಳ್ಳುವವರು, ಪರಿಚಯಸ್ಥರನ್ನು ಮಾತನಾಡಿಸುವವರು, ಮಹಿಳೆ-ಮಕ್ಕಳು ಹೀಗೆ ವಿವಿಧ ವರ್ಗದ ಜನರು ಸೇರುತ್ತಾರೆ. ಇಂತಹ ಸ್ಥಳಗಳಲ್ಲಿ ಕೆಲವು ಶುಭ ಕಾರ್ಯಗಳೂ ನಡೆಯುತ್ತವೆ. ಮದುವೆಗೆ ಪರಸ್ಪರ ಗಂಡು-ಹೆಣ್ಣುಗಳ ಭೇಟಿ, ವಧು-ವರಾನ್ವೇಷಣೆಗಳಿಗೂ ಜಾತ್ರೆಗಳು ಸಹಾಯಕವಾಗುತ್ತವೆ. ಅಲ್ಲಿಂದ ಮುಂದೆ ತಮ್ಮ ಮನೆಗಳಲ್ಲಿ ಶುಭ ಕಾರ್ಯಗಳು ನಡೆಯಲು ಸುಲಭವಾಗುವಂತಹ ಸಂದರ್ಭಗಳು ಜನಪದರಿಗೆ ಒದಗಿಸಿಕೊಡುತ್ತವೆ. ಇನ್ನೊಂದೆಡೆ ಯೋಚನೆ ಮಾಡಿದಾಗ ಜಾತ್ರೆಗಳು ಕೇವಲ ಮನೋರಂಜನಾ ತಾಣಗಳಾಗದೆ ಕೆಲವೊಮ್ಮೆ ಹೊಡೆದಾಟ, ಬಡಿದಾಟಗಳಿಗೂ ಕಾರಣವಾಗುತ್ತವೆ. ಇಂತಹ ಅದೆಷ್ಟೋ ಪ್ರಕರಣಗಳು ಇತಿಹಾಸದ ಪುಟಗಳಲ್ಲಿ ಸೇರಿಕೊಂಡಿವೆ.

ಹಿಂದಿನ ಕಾಲದಲ್ಲಿ ಜಾತ್ರೆಗಳೆಂದರೆ ಮುಖ್ಯವಾಗಿ ಧಾರ್ಮಿಕ ವಿಭಿನ್ನಗಳನ್ನು ಕಾಣುವಂತಹ ಅಥವಾ ಧರ್ಮವನ್ನು ಎತ್ತಿ ಹಿಡಿಯುವಂತಹ ಸ್ಥಳಗಳಾಗಿ ಪರಿಚಯವಿದ್ದವು. ವಾಹನ ಸೌಲಭ್ಯಗಳಿಲ್ಲದ ಕಾಲದಲ್ಲಿ ಜನಪದರು ಕೇವಲ ಕಾಲ್ನಡಿಗೆಯಲ್ಲೇ ಜಾತ್ರೆ ನಡೆಯುವ ಸ್ಥಳಕ್ಕೆ ಹೋಗುತ್ತಿದ್ದರು. ಬುದ್ಧಿವಂತರು ಮಾತ್ರ ಎತ್ತಿನ ಬಂಡಿಗಳನ್ನು ಕಟ್ಟಿಕೊಂಡು ತಮ್ಮ ಕುಟುಂಬ ಸಮೇತ ಅವುಗಳಲ್ಲಿ ಪ್ರಯಾಣಿಸುತ್ತಿದ್ದರು. ರಾತ್ರಿ-ಹಗಲೆನ್ನದೆ ಎರಡು-ಮೂರು ದಿನಗಳವರೆಗೆ ಪ್ರಯಾಣ ಮಾಡುತ್ತಿದ್ದರು. ಇನ್ನೂ ಕೆಲವು ಭಕ್ತಾದಿಗಳು ಜಾತ್ರೆಯ ಸಮಯದಲ್ಲಿ ದೇವರಿಗೆ ತಮಗೆ ಬಂದಂತಹ ತೊಂದರೆಗಳನ್ನು ನಿವಾರಿಸಿದರೆ ಕಾಲ್ನಡಿಗೆಯಲ್ಲಿ ಬಂದು ಹರಕೆಯನ್ನು ತೀರಿಸುತ್ತೇವೆ ಎಂದು ಬೇಡಿಕೊಳ್ಳುತ್ತಿದ್ದರು. ಅದರಂತೆ ಚಾಚು ತಪ್ಪದೆ ಅದನ್ನು ಪಾಲಿಸುತ್ತಿದ್ದರು. ಇದರಿಂದ ವೈಚಾರಿಕ ದೃಷ್ಟಿಯಿಂದ ಯೋಚಿಸಿದಾಗ ನಡೆಯುವುದರಿಂದ ದೇಹಸ್ಥಿತಿ ಉತ್ತಮವಾಗುತ್ತಿದ್ದು, ಆರೋಗ್ಯವನ್ನು ಕಾದಿಡುವಲ್ಲಿ ಅದು ಉಪಯುಕ್ತವಾಗುತ್ತದೆ. ಆದರೆ ಜನಪದರಿಗೆ ಅಂತಹ ಆಲೋಚನೆಗಳ ಕೊರತೆಯಿಂದ ಕೇವಲ ಅವರ ಆಲೋಚನೆಯು ದೇವರಿಗೆ ಬೇಡಿಕೆಯನ್ನು ತೀರಿಸಬೇಕು. ತಮ್ಮ ಕಷ್ಟ-ಕಾರ್ಪಣ್ಯಗಳನ್ನು ನಿವಾರಿಸಿದ ದೇವರಿಗೆ

ನಾವು ಮಾಡುವ ಸೇವೆ ಎಂದೇ ಭ್ರಮಿಸುತ್ತಿದ್ದರು. ಅದೇನೆ ಇದ್ದರೂ ಮೂಲವಾಗಿ ಅವರ ಭ್ರಮೆ, ಮೂಢನಂಬಿಕೆ ಎಂದಾದರೂ ಪರೋಕ್ಷವಾಗಿ ಇದರಿಂದ ಅವರ ಆರೋಗ್ಯವೂ ಉತ್ತಮವಾಗುತ್ತಿತ್ತು. ಅದರಿಂದ ಅವರು ಹೆಚ್ಚಿನ ಕಾಲ ಬದುಕಿ–ಬಾಳುತ್ತಿದ್ದರು. ಜನಪದರ ಅಂತಹ ದೀರ್ಘಾವಧಿ ಜೀವನಕ್ಕೆ ದೇವರ ಅನುಗ್ರಹವೇ ಕಾರಣ ಎಂದು ನಂಬಿಕೊಂಡು ಬಂದವರು. ಜೊತೆಗೆ ತಾವೇನಾದರೂ ತಿಳಿದು ಅಥವಾ ತಿಳಿಯದೆ ತಪ್ಪನ್ನು ಮಾಡಿದರೆ ಅದರ ಪ್ರಾಯಶ್ಚಿತ್ತವಾಗಿ ನಡೆಯುವುದು ಇದರಿಂದ ದೇವರು ನಮ್ಮ ತಪ್ಪುಗಳನ್ನು ಮನ್ನಿಸಿ ಮರು ಜೀವನವನ್ನು ಕರುಣಿಸುವನು ಎಂಬ ಇನ್ನೊಂದು ನಂಬಿಕೆಯಾಗಿ ಅಥವಾ ದೃಷ್ಟಿಯೂ ಜನಪದರಲ್ಲಿದೆ. ಜಾತ್ರೆಗಳೆಂದರೆ ಪ್ರಮುಖವಾಗಿ ಧಾರ್ಮಿಕವಾದ ಆಚರಣೆಗಳಾಗಿರುವುದರಿಂದ ಇದರಲ್ಲಿ ಅನೇಕ ಅಂಶಗಳು ಅಡಗಿವೆ. ಸಂಸ್ಕೃತಿ, ಸಂಪ್ರದಾಯ, ಇತಿಹಾಸ, ಪುರಾಣ ಮುಂತಾದ ವಿಷಯಗಳನ್ನು ಒಳಗೊಂಡಂತಹ ಜಾತ್ರೆಗಳು ಜನಪದರಿಗೆ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವಂತಹ ಸಂತೋಷವನ್ನು ನೀಡುವಂತವುಗಳಾಗಿವೆ. ಆಧುನಿಕ ಸಂದರ್ಭದಲ್ಲಿ ಜಾತ್ರೆಗಳು ಜನರಿಗೆ ಪ್ರತಿಷ್ಠೆಯ ಆಚರಣೆಗಳಾಗಿ ರೂಪಾಂತರಗೊಳ್ಳುತ್ತಿವೆ ಎಂದರೆ ತಪ್ಪಾಗಲಾರದು. ಆಧುನಿಕ ಸಮಯದಲ್ಲಿ ಸಾಕಷ್ಟು ಬದಲಾವಣೆಯನ್ನು ಪಡೆಯುತ್ತಿರುವ ಜಾತ್ರೆಗಳು ಹಿಂದಿನ ಕೆಲವು ಸಂಪ್ರದಾಯ, ನಡವಳಿಕೆಗಳನ್ನು ರೂಪಾಂತರಗೊಳಿಸಿಕೊಂಡು ಆಚರಣೆಗೊಳ್ಳುತ್ತಿವೆ.

ಜಾತ್ರೆ ಎಂದರೆ ಮಡಿ–ಮೈಲಿಗೆ ಕೆಲವು ನಿರ್ದಿಷ್ಟ ನಿಯಮಗಳನ್ನು, ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಬರುತ್ತಿದ್ದ ಜನಪದರು ನಿಷ್ಠೆಯಿಂದ ಜಾತ್ರೆಗಳನ್ನು ಆಚರಿಸಿ, ಭಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಯಾವುದೇ ವಿಧಿಯನ್ನ ಹಿಂದಿನವರು ಆಚರಿಸಿಕೊಂಡು ಬಂದಂತೆ ಪ್ರತಿಯೊಂದು ವಿಷಯದಲ್ಲೂ ಅನುಸರಣೆ ಇರುತ್ತಿತ್ತು. ಪದ್ಧತಿಗಳನ್ನು ಬದಲಾಯಿಸಿದರೆ ದೇವರ ಕೋಪಕ್ಕೆ ತುತ್ತಾಗಬೇಕಾಗುತ್ತದೆ. ಇದರಿಂದ ಜೀವನಕ್ಕೆ ಜೀವಕ್ಕೆ ಅನಾಹುತಗಳು ಆಗಬಹುದೆಂಬ ಭಯದ ವಾತಾವರಣದಲ್ಲೇ ಬೆಳೆದು ಬಂದವರು ಜನಪದರು. ಮುಂದೆ ಕಾಲ ಬದಲಾದಂತೆಲ್ಲ, ಜನಪದರ ಪದ್ಧತಿ ರಿವಾಜುಗಳಲ್ಲಿ ಕ್ರಮೇಣ ಸಡಿಲವಾಗಿ ಬದಲಾಗಿ ರೂಪಾಂತರಗೊಂಡ ಆಚರಣೆಗಳು ಜಾರಿಗೆ ಬಂದವು. ಇದು ಇಂದಿನ ಜಾಗತೀಕರಣ, ಆಧುನೀಕರಣದ ಪ್ರಭಾವ ಎಂಬುದು ಮೇಲ್ನೋಟಕ್ಕೆ ತಿಳಿದುಬರುವ ಸಂಗತಿ. ನಂಬಿಕೆಗಳಲ್ಲಿ ಸಾಕಷ್ಟು ಸುಧಾರಣೆ ಹೊಂದುತ್ತಿದ್ದು ಹಳೆಯ ಮೂಢನಂಬಿಕೆಗಳನ್ನು, ಗೊಡ್ಡು ಸಂಪ್ರದಾಯಗಳನ್ನು ಜನರು ಮರೆಯುತ್ತಿದ್ದಾರೆ. ಅದರಂತೆ ದೇವರು ಸಹ ಜನರಿಗೆ ರಿಯಾಯಿತಿ ನೀಡಿ ಅವರು ಆಚರಿಸಿದಂತೆ ಅಥವಾ ಜನಪದರು ಒಪ್ಪಿಕೊಂಡು ಬರುವಂತೆ ಪೂಜಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯವಾಗಿದ್ದು, ಅಸಾಮಾನ್ಯವಾಗಿ, ಕಠಿಣವಾಗಿರುವಂತದ್ದು, ಸರಳವಾಗಿ ರೂಪ–ಸ್ವರೂಪಗಳಲ್ಲಿ ಅದನ್ನು ಗಮನಿಸಬಹುದು. ಇಂದಿನ ರಾಜಕೀಯ, ಆರ್ಥಿಕ, ಸಾಮಾಜಿಕ ಹೊಡೆತಗಳಿಗೆ

ಸಿಲುಕಿ ಜೊತೆಗೆ ಪ್ರಕೃತಿ ವಿಕೋಪಗಳಿಂದ ಜನಪದರಲ್ಲಿ ಅಸಮಧಾನ, ಅಪನಂಬಿಕೆಗಳು ಮೂಡಿ ಇಂತಹ ಕೆಲವು ಆಚರಣೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಜನಪದರಲ್ಲಿಯೂ ಇಂದು ವೈಚಾರಿಕ ಪ್ರಜ್ಞೆ ಮೂಡುತ್ತಿದ್ದು ಇಂತಹ ಬದಲಾವಣೆಗೆ ಕಾರಣವಾಗುತ್ತಿದೆ.

ಹಳ್ಳಿಗಳಲ್ಲಿ ಜಾತ್ರೆಗಳೆಂದರೆ ಪ್ರತಿಷ್ಠೆಯ ಸಂಕೇತವಾಗಿ ಆಚರಣೆಗಳಾಗುತ್ತಿರುವುದನ್ನು ನಾವಿಂದು ಕಾಣಬಹುದು. ಪರಸ್ಪರ ಜನಪದರು ಸಾಮುದಾಯಿಕ ಭಾವನೆಯನ್ನು ಮರೆತು ಪರಸ್ಪರ ದ್ವೇಷ, ಅಸೂಯೆಗಳಿಂದ ಗುಂಪು ಗುಂಪಾಗಿ ಅವರದೇ ರೀತಿ–ನೀತಿಗಳನ್ನು ಜಾರಿ ಮಾಡುವುದರ ಮೂಲಕ ಜಾತ್ರೆಗಳನ್ನು ಆಚರಿಸಲಾಗುತ್ತಿದೆ. ಅದಕ್ಕೆ ಇಂದು ಪ್ರಬಲವಾಗುತ್ತಿರುವ ರಾಜಕೀಯ ಪ್ರಭಾವ ಸಾಕಷ್ಟಿದೆ. ದೇವಸ್ಥಾನಗಳೂ ಸಹ ಶ್ರೀಮಂತವಾಗುತ್ತಿದ್ದು ದೇವಸ್ಥಾನಗಳ ಆಡಳಿತ, ಸಕಲ ವಿದ್ಯಮಾನಗಳೆಲ್ಲವೂ ಜನಪದರೇ ನಿರ್ವಹಿಸುತ್ತಿದ್ದಾರೆ. ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಿಕೊಂಡು ಅದರ ಅನ್ವಯದಂತೆ ಜಾತ್ರೆಗಳು ನಡೆಯುತ್ತಿರುವುದು ಇಂದಿನ ವಿಶೇಷ. ಸಮಾಜದ ಹಿತಾಸಕ್ತಿಗಿಂತ ಇಲ್ಲಿ ಸ್ವ ಹಿತಾಸಕ್ತಿಗಳ ಲಕ್ಷಣಗಳೇ ಹೆಚ್ಚುತ್ತಿದ್ದು ಜಾತ್ರೆಗಳು ತನ್ನ ಮೂಲ ರೂಪವನ್ನು ಬದಲಾಯಿಸಿಕೊಳ್ಳುತ್ತಿವೆ. ವೈಭವ, ವೈಶಿಷ್ಟ್ಯತೆಗಳಲ್ಲಿ ಅಧಿಕವಾದ ಅಂಶಗಳು ಕಾಣುತ್ತಿದ್ದು, ಜನಪದರಲ್ಲಿ ಆತಂಕಕಾರಿ ವಾತಾವರಣ ಸೃಷ್ಟಿ ಮಾಡುತ್ತಿವೆ. ಬೇಸತ್ತ ಜನಪದರು ಜಾತ್ರೆ–ಉತ್ಸವಗಳೆಂದರೆ ದೂರವಾಗಿರಲು ಬಯಸುವಂತಹ ಅನಾರೋಗ್ಯ ಪರಿಸರ ನಿರ್ಮಾಣವಾಗುತ್ತಿದೆ. ಅದಲ್ಲದೆ ಇಂದು ಪ್ರತಿಯೊಂದು ವಿಷಯವೂ ಸರ್ಕಾರದ ಅಥವಾ ಕಾನೂನಿನ ಕ್ರಮದಂತೆಯೇ ನಡೆಯಬೇಕು. ಕಾನೂನನ್ನು ಉಲ್ಲಂಘಿಸಿದರೆ ಶಿಕ್ಷೆಯನ್ನು ಅನುಭವಿಸಬೇಕು. ಜನಪದರಿಗೆ ಸ್ವತಂತ್ರವಾಗಿ ಯಾವುದನ್ನೂ ಮಾಡುವಂತಿಲ್ಲ. ಇದರಿಂದ ಹರಕೆ–ಬೇಡಿಕೆಗಳ ಪ್ರಮಾಣ ಕ್ಷೀಣಿಸುತ್ತಿದ್ದು ಅಂತಹವುಳೆಲ್ಲ ಕೇವಲ ಸ್ಥಿತಿವಂತರಿಂದ ಮಾತ್ರ ಸಾಧ್ಯ. ಯಾಕೆಂದರೆ ಬಡವರು ಬೆಳ್ಳಿ–ಬಂಗಾರ, ಹಣ, ಬೆಲೆಬಾಳುವ ವಸ್ತುಗಳನ್ನು ನೀಡುವ ಸ್ಥಿತಿಯಲ್ಲಿ ಇಲ್ಲದಿರುವುದು ದಿನೇ ದಿನೇ ಭಾರತದ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು ಜನಸಾಮಾನ್ಯರಿಗೆ ಮೂಲಭೂತ ವಸ್ತುಗಳಿಗೆ ಪರದಾಡುವಂತಹ ಸ್ಥಿತಿ ಇಂದು ನಮ್ಮಲ್ಲಿದೆ. ಸಮಾಜದಲ್ಲಿ ಪ್ರತಿಕ್ಷಣವೂ ಅನೇಕ ಆತಂಕಕಾರಿ ಘಟನೆಗಳು ನಡೆಯುತ್ತಲೇ ಇವೆ. ಇವುಗಳ ಉಪಟಳದಿಂದ ಜನಸಾಮಾನ್ಯರು ತಮ್ಮ ಜೀವನವನ್ನೇ ಸುಧಾರಿಸಲು ಕಷ್ಟವಾಗುತ್ತಿರುವಾಗ ದೇವರಿಗೆ ಕಾಣಿಕೆಗಳನ್ನು ಸಲ್ಲಿಸುವುದು ಎಲ್ಲಿಂದ ಸಾಧ್ಯ.

ಬ್ರಿಟಿಷರು ಬಿಟ್ಟು ಹೋದಂತಹ ಒಡೆದು ಆಳುವ ನೀತಿಯನ್ನು ನಮ್ಮವರು ಚಾಚೂ ತಪ್ಪದಂತೆ ಪಾಲಿಸಿಕೊಂಡು ಬರುತ್ತಿದ್ದಾರೆ. ಇದರಿಂದ ಉಳ್ಳವರಿಗೂ ಮತ್ತು ಇಲ್ಲದವರಿಗೂ ಅಜಗಜಾಂತರ ವ್ಯತ್ಯಾಸಗಳಿದ್ದು, ಸಮಾಜದ ಹಿನ್ನಡೆಗೆ ಅದು ಮುಖ್ಯ ಕಾರಣವಾಗುತ್ತಿದೆ. ಸಮಾಜ ಒಪ್ಪಿತ ಕಾರ್ಯಗಳು ಇಂದು ನಡೆಯುವುದೇ ಅಪರೂಪವಾಗಿದೆ. ವ್ಯಕ್ತಿನಿಷ್ಠ

ಕೆಲಸಗಳೇ ಹೆಚ್ಚು. ಇವರು ಜನಪದರ ಪ್ರತಿಯೊಂದು ವಿಷಯಗಳಲ್ಲಿ ಪರಿಣಾಮವನ್ನುಂಟು ಮಾಡುತ್ತಿವೆ. ಇದರಿಂದ ಯಾವುದೇ ಆಚರಣೆಗಳಾದರೂ ಕೇವಲ ಸಾಂದರ್ಭಿಕವೆಂಬಂತೆ ಆಚರಿಸಲಾಗುತ್ತಿರುವುದು ಖೇದವಾದ ಸಂಗತಿ.

ಅದೇನೆ ಇದ್ದರೂ ಜಾತ್ರೆಗಳು ಪರಂಪರೆಯಿಂದಲೂ, ವೈಭವವಾಗಿ ಆಚರಿಸಿಕೊಂಡು ಬರುತ್ತಿವೆ. ರೂಪ-ಸ್ವರೂಪ, ಆಶಯಗಳಲ್ಲಿ ಕೆಲವು ಬದಲಾವಣೆಗಳಾಗುತ್ತಿದ್ದರೂ ಆ ಪರಂಪರೆ ಮಾತ್ರ ಇಂದಿಗೂ ಜಾರಿಯಲ್ಲಿದೆ. ಅದೇ ರೀತಿಯಲ್ಲಿ ಇಂದು ಕೆಲವು ಸೌಲಭ್ಯಗಳು ಜನಪದರ ಕೈಗೆ ಸುಲಭವಾಗಿ ದೊರೆಯುತ್ತಿದ್ದು, ಹಿಂದಿನ ಸಂದರ್ಭದಲ್ಲಿ ಆಗುತ್ತಿದ್ದಂತಹ ಕೆಲವು ತೊಂದರೆಗಳಿಂದ ಮುಕ್ತಿ ಹೊಂದಿದ್ದಾರೆ. ಹೀಗೆ ಜಾತ್ರೆಗಳು ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ತನ್ನದೇ ಆದ ಶ್ರೇಷ್ಠತೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು, ಮುಂದುವರೆಸಿಕೊಂಡು ಬರುತ್ತಿವೆ. ಸಣ್ಣ ಪ್ರಮಾಣದಲ್ಲಿ ಆಚರಿಸಲಾಗುತ್ತಿದ್ದಂತಹ ಜಾತ್ರೆಗಳು ಇಂದು ದೊಡ್ಡ ಪ್ರಮಾಣದಲ್ಲಿ ಆಚರಣೆಯಾಗುತ್ತಿವೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಜನರು ಪ್ರಜ್ಞಾವಂತರಾಗುತ್ತಿದ್ದಾರೆ. ಸಾಮಾಜಿಕವಾಗಿ ಬಲಿಷ್ಠರಾಗುತ್ತಿರುವುದರಿಂದ ಜನಪದರ ಆಚರಣೆಗಳು ಎಂದಿಗೂ ಅವರಿಂದ ಮರೆಯಾಗುವುದಿಲ್ಲ ಎಂಬುದು ತಿಳಿದುಬರುತ್ತದೆ.

ಜಾತ್ರೆಗಳ ಮಹತ್ವ

ಮಾನವನು ಆಚರಿಸಿಕೊಂಡು ಬಂದಿರುವ ಪ್ರತಿಯೊಂದು ಕ್ರಿಯೆಗಳು ವಿಧಿಗಳು ಒಂದಲ್ಲಾ ಒಂದು ರೀತಿಯಲ್ಲಿ ಅವನಿಗೆ ಉಪಯುಕ್ತವಾದಂತವುಗಳೇ ಆಗಿವೆ. ಜೀವನದ ವಿವಿಧ ಸ್ತರಗಳಲ್ಲಿ, ವಿವಿಧ ಸಂದರ್ಭಗಳಲ್ಲಿ ಹಲವು ವಯೋಮಾನದವರಿಗೆ ವಿಶೇಷವಾದ ಜೀವಂತಿಕೆಯನ್ನು ನೀಡುತ್ತಲೇ ಬಂದಿವೆ. ಅವನು ಅವುಗಳ ಮಹತ್ವದಿಂದ ತನ್ನ ಮುಂದಿನ ಜೀವನ ನಿರಾತಂಕವಾಗಿ ಸಾಗಿ ಬಂದಿದ್ದು ಪ್ರತಿಕ್ಷಣವೂ ಅವನ ಏಳ್ಗೆಗೆ ಸಹಕಾರಿಯಾಗಿವೆ. ಹಾಗೆಯೇ ಜಾತ್ರೆಗಳು ಮನುಷ್ಯನಿಗೆ ಬಹು ಉಪಯೋಗಿಯಾದ ಒಂದು ವಿಧಿ. ಸಾಂಘಿಕವಾಗಿ ಮನುಷ್ಯರೆಲ್ಲ ಒಂದಾಗಿ ದುಡಿಯುವ ಈ ವಿಧಿ ಏಕಕಾಲಕ್ಕೆ ಹಲವಾರು ಜನರಿಗೆ ಬದುಕಿನ ಸಾರ್ಥಕತೆಯನ್ನು ನೀಡುವ ಆಚರಣೆ ಎಂದರೆ ಈ ಜಾತ್ರೆಯೇ ಆಗಿದೆ. ತಲೆಮಾರುಗಳಿಂದ ಇಂದಿನ ಪೀಳಿಗೆಯವರೆಗೂ ಆ ಕಾಯಕವನ್ನು ಹಾಗೆ ಮುಂದುವರೆಸಿಕೊಂಡು ಬರುತ್ತವೆ. ಜನಪದರು ಸಹ ಅಷ್ಟೇ ಮುತುವರ್ಜಿಯಿಂದ ಜಾತ್ರೆಯ ಲಾಭವನ್ನು, ಜಾತ್ರೆಯ ಉಪಯುಕ್ತವನ್ನು ಪಡೆಯುತ್ತಲೇ ಬಂದಿದ್ದಾರೆ. ಜನದಪರ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಸಾರ್ಥಕ ವಿಧಿಗಳಿಗೆ ಜಾತ್ರೆಗಳು ಪ್ರೇರಣೆಯಾಗಿವೆ. ಅನೇಕ ಸಾವಿರ ವರ್ಷಗಳ ಇತಿಹಾಸವುಳ್ಳ ಈ ಸಂಸ್ಥೆ ಆಕಸ್ಮಿಕವಾಗಿ ಹುಟ್ಟಲಿಲ್ಲ, ನಿಷ್ಪ್ರಯೋಜಕವಾಗಿ ಉಳಿಯಲಿಲ್ಲ, ಆಕಸ್ಮಿಕವಾಗಿ ಕಣ್ಮರೆಯಾವುದೂ ಇಲ್ಲ(ಕರ್ನಾಟಕ ಜಾತ್ರೆಗಳು: ಸಿ.ಎಸ್.ಶಿವಕುಮಾರಸ್ವಾಮಿ, ಪು.೮೧).

ಹಗಲಿರುಳು ಎನ್ನದೆ ಬಿಸಿಲಲ್ಲಿ ದಣಿದು, ಮಳೆಯಲ್ಲಿ ನೆನೆದು, ಚಳಿಗೆ ನಡುಗುತ್ತಲೇ ತಮ್ಮ ಬೇಸಾಯದ ಕಾರ್ಯಗಳಲ್ಲಿ ನಿರಂತರವಾಗಿ ಬಿಡುವಿಲ್ಲದೆ ದುಡಿಯುವ ಜನಕ್ಕೆ ಆಗಾಗ ಬಿಡುವು ಮಾಡಿಕೊಂಡು ಸಂತೋಷದಿಂದ ನೆಂಟರಿಷ್ಟರೊಡನೆ ಸಾಮೂಹಿಕವಾಗಿ ಕಲೆತು ವಿಶೇಷವಾದ ಊಟ-ಉಪಚಾರಗಳನ್ನು ಸವಿಯುತ್ತಾ ತಮ್ಮ ತಮ್ಮ ಕಷ್ಟ-ಸುಖಗಳನ್ನು ಪರಸ್ಪರರು ಹಂಚಿಕೊಳ್ಳಲು ಮಾಡಿಕೊಂಡ ವ್ಯವಸ್ಥೆಯ ಫಲವಾಗಿಯೇ ಹಬ್ಬ-ಜಾತ್ರೆ-ಉತ್ಸವ ಎಂಬ ಬದುಕಿನ ಅವಿಭಾಜ್ಯ ಅಂಗವಾಗಿರುವುದರಿಂದ ಸಮಾಜದ ಎಲ್ಲರ ಒಳಿತನ್ನು ಬಯಸುವುದೆ ಇವುಗಳ ಮುಖ್ಯ ಉದ್ದೇಶವಾಯಿತು (ಮಧುಗಿರಿಯ ದಂಡಿನ ಮಾರಮ್ಮ:ಎಂ.ಎಲ್.ನರಸಿಂಗಮೂರ್ತಿ, ಪು.2). ಹೀಗೆ ಜಾತ್ರೆಗಳು ವಿವಿಧ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಲೇ ಬಂದಿವೆ.

ಧಾರ್ಮಿಕ ಕೇಂದ್ರಗಳಾಗಿ ಪ್ರಸಿದ್ಧಿ ಪಡೆದಿರುವ ಜಾತ್ರೆಗಳು ಮನುಕುಲದ ಧರ್ಮವನ್ನು ಎತ್ತಿ ಹಿಡಿಯುವಲ್ಲಿ ಸಾಕಷ್ಟು ಮಹತ್ವವಾಗಿವೆ. ಅನೇಕ ಧರ್ಮೀಯರು ಜಾತ್ರೆಗಳಲ್ಲಿ ಸೇರುತ್ತಿದ್ದು ಪರಸ್ಪರ ಧಾರ್ಮಿಕ ಸಹಿಷ್ಣುತೆಯ ವಾತಾವರಣವನ್ನು ಜಾತ್ರೆಗಳಲ್ಲಿ ಕಾಣಬಹುದು. ಕಾರಣ ಹಳ್ಳಿಗಳಲ್ಲಿರುವ ವಾತಾವರಣವೇ ಅಲ್ಲಿ ನೋಡಬಹುದು. ಜನಪದರು ತಮ್ಮಲ್ಲಿಯೇ ತಾವೇ ಹೆಣೆದುಕೊಂಡಿರುವ ಸಾಮುದಾಯಿಕ ಬಾಂಧವ್ಯಗಳು ಅಪ್ಪ, ಅಮ್ಮ, ಅಣ್ಣ, ತಮ್ಮ, ಅಕ್ಕ ಮಾವ, ದೊಡ್ಡಪ್ಪ, ದೊಡ್ಡಮ್ಮ, ಚಿಕ್ಕಪ್ಪ, ಚಿಕ್ಕಮ್ಮ, ಬೀಗ-ಬೀಗತಿ ಹೀಗೆ ತಾವು ವಾಸಿಸುವ ಹಳ್ಳಿಗಳಲ್ಲಿ ಪರಸ್ಪರ ಅವರವರಲ್ಲೇ ತಮ್ಮ ನಡುವಿನ ಬಾಂಧವ್ಯ ಗಟ್ಟಿಯಾಗಲು ಕೂಡಿ ಬದುಕಲು ಏರ್ಪಡಿಸಿಕೊಂಡಿರುವ ಈ ಬಂಧನಗಳು ಜಾತಿ, ಧರ್ಮ, ಮತಗಳನ್ನು ಮೀರಿ ನಿಂತಿವೆ. ಹುಟ್ಟು-ಸಾವಿನ ಸಂದರ್ಭಗಳಲ್ಲಿ ಎಲ್ಲರೂ ಒಗ್ಗಟ್ಟಾಗಿಯೇ ವಿಧಿ-ವಿಧಾನಗಳನ್ನು ಮಾಡುತ್ತಾರೆ. ಮದುವೆ-ಮುಂಜಿ, ಹಬ್ಬ-ಹರಿದಿನ, ಜಾತ್ರೆಗಳು ಹೀಗೆ ಜೀವಿತಾವಧಿಯಲ್ಲಿ ಬರುವಂತಹ ಎಲ್ಲ ಆಚರಣೆಗಳಲ್ಲಿ ಎಲ್ಲರೂ ಒಗ್ಗಟ್ಟಾಗಿಯೇ ಸ್ವೀಕರಿಸಿ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಹಾಗೆಯೇ ಜಾತ್ರೆಗಳಲ್ಲಿ ಸಾಮಾನ್ಯ ದಿನಕ್ಕಿಂತ ಹೆಚ್ಚಿನದಾಗಿಯೇ ಅಂತಹ ಪರಿಸರವನ್ನು ನೋಡಬಹುದು. ಜೊತೆಗೆ ದೂರದ ಊರುಗಳಿಂದ ಬಂದು ಸೇರಿದಂತಹ ಹಲವರು ಬಂಧುಗಳೊಡನೆ ಜನಪದರ ಕಳೆಯುವ ಕ್ಷಣ ಅವರ ಜೀವನದುದ್ದಕ್ಕೂ ಮರೆಯಲಾಗದಂತವುಗಳು. ಒಮ್ಮೊಮ್ಮೆ ಶುಭ ನೆನಪುಗಳು, ಮತ್ತೆ ಕೆಲವು ಸಂದರ್ಭಗಳಲ್ಲಿ ಕಹಿ ನೆನಪುಗಳು ಹೀಗೆ ಸಿಹಿ-ಕಹಿ ನೆನಪುಗಳ ಬುತ್ತಿಯನ್ನು ಬದುಕಿನ ಕೊನೆಯವರೆಗೂ ಅವು ಮನುಷ್ಯನಿಗೆ ಮುದವನ್ನು ನೀಡುವಂತವುಗಳು. ಜಾತ್ರೆಗಳು ನಮ್ಮ ಸಾಮಾಜಿಕ ಪರಂಪರೆಯನ್ನು ಪ್ರತಿನಿಧಿಸುವ ಬಹುತೇಕ ಅಂಶಗಳನ್ನು ಮೈಗೂಡಿಸಿಕೊಂಡು ಬಂದಿವೆ. ಜಾತ್ರೆಯ ರೂಪದಲ್ಲಿ ನಡೆಯುವ ಸಂಕೀರ್ಣ ಸ್ವರೂಪದ ಚಟುವಟಿಕೆಗಳು ಸಾಮಾಜಿಕವಾಗಿ ನಡೆಯುವಂತವುಗಳು. ವಿಶಿಷ್ಟವಾಗಿ

ಗೊತ್ತಾದ ಸ್ಥಳದಲ್ಲಿ ಮೊತ್ತದ ದಿನದಂದು ಜನರೆಲ್ಲ ಸೇರಿ ದೈವವನ್ನು ಆರಾಧಿಸುವ ವ್ಯವಸ್ಥೆಯನ್ನು ಜಾತ್ರೆ ಎಂದು ಕರೆಯುವುದು ರೂಢಿಯಲ್ಲಿದೆ. ಜೊತೆಗೆ ಈ ದೈವವು ನಮ್ಮನ್ನು ಸದಾ ಕಾಲವೂ ಕಾಪಾಡುತ್ತಾ ತೊಂದರೆಗಳನ್ನು ನಿವಾರಿಸುತ್ತದೆ ಎಂಬುದನ್ನು ಈ ಜಾತ್ರೆಗಳ ಮೂಲಕ ಜನಪದರು ಅದನ್ನು ಕಾಣುತ್ತಾರೆ.

ಜನಪದರಿಗೆ ಕಾಡಿಸುವ ಅನಾರೋಗ್ಯ, ಕಷ್ಟ-ಕಾರ್ಪಣ್ಯ, ಕೌಟುಂಬಿಕ ಸಮಸ್ಯೆಗಳು, ಸಾಮಾಜಿಕ ತೊಂದರೆಗಳಿಂದ ಮುಕ್ತಿ ಹೊಂದಲು ಜನಪದರು ಹರಕೆ-ಮುಡುಪುಗಳನ್ನು ಕಟ್ಟಿಕೊಂಡು ವರ್ಷಾಂತ್ಯದಲ್ಲಿ ನಡೆಯುವ ಅಥವಾ ತಮ್ಮ ಆರಾಧ್ಯ ದೈವದ ಜಾತ್ರೆ ನಡೆಯುವ ಸಂದರ್ಭಗಳಲ್ಲಿ ಬೆಳೆಯೆಲ್ಲಾ ನಾಶವಾಗುವಂತಹ ಸಂದರ್ಭ ಬಂದಾಗ ಹರಕೆ ಹೊತ್ತರೆ ದೇವರು ರೈತರ ಫಸಲನ್ನ ಕಾಪಾಡುತ್ತದೆ. ಇದರಿಂದ ದೇವರಿಗೆ ಬಂದಂತಹ ಫಸಲಿಂದ ಇಂತಿಷ್ಟು ಎಂದು ಹರಕೆಯ ರೂಪದಲ್ಲಿ ನೀಡುವುದು. ಹಾಗೆಯೇ ಊರಿಗೆ ಊರೇ ಕ್ಷಾಮ, ಬರಗಾಲಗಳಿಂದ ಹಾಗೂ ದನ-ಕರುಗಳಿಗೆ ಖಾಯಿಲೆ ಬಂದರೆ ಅದರಿಂದ ಪಾರಾಗಲು ಜನಪದರು ದೇವರಲ್ಲಿ ಮೊರೆ ಹೋಗಿ ಬೇಡಿಕೊಂಡಾಗ ದೇವರು ಅಂತಹ ಕಷ್ಟಗಳನ್ನು ಪರಿಹಾರ ಮಾಡುತ್ತಾನೆ. ಇದರಿಂದ ಉತ್ಸಾಹಗೊಂಡ ಜನಪದರು ಜಾತ್ರೆಗಳನ್ನು ಮತ್ತಷ್ಟು ವಿಜೃಂಭಣೆಯಿಂದ ಎಲ್ಲರೂ ಒಂದಾಗಿ ವೈಭವದಿಂದ ಆಚರಿಸುತ್ತಾರೆ. ಮತ್ತಿನ್ನು ದೇವರಲ್ಲಿ ಜನಪದರು ಸಂತಾನ ಭಾಗ್ಯ, ವಿವಾಹ ಭಾಗ್ಯ, ಮತ್ತಿತರ ಬೇಡಿಕೆಗಳನ್ನು ಬೇಡಿಕೊಳ್ಳುವುದು ಸಹ ರೂಢಿಯಲ್ಲಿದೆ. ತಮ್ಮ ಬೇಡಿಕೆ ಈಡೇರಿದರೆ ಅದರ ನೆಪಕ್ಕಾಗಿ ಜನಪದರು ದೇವರಿಗೆ ಹಣ್ಣು, ಕಾಯಿ, ಪೂಜೆ, ಅಭಿಷೇಕ, ಉರುಳಿನ ಸೇವೆ, ಮಡಿಸೇವೆ ಇಂತಹ ಹಲವು ಸೇವೆಗಳನ್ನು ಮಾಡುವುದರ ಮೂಲಕ ತಮ್ಮ ಹರಕೆಯನ್ನು ತೀರಿಸುತ್ತಾರೆ. ಇದು ಇಂದಿಗೂ ಜನಪದರಲ್ಲಿ ಜೀವಂತವಾಗಿದೆ. ಇಂತಹ ಮಾನವನ ನಂಬಿಕೆಗಳು ಎಲ್ಲಿಯವರೆಗೆ ಜೀವಂತವಾಗಿರುತ್ತವೆಯೋ ಅಲ್ಲಿಯವರೆಗೂ ಈ ರೀತಿಯ ಹರಕೆ ಬೇಡಿಕೆಗಳು ಮರು ಹುಟ್ಟನ್ನು ಪಡೆಯುತ್ತಲೇ ಇರುತ್ತವೆ. ಜನರಿಗೆ ಬದುಕಿನ ಬಗ್ಗೆ ಬದ್ಧ ವ್ಯವಸ್ಥೆ ನಿರ್ಮಾಣವಾಗಲು ಈ ಜಾತ್ರೆಗಳು ಹೀಗೆ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಇದು ಸಹ ಜಾತ್ರೆಗಳ ವೈಶಿಷ್ಟ್ಯವೇ ಸರಿ.

ಜಾತ್ರೆಗಳಲ್ಲಿ ಗಮನಿಸಬಹುದಾದ ಮತ್ತೊಂದು ಅಂಶವೆಂದರೆ ಕ್ರೀಡೆಗಳು. ಜಾತ್ರೆ ಎಂಬುದು ಊರಿನ ಒಗ್ಗಟ್ಟಿನ ಸಾಂಕೇತವಾಗಿದ್ದು, ಊರಿನ ಜನರಿಗೆ ಅಥವಾ ಜಾತ್ರೆಗೆ ಬಂದಂತಹ ಜನರಿಗೆ ಮತ್ತಷ್ಟು ಪ್ರೇರಣೆಯಾಗಿ ಕ್ರೀಡೆಗಳು ಅಲ್ಲಿ ವಿಜೃಂಭಿಸುತ್ತವೆ. ಕ್ರೀಡೆ ಎಂದರೆ ಮುಖ್ಯವಾಗಿ ಜಾತ್ರೆಗಳಲ್ಲಿ ಕುಸ್ತಿ ಪಂದ್ಯ, ಭಾರ ಎತ್ತುವ ಪಂದ್ಯಗಳೇ ಹೆಚ್ಚು. ಹತ್ತೂರ ಜನರ ಮಧ್ಯದಲ್ಲಿ ತನ್ನ ಶಕ್ತಿ-ಸಾಮರ್ಥ್ಯವನ್ನು ತೋರಿಸಿದಾಗ ವ್ಯಕ್ತಿಗೆ ಸಿಗುವ

ಗೌರವ ಆಧಾರಗಳೇ ಬೇರೆ. ಎಲ್ಲಿ ಹೋದರೂ ಅಂತಹ ವ್ಯಕ್ತಿಯನ್ನು ಗುರುತಿಸಲಾಗುತ್ತದೆ. ಅದಕ್ಕಾಗಿ ಅನೇಕ ಜಗಜಟ್ಟಿಗಳು, ಪೈಲ್ವಾನರು ಜಾತ್ರೆಗಳಲ್ಲಿ ತಮ್ಮ ಶಕ್ತಿ ಪ್ರದರ್ಶನ ತೋರಿಸುವುದುಂಟು. ಊರಿನವರೆಲ್ಲ ಸೇರಿ ಅಥವಾ ದೇವಸ್ಥಾನದ ಅಭಿವೃದ್ಧಿ ಮಂಡಳಿ ಅಥವಾ ಊರಿನ ಮುಖ್ಯಸ್ಥರು ಜಾತ್ರೆಗಳಲ್ಲಿ ಬಂದು ತಮ್ಮ ಶಕ್ತಿಯನ್ನು ಪ್ರದರ್ಶಿಸಿದ ಪೈಲ್ವಾನರಿಗೆ, ಶಕ್ತಿವಂತರಿಗೆ ವಿಶೇಷ ಬಹುಮಾನ, ಉಚಿತ ಗೌರವ, ಸನ್ಮಾನ, ಬಿರುದುಗಳನ್ನು ನೀಡುವುದರ ಮೂಲಕ ಸಮಾಜದಲ್ಲಿ ಜಾತ್ರೆಗಳಿಗೊಂದು ಮಹತ್ವ ಬರಲಿಕ್ಕೆ ಇಂತಹ ಅಂಶಗಳಿಗೂ ಕಾರಣವಾಗುತ್ತವೆ. ಜಾತ್ರೆ ನಡೆಯುವ ಊರಿನವರೇ ಗೆದ್ದರೆ ಅದಕ್ಕೆ ಇನ್ನಷ್ಟು ಮಹತ್ವ ಬರುತ್ತದೆ. ಅದಕ್ಕಾರಿ ಊರಿನ ಜನರು, ಮುಖ್ಯಸ್ಥರು ಸೇರಿ ಸೂಕ್ಷ್ಮ ವ್ಯಕ್ತಿಗಳನ್ನು ಆಯ್ಕೆ ಮಾಡಿ ಕಣಕ್ಕಿಳಿಸುತ್ತಾರೆ.

ಜಾತ್ರೆಗೆ ಬಂದಂತಹ ಜನರೆಲ್ಲರೂ ಶಕ್ತಿ ಪ್ರದರ್ಶನ ಮಾಡುವಂತಹ ವ್ಯಕ್ತಿಗಳನ್ನು ಪ್ರೋತ್ಸಾಹಿಸಿ, ಹುರಿದುಂಬಿಸುತ್ತಾರೆ. ಇದರಿಂದ ಪ್ರೇರಣೆಗೊಂಡ ಶಕ್ತಿ ಪ್ರದರ್ಶನಕಾರರು ಅಥವಾ ಕುಸ್ತಿ ಆಡುವ ಪೈಲ್ವಾನರು ತಾವು ಗೆಲ್ಲಬೇಕು, ತಾವು ಗೆಲ್ಲಲೇಬೇಕೆಂದು ಸಾಕಷ್ಟು ಸೆಣಸಾಡುತ್ತಾರೆ. ಅಲ್ಲಿ ಯಾವುದೇ ಜಾತಿ, ಮತ, ಧರ್ಮಗಳು ಅಡ್ಡ ಬರುವುದಿಲ್ಲ. ಕಾರಣ ಅದೊಂದು ಸಾಂಘಿಕವಾದ ಕ್ರಿಯೆ ಆಗಿರುವುದರಿಂದ ಇಡಿಯಾಗಿ ಆ ಊರಿನ ಗೌರವ ಮರ್ಯಾದೆಗಳಲ್ಲಿ ಅಂತಹ ಚಟುವಟಿಕೆಗಳ ಮೇಲೆ ಆಧಾರವಾಗಿರುತ್ತವೆ. ಇದರಿಂದ ಜಾತ್ರೆ ನಡೆಸುವ ಊರಿನವರು ನಮ್ಮೂರಿನವರೇ ಗೆಲ್ಲಬೇಕು, ಜಯ ನಮ್ಮದೇ ಆಗಬೇಕೆಂಬ ಕಾರಣಕ್ಕಾಗಿ ಜಾತ್ರೆ ನಡೆಯುವ ಸಂದರ್ಭಕ್ಕೆ ಸಾಕಷ್ಟು ತರಬೇತಿ ಮಾಡಿದ, ತಾಲೀಮು ನಡೆಸಿದ ಸೂಕ್ಷ್ಮ ವ್ಯಕ್ತಿಗಳನ್ನೇ ಕಣಕ್ಕೆ ಬಿಡುತ್ತಾರೆ. ಹಾಗೆಯೇ ಪ್ರತಿ ಊರಿಗೊಂದು ಗರಡೀ ಮನೆ ಇರುತ್ತಿದ್ದು ಅಲ್ಲಿ ತರಬೇತು ಮಾಡುವ, ತಾಲೀಕು ನಡೆಸುವ ಜಟ್ಟಿಗಳಿಗೆ ಊರಿನವರೆಲ್ಲ ಸೇರಿ ಉಚಿತವಾಗಿ ಅವರ ಬೇಕು ಬೇಡ ಎಲ್ಲರೂ ಸೇರಿಯೋ ಅಥವಾ ವಂತಿಗೆ ಹಾಕಿಯೋ ಜಟ್ಟಿಗಳಿಗೆ ಅಗತ್ಯತೆಗಳನ್ನು ಪೂರೈಸುತ್ತಿರುತ್ತಾರೆ. ಗರಡಿ ಮನೆಯಲ್ಲಿ ತಾಲೀಮುಗೊಂಡಂತಹ ಜಟ್ಟಿಗಳ ಮೇಲೆ ಇಡೀ ಆಲೂರಿನ ಮರ್ಯಾದೆ ನಿಂತಿರುತ್ತದೆ. ಇದರಿಂದ ಜಟ್ಟಿಗಳು ಸಹ ಸಾಕಷ್ಟು ಶ್ರಮ ವಹಿಸಿ ತಾಲೀಮು ನಡೆಸುತ್ತಿರುತ್ತಾರೆ. ಜಾತ್ರೆಯಂದು ತಮ್ಮ ಶಕ್ತಿಯನ್ನು ಪ್ರದರ್ಶಿಸುತ್ತಾರೆ. ಇದರಿಂದ ಜಾತ್ರೆಗಳು ಮತ್ತಷ್ಟು ಪ್ರಖ್ಯಾತಿಯನ್ನು ಪಡೆಯುತ್ತವೆ. ಕೆಲವು ಜಾತ್ರೆಗಳು ಇಂತಹ ಆಟಗಳಿಗಾಗಿಯೇ ಪ್ರಸಿದ್ಧಿಯನ್ನು ಪಡೆದಿದೆ.

ಜಾತ್ರೆಗಳ ಮಹತ್ವವನ್ನು ಹೇಳುವಂತಹ ಅಥವಾ ತಿಳಿಸುವಂತಹ ಮತ್ತೊಂದು ಅಂಶವೆಂದರೆ ಕಲೆ, ಸಾಹಿತ್ಯಗಳು ಜಾತ್ರೆಗಳಲ್ಲಿ ಜನಪದರು ಕಲಿತು ಬೆಳೆಸಿಕೊಂಡು ಬಂದಿರುವಂತಹ ಅದೆಷ್ಟೋ ಕಲೆಗಳು ಇಂತಹ ಸಂದರ್ಭಗಳಲ್ಲಿ ಜೀವವನ್ನ ಪಡೆದು

ಪ್ರದರ್ಶನವಾಗುತ್ತವೆ. ಭಜನೆ ಹಾಡು, ಕುಣಿತ, ಕೋಲಾಟ, ಡೊಳ್ಳುಕುಣಿತ, ಗೊರವರ ಕುಣಿತ, ನಂದಿ ಕುಣಿತ, ಹಗಲು ವೇಷಗಾರರು, ಗೊಂಬೆ ಕುಣಿತ ಮುಂತಾದ ಕಲಾ ಪ್ರದರ್ಶನಗಳಿಂದ ಜಾತ್ರೆಗಳು ಮತ್ತಷ್ಟು ವೈಭವೀಕರಣಗೊಳ್ಳುತ್ತವೆ. ಉತ್ಸವಮೂರ್ತಿಯ ಎದುರು ಜನಪದರು ತಮ್ಮ ಕಲೆಯನ್ನು ಮೆರೆಸುವುದು, ಇದರಿಂದ ಕಲೆಗಳಿಗೆ ಪ್ರೋತ್ಸಾಹವೂ ದೊರೆತಂತಾಯಿತು. ಹಾಗೆಯೇ ಪ್ರದರ್ಶನಕಾರರು ಅಥವಾ ಕಲಾಕಾರರು ದೇವರಿಗೋಸ್ಕರ ತಾವು ಮಾಡುವ ಅಲ್ಪಸೇವೆ ಎಂದು ತಮ್ಮ ಮನಸ್ಪೂರ್ತಿಯಾಗಿ ತಾವು ಕಲಿತಂತಹ ಕಲೆಗಳನ್ನು ಅಲ್ಲಿ ಅಂದರೆ ಜಾತ್ರೆಗಳಲ್ಲಿ ಪ್ರದರ್ಶಿಸುತ್ತಾರೆ. ಮೈದುಂಬಿದಂತೆ ಕಲೆಯಲ್ಲಿ ಮಗ್ನರಾಗಿ ನೋಡುಗರಿಗೆ ಆಶ್ಚರ್ಯ, ಸಂಭ್ರಮವನ್ನು ಉಂಟಾಗುವ ರೀತಿಯಲ್ಲಿ ಕಲಾ ಪ್ರದರ್ಶನಗಳು ಜಾತ್ರೆಗಳಲ್ಲಿರುತ್ತವೆ. ಒಂದೊಂದು ಊರಿನವರು ಒಂದೊಂದು ಕಲೆಯಲ್ಲಿ ಪರಿಣತಿ ಹೊಂದಿರುತ್ತಾರೆ. ಹಾಗೆಯೇ ಕೆಲವು ಸಮುದಾಯಗಳು ತಾವೇ ರೂಪಿಸಿಕೊಂಡು ಬಂದಂತಹ ಕಲೆಗಳನ್ನು ಜಾತ್ರಾ ಸಂದರ್ಭಗಳಲ್ಲಿ ಪ್ರದರ್ಶಿಸುವುದು ಆ ಸಮುದಾಯದ ಶ್ರೇಷ್ಠತೆಯನ್ನು ಗುರುತಿಸಿಕೊಂಡಂತಾಗುತ್ತದೆ. ಡೊಳ್ಳು ಕುಣಿತ, ಗೊರವ ಕುಣಿತ ಇಂತಹ ಕೆಲವು ಕಲೆಗಳು ಸೀಮಿತ ಸಮುದಾಯದವರು ಮಾತ್ರ ಕಲಿಸಿದ್ದು ಆ ಕಲೆ ಆ ಸಮುದಾಯದವರಿಗಷ್ಟೇ ಮಿಸಲು, ಬೇರೆಯವರು ಕಲಿತು ಪ್ರದರ್ಶಿಸಿದರೆ ಅಷ್ಟೊಂದು ಮಾನ್ಯತೆ ಬರುವುದಿಲ್ಲ. ದೇವರ ಪೂಜೆಯನ್ನು ಪೂಜಾರಿ ಮಾಡಿದರೆ ಮಾತ್ರ ಅದಕ್ಕೊಂದು ಮಾನ್ಯತೆ ಕ್ರಮವಾಗಿರುತ್ತದೆ. ಬೇರೆಯವರು ಮಾಡಿದರೆ ಅದಕ್ಕೆ ಅಷ್ಟೊಂದು ಪ್ರಾಮುಖ್ಯತೆ ಇರುವುದಿಲ್ಲ. ಹಾಗೆಯೇ ಕೆಲವೇ ಕೆಲವು ಕಲೆಗಳು ಆಯಾ ವರ್ಗಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಇಂತಹ ಅದೆಷ್ಟೋ ಕಲೆಗಳು ಜಾತ್ರೆಗಳಲ್ಲಿ ಪ್ರದರ್ಶನವಾಗುತ್ತಿದ್ದು ಇಂತಹ ಕಲೆಗಳಿಂದ ಜಾತ್ರೆಗಳಿಗೂ ಮಾನ್ಯತೆ, ಪ್ರಖ್ಯಾತಿಗಳು ದೊರೆಯುತ್ತದೆ.

ಮತ್ತೊಂದು ಗಮನಾರ್ಹ ಸಂಗತಿ ಕರಕುಶಲಗಾರರು ತಾವು ವಿಶೇಷ ಕಾಳಜಿಯಿಂದ ತಯಾರಿಸಿದ ವಸ್ತುಗಳನ್ನು ಜಾತ್ರೆಗಳಲ್ಲಿ ತಂದು ಮಾರಾಟ ಮಾಡುವುದು. ದೇವರ ಮೂರ್ತಿಗಳು, ಆಭರಣಗಳು, ಅಲಂಕಾರಿಕ ವಸ್ತುಗಳು, ಹೆಣ್ಣುಮಕ್ಕಳ ವಸ್ತುಗಳು, ದನ–ಕರುಗಳಿಗೆ ಉಪಯೋಗಿಸುವ ವಸ್ತುಗಳು, ರೈತರು ಬಳಸುವಂತಹ ಉಪಕರಣಗಳು, ಗೃಹೋಪಯೋಗಿ ಉಪಕರಣಗಳು, ಮಕ್ಕಳ ಆಟದ ವಸ್ತುಗಳು, ಸಿದ್ಧ ಉಡುಪು ತಯಾರಕರು, ವೃತ್ತಿ ಕಲೆಗಾರರು ಅಂದರೆ ಕಮ್ಮಾರ, ಅಕ್ಕಸಾಲಿಗ, ಕುಂಬಾರ, ಬುಟ್ಟಿ ಹೆಣೆಯುವವರು, ಮತ್ತಿತರ ಸಣ್ಣ–ಪುಟ್ಟ ಕೌಶಲ್ಯದವರು ತಾವು ಸಿದ್ಧಪಡಿಸಿದಂತಹ ವಸ್ತುಗಳನ್ನು ಜಾತ್ರೆಗಳಲ್ಲಿ ತಂದು ಪ್ರದರ್ಶನ ಮತ್ತು ಮಾರಾಟ ಮಾಡುವುದರಿಂದ ಅವರ ಜೀವನದ ಯತಾರ್ಥಕ್ಕೂ ಹಾಗೂ ಜಾತ್ರೆಗಳ ವೈಭವತೆಗೆ ಅಂತಹ ಅಂಶಗಳೂ ಸಹ ಸಾಕಷ್ಟು ಪ್ರಾಮುಖ್ಯತೆ ಪಡೆಯುತ್ತವೆ.

ದನಗಳ ಜಾತ್ರೆಗಳಲ್ಲಿ ದನ-ಕರುಗಳನ್ನು ಕೊಂಡೊಯ್ಯಲು ಹೇಗೆ ಜನರು ದೂರ ದೂರದಿಂದ ಬರುತ್ತಾರೆಯೋ ಅದೇ ರೀತಿ ಆ ಜಾತ್ರೆಗಳು ದನಗಳ ಜಾತ್ರೆ ಎಂದೇ ಪ್ರಸಿದ್ಧಿ ಪಡೆದಿರುತ್ತವೆ. ಅದೇ ರೀತಿಯಲ್ಲಿ ಕೆಲವು ಜಾತ್ರೆಗಳು ಕರಕುಶಲ ವಸ್ತುಗಳಿಗಾಗಿಯೇ ಪ್ರಸಿದ್ಧಿಯನ್ನು ಪಡೆದಿರುತ್ತವೆ. ಅಲ್ಲಿ ವಿವಿಧ ಬಗೆಯ ಜಾತಿಯ, ವಿಧ ವಿಧ ರೂಪದ, ಬಣ್ಣದ, ವೈಶಿಷ್ಟ್ಯತೆಗಳಿಂದ ಕೂಡಿದ ಅನೇಕ ವಸ್ತುಗಳು ದೊರೆಯುತ್ತಿದ್ದು, ಅದಕ್ಕೆಂದೇ ಜನಪದರು ಸಮಯ ಕಾದು ಜಾತ್ರೆಗಳಿಗೆ ಬಂದು ತಮಗೆ ಬೇಕೆನಿಸಿದಂತಹ ವಸ್ತುಗಳನ್ನು ಪಡೆಯುವುದನ್ನು ಕಾಣಬಹುದು. ಕರ್ನಾಟಕದಲ್ಲಿ ಹೀಗೆ ಗುರುತಿಸಿಕೊಳ್ಳಬಹುದಾದಂತಹ ಜಾತ್ರೆಗಳು ಸಾಕಷ್ಟಿವೆ.

ಜಾತ್ರೆಗಳು ಧಾರ್ಮಿಕತೆಯಲ್ಲಿ ಎಷ್ಟು ಮಹತ್ವವಾಗಿವೆಯೋ ಅಷ್ಟೇ ಮಹತ್ವವನ್ನು ಆರ್ಥಿಕ ಸ್ಥಿತಿಗತಿಗೂ ದೊರೆಯಲೇಬೇಕು. ಪ್ರಾಚೀನ ಕಾಲದಿಂದಲೂ ಜಾತ್ರೆಗಳು ವ್ಯಾಪಾರ-ವಾಣಿಜ್ಯ, ವ್ಯವಹಾರಗಳಿಗೆ ಪ್ರಸಿದ್ಧಿಯನ್ನು ಪಡೆದಿರುವಂತವುಗಳು. ಅಂತೆಯೇ ಪ್ರಾಚೀನ ಕಾಲದಲ್ಲಿ ಗ್ರೀಸ್ ದೇಶದಲ್ಲಿ ಗಾಜಿನ ಸರಕುಗಳು ಅಥವಾ ವಸ್ತುಗಳು, ಮಸಾಲೆ ದಿನಿಸು, ಶಸ್ತ್ರಾಸ್ತ್ರಗಳು ಸಹ ದೊರೆಯುತ್ತಿದ್ದವಂತೆ. ಉತ್ಕೃಷ್ಟವಾದ, ದೀರ್ಘಕಾಲ ಬಾಳಿಕೆ ಬರುವಂತಹ ವಸ್ತುಗಳೇ ಅಲ್ಲಿ ದೊರೆಯುತ್ತಿದ್ದು, ವಿಶ್ವವಿಖ್ಯಾತ ಒಲಂಪಿಕ್ ಕ್ರೀಡೆಗಳಿಗೆ ನಾಂದಿ ಹಾಡಿದ್ದು, ಇಂತಹ ಜಾತ್ರೆಗಳೇ ಎಂಬುದು ಇತಿಹಾಸ ನಮಗೆ ಸ್ಪಷ್ಟಪಡಿಸುತ್ತದೆ. ಹಾಗೆಯೇ ಪುರೋಹಿತಶಾಹಿ, ಆಡಳಿತಶಾಹಿ ಸಂದರ್ಭದಲ್ಲಿ ಜೀತದಾಳುಗಳನ್ನು ಅಥವಾ ಮನುಷ್ಯರನ್ನು ಸಹ ಮಾರಾಟ ಮಾಡುತ್ತಿದ್ದರು. ಶ್ರೀಮಂತರು, ಪುರೋಹಿತರು ತಮ್ಮ ಮನೆ ಕೆಲಸಗಳಿಗೆ, ಜಾತ್ರೆಗಳಲ್ಲಿ ಇತರ ವಸ್ತುಗಳಂತೆ ಮಾರಾಟವಾಗುತ್ತಿದ್ದ ಮನುಷ್ಯರನ್ನು ಹರಾಜಿನ ಮೂಲಕ ಕೊಂಡೊಯ್ಯುತ್ತಿದ್ದರಂತೆ, ಶ್ರೀಮಂತ ಅಥವಾ ಮನೆಯೊಡೆಯನ ಪಾಲಿಗೆ ಮಾರಾಟವಾದ ವ್ಯಕ್ತಿಗಳು ಹೋಗುತ್ತಿದ್ದು, ಮನೆಯ ಯಜಮಾನರು ಹೇಳಿದಂತಹ ಕೆಲಸವನ್ನು ಚಾಚೂ ತಪ್ಪದೆ ಮಾಡಬೇಕಾಗಿತ್ತು. ಹೀಗೆ ಮಾರಾಟವಾಗುತ್ತಿದ್ದ ಜನರಲ್ಲಿ ಮಹಿಳೆಯರು, ಮಕ್ಕಳೂ ಇರುತ್ತಿದ್ದರು. ಇಂತಹ ವ್ಯವಸ್ಥೆ ಪ್ರಾಚೀನ ಕಾಲದ ರೋಮ್, ಈಜಿಪ್ಟ್ ದೇಶಗಳ ಇತಿಹಾಸದಲ್ಲಿ ಸಾಕಷ್ಟು ನಡೆದಿವೆ. ಮನುಷ್ಯರನ್ನು ದನ-ಕರುಗಳಂತೆ ಮಾರಾಟ ಮಾಡುವುದು ಅಥವಾ ಕೊಳ್ಳುವುದು ಅಂದಿನ ಆ ಪ್ರದೇಶದ ಆರ್ಥಿಕ ಸ್ಥಿತಿಯನ್ನು ತಿಳಿಯುವುದಕ್ಕೆ ಸಾಧ್ಯವಾಗುತ್ತದೆ. ಹೀಗೆ ಒಂದು ಕಾಲದಲ್ಲಿ ಜಾತ್ರೆಗಳು ನಡೆದುಬಂದ ದಾರಿ ಅಥವಾ ಜಾತ್ರೆಗಳ ಬಗೆಗಿನ ಪರಂಪರೆಯನ್ನು ಗಮನಿಸಿ ನೋಡಿದಾಗ ಅಲ್ಲಿ ಆಶ್ಚರ್ಯಪೂರ್ವಕ ವಿಷಯಗಳನ್ನು ಕಾಣಬಹುದಾಗಿದೆ. ಹಾಗೆಯೇ ಖೇಧದ ಸಂಗತಿಗಳೂ ಉಂಟು. ಇಂತಹ ಅದೆಷ್ಟೋ ವಿಷಯಗಳು ಇಂದು ನಮಗೆ ಕೇವಲ ಇತಿಹಾಸದ ಪುಟಗಳಲ್ಲಿ ಓದಲಿಕ್ಕೆ ಮಾತ್ರ ಸಿಗುತ್ತವೆ. ಪ್ರತ್ಯಕ್ಷದರ್ಶಿಗಳು ಹಾಗೂ ಸಂಶೋಧನಾಕಾರರು, ಪ್ರವಾಸಿಗರು ಇಂತಹ ಮರೆಯಲಾರದಂತಹ ಸಾಕಷ್ಟು ವಿಷಯಗಳನ್ನು ಕಣ್ಣಿಗೆ ಕಟ್ಟುವಂತೆ ಸಾಹಿತ್ಯದ ಮುಖಾಂತರ ಹಿಡಿದಿಟ್ಟಿದ್ದಾರೆ.

ಬಹುತೇಕವಾಗಿ ಜಾತ್ರೆಗಳಲ್ಲಿ ಹಿಂದಿನ ಜನಪದ ಆಚರಣೆಗಳೇ ರೂಢಿಯಲ್ಲಿದ್ದು, ಇಂದಿಗೂ ಅವು ಪ್ರಸ್ತುತವೆನಿಸುತ್ತವೆ. ಆಧುನೀಕತೆಯ ಹೊಡೆತಕ್ಕೆ ಸಿಲುಕಿದ ಜನಪದರು ಕೆಲವು ನೀತಿ–ನಿಯಮಗಳಲ್ಲಿ ಸಾಧ್ಯವಿದ್ದಷ್ಟು ಬದಲಾವಣೆ ಮಾಡಿಕೊಂಡಿದ್ದರೂ ಹಲವು ವಿಚಾರಗಳಲ್ಲಿ ಇನ್ನೂ ಹಳೆಯ ಸಂಪ್ರದಾಯಗಳನ್ನೇ ಉಳಿಸಿಕೊಂಡಿದ್ದಾರೆ. ವೈಚಾರಿಕ ಪ್ರಜ್ಞೆಯ ಒಳಗೆ ಮೂಢನಂಬಿಕೆಗಳೂ ಸಹ ಜೊತೆಯಲ್ಲಿಯೇ ಆಚರಣೆಗೊಳ್ಳುತ್ತಿವೆ. ನಾಗರಿಕ ಪ್ರಪಂಚ ಎಂದು ಹೇಳಿಕೊಳ್ಳುವ ಸಮಾಜ ಯಥಾಪ್ರಕಾರವಾಗಿ ಹಳೆಯ ಸಂಪ್ರದಾಯಗಳಿಗೂ ಅಥವಾ ಆಚರಣೆಗಳಿಗೂ ನವೀನ ಲೇಪನಗಳ ಮೂಲಕ ವೈವಿಧ್ಯಮಯವಾಗಿ, ವಿಭಿನ್ನವಾಗಿ ಆಚರಿಸುವುದರಿಂದ ಹಳೆಯ ನಂಬಿಕೆಗಳು ಕಣ್ಣಿಗೆ ಎದ್ದು ಕಾಣುವುದಿಲ್ಲ ಅಷ್ಟೇ. ಪ್ರಸ್ತುತ ಸಂದರ್ಭದಲ್ಲಿ ಎಲ್ಲೇ ಹೋದರೂ ಶಿಷ್ಟ ಸಂಸ್ಕೃತಿಯೇ ಪ್ರಚಲಿತದಲ್ಲಿದೆ. ವಿದ್ವಾಂಸರು ಒಂದು ಮಾತನ್ನು ಹೇಳುತ್ತಾರೆ ನಿನ್ನೆಯದೆಲ್ಲಾ ಜನಪದ, ಇಂದಿನದೆಲ್ಲಾ ಶಿಷ್ಟಪದ, ದಿನ ಕಳೆದಂತೆ, ಮುಂದೆ ಸಾಗಿದಂತೆ ಹಿಂದಿನದೆಲ್ಲಾ ಜನಪದವಾಗಿ ಉಳಿಯುತ್ತದೆ ಎಂದು ಹೇಳುತ್ತಾರೆ. ಜಾನಪದ ಸಾಹಿತ್ಯ ಹಲವು ಪ್ರಕಾರಗಳ ಅಧ್ಯಯನಗಳು ಜನಪದ ಜೀವನದ ಕುರಿತಾಗಿ ಕೆಲವು ಒಳನೋಟಗಳನ್ನು ನೀಡುತ್ತಿವೆಯಾದರೂ ಗ್ರಾಮೀಣ ಸಮುದಾಯಗಳ ಸಾಮೂಹಿಕ ಜೀವನದ ಒಂದು ಸಮಗ್ರ ಚಿತ್ರಣವನ್ನು ಜಾತ್ರೆಗಳು ಸ್ಪಷ್ಟವಾಗಿ ನಿರೂಪಿಸುತ್ತವೆ. ಹೀಗಾಗಿ ಜಾತ್ರೆಗಳು ಒಂದು ರೀತಿಯ ಸಮುದಾಯಗಳ ಚಿತ್ರಣವೇ ಆಗಿವೆ.

ಸಮಾಜದ ದೃಷ್ಟಿಯಿಂದ ಜಾತ್ರೆಗಳು ತನ್ನದೇ ಆದ ಸಾಂಸ್ಕೃತಿಕ ಪ್ರಾಮುಖ್ಯತೆಯನ್ನು ಪಡೆದಿದ್ದು ಸಾಮೂಹಿಕ ದೃಷ್ಟಿಕೋನವನ್ನು ಹೊಂದಿವೆ. ಪರಸ್ಪರ ಜನಪದರಲ್ಲಿ ಅನನ್ಯತೆಯನ್ನು, ಒಗ್ಗಟ್ಟನ್ನು ಕಾಪಾಡಿಕೊಂಡು ಬರುವಲ್ಲಿ ಯಶಸ್ವಿಯಾಗಿವೆ. ಭಾರತ ದೇಶ ಹಲವು ಧರ್ಮಗಳ ನೆಲೆಬೀಡಾಗಿದ್ದು, ಇಲ್ಲಿ ನಡೆಯುವ ಜಾತ್ರೆಗಳಲ್ಲಿ ಯಾವುದೇ ಭಿನ್ನ ಅಭಿಪ್ರಾಯಗಳಿಲ್ಲದೆ ಎಲ್ಲಾ ಚಿತ್ರಗಳಲ್ಲಿ, ಎಲ್ಲಾ ಜನರು ಸೇರಿಯೇ ಆಚರಿಸುತ್ತಾರೆ. ಹಾಗೆಯೇ ಜಾತ್ರೆಗಳು ಜನರನ್ನು ಸೇರಿಸುವ ಜನಪದರಲ್ಲಿ ಬಾಂಧವ್ಯವನ್ನು ಬೆಸೆಯುವ ಮಾಧ್ಯಮಗಳಾಗಿಯೂ ಪ್ರಖ್ಯಾತಿಯನ್ನು ಪಡೆದಿವೆ. ಬಹುಮುಖಿ ನೆಲೆಯಲ್ಲಿ ಜನಪದರ ಬದುಕನ್ನು, ಸಂಸ್ಕೃತಿಯನ್ನು ಅನಾವರಣಗೊಳಿಸುತ್ತಾ ಜನಸಾಮಾನ್ಯರ ಆಸ್ತಿಯಾಗಿ ಹೊರಹೊಮ್ಮಿವೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಜಾತ್ರೆಗಳ ಅಧ್ಯಯನ ಈ ಸಂದರ್ಭದಲ್ಲಿ ಹೆಚ್ಚು ಸೂಕ್ತವಾಗಿದ್ದು, ಈ ಭಾಗದ ಅಥವಾ ಈ ಸ್ಥಾನದಲ್ಲಿ ಆಚರಿಸಲಾಗುವಂತಹ ಜಾತ್ರೆಗಳು ಸಾಮಾಜಿಕ ದೃಷ್ಟಿಕೋನದಿಂದ ಬಹಳ ಮಹತ್ವವನ್ನು ಪಡೆದಂತವುಗಳಾಗಿವೆ. ಹಾಗಾಗಿ ಈ ಅಧ್ಯಯನದಲ್ಲಿ ಈ ವಿಚಾರವನ್ನು ಚರ್ಚಿಸುವುದರ ಮೂಲಕ ಜಾತ್ರೆಗಳ ಬಗೆಗೆ ಸಮಾಜಕ್ಕೆ ತಿಳಿಸುವಂತಹ ಕಾರ್ಯ ಇದಾಗಿದೆ ಎಂದು ಹೇಳಬಯಸುತ್ತೇನೆ.

ಅಧ್ಯಾಯ ನಾಲ್ಕು

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಭೌಗೋಳಿಕ ಅವಲೋಕನ

೪.೧ ಭೌಗೋಳಿಕ ಸಂಕ್ಷಿಪ್ತ ಪರಿಚಯ

೪.೨ ಐತಿಹಾಸಿಕ ಪರಂಪರೆ

೪.೩ ಧಾರ್ಮಿಕತೆ

೪.೪ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿಚಯ

೪.೫ ರಾಜಕೀಯ ಪರಂಪರೆ

೪.೬ ಸಾಹಿತ್ಯ ಪರಂಪರೆ

೪.೭ ಶಾಸನಗಳು

೪.೮ ಭಾಷೆ

ಅಧ್ಯಾಯ ನಾಲ್ಕು

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಭೌಗೋಳಿಕ ಅವಲೋಕನ

೪.೧. ಭೌಗೋಳಿಕ ಸಂಕ್ಷಿಪ್ತ ಪರಿಚಯ

ಬೆಳಗಾವಿ ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿ ೧೦ ತಾಲುಕುಗಳನ್ನು ಒಳಗೊಂಡಂಥ ಒಂದು ದೊಡ್ಡ ಜಿಲ್ಲೆಯಾಗಿದೆ. ಜಿಲ್ಲೆಯ ೧೦ ತಾಲೂಕುಗಳಲ್ಲಿ ಚಿಕ್ಕೋಡಿ ಒಂದು ದೊಡ್ಡದಾದ ತಾಲೂಕು. ಚಿಕ್ಕೋಡಿ ತಾಲೂಕು ಬೆಳಗಾವಿ ಜಿಲ್ಲೆಯ ವಾಯುವ್ಯ ಭಾಗದಲ್ಲಿ ಇದೆ. ಇದು ಜಿಲ್ಲಾ ಕೇಂದ್ರ ಸ್ಥಳದಿಂದ ಸುಮಾರು ೭೦ ಮೈಲು ಅಂತರದಲ್ಲಿ ಇದೆ. ಇದು ಸಮುದ್ರ ಪಾತಳಿಯಿಂದ ೨೮೯೩ ಅಡಿ ಎತ್ತರದಲ್ಲಿದೆ. ಈ ತಾಲೂಕು ಉತ್ತರ ಅಕ್ಷಾಂಶ ೧೬-೨೬ ಹಾಗೂ ಪೂರ್ವ ರೇಖಾಂಶ ೭೮-೩೮ ರ ಮೇಲಿದೆ. ಸುಮಾರು ೮೪೦ ಚದರು ಮೈಲು. ವಿಸ್ತೀರ್ಣವನ್ನು ಹೊಂದಿರುವಂಥ ತಾಲೂಕಿನಲ್ಲಿ ಕೃಷ್ಣಾ, ವೇದಗಂಗಾ, ದೂಧಗಂಗಾ ನದಿಗಳು ಹರಿದಿವೆ. ತಾಲೂಕಿನ ದೊಡ್ಡ ಮತ್ತು ಚಿಕ್ಕ ರೈತರು ಈ ಮೇಲಿನ ಮೂರು ನದಿಗಳ ಪ್ರಯೋಜನವನ್ನು ಪಡೆದುಕೊಂಡು ತಮ್ಮ ಜೀವನ ಮಟ್ಟವನ್ನು ಮತ್ತು ಕೃಷಿ ಆದಾಯವನ್ನು ಹೆಚ್ಚಿಸಿಕೊಳ್ಳುವಲ್ಲಿ ಈ ನದಿಗಳು ಚಿಕ್ಕೋಡಿ ತಾಲೂಕಿನ ಜನತೆಗೆ ವರದಾನಗಳಾಗಿವೆಯಂದರೆ ಅತಿಶಯೋಕ್ತಿಯಾಗಲಾರದು.

ಬೆಳಗಾವಿ ಜಿಲ್ಲೆಯ ಗಡಿ ಭಾಗದಲ್ಲಿರುವ ಚಿಕ್ಕೋಡಿ ತಾಲೂಕಿನ, ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಗುಡ್ಡಗಳಿಂದ ಆವೃತವಾಗಿದೆ. ತಾಲೂಕಿನ ಮಧ್ಯಭಾಗ ಎತ್ತರ ಪ್ರದೇಶವಾಗಿದ್ದು ತಾಲೂಕಿನಲ್ಲಿ ನಿಯಮಿತವಾಗಿ ವಿಫಲವಾಗಿ ಸರಾಸರಿ ೫೦೮ ಮಿಲಿ ಮೀಟರ ಮಳೆಯಾಗುತ್ತದೆ. ಇಲ್ಲಿಯ ಜನರ ಪ್ರಮುಖ ಉದ್ಯೋಗ ಒಕ್ಕಲುತನ, ಇಲ್ಲಿಯ ಜನರ ಎರಡನೆಯ ಪ್ರಮುಖ ಉದ್ಯೋಗ, ವ್ಯಾಪಾರ, ನಿಪ್ಪಾಣಿ ಪಟ್ಟಣದಿಂದ ದೂರದ ಕೊಂಕಣ, ಪುಣೆ, ಮುಂಬಯಿ, ಕೊಲ್ಹಾಪುರ, ಸಾಂಗ್ಲಿ, ಪ್ರದೇಶಗಳಿಗೆ, ಹತ್ತಿ, ಬೆಲ್ಲ, ತಂಬಾಕು, ಮೆಣಸಿನಕಾಯಿ ನಿರ್ಯಾತವಾಗುತ್ತವೆ.

ಕ್ರಿ.ಶ ೧೭೨೦ರಲ್ಲಿ ಭೇಟ್ಟಿಕೊಟ್ಟ ಕ್ಯಾಪ್ಟನ್ ಮೂರ್ ಎಂಬುವವನು ಈ ಊರನ್ನು ಬಹಳ ಅಭಿಮಾನದಿಂದ ಹೊಗಳಿರುವನು. ಅದೇ ರೀತಿಯಾಗಿ ಇಲ್ಲಿಯ ಪ್ರಮುಖ ಕಸಬುಗಳಾದ ಹಿತ್ತಾಳೆ, ತಾಮ್ರದ ಪಾತ್ರೆಗಳ ತಯಾರಿಕೆ, ಆಭರಣಗಳ ತಯಾರಿಕೆ ಮತ್ತು ನೇಕಾರಿಕೆ ಇವುಗಳ ಬಗ್ಗೆ ವಿವರಿಸಿರವನು. ಚಿಕ್ಕೋಡಿ ತಾಲೂಕು ಒಂದು ಮುಖ್ಯ ವ್ಯಾಪಾರ

ಕೇಂದ್ರವೆಂದು ಇಲ್ಲಿ ಪ್ರತಿ ಗುರುವಾರ ಸಂತೆ ಇರುವದೆಂದು ಮತ್ತು ಇಲ್ಲಿಯ ನೇಯ್ಗೆ ಕೆಲಸ ಗಮನಾರ್ಹವಾದುದೆಂದು ಮತ್ತು ಇಲ್ಲಿಯ ಜನರು ಗೌರವಾಭಿಮಾನಿಗಳು ಎಂದು ಬಣ್ಣಿಸಿರುವನು. ಊರಿನಲ್ಲಿರುವ ದ್ರಾಕ್ಷಿಯ ತೋಟಗಳು ರಾಜ್ಯದಲ್ಲೇ ಪ್ರಸಿದ್ಧಿಯನ್ನು ಹೊಂದಿವೆಯೆಂದೂ ಹೇಳಿದ್ದಾನೆ.

೪.೨. ಐತಿಹಾಸಿಕ ಪರಂಪರೆ

ಬೆಳಗಾವಿ ಜಿಲ್ಲೆ ವಾಯುವ್ಯ ಭಾಗದಲ್ಲಿರುವ ಚಿಕ್ಕೋಡಿ ತಾಲೂಕು ತುಂಬ ಸಮೃದ್ಧವಾದುದು. ಇಲ್ಲಿ ತಂಬಾಕು ಬೆಳೆ ಪ್ರಮುಖ ಹಾಗೂ ಪ್ರಖ್ಯಾತವಾಗಿದೆ. ಪಶ್ಚಿಮ ಭಾಗವು ತುಂಬಾ ಫಲವತ್ತತೆಯನ್ನು ಹೊಂದಿದೆ. ಇದು ಪರಕೀಯರನ್ನು ಆಕರ್ಷಿಸುತ್ತ ಬಂದಿರುವ ಭಾಗವಾಗಿದೆ.

ತಾಲೂಕಿನಲ್ಲಿ ಹರಿಯುವ ಕೃಷ್ಣಾ, ವೇದಗಂಗಾ, ದೂಧಗಂಗಾ ನದಿಗಳು ಕೃಷಿಗೆ ತುಂಬಾ ಅನುಕೂಲಕರವಾಗಿದೆ. ಒಕ್ಕಲುತನದ ಜೊತೆಗೆ ವಾಣಿಜ್ಯ ವ್ಯಾಪಾರಗಳು ಈ ಪ್ರದೇಶದಲ್ಲಿ ದೊರೆಯುವ ಕೆಲವು ಜಾತಿಯ ಬೆಲೆಬಾಳುವ ಹರಳುಗಳು ಮೊದಲಾದವುಗಳಿಂದ ಚಿಕ್ಕೋಡಿ ಪ್ರದೇಶ ವಿದೇಶಿಯರನ್ನು ಕೂಡ ಆಕರ್ಷಿಸಿದೆ.

ಪುರಾತತ್ವವೇತ್ತರು ಈ ತಾಲೂಕಿನ 'ಎಕ್ಸಂಬಿ' ಮತ್ತು ಕಲ್ಲೋಳಿಗಳಲ್ಲಿ ಶಿಲಾ–ತಾಮ್ರ ಯುಗದ ಸಂಸ್ಕೃತಿ ಮತ್ತು ಕರೋಶಿಯಲ್ಲಿ ಆದಿ ಕಾಲದ ಸಂಸ್ಕೃತಿ ನೆಲೆಸಿದ ಬಗ್ಗೆ ಸಾಕ್ಷಿಗಳು ದೊರೆತಿವೆ. ಈ ಅವಶೇಷಗಳು ಇತಿಹಾಸ ಕಾಲಕ್ಕೆ ಸೇರಿದುದಾಗಿದ್ದರೆ 'ಕರೋಶಿ'ಯ ಬಳಿ ದೊರೆತ ಅವಶೇಷಗಳು ಅದಕ್ಕೂ ಕೊಂಚ ಪೂರ್ವ ಎಂದರೆ ಕ್ರಿ.ಶ.ಸು ೬–ಇನೆಯ ಶತಮಾನದವೆನಿವೆ. ಬೆಳಗಾವಿಯಲ್ಲಿ ಶಾತವಾಹನರ ನಾಣ್ಯಗಳು ದೊರೆತಿವೆ. ಇದನ್ನು ಬಿಟ್ಟರೆ ಜಿಲ್ಲೆಯಲ್ಲಿ ದೊರೆಯುವ ಎರಡನೆಯ ಅತಿ ಪ್ರಾಚೀನ ದಾಖಲೆಯೆಂದರೆ ಕದಂಬ ದೊರೆ ಶಾಂತಿವರ್ಮನ ಭೋಜ ಗ್ರಾಮದ ತಾಮ್ರ ಶಾಸನ. ಇದು ಕೃತಕ ಶಾಸನಾಗಿದ್ದರೂ ತುಂಬಾ ಹಳೆಯದು. ಇದು ಕ್ರಿಶ ಸುಮಾರು ೭–ಲನೇಯ ಶತಮಾನದ್ದೆಂದು ಊಹಿಸಬಹುದು. ಬಾದಾಮಿ, ಚಾಲುಕ್ಯ ಮತ್ತು ಬನವಾಸಿ ಕದಂಬರ ಕಾಲದ ಸ್ಪಷ್ಟ ದಾಖಲೆಗಳು ಈ ಪ್ರದೇಶದಲ್ಲಿ ಸಿಕ್ಕಿಲ್ಲದಿದ್ದರೂ ಪರೋಕ್ಷ ಪ್ರಮಾಣಗಳಿಂದ ಈ ಪ್ರದೇಶದ ಮೇಲೆ ಅವರ ಅಧಿಕಾರವಿದ್ದುದನ್ನು ದೃಢಪಡಿಸಬದು. ಅದೇ ರೀತಿ ತರುವಾಯ ಬಂದು ರಾಷ್ಟ್ರಕೂಟ ಚರ್ಕ್ರವರ್ತಿಗಳ ದಾಖಲೆಗಳು ಚಿಕ್ಕೋಡಿ ಪ್ರದೇಶದಲ್ಲಿಲ್ಲ.

ಚಿಕ್ಕೋಡಿ ತಾಲೂಕಿನ ಬಹುಭಾಗ ಶಿಲಾಹಾರ ದೊರೆಗಳ ನೇರ ಆಡಳಿತಕ್ಕೆ ಒಳಪಟ್ಟಿತ್ತು. ಈ ಮನೆತನದವರಾದ ಈಗಿನ ಕರ್ಹಾಡ ಬಾಳವೇ (ವಳವಾಡ) ಪನ್ನಾಳ (ಪನ್ನಾಳಗಡ)

ಮತ್ತು ಕೊಲ್ಲಾಪೂರಗಳನ್ನು ಸಂದರ್ಭಾನುಸಾರವಾಗಿ ತಮ್ಮ ರಾಜಧಾನಿಯನ್ನು ಮಾಡಿಕೊಂಡು ಆಳುತ್ತಿದ್ದರು. ಇವರೊಂದೊಂದು ಅತೀ ಪ್ರಾಚೀನ ತಾಮ್ರ ಶಾಸನ ಇಂದಿನ ಪಟ್ಟಣಕೋಡಿ(ಪಟ್ಟಣಕುಡಿ)ಯಲ್ಲಿ ದೊರೆತಿದೆ. ಇದರ ಕಾಲ ಕ್ರಿ.ಶ ೯೮೮ ಇದಾದ ನಂತರ ಬೇಡಕಿಹಾಳದಲ್ಲಿ ಕಲ್ಯಾಣ ಚಾಲುಕ್ಯ ದೊರೆ ಇರಿವಬೆಡಂಗ ಸತ್ಯಾಶ್ರಯನ ಕಾಲದ ಒಂದು ಶಾಸನ ದೊರೆತಿದೆ. ಅನಂತರ ಸದಲಗೆಯಲ್ಲಿ ೬ನೇ ವಿಕ್ರಮಾದಿತ್ಯನ ಕಾಲದ ಶಾಸನ ಖಡಕಲಾಟ, ಚಿಕ್ಕೋಡಿ, ತವದಿ, ಕಬ್ಬೂರ, ಕೇರೂರ ಈ ಮೊದಲಾದ ಊರುಗಳಲ್ಲಿ ೧೨ನೇ ಶತಮಾನದ ಕಲ್ಯಾಣ ಚಾಲುಕ್ಯ ಮತ್ತು ಸವದತ್ತಿ ರಟ್ಟರ ಶಾಸನಗಳು ಲಭಿಸಿವೆ. ಅದೇ ರೀತಿ ಯಡೂರಿನ ವೀರಭದ್ರ ದೇವಾಲಯದ ಪ್ರಾಕಾರದಲ್ಲಿ ಯಾದವ ಸಿಂಘನ ೧೧ನೇ ಶಾಸನ ಲಭಿಸಿದೆ.

ಹೀಗೆ ಹದಿಮೂರನೆಯ ಶತಮಾನದ ಆದಿ ಭಾಗದವರೆಗೆ ಬೇರೆ ಬೇರೆ ಕನ್ನಡ ರಾಜಮನೆತನಗಳು ಈ ಪ್ರದೇಶವನ್ನು ಆಳುತ್ತ ಬಂದವು. ಕ್ರಿ.ಶ ೧೩೨೭ರಲ್ಲಿ ದಿಲ್ಲಿ ಸುಲ್ತಾನರು ಈ ಪ್ರದೇಶವನ್ನು ಗೆದ್ದರು. ೧೩೪೭ರಲ್ಲಿ ಬಹುಮನಿ ರಾಜ್ಯ ಸ್ಥಾಪನೆಯೊಂದಿಗೆ ಅವರ ಅಧಿಕಾರ ಕಕ್ಷೆಗೆ ಈ ಪ್ರದೇಶ ಒಳಪಟ್ಟಿತು.ಮುಂದೆ ಕ್ರಿ.ಶ ೧೪೮೬ರಲ್ಲಿ ಅವರ ಅಧಿಕಾರವನ್ನು ದಿಕ್ಕರಿಸಿದ ಬಿಜಾಪೂರದ ಆದಿಲ್ ಶಾಹಿಗಳು ಸ್ವತಂತ್ರರಾಗಿ ಈ ಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ತರುವಾಯ ಕ್ರಿ.ಶ ಸುಮಾರು ೧೭೭೫ರ ಸುಮಾರಿಗೆ ಪೇಶ್ವೆಗಳು ಇದನ್ನು ಗೆದ್ದುಕೊಂಡರು. ಆದರೆ ನಿಪ್ಪಾಣಿ, ಕೊಲ್ಲಾಪೂರಗಳಲ್ಲಿ ಛತ್ರಪತಿಗಳು ಮತ್ತು ಅವರ ಸಂಬಂಧಿಕರು ಚಿಕ್ಕ ಪುಟ್ಟ ಸಂಸ್ಥಾನಗಳನ್ನು ಸ್ಥಾಪಿಸಿಕೊಂಡರು. ಅನಂತರ ೧೮೧೮ರಲ್ಲಿ ಪೇಶ್ವೆಗಳ ಆಳ್ವಿಕೆ ಕೊನೆಗೊಂಡು ಬ್ರಿಟಿಷರ ಆಡಳಿತ ಜಾರಿಗೆ ಬಂದಿತು. ಕ್ರಿ.ಶ೧೮೬೩ ರಲ್ಲಿ ಬೆಳಗಾವಿ ಜಿಲ್ಲೆಯೊಂದಿಗೆ ಚಿಕ್ಕೋಡಿ ಅಸ್ತಿತ್ವಕ್ಕೆ ಬಂದಿತು.

ಈ ಪ್ರದೇಶದಲ್ಲಿ ಪ್ರಾಚಿನ ಕಾಲದಿಂದಲೂ ಜೈನಧರ್ಮ ತುಂಬ ಜನಪ್ರಿಯವಾಗಿದೆ. ಚಿಕ್ಕೋಡಿ ಕೋಥಳಿ, ತವದಿ, ಪಟ್ಟಣಕುಡಿ ಎಕ್ಸಂಬಿ ಮೊದಲಾದ ಊರುಗಳಲ್ಲಿ ತುಂಬಾ ಹಳೆಯ ಜೈನ ಬಸದಿಗಳು ಇವೆ. ಎಕ್ಸಂಬಿಯಲ್ಲಿ ಯಾಪನೀಯ ಜೈನ ಪಂಥದ ಬಸದಿಯಿದ್ದ ಬಗ್ಗೆ ಶಾಸನುಲ್ಲೇಖವಿದೆ. ಕಬ್ಬೂರ, ಕೇರೂರ, ಲಟ್ಟೆ(ಖಡಕಲಾಟ) ಕೋಥಳಿ, ಊರುಗಳಲ್ಲಿ ವೈದಕ ಸಂಸ್ಕೃತಿ ಕೇಂದ್ರಗಳಾಗಿದ್ದುದಲ್ಲದೆ ಇವು ಪ್ರಸಿದ್ದ ಅಗ್ರಹಾರಗಳಾಗಿದ್ದವು.

ಸೂರ್ಯನ ಪ್ರತ್ಯೇಕ ಪೂಜೆಯೂ ಈ ಪ್ರದೇಶದಲ್ಲಿ ಪ್ರಚಲಿತವಿದೆ. ಪಟ್ಟಣಕುಡಿಯಲ್ಲಿ ಸೂರ್ಯವಿಗ್ರಹವೊಂದು ಪತ್ತೆಯಾಗಿದೆ. ನಾಥಪಂಥ ಈ ಭಾಗದಲ್ಲಿ ತುಂಬ ಜನಪ್ರಿಯವಾಗಿತ್ತು. ಕಾಡಸಿದ್ಧ ಹಾಲಸಿದ್ಧ ಮೊದಲಾದ ಈ ಪಂಥದ ಸತ್ಪುರುಷರು ಈಗಲೂ ಪೂಜೆಗೊಳ್ಳುತ್ತಿದ್ದಾರೆ. ಅಕ್ಕೋಳ, ಅಪ್ಪಾಚಿವಾಡಿ, ಕುರಲಿ, ಬೇಡಕಿಹಾಳ ಮೊದಲಾದ ಊರುಗಳಲ್ಲಿ ಈ ರೀತಿಯ ದೇವಾಲಯಗಳಿದ್ದು ಜನರು ನಿತ್ಯ ಪೂಜಿಸುತ್ತಾರೆ.

ಹೀಗೆ ಧಾರ್ಮಿಕವಾಗಿ ಈ ಪ್ರದೇಶ ಹಲವಾರು ಸಂಪ್ರದಾಯಗಳಿಂದ ಪ್ರಭಾವಿತವಾಗಿ ಸಂಕೀರ್ಣತೆಯನ್ನು ತಂದುಕೊಂಡಿದೆ. ಈ ಮೊದಲು ಹೇಳಿದಂತೆ ವಾಣಿಜ್ಯ ವ್ಯಾಪಾರಗಳಿಂದ ಈ ಪ್ರದೇಶ ತುಂಬಾ ಪ್ರಶಸ್ತವಾಗಿದ್ದು ಬಹು ಹಿಂದಿನಿಂದ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿತ್ತು.

೪.೩. ಧಾರ್ಮಿಕತೆ

ಚಿಕ್ಕೋಡಿಯಲ್ಲಿ ಲಿಂಗಾಯತ, ಬ್ರಾಹ್ಮಣ, ಜೈನ, ಮರಾಠಾ,ಮುಸ್ಲಿಂ, ಬೇಡ, ಕುರುಬ ಜನಾಂಗಗಳ ಮಿಶ್ರಿತ ಸಂಸ್ಕೃತಿಯಿದೆ. ಕನ್ನಡಿಗರಾದ ಲಿಂಗಾಯತ, ಜೈನರು ಪ್ರಬಲ ಕೋಮಿಗೆ ಸೇರಿದರೆ, ಮರಾಠಾ ಮತ್ತು ಬ್ರಾಹ್ಮಣರನ್ನು ಮರಾಠಿ ಸಂಸ್ಕೃತಿ ತಬ್ಬಿಕೊಂಡಿದೆ. ಉಳಿದ ದಲಿತ ಸಮುದಾಯವೂ ಇಲ್ಲಿದೆ.

ಬೆಳಗಾವಿ ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಹಲವು ಧರ್ಮಗಳು, ಸಂಸ್ಕೃತಿಗಳು, ಕಾಲಾಂತರಗಳಲ್ಲಿ ಹುಟ್ಟಿ ಬೆಳೆದು ಭರತ ಖಂಡವನ್ನು ಧರ್ಮ ಸಹಿಷ್ಣತೆಯ ಭೂಮಿ ಎಂದು ಪ್ರಸಿದ್ಧಿ ಪಡೆಯುವಲ್ಲಿ ಇಲ್ಲಿನ ಧರ್ಮಗಳ ಕೊಡುಗೆ ಅಪಾರ. ಅನಾದಿಕಾಲದಿಂದಲೂ ಹಲವು ಹೊಡೆತಗಳಿಗೆ ಸಿಲುಕಿದ ಭಾರತ ಕೆಲವು ಪ್ರಾದೇಶಿಕ ಅಥವಾ ದೇಶಿ ಮತ್ತು ಅನ್ಯದೇಶಿಯ ಧರ್ಮಗಳ ಚೌಕಟ್ಟಿಗೆ ಗುರಿಯಾಗಿದೆ. ಮೂಲವಾಗಿ ವೇದ ಪುರಾಣಗಳ ಕಾಲದಲ್ಲಿ ಕೇವಲ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಗಗಳು ಪ್ರಚಲಿತದಲ್ಲಿದ್ದು ತದನಂತರ ದಿನಗಳಲ್ಲಿ ಭಾರತದಲ್ಲಿ ಹುಟ್ಟಿದಂತೆ ಧರ್ಮಗಳು ಸಾಮಾಜಿಕವಾಗಿ ಧರ್ಮಪ್ರಸಾರತೆಯಲ್ಲಿ ಸಾಕಷ್ಟು ಶ್ರಮಿಸಿ ಆ ಮೂಲಕ ಜನರಲ್ಲಿ ಹೊಸ ಚೇತನವನ್ನು, ಧಾರ್ಮಿಕ ಅಲೆಯನ್ನು ಎಬ್ಬಿಸಿದವು. ದಾಸರು, ನಾಥರು, ವೈದಿಕರು, ಆಚಾರ್ಯರು, ಜೈನ, ಬೌದ್ಧ, ನಾಯರ್, ಮುಸ್ಲಿಂ, ಕ್ರೈಸ್ತ, ಸಿಖ್ ಹೀಗೆ ಹತ್ತಾರು ಧಾರ್ಮಿಕ ನಾಯಕರು ತಮ್ಮ ತಮ್ಮ ಯೋಗ್ಯತಾನುಸಾರ ತಮ್ಮದೇ ತತ್ವ ಸಿದ್ಧಾಂತಗಳನ್ನು ಪ್ರತಿಪಾದಿಸುವಲ್ಲಿ ಸಮಾಜಮುಖಿಯಾಗಿ ಕೆಲಸ ಮಾಡಿದರು. ಅಂತಹ ತತ್ವಗಳನ್ನು ಆದರ್ಶಗಳನ್ನು ಪಾಲಿಸಿಕೊಂಡು ಬರುವಂತ ಜನರು ಅವರದೇ ಆದ ಧರ್ಮವನ್ನು ಸೃಷ್ಟಿಸಿಕೊಂಡು ಅದರ ಮೂಲಕ ಹೊಸ ಧಾರ್ಮಿಕ ಪರಂಪರೆಯನ್ನು ಹುಟ್ಟುಹಾಕಿದರು. ಭಾರತಕ್ಕೆ ಲಗ್ಗೆ ಇಟ್ಟು ಪಾಶ್ಚಾತ್ಯರು ಕ್ರೈಸ್ತ ಧರ್ಮವನ್ನು ಬಿಟ್ಟು ಹೋದರು. ಈ ಧರ್ಮವೂ ಸಹ ನಮ್ಮಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದೆ.ಈ ಹಿನ್ನೆಲೆಯಲ್ಲಿ ಚಿಕ್ಕೋಡಿ ಭಾಗದಲ್ಲಿ ಪ್ರಾಚೀನ ಕಾಲದಿಂದಲೂ ಜೈನಧರ್ಮ ತುಂಬಾ ಜನಪ್ರಿಯವಾಗಿತ್ತು. ಚಿಕ್ಕೋಡಿ, ತವದಿ, ಕೇರೂರ, ಪಟ್ಟಣಕುಡಿ, ಎಕ್ಸಂಬಿ ಮೊದಲಾದ ಊರುಗಳಲ್ಲಿ ತುಂಬಾ ಹಳೆಯ ಕಾಲದ ಜೈನ ಬಸದಿಗಳು ಕಂಡುಬರುತ್ತವೆ. ಎಕ್ಸಂಬಿಯಲ್ಲಿ ಯಾಪನೀಯ ಜೈನ ಪಂಥದ ಬಸದಿ ಇದ್ದು ಇದರ ಬಗ್ಗೆ ಮಾಹಿತಿ ಅಥವಾ ವಿಷಯ ಜನರಲ್ಲಿದೆ.

ಕರ್ನಾಟಕದಲ್ಲಿ ಆಳ್ವಿಕೆ ಮಾಡಿದಂತಹ ಅನೇಕ ರಾಜಮಹಾರಾಜರ ಕಾಲದಲ್ಲಿ ಪ್ರಾದೇಶಿಕವಾಗಿ ಒಂದೊಂದು ಧರ್ಮಗಳು ಪ್ರಚಲಿತದಲ್ಲಿದ್ದು ತಮಗೆ ಇಷ್ಟವಾದ ಧರ್ಮವನ್ನು ರಾಜರು ಅನುಸರಿಸುತ್ತಿದ್ದರು. ಅದರಂತೆ ಪ್ರಜೆಗಳು ರಾಜಧರ್ಮವನ್ನೇ ಅನುಸರಿಸಬೇಕಾಗುತ್ತಿತ್ತು. ಒಂದೊಂದು ಭಾಗದಲ್ಲಿ ಒಂದೊಂದು ಧರ್ಮಗಳ ಅನುಸರಣಿ ನಡೆದಿದೆ. ಕಾರಣ ಕರ್ನಾಟಕದಲ್ಲಿ ಒಂದೊಂದು ಕಾಲಕ್ಕೆ ಪ್ರಬುದ್ಧಮಾನಕ್ಕೆ ಬಂದಂತಹ ರಾಜರು ತಮ್ಮ ಜೀವತಾವಧಿಯವರೆಗೂ ಅನೇಕ ಧಾರ್ಮಿಕ ನಂಬಿಕೆಗಳನ್ನು ರೂಢಿಸಿಕೊಂಡು ಬಂದಿರುವುದರಿಂದ ಕರ್ನಾಟಕವು ಸಹ ಸಾಕಷ್ಟು ಧರ್ಮಗಳ ಪ್ರಭಾವಕ್ಕೆ ಒಳಗಾಗಿದೆಯಾದುದರಿಂದ ನಮ್ಮಲ್ಲಿ ಇಂದಿಗೂ ಹಲವು ಧರ್ಮದವರು ನಮ್ಮ ಸಮಾಜದಲ್ಲಿದ್ದಾರೆ. ಈ ಭಾಗದ ಅನೇಕ ದೊಡ್ಡ ದೊಡ್ಡ ಮನೆತನಗಳಲ್ಲಿ ನಡೆದು ಬಂದಿರುವ ಪೂಜೆ ಸಂಪ್ರದಾಯ ಅದರ ಜೊತೆ ಮುಸಲ್ಮಾರ ಆಡಳಿತದೊಂದಿಗೆ ಇಸ್ಲಾಂ ಧರ್ಮ ಇಲ್ಲಿ ಪ್ರವೇಶಪಡೆಯಿತು. ವೀರಶೈವವು ಇಲ್ಲಿ ತುಂಬಾ ಜನಪ್ರಿಯಗೊಂಡು ಹಲವಾರು ನಾಥಪಂಥಿಯ ಜೈನ ದೇವಾಲಯಗಳು ಹಾಗೂ ಮಠಗಳು ವೀರಶೈವಕ್ಕೆ ಬಂದವು. ಈ ಮಠದ ಹಬ್ಬುಗೆಗೆ ದೇವರಾಜಮುನಿ, ಹಾಲಬಸವಿದೇವಮುನಿ ಮೊದಲಾದ ಬಸವಣ್ಣನವರ ವಂಶಸ್ಥರ ಪ್ರಭಾವವು ಕಾರಣಿಭೂತವಾಗಿದ್ದಂತೆ ಕಾಣುತ್ತದೆ. ಈ ಪ್ರದೇಶಕ್ಕೆ ೧೯೮೦ ರಲ್ಲಿ ಓಗ್ಲಿಬಿ ಎಂಬ ಭೂಗೋಲತಜ್ಞ, ೧೭೭೦ ರಲ್ಲಿ ಕ್ಯಾಪ್ಟನ್ ಮೂರ್, ೧೯೨೭ ರಲ್ಲಿ ಕ್ಯಾಪ್ಟನ್ ಕ್ಲೂನ್ಸ್ ಎಂಬುವರು ಭೇಟಿ ನೀಡಿದರು. ಕಾರಣ ಈಗಾಗಲೇ ತಿಳಿಸಿದಂತೆ ಚಿಕ್ಕೋಡಿ ಧಾರ್ಮಿಕತೆಯಲ್ಲಿದ್ದಂತೆ ವಾಣಿಜ್ಯಕವಾಗಿಯೂ ಪ್ರಸಿದ್ಧಿಯ್ನು ಪಡೆದಿರುವುದೇ ಆಗಿದೆ. ಒಟ್ಟಾರೆ ಈ ಪ್ರದೇಶ ಧಾರ್ಮಿಕವಾಗಿ ಹಲವಾರು ಸಂಪ್ರದಾಯಗಳಿಂದ ಪ್ರಭಾವಿತವಾಗಿ ಸಂಕೀರ್ಣತೆಯನ್ನು ತಂದುಕೊಟ್ಟಿದೆ.

೪.೪. ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಿಚಯ

ಮಠಾಧೀಶರು ಹಾಗೂ ಮುನಿಗಳು ಈ ಭಾಗದ ಸಾಂಸ್ಕೃತಿಕ ಪರಂಪರೆ ಬೆಳೆದುಬರಲು ಸಕ್ರೀಯವಾಗಿ ಭಾಗವಹಿಸಿದ್ದು, ದಾಖಲೆಯಾಗಿ ಉಳಿದಿದೆ. ಚಿಂಚಣಿ, ಚಿಕ್ಕೋಡಿ, ಯಕ್ಸಂಬಾ, ನಿಪ್ಪಾಣಿ, ಭೋಜ, ಕುಪ್ಪನವಾಡಿ, ಕೋಥಳಿ, ಸದಲಗಾ, ಯಡೂರ ಮುಂತಾದ ಸ್ಥಳಗಳಲ್ಲಿಯ ಮಠಾಧೀಶರು, ಮುನಿಗಳು ತಮ್ಮ ಮಹತ್ವದ ಕೊಡುಗೆಯನ್ನು ಸಾಂಸ್ಕೃತಿಕ ಪರಂಪರೆಗೆ ಕೊಟ್ಟಿದ್ದಾರೆ. ಚಿಂಚಣಿಯ ಶ್ರೀ ಮ.ನಿ.ಪ್ರ. ಅಲ್ಲಪ್ರಭು ಜನಕಲ್ಯಾಣ ಸಂಸ್ಥೆಯ ಮುಖಾಂತರ ಅನೇಕ ಮಹತ್ತರ ಜನಪರ, ಸಮಾಜಮುಖಿ, ಕಾರ್ಯಗಳನ್ನು ಕೈಗೆತ್ತಿಕೊಂಡವರು. ಅದರಲ್ಲಿ ಪುಸ್ತಕ ಪ್ರಕಾಶನವೂ ಒಂದು. ಪೂಜ್ಯರಾದ ಶಾಂತಿಸಾಗರರು(ಭೋಜ), ೧೦೮ ದೇಶಭೂಷಣ ಮಹಾರಾಜರು(ಕುಪ್ಪಾನವಾಡಿ), ೧೦೮ ವಿದ್ಯಾಸಾಗರ ಮಹಾರಾಜರು (ಸದಲಗಾ ಸಿದ್ಧ ಸೇನ (ಗಳತಗಾ), ಶ್ರೀ ಮಂಧರ ಮುನಿಗಳು(ಚಿಕ್ಕೋಡಿ) ಮುಂತಾದವರು ಸಾಹಿತಿಗಳಾಗಿ,

ಮುನಿಗಳಾಗಿ, ಜೈನಧರ್ಮದ ತತ್ವಗಳನ್ನು ಸಾಮಾನ್ಯ ಜನರಿಗೂ ಮುಟ್ಟಿಸುವಲ್ಲಿ ಯಶಸ್ವಿಯಾಗಿ ವಿಶಿಷ್ಟ ಪರಂಪರೆಯನ್ನು ಸೃಷ್ಟಿಸಿದವರು. ಪೂಜ್ಯ ೧೦೮ ವಿದ್ಯಾಸಾಗರ ಮಹಾರಾಜರು ಅನೇಕ ಹಿಂದಿ ಕೃತಿಗಳನ್ನು ಸಹ ರಚಿಸಿದ್ದಾರೆ. ಅದರಲ್ಲಿ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ "ಮೂಕಮಾಟ" ಕೃತಿ ಶ್ರೇಷ್ಠವಾದುದು. ನಿಪ್ಪಾಣಿ, ಅಂಕಲಿ, ನಣದಿ, ಶಿರಗಾಂವ, ಚಿಕ್ಕೋಡಿ, ಗ್ರಾಮಗಳಲ್ಲಿ ವಾಡೆಗಳು, ಸ್ತವನಿಧಿ, ಕೋಗನೋಳಿ, ನಿಪ್ಪಾಣಿ ಜೈನ ಮಂದಿರಗಳು ಬೇಡಕಿಹಾಳದ ಸಿದ್ದೇಶ್ವರ, ಕೇರೂರಿನ ಅರಣ್ಯ ಸಿದ್ದೇಶ್ವರ, ಎಕ್ಸಂಬಾದ ಬೀರೇಶ್ವರ ದೇವಾಲಯಗಳು ಶಿಲ್ಪಕಲಾ ದೃಷ್ಟಿಯಿಂದ ಗಮನಾರ್ಹವಾದವುಗಳು.

೪.೫. ರಾಜಕೀಯ ಪರಂಪರೆ

ಮುಂಬೈ ಇಲಾಖೆಯ ಕನ್ನಡದ ಜಿಲ್ಲೆಗಳಲ್ಲಿ ಬೆಳಗಾವಿ ಜಿಲ್ಲೆ ಪ್ರಮುಖವಾದುದು. ಅದರಲ್ಲೂ ಚಿಕ್ಕೋಡಿ ತಾಲೂಕಿನ ಪ್ರದೇಶ ಕೋಲ್ಹಾಪೂರ ಸಂಸ್ಥಾನಕ್ಕೆ ಒಳಪಟ್ಟದ್ದು ಈ ತಾಲೂಕಿನ ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿ ಮರಾಠಿ ಭಾಷಿಕರು ವಾಸವಾಗಿದ್ದರು. ಕೊಲ್ಹಾಪೂರದಿಂದ ಚಿಕ್ಕೋಡಿ ೪೦ ಮೈಲು ದೂರದಲ್ಲಿದೆ. ಕೋಲ್ಹಾಪೂರ ಭಾಗದಲ್ಲಿ ರಾಜಾರಾಮ್ ಕಾಲೇಜು ಹಳೆಯದು ಮತ್ತು ಪ್ರಸಿದ್ಧವಾದದು. ರಾಜಕೀಯ ಚಳುವಳಿಯ ಕೇಂದ್ರಗಳೆನಿಸಿದ ಮುಂಬೈ-ಪುಣೆ ಪ್ರದೇಶಗಳಲ್ಲಿ ಮೂಡಿದ ರಾಜಕೀಯ ಜಾಗೃತಿ ಕರ್ನಾಟಕದ ಉಳಿದ ಪ್ರದೇಶಗಳಿಗಿಂತ ಚಿಕ್ಕೋಡಿ ಭಾಗದಲ್ಲಿ ಮೊದಲು ಆರಂಭವಾಯಿತು.

ಚಿಕ್ಕೋಡಿ ತಾಲೂಕಿನ ಸುಶಿಕ್ಷಿತರು ಮೊದಲಿನಿಂದಲೂ ಬಾಲಗಂಗಾಧರ ತಿಲಕ ನೇತೃತ್ವದ ಮರಾಠಿ "ಕೇಸರಿ" ದಿನ ಪತ್ರಿಕೆಯನ್ನು ಓದುತ್ತಾ ಬಂದಿದ್ದಾರೆ. ಕೋಲ್ಹಾಪೂರ ಸಂಸ್ಥಾನದ ಛತ್ರಪತಿ ಶಾಹು ಮಹಾರಾಜರು ನಡೆಸಿದ ಸತ್ಯ ಶೋಧರ ಚಳುವಳಿಯ ಪ್ರಭಾವ ಕೂಡ ಈ ಭಾಗದ ಜನರ ಮೇಲಾಗಿದೆ. ೧೯೨೭ ರಲ್ಲಿ ಡಾ.ಅಂಬೇಡ್ಕರ "ಚವುದಾರ" ಕೆರೆಯ ನೀರನ್ನು ಮುಟ್ಟಿ ಅಸ್ಪೃಶ್ಯರು ಉಳಿದ ಸಮಾಜಕ್ಕಿಂತ ಬೇರೆ ಅಲ್ಲ ಎಂಬುದನ್ನು ಘೋಷಿಸಿದರು. ಆ ಚಳುವಳಿಯಲ್ಲಿ ಚಿಕ್ಕೋಡಿಯ ಬೇಡಕಿಹಾಳ ಗ್ರಾಮದ ರತ್ನಪ್ಪ ಸೂರ್ಯವಂಶಿ ಮತ್ತು ಇತರರು ಪಾಲ್ಗೊಂಡಿದ್ದು ರಾಜಕೀಯ ಹಾಗೂ ಸಾಮಾಜಿಕ ಜಾಗೃತಿಯ ಸೂಚನೆಯಾಗಿದೆ.

ವ್ಯಾಪಾರ ಶಿಕ್ಷಣ ಕುರಿತಂತೆ ಈ ಶಹರಗಳ ಸಂಗಡ ಇದ್ದ ಸಂಬಂಧ ಕೂಡ ರಾಜಕೀಯ ಪರಂಪರೆ ಬೆಳೆಸುವಲ್ಲಿ ಸಹಾಯಕವಾಗಿದೆ. ಕೆಲ ಮರಾಠಿ ಪತ್ರಿಕೆಗಳಾದ "ಜ್ಞಾನ ಪ್ರಕಾಶ" "ನವಕಾಳ", "ಕೇಸರಿ" ಮೊದಲಾದವುಗಳನ್ನು ಓದುವದು ಇದು ಜನರ ಮೇಲೆ ರಾಜಕೀಯ ಪ್ರಭಾವ ಬಿರುತ್ತ ಬಂದಿದೆ.

"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಇದನ್ನು ನಾನು ಪಡದೇ ತೀರುತ್ತೇನೆ ಎಂದು ಎದೆ ತಟ್ಟಿ ಹೇಳಿದ ಲೋಕಮಾನ್ಯ ಬಾಲಗಂಗಾಧರರು ನಿಪ್ಪಾಣಿ ಚಿಕ್ಕೋಡಿಗಳಲ್ಲಿ ಸಂಚರಿಸಿ ಜನರಲ್ಲಿ ರಾಜಕೀಯ ಬೀಜಾರೋಪಣ ಮಾಡಿದರು. ೧೯೨೦ ರ ವೇಳೆಗೆ ತಿಲಕರ ಸ್ಫೂರ್ತಿಯಿಂದ ಇಲ್ಲಿ ಶೈಕ್ಷಣಿಕ ಚಳುವಳಿ ಕೂಡ ಆರಂಭವಾಯಿತು. ಶ್ರೀ ಮಜಲೀಕರ, ಶ್ರೀ ಸಖಾರಾಮ ಪಂತ, ಶ್ರೀ ಕುಲಕರ್ಣಿ, ಶ್ರೀ ಸದಲಗೇಕರ ಮೊದಲಾಧವರು ತಿಲಕರ ಕೂಡ ನಿಕಟ ಸಂಬಂಧ ಹೊಂದಿದ್ದರು. ಅದರಂತೆ ಮಹಾತ್ಮಾ ಗಾಂಧಿ ೧೯೩೩ ರಲ್ಲಿ ನಿಪ್ಪಾಣಿಯಲ್ಲಿ ತಂಗಿದ್ದರು, ಚಿಕ್ಕೋಡಿಯಲ್ಲಿ ವ್ಯಾಖ್ಯಾನ ನೀಡಿದರು. ಅವರು ಭೇಟಿ ನೀಡಿದ ಸ್ಥಳಕ್ಕೆ ಗಾಂಧಿ ಬಜಾರ ಎಂದು ಹೆಸರು.

ಈ ರಾಷ್ಟ್ರನಾಯಕರ ಚಿಂತನೆಯ ಫಲವಾಗಿ ೧೯೩೧ ಹಾಗೂ ೧೯೪೨ ರ ಚಳುವಳಿಯಲ್ಲಿ ಚಿಕ್ಕೋಡಿ ಪ್ರದೇಶದ ಸಾಕಷ್ಟು ಜನ ಸೇರಿಕೊಂಡಿದ್ದಾರೆ. ಮಾಂಜರಿಯ ಅಪ್ಪಾಸಾಹೇಬ ಪಾಟೀಲ ಎಕ್ಸಂಬಿಯ ದತ್ತಾ ಪಾಂಗಮ, ದಿನಕರ ಜೋಶಿ ಮೊದಲಾದವರು ಅಂಕಲಿ ಬಸಪ್ಪ, ಕುತಾಳೆ, ಬೇಡಕಿಹಾಳದ ಸಿದ್ದನಗೌಡಾ ಪಾಟಿಲ, ಮೊದಲಾದವರು ಪ್ರಮುಖರು, ಅದರಂತೆ ಅಕ್ಕೋಳ ,ಬೋರಗಾಂವ, ಭೋಜ, ಚಿಂಚಣಿ ಮುಂತಾದ ಊರುಗಳಿಂದ ಹೋರಾಟಗಾರರಾಗಿ ಹೋದರು. ಬೇನಾಡಿಕರ ಎಂಬುವರು ದೇಶಕ್ಕಾಗಿ ಹೋರಾಡಿದರು. ಬೇನಾಡಿಕರು ಅವರು ಸುಪ್ರಿಂ ಕೋರ್ಟಿನ ವಕೀಲರಾದರು.

ಈ ತಾಲೂಕಿನ ದೊಡ್ಡ ಗ್ರಾಮ ಸದಲಗಾ ಪಂಚಾಯತಿಯ ದಕ್ಷ ಚೇರಮನರಾಗಿ ಕಾರ್ಯ ನಿರ್ವಹಿಸಿದ ಹೆಗ್ಗಳಿಕೆ ದಲಿತ ಸಮಾಜದ ಶ್ರೀ ಪಿ.ಪಿ. ಹೆಗರೆಯವರಿಗೆ ಸಲ್ಲುತ್ತದೆ. ಅದು ಆ ಭಾಗದ ಹರಿಜನರು ಅಂಬೇಡ್ಕರ ವಾದಿಗಳಾಗಿದ್ದರಿಂದ ೧೯೪೨ ರ ಚಳುವಳಿಯಲ್ಲಿ ಭಾಗವಹಿಸಿದ ಉದಾಹರಣೆಗಳಿಲ್ಲ. ಆದರೂ ಸಾಕಷ್ಟು ಕಾರ್ಯಕರ್ತರು ಖಾದಿಧಾರಿಗಳಾಗಿ ಇರುವುದುಂಟು ಸ್ವರಾಜ್ಯ ಬಂದ ಮೇಲೆ ನೂತನ ಘಟನೆಯ ಪ್ರಕಾರ ನಡೆದ ಮೊದಲ ಚುನಾವಣೆಯಲ್ಲಿ ಈ ತಾಲೂಕು Double Member Constituency ಆಗಿತ್ತು. ೧೯೫೨ ರಲ್ಲಿ ಜರುಗಿದ ಚುನವಣೆಯಲ್ಲಿ ೯ಜನ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಚಿಕ್ಕೋಡಿಯ ಎಸ್.ಪಿ. ಕೋಠಿವಾಲೆ (ವಕೀಲರು) ಹಾಗೂ ಕಾಯ್ದಿಟ್ಟ ಉಮೇದುವಾರರಾಗಿ ಶ್ರೀಮತಿ ಶೇಯ್ಕರಬಾಯಿ ಕಾಂಗ್ರೆಸ್ಸಿನ ಪರವಾಗಿ ವಿಜಯಿಯಾಗಿದ್ದರು.

೧೯೪೮ ರಲ್ಲಿ ಚಿಕ್ಕೋಡಿ ತಾಲೂಕಿನಲ್ಲಿ ಸಮಾಜವಾದದ ಅಲೆ ಬೀಸಿತು. ೧೯೪೮ರ ಎಪ್ರಿಲ್ ತಿಂಗಳಿನಲ್ಲಿ ಕಾಂಗ್ರೆಸ್ಸಿನ ಕಿಸಾನ್ ಸಭೆಯ ಮೊದಲ ಪರಿಷತ್ತು ಎಕ್ಸಂಬಾದಲ್ಲಿ ಸಾಂಗವಾಗಿತ್ತು."ಊಳುವನೆ ಹೊಲದೊಡೆಯ" ಎಂಬ ಕಾಂಗ್ರೆಸ್ಸಿನ ವಿಚಾರ ಬಿರುಸಿನಿಂದ ಪ್ರಚಾರಗೊಂಡು ಹಳ್ಳಿ ಹಳ್ಳಿಗೆ ತಲುಪುವಂತಾಗಿತ್ತು.

ರಾಷ್ಟ್ರದ ವಿಚಾರವಂತ ನಾಯಕರಲ್ಲಿ ಒಬ್ಬರಾದ ಡಾ.ರಾಮ ಮನೋಹರ ಲೋಹಿಯಾ ಹಾಗು ಮುಂದೆ ಲೋಕನಾಯಕರೆಂದು ಪ್ರಸಿದ್ದ ಪಡೆದ ಜಯಪ್ರಕಾಶ ನಾರಾಯಣರು ಚಿಕ್ಕೋಡಿಗೆ ಭೇಟ್ಟಿ ಕೊಟ್ಟ ಪ್ರಮುಖ ರಾಷ್ಟ್ರನಾಯಕರು. ಇವರೆಲ್ಲರ ವಿಚಾರದ ಪ್ರಭಾವ ಈ ಭಾಗದ ತರುಣ ಕಾರ್ಯಕರ್ತರ ಮೇಲೆ ಆಗದೆ ಹೋಗಲಿಲ್ಲ. ೧೯೫೭ ರಲ್ಲಿ ನಡೆದ ಲೋಕಸಭೆ ಹಾಗೂ ವಿಧಾನ ಸಭೆಯ ಚುನಾವಣೆಯಲ್ಲಿ ಒಂದು ಐತಿಹಾಸಿಕ ತೀರ್ಪು ದೊರೆಯಿತು. ವಕೀಲ ವೃತ್ತಿ ಕೈಕೊಂಡು ಅದೇ ಆಗ ಚಿಕ್ಕೋಡಿಗೆ ಬಂದ ದತ್ತಾ ಅಪ್ಪಾ ಕಟ್ಟಿಯವರು ಚಿಕ್ಕೋಡಿ ಲೋಕಸಭಾ ಕ್ಷೇತ್ರದಿಂದ Republican Party of India ದ ಅಭ್ಯರ್ಥಿಯಾಗಿ ಮೀಸಲು ಅಲ್ಲದ ಕ್ಷೇತ್ರದಿಂದ ಗೆದ್ದು ಭಾರತದಲ್ಲಿ ದಾಖಲೆ ನಿರ್ಮಿಸಿದರು. ಚಿಕ್ಕೋಡಿ ಹಾಗೂ ಸದಲಗಾ ಕ್ಷೇತ್ರಗಳಿಂದ ಕಾಂಗ್ರೆಸ್ಸಿನ ಶ್ರೀ ಕೋತಾವಳಿ ಹಾಗೂ ಬೇಡಕಿಹಾಳದ ಸಿದಗೌಡಾ ಎಸ್. ಪಾಟೀಲರು ವಿಜಯಿಯಾದರು. ಆದರೆ ಚಿಕ್ಕೋಡಿ ತಾಲುಕಿನ ಮರಾಠಿ ಭಾಷಿಕ ಊರುಗಳನ್ನು ಮುಂಬೈ ಪ್ರಾಂತದಲ್ಲಿ ವಿಲೀನಗೊಳಿಸುವ ಉದ್ದೇಶದಿಂದ ಜನ್ಮವೆತ್ತಿದ ಮಹಾರಾಷ್ಟ್ರ ಏಕೀಕರಣ ಸಮಿತಿಯ ಉಮೇದುವಾರ ಬಿ.ಡಿ. ನಾಯಕರು ನಿಪ್ಪಾಣಿ ಕ್ಷೇತ್ರದಿಂದ ವಿಜಯಿಯಾದರು.

೧೯೬೭ ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಭ್ಯರ್ಥಿಯು ಪರಾಭವಗೊಂಡರು. ೧೯೬೪ ರಲ್ಲಿ ಈ ಹೊತ್ತಿಗೆ ಚಿಕ್ಕೋಡಿ ವಿಧಾನಸಭಾ ಮತ್ತು ಲೋಕಸಭಾ ಸ್ಥಾನಗಳಿಗೆ ಮೀಸಲು ಕ್ಷೇತ್ರಗಳಿದ್ದವು. Republic Party of India ದ ಕಾಂಗ್ರೆಸ್ಸಿನ ಉಮೇದವಾರರಾದ ಬಿ.ಶಂಕರಾನಂದರವರ ಆರಿಸಿ ಬಂದರು ೧೯೭೭ ರಲ್ಲಿ ಪುನಃ ಬಿ.ಶಂಕರನಾನಂದರವರು ಆಯ್ಕೆಯಾದರು.

ನಿಪ್ಪಾಣಿ ಕೊಲ್ಹಾಪೂರ ರಾಷ್ಟ್ರೀಯ ಹೆದ್ದಾರಿಯ ಮೇಲೆ ರೈತರು ೧೯೮೧ ರಲ್ಲಿ ದೊಡ್ಡ ಪ್ರಮಾಣದಲ್ಲಿ ರಾಸ್ತಾರೋಕೋ ಚಳುವಳಿ ನಡೆಸಿದರು. ತಾವು ಬೆಳೆಯುವ ತಂಬಾಕು ಇನ್ನಿತರ ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕೆಂಬುವದು ಅವರ ಬೇಡಿಕೆಯಾಗಿತ್ತು. ೧೯೯೦ ರ ದಶಕದಲ್ಲಿ ಶ್ರೀ ಪ್ರಭಾಕರ ಕೋರೆ ಅವರು ಕಾಂಗ್ರೇಸ್ಸಿನ ತರುಣ ಕಾರ್ಯಕರ್ತರಾಗಿ ಹೊರಹೊಮ್ಮಿದರು. ಸಾಮಾಜಕ ರಾಜಕೀಯ ಹಾಗೂ ಸಹಕಾರಿ ರಂಗಗಳಲ್ಲಿ ತಮ್ಮ ಮುತ್ಸದ್ದಿತನದಿಂದ ಅನನ್ಯವಾದುದನ್ನು ಸಾಧಿಸಿದರು. ಭಾರತದ ಪ್ರಧಾನಿ ರಾಜೀವ ಗಾಂಧಿ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಅವರು ಈ ಭಾಗದ ಜನತೆಗಾಗಿ ಶ್ರಮಿಸುತ್ತಿದ್ದಾರೆ. ಇತ್ತಿತ್ತಲಾಗಿ ಭಾರತೀಯ ಜನತಾ ಪಕ್ಷದೆಡೆಗೆ ಜನರು ಒಲವು ತೋರುತ್ತಿದ್ದಾರೆ. ಆದರೆ ಇಂದಿನ ತರುಣ ಪೀಳಿಗೆ ರಾಜಕೀಯದ ಬಗ್ಗೆ ಆಸಕ್ತಿಯನ್ನು ಹೊಂದಿಲ್ಲ.

೪.೬. ಸಾಹಿತ್ಯ ಪರಂಪರೆ

ಕರ್ನಾಟಕ ಗಡಿನಾಡಿನ ತಾಲೂಕು ಚಿಕ್ಕೋಡಿ. ಈ ತಾಲೂಕಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಇಲ್ಲಿಯ ನೆಲ, ಜಲ, ಪರಿಸರದ ಗುಣಕ್ಕೆ ಜನರ ನಡೆ, ನುಡಿ, ಆಚಾರ, ವಿಚಾರಕ್ಕೆ ತನ್ನದೇ ಇತಿಹಾಸವಿದೆ. ಸುಮಾರು ೫ ಲಕ್ಷ ಜನಸಂಖ್ಯೆಯುಳ್ಳ ಮತ್ತು ೧೪೧ ಹಳ್ಳಿಗಳನ್ನು ಒಳಗೊಂಡಿದೆ. ಈ ತಾಲೂಕಿನ ವಿಸ್ತೀರ್ಣ ಸುಮಾರು ೮೪೦ ಚೌರಸ್ ಮೈಲುಗಳಿವೆ.

ಕನ್ನಡ ಭಾಷೆಗೆ ಕರ್ನಾಟಕ ಸಂಸ್ಕೃತಿಗೆ ಪ್ರಾಚಿನತೆಯಿದೆ. ಭವ್ಯ ಪರಂಪರೆಯಿದೆ. ಅದರಲ್ಲಿ ಚಿಕ್ಕೋಡಿ ತಾಲೂಕಿನವರ ದಟ್ಟವಾದ ಗಟ್ಟಿಯಾದ ಹೆಜ್ಜೆಗಳನ್ನು ಸ್ಪಷ್ಟವಾಗಿ ಖಚಿತವಾಗಿ ಗುರುತಿಸುವದು ಕಠಿಣವಾದರೂ ಲಭ್ಯವಾದ ಮಾಹಿತಿಯಿಂದ ಒಂದು ಮಿತಿಯಲ್ಲಿ ಊಹೆಮಾಡಬಹುದು.

ಕರ್ಣಪಾರ್ಯ ನೇಮಿನಾಥ ಪುರಾಣವು ಈ ಪ್ರದೇಶದಲ್ಲಿ ರಚನೆಗೊಂಡ ಪ್ರಾಚೀನ ಕೃತಿಯೆಂದು ಹೇಳುವರು. ಇದರ ಕಾಲ ೧೨ನೇ ಶತಮಾನ, ೧೯ನೇ ಶತಮಾನದಲ್ಲಿ ದೇವೇಂದ್ರ ಇವರು ಕನ್ನಡ ಮರಾಠಿ ಭಾಷೆಯಲ್ಲಿ ನಾಟಕಗಳನ್ನು ಮತ್ತು ಲಾವಣಿಗಳನ್ನು ರಚಿಸಿದ್ದರು. ಚಿಕ್ಕೋಡಿಯ ಶಿವಲಿಂಗ ಸ್ವಾಮಿಗಳು ನಾಟಕವನ್ನು ರಚಿಸಿ ಪ್ರಯೋಗದ ಉಲ್ಲೇಖವು ನಮಗೆ ಸಿಗುವದು. ಶಿವಲಿಂಗ ಸ್ವಾಮಿಗಳ ಕಿರಿಯ ಸಹೋದರ ಬಾಬಯ್ಯನವರು ಕೂಡ ಒಳ್ಳೆಯ ಕಲಾವಿದರು.

ಮೂಲತಃ ಕಬ್ಬೂರಿನವರಾದ ಆನಂದ ಕಲ್ಲೋಳ ಅವರು ಹಾಸ್ಯ ಲೇಖಕರೆಂದು ಗುರುತಿಸಲ್ಪಟ್ಟವರು. ಇವರ "ಹಗರಣ" ಕೃತಿಗೆ ಅಕಾಡಮಿ ಪ್ರಶಸ್ತಿ ಸಿಕ್ಕಿದೆ. ಇವರ ಹಾಸ್ಯಲೇಖನಗಳೆಂದರೆ ಕನ್ನಡ ವಾರ ಪತ್ರಿಕೆ, ಮಾಸ ಪತ್ರಿಕೆ ಎಂದರೆ ತಪ್ಪಾಗಲಾರದು. ಹಾಸ್ಯಲೇಖನಕ್ಕಾಗಿ ಪ್ರಬಂಧಕ್ಕಾಗಿ ಲೇಖನಿಯನ್ನು ಮೀಸಲಿಟ್ಟ ಇವರ ಕೃತಿಗಳಲ್ಲಿ "ಕಂಡಲ್ಲಿ ಗುಂಡು" "ನವ ಕರ್ನಾಟಕ" ಇವು ಮೈಲುಗಲ್ಲುಗಳು.

ಶ್ರೀಯುತರಾದ ಬಿ.ಎ. ಸನದಿ ಭುಜೆಂದ್ರ ಮಹಿಷವಾಡಿ, ಶ್ರೀಕಾಂತ ಖೋತ, ಬಾಳು ಉಪಾಧ್ಯ, ಬ.ಗಿ. ಯಲ್ಲಟ್ಟಿ ಈ ನವೋದಯ ಕವಿಗಳ 'ಐದಳ' ಮಲ್ಲಿಗೆಯಿಂದ ಪ್ರಾರಂಭವಾದ ಶಮನೇವಾಡಿಯ "ಸ್ನೇಹ ಪ್ರಕಾಶನವು" ಈ ತಾಲೂಕಿನಲ್ಲಿ ಮಹತ್ತರ ಕಾರ್ಯವನ್ನು ಮಾಡಿದೆ.

ಮರಾಠಿಯಲ್ಲಿ ಕತೆ-ಕವನ ಕಾದಂಬರಿಗಳನ್ನು ಬರೆದ 'ಗಿರಿಸುತರು' ಮಹಾದೇವ ಮೋರೆ, ಪ್ರೊ. ಅಜಿತ ಮಾನೆ ಕೊರಾರಿ, ಅಜೀತ ಸಗರೆ, ಕೆ.ಬಿ. ಮರಾಠೆ, ಡಿ.ಎನ್.ಜೋಶಿ, ಪ್ರೋ.ಇ.ಆರ್.ದೇಶಪಾಂಡೆ ಮುಂತಾದವರು.

ನಾವು ಗಮನಿಸಬೇಕಾದುದು ಮರಾಠಿಯ ಪ್ರಸಿದ್ಧ ಕತೆಗಾರ ಜಿ.ಎ. ಕುಲಕರ್ಣಿಯವರನ್ನು ಯಕ್ಸಂಬಾದ "ಜಿ.ಎ." ಧಾರವಾಡದಲ್ಲಿದ್ದುಕೊಂಡೆ ಈ ಭಾಗದ ಪರಿಸರವನ್ನು ತಮ್ಮ ಕಥೆಗಳಲ್ಲಿ ಹಿಡಿದಿಟ್ಟಿದ್ದಾರೆ. ಕುಲಕರ್ಣಿಯವರು ಈ ಪ್ರದೇಶದ ಅತ್ಯಂತ ಶ್ರೇಷ್ಠ ದರ್ಜೆಯ ಲೇಖಕರು ಎಂದು ಪ್ರೊ.ಚಂದ್ರಕಾಂತ ಪೋಕಳೆ ಅವರು ಹೇಳಿದ ಮಾತು ಅಕ್ಷರಶಃ ಸತ್ಯ.

ಯಕ್ಸಂಬಿಯ "ಗೆಳೆಯರ ಬಳಗದ" ಡಾ॥ ಅನಿಲ ಕಮತಿಯವರು ವೃತ್ತಿಯಿಂದ ಡಾಕ್ಟರರಾದರೂ ಪ್ರವೃತ್ತಿಯಿಂದ ಸಾಹಿತಿಗಳು. ಕನ್ನಡ ನಾಡು-ನುಡಿ ಅದರಲ್ಲೂ ಗಡಿನಾಡಿನ ಸಮಸ್ಯೆಗಳ ಬಗ್ಗೆ ಹಾಗೂ ವೈಜ್ಞಾನಿಕ ವಿಷಯಗಳ ಬಗ್ಗೆ ಲೇಖನಗಳನ್ನು ನಾಡಿನ ಪ್ರಸಿದ್ಧ ನಿಯತಕಾಲಿಕೆಗಳಲ್ಲಿ ಬರೆದು ಕನ್ನಡಿಗರ ಗಮನ ಸೇಳೆದಿದ್ದಾರೆ. ಗಡಿ ಪ್ರದೇಶದಲ್ಲಿ ಕನ್ನಡ ಉಸಿರು ಜಿವಂತವಾಗಿರಬೇಕೆಂದು ಹಂಬಲವುಳ್ಳ ಇವರು ಶ್ರೇಷ್ಠ ವಾಗ್ಮಿಗಳೂ ಹೌದು. ಮನಮೋಹಕವಾದ ಶೈಲಿಯಿಂದ ಕಥೆಗಳನ್ನು ಬರೆಯುತ್ತ ಬಂದಿರುವ ಪ್ರೊ.ಮದನ ದೊಡ್ಡಮನಿ ಅವರಿಂದ ಕಥಾ ಸಂಕಲನ ಪ್ರಕಟಗೊಳ್ಳಬೇಕಾಗಿದೆ.

ಚಿಕ್ಕೋಡಿ ತಾಲೂಕು ಕನ್ನಡ ಸಾಹಿತ್ಯಕ್ಕೆ ಅನೇಕ ಮಹತ್ವದ ಸಮರ್ಥ ಅನುವಾದಕರನ್ನು ಕೊಟ್ಟಿದೆ. ಅದರಲ್ಲಿ ಪ್ರೊ.ಚಂದ್ರಕಾಂತ ಪೋಕಳೆ, ಉಮಾ ಕುಲಕರ್ಣಿ, ಪ್ರೊ.ಡಿ.ಎಸ್. ಚೌಗಲೆ ಪ್ರಮುಖರು. ಪ್ರೊ.ಪೋಕಳೆ ಅವರು ಮರಾಠಿಯ ಪ್ರಸಿದ್ಧ ಕಥೆಗಳನ್ನು "ಚಕ್ರ" "ರಣಾಂಗಣ" ಉಚಲ್ಯಾ, "ಭೂಮಿಗೆ ವಿದಾಯ" ದಂಥ ಕಾದಂಬರಿ ಹಾಗೂ ಆತ್ಮಕಥೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬೇಡಕಿಹಾಳದ ಕಿರಿಯ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಗಡಿನಾಡಿನ ಕನ್ನಡ ಸಂಘ ಸಂಸ್ಥೆಗಳ ಚೇತನ ಶಕ್ತಿಯಾಗಿ ಕನ್ನಡ ಕಂಪು ಸೂಸುವಲ್ಲಿ ಮಹತ್ವದ ಪಾತ್ರವಹಿಸಿದ್ದಾರೆ.

ಇತ್ತೀಚೆಗೆ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವ ಸಂಘಗಳಲ್ಲಿ "ಗೆಳೆಯರ ಬಳಗ" ಗಡಿನಾಡ ಸಾಹಿತ್ಯ ಸಂಘ "ಸಿರಿಗನ್ನಡ ಬಳಗ" "ಸಾಹಿತ್ಯ ಮಿತ್ರವೃಂದ" ಅಲ್ಲದೆ "ಅಕ್ಕನ ಬಳಗ" "ಮಹಿಳಾ ಮಂಡಳಿ" ಇವು ಪ್ರಮುಖವೆಂದು ಹೇಳಬಹುದು.

ಉತ್ತರ ಕರ್ನಾಟಕದ ರಂಗ ಪ್ರಪಂಚಕ್ಕೆ ಚಿಕ್ಕೋಡಿ ಶಿವಲಿಂಗ ಸ್ವಾಮಿಗಳ ಕಾಣಿಕೆ ಸಣ್ಣದಲ್ಲ. ೧೯೪೫ ರಲ್ಲಿ ತಮ್ಮದೇಯಾದ 'ಶಿವಲಿಂಗೇಶ್ವರ ನಾಟ್ಯ ಸಂಘ'ವನ್ನು ಕಟ್ಟಿಕೊಂಡು ಐತಿಹಾಸಿಕ ಸಾಮಾಜಿಕ ನಾಟಕಗಳನ್ನಾಡಿ ಅನೇಕ ಕಲಾವಿದರನ್ನು ಬೆಳಕಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ.

ಚಿಕ್ಕೋಡಿಯ ಭಗವಂತರಾವ 'ದಾಸ ಸಾಹಿತ್ಯ'ಕ್ಕೆ ಕಾಡಾಪೂರದ ಶ್ರೀ ಸಿದ್ದಪ್ಪ ಸವದತ್ತಿ ಅವರು 'ಲಾವಣಿ' ಕ್ಷೇತ್ರಕ್ಕೆ ಅನುಪಮವಾದ ಕಾಣಿಕೆ ಸಲ್ಲಿಸಿರುವರು.

ಚಿಂಚಣಿಯ ಮ.ನಿ.ಪ್ರ. ಅಲ್ಲಮಪ್ರಭುದೇವರು ಕವಿಗಳಾಗಿ ಕಲಾವಿದರಾಗಿ ಹಲವಾರು ತರುಣರನ್ನು ಪ್ರೋತ್ಸಾಹಿಸುತ್ತ ಶ್ರೀ ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆಯ ಮುಖಾಂತರ ಅನೇಕ ಕಾರ್ಯಗಳನ್ನು ಮಾಡುತ್ತಿದ್ದಾರೆ.

೪.೭. ಶಾಸನಗಳು

ಭರತ ಖಂಡದಲ್ಲಿ ಅಸಂಖ್ಯಾತವಾದ ಶಾಸನಗಳು ದೊರಕುತ್ತವೆ. ಅದರಲ್ಲೂ ಕರ್ನಾಟಕದಲ್ಲಿ ಸಿಗುವಷ್ಟು ಶಾಸನಗಳು ಭಾರತದ ಬೇರಾವ ಪ್ರಾಂತದಲ್ಲೂ ಸಿಗುವುದಿಲ್ಲವೆಂದು ವಿದ್ವಾಂಸರ ಅಭಿಪ್ರಾಯ.ಇಲ್ಲಿ ಶಾಸನಗಳಿರದ ಹಳ್ಳಿಗಳಲ್ಲಿ ಅವುಗಳನ್ನು ಅನಾದರಿಸಿದ ಹಳ್ಳಿಗಳಲ್ಲಿ ಕಾಲ ಕಳೆದಂತೆ ಲಿಪಿ ಮತ್ತು ಭಾಷೆಗಳು ಬೇರೆಯಾದಂತೆ, ಕಾಲದ ಕಿಮಟ ಅವುಗಳಿಗೆ ಹಿಡಿದು, ಅವುಗಳಿಗೆ ಪ್ರಾಚೀನತೆಯ ವಿಚಿತ್ರ ವೇಷ ಬಂದಂತೆ ಅವುಗಳ ಸುತ್ತ ಜನರ ಮನಸ್ಸು ಮೂಢನಂಬಿಕೆಗಳ ಕಥೆಯನ್ನೇ ಕಟ್ಟಿತು. ತಮಗೂ ಅವುಗಳಿಗೂ ಸಂಬಂಧವಿಲ್ಲವೆಂದು ಕೆಲವು ಕಡೆ ಜನರು ಅನಾದರಿಸಿದರು.

ನಮ್ಮ ನಾಡಿನ ಜನಜೀವನವು ಶಾಸನಗಳಲ್ಲಿ ಅಭಿವ್ಯಕ್ತಗೊಂಡಿರುವಂತೆ ಪ್ರಾಯಶಃ ಇನ್ನೆಲ್ಲೂ ವ್ಯಕ್ತವಾಗಿಲ್ಲ. ಶಾಸನಗಳಿಂದ ರಾಜರ ಇತಿಹಾಸವನ್ನು ಅವರು ಪರಸ್ಪರ ನಡೆಯಿಸಿದ ಘೋರಯುದ್ಧಗಳನ್ನು ಅವರ ಕಾಲ್ಪನಿಕ ವಿಷಯಗಳನ್ನು ಮಾತ್ರ ಅರಿಯಬಹುದೇ ಹೊರತು ಆ ಕಾಲದ ಒಳ ಆಡಳಿತ ವ್ಯಾಪಾರ ಧಾರ್ಮಿಕ ಪರಿವರ್ತನೆ ಈ ವಿಷಯಗಳಲ್ಲಿ ಶಾಸನಗಳಿಂದ ಉಪಯೋಗ ಇಲ್ಲವೆಂದು ಒಂದಿಬ್ಬರು ವಿದ್ವಾಂಸರು ಅಭಿಪ್ರಾಯ ಪಟ್ಟರೆ, ಕೆಲವು ವಿದ್ವಾಂಸರು ಜನರ ರೀತಿ ನೀತಿ, ನಡುವಳಿಕೆಗಳು ಮತತ್ವಗಳು, ಅವರ ಕಲೆಗಳು ಈ ವಿಷಯಗಳನ್ನು ತಿಳಿಯಬಹುದೇ ಹೊರತು ಇಲ್ಲಿ ಆಳಿದ ರಾಜರು, ಅವರಿಗೆ ಸಂಬಂಧಿಸಿದ ಯುದ್ಧ ಸಂಗತಿಗಳು ಬೇರೆ ಬೇರೆ ರಾಜನೀತಿಗಳ ಪರಿಣಾಮಗಳು ಈ ವಿಷಯಗಳನ್ನು ಶಾಸನಗಳಿಂದ ಪಡೆಯಬೇಕೆಂಬ ಅಪೇಕ್ಷೆ ನಿರೀಕ್ಷೆಗೆ ಮೀರಿದುದ, ಶಾಸನಗಳು ಯಾವ ವಿಷಯವನ್ನು ಪ್ರಧಾನವಾಗಿ ನಿರೂಪಿಸಲು ಹೊರಟಿರುತ್ತವೆಯೋ ಅವುಗಳಿಗಿಂತ, ಅನುದ್ದೇಶ ಪೂರ್ವಕವಾಗಿಯೋ ಪ್ರಾಸಂಗಿಕವಾಗಿಯೋ ಅವುಗಳ ಕೊಡುವ ವಿವರಗಳು ಅಮೂಲ್ಯವಾಗಿರುತ್ತವೆ. ಉದಾಹರಣೆಗೆ ಯಾವುದೋ ದಾನದ ವಿಷಯವನ್ನು ಹೇಳಲು ಹೊರಟ ಶಾಸನವು ಆ ಕಾಲದ ಬೇರೆ ಬೇರೆ ತೆರಿಗೆಗಳು ಅವುಗಳನ್ನು ಸಂಗ್ರಹಿಸುತ್ತಿದ್ದ ಅಧಿಕಾರಿಗಳು, ವ್ಯಾಪಾರ, ಊರು, ಅಗ್ರಹಾರಗಳ ಆಡಳಿತ, ಆ ಕಾಲದ ಧಾರ್ಮಿಕ ಮನೋಭಾವ ಇತ್ಯಾದಿ ವಿಷಯಗಳನ್ನು ತಿಳಿಸಬಹುದು.

ಶಾಸನಗಳು ಕನ್ನಡ ಸಾಹಿತ್ಯದ ತಲಕಾವೇರಿ, ಕನ್ನಡ ಕಾವ್ಯದ ಜಿನುಗು, ಮೊಟ್ಟಮೊದಲು ಕಂಡು ಬರುವುದು ಶಾಸನಗಳಲ್ಲಿ. ಪಂಪನ ಕಾವ್ಯಗಳಿಗಿಂತ ಹಿಂದಿನ ಕಾವ್ಯವಾಗಲಿ ನೃಪತುಂಗನ ಕವಿರಾಜ ಮಾರ್ಗಕ್ಕಿಂತ ಹಿಂದನ ಗ್ರಂಥ ಇನ್ನೂ ನಮಗೆ ದೊರೆತಿಲ್ಲ. "ಕವಿರಾಜಮಾರ್ಗವು" ಕನ್ನಡದ ಅಲಂಕಾರ ಗ್ರಂಥವಾಗಿ ಹೊರಬಂದ ಬಳಿಕ ಅದಕ್ಕಿಂತಲೂ ಹೆಚ್ಚಾಗಿ ಪಂಪನ ಕಾವ್ಯಗಳು ಹೊರಬಂದು ಪ್ರಚಾರವಾದ ಮೇಲೆ ಶಾಸನಗಳು ಹೆಚ್ಚು ಹೆಚ್ಚು ಪ್ರೌಢವಾಗತೊಡಗಿದವು. ಮುಂದೆ ರನ್ನ 'ಲಕ್ಕುಂಡಿಯ ಅತ್ತಿಮಬ್ಬೆ' ಶಾಸನವನ್ನು ಇವನೇ ಬರೆದಿರಬಹುದೆಂದು ಕೆಲವರು ಊಹಿಸಿದ್ದಾರೆ. ಶಾಂತಿನಾಥ ಜನ್ನ ಮುಂತಾದ ಪ್ರಸಿದ್ಧ ಕನ್ನಡ ಕವಿಗಳು ಶಾಸನಗಳನ್ನು ಬರೆದರು. ಶಾಸನಗಳಲ್ಲಿ ಉಳಿದಿರುವ ಅನೇಕ ಪ್ರೌಢ ಕವಿಗಳೂ ಉಂಟು.

ಚಿಕ್ಕೋಡಿ ತಾಲೂಕಿನಲ್ಲಿ ಸ್ತವನಿಧಿ, ಯಕ್ಸಂಬಾ, ಕರೋಶಿ, ಬೇಡಕಿಹಾಳ, ಕರೋಶಿ, ಚಿಂಚಣಿಗಳಲ್ಲಿ ಶಾಸನಗಳು ಕಂಡುಬರುತ್ತವೆ. ಆದರೆ ಕೆಲವು ಶಾಸನಗಳ ಮೇಲೆ ಜನರು ಎಣ್ಣೆ ಕುಂಕುಮ ಹಚ್ಚಿ ಅವುಗಳನ್ನು ಹಾಳುಗೆಡವಿದ್ದಾರೆ. ಆದರೆ ಸ್ತವನಿಧಿ ಮತ್ತು ಯಕ್ಸಂಬಾ ಶಾಸನಗಳ ಅಧ್ಯಯನ ಮಾಡಲು ಯೋಗ್ಯವಾಗಿವೆ. ಯಕ್ಸಂಬಾ ಶಾಸನವು ರಟ್ಟರ ಕಾಲದಲ್ಲಿದ್ದತೆಂದು ತಿಳಿದು ಬರುತ್ತದೆ.

ಯಕ್ಸಂಬಿ ಶಾಸನ :

"ಕಲ್ಲಲ್ಲ ಅವು ನಮ್ಮ ಸಂಸ್ಕೃತಿಯ ಸೊಲ್ಲು" ಎನ್ನುವಂತೆ ನಾಡಿನ ಸಂಸ್ಕೃತಿಯ ಪ್ರಮಾಣ ಭೂತವಾದ ನಿರ್ಮಾಣಕ್ಕೆ ಅತೀ ಪ್ರಮುಖವಾದ ಆಧಾರಗಳೆಂದರೆ ಶಾಸನಗಳೆನ್ನಬಹಬುದು. ಇವು ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಮೂಕ ಸಾಕ್ಷಿಗಳು. ಕ್ರಿ.ಶಪೂ ೨೦೦ರ ಅಶೋಕನ ಶಾಸನಗಳನ್ನು ಮೊದಲ್ಗೊಂಡು ಪ್ರಾಕೃತ, ಸಂಸ್ಕೃತ, ಕನ್ನಡ, ತೆಲಗು, ತಮಿಳು ಭಾಷೆಗಳಲ್ಲಿ ಬರೆಯಲಾಗಿದೆ. ಅವುಗಳ ಅಧ್ಯಯನವು ಅರಣ್ಯದಂತೆ ವೈವಿಧ್ಯನಯ ನಭೋಮಂಡಲದಂತೆ ಕೂತುಹಲಮಯವಾಗಿವೆ.

ಅಂಥದರಲ್ಲಿ ಚಿಕ್ಕೋಡಿ ತಾಲೂಕಿನ ಶಾಸನಗಳ ಅಧ್ಯಯನ ಮಾಡುವದೆಂದರೆ ಜೈನಧರ್ಮದ ಇತಿಹಾಸ ಹಾಗೂ ಧರ್ಮದ ಅಧ್ಯಯನ ಮಾಡಿದಂತೆ ಈ ತಾಲೂಕಿನ ಬಹುತೇಕ ಹಳ್ಳಿಗಳೂ ಕೂಡ ತಮ್ಮ ಇತಿಹಾಸಗಳನ್ನು ಹೇಳುತ್ತವೆ. ಎಂಬುದಕ್ಕೆ ಕೆಲ ಉದಾಹರಣೆ ಕಬ್ಬಲೂರು-ಕಬ್ಬ-ಕಾವ್ಯ, ಕಾವ್ಯದ ಊರು, ಅಂಕದಲ್ಲಿ ಅಂಕನ ಹಳ್ಳಿ ಅಂಕ ಎನ್ನುವ ಕ್ರಿಶ ೧೦೪೮ ರಲ್ಲಿ ಒಂದನೇ ಸೋಮೇಶ್ವರನ ಸಾಮಂತ ರಟ್ಟರ ಮಹಾಮಂಡಳಿಕ "ಅಂಕ" ನನ್ನು ನೆನಪಿಸುತ್ತಿದೆ. ಜೈನಾಪೂರ, ಜೈನರ+ಪುರ ಹೆಸರೇ ಹೆಳುವಂತೆ ಜೈನರ ಊರು. ಅಕ್ಕೋಳ ಅಕ್ಕನ+ಕೊಳ್ಳ ಪಟ್ಟಣಕುಡಿ ಏಳು ಹಳ್ಳಿಗಳಲ್ಲಿ ಒಂದು. ಏಳು ಹಳ್ಳಿಗಳ ಸೀಮೆ ಒಂದು ಸ್ಥಳದಲ್ಲಿ ಕೂಡಿದ್ದಕ್ಕೆ ಏಳು ಮುಖದ ಲಕ್ಷ್ಮೀದೇವಿ ಇದೆ. ಕುರವಲ್ಲಿ ರಟ್ಟರ

ಆಡಳಿತದ ೧೪ ವಿಭಾಗಗಳಲ್ಲಿ ಒಂದು ಕುರವಲ್ಲಿ ಕಂಪನ ೧೫೦ ಹಳ್ಳಿಗಳನ್ನು ಹೊಂದಿದ ಭಾಗ(ಇಂದಿನ ಕುರಲಿ) ಭೋಜ ಶಿಲಾಹಾರ ವಂಶದ ಭೋಜರಾಜನ ಹೆಸರು ಸ್ತವನಿಧಿ-ತೀರದ ಭಂಡಾರ ಯಕ್ಕಸಂಬುಗೆ-ಆದಿನಾಥ ತೀರ್ಥಂಕರರ ಪ್ರಸಿದ್ಧ ಬಸದಿ ಇದೆ.

ಮಾಸ್ತಿಕಲ್ಲು :

ಸಹಗಮನವನ್ನು ಮಾಡಿ ಮಹಾಸತಿಯರಾದವರ ಸ್ಮಾರಕವಾಗಿ ನಿಲ್ಲಿಸಿದ ಕಲ್ಲುಗಳೇ ಮಾಸ್ತಿಕಲ್ಲುಗಳು. ಪ್ರಸ್ತುತ ಸ್ತವನಿಧಿಯ ಪದ್ಮಾವತಿ ದೇವಾಲಯದ ಅನತಿ ದೂರದಲ್ಲಿ ಮೂರು ಅಡಿ ಎತ್ತರದ ಮಾಸ್ತಿಕಲ್ಲು ಇದೆ. ಸಹಗಮನಕ್ಕೆ ಸಂಬಂದಿಸಿದ ಈ ಶಿಲ್ಪ ೧೦-೧೧ನೇ ಶತಮಾನದಾಗಿದ್ದು ಹೊಂಡ ಹಾಳಿಯ ಪಕ್ಕಕ್ಕೆ ನಿಲ್ಲಿಸಲಾಗಿದೆ. ಈ ಮಾಸ್ತಿ ಕಲ್ಲಿನ ಪ್ರಧಾನ ವೈಶಿಷ್ಟ್ಯವೆಂದರೆ ಎರಡು ತೋಳನ್ನು ಹೊಂದಿ ಅವು ಈ ತೋಳುಗಳು ಇಬ್ಬರು ಸತಿಯರು ಏಕಕಾಲಕ್ಕೆ ಚಿತೆ ಏರಿದ ಗುರುತುಗಳಾಗಿರುವದರಿಂದ ಈ ಶಿಲ್ಪವನ್ನು ಇರ್ಕೈ ಮಾಸ್ತಿಕಲ್ಲು ಎನ್ನುತ್ತಾರೆ. ಮೂರು ಹಂತಗಳ ವಿವರ ನೀಡುವ ಈ ಇರ್ಕೈವಾಸ್ತುಶಿಲ್ಪ ಶಾಸನ ಹೊಂದಿದ್ದರೂ ಪ್ರತಿಭಾನ್ವಿತ ಶಿಲ್ಪಿಯೊಬ್ಬನ ಸಮರ್ಥಕೃತಿ ಇದಾಗಿದೆ.

ಶಿಲ್ಪಿ ಮೂರು ಹಂತಗಳಲ್ಲಿ ಮಹಾಸತಿಯರ ಸಹಗಮನದ ವಿವರಣೆಯನ್ನು ಕಂಡಿರಿಸಿದ್ದಾನೆ. ಮೊದಲ ಪಟ್ಟಿಕೆಯ ಎಡಮೂಲೆಯಲ್ಲಿ ಸ್ತ್ರೀಯರಿಬ್ಬರು(ಸವತಿಯರು) ಪರಸ್ಪರ ತಮ್ಮ ಕೈಗಳನ್ನು ಒಬ್ಬರನೊಬ್ಬರು ಹಿಡಿದುಕೊಂಡು ಅನ್ಯೋನ್ಯದಿಂದ ನಿಂತಿದ್ದಾರೆ. ಅದೇ ಪಟ್ಟಿಕೆಯ ಬಲಮೂಲೆಯಲ್ಲಿ ಪತಿ ಆಯುಧ(ಖಡ್ಗ) ಹಿಡಿದು ನಿಂತಿದ್ದಾನೆ. ಶಸ್ತ್ರಸಜ್ಜಿತವಾದ ಅವನ ಎದುರಾಳಿ ಬಿಲ್ಲನ್ನು ಎದೆಗೆ ಏರಿಸಿ ಅವನೆದೆಗೆ ಗುರಿಯಿಟ್ಟೊಡೆಯುತ್ತಿರುವ ದೃಶ್ಯ ಯುದ್ಧದ ಭೀಕರತೆಯನ್ನು ಬಿಂಬಿಸುವದು. ಎದುರಾಳಿಯ ಹಿಂದುಗಡೆ ಇಬ್ಬರು ಸ್ತ್ರೀಯರು ಬೆಚ್ಚಿಬಿದ್ದಿರುವ ವಿಗ್ರಹಗಳನ್ನು ಕೆತ್ತಿರುವುದರಿಂದ ಬಹುಶಃ ವೈರಿ ಸ್ತ್ರೀಯರನ್ನು ಅಪಹರಿಸುವ ಸಂದರ್ಭದಲ್ಲಿ ಅವರ ರಕ್ಷಣೆಗೆ ಬಂದ ವೀರ ಕಾದಾಡಿ ಬಿಡಿಸಿರಬಹುದೆನಿಸುತ್ತದೆ.

ಮಧ್ಯದ ಪಟ್ಟಿಕೆಯಲ್ಲೇ ಮೂವರು ದೇವಕನ್ಯೆಯರು ಕೈಯನ್ನು ಎತ್ತಿ ಪತಿ, ಪತ್ನಿಯರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಪತಿ ತನ್ನ ಸತಿಯರ ಮಧ್ಯೆ ಕೈಮುಗಿದು ಕುಳಿತಿರುವ ದೃಶ್ಯ ಮನೋಹರವಾಗಿದೆ. ಮೇಲಿನ ಹಂತದಲ್ಲಿ ಸತಿಯರು ಪತಿ ಜೊತೆ ಸ್ವರ್ಗ ಸೇರಿಸುವ ದೃಶ್ಯಗಳುಂಟು ಇಲ್ಲಿ ಮೂವರು ಕೈ ಮುಗಿದು ಭಕ್ತಿಯಿಂದ ಆಸೀನರಾಗಿರುವ ದೃಶ್ಯವನ್ನು ಶಿಲ್ಪಿ ಭಾವಪೂರ್ಣವಾಗಿ ಕಂಡಿರಿಸಿದ್ದಾನೆ. ಶಿಲ್ಪದ ಮೇಲೆ ಸೂರ್ಯ, ಚಂದ್ರರ ಚಿಹ್ನೆಗಳಿದ್ದು ಗೋಪುರದ ರಚನೆಯೂ ಇದೆ. ಜೊತೆಗೆ ಶುಭ ಚಿಹ್ನೆಗಳಾಗಿ ಶಿಲ್ಪಿ ಆಕಳು, ಕರುಗಳನ್ನು ಬಿಡಿಸಿದ್ದಾನೆ. ಶಿಲೆಯ ಎಡಬಲಕ್ಕೆ(ಯು) ಎತ್ತಿದ ತೋಳುಗಳನ್ನು ಕೆತ್ತಿದ್ದು ಬಳೆ. ತೋಳ್ಬಳೆಗಳಿಂದ ಅಲಂಕೃತಗೊಳಸಿದ್ದಾನೆ. ಒಟ್ಟಿನಲ್ಲಿ ಸತಿ-ಪತಿ ಸಮಾನಗುಣವುಳ್ಳ

ಸ್ಮಾರಕವಿದಾಗಿದ್ದು, ಶಿಲ್ಪಿಯು ಇದ್ದಕ್ಕಿದ್ದಂತೆ ಘಟನೆಯನ್ನು ಪ್ರತ್ಯಕ್ಷವಾಗಿ ಕಂಡರಿಸಿದಂತಿದೆ. ಈ ಶಿಲ್ಪ ನೋಡಿದರೆ ಮೃತನ ಪತ್ನಿಯರಿಬ್ಬರ ಸಮಾನ ಸ್ಥಾನ ಪಡೆದಿದ್ದರೆಂದು ತಿಳಿಯುತ್ತದೆ.ಇದರ ಮತ್ತೊಂದು ವೈಶಿಷ್ಟ್ಯವೆಂದರೆ ಇದು ವೀರನ ಹೋರಾಟ ಹಾಗೂ ಅವನ ಪತ್ನಿಯರು ಸತಿ ಹೋದುದರ ಎರಡೂ ಚಿತ್ರಣವನ್ನು ಕಾಲಕಾಲಕ್ಕೆ ನೀಡುತ್ತಿರುವುದು. ಒಟ್ಟಿನಲ್ಲಿ ಶಿಲ್ಪಿ ಇರ್ಕ್ಯೆ ಮಾಸ್ತಿಕಲ್ಲನ್ನು ರಚಿಸುವಲ್ಲಿ ವಿಶೇಷ ಯಶಸ್ಸು ಸಾಧಿಸಿದ್ದಾನೆ. ತೋಳುಗೈಗಳನ್ನು ಆಕರ್ಷಕವಾಗಿ ಬಿಡುವುದರಲ್ಲಿಯೂ ಅವನ ಗಣನೀಯ ಸಾಮರ್ಥ್ಯ ತೋರಿದ್ದಾನೆ. ಈಗ ಈ ಭಾಗದ ಅಪರೂಪದ ಮಾಸ್ತಿಶಿಲ್ಪಸ್ಮಾರಕ ಇದಾಗಿದೆ ಎಂದರೆ ತಪ್ಪಾಗಲಾರದು.

೪.೮. ಭಾಷೆ

ಯಾವುದೇ ಒಂದು ಪ್ರದೇಶದ ಭಾಷೆ ಆ ಪ್ರದೇಶದ ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಸಂಸ್ಕೃತಿಗೂ ಭಾಷೆಗೂ ನಿಕಟ ಸಂಬಂಧವಿದೆ. ಭಾಷೆ ಹುಟ್ಟು ಬೆಳವಣಿಗೆಗೆ ಸಂಸ್ಕೃತಿಯೇ ಮುಖ್ಯ. ಭಾಷೆ ಸಂಸ್ಕೃತಿಯ ವಿಕಾಸಕ್ಕೆ ಅನುಕೂಲಕರ ವಾತಾವರಣ ನಿರ್ಮಿಸುವ ಸಾಧ್ಯತೆ ಇದೆ. ಸಂಸ್ಕೃತಿ ಆಯಾಮಗಳಾದ ಭಾಷೆ ಹಾಗೂ ಧರ್ಮವನ್ನು ಮರಾಠಿ ಸಂಸ್ಕೃತಿ ಅರ್ಥಪೂರ್ಣವಾಗಿ ಬಳಸಿಕೊಂಡಿತು. ಅದು ಪ್ರಭಲವಾಗಿರಲು ಅದರಲ್ಲಿ ಬೆಳೆದುಬಂದಿರುವ ಪರಂಪರೆಯ ವಾರಸುತನವೇ ಕಾರಣ. "ಜ್ಞಾನೇಶ್ವರಿ" ಪಂಢರಾಪುರದ "ವಿಠ್ಠಲ" ಆಧ್ಯಾತ್ಮಿಕ ಶಕ್ತಿಯನ್ನು ಟಿಳಕರ "ಗಣಪತಿ" ರಾಜಕೀಯ ಜಾಗೃತಿಯನ್ನು ಜನಸಮುದಾಯದಲ್ಲಿ ಮೂಡಿಸಿತು. ಈ ಧಾರ್ಮಿಕ ಪರಂಪರೆ ಮರಾಠಿ ಸಂಸ್ಕೃತಿಯ ಬೆನ್ನುಲುಬಾಗಿ ನಿಂತಿತು. ಸಂತ ಸಾಹಿತ್ಯವಂತೂ ಇಡೀ ಮಹಾರಾಷ್ಟ್ರದಲ್ಲಿ ಏಕಮುಖಿಯಾಗಿ ಹರಿದು ಭಾಷಾ ಪ್ರಜ್ಞೆಗೆ ಸಂಸ್ಕೃತಿ ಪ್ರಜ್ಞೆಗೆ ಕಾರಣವಾಯಿತು. ಅಲ್ಲದೇ ಪೇಶ್ವೆಯವರ ಕಾಲದಲ್ಲಿ ಬೆಳಗಾವಿ ಪ್ರದೇಶಕ್ಕೆ ಬಂದ ಚಿತ್ಪಾವನ ಬ್ರಾಹ್ಮಣರ ಗುಂಪು ಮರಾಠಿ ಸಂಸ್ಕೃತಿಗೆ ಪೋಷಕ ವಾತಾವರಣ ನಿರ್ಮಿಸಿದ ಸಾಧ್ಯತೆಯೂ ಇದೆ.

ಚಿಕ್ಕೋಡಿಯಲ್ಲಿ ಕನ್ನಡ ಮತ್ತು ನಿಪ್ಪಾಣಿಯ ಗಡಿಭಾಗದಲ್ಲಿ ಮರಾಠಿ ಭಾಷೆ ಸಂಗಮಿಸಿದೆ. ಸಂಸ್ಕೃತಿಯ ಕೆಲವು ಸಮಾನ ಅಂಶಗಳನ್ನು ಇಲ್ಲಿ ಗುರುತಿಸಬಹುದು.ಇಲ್ಲಿಯ ಹೆಣ್ಣು ಮಕ್ಕಳನ್ನು ಮಹಾರಾಷ್ಟ್ರಕ್ಕೆ ಮದುವೆ ಮಾಡಿಕೊಡುವುದು ಹಾಗೂ ಅಲ್ಲಿಯ ಹೆಣ್ಣು ಮಕ್ಕಳನ್ನು ಇಲ್ಲಿ ಬರಮಾಡಿಕೊಳ್ಳುವುದು, ಅಂದರೆ ಕೊಡು ತೆಗೆದುಕೊಳ್ಳುವ ಒಂದು ಬಾಂಧವ್ಯ ಇಲ್ಲಿ ನಿರಂತರವಾಗಿ ಮುಂದುವರೆಯುತ್ತ ಬಂದಿದೆ.

ಅಧ್ಯಾಯ ಐದು

ಜಾತ್ರೆಗಳ ವರ್ಗೀಕರಣ

೫.೧ ಪುರುಷ ದೈವಗಳ ಜಾತ್ರೆಗಳು

೫.೨ ಸ್ತ್ರೀ ದೈವಗಳ ಜಾತ್ರೆಗಳು

೫.೩ ಸಾಧುಸಂತರ ಜಾತ್ರೆಗಳು (ಮಠಾಧೀಶ ಜಾತ್ರೆಗಳು)

೫.೪ ಮುಸ್ಲಿಂ ಜಾತ್ರೆಗಳು (ಉರುಸುಗಳು)

೫.೫ ಜೈನಧರ್ಮದ ಬಸದಿಗಳು ಮತ್ತು ಆಚರಣೆಗಳು

ಅಧ್ಯಾಯ ಐದು

ಜಾತ್ರೆಗಳ ವರ್ಗೀಕರಣ

ಚಿಕ್ಕೋಡಿ ತಾಲೂಕಿನಲ್ಲಿ ಒಟ್ಟು ನಾಲ್ಕು ಹೋಬಳಿಗಳು ಬರುತ್ತವೆ. ನಾಗರಮುನ್ನೋಳಿ, ಚಿಕ್ಕೋಡಿ, ಸದಲಗಾ, ನಿಪ್ಪಾಣಿ. ನಾಗರಮುನ್ನೋಳಿ ಹೊಬಳಿಯಲ್ಲಿ ೨೭, ಹಳ್ಳಿಗಳು; ಚಿಕ್ಕೋಡಿ ಹೋಬಳಿಯಲ್ಲಿ ೨೧ ಹಳ್ಳಿಗಳು, ಸದಲಗಾ ಹೋಬಳಿಯಲ್ಲಿ ೨೩ ಹಳ್ಳಿಗಳು ಹಾಗೂ ನಿಪ್ಪಾಣಿ ಹೋಬಳಿಯಲ್ಲಿ ೩೧ ಹಳ್ಳಿಗಳು ಹೀಗೆ ಚಿಕ್ಕೋಡಿ ತಾಲೂಕು ೧೦೪ ಹಳ್ಳಿಗಳನ್ನು ಒಳಗೊಂಡಿದೆ

ನಾಗರಮುನ್ನೋಳಿ ಹೋಬಳಿ	**ಜಾತ್ರೆಗಳು**	**ಚಿಕ್ಕೋಡಿ ಹೋಬಳಿ**	**ಜಾತ್ರೆಗಳು**
ಉಮರಾಣಿ	ಭಾವೇಶ್ವರಿ	ಇಂಗಳಿ	
ಕಬ್ಬೂರ		ಅಂಕಲಿ	ಸಿದ್ಧೇಶ್ವರ
ಕರಗಾಂವ		ಕಸನಾಳ	
ಕುಮಟೋಳಿ	ಹನುಮಾನ	ಕಾಡಾಪೂರ	ಅರಣ್ಯಸಿದ್ಧೇಶ್ವರ
ಕಜಗೌಡನಟ್ಟಿ		ಕುಠಾಳಿ	ಬಸವೇಶ್ವರ
ಕರೋಶಿ	ಶಾನೂರ ಬಾಬಾ	ಕೇರೂರ	ಮಲಕಾರಿ ಸಿದ್ಧ
ಚೆನ್ನವೀರದಡ್ಡಿ		ಕೋಥಳಿ	ಪಂಚಕಲ್ಯಾಣ
ಜಾಗನೂರ		ಗಿರಗಾಂವ	ಬಸವೇಶ್ವರ
ಜೈನಾಪೂರ	ಬಸವೇಶ್ವರ	ಚಿಕ್ಕೋಡಿ	
ಪರಟಿನಾಲಿಂಗೇಶ್ವರ			
ಡೋಣವಾಡ		ಚಿಕಲವಾಡ	
ತೋರನಹಳ್ಳಿ	ಹನುಮಾನ	ಚಿಂಚಣಿ	ಅಲ್ಲಮಪ್ರಬು
ನಾಗರಮುನ್ನೋಳಿ		ಜೋಡಕುರಳಿ	
ಬೆಳಕೂಡ	ಹನುಮಾನ	ನವಲಿಹಾಳ	ಬಸವೇಶ್ವರ
ಬಿದರಳ್ಳಿ		ನಾಯಿಂಗ್ಲಜ	ಥಳೋಬಾ

ಬೆಣ್ಣಿಹಳ್ಳಿ	ಹನುಮಾನ	ಪಟ್ಟಣಕುಡಿ	ಲಕ್ಷ್ಮೀದೇವಿ
ಬೆಳಗಲಿ		ಪೀರವಾಡಿ	ಮರ್ದಗೈಬಿ
ಬಂಬಲವಾಡ		ಖಡಕಲಾಟ	ಮರ್ದಗೈಬಿ
ಮಜಲಟ್ಟಿ		ವಾಳಕಿ	ಮಹಾದೇವ
ಮಮದಾಪೂರ ಕೆಕೆ		ಶಿರಗಾಂವ	ಬಸವೇಶ್ವರ
ಮಾಂಗನೂರ		ಸಂಕನವಾಡಿ	
ಮುಗಳಿ	ಬಸವೇಶ್ವರ	ಹಿರೇಕೋಡಿ	
ವಡ್ರಾಳ	ಹನುಮಾನ		
ವಿಜಯನಗರ			
ಹತ್ತರವಾಟ	ಲಕ್ಷ್ಮೀದೇವಿ		
ಹಂಚಿನಾಳ ಕೆಕೆ			
ಕಮತೇನಟ್ಟಿ	ಲಕ್ಷ್ಮೀದೇವಿ		
ಇಟ್ನಾಳ			

ಸದಲಗಾ ಹೋಬಳಿ	**ಜಾತ್ರೆಗಳು**	**ನಿಪ್ಪಾಣಿ ಹೋಬಳಿ**	**ಜಾತ್ರೆಗಳು**
ಕಲ್ಲೋಳ	ಬೀರೇಶ್ವರ	ಅಕ್ಕೋಳ	ಭೈರವ
ಕಾರದಗಾ	ಬಂಗಾಲಿಬಾಬಾ	ಆಡಿ	ಮಲ್ಲಿಕಾರ್ಜುನ
ಕುಣ್ಣೂರ		ಕುರ್ಲಿ	ಹಾಲಸಿದ್ಧನಾಥ
ಗಳತಗಾ	ಯಲ್ಲಮ್ಮಾ	ಕೊಂಕಣಿ	ಹಾಲಸಿದ್ಧನಾಥ
ಚಂದೂರ		ಕುಗನೋಳ್ಳಿ	ಹಾಲಸಿದ್ಧನಾಥ
ಜನವಾಡ	ಮಹಾದೇವಸ್ವಾಮಿ	ಗವಾನ	
ನಣದಿ	ಹಾಲಸಿದ್ದನಾಥ	ಗೋಂದಿಕೊಪ್ಪ	
ನಾಗರಾಳ	ಹಾಲಸಿದ್ಧನಾಥ	ಜತ್ರಾಟ	ಮಹಾದೇವ
ನೇಜ	ಬಸವೇಶ್ವರ	ಸ್ತವನಿಧಿ	ಬ್ರಹ್ಮದೇವರು
ಬಾರವಾಡ		ನಾಗನೂರ	
ಬೇಡಕಿಹಾಳ	ಸಿದ್ದರಾಯಿ	ನಿಪ್ಪಾಣಿ	ಲಕ್ಷ್ಮೀದೇವಿ

ಬೋರಗಾಂವ	ಮಹಾದೇವ	ಪಡಲಿಹಾಳ	ಮಹಾದೇವ
ಭೋಜ	ಉಗಮೇಶ್ವರ	ಪಾಂಗೇರಿ	
ಮಲ್ಲಿಕವಾಡ		ಪಾಂಗೇರಿ ಬಿ	
ಮಾಣಕಾಪೂರ		ಬುದಾನಮುಖ	
ಮಾಂಗೂರ		ಬೂದಿಹಾಳ	
ಮಾಂಜರಿ	ಲಕ್ಷ್ಮೀ	ಬೆನಾಡಿ	ಮಲ್ಲಿಕಾರ್ಜುನ
ಯಕ್ಸಂಬಾ	ಬೀರೇಶ್ವರ	ಬಾಟ ನಾಗನೂರ	
ಯಡೂರ	ವೀರಭದ್ರೇಶ್ವರ	ಭೀವಶಿ	
ಸಿದ್ನಾಳ		ಲಟ್ಟಿವಾಡಿ	
ಚಾಂದಶಿರದವಾಡ		ಮಮದಾಪೂರ ಕೆಕೆ	ಅಂಬಾಭವಾನಿ
ಸದಲಗಾ	ಹಜರತ ಬಂದೇನವಾಜ್	ಯಮಗರಣಿ	
ಹುನ್ನರಗಿ	ಲಕ್ಷ್ಮೀದೇವಿ	ಯರನಾಳ	ಮಹಾದೇವ
ಶಮನೇವಾಡಿ	ರೇಣುಕಾದೇವಿ	ರಾಂಪೂರ	ಮಹಾದೇವ
		ಲಖನಾಪೂರ	ಲಕ್ಷ್ಮೀ
		ಶಿರಗುಪ್ಪಿ	ಮಹಾದೇವ
		ಶೆಂಡೂರ	
		ಸುಳಗಾವಿ	
		ಸೌಂದಲಗಾ	ರೇಣುಕಾದೇವಿ
		ಹದನಾಳ	
		ಹಂಚಿನಾಳ	

ಜಾತ್ರೆಗಳ ವರ್ಗೀಕರಣ:

ದೈವಗಳ ಹುಟ್ಟು : ದೈವಗಳು ಯಾವಾಗ ಹುಟ್ಟಿದವು? ಹೇಗೆ ಪ್ರಚಲಿತಕ್ಕೆ ಬಂದವು, ಯಾವ ಕಾರಣದಿಂದ ಅವುಗಳ ಉದ್ಭವವಾಯಿತು? ಮನುಷ್ಯ ಅವುಗಳನ್ನು ಹೇಗೆ ನಂಬಿದ ಇವೆಲ್ಲವುಗಳನು ತಡಕಾಡುತ್ತ ಹೋದಾಗ ಒಂದು ಅಂಶ ನೆನಪಿಗೆ ಬರುತ್ತದೆ. ಸಮುದ್ರದ ಪಕ್ಕದಲ್ಲಿರುವ ಕಡಿದಾದ ಬಂಡೆಯೊಂದರಿಂದ ಕಲ್ಲೊಂದು ಇದ್ದಕ್ಕಿದ್ದಂತೆ ಕೆಳಗೆ ಬೀಳುತ್ತದೆ. ಆ ಶಬ್ದಕ್ಕೆ ಅಲ್ಲೇ ಇದ್ದ ಜಿಂಕೆಯೊಂದು ಬೆದರಿ ತಬ್ಬಿಬ್ಬಾಗಿ ಚಲಿಸದೆ ನಿಂತಿರುತ್ತದೆ. ಅದನ್ನು

ಕಂಡ ಬೇಟೆಗಾರ' ಬಾಣ ಹೊಡೆದು ಅದನ್ನು ಸಾಯಿಸಿ ಹೆಗಲ ಮೇಲೆ ಹಾಕಿಕೊಂಡು. ಕೈನಲ್ಲಿ ಕಲ್ಲನ್ನು ಹಿಡಿದು ತನ್ನ ಬಿಡಾರಕ್ಕೆ ಬರುತ್ತಾನೆ. ಕಲ್ಲಿನಲ್ಲಿದ್ದ ಮಾಟಶಕ್ತಿ ಬೇಟೆಯ ಮೇಲೆ ಪರಿಣಾಮ ಬೀರಿತು, ಎಂದು ಊಹಿಸಿ ಬೇಟೆಗೆ ಸಂಬಂಧ ಕಲ್ಪಿಸಿ ಕಥೆ ಕಟ್ಟುತ್ತಾನೆ. ಎರಡು ದಿನಗಳ ನಂತರ ತಿರುಗಿ ಬೇಟೆಗೆ ಹೋಗುತ್ತಾನೆ. ಬಿಡಾರದಿಂದ ಬರುವಾಗ ತಾನು ಮೊದಲ ಸಲ ತಂದಿದ್ದ ಕಲ್ಲನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಾನೆ. ಆ ಕಲ್ಲನ್ನು ಬಂಡೆಗೆ ಕುಟ್ಟಿ ತನ್ನ ಆಹಾರಕ್ಕೆ ಸಹಾಯ ಮಾಡುವಂತೆ ಅದರಲ್ಲಿನ ಶಕ್ತಿಯನ್ನು ಬೇಡಿಕೊಳ್ಳುತ್ತಾನೆ. ಈ ಸಲ ಮೊಲಗಳು ಮತ್ತು ಕಲ್ಲಿನೊಂದಿಗೆ ಬಿಡಾರಕ್ಕೆ ಹಿಂತಿರುತ್ತಾನೆ. ಕಲ್ಲಿನಲ್ಲಿರುವ ಮಾಟಶಕ್ತಿ ಕೆಲಸದಿಂದ ಹೀಗೆ ಆಗುತ್ತದೆ ಎನ್ನುವದು ಅವನಿಗೆ ಮನವರಿಕೆಯಾಗುತ್ತದೆ. ಬೇಟೆ ನಡೆದ ದಿನಗಳಲ್ಲಿ ಅವನಿಂದ ಅಥವಾ ಅವನ ಗುಂಪಿನ ಇತರರಿಂದ ಆ ಕಲ್ಲಿನ ಶಕ್ತಿಗೆ ಅಪಚಾರವಾಗಿರಬಹುದೆನ್ನುವ ಭಾವನೆ ಅವನನ್ನು ಕಾಡುತ್ತಿತ್ತು. ಆದುದರಿಂದ ಆ ಕಲ್ಲನ್ನು ತೃಪ್ತಿಪಡಿಸಲೋಸುಗ ಅವನು ಪ್ರತಿಸಾರಿ ಬೇಟೆ ಸಿಕ್ಕಾಗಲೂ ಅದರ ಕೊಬ್ಬನ್ನು ಕಲ್ಲಿನ ಮೇಲಿಡುತ್ತಿದ್ದ. ಆಗಿನಿಂದ ಆ ಕಲ್ಲು ಅವಿವೇಕ ಆರಾಧನೆಯ ವಿಗ್ರಹ ಪ್ರತಿಮೆಯಾಯಿತು.

ಕನ್ನಡದ ದಲಿತಕವಿ ಸಿದ್ಧಲಿಂಗಯ್ಯನವರ 'ಕತ್ತೆ ಮತ್ತು ಧರ್ಮ' ಎನ್ನುವ ಕವಿತೆಯು ಇಲ್ಲಿ ಜ್ಞಾಪಕ್ಕೆ ಬರುತ್ತದೆ ಅಗಸನೊಬ್ಬ ಕತ್ತೆಯೊಂದನ್ನು ಪ್ರೀತಿಯಿಂದ ಸಾಕಿರುತ್ತಾನೆ. ಅವನ ಬಹುಪಾಲು ಕೆಲಸಗಳಲ್ಲಿ ಅದರ ಭಾಗಿತ್ವ ಇರುತ್ತದೆ. ಒಂದು ದಿನ ಯಾವುದೋ ಕಾರಣದಿಂದ, ಆ ಕತ್ತೆ ಸತ್ತು ಹೋಗುತ್ತದೆ. ಅಗಸ ಕತ್ತೆಯ ದೇಹವನ್ನು ಬಿಸಾಡದೆ ಊರ ಹೊರಗೆ ಗುಂಡಿ ಮಾಡಿ ಅದನ್ನು ಹೂಳಿ, ಸಮಾಧಿಯ ಮೇಲೆ ಅರಿಷಣ, ಕುಂಕುಮ, ಹೂವು, ಎಲ್ಲ ಹಾಕಿ ಗಂಧದಕಡ್ಡಿ ಹಚ್ಚಿ ಕರ್ಪೂರದಾರತಿ ಬೆಳಗುತ್ತಿರುವಾಗ ಪಕ್ಕದ ರಸ್ತೆಯಲ್ಲಿ ವ್ಯಾಪಾರಕ್ಕಾಗಿ ಪಟ್ಟಣಕ್ಕೆ ಹೋಗುತ್ತಿದ್ದ ಶೆಟ್ಟಿಯೊಬ್ಬ ಇದನ್ನು ಕಂಡು ತಾನೂ ಅಲ್ಲಿಂದಲೇ ಸಮಾಧಿಗೆ ಕೈ ಮುಗಿದು ಬೇಡಿಕೊಂಡಿದ್ದರಿಂದ ಅವನಿಗೆ ತುಂಬಾ ಲಾಭವಾಗುತ್ತದೆ. ಇತ್ತ ಆ ಅಗಸ ದುಃಖದಿಂದ ಊರನ್ನೇ ತೊರೆದು ಹೋಗುತ್ತಾನೆ. ಇದೆಲ್ಲ ಆ ಸಮಾಧಿಗೆ ಕೈ ಮುಗಿದು ಬೇಡಿಕೊಂಡಿದ್ದರಿಂದ ಸಾಧ್ಯವಾಯಿತೆಂದು ಶೆಟ್ಟಿ ಯೋಚಿಸಿ ಕೆಲವು ವರುಷಗಳ ನಂತರ ಮರಳಿ ಆ ಊರಿಗೆ ಬಂದು ಸಮಾಧಿಗೆ ದೊಡ್ಡ ಗುಡಿ ಕಟ್ಟಿಸಿ ಜಾತ್ರೆ ಮಾಡಿಸುತ್ತಾನೆ. ಜಾತ್ರೆಯ ದಿನ ಎಂಟು ದಿಕ್ಕುಗಳಿಂದ ಸಾವಿರಾರು ಜನ ಭಕ್ತಾಧಿಗಳು ಬಂದು ಕಲೆತು ಸಾಲಿನಲ್ಲಿ ನಿಂತು ಪೂಜೆ ಸಲ್ಲಿಸುತ್ತಿರುತ್ತಾರೆ. ದೇಶಾಂತರ ಹೋಗಿದ್ದ ಕತ್ತೆಯ ಯಜಮಾನ ಅಗಸನೂ ಯಾವುದೋ ಕಾರಣದಿಂದ ಅಂದೇ ಆ ಊರಿಗೆ ಬರುತ್ತಾನೆ. ಕತ್ತೆ ಸಮಾಧಿಯ ಜಾಗದಲ್ಲಿ ದೊಡ್ಡ ಗುಡಿ ಕಟ್ಟಿಸಿ ಭಕ್ತಾದಿಗಳು ಉಳಿದುಕೊಳ್ಳಲು ಗುಡಿಯ ಸುತ್ತೂ ಮಂಟಪಗಳು, ಛತ್ರಗಳು, ರಸ್ತೆ ಇಕ್ಕೆಲ್ಲಗಳಲ್ಲಿ ಪೂಜಾ ಸಾಮಗ್ರಿಗಳ

ಅಂಗಡಿಗಳು ಜನದ ಜಾತ್ರೆ ಕಂಡು ಆಶ್ಚರ್ಯವಾಗುತ್ತದೆ. ಈ ಜಾತ್ರೆಯಲ್ಲಿ ತನ್ನ ಪ್ರೀತಿಯ ಕತ್ತೆಯ ಸಮಾಧಿ ದರ್ಶನ ಮಾಡಲು ಟಿಕೇಟಿಗೆ ದುಡ್ಡಿಲ್ಲದೆ ಅಗಸ ವ್ಯಾಕುಲದಿಂದ ಊರುಬಿಟ್ಟು ಹೋಗುತ್ತಾನೆ ಇದು ಈ ಹೊತ್ತಿನ ಕತೆ.

ಮೊದಲು ದೃಷ್ಟಾಂತದ ಗುಂಪಿನಲ್ಲಿ ಒಬ್ಬ ಮುಕ್ತ ಚಿಂತಕ ಇದ್ದಿದ್ದರೆ, ಆ ಪವಾಡಕಲ್ಲು ಬೇಟೆಗಾರನಿಗೆ ಸಹಾಯ ಮಡುವುದಕ್ಕಾಗಿಯೇ ಬಿದ್ದಿಲ್ಲ. ಕಲ್ಲನ್ನು ಬಿಗಿಯಾಗಿ ಹಿಡಿದಿದ್ದ ಮಣ್ಣು ಬಿದ್ದ ಮಳೆಯಿಂದ ಸಡಿಲಾಗಿ ಕೊಚ್ಚಿಕೊಂಡು ಹೋಗಿದ್ದರಿಂದ ಅದರ ಗುರುತ್ವಾಕರ್ಷಣ ಬಲ ವ್ಯತ್ಯಾಸವಾಗಿದ್ದರಿಂದ ಉರುಳಿ ಕೆಳಗೆ ಬಿದ್ದಿದೆ. ಹೀಗೆ ಬಿದ್ದ ಕಲ್ಲಿನ ಘಟನೆ ಬೇಟೆಗಾರನಿಗೆ ಅದೃಷ್ಟದ ಕಾಕತಾಳೀಯ ಘಟನೆಯೇ ಹೊರತು ಮತ್ತಿನ್ನೇನೂ ಅಲ್ಲ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಆ ಕಲ್ಲಿನಲ್ಲಿದೆಯೆಂದು ಹೇಳುವ ಮಾಂತ್ರಿಕ ಶಕ್ತಿಯ ಪೂರ್ವ ಕಲ್ಪನೆ ಆಧಾರವನ್ನೇ ಮುಕ್ತ ಚಿಂತನೆ ವಿರೋಧಿಸುತ್ತದೆ. ಬೇಟೆಗಾರನ ಮೂಲಭೂತ ನಂಬಿಕೆಗಳನ್ನೇ ಪ್ರಶ್ನಿಸುವ ಪ್ರಶ್ನೆಗಳನ್ನು ಎತ್ತಬೇಕಿದೆ. ಕೊನೆಯದಾಗಿ ಅನೇಕ ಸಲ ಬೇಟೆಗಳನ್ನು ಏರ್ಪಡಿಸುವ ಮೂಲಕ ಅವನ ನಂಬಿಕೆಯನ್ನು ಪರೀಕ್ಷಿಸಿ ಕಲ್ಲಿನ ಮಾಂತ್ರಿಕ ಶಕ್ತಿಯನ್ನ ಉಪೇಕ್ಷಿಸುವಂತೆ ಮಾಡಬಹುದು. ಆದರೆ ಬೇಟೆ ಸಂಸ್ಕೃತಿ ಕಾಲದಲ್ಲಿ ಹೀಗೆ ವಿಮರ್ಶಾತ್ಮಕವಾಗಿ ಪ್ರಶ್ನೆ ಮಾಡುವದು ಇದ್ದದ್ದು ಅಥವಾ ಇಲ್ಲದ್ದು ನಮಗೆ ತಿಳಿದುಬರುತ್ತಿಲ್ಲ. ಯಾವಾಗಲಾದರೂ ಮತ್ತು ಎಲ್ಲಾದರೂ ಸ್ತ್ರೀ-ಪುರುಷರು ವೈಯಕ್ತಿಕವಾಗಿ ಮುಕ್ತ ವಿಚಾರದಲ್ಲಿ ತೊಡಗಿದ್ದು ಹಾಗೂ ಪುರೋಹಿತ ವರ್ಗ ಮತ್ತು ಆಡಳಿತ ವರ್ಗಗಳಿಂದ ದೃಢೀಕರಣಗೊಂಡು ಸ್ಥಾಪನೆಗೊಂಡು ತತ್ವಗಳನ್ನು ಪ್ರತಿಭಟಿಸಿದ್ದರೂ ಮೂಢ ನಂಬಿಕೆ ಮತ್ತು ವಿಚಾರಹೀನ ನಂಬಿಕೆಗಳನ್ನು ಮಾತ್ರ ಬಿಟ್ಟು ಬಿಡಲೂ ಇಲ್ಲ. ಅಥವಾ ಪರಿವರ್ತಿಸಲೂ ಇಲ್ಲ ಎನ್ನುವುದನ್ನು ನಾವು ನಮ್ಮ ಮಾನವ ಇತಿಹಾಸ ಕಾಲದಲ್ಲಿ ಕಾಣುತ್ತೇವೆ.

ಭಾರತೀಯ ಸಂದರ್ಭದಲ್ಲಿ 'ಧರ್ಮ' ಎನ್ನುವ ಪದಕ್ಕೆ 'ಧಾರಣ' ಮಾಡಿದುದು 'ನೀತಿ'(ನಿಯಮ), 'ನ್ಯಾಯ', 'ಕರ್ತವ್ಯ' ಅಥವಾ 'ಪವಿತ್ರ ಕರ್ತವ್ಯ', ವರ್ತನೆ ಅಥವಾ ನಡವಳಿಕೆ. 'ಸದ್ಗುಣ' ಪುಣ್ಯ', 'ಅಹಿಂಸೆ', 'ಭಿಕ್ಷೆ' ಸ್ವಭಾವ 'ಆಚರಣೆ' 'ಹಕ್ಕು', 'ಸಮದೃಷ್ಟಿ, 'ಸ್ವರೂಪ', 'ಪುರುಷಾರ್ಥ', 'ದಯೆ ಅಥವಾ ಕರುಣೆ' ಮುಂತಾದ ಇನ್ನೂ ಅನೇಕ ಅರ್ಥಗಳು ಕಂಡುಬರುತ್ತಿವೆ. ಸಮೃದ್ಧವಾಗಿ ಕೇಳಿಬರುವ 'ಧರ್ಮಕಾರ್ಯ' 'ಧರ್ಮಕ್ಷೇತ್ರ', 'ಧರ್ಮದ್ರೋಹ', 'ಧರ್ಮಶಾಲ' ' ಧರ್ಮಸಂಕಟ', 'ಧರ್ಮಪತ್ನಿ', ಧರ್ಮರಾಜ' ಮುಂತಾದ ಇತ್ಯಾದಿ ಪದಗಳಲ್ಲಿ ಗುಣವಾಚಕವಾಗಿ ಕಂಡು ಬರುವ 'ಧರ್ಮ' ಎನ್ನುವ ಪದ ಇಡೀ ಮಾನವ ಬದುಕಿನ ಅರ್ಥಪೂರ್ಣಸತ್ವದ ಅವಿಭಾಜ್ಯ ಸಂಕೇತವಾಗುತ್ತದೆ.

'ಧರ್ಮಕ್ಕೂ' ಮತ್ತು 'ಮತಧರ್ಮಕ್ಕೂ' ಇರುವ ವ್ಯತ್ಯಾಸವೇನೆಂದರೆ,, ವ್ಯಕ್ತಿಯೊಬ್ಬನು ತನ್ನ ಜೀವಿತದ ಅವಧಿಯಲ್ಲಿ ಪಡೆದ ಸತ್ಯದ ಅನುಭವಗಳು ಅಭಿಪ್ರಾಯಗಳ ರೂಪು ಪಡೆದಾಗ ಅದು 'ಮತ' ವಾಗುತ್ತದೆ. ಆ ಅಭಿಪ್ರಾಯಗಳು ನಿಯಮಗಳಾಗಿ ಸಮಷ್ಠಿ ಅದನ್ನು ಮಾನ್ಯ ಮಾಡಿ ಅನ್ವಯಿಸಿಕೊಂಡಾಗ ಅದು 'ಧರ್ಮ' ಆಗುತ್ತದೆ. ಅದನ್ನು 'ಮತಧರ್ಮ' ಎನ್ನಲಾಗುತ್ತದೆ. ಯಾರೇ ಒಬ್ಬ ವ್ಯಕ್ತಿಯ ಅನುಭವಗಳಿಗಿಂತ, ಸಮಾಜದ ಎಲ್ಲರ ಅನುಭವಗಳನ್ನು ಮಾನ್ಯ ಮಾಡುತ್ತಾ ಒಂದು ಜೀವನ ವಿಧಾನ ರೂಪುಗೊಂಢಿದ್ದರೆ ಅದನ್ನು 'ಧರ್ಮ' ಎಂದು ಮಾತ್ರ ಕರೆಯಲಾಗುತ್ತದೆ. 'ಧರ್ಮದಲ್ಲಿ' ವೈಯಕ್ತಿಕತೆಗಿಂತ 'ಸಾರ್ವತ್ರಿಕತೆಗೆ' ಮಾನ್ಯತೆ ಇರುತ್ತದೆ.

ಹೆಚ್ಚು ಜನಸಂಖ್ಯೆ ಹೊಂದಿರುವ ಹಾಗೂ ಅತಿ ಪುರಾತನವೂ ಆಗಿರುವ ಈ ಹೊತ್ತಿನ ಭೂಮಿಯ ಮೇಲಿನ ಧರ್ಮಗಳಲ್ಲಿ ಭಾರತೀಯ ಧರ್ಮವೂ ಒಂದು. ಇದು ಭಾರತದ ಮೂಲ ದ್ರಾವಿಡ ಧರ್ಮವಾದರೂ; ಅತಿಕ್ರಮಿಸಿ ಬಂದ ಆರ್ಯರೂ ಈ ಧರ್ಮವನ್ನು ಕೆಲವು ಮಾರ್ಪಾಟುಗಳೊಂದಿಗೆ ಸಾವಿರಾರು ವರ್ಷಗಳಿಂದ ಪಾಲಿಸಿಕೊಂಡು ಬರುತ್ತಿರುವದರಿಂದ; ಇದು ಈರ್ವರ ಧರ್ಮವಾಗಿ ಇಲ್ಲಿ ನೆಲೆ ನಿಂತಿದೆ. ಪ್ರಸ್ತುತ ಭಾರತೀಯ ಧರ್ಮದಲ್ಲಿ ದ್ರಾವಿಡರ ಹಾಗೂ ಆರ್ಯರ ನಂಬಿಕೆಗಳು ಮತ್ತು ಆಚರಣೆಗಳು ಪ್ರಧಾನವಾಗಿ ಪ್ರಾಮುಖ್ಯತೆ ಪಡೆದಿರುವದು ಮುಖ್ಯ ವಿಷಯ. ಉದಾಹರಣೆಗೆ, ವ್ಯವಸಾಯ ಸಂಸ್ಕೃತಿಯ ಹಿಂದುಗಳ ಅಂದರೆ ಮೂಲ ದ್ರಾವಿಡರ ದೇಶಿಯ ಪ್ರಾಣಿ 'ಎಮ್ಮೆ'ಗಿಂತ ಪಶುಪಾಲಕ ಸಂಸ್ಕೃತಿಯ ಆರ್ಯರ ಜೊತೆಯಲ್ಲಿ ಬಂದ 'ಗೋವು' ಅನ್ನು ಕಟ್ಟುಕಥೆಗಳ ಮೂಲಕ ವೈಭವೀಕರಿಸಿ, ಪೂಜಿನೀಯವನ್ನಾಗಿಸಿ ಮಾಡಿದರು. ಪ್ರಾಣಿಗಳಲ್ಲಿ ಮೂತ್ರ ಮೂತ್ರವೇ ಯಾವ ಪ್ರಾಣಿಯದಾದರೇನು ಗೋವಿನ ಮೂತ್ರ ಪವಿತ್ರವಾಗಿದೆ ಎಂದರೆ, ಆರ್ಯರ ನಂಬಿಕೆಗೆ ಹಿಂದೂ ಧರ್ಮದಲ್ಲಿ ಪ್ರಾಧಾನ್ಯತೆ ಸಿಕ್ಕಿದೆ, ಎನ್ನುವ ಅರ್ಥವಲ್ಲವೇ? ಈ ಧಾರ್ಮಿಕ ಸಮುದಾಯದ ಸಂಕೀರ್ಣ ಧರ್ಮಗ್ರಂಥವೆಂದರೆ, ಶತಮಾನಗಳ ಕಾಲ ವ್ಯಾಖ್ಯಾನಿಸಿಕೊಳಪಟ್ಟಿರುವ 'ವೇದಾಂತ'ವೆಂದು ಎಂದರೆ ಧರ್ಮಜ್ಞಾನ, ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎನ್ನುವ ನಾಲ್ಕು ವೇಗಳೂ ಅತ್ಯಂತ ಹಳೆಯವೂ ಮತ್ತು ಅಧಿಕೃತವೂ ಆದಂತಹ ಧಾರ್ಮಿಕ ಕೃತಿಗಳು, ಇವು ಭಾರತದ ದ್ರಾವಿಡರ ಮತ್ತು ಆರ್ಯರ ದೇವತೆಗಳ ಬಗ್ಗೆ ವಿವರ ನೀಡುತ್ತವೆ. ಆದರೆ ವೇದಗಳಲ್ಲಿನ ತಪ್ಪುಗಳನ್ನು ತಿದ್ದಲು 'ಬ್ರಾಹ್ಮಣಗಳು' ಹುಟ್ಟಿಕೊಂಡವು.

'ಬ್ರಾಹ್ಮಣಗಳು' ವೇದಗಳಲ್ಲಿನ ಶ್ಲೋಕ ಮತ್ತು ಪ್ರಾರ್ಥನೆಗಳನ್ನು ಪಠಿಸುವ ಸಂಸ್ಕಾರವನ್ನು ಕಲಿಸುತ್ತವೆ. ಬ್ರಾಹ್ಮಣಗಳಿಗೆ ಪೂರಕವಾಗಿ ಋಷಿ ಮುನಿಗಳ ಕೃತಿಗಳು ಸಹಾಯ ಮಾಡಿದವು.

ಋಷಿ ಮುನಿಗಳು ಕಾಡಿನಲ್ಲಿ ಮಾಡಿದ ತಪಸ್ಸಿನ ಫಲವಾಗಿ ಶ್ಲೋಕಗಳು ಮತ್ತು ಪ್ರಾರ್ಥನೆಗಳು ಹುಟ್ಟಲು ಕಾರಣವಾದವು. ಈ ಋಷಿ ಮುನಿಗಳ ಕೃತಿಗಳಿಗೆ ಪೂರಕವಾಗಿ ತತ್ತ್ವಜ್ಞಾನದ ಚರ್ಚೆಗಳಿಂದ 'ಉಪನಿಷತ್ತುಗಳು' ಹುಟ್ಟಿಕೊಂಡವು. ಜೊತೆಯಲ್ಲೇ ಹಿಂದೂ ಧರ್ಮದ ಧಾರ್ಮಿಕ ಗ್ರಂಥಗಳು ಬಹಳ ಕಾಲ ಬೃಹತ್ತಾಗಿಯೂ ಮತ್ತು ಸಂಕೀರ್ಣವೂ ಆಗಿ ಬೆಳೆಯುತ್ತಲೇ ಹೋದವು. ಉದಾಹರಣೆಗೆ; ಋಗ್ವೇದದ ಪುರಾತನ ಭಾಗ ಸುಮಾರು ಹತ್ತು ಸಾವಿರ ಶ್ಲೋಕಗಳಿಂದ ಹತ್ತು ಗ್ರಂಥಗಳವರೆಗೆ ಬೆಳೆಯಿತು.

ಭಗವದ್ಗೀತೆಯಲ್ಲಿ "ಚಾತರ್ವರ್ಣ್ಯಂ ಮಯಾ ಸೃಷ್ಟ್ಯಂ ಗುಣಕರ್ಮ ವಿಭಾಗಶಃ" ಎನ್ನುವ ಶ್ರೀಕೃಷ್ಣನು ಆಡಿದ ಒಂದು ಮಾತು ಬರುತ್ತದೆ. ನಾಲ್ಕು ವರ್ಣಗಳನ್ನು ನಾನೇ ಸೃಷ್ಟಿಸಿದ್ದೇನೆ ಎನ್ನುವದು ಅದರ ಅರ್ಥ ಶ್ರೀ ಕೃಷ್ಣನು ಪರಮಾತ್ಮನನ್ನಾಗಿಸಿ ಅವನ ಬಾಯಿಂದಲೇ ಚತುರ್ವರ್ಣಗಳ ಬಗ್ಗೆ ಹೇಳಿಸಿ; ಅದಕ್ಕೆ ಇಲ್ಲದ ಅರ್ಥಗಳನ್ನು ಕಲ್ಪಿಸಿ ಬಹು ಜನತೆಯನ್ನು ಕತ್ತಲೆಗೆ ತಳ್ಳಲು ಮೇಲ್ವರ್ಣದ ಕುಬುದ್ಧಿಯವರಿಗೆ ಸಾಧ್ಯವಾಯಿತು. ಧರ್ಮಶಾಸ್ತ್ರ ಜನರೆಂದು ಮಾನ್ಯ ಮಾಡಿರುವ ಮನು ಅಂತವನೂ ಮಾಡಿದ್ದು ಅದನ್ನೇ ಆದರೆ ಶ್ರೀ ಅರವಿಂದರು ಚಾತುರ್ವಣ್ಯ ಎನ್ನುವ ಮಾತಿಗೆ ಹೊಸ ಅರ್ಥಕೊಟ್ಟು ವಿಶ್ವಮಾನವನಾಗುವಂತೆ ಮಾಡಿದ್ದಾರೆ ಅರವಿಂದರ ಪ್ರಕಾರ ಚಾತುವರ್ಣ್ಯ ಎನ್ನುವದು ಮನುಷ್ಯ ಮಾಡಿದ ಚತುರ್ವಣ ಅಲ್ಲ, ಅದೂ ನಿಸರ್ಗ ಮಾಡಿರುವ ಚತುರ್ವಣ, ಅದು ಪ್ರಪಂಚಕ್ಕೆಲ್ಲ ಅನ್ವಯ, ಬರೀ ಭಾರತೀಯ ಧರ್ಮಕ್ಕೆ ಸೀಮಿತವಲ್ಲ. ಎಲ್ಲಾ ದೇಶ, ಧರ್ಮ ಮತ್ತು ಕಾಲಗಳಿಗೂ ಅನ್ವಯ. ನಿಸರ್ಗ ಚತುರ್ವಣ ಮನಸ್ಸಿನ ಸ್ಥಿತಿಯನ್ನು ಅವಲಂಬಿಸಿದೆ. ನಿಸರ್ಗದ ಚತುರ್ವಣದ ಪ್ರಕಾರ ವರ್ಣ ನಿರ್ಣಯ ಹುಟ್ಟಿನಿಂದಲ್ಲ ಜೀವನ ಸ್ವರೂಪ ಸ್ವಭಾವ, ಜನ್ಮಾಂತರ ಸಂಸಾರ ಮತ್ತು ಅದಕ್ಕೆ ಅನುಸಾರವಾಗಿ ಕೈಗೊಳ್ಳುವ ಕರ್ಮ ಮುಂತಾದವುಗಳಿಂದ ಸಿದ್ಧವಾಗುತ್ತದೆ.

ಆರ್ಯರು ಭಾರತಕ್ಕೆ ಬಂದು ಇಲ್ಲಿನ ಆದಿವಾಸಿಗಳಾಗಿದ್ದ ದ್ರಾವಿಡರೊಡನೆ ಹೋರಾಡಿ ಅವರನ್ನು ಸೆರೆಯುಳುಗಳನ್ನಾಗಿ ಮಾಡಿಕೊಂಡ ನಂತರ ಸಂಸ್ಕೃತೀಕರಣ ಅಥವಾ ಸಂಕರ ಪ್ರಾರಂಭವಾಯಿತು. ಬಹು ಸಂಖ್ಯೆಯ ಸ್ಥಳೀಯ ದ್ರಾವಿಡರಲ್ಲಿ ಮಾತ್ರ ದೇವತಾರಾಧನೆ ಪ್ರಧಾನವಾಗಿತ್ತು. ಮತ್ತು ಹೆಣ್ಣಿಗೆ ಸಾಮಾಜಿಕವಾಗಿ ಸಮಾನತೆಯಿತ್ತು, ಮಾತೃದೇವತೆಗಳು ಅಥವಾ ಹೆಣ್ಣು ದೇವತೆಗಳು ಭೀಕರ ಸ್ವರೂಪವನ್ನು ಪಡೆದಿದ್ದವು. ಅಗಲದ ಚಪ್ಪಟೆ, ಮುಖ, ತೆರೆದ ದಪ್ಪ ಕಣ್ಣುಗಳು, ಉದ್ದಕ್ಕೆ ಹೊರಗೆ ಚಾಚಿಕೊಂಡಿರುವ ನಾಲಗೆ, ಉದ್ದನೆಯ ಬಿಳಿಯ ಕೋರೆಗಳು ಇಂತಹ ಭಯಂಕರ ಹೆಣ್ಣು ದೇವತೆಗಳ ಆರಾಧನೆ ದ್ರಾವಡಿರದಾಗಿತ್ತು. ಶಿವ ದ್ರಾವಿಡರ ಗಂಡು ದೇವತೆ ಆಗಿದ್ದರಿಂದ ಅವನ ಹೆಂಡತಿ ಪಾರ್ವತಿಯನ್ನು ಹೆಣ್ಣು ದೇವತೆಯಾಗಿ ಪರಿಗಣಿಸಿ ಆರಾಧಿಸಲಾಗುತ್ತಿತ್ತು. ಇಂತಹ ಪಾರ್ವತಿಗೂ ಭಯಂಕರ ಲಕ್ಷಣಗಳು

ಇರುವದನ್ನು ಅವಳ ಇನ್ನೊಂದು ಹೆಸರಿನ 'ದುರ್ಗ' ರೂಪದಲ್ಲಿ ಕಾಣಬಹುದು. ಆದರೆ ಲಕ್ಷ್ಮೀ ಮತ್ತು ಸರಸ್ವತಿಯರಲ್ಲಿ ಈ ಭಯಂಕರ ರೂಪಗಳನ್ನು ಕಾಣಲಾಗದು. ಇವರೀರ್ವರನ್ನೂ ಸೌಮ್ಯದೇವತೆಗಳೆಂದು ಪರಿಗಣಿಸಲಾಗಿದೆ. ಲಕ್ಷ್ಮೀ ಮತ್ತು ಸರಸ್ವತಿ ವೃದ್ಧಿಯ ಸಂಕೇತವಾಗಿದ್ದರೆ ಪಾಲನಕರ್ತೆಯಾಗಿದ್ದ ಪಾರ್ವತಿ ದುಷ್ಟರನ್ನು ಸಂಹರಿಸುವ ಸಂಕೇತವಾಗಿದ್ದಾಳೆ.

ದ್ರಾವಿಡರ ಪಾರ್ವತಿ ದೇವತೆಗೆ ಲಕ್ಷ್ಮೀ ಮತ್ತು ಸರಸ್ವತಿ ಆರ್ಯರ ಸಮನಾಂತರ ಸೃಷ್ಟಿ ಎಂದೇ ಹೇಳಬೇಕು. ಹೆಣ್ಣಿಗೆ ಸಮಾನತೆಯ ಸ್ಥಾನವೆ ಇಲ್ಲದ ಆರ್ಯರಲ್ಲಿ ಲಕ್ಷ್ಮೀ ಮತ್ತು ಸರಸ್ವತಿಯನ್ನು ಹೆಣ್ಣು ದೇವತೆಗಳೆಂದು ಒಪ್ಪಿಕೊಂಡಿರುವದು ತ್ರಿಮೂರ್ತಿಗಳ ಕಲ್ಪನೆ ಉಂಟಾದ ನಂತರವೇ ಎಂದು ಹೇಳಬೇಕು. ದ್ರಾವಿಡರ ಮತ್ತು ಆರ್ಯರ ಸಾಂಸ್ಕೃತಿಕರಣದ ಸಂದರ್ಭದಲ್ಲಿ ಬಹು ಸಂಖ್ಯೆಯ ದ್ರಾವಿಡರ ಕೆಲವು ನಂಬಿಕೆ ಮತ್ತು ಆಚರಣೆಗಳಿಂದ ಆರ್ಯರು ಪ್ರಭಾವಿತರಾಗಿದ್ದರಿಂದ ಅಥವಾ ಸಮಾನತೆಗಾಗಿ ಹೆಣ್ಣು ದೇವತಾರಾಧನೆಗೆ ಆರ್ಯರು ಒಲ್ಲದ ಮನಸ್ಸಿನಿಂದ ತೊಡಗಬೇಕಾಯ್ತು ಎಂದು ತೀರ್ಮಾನಿಸಬಹುದು. ಆರ್ಯರು ನಂಬಿಕೆ ಮತ್ತು ವಿಚಾರಗಳು ಭಾರತೀಯ ಧರ್ಮದಲ್ಲಿ ಪ್ರಾಧಾನ್ಯತೆ ಪಡೆದಂತೆಲ್ಲ ಹೆಣ್ಣಿನ ಬಗ್ಗೆ ದ್ರಾವಿಡರಲ್ಲಿದ್ದ ಸಮಾನತೆ ಅಂಶ ಕಡಿಮೆಯಾಗುತ್ತ ಬಂದಿತು. ಹೆಣ್ಣನ್ನು ಒಂದು ಕಡೆ ಪೂಜಿಸುವುದು ಮತ್ತೊಂದೆಡೆ ಕಸವಾಗಿ ಕಾಣುವದು ಕಂಡು ಬರುತ್ತದೆ.

ಧರ್ಮ ಅರ್ಥ, ಕಾಯ, ಮೋಕ್ಷ ಇವು ವ್ಯಕ್ತಿಯು ಜೀವಿತದ ಒಟ್ಟು ಪುರುಷಾರ್ಥಗಳು ಎಂದು ಒಂದು ಚೌಕಟ್ಟನ್ನು ಹಾಕಲಾಯಿತು. ಅರ್ಥ, ಕಾಮ, ಮೋಕ್ಷಗಳು ಹದ್ದುಮೀರಿ ಹೋಗದಂತೆ ಇವುಗಳ ಮೇಲೆ ಧರ್ಮದ ನಿಯಂತ್ರಣ ಇಡಲಾಯಿತು. ಅರ್ಥ ಎಂದರೆ ಉತ್ಪಾದನೆ, ಕಾಮ ಎಂದರೆ ಭೋಗ ಅಥವಾ ಬೇಡಿಕೆ ಹಾಗೂ ಮೋಕ್ಷ ಎಂದರೆ ಸುಖಜೀವನ ಎನ್ನುವ ಅರ್ಥಗಳನ್ನು ಕೊಟ್ಟು ಪುರುಷಾರ್ಥಗಳ ವೈಶಾಲ್ಯತೆ ಹೆಚ್ಚಿಸಿ ಇಡೀ ಸಮಷ್ಠೀ ಜೀವನ ಕ್ರಮಕ್ಕೆ ಅಂದರೆ ಮೂಲ ವ್ಯವಸ್ಥೆಗೆ ಅನ್ವಯವಾಗುವಂತೆ ಮಾಡಲಾಯಿತು. ಈ ಮೂರರ ಸಮತೋಲನ ಕಾಪಾಡಲು ನೈತಿಕ ಮೌಲ್ಯಗಳ ಅಂದರೆ ಧರ್ಮದ ಕಾವಲಿಟ್ಟರು- ಅಂದರೆ ಇದರಿಂದ ಹಿಡಿಯಷ್ಟು ಮೇಲ್ವರ್ಣದ ಜನರು ಧರ್ಮದ ಹೆಸರಿನಲ್ಲಿ ಮೂಲವ್ಯವಸ್ಥೆಗೆ ಸೇರಿದ ಬಹುಜನರು ಉತ್ಪಾದನೆ, ಭೋಗ ಮತ್ತು ಸುಖ ಅಂದರೆ; ಅರ್ಥ ಕಾಮ, ಮೋಕ್ಷಗಳನ್ನು ಹಿಡಿತದಲ್ಲಿಟ್ಟುಕೊಳ್ಳಲು ಕಾರಣವಾಯಿತು. ಮೇಲ್ಮೈಯ ವ್ಯವಸ್ಥೆಯಲ್ಲಿ ಒಂದೇ ವರ್ಣದವರ ಕೈನಲ್ಲಿ ಇದ್ದುದೇ ಇದಕ್ಕೆ ಕಾರಣ ಎನ್ನಬಹುದು. ಇಂತಹ ಕಾವಲುಗಾರ ಧರ್ಮ ಮೂಲವ್ಯವಸ್ಥೆಯ ನಿಯಂತ್ರಣದಲ್ಲಿರುವ ಬದಲು ಮೇಲ್ಮೈಯ ವ್ಯವಸ್ಥೆಯ ಕೈಸೇರಿದ್ದು ಹಿಂದೂ ಧರ್ಮದ ದೊಡ್ಡ ದುರಂತ. ಪರಿಣಾಮವಾಗಿ ಮೂಲವ್ಯವಸ್ಥೆಗೆ

ಸೇರಿದ ಜನ ಅರ್ಥದಲ್ಲಿ ಪಾಲುದಾರರಾದರೂ, ಕಾಮ ಮತ್ತು ಮೋಕ್ಷಗಳಿಂದ ವಂಚಿತರಾಗಬೇಕಾಯಿತು.

ಒಂದು ಜನಸಮುದಾಯ ನಿಯಂತ್ರಣಕ್ಕೆ ಕಾರಣವಾಗುವದು ಅದರ ಧರ್ಮ ಮತ್ತು ಕಾನೂನುಗಳ ಸೀಮಿತ ಅರ್ಥದಲ್ಲಿ ಬೇರೆ ಬೇರೆ ಎಂದು ಕಂಡು ಬಂದರೂ, ಅವು ವಿಶಾಲ ಅರ್ಥದಲ್ಲಿ ಪರಸ್ಪರ ಪೂರಕ ಹಿಂದೂ ಚಿಂತನೆಯಲ್ಲಿ ಧರ್ಮ ಮತ್ತು ಕಾನೂನು ಎನ್ನುವ ವಿಂಗಡಣೆ ಆದದ್ದು, ಇತ್ತೀಚಿನ ಶತಮಾನದಲ್ಲಿ ಆದರೆ ಇದಕ್ಕೂ ಹಿಂದೆ ಅವೆರಡೂ ಮಿಳಿತವಾಗಿ ಧರ್ಮದ ರೂಪವನ್ನು ಪಡೆದುಕೊಂಡಿದ್ದವು. ನ್ಯಾಯಕ್ಕೆ ಧರ್ಮವೇ ಆಧಾರವಾಗಿತ್ತು. ಹಿಂದೂ ನ್ಯಾಯಶಾಸ್ತ್ರದಲ್ಲಿ ಧರ್ಮದ ಉಗಮಕ್ಕೆ ವೇದ, ಸ್ಮೃತಿ ಸದಾಚಾರ ಅಥವಾ ಸಾಂಪ್ರದಾಯ ಮತ್ತು ಆತ್ಮಸಾಕ್ಷಿ ಎನ್ನುವ ನಾಲ್ಕು ಮೂಲಗಳನ್ನು ಗುರುತಿಸಲಾಗಿದೆ. ಧರ್ಮಕ್ಕೆ ವೇದ ಆಧಾರವಾದರೆ ಸ್ಮೃತಿ ಮತ್ತು ಸಂಪ್ರದಾಯ ವೇದಗಳ ಮೇಲೆ ನಿಂತಿವೆ. ಆತ್ಮಸಾಕ್ಷಿ ಎನ್ನುವದು ವ್ಯಕ್ತಿಗತವಾದದ್ದು ಅವರವರ ಅಂತಃಸಾಕ್ಷಿಗೆ ಸರಿಯೆಂದು ತೋರುವಂತದ್ದು. ಸ್ಮೃತಿಯ ಮುಖ್ಯಭಾಗ ಧಮಶಾಸ್ತ್ರ, ವೈದಿಕರಿಗೆ ಅಥವಾ ಆರ್ಯ ಹಿಂದುಗಳಿಗೆ ವೇದದಲ್ಲಿರುವ ಲೌಕಿಕ ಮತ್ತು ಅಲೌಕಿಕ ಧರ್ಮವನ್ನು ತಿಳಿಯ ಹೇಳುವದು ಇದರ ಗುರಿ.

ಬಹಳ ಪ್ರಾಚೀನ ಕಾಲದಿಂದ ಹಿಂದೂ ಧರ್ಮದಲ್ಲಿ ರೂಢಿಗೆ ಬಂದಿರುವು ದೇವದಾಸಿ ಪದ್ಧತಿ ಇದು ದೇವರು ಮತ್ತು ಧರ್ಮದ ಹೆಸರಿನಲ್ಲಿ ರೂಢಿಗೆ ಬಂದಿದೆ. ಪ್ರಾಯದ ಹೆಣ್ಣು ಮಕ್ಕಳನ್ನು ದೇವರಿಗೆ ಹರಕೆ ಅಥವಾ ಬಸವಿ ಬಿಡುವದು; ನಂತರ ಅವರನ್ನು ಸೂಳೆಗಾರಿಕೆ ಕಸುಬನ್ನು ಅವಲಂಬಿಸುವದು. ಇದು ಹಿಂದೂ ಧರ್ಮ ಸಂಪ್ರದಾಯಗಳ ಅಂಧಃಪತನದ ಸಂಕೇತವಾಗುತ್ತದೆ. ಭವಿಷ್ಯ ಪುರಾಣ ಎನ್ನುವ ಹೆಸರಿನ ಒಂದು ಪುರಾಣ ದೇವಾಲಯಗಳಿಗೆ ಅಥವಾ ದೇವರಿಗೆ ಹೆಣ್ಣು ಮಕ್ಕಳನ್ನು ಅರ್ಪಿಸುವವರು ಸುರಲೋಕ ಸೇರುತ್ತಾರೆ ಎಂದು ಪೋಷಿಸುತ್ತದೆ. ಹೀಗೆ ದಾಸ್ಯಪದ್ಧತಿಗೆ ಧರ್ಮಗ್ರಂಥಗಳು ಬೆಂಬಲ ಸೂಚಿಸಿ ಆಧಾರ ಒದಗಿಸಿರುವದು ಒಂದು ಗಂಭೀರ ವಿಷಯವಾಗಿದೆ ಧರ್ಮದ ಪುರೋಹಿತ ವರ್ಗವು ತನ್ನ ಸ್ವಾರ್ಥಸಾಧನೆಗಾಗಿ ರಚಿಸಿಕೊಂಡ ಅತ್ಯಂತ ಕ್ರೂರ ಮತ್ತು ಅಮಾನುಷ ಗ್ರಂಥಗಳೆಂದು ಕರೆಯಲಾಗುತ್ತದೆ.

ಭಾರತ ಧರ್ಮದ ವೈದಿಕರಲ್ಲಿ ಜ್ಞಾನ, ಭಕ್ತಿ ಮತ್ತು ವೈರಾಗ್ಯಕೊಡು ಎಂದು ದೇವರಲ್ಲಿ ಬೇಡುತ್ತಾ ಬಂದಿದ್ದಾರೆ; ಸಂತರೆಲ್ಲಾ ಜ್ಞಾನಯೋಗ, ಭಕ್ತಿಯೋಗ ಮತ್ತು ಕರ್ಮಯೋಗದಲ್ಲಿ ತಲ್ಲೀನರಾಗಿ ಮೂರು ಯೋಗಗಳ ಸತ್ಯಾಂಶವನ್ನು ಅಳವಡಿಸಿಕೊಂಡು ಬದುಕು ಸಾಗಿಸಿರುವದನ್ನು ಕಾಣಬಹುದು. ಅಂತೆಯೇ ಚಿಕ್ಕೋಡಿ ತಾಲೂಕಿನಲ್ಲಿ ಬರುವ, ಸಂತರು ಅನುಭಾವಿಗಳು, ಯೋಗಿಗಳು ತಮ್ಮ ಚಿಂತನಾ ಕ್ರಮವನ್ನು ಇಲ್ಲಿ ಬೀರಿದ್ದಾರೆ.

೫.೧. ಪುರುಷ ದೈವಗಳ ಜಾತ್ರೆಗಳು :

ಕೆರೂರ ಅರಣ್ಯಸಿದ್ಧನ (ಆರ್ಯಾಣಸಿದ್ಧ) ಜಾತ್ರೆ

ಅಮೋಘಸಿದ್ಧನ ಧರ್ಮರ ಮಕ್ಕಳು

ಅಮೋಘಸಿದ್ಧನಿಗೆ ಪದ್ಮಾವತಿಯಲ್ಲಿ ಜನಿಸಿದ ನಾಲ್ವರು ಮಕ್ಕಳಿಗೆ ಧರ್ಮರ ಮಕ್ಕಳು ಎನ್ನುತ್ತಾರೆ.

೧. ಅವಧು ಸಿದ್ಧ

೨. ಬುದ್ದುಳ್ಳ ಬಿಳಿಯಾನಿ ಸಿದ್ಧ

೩. ಸೋಮಣ್ಣ ಮುತ್ತ್ಯಾ

೪. ಕಡಿಹುಟ್ಟಿ ಕನ್ನಮುತ್ತ್ಯಾ

೫. ರಬಕವ್ವೆ ಮಗಳು (ಜಿನ್ನವ್ವ)

ಈ ಮಕ್ಕಳು ಅಮೋಘಸಿದ್ಧ ಬಯಸಿ ಪಡೆದುದಲ್ಲ ಪುಣ್ಯದ ಮಗನಾದ ಮಾಸಿದ್ಧನು ಗುರುಪತ್ನಿಯಾದ ಪದ್ಮಾವತಿಯ ಕಷ್ಟ ನೋಡಲಾರದೆ ಗುರುವಿನಲ್ಲಿ ಹಠಮಾಡಿದ ಕಾರಣವಾಗಿ ಜನಿಸಿ ಬಂದವರು. ಅಮೋಘಸಿದ್ಧ ತನ್ನ ಸ್ವಂತ ಮಕ್ಕಳನ್ನು ಪಡೆಯುವ ಮೂಲಕ ತನ್ನ ಪರಂಪರೆಯನ್ನು ಶಿಷ್ಯವರ್ಗದಿಂದ ಪುತ್ರವರ್ಗವನ್ನಾಗಿ ಮಾಡುತ್ತಾನೆ. ಧರ್ಮರ ಮಕ್ಕಳು ಬೆಳೆದು ದೊಡ್ಡವರಾಗುತ್ತಿದ್ದಂತೆ ಪುಣ್ಯದ ಮಕ್ಕಳು ಒಬ್ಬೊಬ್ಬರಾಗಿ ಸ್ವಂತ ನೆಲೆಯನ್ನು ಅರಸುತ್ತ ಹೋಗುತ್ತಾರೆ. ಅಮೋಘಸಿದ್ಧನು ಸ್ಥಿರಾಸ್ತಿಯಲ್ಲಿ ಪಾಲು ಕೊಡದೆ ಚರಾಸ್ತಿಯಂತಿದ್ದ ಭಂಡಾರ ಚೀಲ, ನೇಮದ ಬೆತ್ತ ಹಾಗೂ ಹೋಮದ ಕಂಬಳಿಯನ್ನು ಅವರಿಗೆ ಕೊಟ್ಟು ಸ್ಥಿರಾಸ್ತಿಯನ್ನು ಧರ್ಮರ ಮಕ್ಕಳಿಗೆ ಕೊಡುತ್ತಾನೆ.

ಸ್ಥಿರಾಸ್ತಿಯನ್ನು ಪಡೆದ ಧರ್ಮರ ಮಕ್ಕಳು ಅರಕೇರಿಯ ಸಮೀಪವಿದ್ದ ಭೀವರಗಿಯಲ್ಲಿ ಗುರುಮನೆ ಸ್ಥಾಪಿಸಿ ಅದನ್ನು ಒಂದು ಶಕ್ತಿ ಕೇಂದ್ರವನ್ನಾಗಿ ಬೆಳೆಸುತ್ತಾರೆ.

ಗುರು ಪಂಥೀಯನಾಗಿದ್ದ ಕಾಲದಲ್ಲಿ ಅಮೋಘಸಿದ್ಧನು ನಾಡಿನ ಬೇರೆ ಬೇರೆ ಮೂಲೆಯಿಂದ ಬಂದವರನ್ನು ತನ್ನ ಶಿಷ್ಯ ಬಳಗಕ್ಕೆ ಸೇರಿಸಿಕೊಂಡಿದ್ದಾನೆ. ಅವರಲ್ಲಿ ನಾತೆಪೋತೆ ಗ್ರಾಮದವನು.

ಅಮೋಘಸಿದ್ಧನಿಗೆ ನಾಲ್ಕು ಜನ ಮಕ್ಕಳಾದ ಮೇಲೆ ಗುರು ಹೇಳಿದ ಎಚ್ಚರಿಕೆಯ ಮಾತು ನೆನಪಾಗುತ್ತದೆ. ಆ ಗುರುವನ್ನು ತೊರೆದು ಹೋಗಲು ನಿರ್ಧರಿಸುತ್ತಾನೆ. ಗುರು ತನ್ನ ಅತ್ಯಂತ ಪ್ರೀತಿಯ ಶಿಷ್ಯನಾದ ಮಾಸಿದ್ಧಪ್ಪನಿಗೆ ತನ್ನ ಬಳಿಯಿದ್ದ ಭಂಡಾರ ಭರಣಿಯನ್ನು

ಕೊಟ್ಟು ಕಳುಹಿಸುತ್ತಾನೆ. ಈ ವಿಷಯ ತಿಳಿದ ಧರ್ಮರ ಮಕ್ಕಳಿಗೆ ಕಳವಳವುಂಟಾಗಿ ಮೋಸದಿಂದ ಕಾಣಿಕೆ ಪಡೆದು ಹೋದ ಎಂದು ಅವನಿಗೆ ಶಾಪಹಾಕಿ ಏಳಕ್ಕಿಂತಲೂ ಹೆಚ್ಚಿಗೆ ಊರುಗಳಾಗದಿರಲಿ ಎನ್ನುವುದೇ ಆ ಶಾಪ. ಆ ಶಾಪ ನಿಜವಾಯಿತೆನೊ ಎನ್ನುವಂತೆ ಮಾಸಿದ್ಧಪ್ಪನಿಗೆ ಕೇವಲ ಏಳು ಊರುಗಳು ಇಂದಿಗೂ ಇವೆ. ಇಜಿ, ದೇವಾಂಗ, ಸೊಲ್ಲಾಪುರ, ಹಂಜಿಗಿ, ಬಂದಲಗಿ, ಭಂಡಾರ ಕವಟೆ ಹಾಗೂ ದೋಣಜ ಎಂಬ ಊರುಗಳಲ್ಲಿ ಇವನ ಗುಡಿಗಳು ನಿರ್ಮಾಣವಾಗಿವೆ. ನಳೆದೇಗಾಯಿ ಊರಿನ ಗೌರಾದೇವಿಯನ್ನು ಮದುವೆಯಾದ ಮಾಸಿದ್ಧಪ್ಪನಿಗೆ ನಾಲ್ಕು ಜನ ಗಂಡು ಮಕ್ಕಳನ್ನು ಹೊಂದಿದ್ದಾನೆ. ಅಂಬರಾಯ, ಯೋಗಿ, ಅವಧೂತ ಮತ್ತು ಮಳಿಮಲ್ಲಪ್ಪ. ಅಮೋಘಸಿದ್ಧನ ಎರಡನೆಯ ಶಿಷ್ಯನಾದ ಮಂಗರಾಯ, ಮೂರನೆಯ ಶಿಷ್ಯ ಮಲಕಾರಿಸಿದ್ಧ.

ರೆಬಕವ್ವೆ ಅಮೋಘಸಿದ್ಧನ ಏಕೈಕ ಮಗಳು

ನಾಲ್ವರು ಅಣ್ಣಂದಿರ ಮುದ್ದಿನ ತಂಗಿ ಮಾಸಿದ್ದಪ್ಪ ತನಗೆ ಬೆನ್ನು ಭುಜದ ಹಾಗೆ ತಮ್ಮಂದಿರು ಬೇಕು ಎಂದು ಕೇಳಿದರೆ ಅಮೋಘಸಿದ್ಧ ತಮ್ಮಂದಿರ ಜೊತೆಗೆ ಒಬ್ಬ ತಂಗಿಯನ್ನು ದಯಪಾಲಿಸಿದ್ದಾನೆ. ಅವಳು ಬೆಳೆದು ದೊಡ್ಡವಳಾದ ಮೇಲೆ ಅವಳನ್ನು ತಾಯಿ ಪದ್ಮಾವತಿಯ ಸಹೋದರನಾದ ಹೊನ್ನಪ್ಪಗೌಡನಿಗೆ ಕೊಟ್ಟು ಮದುವೆ ಮಾಡಿಕೊಡಲಾಗುತ್ತದೆ. ದೀಪಾವಳಿ ಹಬ್ಬಕ್ಕೆಂದು ಗಂಡನ ಮನೆಗೆ ಮಕಣಾಪುರದಿಂದ ತವರು ಮನೆಗೆ ಬಂದಾಗ ಅಣ್ಣಂದಿರಿಗೆ ಆರತಿ ಬೆಳಗುತ್ತಾಳೆ. ಖುಷಿಗೊಂಡ ಅಣ್ಣಂದಿರು ಏನು ಬೇಕು ಕಾಣಿಕೆ ಕೇಳು ಎಂದಾಗ ಅವಳು ಹರೆಯಲಾರದ ಸೀರೆತನಗೆ ಬೇಕು ಎಂದು ಕೇಳಿ ಅಣ್ಣಂದಿರಿಂದ ಅರಕೇರಿಯ ಆಸ್ತಿಯನ್ನು ಹಾಗೂ ಗೌಡಕಿಯನ್ನು ಪಡೆಯುತ್ತಾಳೆ. ಕಥೆ ಇಲ್ಲಿಗೆ ಮುಗಿದಿದ್ದರೆ ಒಳ್ಳೇಯದಿತ್ತು. ಆದರೆ ಕಾಲಾಂತರದಲ್ಲಿ ಅಮೋಘಸಿದ್ಧನ ಮೊಮ್ಮಕ್ಕಳು ತಮ್ಮ ತಂದೆಯವರು ಕಾಣಿಕೆ ರೂಪದಲ್ಲಿ ಕೊಟ್ಟಿದ್ದ ಆಸ್ತಿಯನ್ನು ಇವಳಿಂದ ಮರಳಿ ಪಡೆಯುತ್ತಾರೆ. ಗಂಡ ಹೊನ್ನಪ್ಪಗೌಡ ಹಾಗೂ ಹೆಂಡತಿ ರೆಬಕವ್ವೆ ಈ ಘಟನೆಯಿಂದ ತತ್ತರಿಸಿ ಹೋಗುತ್ತಾರೆ. ತಂದೆಯಾದ ಅಮೋಘಸಿದ್ಧನಲ್ಲಿಗೆ ಹೋಗಿ ಈ ವಿಷಯ ತಿಳಿಸಿದಾಗ ತನ್ನ ಬಳಿಯಲ್ಲಿದ್ದ ಕೆಲವು ಕಿಲ್ಲಾರಿಗಳನ್ನು ಅವರಿಗೆ ಕೊಟ್ಟು ಪಶ್ಚಿಮದಿಕ್ಕಿನ ಕಡೆಗೆ ಹೋಗಲು ತಿಳಿಸುತ್ತಾನೆ . ಅಂತೆಯೇ ಅವಳು ಪಶ್ಚಿಮದಿಕ್ಕಿಗೆ ಸಂಚಾರ ಮಾಡುತ್ತ ಚಿಕ್ಕೋಡಿ ತಾಲೂಕಿನ ಕೆರೂರದಲ್ಲಿ ನೆಲೆನಿಂತು ಮಲಕಾರಿಸಿದ್ಧ ಹಾಗೂ ಅರಣ್ಯಸಿದ್ಧ (ಆರ್ಯಾಣಸಿದ್ಧ) ಎಂಬ ಇಬ್ಬರೂ ಮಕ್ಕಳನ್ನು ಹೆತ್ತು ಜೀವನ ಸಾಗಿಸುತ್ತಾಳೆ.

ರೆಬಕವ್ವೆಯ ಇನ್ನೊಂದು ಹೆಸರು ಜಿನ್ನವ್ವ ಶಿವರಾತ್ರಿಯಾದ ಐದನೇಯ ದಿವಸದ ನಂತರ ಐದು ದಿವಸಗಳವರೆಗೆ ಈ ಊರಿನಲ್ಲಿ ಜಾತ್ರೆ ನಡೆಯುತ್ತದೆ. ಜಾತ್ರೆ

ಪ್ರಾರಂಭವಾಯಿತೆಂದರೆ 'ಕರಿ ಕಟ್ಟಿದೆ' ಎಂದು ಭಾವಿಸಿ ಊರ ಜನರು ಎಂಥದೆ ಸಂದರ್ಭದಲ್ಲಿ ಊರು ಬಿಟ್ಟು ಪರ ಊರಿಗೆ ಹೋಗದ ಹಾಗೆ ದಿಗ್ಭಂದನ ಹಾಕಿಕೊಳ್ಳುತ್ತಾರೆ. ಕರಿ ಕಟ್ಟುವ ದಿವಸ ಆ ಊರಿನ ಮಾದಿಗ ಸಮಾಜದವರು ಸಲ್ಲಿಸುವ ಸೇವಯೇ ಚೆಮ್ಮಾವುಗೆ ಸೇವೆ.

ಈ ನೇಮ ಹೊತ್ತ ಮನೆತನದ ಮಾದಿಗರು ಅರಣ್ಯಸಿದ್ಧನಿ:ಂದು ಒಂದು ಜೋಡಿ ಚಪ್ಪಲಿಯನ್ನು ತಯಾರಿಸಿ ತಂದು ಗುಡಿಯ ಒಳಭಾಗದ ಕಂಬವೊಂದಕ್ಕೆ ನೇತು ಹಾಕುತ್ತಾರೆ. ಈ ಚಪ್ಪಲಿಗಳು ಐದು ದಿವಸಗಳವರೆಗೆ ಇಲ್ಲಿಯೇ ಇರುತ್ತವೆ. ಅರಣ್ಯಸಿದ್ಧ ಕಿಲ್ಲಾರಿಗಳನ್ನು ಮೇಯಿಸುತ್ತಾ ಅಲಕನೂರು ಕರಿಸಿದ್ದನ ಪ್ರದೇಶದಲ್ಲಿ ಹೋದಾಗ ಅವನೊಂದಿಗೆ ಕಾದಾಟಕ್ಕೆ ಇಳಿಯುವ ಪ್ರಸಂಗ ಬರುತ್ತದೆ ಕಿಲ್ಲಾರಿಗಳನ್ನು ಕಾಯುತ್ತಾ ಅಡವಿಗೆ ಹೋದ ಮಗ ತಿರುಗಿಬಾರದ್ದನ್ನು ನೋಡಿದ ತಾಯಿ ರೆಬ್ಬಕವ್ವೆ/ಜಿನ್ನವ್ವ ಮಗನನ್ನು ಹುಡುಕುತ್ತಾ ಕಾಡುಮೇಡು ಅಲೆಯುತ್ತಾಳೆ. ಕಾಡಿನಲ್ಲಿ ಸಂಚರಿಸುವಾಗ ಅವಳ ಪಾದದ ರಕ್ಷಣೆಗೆಂದು ಅವಳ ನಂಬುಗೆಯ ಚೆನ್ನಯ್ಯನೆಂಬುವವ ತನ್ನ ತೊಡೆಯ ಚರ್ಮಕೊಯ್ದು ಚೆಮ್ಮಾಳಿಗೆ ಮಾಡಿಕೊಟ್ಟನೆಂಬ ಕಥನವೊಂದಿದೆ. ಅದನ್ನು ನೆನೆಸುವಂತೆ ಈ ಚಮ್ಮಾಳಿಗೆಯ ಸೇವೆ ಇಂದಿನವರೆಗೂ ಜಾತ್ರೆಯ ಸಂದರ್ಭದಲ್ಲಿ ನಡೆದುಕೊಡು ಬಂದಿದೆ.

ಅಮೋಘಸಿದ್ಧ ಕೈಲಾಸದಿಂದ ಭೂಲೋಕಕ್ಕೆ ಬರುವಾಗ ಶಿವನಿಂದ ಪಡೆದುಕೊಂಡು ಬಂದನೆಂದು ಭಾವಿಸಲಾದ ಅಂಶಗಳಿಗೂ ಭಕ್ತರ ಮನೆಗೆ ದೇವರು ಮಾರಯರು ಕೊಡುವ ಹರಕೆಗೂ ನಿಕಟವಾದ ಸಂಬಂಧವಿದೆ. ಶಿವನಿಂದ ಅಮೋಘಸಿದ್ಧ ಪಡೆದ ವರಗಳೆಂದರೆ ಮಳೆಕೀಲು, ಬೆಳೆಕೀಲು, ಭಂಡಾರ ಭರಣಿ ಹಾಗೂ ಹುಟ್ಟು ಬಂಜೆಯರಿಗೆ ತೊಟ್ಟಿಲು ಭಾಗ್ಯ, ಸಂತಾನ ಫಲದ ಹರಕೆಯ ಜೊತೆಗೆ ಕೊರಡು ಬರಡು ಜಾಗೆಯಲ್ಲಿ ಕೊನರು ಹಯನಗಳನ್ನು ಸ್ಥಾಪಿಸುತ್ತಾರೆ.

ಕೆರೂರು ಜಾತ್ರೆಯ ಚರಿತ್ರೆ

ಶಿವರಾತ್ರಿ ಅಮವಾಸ್ಯೆಯಾದ ಐದನೇ ದಿನದಿಂದ ಮೊದಲ ರಾತ್ರಿ ಪ್ರಾರಂಭವಾಗುತ್ತದೆ.

ಮೊದಲ ದಿನ: ಕರಿ ಕಟ್ಟುವುದು, ಕರಿ ಕಟ್ಟಿತೆಂದರೆ ಮನೆಯಲ್ಲಿ ಮತ್ತು ಊರೊಳಗೆ ಸಾಂಪ್ರದಾಯಕ ಕಾರ್ಯಕ್ರಮಗಳಿಗೆ ನಿರ್ಬಂಧ, ಮಡಿಪಾಲನೆ ಮನೆಯಲ್ಲಿ ರೊಟ್ಟಿ ಊಟ ಇರುವುದಿಲ್ಲ.

ಚಮ್ಮಾಳಿಗೆ: ಮಾದಿಗರ ಸಮಾಜದವರು ಅವರ ಓಣಿಯಲ್ಲಿ ಕಟ್ಟಿಯ ಮೇಲೆ ಅದೇ ದಿನ ಚರ್ಮ ತಂದು ಅಲ್ಲಿಯೇ ಇಡೀ ರಾತ್ರಿ ಹದ ಮಾಡಿ ಪಾದರಕ್ಷಗಳನ್ನು ತಯಾರಿಸಿ

ನಸುಕಿನ ಜಾವ (ಅಂದರೆ ಅಮವಾಸೆಯಾದ ೫ನೇ ದಿನದ ಬೆಳಗಿನ ಜಾವ) ವಾದ್ಯ ಮೇಳದೊಂದಿಗೆ ಗದ್ದುಗೆ ಮನೆಗೆ ತರುತ್ತಾರೆ.

ಅದೇ ದಿನ ಮಧ್ಯಾಹ್ನ ೧೨ ಗಂಟೆಯ ಸುಮಾರಿನಿಂದ ದೀವಟಿಗೆ ಹಚ್ಚುತ್ತೇವೆಂದು. ಬೇಡಿಕೊಂಡ ಭಕ್ತರ ಮಾದಿಗರ ಸಮಾಜದವರನ್ನು ತಮ್ಮ ಮನೆಗೆ ಕರೆಯಿಸಿ ಅವರಿಗೆ ಹೊಸ ಬಟ್ಟೆಯನ್ನು ಕೊಟ್ಟು ಅವರಿಂದ ದೀವಟಿಗೆಗಳನ್ನು ಗದ್ದುಗೆ ಮನೆಯ ಮುಂದೆ ಸೇರಿವರು. ಆ ಸಮಯದಲ್ಲಿ ನಗಾರಿ ಎತ್ತಿನ ಹಕ್ಕುದಾರರಾದ ಪಾಟೀಲ ಬಂಧುಗಳು (ಭಂಗ್ಯಾಗೋಳ) ಮತ್ತು ಧನವಡೆ ಬಂಧುಗಳು (ಚಿಲಿಬಿಲಿಗೊಳ) ಕುಟುಂಬದವರೆಗೆ ಸೇರಿದ ಒಂದೊಂದು ಕಿಲಾರಿ ಎತ್ತುಗಳನ್ನು ಅವರವರು ಶೃಂಗರಿಸಿ ಎತ್ತಿನ ಮೇಲೆ ನಗಾರಿಗಳನ್ನು ಹೇರಿಕೊಂಡು ಗದ್ದುಗೆ ಮನೆಗೆ ಬರುವರು. ಊರಿನ ಜನರು ನೈವೇದ್ಯ ಕೊಟ್ಟು ಆಶೀರ್ವಾದ ಪಡೆದುಕೊಳ್ಳುವರು. ಮಧ್ಯಾಹ್ನ ೨ರಿಂದ ೪ ಗಂಟೆಯ ಸುಮಾರಿಗೆ ಗದ್ದುಗೆ ಮನೆಯಿಂದ ದೇವರ ಪಲ್ಲಕ್ಕಿಯು (ಅರಣ್ಯಸಿದ್ಧ ಮತ್ತು ಮಲಕಾರಿಸಿದ್ಧರ) ಎಲ್ಲ ನಗಾರಿ ಎತ್ತುಗಳು, ಶೃಂಗಾರ ಮಾಡಿದ ದೇವರ ಕುದುರೆ, ದೀವಟಿಗೆಯವರೊಂದಿಗೆ ಹಾಗೂ ವಾದ್ಯಮೇಳಗಳೊಂದಿಗೆ ಊರಿನ ಪ್ರಮುಖ ಬೀದಿಯಿಂದ ಹೊರಟು ರಾತ್ರಿ ಹೊತ್ತು ಊರಿನ ಹೊರವಲಯದ ಬನದಲ್ಲಿರುವ ಬೀರಪ್ಪಜ್ಜನ ಗುಡಿಯ ಹತ್ತಿರ ಹೋಗುವುದು. ಅಲ್ಲಿಂದ ರಾತ್ರಿ ೮ರಿಂದ ೧೦ರ ಸುಮಾರಿಗೆ (ಕುದುರೆಯನ್ನು ಬೆಳ್ಳಿ ಆಭರಣದಿಂದ ಶೃಂಗರಿಸುವರು) ಬನದಲ್ಲಿರುವ ಗುಡಿಯ ಬದಿಗಿರುವ ಪಲ್ಲಕ್ಕಿಯ ಮಂಟಪದಲ್ಲಿ ಪಲ್ಲಕ್ಕಿ ಕೂಡುವುದು, ಆ ಸಮಯದಲ್ಲಿ ಅಮೋಘಸಿದ್ಧೇಶ್ವರ ಪಲ್ಲಕ್ಕಿಯು ಕೂಡ ಅಲ್ಲಿಯೇ ಸೇರುವುದು.

ದೇವರ ಪಲ್ಲಕ್ಕಿಯು ಬನದಲ್ಲಿ ಹೋಗಿ ಮಂಟಪಕ್ಕೆ ತಲುಪಿದ ನಂತರ ಚಿದಾನಂದ (ಖಾನಪಜ್ಜ) ಒಡೆಯರ ಅವರು ಜಾತ್ರೆ ಮುಗಿಯುವವರೆಗೆ ಉಪವಾಸ ಮಾಡುತ್ತಾರೆ. ಅಲ್ಲದೇ ಜಾತ್ರೆ ಮುಗಿಯುವವರೆಗೆ ಅಲ್ಲಿಯೇ ಇರುತ್ತಾರೆ.

ತಾವು ತಮ್ಮ ಮನಸ್ಸಿನಲ್ಲಿ ಅಂದುಕೊಂಡತೆ ೫ ದಿನಗಳವರೆಗೆ ಮಡಿಯಿಂದ ದೇವರಿಗೆ ದಂಡವತ ಹಾಕುವರು. ಕೆಲವರು ಮನೆಯಿಂದ ಹಾಗೂ ಕೆಲವು ಗುಡಿಯ ಸುತ್ತ ಪ್ರದಕ್ಷಿಣೆ ಹಾಕುವರು. ೨ನೇ ದಿನದ ವಸುಕಿನ ಜಾವ ದೀವಟಿಗೆ ನಂದಿಸುವರು.

ಎರಡನೇ ದಿನ: ಮುಂಜಾನೆ ಯಾತ್ರಾ ಕಮೀಟಿಯವರು ಸೈಕಲ್ ಹಾಗೂ ಕುದುರೆ ಶರ್ಯತ್ತವನ್ನು ಆಯೋಜಿಸುವರು. ಆ ದಿನದಿಂದಲೇ ಕೆಲವು ಭಕ್ತರು ಮಾದಿಗರ ಓಣಿಯಿಂದ ಅವರವರ ಮನೆಗೆ ಹಕ್ಕುದಾರರಾಗಿರುವ ಮಾದಿಗರನ್ನು ಕರೆದೊಯ್ದು ಅವರಿಗೆ ಬಾಳೆಹಣ್ಣು ಹಾಗೂ ಸಿಹಿ ಪ್ರಸಾದ (ಊಟ) ಮಾಡಿಸುವರು.

ಮೂರನೆ ದಿನ: ಮುಂಜಾನೆ ಯಾತ್ರಾ ಕಮೀಟಿಯವರು ಕುದುರೆ, ಜೋಡೆತ್ತುಗಳ ಗಾಡಿ ಶರ್ಯತ್ತು ಆಯೋಜಿಸುವರು. ಈ ದಿನವೂ ಕೂಡ ಮಾದಿಗರಿಗೆ ಪ್ರಸಾದ ಮಾಡುವ ಪದ್ಧತಿಯಿದೆ.

ನಾಲ್ಕನೆ ದಿನ: ಮುಂಜಾನೆಯಿಂದಲೇ ಹೋಳಿಗೆ, ಅನ್ನ ಹಾಗೂ ಬಾಳೆಹಣ್ಣು ನೇವೈದ್ಯಯನ್ನು ಬನದಲ್ಲಿರುವ ಪಲ್ಲಕ್ಕಿ ಹಾಗೂ ದೇವರಿಗೆ (ಮಳಿಸಿದ್ಧ, ಭೂತಾಳಸಿದ್ಧ, ಅಮೋಘಸಿದ್ಧ, ಅರಣ್ಯಸಿದ್ಧ, ಮಲಕಾರಿಸಿದ್ಧ, ಭರಮಪ್ಪ, ಜಿನ್ನಪ್ಪ, ಬೀರಪ್ಪಜ್ಜ) ಕೊಡುವರು.

ಐದನೇ ದಿನ; (**ನಿವ್ವಾಳಕಿ**) ಮುಂಜಾನೆ ೮ ಗಂಟೆಗೆ ಇಬ್ಬರು ಭಕ್ತರು ಮಡಿಯಿಂದ ತಾಮ್ರದ ಕೊಡದಲ್ಲಿ ಬೀರಪ್ಪಜ್ಜನ ಗುಡಿಯ ಹಿಂದೆ ಇರುವ ಬಾವಿಯಿಂದ ನೀರು ತುಂಬಿಕೊಂಡು ಮಾದಿಗರ ಹಕ್ಕುದಾರರು ಅವರನ್ನು ಸುತ್ತುವರಿದುಕೊಂಡು ಯಾವುದೇ ತರಹದ ಮೈಲಿಗೆಯಾಗದಂತೆ ಗುಡಿಗೆ (ಪಲ್ಲಕ್ಕಿಯ ಕಡೆಗೆ) ತರುವರು. ಆ ನೀರನ್ನು ಕಾಯಿಸಿ ಅದರಿಂದ (ಬಾನವಜ್ಜ) ಚಿದಾನಂದ ಒಡೆಯರು ಅರಣ್ಯಸಿದ್ಧೇಶ್ವರ ಗುಡಿಯ ಹಿಂದೆ ಸ್ನಾನ ಮಾಡುವರು. ಅವರು ಪೂಜೆ ಮಾಡಿಕೊಂಡ ನಂತರ ಊರಿನ ಪ್ರಮುಖರಲ್ಲಿ ಒಬ್ಬರಾದ ಮಲ್ಲಿಕಾರ್ಜುನ ಪಾಟೀಲ (ಧನವಡೆ) ಇವರು ಸ್ವಾಮೀಜಿಯವರ ಪಾದ ಪೂಜೆ ಮಾಡುವರು. ಅನಂತರ ಅವರು ದೇವರಿಗೆ ನಮಸ್ಕಾರಿಸುವರು.

ಅನಂತರ ಖಾನಪ್ಪ ಅಜ್ಜನವರನ್ನು ಕಂಬಳಿಯಲ್ಲಿ ಮುಚ್ಚಿಕೊಂಡು (ಖನ್ನಪ್ಪ ತಾಯಿ ಬಾವಿ) ಬೀರಪ್ಪಜ್ಜನ ಗುಡಿಯ ಕಡೆಗೆ ಹೋಗುವರು. ಅವರೊಂದಿಗೆ ಪಲ್ಲಕ್ಕಿ ಬೀರಪ್ಪಜ್ಜನ ಗುಡಿಯ ಕಡೆಗೆ ಸಾಗುವುದು. ನಿಶಾನೆ, ಢಾಲು ಹಿಡಿದ (ಕುದುರೆ, ನಗಾರಿ ಎತ್ತು, ದನಾಲಿಗೆ, ವಾದ್ಯ ಮೇಳಗಳನ್ನು ಬಾರಿಸುತ್ತ ಮುಂದೆ ಸಾಗುವರು. ಅದರ ಹಿಂದೆ ಪಲ್ಲಕ್ಕಿ). ಅದೂ ಅಲ್ಲದೆ ಮಾದಿಗರ ಪುರುಷ ಭಕ್ತರು ಎರಡೂ ಬದಿಗೆ ಮಾನವ ಸರಪಳಿ ನಿರ್ಮಿಸಿ ಯಾವುದೇ ತರಹದ ಮೈಲಿಗೆ ಆಗದಂತೆ ನೋಡಿಕೊಳ್ಳುವರು. ಗುಡಿಯಿಂದ ಮೆರವಣಿಗೆ ಪ್ರಾರಂಭವಾದಾಗಿನಿಂದ ಹಿಡಿದು ಭಕ್ತರು ಬಾಳೆಹಣ್ಣು, ಭಂಡಾರ, ಖಾರಿಕ, ಕೊಬ್ಬರಿ, ಹೂವು ಇವುಗಳನ್ನು ಅಪಾರ ಪ್ರಮಾಣದಲ್ಲಿ ದೇವರ ಪಲ್ಲಕ್ಕಿ ಹಾಗೂ ಎತ್ತು ಮತ್ತು ಕದುರೆಗಳಿಗೆ ಹಾರಿಸುವರು. ಪಲ್ಲಕ್ಕಿ ಬೀರಪ್ಪಜ್ಜನ ಗುಡಿತಲುಪಿದ ನಂತರ ಗುಡಿಗೆ ಪ್ರದಕ್ಷಿಣೆ ಹಾಕುವಾಗ ಖನ್ನವ್ವ ತಾಯಿಯ ಬಾವಿಯಿಂದ ಮಡಿಯಿಂದ ನೀರು ತಂದು ಸ್ವಾಮೀಜೀಯವರ ಬಾವಿಗೆ ಹಾಕುವರು. ನಂತರ ಮೆರವಣಿಗೆ ಗುಡಿಯ ಕಡೆಗೆ ಬರುವಾಗ ಕೂಡ ಬಾಳೆಹಣ್ಣು, ಭಂಡಾರ ಇತ್ಯಾದಿಗಳನ್ನು ಭಕ್ತಾದಿಗಳು ಹಾರಿಸುತ್ತಾರೆ.

ದೇವವಾಣಿ: ಇಡೀ ವರ್ಷದ ಮಳೆ ಬೆಳೆ, ಸುಖ ದುಃಖಗಳು, ದೇಶದ ರಾಜಕೀಯ ಸ್ಥಿತಿಗತಿಯ ಕುರಿತು ವಿವರವಾದ ಮಾಹಿತಿ ಸಿಗುವುದು.

ಗುಡಿಯ ಹಿಂದೆ ಇರುವ ಬನವ್ವನ ಗುಡಿಯ ಬದಿಗೆ ಪಲ್ಲಕ್ಕಿ ಬಂದು ನಿಲ್ಲುತ್ತದೆ. ಮುಂದೆ ಒಡೆಯರ ಇವರನ್ನು ಖನ್ನವ್ವ ತಾಯಿಯ ಗುಡಿಯ ಮುಂದೆ ಕರೆದುಕೊಂಡು ಬರುವರು. ಆಗ ಅವರಿಂದ ದೇವವಾಣಿಯು ಆಗುತ್ತದೆ. ಅದನ್ನು ಕೇಳಲು ಜಾತ್ರೆಯ ಎಲ್ಲ ಭಕ್ತಾದಿಗಳು ಅಲ್ಲಿಯೇ ಕೆಳಗೆ ಕುಳಿತು ಅತೀ ಶಾಂತರೀತಿಯಿಂದ ದೇವವಾಣಿಯನ್ನು ಆಲಿಸುತ್ತಾರೆ. ಜಾತ್ರೆ ಪ್ರಮುಖರಲ್ಲಿ ದೇವವಾಣಿಯನ್ನು ಬರೆದುಕೊಂಡು ಎಲ್ಲ ಜಾತ್ರಾರ್ಥಿಗಳಿಗೆ ಸ್ಪೀಕರನಲ್ಲಿ ಓದಿ ಹೇಳುವರು. ಇದನ್ನು ಕೇಳಿ ಎಲ್ಲ ಭಕ್ತರು ಪುನೀತರಾಗುವರು. ಇದಾದ ನಂತರ ಪಲ್ಲಕ್ಕಿಯು ಬಲಬದಿಯ ಮಂಟಪದಲ್ಲಿ ಕೂಡುತ್ತದೆ. ಇಲ್ಲಿಗೆ ನಿವ್ವಾಳಕಿ ಕಾರ್ಯಕ್ರಮ ಮುಗಿಯುತ್ತದೆ. ಆಮೇಲೆ ಸಂಜೆ ವೇಳೆಗೆ ಮೆರವಣಿಗೆ ವಾದ್ಯಮೇಳಗಳೊಂದಿಗೆ ದೇವರ ಪಲ್ಲಕ್ಕಿ ಗದ್ದುಗೆ ಊರಿನ ಪ್ರಮುಖ ಬೀದಿಯಿಂದ ರಾತ್ರಿ ವೇಳೆಗೆ ತಲುಪುವುದು.

ಜಾತ್ರೆಯ ಸಮಯ ಹಾಗೂ ಗದ್ದುಗೆ ಮನೆಯಲ್ಲಿ ಒಡೆಯರ ಕುಟುಂಬಸ್ಥರು ಭಂಡಾರ ಹಚ್ಚುವರು. ಇನ್ನುಳಿದ ವೇಳೆಯಲ್ಲಿ ಬೇಡಿಕೊಂಡ ಭಕ್ತಾದಿಗಳ ಮನೆಗೆ ಹೋಗಬೇಕಾದರೆ ಒಂದೆರಡು ದಿನಗಳ ಮೊದಲು ಅವರು ಅಂದುಕೊಂಡ ಮೂಹೂರ್ತಕ್ಕಿಂತ ಮೊದಲು ಲಕ್ಷ್ಮಣ ಗಡದೆ ಹಾಗೂ ಅವರ ಕುಟುಂಬದವರು ಅವರವರ ಸರದಿಯಂತೆ ನಗಾರಿ ಎತ್ತುಗಳು ಇರುವ ಮನೆಗೆ ಹೋಗಿ ಭಂಡಾರ ಕೊಡುವ ಸಂಪ್ರದಾಯವಿದೆ. ಭಕ್ತರು ಕೂಡ ಪಲ್ಲಕ್ಕಿ ತೆಗೆದುಕೊಂಡು ಹೋಗುವ ಮೊದಲು ಭಂಡಾರ ಗದ್ದುಗೆ ಮನೆಯಲ್ಲಿ ಕೊಟ್ಟು ಮೂಹೂರ್ತ ಒಪ್ಪಿಕೊಂಡು ಹೋಗಬೇಕು.

ನಂಬಿಕೆ: ಬನದಾಗ ರವಿವಾರ ಮತ್ತು ಅಮವಾಸ್ಯೆಗೆ ಕವಲು ಹಚ್ಚುವರು. ಪ್ರತಿ ಏರಿಸಿ ಹಚ್ಚುವರು.

ಪ್ರತಿ ಗುರುವಾರ, ರವಿವಾರ ಮತ್ತು ಅಮವಾಸೆಯೆಂದು ದೇವನುಡಿಯಾಗುವುದು. (ದೇವರಷಿ) ಭಕ್ತರು ತಮ್ಮ ಸಮಸ್ಯೆಗಳನ್ನು ಕುರಿತು ಕೇಳುತ್ತಾರೆ. ಹೀಗೆ ಐದು ದಿನಗಳ ಕಾಲ ಜಾತ್ರೆ ಕೆರೂರಿನಲ್ಲಿ ವಿಜೃಂಭಣೆಯಿಂದ ನೆರವೇರುತ್ತದೆ.

ಬೀರೇಶ್ವರ ಜಾತ್ರೆ 'ಯಕ್ಸಂಬಾ'

ಈ ಗ್ರಾಮಕ್ಕೆ ನಾಡಿನ ಹಲವಾರು ಹೆಸರಾಂತ ಸಾಹಿತಿಗಳು ಆಗಮಿಸಿದ್ದಾರೆ. ನೆವ್ಹೆಂಬರ ೧ ಕರ್ನಾಟಕ ರಾಜ್ಯೋತ್ಸವವನ್ನು ಬಹಳ ಅದ್ದೂರಿಯಿಂದ 'ಕನ್ನಡ ಗೆಳೆಯರ ಬಳಗ' ಕಳೆದ ಹಲವಾರು ವರುಷಗಳಿಂದ ನಡೆಸಿಕೊಂಡು ಬಂದಿದೆ. ಡಾ.ಹಾ.ಮಾ.ನಾಯಕ, ಕಯ್ಯಾರ ಕಿಞ್ಞಣ್ಣ ರೈ, ಚಂದ್ರಶೇಖರ ಪಾಟೀಲ, ಚಂದ್ರಕಾಂತ ಪೋಕಳೆ, ಸಾ.ಶಿ.ಮರುಳಯ್ಯಾ, ಡಾ.ಶಿವರಾಮ ಕಾರಂತ ಹೀಗೆ ಅನೇಕರು ಇಲ್ಲಿಗೆ ಆಗಮಿಸಿ ಕನ್ನಡದ ಡಿಂಡಿಂ ಬಾರಿಸಿದ್ದಾರೆ.

ಶಿವರಾಮ ಕಾರಂತರು ಊರಿಗೆ ಬಂದಾಗ ಈ ಊರಿನ ಹೆಸರು ಕೇಳಿದರೆ ಯಾವುದೋ ವಿದೇಶದಲ್ಲಿರುವು ಊರಿನ ಹೆಸರಿದೆಯೆಂದರು ಚಿಕ್ಕೋಡಿಯಿಂದ ೧೧ ಕಿ.ಮೀ ದೂರದಲ್ಲಿರುವು ವೇದಗಂಗಾ, ದೂದಗಂಗಾ, ಕೃಷ್ಣಾ ನದಿಗಳ ತ್ರಿವೇಣಿ ಸಂಗಮದಿಂದ ಅನತಿ ದೂರದಲ್ಲಿರುವ ಯಕ್ಸಂಬಾವು ಕರ್ನಾಟಕ ಮಹಾರಾಷ್ಟ್ರ ರಾಜ್ಯಗಳ ಗಡಿ ಗ್ರಾಮವೂ ಆಗಿದೆ.

ಊರಿನ ಜನಸಂಖ್ಯೆಯಲ್ಲಿ ಲಿಂಗಾಯತರು, ಬ್ರಾಹ್ಮಣ, ಜೈನ, ಹರಿಜನ, ಕುರಬರು, ಬಹುಸಂಖ್ಯೆಯಲ್ಲಿದ್ದಾರೆ. ಈ ಎಲ್ಲಾ ಜನರ ಗ್ರಾಮದೇವತೆ ಶ್ರೀ ಬೀರೇಶ್ವರ ಗ್ರಾಮದವರಿಗಷ್ಟೇ ಅಲ್ಲದೇ ಸುತ್ತಮುತ್ತಲಿನ ಗ್ರಾಮದವರಿಗೂ ಈ ದೇವರ ಕೃಪಾಕಟಾಕ್ಷವಿದೆ.

ಮಾಘ ಮಾಸದ ಪ್ರಾರಂಭದಿನ ಹಾಗೂ ಪೌಷ್ಯ ಮಾಸದ ಕೊನೆಯ ದಿನ (ಅವರಾದಿ ಅಮವಾಸ್ಯೆ) ಪ್ರಾರಂಭವಾಗವುದೇ ಈ ಸಾಳಿ ಜಾತ್ರೆ/ ವಿಶಾಳಿ ಜಾತ್ರೆ ಎಂದೇ ಪ್ರಸಿದ್ಧಿ ಅವರಾದಿ ಅಮವಾಸ್ಯೆಯ ದಿನ ಗ್ರಾಮದ ಪ್ರಮುಖ ದೇವರ ಪಲ್ಲಕ್ಕಿಗಳು ನದಿ ಸ್ನಾನಕ್ಕೆ ತೆರಳಿದರೆ ಅವುಗಳ ಜೊತೆಗೆ ಸುತ್ತೂರಿನ ಗ್ರಾಮದ ಜನರು ಬುತ್ತಿ ಕಟ್ಟಿಕೊಂಡು ನದಿ ಸ್ನಾನ ಮಾಡಿ ದೇವರಿಗೆ ರೊಟ್ಟಿ ಚಟ್ನಿ ಎಣ್ಣೆಗಾಯಿ ಬದನೇಕಾಯಿ ಹುಳಬಾನ (ಜೋಳದ ಅನ್ನ) ನೇವೇದ್ಯ ತೋರಿಸಿ ಎಲ್ಲರೂ ಹಂಚಿಕೊಂಡು ಊಟ ಮಾಡುವರು. ಸಂಜೆಯ ಹೊತ್ತಿಗೆ ತಮ್ಮ ತಮ್ಮ ಊರಿಗೆ ಮರಳಿದರೆ ಯಕ್ಸಂಬಾದ ಜನರು ಬರುವ ಪಲ್ಲಕ್ಕಿಗಳಿಗೆ ಹೋಳಿಗೆ ನ್ಯವೇದ್ಯ ತಯಾರಿ ನಡೆಸುವರು ಗ್ರಾಮದ ೫ ಪಲ್ಲಕ್ಕಿಗಳು ನದಿಯಿಂದ ಬಂದು ಊರು ಅಗಸಿ ಬಾಗಿಲಿನ ಹತ್ತಿರವಿರುವ ಪಾದಕಟ್ಟೆಯ ಮೇಲೆ ಆಸೀನವಾಗುವವು. ಅವುಗಳಲ್ಲಿ ಎರಡು ದೊಡ್ಡ ಕಟ್ಟೆಗಳಾದರೆ ೩ ಸಣ್ಣದಾಗಿವೆ.

ಮಾನದ ಎರಡು ಪಾದಕಟ್ಟೆಗಳಲ್ಲಿ ಎರಡು ಬೀರಪ್ಪ ದೇವರು ಒಂದು ಮಹಾದೇವ ದೇವರದು ಒಂದು ಏಕನಾಥ ದೇವರದು ಒಂದು ಮಾರುತಿಯ ದೇವರುಗಳಾಗಿವೆ. ರಾತ್ರಿಯ ಹೊತ್ತು ಹೋಳಿಗೆ ನ್ಯವೇದ್ಯವಾದ ಮೇಲೆ ಬೆಳಗಿನ ಜಾವದವರೆಗೆ ಡೊಳ್ಳಿನ ಕುಣಿತ ಹಾಡುಗಳ ಮುಖಾಂತರ ಜಾಗರಣೆ ಮಾಡಿ ಬೆಳಗಿನ ಜಾವದಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿಯ ಮೆರವಣಿಗೆ ಮಾಡುವರು.

ಪಲ್ಲಕ್ಕಿಗಳ ಮುಂದೆ ನಂದಿ ಕೋಲುಗಳ ಕುಣಿತ ಡೊಳ್ಳುವಾದ್ಯ ಮುಂತಾದ ವಾದ್ಯ ಪ್ರಕಾರಗಳ ಮುಖಾಂತರ ಅಮವಾಸ್ಯೆಯ ಮರುದಿನ ಯಾವುದೇ ಜಾತಿ, ಮತ, ಪಂಥ ಭೇದ ಭಾವವಿಲ್ಲದೇ ಅತ್ಯಂತ ವಿಜೃಂಭಣೆಯಿಂದ ನೆರೆವೇರುವುದು. ಮತ್ತೆ ಆ ದಿನ ಗ್ರಾಮದ ಹೆಂಗಳೆಯರು ಗ್ರಾಮದ ಎಲ್ಲಾ ದೇವರಿಗೂ ಹೋಳಿಗೆ ನ್ಯವೇದ್ಯ ನೀಡುವುದು ಪದ್ಧತಿ.

ಈ ಜಾತ್ರೆಯಲ್ಲಿ ನಂದಿಕೋಲಿನ ವೈಶಿಷ್ಟ್ಯವೇ ಬೇರೆ ಎಲ್ಲರ ಬಾಗಿಲುಗಳಲ್ಲಿ ನಂದಿ ಕೋಲುಗಳನ್ನು ನಿಲ್ಲಿಸಿ ಅವುಗಳನ್ನು ಪೂಜಿಸಿ ಬಾರಿಸುತ್ತ ಮೆರವಣಿಗೆಯ ಮೂಲಕ ಮುಖ್ಯ ಗುಡಿಯ ಹತ್ತಿರ ತಂದು ಬೇರೆ ಬೇರೆ ಕಡೆಯಿಂದ ಬಂದ ನಂದಿಕೋಲುಗಳನ್ನು ಹೊತ್ತು ಅವುಗಳನ್ನು ಹೆಗಲ ಮೇಲೆ ತಲೆಯ ಮೇಲೆ ಹೊತ್ತು ಕುಣಿಸುವ ಪರಿ ನೋಡುವಂಥದು.

ಉತ್ಸವ ಮೂರ್ತಿಗೆ ಬಿಳಿ ಮತ್ತು ಹಳದಿ ವಸ್ತ್ರಗಳನ್ನು ಅಲಂಕಾರಕ್ಕೇ ಬಳಸುವದು ಹೆಚ್ಚು ದೇವರ ಮುಖಗಳು ಸಂಪೂರ್ಣ ಬೆಳ್ಳಿಯಿಂದ ಮಾಡಿದ್ದಾರೆ ಹರಕೆ ಹೊತ್ತುವರು ಬೀರೇಶ್ವರನಿಗೆ ಬೆಳ್ಳಿಯ ಕುದುರೆ ಏರಿಸುವುದನ್ನು ಬೇಡಿಕೊಂಡು ಕಾರ್ಯ ಸಫಲವಾದರೆ ಕುದುರೆ ಏರಿಸಿ ಹರಕೆ ತೀರಿಸುವರು. ಇಲ್ಲಿಯೂ ಕೂಡ ಜಾತಿಯ ನಿರ್ಬಂಧವಿಲ್ಲ ಎಲ್ಲರಿಗೂ ಮುಕ್ತ ಅವಕಾಶವಿದೆ.

ಬೀರೇಶ್ವರನ ಭಕ್ತರ ಸಂಖ್ಯೆಯೂ ಅಪಾರ. ಬೇರೆ ಬೇರೆ ಊರಿನಿಂದ ಬಂದ ಜನ ಜಾತ್ರೆಯ ಸಂಭ್ರಮವನ್ನು ಇಮ್ಮಡಿಗೊಳಿಸುವರು. ಬೀರೇಶ್ವರ ಪೂಜೆ ಮಾಡುವ ಹಕ್ಕು ಮಾತ್ರ ಕುರುಬ ಜನಾಂಗಕ್ಕಿದೆ. ಅವರಿಗೆ 'ಪೂಜೇರಿ' ಎಂದು ಕರೆಯುತ್ತಾರೆ. ಈ ಜಾತ್ರೆಯಲ್ಲಿ ಸುತ್ತಮುತ್ತಲಿನ ಗ್ರಾಮ ದೇವರು ಪಲ್ಲಕ್ಕಿಗಳು ಭಾಗವಹಿಸುವವು. ಯಕ್ಸಂಬಾ ಗ್ರಾಮದ ಪಲ್ಲಕ್ಕಿಗಳು ಪ್ರಮುಖ ದೇವಾಲಯದ ಮುಂದೆ ಹಾದು ಕೊನೆಯದಾಗಿ ಹರಿಜನ ಕೇರಿಯಲ್ಲಿರುವ 'ಥಳೋಬಾ' ದೇವರಿಗೆ ಭೇಟಿ ಕೊಟ್ಟು ಪ್ರಮುಖ ದೇವಾಲಯಕ್ಕೆ ಬಂದು ಎರಡು ಪ್ರದಕ್ಷಿಣೆ ಹಾಕುವುದರೊಳಗೆ ದೇವಾಲಯದ ಮುಖ್ಯ ದ್ವಾರಕ್ಕೆ ತೆಂಗಿನಕಾಯಿಗಳನ್ನು ೧೦೦ಮೀ ಅಂತರದಲ್ಲಿ ನಿಂತು ಭಕ್ತರು ಬೀಸಿ ಬೀಸಿ ಒಗೆಯುತ್ತಾರೆ. ಹೀಗೆ ಒಗೆದು ಒಡೆದ ತೆಂಗಿನಕಾಯಿಗಳನ್ನು ಕುರುಬರು ತಲೆಗೆ ಕಂಬಳಿ ಕಟ್ಟಿಕೊಂಡು ಬಿದ್ದ ತೆಂಗಿನಕಾಯಿಗಳ ಚೀಲ ತುಂಬುತ್ತಾರೆ. ಇದೊಂದು ಇಲ್ಲಿಯ ವಿಶೇಷತೆ. ಇದಕ್ಕೆ ಹರಕೆ ಹೊತ್ತುವರು, ಭಕ್ತರು ಕಾಯಿ ಹಾರಿಸುವುದು ಎನ್ನುತ್ತಾರೆ. ಇದನ್ನು ನೋಡುವುದೇ ಕಣ್ಣಿಗೆ ಹಬ್ಬ. ಇದರಲ್ಲಿ ಪುರುಷರು ಮಾತ್ರ ಪಾಲ್ಗೋಳ್ಳುತ್ತಾರೆ. ಮಹಿಳೆಯರು ಮನೆ ಮಹಡಿಯ ಮೇಲೆ ನಿಂತು ಈ ದೃಶ್ಯ ನೋಡಿ ಕಣ್ತುಂಬಿಕೊಳ್ಳುತ್ತಾರೆ. ಎಲ್ಲರೂ ಇದರಲ್ಲಿ ಪಾಲ್ಗೊಂಡು ಸರಿಸುಮಾರು ೩ ಗಂಟೆಗೂ ಅದಿಕ ಕಾಲ ಕಾಯಿ ಹಾರಿಸುವರು. ಹರಕೆ ಹೊತ್ತು ಭಕ್ತರು ೫ ರಿಂದ ೧೦೦ರತನಕ ಕಾಯಿಗಳನ್ನು ಹಾರಿಸುತ್ತಾರೆ. ಇದು ಜಾತ್ರೆಯ ಮೊದಲನೆ ದಿನ.

ಜಾತ್ರೆಯ ಎರಡನೇ ದಿನ ಭಂಡಾರ ಹಾರಿಸುವರು ಎಂದೇ ಪ್ರಸಿದ್ಧಿ ಹರಕೆ ಹೊತ್ತುವರು ಹೊರಲಾರದವರು ಭಂಡಾರವನ್ನು ಹಾರಿಸುವರು. ಅದರ ಜೊತೆಗೆ ಒಣಕೊಬ್ಬರಿ ಉತ್ತತ್ತಿ ಬೆಂಡ ಬತ್ತಾಸಗಳನ್ನು ಹಾರಿಸುತ್ತ ಮೂರು ಪ್ರದಕ್ಷಿಣೆ ಹಾಕುವರು. ಮೂರನೇಯ

ದಿನ ಊರು ಕುರುಬರ ಜಾತ್ರೆ ಅವರೂ ಕೂಡ ಭಂಡಾರ ಉತ್ತತ್ತಿ ಬೆಂಡ ಬತ್ತಾಸಗಳನ್ನು ಹಾರಿಸುವರು. ಎರಡನೆ ದಿನ ಮೂರನೆ ದಿನ ಕನಿಷ್ಟ ಪಕ್ಷ ೨೦೦ ರಿಂದ ೩೦೦ ಚೀಲದತನಕ ಭಂಡಾರ ಹಾರಿಸುವದು ವಾಡಿಕೆ. ಅಂಗಡಿ ವ್ಯಾಪಾರಿಗಳಿಗೆ ಹೊಟೇಲು ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರವಾಗುತ್ತದೆ. ಜಾತ್ರೆಯ ದಿನಗಳಲ್ಲಿ ಕುರುಬರಿಗೆ ಹೆಚ್ಚಿನ ಮಾನ ಸನ್ಮಾನ ಸಲ್ಲುತ್ತದೆ ಅವರಿಗೆ ಹುಗ್ಗಿ ಹೋಳಿಗೆ ಮಾಡಿ ಊಟಕ್ಕೆ ಕರೆಯವದು, ಕರಿ ಕಂಬಳ ಬಿಳಿಯ ಧೋತರ ವಸ್ತ್ರಗಳಿಗೆ ಎಲ್ಲಿಲ್ಲದ ಬೇಡಿಕೆ.

ಈ ಜಾತ್ರೆಯ ವೈಶಿಷ್ಟ್ಯವೇನೆಂದರೆ ಎಲ್ಲಿಯೂ ಪ್ರಾಣಿ ಬಲಿ ಇಲ್ಲ. ಎಲ್ಲ ಜನಾಂಗದವರಿಂದ ಶಾಖಾಹಾರಿ ನೈವೇದ್ಯಕ್ಕೆ ಪ್ರಧಾನ್ಯ. ಗ್ರಾಮದ ಸಂತೆಯ ದಿನ ಮಂಗಳವಾರವಾದ ಕಾರಣ ಜಾತ್ರೆ ಪ್ರಾರಂಭವಾಗಿ ಮುಕ್ತಾಯಗೊಳ್ಳುವದು ಬರುವ ಮಂಗಳವಾರ. ಅದೇ ಪ್ರಾಂಗಣದಲ್ಲಿ ಸೇರಿ ವರುಷದಿಂದ ವರುಷಕ್ಕೆ ಜಾತ್ರೆ ಅತೀ ಹೆಚ್ಚು ಜನರನ್ನು ಆಕರ್ಷಿಸುತ್ತಿರುವುದು ಅದರ ವಿಶಿಷ್ಠತೆಗೆ ಸಾಕ್ಷಿ ಇತ್ತಿತ್ತಲಾಗಿ ಬಡಿಗೆ ಬಾರುಕೋಲು ರಹಿತ, ಚಕ್ಕಡಿ ಗಾಡಿ ಶರ್ಯತ್ತು ಕರ್ನಾಟಕದಾದ್ಯಂತ ಹೆಸರುವಾಸಿಯಾಗಿದೆ. ಯಕ್ಸಂಬಾ ಗ್ರಾಮದ ಸಮೀಪದ 'ನನದಿ' ಎನ್ನುವ ಗ್ರಾಮದಲ್ಲಿ ಹಾಲಸಿದ್ಧನಾಥ ಜಾತ್ರೆ ಈ ಜಾತ್ರೆಯ ವೃಶಿಷ್ಠತೆಯನ್ನೇ ಪಡೆದುಕೊಂಡಿದೆ.

ಶ್ರೀ ಅಲ್ಲಮಪ್ರಭು ಸಿದ್ಧ ಸಂಸ್ಥಾನ ಮಠ ಚಿಂಚಣಿ

ಸರ್ವಧರ್ಮೀಯರ ಆರಾಧ್ಯ ದೈವ. ಎಂಟನೂರು ವರ್ಷಗಳ ಪ್ರಾಚೀನ ಭವ್ಯ ಪರಂಪರೆಯನ್ನು ಹೊಂದಿದೆ. ಕುವೆಂಪು ಅವರ ಕವಿವಾಣಿಯಂತೆ ಇದೊಂದು ಸರ್ವ ಜನಾಂಗದ ಶಾಂತಿಯ ತೋಟ. ಭಕ್ತರಲ್ಲಿ ಪ್ರಚಲಿತವಿರುವ ಐತಿಹ್ಯದಂತೆ ಹನ್ನೆರಡನೇ ಶತಮಾನದಲ್ಲಿ ಶ್ರೀ ಅಲ್ಲಮಪ್ರಭುದೇವರು ಲೋಕ ಕಲ್ಯಾಣಾರ್ಥವಾಗಿ ದೇಶ ಸಂಚಾರ ಗೈಯುತ್ತ ಬನವಾಸಿಯಿಂದ ಹುಬ್ಬಳಿ–ಹುಕ್ಕೇರಿ, ಎಲಿಮುನ್ನೋಳಿ, ಆಲುರು ಮಾರ್ಗವಾಗಿ ಸಹ್ಯಾದ್ರಿಯ ಸೆರಗಂಚಿನ, ನಿಸರ್ಗ ಸೌಂದರ್ಯದ ಪ್ರಶಾಂತ ವಾತಾವರಣದ ಚಿಂಚಣಿಯಲ್ಲಿ ವಿಶ್ರಮಿಸಿ, ಪೂಜಾನುಷ್ಠಾನ ಕೈಕೊಂಡ ಕುರುಹಾಗಿ ಇಲ್ಲೊಂದು ಗುಹೆ ಇದೆ.

ಅಲ್ಲದೆ ಅಲ್ಲಮ ಮಾಯೆಯನ್ನು ಮೆಟ್ಟಿದ 'ಮಾಯಾ ಕೋಲಾಹಲ' ಕ್ಕೆ ಸಾಕ್ಷಿಯಾಗಿ ಪ್ರಭುವಿನ ಕೃತ ಗದ್ದುಗೆಯ ಹಿಂಭಾಗದಲ್ಲಿ ಮಾಯಾ ದೇವಿಯ ಗುಡಿ ಇದೆ. ಮಾಯಾದೇವಿಗೆ 'ಅವನಾರ್ತಿ' ಎಂಬು ಹೆಸರು ರೂಢಿಯಲ್ಲಿದ್ದು ಅವಳು ಸಾಕ್ಷಾತ ಜಗನ್ಮಾತೆಯ 'ಅವತಾರಿಸಿ' ಆಗಿರಬಹುದು. ಇದನ್ನು ಅವ್ವನಿಗೆ ಆರತಿ 'ಅವನಾರ್ತಿ' ಎಂದೂ ಅರ್ಥೈಸಬಹುದಾಗಿದೆ. ಊರಲ್ಲಿ ಯಾರದೇ ಮನೆಯಲ್ಲಿ ಏನೇ ಅವನಾರ್ತಿಯ ಉಡಿ ತುಂಬುವ ಸಂಪ್ರದಾಯ ಇಂದಿಗೂ ಅವರ ಊಡಿ ತುಂಬಿ ಮೊದಲ ಪ್ರಸಾದ ಅವರಿಗೇ ಸಲ್ಲುತ್ತದೆ.

ಇನ್ನು ಮೂರು ವರ್ಷಗಳಿಗೊಮ್ಮೆ ಜರುಗುವ 'ದಾಸೋಹ' ಶ್ರೀ ಮಠದ ಭಕ್ತರ ಭಕ್ತಿಯ ಪರಾಕಾಷ್ಠೆಗೆ ಪ್ರತ್ಯಕ್ಷ ಸಾಕ್ಷಿ, ಅದರ ಅಂಗವಾದ 'ಹೊಂಗಾಡೋತ್ಸವ' ಮಹಾಪ್ರಸಾದದ ಮುನ್ನಾದಿನ ರಾತ್ರಿ ನಡೆಯುವ ಈ ಧಾರ್ಮಿಕ ಪ್ರಕ್ರಿಯೆ ಭಕ್ತರನ್ನು ಭಕ್ತಿಯ ಸಾಗರದಲ್ಲಿ ಈಜಾಡುವಂತೆ ಮಾಡುವದು. ಚಿಕ್ಕ ಬಾಲೆಯರು ಶುಚಿ-ಭೂತರಾಗಿ ಐದು, ಏಳು, ಈ ರೀತಿ ಬೆಸಸಂಖ್ಯೆಯಲ್ಲಿ ಶ್ರೀಗಳ, ಊರ ಹಿರಿಯರ ಕಣ್ಗಾವಲಿನಲ್ಲಿ ಸಾಂಪ್ರದಾಯಿಕ ವಾದ್ಯಗಳ ಮೆರವಣಿಗೆಯಲ್ಲಿ 'ದೊಡ್ಡಳ್ಳ'ಕ್ಕೆ ಸಾಗುವರು. ಅಲ್ಲಿ ಶ್ರೀಗಳ ಹಸ್ತದಿಂದ ಗಂಗಾಪೂಜೆ ವಿಧಿವತ್ತಾಗಿ ಜರುಗುವದು. ಬಾಲೆಯರ ಉಡಿ ತುಂಬಿ ನಂತರ ಅವರು 'ಹೊನ್ನ-ಕೊಡ' ಹೊತ್ತು ಶ್ರೀಮಠಕ್ಕೆ ತಂದು ಅದೇ ಜಲದಿಂದ ಪ್ರಸಾದ ಸಿದ್ದಗೊಳ್ಳುವದು. ಮೊದಲ ಪಂಕ್ತಿಯೂ ಇಲ್ಲಿ ಹೆಣ್ಣುಮಕ್ಕಳದ್ದೇ. ಪ್ರಸಾದಕ್ಕೆ ಮುಂಚೆ ಎಲ್ಲ ಹೆಣ್ಣು ಮಕ್ಕಳಿಗೆ ಶ್ರೀಗಳು ಉಡಿತುಂಬುವ ಅಪರೂಪದ ಸಂಪ್ರದಾಯವಿದೆ. ಇದೆಲ್ಲ ಆ ಮಾಯಾದೇವಿಗೆ ಸಲ್ಲುವ ಗೌರವವೇ ಸರಿ.

ಶೂನ್ಯ ಪೀಠಾಧ್ಯಕ್ಷ ಶ್ರೀ ಅಲ್ಲಮನ ಪಾದಸ್ಪರ್ಶದಿಂದ ಚಿಂಚಣಿ ಪಾವನ ಕ್ಷೇತ್ರವಾಗಿದೆ. ಕಾಲನ ಕೂಗಿಗೆ ತಕ್ಕಂತ ಜಾಗೃತ ಸ್ಥಾನವನ್ನಲಂಕರಿಸಿದ ಅನೇಕ ಪೂಜ್ಯರು ತಮ್ಮ ಅದ್ಭುತ ಪವಾಡಗಳಿಂದ ಭಕ್ತರ ಆಶೋತ್ತರಗಳನ್ನು ಪೂರೈಸಿದ್ದಾರೆ. ಅಡೆ-ತಡೆಗಳನ್ನು ತೊಲಗಿಸಿ ಭಕ್ತರ ಉದ್ಧಾರ ಮಾಡಿದ್ದಾರೆ. ಭಕ್ತ ಸಮೂಹಕ್ಕೆ ದಾರಿದೀಪವಾಗಿದ್ದು ಅವರಿಗೆ ಸನ್ಮಾರ್ಗ ತೋರಿದ್ದಾರೆ. ಅಂತೆಯೇ ಶ್ರೀಮಠದ ಛಾಯೆಯಲ್ಲಿ ಇಡೀ ಈ ಪರಿಸರ ಆಧ್ಯಾತ್ಮದ ಸುಧೆಯನ್ನು ಸವಿಯುತ್ತಿದೆ. ಸಾಮಾಜಕ -ಧಾರ್ಮಿಕ ಸೌಹಾರ್ದತೆಯೊಂದಿಗೆ 'ವಸುದೈವ' ಕುಟುಂಬದವರಾಗಿ ಬಾಳುವದಕ್ಕೆ ಭಾತೃತ್ವದ ದೀಕ್ಷೆಯನ್ನು ಸಮಾಜಕ್ಕೆ ಈ ಪೀಠ ನೀಡುತ್ತಿದೆ. ಹಿಂದಿನಿಂದ ಸಾಗಿಬಂದ ಶ್ರೀ ಮಠದ ಪೀಠ ಪರಂಪರೆ (ಲಭ್ಯವಿದ್ದಮಟ್ಟಿಗೆ) ಇಂತಿದೆ. ಪ್ರಸ್ತುತ ಹನ್ನೆರಡು ಜನ ಮಹಾಸ್ವಾಮಿಗಳ ಮಾಹಿತಿ ಮಾತ್ರ ಉಪಲಬ್ದವಿದೆ.

೧. ಶ್ರೀ ಅಲ್ಲಮ ಪ್ರಭುದೇವರು

೨. ಶ್ರೀ ರಾಮಚಂದ್ರ ಪ್ರಭುಗಳು

೩. ಶ್ರೀ ನಾಗೋಜಿ ಪ್ರಭುಗಳು

೪. ಶ್ರೀ ಲಕ್ಷ್ಮಣ ಪ್ರಭುಗಳು

೫. ಶ್ರೀ ಜೋಗೋಜಿ ಬಾವಾಗಳು

೬. ಶ್ರೀ ನಿಜಲಿಂಗ ಬಾವಾಗಳು

೭. ಶ್ರೀ ಮುಕುಂದ ಬಾವಾಗಳು

೮. ಶ್ರೀ ಅಲ್ಲಮಪ್ರಭು ಸ್ವಾಮಿಗಳು

೯. ಶ್ರೀ ಸಿದ್ಧಪ್ರಭು ಸ್ವಾಮಿಗಳು

೧೦. ಶ್ರೀ ಅಲ್ಲಮಪ್ರಭು ಸ್ವಾಮಿಗಳು

೧೧. ಶ್ರೀ ಸಿದ್ದ ಪ್ರಭು ಸ್ವಾಮಿಗಳು ಭೆಂಡವಾಡ

೧೨. ಶ್ರೀ ಅಲ್ಲಮ ಪ್ರಭು ಸ್ವಾಮಿಗಳು ಶಿರೋಳ

ಸುಮಾರು ಮೂರುನೂರು ವರ್ಷಗಳಾಚೆ ಶ್ರೀ ಮಠದ ಪ್ರಾಂಗಣದ ಮಧ್ಯೆ ಪುರಾತನವಾದ ಒಂದು ಅರಳಿ ಮರವಿತ್ತು ಮಹಾರಾಷ್ಟ್ರದ 'ಅಲತಗಿ'ಯಿಂದ ಬಂದ ಜೋಗೋಜಿಬಾವಾ ಎಂಬ ಹೆಸರಿನ ಸಾಧುವೊಬ್ಬರು ಇದೇ ಅರಳಿ ಮರದ ಬುಡದಲ್ಲಿ ಗುಡಿಸಲೊಂದನ್ನು ಹಾಕಿಕೊಂಡು ಇರಹತ್ತಿದರು. ಬಂದ ಭಕ್ತರಿಗೆ ಧರ್ಮೋಪದೇಶ ಮಾಡುತ್ತ ಈ ಸ್ಥಾನದ ಹಿರಿಮೆಗರಿಮೆಗಳನ್ನು ಭಕ್ತರಿಗೆ ತೋರಿಸುತ್ತ ಸಿದ್ಧಾಟಿಕೆಗಳ್ನು ಮಾಡುತ್ತಿದ್ದರು. ಇವರ ಅವಧಿಯಲ್ಲಿ ಗ್ರಾಮದ ಕುಲಕರ್ಣಿ ಮನೆತನದವರಿಂದ ಶ್ರೀ ಮಠಕ್ಕೆ ೨೫ ಎಕರೆ ಭೂಮಿ ದಾನವಾಗಿ ನೀಡಲ್ಪಟ್ಟಿದ್ದು ಅದು ಇಂದಿಗೂ ಸಹ 'ಬಾವಾನ ಕೋಡಿ' ಎಂದೇ ಹೆಸರಾಗಿದೆ. ಇವರ ಕಾಲದ ಒಂದು ಐತಿಹ್ಯ ತುಂಬಾ ರೋಚಕ. ಭಕ್ತಾದಿಗಳಿಂದ ದೊರೆತ ಭೂಮಿಯಲ್ಲಿ ಇವರು ಕೆರೆಯೊಂದನ್ನು ಕಟ್ಟಿಸಲು (ಕಾಮನಕೆರೆ) ಪ್ರಾರಂಭಿಸಿದರಂತೆ. ಕೂಲಿಕಾರರಿಗೆ ದುಡಿಮೆಯ ಪ್ರತಿಫಲವಾಗಿ ಒಂದು ಇಂಚು ಗಂಜನಿ ಕಡ್ಡಿಯನ್ನು ಕೊಡುತ್ತಿದ್ದರು ಅವರವರ ದುಡಿತಕ್ಕೆ ತಕ್ಕಂತೆ ಅದು ಬಂಗಾರ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಡ್ಡಿಯಾಗಿ ಪರಿಣಮಿಸುತ್ತಿದ್ದವು. ದುಡಿಯದ ಕೈಗಳಲ್ಲಿ ಗಂಜನಿ ಕಡ್ಡಿಗಳೇ ಉಳಿಯುತ್ತಿದ್ದವಂತೆ.

ಇವರ ನಂತರ ಮೂರು ಮತ್ತು ನಾಲ್ಕನೇಯ ಸ್ವಾಮಿಗಳಾದ ಶ್ರೀ ನಿಜಲಿಂಗ ಬಾವಾಗಳು ಮತ್ತು ಮುಕುಂದ ಬಾವಾಗಳು ಮಠದ ಪ್ರಾಚೀನ ಪರಂಪರೆಯನ್ನು ಕಾಯ್ದುಕೊಂಡು ದಾಸೋಹ ಕಾರ್ಯಾದಿಗಳನ್ನು ನಡೆಸುತ್ತ ಬಂದರು. ಐದನೇಯವರಾಗಿ ಬಂದ ಅಲ್ಲಮಪ್ರಭು ಸ್ವಾಮಿಗಳು ಚಿಂಚಣಿಯ ಗೌಡ್ರ (ಅಳ್ಳಿಗೇರಿ) ಮನೆತನದವರು. ಮಹಿಮಾ ಪುರುಷರಾದ ಇವರು ಅನಂತ ಪವಾಡಗಳನ್ನು ಮೆರೆದಿದ್ದಾರೆ. ತರುವಾಯ ೬ನೇ ಪೀಠಾಧೀಶರಾಗಿ ಬಂದ ಇದೇ ಊರಿನ ಗೌಡ್ರ ಮನೆತನದ ಝೂಪುರೆ ಶ್ರೀಗಳು ಸಿದ್ಧ ಪ್ರಭು ಸ್ವಾಮಿಗಳಾಗಿ ನಾಮಾಂಕಿತರಾಗಿ ಹಲವಾರು ಪವಾಡುಗಳನ್ನು ಮಾಡಿದರು. ಪ್ರಸ್ತುತ ಶ್ರೀ ಮಠದ ಪ್ರಾಂಗಣದ ಎಡಬದಿಯಲ್ಲಿ ಇವರಿಬ್ಬರ ಸಮಾಧಿಗಳಿವೆ. ಇನ್ನು ಏಳನೇಯವರಾಗಿ ಅಧಿಕಾರ ವಹಿಸಿಕೊಂಡ ಅಲ್ಲಮಪ್ರಭುಗಳು ಮೂಲತಃ ನಿಡಸೋಸಿಯ ನೆರ್ಲಿ ಜಗದ್ಗುರುಗಳು ತಮ್ಮ ಊರ ಜನರಿಗೆ 'ಬೆನ್ನಾಡಿ ಅಜ್ಜ' ಎಂದೇ ಚಿರಪರಿಚಿತರು.

ಇವರು ಲಿಂಗೈಕ್ಯರಾದಾಗ ಬಾವಾನ ಕೋಡಿಯಲಿ ಇವರ ಸಮಾಧಿಯಾಗಿದ್ದು ಆ ಸಂದರ್ಭದಲ್ಲಿ ನೀರಿನಿಂದ ದೀವಿಗೆ ಉರಿದು ಜನರನ್ನೆಲ್ಲ ವಿಸ್ಮಯಗೊಳಿಸಿತು.

೧೯೫೪ ಮಾರ್ಚನಲ್ಲಿ ಶ್ರೀ ಮಠದ ಎಂಟನೆಯ ಪೀಠಾಧೀಶರಾಗಿ ಲಿಂ. ಶ್ರೀ ಸಿದ್ದಪ್ರಭು ಸ್ವಾಮಿಗಳು ಅಧಿಕಾರ ವಹಿಸಿಕೊಂಡಾಗ ಇದೊಂದು ಪಾಳು ಬಿದ್ದ ಮುರುಕ ಮಠ. ಕೃತ ಗದ್ದುಗೆಯ ಮೇಲೆ ಕರಿ ಹಂಚಿನ ಚಪ್ಪರ ಹಾಗೂ ಮಾಯಾದೇವಿಯ ಗುಡಿಯ ಮೇಲೆ ತಗಡಿನ ಚಪ್ಪರ. ಇಲ್ಲಿಯವರೆಗೂ ಆಧ್ಯಾತ್ಮಿಕ ಕೃಷಿಗೈದ ಶ್ರೀಗಳು ಶ್ರೀಮಠದ ಆರ್ಥಿಕ ಭದ್ರತೆಗಾಗಿ ಬಾಹ್ಯ ಕೃಷಿಯಲ್ಲೂ ಅಗಾಧ ಸಾಧನೆಗೈದರು. ಕಾಯಕಯೋಗಿಗಳಾಗಿ ನೇಗಿಲು ಹಿಡಿದು ಮಣ್ಣಿನಿಂದ ಹೊನ್ನ ತೆಗೆದರು. ಶ್ರೀ ಮಠದ ಜೀರ್ಣೋದ್ಧಾರದೊಂದಿಗೆ ನೂತನ ಕಟ್ಟಡ ನಿರ್ಮಿಸಿದರು. ಇವರ ನೇತೃತ್ವದಲ್ಲಿ ಜರುಗಿದ ೧೯೭೧ ರ ೬೩ ರ ಮಂಟಪ ಪೂಜೆ ೧೯೮೭ ರಲ್ಲಿ ಜರುಗಿದ ೧೦೧ ಮಂಟಪ ಪೂಜೆಗಳು ಇವುಗಳಿಂದ ನಾಡಿಗೆ ನಾಡೇ ಚಿಂಚಣಿಯ ಕಡೆ ಅಚ್ಚರಿಯಿಂದ ನೋಡುವಂತಾಯಿತು. ಇವರ ಅವಧಿಯಲ್ಲಿ ಅಗಷ್ಟ ೧೯೮೭ ರಲ್ಲಿ ಶ್ರೀಮಠದಲ್ಲಿ ಜರುಗಿದ ಬೆಳಗಾವಿ ಜಿಲ್ಲಾ ಮಠಾಧೀಶರ ಅಧಿವೇಶನ ಒಂದು ಐತಿಹಾಸಿಕ ದಾಖಲೆ. ಸುಮಾರು ಒಂದು ದಶಕದ ಕಾಲ ಘಟಪ್ರಭಾದ ಜೆ. ಜಿ. ಆಸ್ಪತ್ರೆಯ ಚೇರಮನರಾಗಿ ಸಲ್ಲಿಸಿದ ಸೇವೆ ಸ್ಮರಣೀಯ, ಅಭಿನವ ಪ್ರಭುವಿನಂತೆ ಆಂಧ್ರ ಪ್ರದೇಶ, ಮಹಾರಾಷ್ಟ್ರ ತಮಿಳುನಾಡು, ಕೇರಳಗಳಲ್ಲಿ ಸಂಚರಿಸಿ ವೀರಶೈವ ಮಠಗಳ ಸಂಘಟನೆ ಮಾಡಿದರು. ದೇಹಲಿಯಲ್ಲಿ ಜರುಗಿದ ಜಾಗತಿಕ ವಿಶ್ವಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿ ಊರಿಗೆ ಕೀರ್ತಿ ತಂದರು. ಸಾಮೂಹಿಕ ವಿವಾಹಗಳಂತಹ ವಿದಾಯಕ ಕಾರ್ಯಗಳನ್ನು ನಡೆಸಿದರು. ಪ್ರಾಥಮಿಕ ಶಾಲೆಯ ಇಂದಿನ ಕಟ್ಟಡದ ನಿರ್ಮಾಣದ ಹಿಂದೆ ಇದ್ದ ಇವರ ಪರಿಶ್ರಮ ಅವಿಸ್ಮರಣೀಯ. ಪ್ರೌಢ ಶಾಲೆಗೆ ಸ್ಥಳ ದಾನ ಮಾಡಿದ ಶಿಕ್ಷಣ ಪ್ರೇಮಿ.

ಇವರ ನಂತರ ಶ್ರೀ ಪೀಠವನ್ನು ಅಲಂಕರಿಸಿದ ಶ್ರೀ ಅಲ್ಲಮಪ್ರಭು ಸ್ವಾಮಿಗಳು ಕನ್ನಡ ಪ್ರಸ್ತುತ ಜಗದ್ಗುರುಗಳೆಂದೇ ಹೆಸರಾದ ಗದಗ ತೋಂಟದಾರ್ಯ ಜಗದ್ಗುರುಗಳ ಪಟ್ಟದ ಶಿಷ್ಯರು, ಮಾನಸ ಪುತ್ರರು, ಮಠದ ಪಾರಂಪರಿಕ, ಆಧ್ಯಾತ್ಮಿಕ, ಸಾಮಾಜಿಕ, ಸಂಪ್ರದಾಯ ಬದ್ಧ ಕಾರ್ಯಗಳನ್ನು ನೆರವೇರಿಸುತ್ತಲೇ ಶ್ರೀಮಠಕ್ಕೆ, ಪೀಠಕ್ಕೆ ಒಂದು ಹೊಸ ಆಯಾಮವನ್ನು ಕೊಟ್ಟಿದ್ದಾರೆ. ಕೇವಲ ಗುಡಿ ಕಾಯುವ ಕಾರ್ಯವನ್ನಷ್ಟೇ ಮಾಡದೆ ನುಡಿ ಕಟ್ಟುವ, ಗಡಿ ಕಾಯುವ ನಿಟ್ಟಿನಲ್ಲಿ ಶ್ರೀಗಳು ಮಾಡಿರುವ, ಮಾಡುತ್ತಿರುವ ಮೌನಕ್ರಾಂತಿ ಅದ್ಭುತ. ತಮ್ಮ ಸಾಹಿತ್ಯಿಕ ಚಟುವಟಿಕೆಗಳಿಂದ, ಸಾಹಿತಿಗಳ ಸಂಪರ್ಕದಿಂದ ಸ್ವಾಮೀಜಿಯವರ ಇರುವಿಕೆಗೆ ಒಂದು ಹೊಸ ಪರಿಭಾಷೆಯನ್ನೇ ಬರೆದವರು. ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆಯನ್ನು

ಹುಟ್ಟುಹಾಕಿ ಶ್ರೀ ಮಠದ ಸರ್ವಾಂಗೀಣ ಏಳ್ಗೆಯತ್ತ ಗಮನವಿತ್ತರು. 'ಗಡಿ ಕನ್ನಡಿಗರ ಬಳಗ' ವೆಂಬ ಕನ್ನಡ ನಾಡು-ನುಡಿಗಳ ಬಗ್ಗೆ ಅಭಿಮಾನವನ್ನು ಹೊಂದಿದ ಯುವ ಪಡೆಯನ್ನು ಕಟ್ಟಿ ರಾಜ್ಯೋತ್ಸವದ ಆಚರಣೆಗೆ ಒಂದು ಹೊಸ ಸ್ಪರ್ಶವನ್ನು ನೀಡಿದರು. ನಾಡಿನ ಖ್ಯಾತ ಸಾಹಿತಿಗಳನ್ನೆಲ್ಲ ಗಡಿಭಾಗದ ಜನರಿಗೆ ಪರಿಚಯಿಸಿ ನುಡಿ-ಗಡಿಗೆ ಬೇಲಿಯಾದರು. 'ಕನ್ನಡ ಜಾಗೃತಿ ಪುಸ್ತಕ ಮಾಲೆ' ಯೆಂಬ ಪ್ರಕಾಶನದಡಿ ಇಲ್ಲಿಯವರೆಗೆ ಮೂವತ್ತಕ್ಕಿಂತಲೂ ಹೆಚ್ಚು ಕನ್ನಡ ಪರ ಪುಸ್ತಕಗಳನ್ನು ಹೊರತಂದು ಸಾಹಿತ್ಯದ ದಾಸೋಹವನ್ನು ಉಣಬಡಿಸಿದರು. ಸ್ವಭಾಷಾ ಅಭಿಮಾನಿಯಾದರೂ ಪರಭಾಷಾ ವಿರೋಧಿಗಳಲ್ಲ. 'ಕನ್ನಡದ ಕರಿಯನ್ನು ಸೆರೆ ಹಿಡಿದ ಕನ್ನಡಿಯಂತೆ' ಚಿಂಚಣಿಯ ಮಠವೆಂದರೆ ಕನ್ನಡ ಮಠ, ಚಿಂಚಣಿಯ ಸ್ವಾಮೀಜಿ ಎಂದರೆ ಕನ್ನಡ ಸ್ವಾಮೀಜಿ ಎಂಬುವಷ್ಟರ ಮಟ್ಟಿಗೆ ಬೆಳೆದು ಮಠವನ್ನು ಊರನ್ನು ಬೆಳೆಸಿದರು.

ಸದಾ ಹಸನ್ಮುಖಿ. ಯಾವಾಗಲೂ ಚಟುವಟಿಕೆಯಿಂದ ಇರುವ ಚೇತನ. ಕಸದಲ್ಲಿ ರಸವನ್ನು ತೆಗೆಯುವ ಪ್ರತಿಭೆಯುಳ್ಳವರು. ಇವರ ಕೈಯಲ್ಲಿ ಕಲ್ಲು-ಕಲೆಯಾಗಿ ಕಟ್ಟಿಗೆ ಮೃದಂಗವಾಗಿ ಜೀವ ಪಡೆದಿವೆ. ಪ್ರಾಚೀನ ವಸ್ತುಗಳ ಸಂಗ್ರಹ ಇವರ ಹವ್ಯಾಸ. ಸ್ಟ್ಯಾಂಪಗಳ ಸಂಗ್ರಹ, ಪ್ರಪಂಚದ ಬೇರೆ ಬೇರೆ ದೇಶಗಳ, ಕಾಲಗಳ ನಾಣ್ಯಗಳ ಸಂಗ್ರಹದಲ್ಲೂ ಆಸಕ್ತಿ ಸಸ್ಯ ಪ್ರೇಮಿಗಳು, ಪ್ರಾಣಿ ಪ್ರಿಯರು, ಸದಾ ಚಿಕ್ಕ ಮಕ್ಕಳ ಜೊತೆ ಚೆಲ್ಲಾಟ. ತಮ್ಮ ಕ್ರೀಯಾಶೀಲತೆಯಿಂದ, ಪ್ರಯೋಗಶೀಲತೆಯಿಂದ ಶ್ರೀ ಮಠಕ್ಕೊಂದು ಹೊಸ ಸ್ವರೂಪವನ್ನು ನೀಡಿದ್ದಾರೆ. ಅಂತೆಯೇ ಶ್ರೀ ಮಠವಿಂದು ಆಧ್ಯಾತ್ಮಿಕ ಚಟುವಟಿಕೆಗಳ ಜೊತೆ ಜೊತೆಗೆ ಕನ್ನಡ ಜಾಗೃತಿ ಕೇಂದ್ರವೂ ಹೌದು.

ಸಾಗಿ ಬಂದ ಸಂಪ್ರದಾಯ

ಸಾಮಾನ್ಯವಾಗಿ ಬದಲಾವಣೆ ಎಂಬುದು ಕಾಲದ ನಿಯಮ. ಕಾಲದ ಗತಿಯಲ್ಲಿ ಸಿಲುಕಿ ಊರು-ದೇಶ-ನದಿಗಳು ಬದಲಾವಣೆಗೊಂಡ ನಿದರ್ಶಗಳು ಬೇಕಾದಷ್ಟಿದೆ. ಹಾಗೆಯೇ 'ಅವತಾರಿನಿ' ಕಾಲ ಕಳೆದಂತೆ 'ಅವನಾರತಿ'- 'ಅವನಾರ್ತಿ' ಎಂದು ಬದಲಾಗಿರಬಹದು. ಅಲ್ಲದೆ ಇದನ್ನು ಅವನಿಗೆ ಆರತಿ 'ಅವನಾರ್ತಿ' ಎಂದು ಬದಲಾಗಿರಬಹುದು. ಅಲ್ಲದೆ ಇದನ್ನು ಅವ್ವನಿಗೆ ಆರತಿ'ಅವನಾರ್ತಿ' ಎಂದು ಹೇಳಬಹುದಾಗಿದೆ.

ಚಿಂಚಣಿಯಲ್ಲಿ ಕುಲ-ಜಾತಿ, ಬಡವ-ಬಲ್ಲಿದ ಎಂಬ ಭೇದವಿಲ್ಲದೆ ಊರಿಗೆ ಊರೇ ಈ ದೇವಿಯ ಆರಾಧನೆ ಮಾಡುತ್ತದೆ. ಪ್ರಭುದೇವರ ಕೃತ ಗದ್ದುಗೆಯ ಹಿಂಭಾಗದಲ್ಲಿಯ ಕಟ್ಟಡದಲ್ಲಿ ಪೂರ್ವಾಭಿಮುಖವಾಗಿ ದೇವಿಯನ್ನು ಪ್ರತಿಷ್ಠಾಣಗೊಳಿಸಿದೆ. ಸಾಂಕೇತಿಕವಾಗಿ

ಜಲ ತುಂಬಿ ಕುಂಭವಿದ್ದು ಜಗನ್ಮಾತೆಯ ಮುಖವಾಡವಿದೆ. ದಿನಾಲು ಹೊಸ ಸೀರೆ ಉಡಿಸಿ, ಆಭರಣ ತೊಡಿಸಿ, ಹೂ ಕುಂಕುಮ ಅರಿಷಿಣಗಳಿಂದ ಪೂಜೆಗೈಯುವರು. ಕುಂಭದ ಹಿಂಬದಿಗೆ ಶಾಂಭವಿಯ ಭಾವಚಿತ್ರ ಆಕರ್ಷಕವಾಗಿದೆ. ಪ್ರಸ್ತುತ ಅದರ ಮುಂದೆ ಹಾಲು ಗಲ್ಲಿನ ಆಕರ್ಷಕ ಮಂಟಪವನ್ನು ಕಟ್ಟಲಾಗಿದ್ದು ಈ ದೇವಿಯ ದಿವ್ಯ ರೂಪದ ದರ್ಶನ ಭಾಗ್ಯ ಶ್ರೀ ಮಠದ ಮುಖ್ಯದ್ವಾರ ಪ್ರವೇಶಿಸಿದಾಗ ನೇರವಾಗಿ ಆಗುವದು. ನಿತ್ಯವೂ ಮುಂಜಾನೆ ಮತ್ತು ಸಂಜೆ ಎರಡೂ ಹೊತ್ತು ಪ್ರಭುವಿನ ಗದ್ದುಗೆಯೊಂದಿಗೆ ಪೂಜೆ ಸಲ್ಲುವದು.

ಗ್ರಾಮದಲ್ಲಿ ಯಾರದೇ ಮನೆಯಲ್ಲಿ ಮದುವೆ ಮುಂಜೆ, ಮನೆ ಕಟ್ಟುವದು, ಬಾವಿ ತೋಡುವದು, ಹೊಲ ಇನ್ನಿತರ ಆಸ್ತಿ ಖರೀದಿ ಮುಂತಾದ ಶುಭಕಾರ್ಯ ಇದ್ದಾಗ ಅವನಾರ್ಥಿಯ ಉಡಿ ತುಂಬುವ ಕಾರ್ಯ ಮೊದಲಾಗಬೇಕು. ಇದು ಅನಾದಿ ಕಾಲದಿಂದಲೂ ನಡೆದ ಬಂದ ಸಂಪ್ರದಾಯವಾಗಿದೆ. ಸೋಮವಾರ ಮತ್ತು ಗುರುವಾರ ಉಡಿ ತುಂಬುವರು. ಐದು ಅಥವಾ ಏಳು ಹೀಗೆ ಬೆಸ ಸಂಖ್ಯೆಯಲ್ಲಿ ಹಸು ಬಾಲೆಯರನ್ನು ಮಡಿಯಿಂದ ಪೂಜೆಮಾಡಿ, ಉಡಿ ತುಂಬಿ ಅವರ ಪ್ರಸಾದದ ನಂತರ ಉಳಿದವರು ಪ್ರಸಾದ ಸ್ವೀಕರಿಸುವರು. ಪ್ರಸಾದವನ್ನು ಅವರವರ ಹರಿಕೆಯಂತೆ ತೂಕದ ಅಳತೆಯಲ್ಲಿ ಧಾನ್ಯ ತೆಗೆದುಕೊಂಡ ತಯಾರಿಸುತ್ತಾರೆ.

ಇದು ಅಲ್ಲದೆ ಪ್ರತಿ ವರ್ಷ ಅಲ್ಲಮಪ್ರಭು ಜಯಂತಿಯ ದಿನ (ಯುಗಾದಿ) ದಾಸೋಹದಲ್ಲಿ ಹೆಣ್ಣು ಮಕ್ಕಳಿಗೆ ಮೊದಲು ಪ್ರಸಾದವಿರುತ್ತದೆ. ಇದು ಬೇರೆಲ್ಲಿಯೂ ಕಾಣದ ಅಪರೂಪದ ಆಚರಣೆಯಾಗಿದೆ. ಇದರೊಂದಿಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಶ್ರೀ ಮಠದ ದೊಡ್ಡ ಜಾತ್ರೆ(ದಾಸೋಹ) ನಡೆಯುವದು. ದಾಸೋಹದ ಹಿಂದಿನ ದಿನ 'ಹೊಂಗಾಡ (ಹೊನ್ನಕೂಡ) ತರುವ ಭವ್ಯ ದೃಶ್ಯ ಮೈನೆವರೇಳಿಸುವದು. ಗಂಗೆ ಪೂಜೆ ಮಾಡಿ ಶ್ರೀಗಳು ಮಡಿಯಲ್ಲಿರುವ ಬಾಲೆಯರ ಉಡಿ ತುಂಬುವರು. ಪವಿತ್ರ ಗಂಗೆಯನ್ನು ತುಂಬಿದ ಕಳಸಿ (ಹೊಂಗೊಡ) ಯನ್ನು ಬಾಲೆಯರು ಹೊತ್ತುಕೊಂಡು ನಡೆಯುವರು. ನಾನಾ ವಾದ್ಯ ಜಾಗಟೆಗಳ ಈ ಮೆರವಣಿಗೆ ಹೊರಡುವಲ್ಲಿ ಮಧ್ಯರಾತ್ರಿಯಾಗುವದು. ಸನ್ನಿಧಿಯವರೊಂದಿಗೆ ಗ್ರಾಮದ ಹಿರಿಯರ ಕಣ್ಗಾವಲಿನಲ್ಲಿ 'ದಾಸೋಹ' ದ ಮಹಾಪ್ರಸಾದ ಸಿದ್ಧವಾಗುವದು, ದಾಸೋಹದ ಹೊತ್ತಿಗೆ ಬಂದ ಮುತ್ತೈದೆಯರಿಗೆ ಶ್ರೀಗಳು ಉಡಿ ತುಂಬುವರು. ಹೆಣ್ಣು ಮಕ್ಕಳಿಗೆ ಹೆಣ್ಣು ಮಕ್ಕಳು ಉಡಿ ತುಂಬುವದು ಎಲ್ಲ ಕಡೆಯ ಸಂಪ್ರದಾಯ. ಆದರೆ ಇಲ್ಲಿ ಜಗನ್ಮಾತೆಯ ಉಡಿಯನ್ನು ಸಾಕ್ಷಾತ ಪ್ರಭುದೇವರು ತುಂಬವ ಅರ್ಥಪೂರ್ಣ ಕಾರ್ಯಕ್ರಮ ಜರುಗುವದು.

ಅಂಕಲಿ ಸಿದ್ದೇಶ್ವರ ಜಾತ್ರೆ

ದೇವರು ಜಗತ್ತು ನಿರ್ಮಾಣ ಮಾಡಿದ್ದರು. ಅದರ ಯಶಸ್ಸು ಮಾನವನ ಕೈಯಲ್ಲಿದೆ. ಅಂಕಲಿ ಬೆಳಗಾವಿ ಜಿಲ್ಲೆಯ ಚಿಕ್ಕೊಡಿ ತಾಲೂಕಿನ ಊರು ಕೃಷ್ಣಾತೀರದ ರಮ್ಯಸ್ಥಳ ಇಲ್ಲಿಯ ಜನರಿಗೆ ಶ್ರೀಮಂತಿಕೆಗೆ ಕೊರತೆಯಿಲ್ಲ. ಇಲ್ಲಿಯ ಜನರು ಕೃಷಿಯನ್ನು ಮುಖ್ಯ ಉದ್ಯೋಗವನ್ನಾಗಿಸಿಕೊಂಡು ವ್ಯಾಪಾರಿಗಳಾಗಿದ್ದಾರೆ ಕೂಲಿಕಾರ್ಮಿಕರಿದ್ದಾರೆ.

ಅಂಕಲಿ ಸುತ್ತಮುತ್ತಲಿನ ಪರಿಸರ ಸುಂದರ ಮನೋಹರ ಅದರಲ್ಲೂ ಮಹಾಬಲೇಶ್ವರದಲ್ಲಿ ಜನಿಸಿ ಸಹಸ್ರಾರು ವರ್ಷಗಳಿಂದ ದುಮ್ಮಿಕ್ಕಿ ಹರಿಯುತ್ತಿರುವ ಕೃಷ್ಣಾ ನದಿ ಈ ಪ್ರದೇಶದ ಜನರ ಜೀವಾಳ ಚಳಿಗಾಲದ ರಮ್ಯತೆ ಬೇಸಿಗೆಯ ಜುಳು ಜುಳು ನಿನಾದ ಇದು ಕೃಷ್ಣೆಯ ನಡೆ.

"ಸಿದ್ದೇಶ್ವರ" ಇಲ್ಲಿಯ ಗ್ರಾಮ ದೇವತೆ ಮೊದಲು ಅಂಕಲಿಯನ್ನು "ಸಿದ್ಧಾಪೂರ" ಎಂದು ಕರೆಯುತ್ತಿದ್ದರು. ಅಂಕಲಿ ಗ್ರಾಮದ ಬಗೆಗೆ ಐತಿಹಾಸಿಕ ಪುರಾವೆಗಳಲ್ಲಿ ಜನಪದ ಐತಿಹ್ಯಗಳೇ ಆಧಾರ ಸಾಮಗ್ರಿ.

ಉತ್ತರ ಕರ್ನಾಟಕವು ಶಿವಶರಣ ಕ್ರಾಂತಿಯ ನೆಲೆಯಾದಂತೆ ನಾಥಪಂಥ, ಜ್ಞಾನದೇವ–ತುಕಾರಾಮ ಭಕ್ತಿಪಂಥ, ಪಂಢರಪುರದ ವಾರಕರಿ ಸಂಪ್ರದಾಯದ ಜೊತೆಗೆ ದ್ರಾವಿಡ–ವೈದಿಕ–ದ್ವೈತ–ಅದ್ವೈತ ವಿಚಾರವಾದಿಗಳ ಪ್ರಭಾವಕ್ಕೆ ಒಳಗಾಗಿತ್ತು. ಅಂಕಲಿ ಗ್ರಾಮ ಕೂಡ ಅದಕ್ಕೆ ಹೊರತಾಗಿರಲಿಲ್ಲ.

ಗ್ರಾಮದೇವತೆ 'ಸಿದ್ದೇಶ್ವರ' ಅವನಿಗೆ 'ಕೇತರಾಯ'ರೆಂದೂ ಕರೆಯುತ್ತಾರೆ. ವರ್ಷಕ್ಕೊಮ್ಮೆ ಅವನ ಜಾತ್ರೆ 'ಕವಲು ಕಟ್ಟಿ' ವರ್ಷ ಭವಿಷ್ಯ ತಿಳಿಯುವ ಸಂಪ್ರದಾಯವಿದೆ. ಗ್ರಾಮದಲ್ಲಿ ಮಹಾದೇವ ಮಂದಿರವಿದ್ದು ಶಿವರಾತ್ರಿ ಮತ್ತು ಶ್ರಾವಣ ಮಾಸದಲ್ಲಿ ಭಕ್ತರು ವಿಶೇಷ ಪೂಜೆ ಸಲ್ಲಿಸುತ್ತಾರೆ. ಲಕ್ಷ್ಮೀದೇವಿಯ ಜಾತ್ರೆ ಮೂರು ವರ್ಷಕ್ಕೊಮ್ಮೆ ನೇರವೇರುತ್ತದೆ. ಗಣಪತಿ ಗುಡಿ, ಹನುಮನ ಗುಡಿ, ಜ್ಞಾನೆಶ್ವರ ಗುಡಿ, ವಿಠ್ಠಲ ಮಂದಿರ ಕೆಲವು ಪುರಾತನ ದೇವಾಲಯಗಳಿದ್ದು ಗ್ರಾಮದ ಸಾಂಸ್ಕೃತಿಕತೆಗೆ ಆಧಾರಗಳಾಗಿವೆ.

ಬಸವ ಮಂಟಪ ಶ್ರೀ ರುದ್ರ ಅವಧೂತಮಠ, ಶ್ರೀ ಸಿದ್ಧಾರೂಢ ಮಠಗಳಿದ್ದು ಪುರಾಣ ಪ್ರವಚನ ಕಿರ್ತನೆ, ವೇದಾಂತ, ಶಿವಾನುಭವ ಗೋಷ್ಠಿಗಳು ನೆರವೇರಿ ಬದುಕಿಗೆ ಭರವಸೆ ನೀಡುತ್ತವೆ.

ಗ್ರಾಮದ ಉತ್ತರ ದಿಕ್ಕಿನಲ್ಲಿ ಕೃಷ್ಣಾನದಿಯ ದಂಡೆಯ ಎರಡು ಎಕರೆಯಷ್ಟು ವಿಶಾಲ ನಿವೇಶನದಲ್ಲಿ ಪೂರ್ವಾಭಾವ ಮುಖವಾಗಿ ರಾಜವಾಡೆ ಇದ್ದು ಅತ್ಯಾಕರ್ಷಕವಾಗಿದೆ. ಶ್ರೀ ಅಪ್ಪಾಜಿರಾವ ಶಿತೋಳೆ ೧೯೦೫ ರಲ್ಲಿ ಗ್ವಾಲೇರ(ಅರಮನೆಯ) ಮಾದರಿಯಲ್ಲಿ ಈ ವಾಡೆಯನ್ನು ನಿರ್ಮಿಸಿದ್ದಾರೆ.

ಅಂಕಲಿಕರರು ಫಂಡರಪುರದ ವಿಠ್ಠಲನ ಭಕ್ತರಾಗಿದ್ದರು. ವಿಠಲನು ಅವರ ಅಭೀಪ್ಸೆಯನ್ನು ಈಡೇರಿಸಿದ್ದರಿಂದಾಗಿ ಅವರು ಆಗ ಮಾಡಿದಂತಹ ವೃತಗಳನ್ನು ಈಗಲೂ ಜನ ಅದನ್ನು ಮಾಡುತ್ತಾರೆ. ಪಂಢರಪುರದಲ್ಲಿ ಲಕ್ಷಾಂತರ ಮಂದಿಯ ಮಧ್ಯೆ ಅಂಕಲಿಯ ಕುದುರೆಗೆ ಮತ್ತು ಅಂಕಲಿಕರ ವಂಶಸ್ಥರಿಗೆ ಈಗಲೂ ಮಾನ ಸನ್ಮಾನ ಸಲ್ಲುತ್ತದೆ.

ಕೃಷ್ಣ ಪಾರಿಜಾತ 'ಸಂಗ್ಯಾಬಾಳ್ಯ' ಬಯಲಾಟಗಳನ್ನು ಹಬ್ಬ-ಜಾತ್ರೆ ಉತ್ಸವಗಳಲ್ಲಿ ತರಿಸಿ ಪ್ರದರ್ಶಿಸಿ ಆನಂದಿಸುವ ಜನರು ಕೂಡ ಇಲ್ಲಿದ್ದಾರೆ.

ಶ್ರೀ ಬಸವಪ್ರಬು ಕೋರೆಯವರು ಸ್ವಾತಂತ್ರ್ಯ ಹೋರಾಟಗಾರರು, ಶಿಕ್ಷಣ ಪ್ರೇಮಿಗಳು, ಉದಾರ ದಾನಿಗಳು, ಸಂಘ ಸಂಸ್ಥೆಗಳಿಗೆ ಗುಡಿ ಗುಂಡಾರಗಳಿಗೆ ತನು-ಮನ ಧನದಿಂದ ದಾನ ನೀಡಿರುವರು.

೧೯೩೪ ರಲ್ಲಿ ಗಾಂಧಿಜಿಯವರು ಹರಿಜನ ಪತ್ರಿಕೆಗೆ ಸಂಬಂಧಿಸಿದಂತೆ ಅಂಕಲಿಗೆ ಬಂದಾಗ ಬಸವಪ್ರಭು ಕೋರೆಯವರೇ ಆತಿಥ್ಯ ನೀಡಿದರು. ಬಿಹಾರದ ಭೂಕಂಪ ಪರಿಹಾರ ನಿಧಿಗಾಗಿ ಡಾ. ಬಾಬು ರಾಜೇಂದ್ರ ಪ್ರಸಾದರು ಆಗಮಿಸಿದಾಗ ಶ್ರೀಯುತರ ಉದಾರವಾಗಿ ದೇಣಿಗೆ ನೀಡಿದರು. ಸೇವಾದಲದ ಶಿಬಿರವನ್ನು ಏರ್ಪಡಿಸಿದರು. ಹರಿಜನರೊಂದಿಗೆ ಸ್ನೇಹ ಭೋಜನ ಮಾಡಿ ಮಾನವೀಯತೆಯನ್ನು ಮೆರೆದರು. ಪವಿತ್ರಗೊಳಿಸಿದರು.

ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಗ್ರಾಮೀಣ ಜೀವನಕ್ಕೆ ಕಾಯಕಲ್ಪ ನೀಡಲು ಇಲ್ಲಿ ಹಣಕಾಸು ಸಂಸ್ಥೆಗಳು ಹುಟ್ಟಿಕೊಂಡವು. ರಾಷ್ಟ್ರೀಕೃತ ಬ್ಯಾಂಕ ಬಂದವು. ಕೋರೆಯವರು ಅರ್ಬನ ಬ್ಯಾಂಕ ಸ್ಥಾಪಿಸಿ ಜನತೆಯ ಪ್ರೀತಿಗೆ ಪಾತ್ರರಾಗಿದ್ದಾರೆ.

ಇಂದು ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಮೊದಲ ಪಂಕ್ತಿಯಲ್ಲಿರುವ ಶ್ರೀ ಪ್ರಭಾಕರ ಕೋರೆಯವರು ಮೂರು ಸಲ ರಾಜ್ಯಸಭಾ ಸದಸ್ಯರಾಗಿ ಕೇಂದ್ರ ಸರಕಾರದ ವಿವಿಧ ಸಮಿತಿಗಳಲ್ಲಿ ಸಕ್ರಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದವರು. ಒಟ್ಟಿನಲ್ಲಿ ಅಂಕಲಿಯ ಸಂಸ್ಕೃತಿಕ ಬದುಕು ಶ್ರೀಮಂತವಾದದು.

ಮಹಾದೇವ ಮಂದಿರ ವಾಳಕಿ

ಚಿಕ್ಕೋಡಿಯಿಂದ ೧೬ ಕಿ.ಮೀ ಅಂತರದಲ್ಲಿ ವಾಳಕಿ ಎಂಬ ಊರಿನ ಪೂರ್ವ ದಿಕ್ಕಿನಲ್ಲಿ **"ಮಹಾದೇವರ"** ಪ್ರಾಚೀನ ಮಂದಿರವಿದೆ. ಈ ಪರಿಸರ ತೆಂಗಿನ ತೋಟಗಳಿಂದ ಕೂಡಿರುವುದಲ್ಲದೇ ಜಾಗೃತ ದೇವಸ್ಥಾನವೆಂದು ಖ್ಯಾತಿ ಪಡೆದಿದೆ. ಈ ಶಿವಲಿಂಗದ ಬಗ್ಗೆ ಒಂದು ಐತಿಹ್ಯವಿದೆ. ಹಿಂದೊಮ್ಮೆ ಒಬ್ಬ ಸತ್ಪುರುಷನ ಪಾದಸ್ಪರ್ಶದಿಂದ ಈ ಪರಿಸರ ಪಾವನವಾಯ್ತು. ಅವರು ಶಿವಪೀಠದಿಂದ ಲಿಂಗ ಕವಚ ತಂದಿದ್ದರು. ಅದು ಇಲ್ಲಿ ಸರಿಯಾಗಿ ಆ ಕವಚಕ್ಕೆ ಹೊಂದಿಕೆಯಾಯ್ತು. ಆ ಲಿಂಗಕ್ಕೆ ಪರಿಪೂರ್ಣತೆ ಬಂತು ಈ ಕವಚ ಬೇರೆ ಕಡೆ ಎಲ್ಲಿಯೂ ಹೊಂದಲಿಲ್ಲ. ಅದಕ್ಕಾಗಿ ಈ ಲಿಂಗಕ್ಕೆ ಮಹತ್ವ ಪ್ರಾಪ್ತವಾಗಿದೆ.

ಗರ್ಭಗುಡಿ ೭ ಅಡಿ ಅಗಲ ಮತ್ತು ಉದ್ದವಿದೆ. ಶಿವಲಿಂಗದ ಮುಂದೆ ಎಡಗಡೆ ಕಲ್ಲಿನ ನಂದಿ ೨ ಅಡಿಯಿದೆ. ಬಲಗಡೆ ಹಿತ್ತಾಳೆಯ ನಂದಿಯಿದೆ ೧೦ ಅಡಿ ಅಗಲ ೨೪ ಅಡಿ ಉದ್ದವಿದೆ. ಮುಂದೆ ಬಿಲ್ವಪತ್ರೆಯ ಮರವಿದೆ. ಮಂದಿರದ ೪ ಕೋಣೆಯಲ್ಲಿ ಶ್ರೀರುದ್ರ ಪಶುಪತಿ ಮಹಾ ಸ್ವಾಮೀಜಿ ಕೋಳೇಕರ ಮಠ ಮಿರಜ ಹಾಗೂ ಅಲ್ಲಮಪ್ರಭು ಮಹಾಸ್ವಾಮಿಜಿ ಸಿದ್ಧ ಸಂಸ್ಥಾನ ಮಠ ಚಿಂಚಣಿ ಇವರು ನಂದಿಕೇಶ್ವರ ಪ್ರತಿಷ್ಠಾಪನೆ ಮಾಡಿದ್ದಾರೆ.

ಪ್ರತಿವರ್ಷ ಭಾದ್ರಪದ ತಿಂಗಳಿನ ಕೃಷ್ಣ ಪ್ರತಿಪದೆಗೆ ಸೊಮವಾರ ಮಹಾಪ್ರಸಾದವಿರುತ್ತದೆ. ಮೊದಲನೇಯ ದಿವಸ ಶ್ರೀಗಳ ಪಲ್ಲಕ್ಕಿ ಮೆರವಣಿಗೆ ಮುತ್ತೈದೆಯರು ನೀರಿನ ಕಲಶ ತೆಗೆದುಕೊಂಡು ಹೋಗುತ್ತಾರೆ. ನಿಂಗೋಪಂತ ಎನ್ನುವವರ ತೊಟದ ಬಾವಿಯಲ್ಲಿ ಬಿಲ್ವವೃಕ್ಷವಿದೆ. ಅದರ ಪೂಜೆ ಪ್ರಾರ್ಥನೆ ಮಾಡಿ ಆ ಬಾವಿಯ ನೀರನ್ನು ಮಂದಿರಕ್ಕೆ ತರುತ್ತಾರೆ. ೨ನೇ ದಿನ ಮಹಾ ಪ್ರಸಾದ ಮತ್ತು ಮೂರನೇಯ ದಿನ ಜಾತ್ರೆ, ಸಾಂಸ್ಕೃತಿಕ ಕಾರ್ಯಕ್ರಮ ವಿವಿಧ ಸ್ಪರ್ಧೆಗಳು ಕುಸ್ತಿಯ ಆಯೋಜನವಿರುತ್ತದೆ.

ವಿಠ್ಠಲಮಂದಿರ- ಜತ್ರಾಟ

ಚಿಕ್ಕೋಡಿಯಿಂದ ೨೫ ಕಿ.ಮೀ ಅಂತರದಲ್ಲಿ ಶ್ರೀ ಸಮರ್ಥ ಸದ್ಗುರು ಬಾಬಾ ಇವರು ೧೯೨೮ ರಲ್ಲಿ ವಿಠ್ಠಲ ಮಂದಿರ ಕಟ್ಟಿಸಿದರು. ಈ ಮಂದಿರ ಅಂದಾಜು ೬೦ x ೮೦ ಜಾಗದಲ್ಲಿದೆ. ಸಾಗವಾನಿ ಕಟ್ಟಿಗೆಯಿಂದ ಕಟ್ಟಲಾಗಿದೆ. ಮಂದಿರದ ಗರ್ಭಗುಡಿಯಲ್ಲಿ ಕರಿಪಾಷಾಣ ಅಂದಾಜು ಮೂರು ಅಡಿ ಎತ್ತರದ ಶ್ರೀ ವಿಠ್ಠಲ ರುಕ್ಮೀಣಿಯ ಮೂರ್ತಿಯಿದೆ. ಮುಂದೆ ಮಹಾದೇವ ಲಿಂಗ ಹಾಗೆಯೇ ಪಕ್ಕದಲ್ಲಿ ಶ್ರೀ ಸಮರ್ಥ ಸದ್ಗುರು ಬಾಬಾ ಮಹಾರಾಜರ ಭಾವಚಿತ್ರವಿದೆ.

ಮಂದಿರದ ಗರ್ಭಗುಡಿಯ ಮುಂದೆ ವಿಶಾಲ ಸಭಾ ಮಂಟಪವಿದೆ. ಈ ಮಂದಿರದ ಸ್ಥಾಪನೆಯಿಂದ ಅಖಂಡ ೭೫ ವರ್ಷ ವೀಣಾನಾಮಸ್ಮರಣ ನಡೆಯುತ್ತದೆ. ಈ ಮಂದಿರದಲ್ಲಿ

ಪ್ರತಿದಿನ ಪಂಢರಪುರ ಚಂದ್ರಭಾಗಾ ನದಿಯಿಂದ ನೀರು ತಂದು ಪೂಜೆ ಮಾಡುವ ವ್ಯವಸ್ಥೆ ಬಾಬಾ ಮಾಡಿದ್ದಾರೆ.

ಮಂದಿರದಲ್ಲಿ ೧೯೭೭ ರಿಂದ ಜ್ಞಾನೇಶ್ವರಿ ಪಾರಾಯಣ ಈ ಹೊತ್ತಿನವರೆಗೂ ಪ್ರಾರಂಭವಾಗಿದೆ. ಈ ಮಂದಿರದಲ್ಲಿ ಪ್ರತಿವರ್ಷ ಫಾಲ್ಗುಣ ಶುದ್ಧ ಪಂಚಮಿಯಿಂದ ದ್ವಾದಶಿವರೆಗೆ ಹಾಗೆ ಕಾರ್ತಿಕವದ್ಯ ಏಕಾದಶಿಗೆ ಶ್ರೀ ಸಮರ್ಥ ಸದ್ಗುರು ಬಾಬಾ ಮಹಾರಾಜರ ಪುಣ್ಯ ತಿಥಿ, ಗೋಕುಲಾಷ್ಟಮಿ, ಶ್ರಾವಣ ಮಾಸ, ರಾಮಚರಿತ್ರ, ಗೋಪಾಳಕಾಲಾ ಹೀಗೆ ಅನೇಕ ಉತ್ಸವಗಳನ್ನು ನೆರವೇರಿಸುತ್ತಾರೆ.

ಹಾಲಸಿದ್ಧನಾಥ ಜಾತ್ರೆ

ಧರ್ಮ ಸಂಪ್ರದಾಯ ಆಚರಣೆ ಇವುಗಳಲ್ಲಿ ಭಾರತೀಯ ಜನಾಂಗದ ಸಂಸ್ಕೃತಿಯ ಅಭಿವ್ಯಕ್ತಿಗಳಾಗಿ ಬೆಳೆದು ಬಂದವುಗಳು. ಸಾಮಾಜಿಕ ಜೀವನವನ್ನು ವ್ಯವಸ್ಥಿತವಾಗಿ ರೂಪಿಸಿದವುಗಳು. ಪ್ರದೇಶದಿಂದ ಪ್ರದೇಶಕ್ಕೆ ಜನಾಂಗಕ್ಕೆ ಭಿನ್ನವಾದ ಹಲವು ಧರ್ಮಗಳು. ಆಚರಣೆಗಳು ಈ ನೆಲದಲ್ಲಿ ಹುಟ್ಟಿಕೊಂಡರೂ ಕೂಡ ಅವುಗಳೆಲ್ಲದರ ಮೂಲ ಸೂತ್ರ ಒಂದೇ ಆಗಿರುವುದೇ ವಿಶೇಷ. ಈಗಲೂ ಕೂಡ ಈ ಆಚರಣೇಗಳು ಹಳ್ಳಿಗಳಲ್ಲಿ ನಿಚ್ಚಳವಾಗಿ ಕಂಡು ಬರುತ್ತವೆ.

ಹಾಗೆಯೇ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಅಪ್ಪಾಚಿವಾಡಿಯಲ್ಲ ಪ್ರತಿವರ್ಷ ಸೀಗೆ ಹುಣ್ಣಿಮೆಯೆಂದು ಪ್ರಾರಂಭವಾಗುವ ಈ ಜಾತ್ರೆ ೫ ದಿನಗಳವರೆಗೆ ನಡೆಯುತ್ತದೆ.

ಅಪ್ಪಾಚಿವಾಡಿ ಗ್ರಾಮದ ಮಧ್ಯಭಾಗದಲ್ಲಿಯೇ 'ಹಾಲಸಿದ್ಧನಾಥನ' ದೇವಾಲಯವಿದೆ. ಸ್ವಲ್ಪದೂರದಲ್ಲೇ ಅಂದರೆ ಎದುರಗಡೆ ಹಾಲಸಿದ್ಧನಾಥನ ಸಮಾಧಿಯಿದೆ ಇವೆರಡರ ಮಧ್ಯದಲ್ಲಿ ಹಳ್ಳವೊಂದು ಹರಿದಿದೆ. ಅಪ್ಪಾಚಿವಾಡಿಯಿಂದ ನಾಲ್ಕೈದು ಮೈಲುಗಳ ಅಂತರದಲ್ಲಿ ಕುರ್ಲಿ ಎನ್ನುವ ಮತ್ತೊಂದು ಹಳ್ಳಿ ಅಲ್ಲಿಯೂ ಕೂಡ ಹಾಲಸಿದ್ಧನಾಥನ ದೇವಾಲಯವಿದೆ. ಹಾಲಸಿದ್ಧನಾಥನೆಂಬ ಶರಣನೊಬ್ಬ ಪಂಢಪುರದ ಕಡೆಯಿಂದ ಈ ಪ್ರದೇಶಗಳಿಗೆ ಬಂದು ಕೊನೆಗೆ ಅಪ್ಪಾಚಿವಾಡಿಯಲ್ಲಿ ಸಮಾಧಿ ತೆಗೆದುಕೊಂಡನೆಂಬ ಪ್ರತೀತಿಯೂ ಇಲ್ಲಿ ಹಬ್ಬಿರುವದು ವಿಶೇಷವಾಗಿದೆ. ಮೂಲತಃ ಈ ದೇವರು ಕುರುಬರ ದೇವರಾಗಿದ್ದು ಇಲ್ಲಿಯೆರಡೂ ದೇವಾಲಯಗಳ ಪೂಜಾರಿಗಳಿಗೂ ಕೂಡ ಕುರುಬರಾಗಿದ್ದಾರೆ. ಆದರೆ ವಿಶೇಷವೆಂದರೆ ಈ ದೇವರಿಗೆ ಎಲ್ಲ ಧರ್ಮದವರೂ ನಡೆದುಕೊಳ್ಳುವರು ಅಷ್ಟೇ ಅಲ್ಲ ಮುಸ್ಲಿಂರೂ ಕೂಡ ಈ ದೇವರಿಗೆ ತಮ್ಮ ಹರಕೆಯನ್ನು ಒಪ್ಪಿಸುತ್ತಾರೆ. ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ.

ಮಹಾರಾಷ್ಟ್ರದ ಗಡಿಭಾಗದಲ್ಲಿ ಈ ಎರಡೂ ಹಳ್ಳಗಳಿರುವದರಿಂದ ಮರಾಠಿಯೇ ಇಲ್ಲಿಯ ಭಾಷೆಯಾಗಿದೆ. ಆದರೆ ಕರ್ನಾಟಕದ ಇತರೆಡೆಗಳಲ್ಲಿ ಕಂಡು ಬರುವ ಸಂಪ್ರದಾಯಗಳೆಲ್ಲ

ಇಲ್ಲಿ ಕಂಡು ಬರುತ್ತವೆ. ವಿಶೇಷವಾಗಿ ಕರ್ನಾಟಕದ ಜಾನಪದ ವಾದ್ಯ, ಡೊಳ್ಳು ಬಾರಿಸುವದು ಈ ಜಾತ್ರೆಯಲಿ ಕಂಡು ಬರುವ ವೈಶಿಷ್ಟ್ಯ. ಜಾತ್ರೆಯು ಪ್ರಾರಂಭವಾಗುವ ೧೫-೨೦ ದಿನಗಳಷ್ಟು ಮುಂಚಿತವಾಗಿ ಡೊಳ್ಳು ಬಾರಿಸುವ ತಯಾರಿ ನಡೆಯುತ್ತದೆ. ಪ್ರತಿನಿತ್ಯ ಸಾಯಂಕಾಲ ಹೊಲದಿಂದ ಬಂದ ರೈತರು ಡೊಳ್ಳು ಬಾರಿಸಲು ತೆರಳುತ್ತಾರೆ. ಈ ಡೊಳ್ಳು ಬಾರಿಸುವವರಲ್ಲಿ ಮೊದಲೇ ದೇವರಿಗೆ ಹರಕೆ ಹೊತ್ತಿರುತ್ತಾರೆ. ಚಿಕ್ಕ ಹುಡುಗರು, ವಯಸ್ಸಾದರೂ ಕೂಡ ಇದರಲ್ಲಿ ಪಾಲ್ಗೊಳ್ಳುತ್ತಾರೆ. ಅದರಲೇ ಆಲಿಸಿ, ಡೊಳ್ಳು ಬಾರಿಸುವ ಗುಂಪು ತಯಾರಾಗುತ್ತದೆ. ಕುರ್ಲಿಯದು ಒಂದು ಗುಂಪು ಅದೇ ರೀತಿ ಅಪ್ಪಾಚಿವಾಡಿಯಲ್ಲಿ ಕೂಡ ಒಂದು ಗುಂಪು ಈ ಡೊಳ್ಳು ಬಾರಿಸುವವರಿಗೆ ಪ್ರತಿನಿತ್ಯ ಹಾಲು, ಹಣ್ಣು ಮುಂತಾದವುಗಳನ್ನು ಹಳ್ಳಿಯ ಪ್ರತಿ ಮನೆಯವರು ತಮ್ಮ ಶಕ್ತ್ಯಾನುಸಾರ ಕಳುಹಿಸುತ್ತಾರೆ. ಈ ರೀತಿ ತರಬೇತಿ ಹೊಂದಿದ ಆ ಡೊಳ್ಳಿನ ಗುಂಪು ಜಾತ್ರೆಯ ಹಿಂದಿನ ದಿನ ಅಂದರೆ ಸಾಯಂಕಾಲದಲ್ಲಿ ಕುರ್ಲಿಯಿಂದ ಪಲ್ಲಕ್ಕಿ ಉತ್ಸವದೊಂದಿಗೆ ಅಪ್ಪಾಚಿವಾಡಿಗೆ ಬಂದಿಳಿಯುತ್ತಾರೆ. ದೇವಾಲಯದಲ್ಲಿ ಪಲ್ಲಕ್ಕಿ ಇಟ್ಟು ಮೊದಲೇ ದೇವಾಲಯದ ಮುಂದೆ ಹಾಕಿದ ಹಂದರದಲ್ಲಿ ಒಂದೆಡೆ ಕುರ್ಲಿಯಿಂದ ಹೋದ ಡೊಳ್ಳಿನ ಗುಂಪು ಮತ್ತೊಂದೆಡೆ ಅಪ್ಪಾಚಿವಾಡಿಯ ಡೊಳ್ಳಿನ ಗುಂಪು ಸಾಲಾಗಿ ನಿಂತು ಡೊಳ್ಳು ಬಾರಿಸಲು ಪ್ರಾರಂಭಿಸುತ್ತಾರೆ. ಅಂದು ಡೊಳ್ಳು ಬಾರಿಸುವವರೆಲ್ಲ ಉಪವಾಸವಿದ್ದು ಆ ವೇಶದಿಂದ ಬೆಳ್ಳಂಬೆಳಗೆಲ್ಲಾ ಉತ್ಸಾಹದಿಂದ ಡೊಳ್ಳನ್ನು ಬಾರಿಸಿ ತಮ್ಮ ಹರಕೆಯನ್ನು ದೇವರಿಗೆ ಸಲ್ಲಿಸುತ್ತಾರೆ. ಹೀಗಾಗಿ ರಾತ್ರಿಯಿಡೀ ಜನ ದೇವರಿಗೆ ಬಂದು ಅಲ್ಲಲ್ಲಿ ಚಕ್ಕಡಿಗಳನ್ನು ತುಂಬಿ ತಂಗಿರುತ್ತಾರೆ. ಆವತ್ತು ರಾತ್ರಿಯೆಲ್ಲ ಡೊಳ್ಳು ಬಾರಿಸುವದು ಆದ ನಂತರ ಅಂದರೆ ಬೆಳಗಿನ ಜಾವ ಅಥವಾ ಹೇಳಿಕೆ ಪ್ರಾರಂಭವಾಗುತ್ತದೆ. ಅದಕ್ಕೆ ಮರಾಠಿಯಲ್ಲಿ 'ಭಾಕಣೂಕ' ಎಂದು ಕರೆಯುತ್ತಾರೆ.

ಈ 'ಭಾಕಣೂಕಿ' ಗಾಡಿಯೇ ಜನರೆಲ್ಲಾ ಕುತೂಹರಿಗಳಾಗಿ ಕಾದಿರುತ್ತಾರೆ. 'ಭಾಕಣೂಕ' ಹೇಳುವದು ಆ ಹೊತ್ತು ಇಡೀ ದಿನ ಉಪವಾಸವಿದ್ದು ದೇವಾಲಯದಲ್ಲೇ ತಂಗಿದ್ದು; ಬೆಳಗಿನ ಜಾವಕ್ಕೆ ಸ್ನಾನ ಮಾಡಿ ಒದ್ದೇ ಬಟ್ಟೆಯಲ್ಲಿಯೇ ಬಂದು ದೇವಾಲಯದ ಎದುರುಗಡೆ ಮಧ್ಯಭಾಗದಲ್ಲಿ ಬಂದು ನಿಂತು ಸುಮಾರು ಅರ್ಧ ಗಂಟೆಯವರೆಗೆ ಭವಿಷ್ಯ ನುಡಿಯುತ್ತಾರೆ. ಈ ಭಾಕಣೂಕ ಭಾಷೆ ಮಾತ್ರ ಸರಳವಾಗಿ ಅರ್ಥವಾಗುವಂತಿರದೇ ಒಗಟನೋಪಾದಿಯಲ್ಲಿದ್ದು ಅದೂ ಕೂಡ ಮರಾಠಿಯಲ್ಲಿಯೇ ಇರುತ್ತದೆ. ವಿಶೇಷವೆಂದರೆ ಈ ಭಾಕಣೂಕು ಹೇಳುವ ಪರಿಪಾಠ ಅನುವಂಶಿಕವಾಗಿ ಬಂದಿದ್ದು ಹೀಗೆಯೇ ಮುಂದುವರೆಯುತ್ತಾ ನಡೆದು ಬಂದಿದೆ. ದೇಶದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯ ಭವಿಷ್ಯ ನುಡಿಯುತ್ತಾನೆ. ಅಲ್ಲದೇ ಅಪ್ಪಾಚಿವಾಡಿ, ಕುರ್ಲಿ ಅಲ್ಲಿಯ ಮಳೆಯ ಬೆಳೆಯ ಬಗ್ಗೆಯೂ ಹೇಳುತ್ತಾನೆ. ಅಲ್ಲಿಯ ಜನರುಈ ಭವಿಷ್ಯವನ್ನು

ಬಹಳೇ ನಂಬುತ್ತಾರೆ. ಈ 'ಭಾಕಣಖಕ' ಹೇಳುವದಕ್ಕಿಂತ ಸ್ವಲ್ಪದರಲ್ಲಿ ಕತ್ತಿವರಸೆ ಆಟವಾಡುತ್ತಾರೆ. ಮಧ್ಯದಲ್ಲಿಯೇ ಅಪ್ಪಾಚಿವಾಡಿ ದೇವರ ಹೆಸರಿನಲ್ಲಿ ಬಿಟ್ಟ ಕುದುರೆ ಮತ್ತು ಕುರ್ಲಿಯ ದೇವರ ಕುದುರೆ ಎರಡನ್ನು ತೆಗೆದುಕೊಂಡು ಬಂದು ಹಾಗೆಯೇ ಒಂದು ಸುತ್ತು ಹಾಕಿ ಹೋಗುತ್ತಾರೆ.

ಇದಾದ ನಂತರ ದೇವರಿಗೆ ಬೇಡಿಕೊಂಡ ಭಕ್ತಾದಿ ಜನರು ತಮ್ಮ ಹರಕೆಯನ್ನು ಸಲ್ಲಿಸುತ್ತಾರೆ.. ವಿಶೇಷವೆಂದರೆ ಇಲ್ಲಿ ಭಂಡಾರವನ್ನು ದೇವರಿಗೆ ಹಾರಿಸುವದು ಹೆಚ್ಚಾಗಿ ಕಂಡು ಬಂದು ಗುಡಿಯೆಲ್ಲಾ ಭಂಡಾರದಿಂದಲೇ ತುಂಬಿ ಹೋಗಿರುತ್ತದೆ. ಹೀಗೆಯೇ ೫ ದಿನಗಳವರೆಗೆ ಉತ್ಸವ ನಡೆದಿರುತ್ತದೆ. ಬಂದ ಜನಕ್ಕೆಲ್ಲ ಶ್ರೀಮಂತ ಮನೆತನದವರು ಊಟಕ್ಕೆ ಹಾಕಿಸುವ ಏರ್ಪಾಟು ಮಾಡಿರುತ್ತಾರೆ. ಅವರೂ ಕೂಡ ಹಾಗೆಂದು ದೇವರಿಗೆ ಹರಕೆ ಹೊತ್ತಿರುತ್ತಾರೆ.

ಕುರ್ಲಿಯ ದೇವಸ್ಥಾನದ ಪಲ್ಲಕ್ಕಿಯು ೫ ದಿನಗಳವರೆಗೆ ಅಲ್ಲಿಯೇ ಇದ್ದು ನಂತರ ಕೊನೆಯ ದಿನ 'ಡೊಳ್ಳು' ವಾದ್ಯದ ಸಮೇತ ಊರಿಗೆ ಮರಳುತ್ತದೆ. ಊರಲ್ಲಿ ಬಂದಾಗ ಪ್ರತಿ ಮನೆಯವರು ಬಂದು ಆ 'ಡೊಳ್ಳು' ಬಾರಿಸುವವರಿಗೆ ರಾಗಿ ಹಿಟ್ಟಿನಿಂದಲೊ ಅಥವಾ ಜೋಳದ ಹಿಟ್ಟಿನಿಂದಲೋ ತಯಾರಿಸಿದ ಅಂಬಲಿಯನ್ನು ಕುಡಿಸಿ ಪಲ್ಲಕ್ಕಿಗೆ ನಮಸ್ಕರಿಸುತ್ತಾರೆ.

ಆಡಿ ಮಲ್ಲಿಕಾರ್ಜುನನ ಜಾತ್ರೆ

ನಿಪ್ಪಾಣಿ ನಗರದಿಂದ ೧೨ ಕಿ.ಮೀ ದೂರದಲ್ಲಿರುವ ಬೆಟ್ಟದ ಮೇಲೆ ಶೈವ ಸುಕ್ಷೇತ್ರ ಮಲ್ಲಿಕಾರ್ಜುನ ದೇವಸ್ಥಾನವನ್ನು ಪ್ರತಿಷ್ಠಾಪಿಸಲಾಗಿದೆ. ಆಡಿ ಗ್ರಾದ ಗಿರಿ ಮೇಲೆ ಕಂಗೊಳಿಸುತ್ತಿರುವ ಈ ದೇವಸ್ಥಾನವು ಆಂಧ್ರಪದೇಶದಲ್ಲಿರುವ ಶ್ರೀ ಶೈಲ ಪರ್ವತ ಮಲ್ಲಿಕಾರ್ಜುನ ಸನ್ನಿದಿ ಪ್ರತಿಸ್ವರೂವನ್ನು ಹೋಲುತ್ತದೆ. ದೂರದ ಶ್ರೀಶೈಲಕ್ಕೆ ಹೋಗದೆ ಇಲ್ಲಿಯೇ ಮಲ್ಲಿಕಾರ್ಜುನನ್ನು ಪೂಜಿಸುವ, ದೈವಿಶಕ್ತಿಯ ಮೌಲ್ಯವನ್ನು ಗುರುತಿಸುವ ಕ್ರಿಯೆ ಇಲ್ಲಿಯ ಭಕ್ತವರ್ಗದ್ದಾಗಿದೆ.

ಸ್ಥಳ ಪುರಾಣ :

ಇಷ್ಟು ಎತ್ತರವಾದ ಗಿರಿಯ ಮೇಲೆ ಮಲ್ಲಿಕಾರ್ಜುನ ದೇವಾಲಯವನ್ನು ಸ್ಥಾಪಿಸಲು ಸಮೀಪದ, ಲಕಣಾಪುರ ಗ್ರಾಮದಲ್ಲಿಯ ಸೋಮಗೊಂಡ ಪಾಟೀಲ ಎಂಬ ಮಲ್ಲಿಕಾರ್ಜುನನ ಪರಮಭಕ್ತ ನಿತ್ಯ ಶ್ರೀಶೈಲಕ್ಕೆ ಕಾಲ್ನಡಿಗೆಯಿಂದ ಹೋಗಿ ದರ್ಶನ ಪಡೆದು, ಊರಿಗೆ ಮರಳಿ ಮತ್ತೆ ಮರುದಿನವೇ ಶ್ರೀಶೈಲ ಪರ್ವತಕ್ಕೆ ಹೋಗುತ್ತ ಇಡೀ ತನ್ನ ಆಯುಷ್ಯವನ್ನೇ ಆತನ ದರ್ಶನದಲ್ಲಿಯೇ ಕಳೆದನಂತೆ. ಮುಪ್ಪಾವಸ್ಥೆಯಲ್ಲಿ ಮಲ್ಲಿಕಾರ್ಜುನ ದರ್ಶನ ಅಸಾಧ್ಯವಾಗಿ

ಪರಿತಪಿಸುತ್ತಿರುವಾಗ ಸಾಕ್ಷಾತಾ ಮಲ್ಲಿಕಾರ್ಜುನನೇ ಆತನ ಸ್ವಪ್ನದಲ್ಲಿ ಬಂದು ಪಶ್ಚಿಮಭಾಗದ ಬೆಟ್ಟದ ಮೇಲೆ ತಾನು ನೆಲಸಿರುವುದಾಗಿಯೂ, ತನ್ನ ಮೇಲೆ ಹುತ್ತೊಂದು ಬೆಳೆದದ್ದು, ನಿತ್ಯ ಅಲ್ಲಿ ಬರಡು ಎಂದು ಕರೆಸಿಕೊಳ್ಳುವ ಆಕಳೊಂದು ತನ್ನ ಮೇಲೆ ಹಾಲುಕರೆಯುತ್ತದೆಂದೂ, ನೀನು ಇನ್ನೆಂದೂ ಶ್ರೀಶೈಲ ಪರ್ವತಕ್ಕೆ ಬರದೆ ಇಲ್ಲಿಯೇ ಆರಾಧಿಸೆಂದು ಹೇಳಿ ಕಣ್ಮರೆಯಾದನಂತೆ; ಮರುದಿನವೇ ಈ ಭಕ್ತ ಊರಲ್ಲಿನ ನಾಲ್ಕಾರು ಜನರನ್ನು ಆ ಬೆಟ್ಟಕ್ಕೆ ಕರೆದ್ಯೊಯುದು ನೋಡಿದಾಗ ಹುತ್ತದ ಮೇಲೆ ಆಕಳೊಂದು ಹಾಲುಕರೆಯುವುದನ್ನು ನೋಡಿ ಆಶ್ಚರ್ಯ ಚಕಿತನಾಗಿ ಮಲ್ಲಯ್ಯ ಇಲ್ಲಿಯೇ ನೆಲಸಿರುವನೆಂದು; ದಟ್ಟವಾಗಿ ಬೆಳೆದ ಗಿಡಗಂಟೆಗಳನ್ನು ಕತ್ತರಿಸಿ ಹುತ್ತವನ್ನು ಬಯಲುಗೊಳಿಸಿದಾಗ ಅಖಂಡ ಶಿಲೆಯಲ್ಲಿ ಮಲ್ಲಕಾರ್ಜುನನ ಇರುವನ್ನು ಕಂಡು ದೇವಾಲಯವನ್ನು ಕಟ್ಟಿದನಂತೆ. ಹೀಗೆ ಈ ಗಿರಿಯಲ್ಲಿ ಮಲ್ಲಿಕಾರ್ಜುನನ ಆರಾಧನೆಯನ್ನು ಮಾಡುತ್ತಾ ಹಲವು ವರ್ಷ ಬದುಕಿ ಕೈವಲ್ಯ ಪದವಿಗೇರಿದ.

ಈ ದೇವಾಲಯ ಮತ್ತೆ ಜೋರ್ಣೋದ್ಧಾರಗೊಂಡದ್ದು ನೇಜ ಗ್ರಾಮದ ನೇಜ ಪಾಟೀಲ ಹಾಗೂ ರಾಯಬಾಗದಲ್ಲಿಯ ಅಳಿಯ ಬಾಗಿ ಪಾಟೀಲರಿಂದ. ಇವರಿಬ್ಬರೂ ಸಂಸಾರದ ಒಟ್ಟು ಸಾರವನ್ನು ಹೀರಿ ಈ ಬಂಧನದಿಂದ ಮುಕ್ತಿ ಪಡೆದು ಪರಶಿವನ ಸಾನಿಧ್ಯದಲ್ಲಿ ಲೀನವಾಗಬೇಕೆಂದು ಚಿಂತಿಸುತ್ತ ಒಮ್ಮೆ ಬೆಟ್ಟದ ಮೇಲಿನ ಸುಕ್ಷೇತ್ರಕ್ಕೆ ಭೇಟ್ಟಿಯನ್ನು ನೀಡಿ ಮರುಳುತ್ತಿರುವಾಗ ವಯೋವೃದ್ಧರೊಬ್ಬರು ಎದುರಾಗಿ ಈ ಕ್ಷೇತ್ರದಲ್ಲಿ ತಾವೇನು ಏನೂ ಕಂಡಿರುವಿರೆಂದಾಗ, ಏನೂ ಇಲ್ಲವೆಂದು ಇಬ್ಬರೂ ಹೇಳಿ ಹಿಂದೆ ನೋಡಿದಾಗ ಸುಕ್ಷೇತ್ರ ಹೊಂಗಿರಣದಿಂದ ಜ್ವಾಜ್ವಲ್ಯಮಾನವಾಗಿ ಕಂಗೊಳಿಸುವುದನ್ನು ನೋಡಿ, ಮುಂದೆ ಹೊರಳಿದಾಗ ಅಲ್ಲಿದ್ದ ವಯೋವೃದ್ಧರು ಅದೃಶ್ಯವಾಗಿದ್ದರಂತೆ. ಇಲ್ಲಿಯ ದೈವತ್ವದ ಆಶ್ಚರ್ಯವನ್ನು ಗುರುತಿಸಿ ನೈಜ ಪಾಟೀಲ ಬಾಗಿ ಪಾಟೀಲ ಇಲ್ಲಿಯೇ ನೆಲಸಿ ಈ ದೇವಸ್ಥಾನವನ್ನು ಸುಕ್ಷೇತ್ರವನ್ನಾಗಿ ಪರಿವರ್ತಿಸಿದರೆಂದು ಇಲ್ಲಿಯ ಅರ್ಚಕರು ವ್ಯಕ್ತಪಡಿಸುತ್ತಾರೆ.

ಶಿವಾಜಿ ಆಗಮನ :

ಬೆಂಗಳೂರಿನವರೆಗೆ ತನ್ನ ವಿಜಯಯಾತ್ರೆಯನ್ನು ಮುಂದುವರೆಸಿದ ಛತ್ರಪತಿ ಶಿವಾಜಿ ಮಹಾರಾಜರು ಮರಳಿ ಕೊಲ್ಲಾಪೂರಕ್ಕೆ ಬರುವ ಸಂದರ್ಭದಲ್ಲಿ ಅವರ ಕುದುರೆ ಕಣ್ಣು ಬೇನೆಯಿಂದ ತತ್ತರಿಸಲು ಶ್ರೀಗಿರಿಯ ಮೇಲೆ ಬಂದು ಪಾಟೀಲ ಬಂಧುಗಳಿಗೆ ತಿಳಿಸಿದಾಗ, ಮಲ್ಲಿಕಾರ್ಜುನನ ಕೃಪಾ ಕಟಾಕ್ಷದಿಂದ ಶಿವಾಜಿಯ ಕುದುರೆ ಮೊದಲಿನಂತಾಗಲು ಶ್ರೀಗಿರಿಯ ಮಹಿಮೆಯನ್ನು ಕೊಂಡಾಡಿ ಶ್ರೀ ಗಿರಿಗೆ ಒಂದು ನೂರು ಎಕರೆ ಪ್ರದೇಶವನ್ನು ಉಂಬಳಿಯಾಗಿ ನೀಡಿ ಹೋದನಂತೆ.

ಮಲ್ಲಿಕಾರ್ಜುನನ ದೇವಾಲಯದ ವೈವಿಧ್ಯತೆ :

ಮಲ್ಲಿಕಾರ್ಜುನ ದೇವಾಲಯ ಎತ್ತರವಾದ ಗಿರಿಯ ಮೇಲೆ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದು ಸುಮಾರು : ೧೬-೧೭ ನೇ ಶತಮಾನದಲ್ಲಿ ರಚಿತಗೊಂಡಿದೆ. ಸುಂದರವಾದ ಗೋಪುರವನ್ನು ಹೊಂದಿದ್ದು, ಗರ್ಭಗುಡಿ ನವರಂಗ ವಿಶಾಲವಾದ ಹಜಾರ ಹಾಗೂ ಸಭಾಮಂಟಪವನ್ನು ಕೂಡ ಹೊಂದಿದೆ. ಗರ್ಭಗುಡಿಯಲ್ಲಿ ಏಕಶಿಲೆಯಲ್ಲಿ (ಮಲ್ಲಿಕಾರ್ಜುನನ) ಶಿವಲಿಂಗವಿದ್ದುಅದರ ಪಕ್ಕದಲ್ಲಿಯೇ ಲಿಂಗಸ್ಥಲ ಮತ್ತು ಪೀಠಸ್ಥಲ ಭಿನ್ನವಾಗಿರುವ ಚಿಕ್ಕಶಿವಲಿಂಗವನ್ನೂ ಗಮನಿಸಬಹುದು. ಶಿವಲಿಂಗಕ್ಕೆ ಧರಿಸುವ ಮಲ್ಲಿಕಾರ್ಜುನ ಮುಖವಾಡವಿದ್ದು ಅದರ ಜೊತೆಗೆ ಇನ್ನೂ ಆರು ಮುಖವಾಡಗಳನ್ನು ಕಾಣಬಹುದು. ಅವುಗಳಲ್ಲಿ ಎರಡು ನೈಜಪಾಟೀಲ ಮತ್ತು ಬಾಗಿ ಪಾಟೀಲರಿಗೆ ಸಂಬಂಧಿಸಿದವು. ಹಜಾರದಲ್ಲಿಯೇ ನಂದಿಯ ವಿಗ್ರವನ್ನು ಪ್ರತಿಷ್ಠಾಪಿಸಲಾಗಿದ್ದು ಇಲ್ಲಿಯ ಶಿವಲಿಂಗ ಹಾಗೂ ನಂದಿಯ ವಿಗ್ರಹಗಳು ಪ್ರಾಚೀನವಾದ ಸ್ವರೂಪವನ್ನು ಪಡೆದುಕೊಂಡಿವೆ. ನಂದಿಯು ಬರಗಾಲನ್ನು ಮುಂದೆ ಚಾಚಿ ಕುಳಿತಿರುವ ದೃಶ್ಯ ಮನಮೋಹಕತೆಯನ್ನುಂಟು ಮಾಡುತ್ತದೆ. ಕೊರಳಗಂಟೆ, ಸರ, ತಿಲಕಗಳಿಂದ ಸರ್ವ ಭೂಷಣತೆಯನ್ನು ನಂದಿಗೆ ಶಿಲ್ಪಿ ತೊಡಿಸಿದ್ದಾನೆ. ದೇವಾಲಯದ ಮುಖಮಂಟಪ ಯಾವುದೇ ವೈವಿಧ್ಯತೆಯಿಂದ ಕೂಡರದಿದ್ದರೂ ಸರಳ ಕಲ್ಲು ಚಪ್ಪಡಿಯ ರಚನೆಯನ್ನು ಗಮನಿಸಬಹುದು. ದೇವಾಲಯದ ಹೊರ ಒಲಯದಲ್ಲಿ ಚಪ್ಪಡಿ ಕಲ್ಲುಗಳಿಂದ ರಚಿಗೊಂಡ

೧. ಕಾಡಸಿದ್ದೇಶ್ವರ ಮಂದಿರ

೨. ದತ್ತಾತ್ರೇಯ ಮಂದಿರ

೩. ಶ್ರೀ ನೇಜಕರ ಪಾಟೀಲ ಸಮಾಧಿ

೪. ಶ್ರೀ ಭೀಮಾ ಬಾಗಿ ಪಾಟೀಲ ಸಮಾಧಿ

೫. ಪಾರ್ವತಿ ದೇವಾಲಯ

ಹೀಗೆ ಐದಾರು ಚಿಕ್ಕ ದೇವಾಲಯಗಳನ್ನು ಕಾಣಬಹುದು.

ಈ ಮಲ್ಲಿಕಾರ್ಜುನ ದೇವಾಲಯ ಹಾಗೂ ಇತರಮಂದಿರಗಳಿಗೆ ಹೊರಗಿನಿಂದಲೇ ಪ್ರದಕ್ಷಿಣಾ ಪಥವನ್ನು ಹೊಂದಿವೆ.

ಶ್ರೀ ಗಿರಿಯಲ್ಲಿ ಮಲ್ಲಿಕಾರ್ಜುನನ ನಿತ್ಯ ಮೂರುಹೊತ್ತು ಪೂಜೆ ಪುನಸ್ಕಾರಗಳು ಜರುಗುತ್ತಿದ್ದು ಸುಮಾರು ಹತ್ತು ಸಾವಿರ ಪತ್ರೆಗಳನ್ನು ಈ ಸಂದರ್ಭದಲ್ಲಿ ಸಮರ್ಪಿಸಲಾಗುತ್ತದೆ. ಶ್ರಾವಣ ಮಾಸದಲ್ಲಿ ಜಾತೆ ಮೂರನೇ ಅಥವಾ ನಾಲ್ಕನೇ ಸೋಮವಾರದಂದು ಜರುಗುತ್ತದೆ.

ಈ ಸಂದರ್ಭದಲ್ಲಿ ಇಡೀ ಶ್ರಾವಣ ಮಾಸವೆಲ್ಲಾ ನಿತ್ಯ ದಾಸೋಹವನ್ನು ಕೂಡ ಕಾಣಬಹುದು. ಅಷ್ಟೇ ಅಲ್ಲದೆ ಪ್ರತಿ ಅಮವಾಸೆಯಂದು ಕೂಡ ದಾಸೋಹವನ್ನು ನಡೆಸಿಕೊಂಡು ಬಂದಿರುವುದಾಗಿ ಇಲಿಯ ಅರ್ಚಕರು ವ್ಯಕ್ತಪಡಿಸುತ್ತಾರೆ.

ಈ ಕ್ಷೇತ್ರದಲ್ಲಿ ಇನ್ನೊಂದು ವೈಶಿಷ್ಟ್ಯವೆಂದರೆ ಶ್ರೀಶೈಲ ಪರ್ವತದಲ್ಲಿ ನಡೆಯುವ ಸಕಲ ಪದ್ಧತಿಯ ವೈವಿಧ್ಯತೆಗಳು ಇಲ್ಲಿಯು ಜರುಗುತ್ತವೆ. ಹಾಗಾಗೀ ಈ ಕ್ಷೇತ್ರವನ್ನು ಉಪಶ್ರೀಶೈಲ ಮಲ್ಲಿಕಾರ್ಜುನ ಕ್ಷೇತ್ರವೆಂದು ಕರೆಯಬಹುದು.

ಉಗಮೇಶ್ವರ ಜಾತ್ರೆ ಭೋಜ

ದೂಧಗಂಗಾ ಪಶ್ಚಿಮದಿಂದ ಪೂರ್ವಕ್ಕೆ ಮುಖಮಾಡಿ ಹರಿದರೆ, ವೇದಗಂಗಾ ಪಶ್ಚಿಮಕ್ಕೆ ಮುಖ ಮಾಡಿ, ಹುನ್ನರಗಿಯಿಂದ ಬಾರವಾಡದವರೆಗೆ ಉತ್ತರವಾಹಿಸಿಯಾಗಿ ಗಳತಗಾ ಸೀಮೆಯಿಂದ ಹುನ್ನರಗಿ ತನಕ ಪಶ್ಚಿಮಾಭಿಮುಖವಾಗಿ ಹರಿದಿದೆ. ಇಂತಹ ಸಂಗಮ ಕ್ಷೇತ್ರದಲ್ಲಿ ನೆಲೇನಿಂತಿರುವದು 'ಉಗಮೇಶ್ವರ ದೇವರು'

ಐತಿಹ್ಯ : ಒಂದು ದಿನ ಮಡಿವಾಳನು ಬಟ್ಟೆ ಒಗೆಯಲು ನದಿಗೆ ಹೋದಾಗ, ಬೇಸಿಗೆ ಕಾಲದಲ್ಲಿ ನದಿಯಲ್ಲಿ ಅಷ್ಟೊಂದು ಪ್ರಮಾಣದಲ್ಲಿ ನೀರಿರಲಿಲ್ಲ. ಒಂದೇ ಒಂದು ಹೊಂಡದಲ್ಲಿ ನೀರಿತ್ತು. ಆ ಹೊಂಡವನ್ನು ತೋಡಿ ಬಟ್ಟೆ ತೊಳೆಯಲು ಹರವು ಮಾಡುವ ಸಂದರ್ಭದಲ್ಲಿ ಬಸವಣ್ಣನ ಮೂರ್ತಿ, ೫ ಅಡಿ ಉದ್ದವಿರುವ ನಂದಿ ನಂತರ ಶಂಖ ಸಿಕ್ಕಿತು. ಹಾಗೂ ಈಶ್ವರ ಲಿಂಗ ದೊರಕಿತು. ನದಿಯಲ್ಲಿ ನಂದಿ ದೊರೆತಿದದ್ದಕ್ಕೆ 'ಉಗಮೇಶ್ವರ' ಎಂಬ ನಾಮದಿಂದ ೧೯೮೬ ರಲ್ಲಿ ವೇದಗಂಗಾ ಮತ್ತು ದೂಧಗಂಗಾ ನದಿಯ ದಡದಲ್ಲಿ ಮಂದಿರ ನಿರ್ಮಾಣ ಮಾಡಲಾಯ್ತು.

ಪಂಚಮಹಾಭೂತದಿಂದ ಮಾಡಿದ ಲಿಂಗ, ನಡುವೆ ಶಿವ, ಪ್ರಕೃತಿ ಪುರುಷ ಪ್ರತೀಕಗಳಿವೆ. ನಂದಿಯ ಮೇಲೆ ೫ ಪಟ್ಟಿಕೆಗಳಿವೆ ಹಿಂದೂ ಧರ್ಮಶಾಸ್ತ್ರ ಪ್ರಕಾರ ಇದರ ಮೇಲಿರುವ 'ರೇಖಾಯಂತ್ರ'ವೇ ಇದರ ವೈಶಿಷ್ಟ್ಯ.

ಮೂರು ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಅನ್ನಪ್ರಸಾದ ಪ್ರವಚನ ಕುಂಭಾಭಿಷೇಕ ಹಾಗೂ ಜಾಗರಣೆ, ಭಜನೆ, ಕೀರ್ತನೆ, ಪ್ರವಚನ ಸಾಂಗವಾಗಿ ಶಿವರಾತ್ರಿಯಾದ ನಂತರ ನಡೆಯುತ್ತದೆ. ಪಕ್ಕದ ಊರುಗಳಿಂದ ಅನೇಕ ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದು ಪುನೀತರಾಗುತ್ತಾರೆ. ಶ್ರಾವಣದಲ್ಲಿ ಅಮವಾಸ್ಯೆಯ ತನಕ ರುದ್ರಾಭಿಷೇಕ, ಸಹಸ್ರ ನಾಮವಳಿ, ನೈವೇದ್ಯ ನಡೆಯುತ್ತದೆ.

ಮಹಾದೇವ ಮಂದಿರ (ಸದಲಗಾ)

ಸ್ಥಾಪನೆ: ಕ್ರಿಶ ೬೩೬ (ಸುಮಾರು ಬಾದಾಮಿ ಚಾಲುಕ್ಯರ ಕಾಲದಲ್ಲಿ)

ಇದು ಸದಲಗಾ ಗ್ರಾಮದ ಅತ್ಯಂತ ಪ್ರಾಚೀನ ಮಂದಿರವಾಗಿದ್ದು ಇಲ್ಲಿ ದರ್ಶನ ಲಿಂಗ(ಪಿಂಡಿ) ದಿನಾಲು ಪೂಜೆಗೈಯಲ್ಪಡುತ್ತದೆ. ಇಲ್ಲಿ ಬಸವಣ್ಣ (ಎತ್ತು)ನ ಶಿಲೆ ಕಾಣಬಹುದು. ದೇವಸ್ಥಾನದ ಅರ್ಚಕರು (ಗುರವ ಮನೆತನ) ದಿನಾಲು ಮುಂಜಾನೆ ೬-೦೦ ಮತ್ತು ರಾತ್ರಿ ೮-೦೦ ಗಂಟೆಗೆ ಪೂಜೆ ನಡೆಸುತ್ತಾರೆ.

ಮಂದಿರದಲ್ಲಿ ಪ್ರತಿ ಶ್ರಾವಣದಲ್ಲಿ ಗುರುವರ್ಯರಿಂದ ಪ್ರವಚನ ನಡೆಯುತ್ತ ಬಂದಿದೆ. ಬಸವ ಮತ್ತು ಅಕ್ಕಮಹಾದೇವಿ ಜಯಂತಿಯನ್ನು ದೇವಸ್ಥಾನ ಅಂಗಳದಲ್ಲಿ ವಿಜೃಂಭಣೆಯಿಂದ ಆಚರಿಸುತ್ತಾರೆ. ಇಲ್ಲಿನ ದೇವಸ್ಥಾನ ಕಟ್ಟುವಾಗ ಅನೇಕ ಶಾಸನಗಳನ್ನು ಒಳಗೊಂಡಿದ್ದರೂ, ಅಭಿವೃದ್ಧಿ, ವಿಸ್ತರಣೆ ಸಮಯದಲ್ಲಿ ಹಾಳಾಗಿ ದುರುಪಯೋಗವಾಗಿವೆ ಎಂದು ಹೇಳಲಾಗಿದೆ.

ಮಂದಿರದ ಮುಂಭಾಗವನ್ನು ಕ್ರಿ.ಶ ೧೯೨೯-೧೯೩೦ ರಲ್ಲಿ ಕಟ್ಟಲಾಯಿತು. ಮತ್ತು ಇದರ ಹತ್ತರ ಶ್ರೀ ಅಕ್ಕಮಹಾದೇವಿ ಧರ್ಮಶಾಲೆ ಇದೆ. ಇದನ್ನು ೧೯೪೦ ರಲ್ಲಿ ಕಟ್ಟಲಾಗಿದೆ. ಇದೇ ೧೯೪೧ ಸಮಯದಲ್ಲಿ ಸುತ್ತಲು ಗೋಡೆ ನಿರ್ಮಿಸಲಾಯಿತು. ಇದೀಗ ೨೦೧೧ ರಲ್ಲಿ ಸಭಾ ಭವನವನ್ನು ನಿರ್ಮಿಸಲಾಗಿದೆ.

ಮಂದಿರಕ್ಕೆ ಇಂದಿಗೂ, ಅಪಾರ ಸಂಖ್ಯೆಯಲ್ಲಿ ಭಕ್ತರು ಭೇಟಿಕೊಡುತ್ತಾರೆ. ಪ್ರತಿವರ್ಷ ನೆರೆ ಬಂದಾಗ ಮಹಾದೇವ ಲಿಂಗ(ಲಿಂಗ) ನೀರಿನಲ್ಲಿ ಮುಳುಗಿರುತ್ತದೆ ಎಂದು ಹೇಳಲಾಗಿದೆ.

ಯಡೂರ ವೀರಭದ್ರನ ಜಾತ್ರೆ

ಕರ್ನಾಟಕ -ಮಹಾರಾಷ್ಟ್ರ ಗಡಿಯ ಕೃಷ್ಣಾ ನದಿ ದಡದಲ್ಲಿರುವ ಧರ್ಮ ಸಮನ್ವಯದ ಸಾಕ್ಷಾತ್ಕಾರ ಮೂಡಿಸುತ್ತಿರುವ ಸುಕ್ಷೇತ್ರ ಯಡೂರ ಕನ್ನಡಿಗರ ಪುಣ್ಯತಾಣ.

ಶ್ರೀ ಕ್ಷೇತ್ರ ಯಡೂರ ಪೌರಾಣಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ಹೊಂದಿದ್ದು ದಕ್ಷಿಣ ಕಾಶಿ ಎಂದೇ ಪ್ರಖ್ಯಾತಿ ಪಡೆದಿದೆ. ಶ್ರೀ ವೀರಭದ್ರೇಶ್ವರ ಸಾಕ್ಷಾತ ರುದ್ರ ಸ್ವರೂಪಿ ಆಗಿದ್ದಾನೆಂಬ ಪ್ರತೀಕವು ಇಲ್ಲಿದೆ. ಯಕ್ಸಂಬಾದಿಂದ ಸುಮಾರು ೮ ಕಿ.ಮೀ ಹಾಗೂ ಚಿಕ್ಕೋಡಿಯಿಂದ ೨೧ ಕಿ.ಮೀ ಅಂತರದಲ್ಲಿರುವ ಕೃಷ್ಣಾ ನದಿ ಎಡದಂಡೆಯಲ್ಲಿ ಅಪಾರ ಭಕ್ತರಿಗೆ ದೈವಿನಿಧಿಯಾಗಿದೆ. ಕೃಷ್ಣೆಯಲ್ಲಿ ಮಿಂದು ನಂತರ ದರ್ಶನ ಪಡೆಯಬೇಕು ಎಂಬ ಪರಂಪರೆ ಇಲ್ಲಿ ರೂಢಿಯಿದೆ. ಕ್ಷೇತ್ರಕ್ಕೆ ಆಗಮಿಸುವ ಭಕ್ತರು ಮೊದಲು ಕೃಷ್ಣಾ ನದಿಯತ್ತ ಪ್ರಯಾಣ ಬೆಳೆಸುವುದು ಇಲ್ಲಿನ ವಿಶೇಷ.

ಯಡೂರ ಧರ್ಮ ಸಮನ್ವಯದ ಸಾಕ್ಷಾತ್ಕಾರ ಕ್ಷೇತ್ರ. ಕನ್ನಡ ನಾಡಿನ ಪುರಾಣ ಪ್ರಸಿದ್ಧ ಪುಣ್ಯ ಕ್ಷೇತ್ರಗಳಲ್ಲಿ ಇದೊಂದು ಜಾಗೃತ ಸ್ಥಳವಾಗಿದೆ. ಇಲ್ಲಿ ಜಾತಿ, ಮತ ಭೇದ ಭಾವವಿಲ್ಲ. ಮುಸ್ಲಿಂ ಜನಾಂಗಕ್ಕೆ ಸೇರಿದ ಭಕ್ತರು ದರ್ಶನ ಪಡೆಯುವುದು ಇಲ್ಲಿ ವಿಶೇಷ. ಇಲ್ಲಿ 'ಈರ' 'ಬೀರ' ಮತ್ತು 'ಪೀರ'ನ ಮೂರ್ತಿಗಳುಂಟು. ಅವು ವೀರಶೈವ, ಹಾಲುಮತ ಹಾಗೂ ಇಸ್ಲಾಂ ಜನಾಂಗದವರ ಆರಾಧ್ಯದೈವಗಳ ಪ್ರತೀಕವಾಗಿವೆ. ಮೂಲ ವೀರಭದ್ರ ಲಿಂಗವನ್ನೇ ಗ್ರಾಮ್ಯ ಭಾಷೆಯಲ್ಲಿ ಈರನೆಂದು ಕರೆಯುವರು.

ಉತ್ತರ ಕರ್ನಾಟಕದ ಪ್ರಮುಖ ಕ್ಷೇತ್ರ:

ಉತ್ತರ ಕರ್ನಾಟಕದ ಪ್ರಮುಖ ಕ್ಷೇತ್ರ ಯಡೂರ ಶ್ರೀ ವೀರಭದ್ರೇಶ್ವರನಿಗೆ ಮಹಾರಾಷ್ಟ್ರ ಕರ್ನಾಟಕ ಮತ್ತು ಗೋವಾ ಮುಂತಾದ ರಾಜ್ಯಗಳಿಂದ ಅಪಾರ ಭಕ್ತರು ಆಗಮಿಸಿ ದರ್ಶನ ಪಡೆಯುತ್ತಾರೆ.

ದಕ್ಷಿಣ ಗಂಗೆ ಕೃಷ್ಣಾ ನದಿ ಎಡದಂಡೆಯ ಮೇಲೆ ವಿರಾಜಮಾನವಾಗಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನ ಅದರ ಉತ್ತರಕ್ಕೆ ಅನತಿ ದೂರದಲ್ಲಿಯೇ ಶ್ರೀ ಕಾಡಸಿದ್ದೇಶ್ವರ ಮಠವಿದೆ. ದಕ್ಷಬ್ರಹ್ಮನು ಶಿವನ ವಿರೋಧಕ್ಕಾಗಿ ಆರಂಭಿಸಿದ ಯಜ್ಞಕ್ಕೆ ಮಡದಿ ಪಾರ್ವತಿ ಬಂದು ತಂದೆ ದಕ್ಷಬ್ರಹ್ಮನಿಂದ ಅಪಮಾನಿತಗಳಾಗಿ ಆ ಯಜ್ಞಕುಂಡದಲ್ಲಿಯೇ ದೇಹತ್ಯಾಗ ಮಾಡಿದ್ದಳೆಂಬ ಪ್ರತೀತಿಯಿದೆ. ಇದರಿಂದ ಕೋಪೋದ್ರಿಕ್ತನಾದ ಶಿವನ ಜಡೆಯಿಂದ ವೀರಭದ್ರನು ಜನ್ಮ ತಾಳಿ ದಕ್ಷಬ್ರಹ್ಮನನ್ನು ಸಂಹರಿಸಿದನಂತೆ. ಅಂದಿನಿಂದ ಶಿವನ ಅಜ್ಞಾನುಸಾರ ಶ್ರೀ ವೀರಭದ್ರನು ಶಿವವಿರೋಧಿ ಶಕ್ತಿಗಳನ್ನು ನಿಗ್ರಹಿಸಲು ಹಾಗೂ ಶಿವಭಕ್ತರನ್ನು ಅನುಗ್ರಹಿಸಲು ದಕ್ಷಬ್ರಹ್ಮನು ನಿರ್ಮಿಸಿದ ಯಜ್ಞಕುಂಡದಲ್ಲಿ ತಾನೇ ಲಿಂಗಪರೂಪದಲ್ಲಿ ನೆಲೆಸಿರುವನೆಂದು ಪುರಾಣಗಳಿಂದ ತಿಳಿದು ಬಂದಿದೆ.

ಶ್ರೀ ಕಾಡಸಿದ್ದೇಶ್ವರರು: ಈ ಸ್ಥಳದಲ್ಲಿ ದಕ್ಷಬ್ರಹ್ಮನು ಯಜ್ಞಗೈದ ಯಜ್ಞಕುಂಡ ಇರುವುದು ಮತ್ತು ಆ ಸ್ಥಳದಲ್ಲಿ ವೀರಭದ್ರನು ಲಿಂಗರೂಪದಲ್ಲಿ ನೆಲೆಸಿರುವುದು ಕಾಲಗರ್ಭದಲ್ಲಿ ಸೇರಿ ಹೋಗಿತ್ತು. ಕಾಲಾಂತರದಲ್ಲಿ ಪವಾಡ ಪುರುಷ ಶ್ರೀ ಕಾಡಸಿದ್ದೇಶ್ವರರು ಲೋಕಸಂಚಾರಿಗಾಳಗಿ ತಪೋನುಷ್ಠಾನಗೈಯಲು ಇಲ್ಲಿಗೆ ಆಗಮಿಸಿದಾಗ, ಬೂದಿ ಮುಚ್ಚಿದ ಯಜ್ಞಕುಂಡವೊಂದು ಅವರ ದೃಷ್ಟಿಗೆ ಬಿತ್ತು. ಆ ಬೂದಿಯನ್ನು ಸರಿಸಿದಾಗ ತೇಜೋಮಯ ಸ್ವಯಂಭು ಲಿಂಗವು ಕಂಡಿತು. ಇದುವೇ ಲಿಂಗರೂಪಿ ಶ್ರೀ ವೀರಭದ್ರೇಶ್ವರರು. ಈ ಲಿಂಗದರ್ಶನದಿಂದ ಶ್ರೀ ಕಾಡಸಿದ್ದೇಶ್ವರರು ಇದೇ ತಮ್ಮ ಅನುಷ್ಠಾನಕ್ಕೆ ಯೋಗ್ಯ ಸ್ಥಳವೆಂದು ಕಾರ್ಯೋನ್ಮುಖರಾದರು. ಕ್ರಮೇಣ ಭಕ್ತರ ಸಂಖ್ಯೆ ಹೆಚ್ಚಾಗಿ ಅದೊಂದು ಪುಣ್ಯಕ್ಷೇತ್ರವಾಗಿ ಪರಿವರ್ತನೆಯಾಯಿತು.

ಗುರು ಪರಂಪರೆ : ಶ್ರೀ ಕಾಡಸಿದ್ದೇಶ್ವರ ಮಠದ ಗುರು ಪರಂಪರೆಯಲ್ಲಿ ಮೂಲ ಕಾಡಸಿದ್ದೇಶ್ವರರು ಪ್ರಥಮರು. ಇವರ ನಂತರ ಮರಿ ಕಾಡಸಿದ್ದೇಶ್ವರರು ಪರಂಪರೆಯಲ್ಲಿ ಬರುವ ಗುರುಗಳು, ತರುವಾಯ ಸಿದ್ದಲಿಂಗೇಶ್ವರ ಮತ್ತು ಗುರುಸಿದ್ದೇಶ್ವರ ಎಂಬ ಎರಡು ಹೆಸರುಗಳಿಂದ ಹಲವಾರು ಗುರುಗಳು ಈ ಮಠದ ಪರಂಪರೆಯಲ್ಲಿ ಆಗಿ ಹೋಗಿರುವರು. ಇಲ್ಲಿಯವರೆಗೆ ಈ ಮಠದ ಪೀಠವನ್ನೇರಿದ ಗುರುಗಳಿಗೆ ಆ ಹೆಸರುಗಳನ್ನೇ ಒಂದಾದ ನಂತರ ಇನ್ನೊಂದರಂತೆ ನಾಮಕರಣ ಮಾಡುವ ಪದ್ಧತಿ ಬೆಳೆದು ಬಂದಿದೆ.

ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ :

ಜಮಖಂಡಿ ತಾಲೂಕಿನ ಹಿಪ್ಪರಗಿ ಹಿರೇಮಠದ ಮೂಲದಿಂದ ಬಂದ ಶ್ರೀಮದ ಭಗವದ್ಗೀತೆ ಮತ್ತು ಶ್ರೀ ಸಿದ್ಧಾಂತ ಶಿಖಾಮಣಿ ಒಂದು ತೌಲನಿಕ ಸಮೀಕ್ಷೆ ಎಂಬ ಪ್ರಬಂಧವನ್ನು ಮಂಡಿಸಿ ಕಾಶಿ ಹಿಂದೂ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದು ಹಾಗೂ ಈಗಿನ ಶ್ರೀಶೈಲ ಪೀಠದ ಜ.ಶ್ರೀ.ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಜಿ ದೇವಸ್ಥಾನದ ಧರ್ಮಾಧಿಕಾರಿಗಳು. ಅವರ ಸಾನ್ನಿಧ್ಯದಲ್ಲಿ ಪ್ರತಿನಿತ್ಯ ಕಾರ್ಯಕ್ರಮಗಳು ನಡೆಯುತ್ತಿವೆ. ಸ್ವಾಮೀಜಿಯವರು ಯಡೂರನ್ನು ಉತ್ತರ ಕರ್ನಾಟಕದ ಧರ್ಮಸ್ಥಳವನ್ನಾಗಿಸಲು ಅನೇಕ ಕಾರ್ಯಕ್ರಮ ಕೈಗೆತ್ತಿಕೊಂಡಿದ್ದಾರೆ.

ಈ ಮೊದಲ ಶ್ರೀ ಸಿದ್ದಲಿಂಗೇಶ್ವರ ಪಟ್ಟಚರಮೂರ್ತಿಗಳು ಶ್ರೀಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಶ್ರಮಿಸಿದರು. ೧೩ ಅಕ್ಟೋಬರ ೨೦೦೪ ರಂದು ಲಿಂಗೈಕ್ಯರಾದ ನಂತರ ಜಗದ್ಗುರು ಒತ್ತಾಯದ ಮೇರೆಗೆ ಹಾಗೂ ಬೆಳಗಾವಿ ಕೆ.ಎಲ್.ಇ. ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಮುಂತಾದ ಸಮಾಜ ಹಿರಿಯರ ಅಗ್ರಹದ ಮೇರೆಗೆ ಹಿಪ್ಪರಗಿ ಹಿರೇಮಠದ ಡಾ.ಸಿದ್ದರಾಮ ಪಂಡಿತಾರಾಧ್ಯ ಶಿವಾಚಾರ್ಯರು ೨೧.೧೨.೨೦೦೪ ರಂದು ಯಡೂರ ಮಠದ ಹಾಗೂ ದೇವಸ್ಥಾನದ ಜವಾಬ್ದಾರಿ ವಹಿಸಿಕೊಂಡರು.

ಈ ಕ್ಷೇತ್ರಕ್ಕೆ ಪ್ರತಿನಿತ್ಯ ಸಾವಿರಾರು ಭಕ್ತರು ರಾಜ್ಯ ಮತ್ತು ನೆರೆರಾಜ್ಯಗಳಿಂದ ಆಗಮಿಸುತ್ತಾರೆ. ಅವರಿಗೆಲ್ಲ ದೇವಾಲಯದ ಆವರಣದಲ್ಲಿದ್ದ ಕೋಣೆಗಳು ಸಾಕಾಗುತ್ತಿರಲಿಲ್ಲ. ಹೀಗಾಗಿ ಶ್ರೀಮಠದ ಆಧುನಿಕ ಸೌಕರ್ಯವುಳ್ಳ ಯಾತ್ರಾ ನಿವಾಸವನ್ನು ಸುಮಾರು ಮೂರು ಕೋಟಿ ರೂ.ವೆಚ್ಚದಲ್ಲಿ ನಿರ್ಮಿಲಾಗಿದೆ. ಶ್ರೀ ಕಾಡಸಿದ್ದೇಶ್ವರ ಹೆಸರಿನಲ್ಲಿ ಶ್ರೀಮಠದಿಂದ ಸುಮಾರು ಕೋಟಿ ರೂ ವೆಚ್ಚದಲ್ಲಿ ಕಲ್ಯಾಣಭವನ ನಿರ್ಮಿಸಲಾಗಿದೆ. ಈ ಕ್ಷೇತ್ರದ ಭಕ್ತಾಧಿಗಳಿಗೆ ನಿತ್ಯ ದಾಸೋಹಕ್ಕಾಗಿ ಮಾತೋಶ್ರೀ ಶಾರದಾದೇವಿ ಕೋರೆ ಹೆಸರಿನಲ್ಲಿ ಸುಸಜ್ಜಿತ ಪ್ರಸಾದ ನಿಲಯವನ್ನು ನಿರ್ಮಿಸಲಾಗಿದೆ. ಅನೇಕ ಭಕ್ತರು ಜಾತ್ರೆಯ ಸಂದರ್ಭದಲ್ಲಿ ಇಲ್ಲಿ ಪ್ರಸಾದವನ್ನು ಸ್ವೀಕರಿಸಿ ಪುನೀತರಾಗುತ್ತಾರೆ.

ಖಡೇ ಖಡೇ ವೀರಭದ್ರನ ಒಡಬುಗಳನ್ನು ಹೇಳುವ 'ಪುರವಂತರು'

ಗ್ರಾಮೀಣ ಸೊಗಡು ಇಂದು ಜನರಿಂದ ದೂರ ಸರಿಯುತ್ತಿರುವ ಇಂದಿನ ದಿನಮಾನದಲ್ಲಿ ಗಡಿನಾಡಿನ ಸುಕ್ಷೇತ್ರ ಯಡೂರು ವೀರಭದ್ರೇಶ್ವರನ ಪುರವಂತರು ಜಾನಪದ ಕಲೆಯಾದ ಪುರವಂತಿಕೆಯನ್ನು ಉಳಿಸಿ ಬೆಳೆಸಿಕೊಳ್ಳುವಲ್ಲಿ ತಮ್ಮದೇ ಆದ ಕಾಣಿಕೆ ನೀಡುತ್ತಿದ್ದಾರೆ. ಪ್ರತಿ ವರ್ಷ ಫಾಲ್ಗುಣ ಶುಕ್ಲ ಹುಣ್ಣಿಮೆಯಿಂದ ಯಡೂರ ಸುಕ್ಷೇತ್ರದಲ್ಲಿ ನಡೆಯುವ ಅಗ್ನಿ ಉತ್ಸವದಲ್ಲಿ ಪುರವಂತರ ಪವಾಡಗಳು ಜನಮನ ಸೆಳೆಯುತ್ತವೆ. ಮದುವೆ ಜಾತ್ರೆ, ಸಭೆ, ಸಮಾರಂಭಗಳಲ್ಲಿ ಇಂದು ಸಾಂಪ್ರದಾಯಗಳು ಪಾಶ್ಚಾತ್ಯರ ಅನುಕರಣೆಯಿಂದ ನಮ್ಮ ದೇಶದ ಸಂಪ್ರದಾಯಗಳು ದಿನದಿಂದ ದಿನಕ್ಕೆ ಮಾಯವಾಗುತ್ತಿವೆ.

ಪರಂಪರೆಯಿಂದ ನಡೆದು ಬಂದ ಗ್ರಾಮೀಣ ಪ್ರದೇಶದ ಮದುವೆ, ಜಾತ್ರೆಗಳಲ್ಲಿಯ ಪುರವಂತಿಕೆಯ ಕೂಡ ಕಣ್ಮರೆಯಾಗುತ್ತಿವೆ. ಈ ಸಂದರ್ಭದಲ್ಲಿ ಪುರವಂತರ ಜಾನಪದ ಕಲೆ ಪ್ರಶಂಶನೀಯ. ಅವಸಾನದ ಅಂಚಿನಲ್ಲಿರುವ ಗ್ರಾಮೀಣ ಕಲೆಗಳಿಗೆ ಉತ್ತೇಜನ ನೀಡುವುದು ಅತ್ಯವಶ್ಯಕವಾಗಿದೆ. ಅದಕ್ಕೆ ಪೂರಕವಾಗಿ ಕನ್ನಡ ನಾಡಿನ ಪುರಾಣ ಪ್ರಸಿದ್ಧ ಪುಣ್ಯತಾಣವಾದ ಸುಕ್ಷೇತ್ರ ಯಡೂರ ಶ್ರೀ ವೀರಭದ್ರೇಶ್ವರನ ಪುರವಂಥರು. ವಿರುಪಾಕ್ಷಲಿಂಗನು ಸಾಕ್ಷಾತ ರುದ್ರ ಸ್ವರೂಪಿಯಾಗಿದ್ದಾನೆಂಬ ವಿಶ್ವಾಸದಿಂದ, ಭಕ್ತಿಯಿಂದ ವಿವಿಧೆಡೆಯಿದ ಬರುವ ಪುರವಂತರು ಇಲ್ಲಿ ಅಗ್ನಿಪೂಜೆ ಹಾಗೂ ವಿಶೇಷ ಪೂಜಾ ಸಮಾರಂಭದಲ್ಲಿ ವಿರುಪಾಕ್ಷಲಿಂಗನ ಪುರಾಣ ಹೇಳಿ ತಮ್ಮ ಕಲೆ ಪ್ರದರ್ಶಿಸುತ್ತಾರೆ.

ನಾಡಿನ ವಿವಿಧಡೆಯಿಂದ ಯಡೂರ ಕ್ಷೇತ್ರಕ್ಕೆ ಆಗಮಿಸುವ ಪುರವಂತರು ಮೈಗೆಲ್ಲ ಬಣ್ಣ ಹಚ್ಚಿಕೊಂಡು, ವೀರಭದ್ರನ ರೂಪ ತಾಳಿ, ಖಡ್ಗ ಹಿಡಿದು, ರಾಗ, ತಾಳ, ಗತ್ತುಗಳೊಂದಿಗೆ ನೃತ್ಯಗತಿಯ ಮೂಲಕ ಖಡೇ ವೀರಭದ್ರನೆಂಬ ನಾಮ ಜನಪದದೊಂದಿಗೆ ವಿರುಪಾಕ್ಷಲಿಂಗನ ಪೌರಾಣಿಕ ಸನ್ನಿವೇಶವನ್ನು ಸಾರುವ ಪುರವಂತರಿಗೆ ಯಡೂರ ಕ್ಷೇತ್ರದಲ್ಲಿ ದೈವ ಸ್ವರೂಪದ ಸ್ಥಾನ ನೀಡಲಾಗಿದೆ. ಅಗ್ನಿ ಪೂಜೆ ಸಲ್ಲಿಸುವ ಈ ಪುರವಂತರಿಗೆ ವಿಶೇಷ ಪೂಜೆ ಕೂಡ ನಡೆಯುತ್ತದೆ.

ಶೈವ ಪರಂಪರೆಯ ಪುರವಂತಿಕೆ ಪ್ರತಿವರ್ಷ ಸುಕ್ಷೇತ್ರ ಯಡೂರಿನಲ್ಲಿ ನಡೆಯುವ ಅಗ್ನಿ ಉತ್ಸವದಲ್ಲಿ ಬೆಳಗಾವಿ, ಬಾಗಲಕೋಟ, ವಿಜಾಪುರ, ಧಾರವಾಡ, ಗದಗ, ಗುಲಬರ್ಗಾ ಹಾಗೂ ಮಹಾರಾಷ್ಟ್ರದ ಕೊಲ್ಲಾಪೂರ, ಮತ್ತು ಸಾಂಗಲಿ ಜಿಲ್ಲೆಯಿಂದ ಸುಮಾರು ೨೦೦ ಕ್ಕೂ ಹೆಚ್ಚು ಪುರವಂತರು ಸೇರಿ ತ್ರಿಮೂರ್ತಿ ಪುರವಂತ ಸಂಘದ ಆಶ್ರಯದಲ್ಲಿ ಪುರವಂತರ ಮಹಾಮೇಳ ನಡೆಸಿ ಶ್ರೀ ವೀರಭದ್ರನ ಪವಾಡ ಸಾದರ ಪಡಿಸುತ್ತಾರೆ. ಪುರವಂತರು ತಲೆಗೆ

ಕಾವಿ, ರೇಷ್ಮೆ ರುಮಾಲು, ತೋಳಿಗೆ ಬೆಳ್ಳಿ ನಾಗರ, ಎದೆಗೆ ತೀರ್ಥ ಮುಖಗಳು ದರ್ಪಣ ನಡುವಿಗೆ, ನರಸಿಂಹ ಮುಖ ಹಾಗೂ ರುಂಡ ಮಾಲೆಗಳು ಕೈಗೆ ಮುನಿ ಕಟ್ಟಿಗೆ, ರುದ್ರಾಕ್ಷಿ ಕಟ್ಟಿ, ಸಣ್ಣ ರಕ್ಷೆ ಜೋಳಿಗೆ, ಹಣೆಗೆ ವಿಭೂತಿ ಹಚ್ಚಿಕೊಳ್ಳುತ್ತಾರೆ. ಬಲ ಗೈಯಲ್ಲಿ ಖಡ್ಗ, ತ್ರಿಶೂಲ, ಎಡಗೈ ತುದಿಗೆ ನಿಂಬೆಹಣ್ಣು ಹಿಡಿದು ಶಸ್ತ್ರಗಳನ್ನು ಹಿಡಿದಿರುತ್ತಾರೆ. ಪಂಚಲೋಹದಿಂದ ತಯಾರಿಸಿದ ಶಸ್ತ್ರಗಳು ಮೂರ್ನಾಲ್ಕು ಅಡಿ ಉದ್ದವಿರುತ್ತದೆ. ಅಗ್ನಿ ಉತ್ಸವದಂದು ಪುರವಂತರು ಕುಣಿತ ನೋಡುಗರಲ್ಲಿ ರೋಮಾಂಚನ ಮೂಡಿಸುತ್ತದೆ. ಕುಣಿಯುತ್ತ ಒಡಪು ಹೇಳುವುದು, ಸನಾದಿ ಸಂಬಾಳ, ಕರಡಿ ಮಜಲಿನ ಹಿಮ್ಮೇಳಕ್ಕೆ ತಕ್ಕಂತೆ ಕುಣಿಯುವುದು, ತುಟಿ ಮತ್ತು ನಾಲಿಗೆಯಿಂದ ತಂತಿ ಚುಚ್ಚಿಕೊಳ್ಳುವುದು, ಕಿವಿಯಿಂದ ದಾರ ಹಾಕಿ ಬಾಯಿಂದ ತೆಗೆಯುವುದು, ಹೊಟ್ಟೆಯಲ್ಲಿ ಸಲಾಕಿ ಹಾಕಿಕೊಳ್ಳುವುದು ಮುಂತಾದ ದೃಶ್ಯಗಳು ನೋಡುಗರ ಮೈ ಜುಮ್ಮೆನಿಸುತ್ತದೆ.

ವೀರಭದ್ರನ ಒಡಬುಗಳು

ವೀರಭದ್ರಾವತಾರ

ಸೃಷ್ಟಿಯೊಳ್ ಶ್ರೀ ವೀರಭದ್ರ ದೇವರು ಹುಟ್ಟಿ ಬಂದ ವಿವರವ ಕಿವಿಗೊಟ್ಟು ಕೇಳಿರಯ್ಯಾ? ಶಿವದ್ವೇಷಿಯಾದ ದಕ್ಷಕ ಹೋಮಾಗ್ನಿಯ ಉರಿ ಎದ್ದು ಭುಗಿಲೆನ್ನಲು ಸುರಯಕ್ಷ ಗಂಧರ್ವ ಹರಿಯಜರು ಸುತ್ತಲು ನೆರೆದಿರಲು ಋತ್ವಿಜರು ಅಗ್ನಿಯೆ ಸ್ವಾಹಾ ಎಂದು ಮಂತ್ರಘೋಷ ಮಾಡುತ್ತಿರಲು ಆ ಯಜ್ಞದಲ್ಲಿ ದೇವಾಧಿ ದೇವನಾಗಿಯೂ, ದೇವತಾಸಾತ್ವ ಭೌಮನಾಗಿಯೂ ಇರುವ ಶಿವನೋರ್ವನೇ ಬಾರದಿರಲು ತತ್ಸಮಯದಲ್ಲಿ ದಕ್ಷಪುತ್ರಿಯಾದ ದಾಕ್ಷಾಯಣಿಯ ಪಿತನಾದ ದಕ್ಷಣ ಕಡೆಗೆ ಬರಲು ದಕ್ಷನು ಮಗಳನ್ನು ಕಣ್ತೆರೆದು ನೋಡಲಿಲ್ಲಾ ಮನ್ನಣೆಯ ಮಾಡಲಿಲ್ಲಾ; ಇಂತಾಗಿ ದಕ್ಷಜೆಯು ಯಜ್ಞದಲ್ಲಿ ಹಾರಿ ದೇಹವನ್ನು ತ್ಯಜಿಸಲು ಕೈಲಾಸಪತಿ ಶ್ರೀ ಶಂಕರನು ಕೋಪದಿಂದ ಉರಿದೆದ್ದು ಕೆಂಜಡೆಯನ್ನು ನೆಲಕ್ಕಪ್ಪಳಿಸಲು ಉರಿಗೊಂಡ ಗಿರಿಯಂತೆ, ಧರೆ ಬಿರಿದು ಮೇಲೆದ್ದು ಅಭಿನವರುದ್ರ ಶ್ರೀ ವೀರಭದ್ರ.

ಶ್ರೀ ವೀರಭದ್ರ ಅವತಾರ

ಶ್ರೀ ವೀರಭದ್ರನು ಹುಟ್ಟಿದ ಪರಿಯಂ ಪೇಳ್ವೆ ದಕ್ಷ ಬ್ರಹ್ಮನು ಕೈಲಾಸವನ್ನು ಸುಡುವೆನೆಂದು ಕಡುತರವಾದ ಯಜ್ಞವನ್ನು ಹೂಡಲು। ಸ್ವರ್ಗವು ಸಿಡಿಮಿಡಿಗೊಳ್ಳಲು ಶ್ರೀ ಶಂಕರನು ಕಡುಕೋಪದಿಂದ ಕಿಡಿನಯನವ ತೆರೆಯಲು ಆಗ ಶ್ರೀ ವೀರಭದ್ರನು ಗುಡುಗುಡಿಸಿ ಆರ್ಭಟಿಸಿ ಪೊಡವಿಯು ನಡಗುವಂತೆ ಕೇಕೆ ಹೊಡೆದು ಅಂದುದು ಬ್ರಹ್ಮಾಂಡವನ್ನು ಹಿಡಿಯಲೋ?

ಸೂರ್ಯನ ಹಲ್ಲುಗಳನ್ನು ಮುರಿದು। ಕುಕ್ಕಾಟಾಂಡದಂತೆ ಓಚಕಲೋ ಹೇಳು ಏನು ಅಪ್ಪಣೆ ಎಂದು ಬೆಸಗೊಳು। ತ್ರಿನೇತ್ರಧಾರಿಯು ತ್ರಿಸೂಲಧರನು ಶಿವನು ಗಂಗಾಧರನು ಆದಿ ಶ್ರೀ ಶಂಕರನು। ನೀನು ಹೋಗಿ ದಕ್ಷನ ಶಿರವನ್ನು ಅಗ್ನಿಗೆ ಆಹುತಿ ಕೊಟ್ಟು ಬಾ ಎಂದು ಅಟ್ಟಹಾಸದಿಂದ ನುಡಿದನು ಕಡೆ ಕಡೆ ।

ಶ್ರೀ ವಿಭೂತಿಯ ಮಹಿಮೆ

ಮಹದೈಶ್ವರ್ಯಪದವು ಕೈಗೂಡಬೇಕಾದರೆ। ಶ್ರೀ ವಿಭೂತಿಯಿಂದಲೇ ಮತ್ತೇ ಬೇರಿಲ್ಲ ನೋಡಾ। ಸರ್ವಸಿದ್ಧಿಯು ದೊರಕುವದು ಶ್ರೀ ವಿಭೂತಿಯಿಂದಲೆ ಮತ್ತು ಬೇರಿಲ್ಲ। ದಿನದಿನಕ್ಕೆ ಪಾಪ ಪರಿಹಾರವಾಗಬೇಕಾದರೆ ಶ್ರೀ ವಿಭೂತಿಯಿಂದಲ್ಲದೆ ಬೇರಿಲ್ಲ। ದಿನದಿನಕ್ಕೆ ಪಾಪ ಪರಿಹಾರವಾಗಬೇಕಾದರೆ ಶ್ರೀ ವಿಭೂತಿಯಿಂದಲ್ಲದೆ ಬೇರಿಲ್ಲ। ಅಂಗಕ್ಕೆ ಶ್ರೀ ವಿಭೂತಿಯಿಂದಲೇ ಮುಕ್ತಿ ಅದೆಂತೆಂದೊಡೆ। ಶ್ರೀ ಕರಂಚ। ಪವತ್ರಂಚ। ಆರಾಧ್ಯ। ಭರಣಂತಧಾಮೋಕ್ಷವಶ್ಯಕರಂ। ಪುಣ್ಯ ಪಾಪನಾಶನಂ। ದಿನೇ ದಿನೇ ಎಂಬುದಾಗಿ ಇಂತಪ್ಪ ಶ್ರೀ ವಿಭೂತಿಯ ಅಂತರಂಗದಲ್ಲಿ। ವಿಶ್ವಾಸವನ್ನಿಟ್ಟು ಧರಿಸಿ ಮನುಜರಿಗೆ। ಅನಂತಕೋಟಿ ಪಾತಂಕಗಳೂ ಪರಿಹಾರವಾಗಿ ಮುಂದೆ ಶಿವ ಸಾಯುಜ್ಯ ಪದವಿಯು॥ ದೊರಕೊಂಬುವದು ದೇವಾಕರಕಾಳಿಂಗರುದ್ರ। ಕರವೀರಭದ್ರ ಕಡೆ ಕಡೆ।

ಸಾಂಪ್ರದಾಯಬೇಡ

ಅಹಹಾ ವೀರಾ। ಅಹಹಾ ರುದ್ರ। ನಾನು ಬಸವ ಸಾಂಪ್ರದಾಯಕನೆಂದು। ನಾನು ಪಂಚಾಚಾರ್ಯ ಸಾಂಪ್ರದಾಯಕನೆಂದು ಹೇಳುವ। ಮಂದ ಬುದ್ಧಿ ಮರುಳು ಮಾನವರೇ। ನೀವು ಕೇಳಿರೋ। ಪಂಚಾಚಾರ್ಯರು ಹೆಚ್ಚೆಂದರೆ ಸಂಚ ಹೋಗುವುದೆ ಕೊಂಚ ವಿಚಾರ ಮಾಡಿರಿ। ಪಂಚ ಮಹಾಪಾತಕ ಹರಿಯುವದೇ। ಇಲ್ಲ ಈ ಎಲ್ಲ ಹಮ್ಮು ಬಿಮ್ಮುಗಳ ಬಿಟ್ಟು ಬಿಸಜ ಭವಾಂಡ ಪಾಲಿನ ಪಶುಪತಿಯ ಮೊರೆಹೊಕ್ಕು। ವಸುಧಿಯೋಳ್ ಕುಸುಮ ಬಾಣನನ್ನು ಗೆದ್ದು। ಗಣಿಗೊಳುತಿಹ ಚಿತ್ತವ ನಿಲಿಸಬಲ್ಲಾತನೆ। ಭಕ್ತನೆಂಬೆ। ಪುರಾತನೆಂಬೆ ಅಂತಪ್ಪಸದಾಚಾರಿಗೆ ಶರನೆಂಬೆನೋ ಶರನೆಂಬೆನೊ ಕರವೀರಭದ್ರ ಕಡೆ ಕಡೆ.

ಪಟ್ಟಣವು ಹುಟ್ಟಿತ್ತು

ಕೋಣದ ಕೊಂಬಿನ ಮೇಲೆ ಕಠೋರವೆಂಬ ಪಟ್ಟಣ ಹುಟ್ಟಿತ್ತು। ಆ ಪಟ್ಟಣದಲ್ಲಿ ಹಾಯ್ ಎಂಬ ಗೌಡ। ಹೊಯ್ ಹೊಯ್ ಎಂಬ ಕುಲಕರಣಿ॥ ಮ್ಯೆಯ್ ಮ್ಯೆಯ್ ಎಂಬ ತಳವಾರ । ಆ ತಳವಾರನ ಹೆಂಡತಿಯು ತಳವಿಲ್ಲದ ಕೊಡವನ್ನು ಹೊತ್ತುಕೊಂಡು। ಜಲವಿಲ್ಲದ ಬಾವಿ ನೀರಿಗೆ ಹೋದಳು। ಆ ಬಾವಿಯ ದಡದ ಮೇಲೆ ಬೇರಿಲ್ಲದ ಬೇವಿನ

ಮರ ಹುಟ್ಟಿತ್ತು! ಆ ಮರದ ಮೇಲೆ ಪಕ್ಕವಿಲ್ಲದ ಪಕ್ಷಿ ಕೂತಿತ್ತು. ಅದನ್ನು ಕಣ್ಣಿನಿಲ್ಲದವನು ನೋಡಿ ಕೈಯಿಲ್ಲದವನ ಮುಂದೆ ಹೇಳಲು ಕೈಯಿಲ್ಲದವನು ತುದಿಯಲ್ಲಿದ ಬಾಣವನ್ನು ಹೊಡೆಯಲು! ಆ ಪಕಷಿಗೆ ಬಿತ್ತೋ ಬೀಳಲಿಲ್ಲೋ ಎಂದಾತ ನಮ್ಮ ಅಂಬಿಗರ ಚೌಡಯ್ಯ

ಸಿರಿಬಂದಾಗ ಹಿಗ್ಗದಿರು

ಅಹಹಾ ವೀರಾ! ಅಹಹಾ ರುದ್ರಾ ಇಂದು ನಾಳೆಂದ ಹೇಳುವ ಮಂದ ಬುದ್ಧಿಗೆ ಸಂದುಗೊಡದಿರಣ್ಣಾ ಆನಂದ ಕಾಲವನರಿದು ಶ್ರೀ ಶಂಕರನ ಪೂಜಿಸಿರಣ್ಣಾ ನೀರುಗುಳ್ಳೆಯಂತೆ ತೋರಿ ಅಡಗುವ ಅನಿತ್ಯ ಶರೀರವ ಭೋಗ ನಿಶ್ಚಯವೆಂದು ನಿಶ್ಚಯಿಸಿ! ಹೊತ್ತುಗಳೆದು!ವ್ಯರ್ಥವಾಗಿ ಸತ್ತು ಹೋಗುವಿರಣ್ಣಾ ಕರ್ತೃ ಗುರುಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನಂಗಳ ಸಮರ್ಪಿಸಿ! ನಿತ್ಯ ಪದವಂ ಸಾಧಿಸಿರಣ್ಣಾ ನಮ್ಮ ಶಂಭುವಿನಲ್ಲಿ! ಸಿರಿ ಬಂದೊದಗಿತೆಂದು! ಹಿರಿ ಹಿರಿ ಹಿಗ್ಗ ಬೇಡಿರಣ್ಣಾ ಸಿರಿ ಎಂಬುದು ಕನಸಿನಂತೆ ನೋಡಾ! ಎಲೆ! ಮರುಳು ಮಾನವರಿರಾ! ಇದನರಿತು ನಮ್ಮ ಶ್ರೀ ಮಹಾದೇವ ಪೂಜಿಸಿದರೆ, ಸ್ಥಿರವಾದ ಪದವಿಯನೀಯವನು ಈ ಶಂಭುವು ಮಡದಿ, ಮಕ್ಕಳು, ಪಡೆದ, ದ್ರವ್ಯವು! ಎನ್ನೊಡವೆ ಎಂದು ನೆಚ್ಚಬೇಡಿರೋ! ಎಲೋ ಹುಚ್ಚ ಮಾನವರೇ ಅವು ನಿಮೊಡನೆಯಾದರೆ! ನೀವು ಮಡಿದು ಹೋದಾಗ ನಿಮ್ಮೊಡನೆ ಬರುವವೇ! ಇದನರಿತು ತಡೆಯದೇ ಮೃಡನ ಸೇವೆಯ ಮಾಡತೊಡಗಿದರೆ ಕಡೆ ಮೊದಲಿಲ್ಲದ ಪದವು ದೊರಕುದು! ಅಂಗದಲ್ಲಿ ಮಹೇಂದ್ರ ಜಾಲದಂತೆ! ಕಣ್ಣ ಮುಂದೆ ಒಡ್ಡಿದ ಹುಸಿಯ ಸಂಸಾರದಲ್ಲಿ ಹೆಡ್ಡಗಬ್ಯಾಡಿರೊ! ಎಲೋ ದಡ್ಡ ಪ್ರಾಣಿಗಳಿರಾ! ಗುರುಲಿಂಗ ಜಂಗಮದ! ಸೇವೆಯ ಬಿಟ್ಟವರಿಗೆ! ಮುಂದೆ ನರಕದಲ್ಲಿಡುವವನೋ ನಮ್ಮ ಸದಾಶಿವನು ಕರೆಕಾಳಿಂಗ ರುದ್ರ ಕಡೆ ಕಡೆ.

ಭೂತ ಸೃಷ್ಟಿ

ಅಹಹಾರ ವೀರಾ, ಪಂಚಭೂತಗಳ ಉತ್ಪತ್ತಿ ಎಂತಾಯಿತೆಂದೊಡೆ ಜಲದಲ್ಲಿ ನೆರೆತೊರೆ ಬಂದಂತೆ ಕನಕದಲ್ಲಿ ಅಲಂಕಾರವಿದ್ದಂತೆ ಬೀಜದಲ್ಲಿ ಎಲೆ ಶಾಖೆ ಬೀಜವಿದ್ದಂತೆ, ಒಂದೇ ವಸ್ತುವಿನಲ್ಲಿ ಗುಣತ್ರಯವಾಗಿತ್ತು. ಗುಣತ್ರಯದಿಂದ ಮಲತ್ರಯಗಳಾದವು. ಮಲತ್ರಯಗಳಿಂದ ಲೋಕರಚನೆ ಹಬ್ಬಿತು. ಲೋಕ ರಚನೆ ಹಬ್ಬಿದಲ್ಲಿ ಪಾಪಮುಣ್ಯಗಳಾದವು. ಪಾಪಮುಣ್ಯಗಳಿಂದ ಸ್ವರ್ಗ ನರಕಗಳಾದವು. ಸ್ವರ್ಗ ನರಕದಿಂದ ಬೈಲಾಗಿ ಕೆಟ್ಟು ಕೆಡು ನೋಡಿ ತನ್ನ ಮಾಯೆ ಸೆಳೆದನು. ಸೆಳೆದಲ್ಲಿ ಸರ್ವವು ಬೈಲಾಗಿ ನೀನೊಬ್ಬನೆ ಉಳಿದೆ ಉಳಿದೆ ಎಂಬುದು ಶಾಸ್ತ್ರಪ್ರಸಿದ್ಧ! ಸಮುದ್ರ ನಿರು ಮೇಘವಾಗಿ ಮೇಘದ ನೀರು ಹಳ್ಳಕೊಳ್ಳವಾಗಿ ಮತ್ತೆ ಸಮುದ್ರವಾದಂತೆ ನಿನಾದರೂ ಅದರಂತೆ ಒಂದೇ ಸ್ಥಳದಲ್ಲಿ ನಿಂತು ನೋಡಲೊಲ್ಲದೆ

ಅನೇಕ ಸ್ಥಳಗಳ ಧರಿಸಿ ಹೋಗುವದು, ಉಚಿತವಲ್ಲಾ ಎಲೇ ಜೀವವೆ ಎಂದು ಬೋಧಿಸಿದ ಸದ್ಗುರು ಚನಬಸವಣ್ಣನ ಪಾದಕ್ಕೆ ನಮೋ ನಮೋ ಎಂದೆ.

ಯಾರು ಘನ?

ಅಹಹಾ ವೀರಾ। ಅಹಹಾ ರುದ್ರ। ಬ್ರಹ್ಮನು ಘನವೆಂತೆಂಬರಯ್ಯಾ ಬ್ರಹ್ಮನು ಘನವಲ್ಲ। ಬ್ರಹ್ಮನು ಕಮಲದಲ್ಲಿ ಹುಟ್ಟಿದ। ಕಮಲವು ಘನವೆಂಬರಯ್ಯಾ ಕಮಲವು ಘನವಲ್ಲ। ಕಮಲವು ಕೆಸರಿನಲ್ಲಿ ಹುಟ್ಟಿತು। ಕೆಸರು ಘನವಲ್ಲ। ಕೆಸರು ನೀರಿನಲ್ಲಿ ಹುಟ್ಟಿತು। ನೀರು ಘನವೆಂತಂಬರಯ್ಯಾ ನೀರು ಘನವಲ್ಲ। ನೀರು ಸಮುದ್ರದಲ್ಲಿ ಹುಟ್ಟಿತು। ಸಮುದ್ರವು ಘನವೆಂಬರಯ್ಯಾ। ಸಮುದ್ರವು ಘನವಲ್ಲ। ಸಮುದ್ರವು ಅಗಸ್ತ್ಯ ಮುನಿಯ ಕುಡಿತೆಗೆ ಸಾಲವಾಗಿ ಹೋಗಿತ್ತು। ಅಗಸ್ತ್ಯನು ಘನವೆಂಬರಯ್ಯ। ಅಗಸ್ತ್ಯನು ಘನವಲ್ಲ। ಅಗಸ್ತ್ಯನು ಕುಂಭದಲ್ಲಿ ಹುಟ್ಟಿದ । ಕುಂಭವು ಘನವೆಂಬರಯ್ಯಾ। ಕುಂಭವು ಘನವಲ್ಲ। ಕುಂಭವು ಭೂಮಿಯಲ್ಲಿ ಹುಟ್ಟಿತು। ಭೂಮಿಯು ಘನವೆಂಬರ್ಯಾ। ಭೂಮಿಯು ಘನವಲ್ಲ। ಭೂಮಿಯು ಆದಿಶೇಷನ ಕಡೆಗೆ ಪಾರ್ವಸಾಲವಾಗಿ ಹೋಗಿತ್ತು। ಆದಿಶೇಷನು ಘನವಲ್ಲ। ದೇವಿಯ ಕಿರುಬೆರಳಿನ ಉಂಗುರಕ್ಕೆ ಸಾಲವಾಗಿ ಹೋಗಿದ್ದ। ನಮ್ಮ ಪಾರ್ವತಿದೇವಿಯು ನಮ್ಮ ಪರಮೇಶ್ವರನ ಎಡತೊಡೆಯ ಬಿಟ್ಟು ಬಲತೊಡೆಯ ಗುರ್ತು ಅರಿಯಳು। ನಮ್ಮ ಪರಮೇಶ್ವರನು ಘನವೆಂಬರಯ್ಯಾ। ಪರಮೇಶ್ವರನು ಘನವಲ್ಲ। ನಮ್ಮ ಪರಮೇಶ್ವರನು ತನ್ನ ಭಕ್ತನಾದ ಬಸವಣ್ಣನ ಎದೆಯೊಳಗೆ ನೆಲೆಸಿದ್ದನೆಂದು ವೇದಗಳು ಸಾರುತ್ತಿರುವವು ಎಂದಾತ ನಮ್ಮ ಅಂಬಿಗರ ಚೌಡಯ್ಯ। ಕರೆಕಾಳಿಂಗ ಕಡೆ ಕಡೆ.

ಅನ್ಯದೈವಕ್ಕೆರಗದಿರು

ಅಹಹಾ ವೀರಾ। ಅಹಹಾ ರುದ್ರ। ಒಂದು ಹೆಣ್ಣಿನ ಗರ್ಭದಲ್ಲಿ ಹಲವು ಜನ ಗಂಡು ಮಕ್ಕಳು ಹುಟ್ಟಿದರಯ್ಯ। ಅವರೊಳಗೊಬ್ಬನಿಗೆ ಸೆರೆಗುಕಟ್ಟಿ ಮದುವೆ ಮಾಡಿದ ಬಳಿಕ। ಆ ತಂಗಿಗೆ ತನ್ನ ಗಂಡನೆ ಸುಖವನರ್ಪಿಸಬೇಕಲ್ಲದೆ। ಉಳಿದವರೆಲ್ಲಾ ತನ್ನ ಮಾನ ಮಕ್ಕಳೆಂದು। ಸೆರಗು ಹಾಸುವವರನ್ನು ಒಪ್ಪುವರೇ ಲೋಕದೊಳ್। ಪರಮತ್ಮನೆಂಬ ಶಿವಯೋಗಿಗೆ ಆಶ್ರಯವಾಗಿ ಹುಟ್ಟಿತು ಲಿಂಗ। ಆತಂಗೆಯೋಗವಾಗಿ ಹುಟ್ಟಿದನಾ ವಿನಾಯಕ ಆತಂಗೆ ವಾಹನವನ್ನು ಹುಟ್ಟಿದಾತ ವೃಷಭ। ಆತಂಗೆ ಯುದ್ಧಕ್ಕೆ ಸರಿಯಾಗಿ ಹುಟ್ಟಿದಾತ ವೀರಭದ್ರ। ಇವರೆಲ್ಲರೂ ಶಿವನ ಮಕ್ಕಳಾದರೆ। ತಾನು ಪ್ರಾಣವಂದು ಕಂಕಣಕಟ್ಟಿ ಕರಸ್ಥಳಕ್ಕೆ ಬದ ಬಳಿಕ। ಅಲ್ಲಿ ನಂಬಿ ಪೂಜಿಸಿ ಫಲ ಪದವಿ ಪಡೆಯಬೇಕಲ್ಲದೆ। ಮತ್ತೆ ಅನ್ಯ ದೈವಕ್ಕೆ ಎರಗಿದರೆ ನಾಕ ನಾಕ ನರಕವೆಂದಾತ ನಮ್ಮ ಅಂಬಿಗರ ಚೌಡಯ್ಯ ಕಡೆ ಕಡೆ.

ಅಷ್ಟ ದಿಕ್ಕು ನವಖಾಂಡ

ಅಹಹಾ ವೀರಾ। ಅಹಹಾ ರುದ್ರ। ಅಷ್ಟದಿಕ್ಕು ನವಖಾಂಡವೆಂಬ ಭೂಮಿ। ಆ ಭೂಮಿಯ। ಭೂ ಚಕ್ರದ ಮೇಲೆ। ಕಾಯಕರ್ಪೂರವೆಂಬ ಪಟ್ಟಣವು ಪುಟ್ಟಿತಯ್ಯಾ। ದೇವಾ ಆ ಪಟ್ಟಣವನ್ನು ಸಾಧಿಸೆದೆನೆಂದರೆ ಸಾಧ್ಯವಲ್ಲ ಭೇದಿಸಿದೆನೆಂದರೆ ಭೇಧ್ಯವಲ್ಲ। ಅಗಮ್ಯ ಅಗೋಚರವಾರದ ಕೋಟೆಯ ಪರಿಯ ಹೇಳುವೆನು ಕೇಳಿ। ಸ್ಥೂಲತನು ಸೂಕ್ಷ್ಮತನು। ಕಾರಣತನುವೆಂಬುವನೂರು ಸುತ್ತಿನ ಕೋಟೆ। ಸಪ್ತವ್ಯಸನಂಗಳ। ತನೆಗಳು ಕುಟಿಲ ಕ್ರೋಧವೆಂಬ ಕತ್ತಿ। ಕಾಮ ಕ್ರೋಧ ಲೋಭ ಮೋಹ। ಮದ ಮತ್ಸರಗಳೆಂಬ ಆರು ಬೀದಿಗಳು। ಮಹಾ ಪಶುಗಳೆಂಬ ನಾಯಕರು। ಕನಸು ಮನಸುಗಳೆಂಬ ಹರೆವಾಯುಗಳು ಅತೀ ಮೋಹಗಳೆಂಬ ತುರಗಗಳು ಅಷ್ಟಮದಗಳೆಂಬ ಆನೆಗಳು। ಅಂಗಡಿ ಕಾರವೆಂಬ ಅರಸು। ಪಂಚಭೂತಾದಿ ಎಂಬ ಪ್ರಧಾನಿ ಮನಬುದ್ಧಿ। ಅಹಂಕಾರವೆಂಬ ಶಾನು ಭೋಗರು। ದಶ ಇಂದ್ರಿಯಗಳೆಂಬ ಗಾಡಿಕಾರರು। ಹುಸಿಯೆಂಬ ಹೋಲುಕಾರರು। ಮರೆವು ಕತ್ತಲೆ ಎಂಬ ಅರಮನೆಗೆ । ಅರಸು ಕೂಡ್ರುವ ಸಿಂಹಾಸನವು। ಇವೆಲ್ಲಗಳ ನರಿಯದೆ। ಆ ಶಿಷ್ಯರಿಗೆ ವಿಭೂತಿಯ ಪಟ್ಟಗಟ್ಟಿ ಬ್ರಹ್ಮಲಿಖಿತವ ಕೊಂದು। ಶಿವಲಿಖಿತವ ಬರೆದು ಸಾಗುತಿರ್ದನಯ್ಯಾ। ನಮ್ಮ ಅಂಬಿಗ ಚೌಡಯ್ಯ ಕರೆಕಾಳಿಂಗ ರುದ್ರಾ ಕಡೆ ಕಡೆ ॥

ಲಿಂಗವಿರುವುದೆಲ್ಲಿ?

ಅಹಹಾ ವೀರಾ। ಅಹಹಾ ರುದ್ರಾ। ಲಿಂಗವು ಬಿತ್ತು ಬಿತ್ತು ಎಂಬಿರಿ ಲಿಂಗವು ಬಿದ್ದರೆ ಈ ಭೂಮಿಯು ತಾಳವಿಲ್ಲದೆ? ಲಿಂಗವಿರುವುದು ಹರಗುರು ಪಾರಾಯಣದಲ್ಲಿ। ಲಿಂಗ ಇರುವುದು ಊರ ಹಿಂದಿನ ಭಾಗದಲ್ಲಿ। ಇಂತಪ್ಪ ಲಿಂಗನ ಒಟ್ಟು ಸಂತೆಗೆ ಹೋಗಿ ಮೂರು ಪಾಕಿಯ ಲಿಂಗನ। ಆರುಪಾಕಿಯ ವಸ್ತ್ರವ ತಂದು। ಪಾದೋದಕವಿಲ್ಲ। ಪ್ರಸಾದವಿಲ್ಲ। ಮಂತ್ರವಿಲ್ಲ। ವಿಭೂತಿಯಿಲ್ಲ। ರುದ್ರಾಕ್ಷಿಯಿಲ್ಲ। ಇಂತಪ್ಪಲಿಂಗ ಕಟ್ಟಿದವನೊಬ್ಬ ಕಳ್ಳನಾಯಿ ಕಟ್ಟಿಸಿಕೊಂಡವನೊಬ್ಬ ಕಳ್ಳನಾಯಿ। ಇಂತಪ್ಪನಾಯಿಗಳನ್ನು ಹಿಡಿದು ತಂದು ಮೂಗನೇ ಕೊಯ್ದು ನಮ್ಮ ಕುಂಬಾರ ಗುಂಡಯ್ಯ ಮನೆಯ। ಕರೆ ಕತ್ತೆಯನ್ನು ಊರೊಳಗೆ ತಂದು ಮರೆಸಂದಾತ ನಮ್ಮ ಶ್ರೀ ವೀರಭದ್ರ। ಭದ್ರ ಕಾಳಿಯ ರಮಣ। ಕಡೆ ಕಡೆ.

ಶರಭಾವತಾರಿ ಶ್ರೀ ವೀರಭದ್ರ

ಅಹಹಾ ವೀರಾ। ಅಹಹಾ ರುದ್ರ। ಶರಭಾವತಾರಿಯಾದ ಶ್ರೀ ವೀರಭದ್ರನ ಶಕ್ತಿಯಂ ಪೇಳ್ವೆ ಹಿರಣ್ಯಾ ಕಶ್ಯಪನಾ ಅರಣ್ಯವಾಸಿಗಳದ ಮುನಿಗಳಿಗೆ ಮರಣ ಸಮ ದುಃಖಕೊಡುತ್ತಿರಲು।

ಕರುಣಾನಿಧಿ ಶಿಷ್ಟ ರಕ್ತನಾದ ಶಂಕರನಿಗೆ ಮೊರೆ ಇಡಲು। ಆಗಲಾ ಉಮಾಪತಿಯು ವಿಷ್ಣುವನ್ನು ಕರೆದು ನೀನು ಬೇಗ ಹೋಗಿ ಯೋಗಿಯೋರ್ವನನ್ನು ರಕ್ಷಿಸು ಸಾಗರ ಮಧ್ಯದಲ್ಲಿರುವ ಕಶ್ಯಪನನ್ನು ಕೊಂದು ಬಾ ಎಂದು ಕಳುಹಲು। ಬುಜಗಳಯನನು ನರಸಿಂಹನಾಗಿ ಕಶ್ಯಪನ ಕೊಂದು ಅವನ ರಕ್ತ ಕುಡಿದು ಮದೋನ್ಮತ್ತನಾಗಿ ಮೂಜಗಪಾಲಿಪ ದೇವತೆಗಳಿಗೆ ತ್ರಾಸು ಕೊಡಲು। ನಾಗಭೂಷಣನನು ನಮ್ಮ ಶ್ರೀ ವೀರಭದ್ರನಿಗೆ ಅಪ್ಪಣೆ ಮಾಡಲು। ದಕ್ಷರಿಪುವು ಇಕ್ಷಾಚಾಪನಿಗೆ ತಂದೆಯಾದ ಕುಕ್ಷಿಯೊಳ್ ಬ್ರಹ್ಮನನ್ನು ಧರಿಸಿ ಪಕ್ಷಿವಾಹನನೇ ಕೇಳು। ಮೋಕ್ಷದಾಯಕನಾದ ಜಗದ್ರಕ್ಷಕನು ನಿನಗೆ ಬುದ್ಧಿ ಹೇಳಿ ಕರೆತಾರೆಂದು ಹೇಳಿರುವನು ಬಂದರೆ ಒಳಿತು. ಇಲ್ಲವಾದರೆ ಶರಭಾವತಾರ ಧರಿಸಿ ನಿನ್ನನ್ನು ಕೊಂದ ನಿನ್ನ ಚರ್ಮವಂ ಸುಲಿದು ಶಂಕರನಿಗೆ ಹಾಸಲಿಕ್ಕೆ ಕೊಡುವೆನೆಂದು ನರಹರಿಯನ್ನು ಕೊಂದು ನಮ್ಮ ಶ್ರೀ ವೀರಭದ್ರ ವಿಪರೀತ ನಾಯಕ। ಛಲದಂಕಮಲ್ಲ ನಿನ್ನ ಪವಾಡ ಅಂದಿಗಂಟು ಇಂದಿಗಿಲ್ಲವೆನ್ನುವ। ವಿದ್ರೋಹಿಗಳಿಗೆ ನೀನೆ ಗಂಡ ಕಡೆ ಕಡೆ ॥

೫.೨. ಸ್ತ್ರೀದೈವಗಳ ಜಾತ್ರೆಗಳು

ಏಳು ಊರಿನ ದೇವತೆ ಲಕ್ಷ್ಮೀ ಜಾತ್ರೆ (ಸಾತ್ ತೋಂಡಿ ಲಕ್ಷ್ಮೀ)

ಜನಪದರಲ್ಲಿರುವ "ಏಳು" ಎಂಬುದರ ಕಲ್ಪನೆ

ಜನಪದರಲ್ಲಿ **"ಏಳು"** ಎಂಬುದರ ಕಲ್ಪನೆಯು ಬಹಳ, ಹಿಂದಿನಿಂದ ರೂಢಿಯಲ್ಲಿರುವದನ್ನು ಕಾಣಬಹುದಾಗಿದೆ. ಅಂದರೆ ಹಿಂದೆ ಪಶುಪಾಲಕ ವಲಸೆಗಾರ ದ್ರಾವಿಡರಲ್ಲಿದ್ದ ಆಡಳಿತ ವ್ಯವಸ್ಥೆ ಕೆಲವು ಈ ಏಳು ಎಂಬ ಸಂಖ್ಯೆಯನ್ನು ಆಧರಿಸಿ ಜಾರಿಯಲ್ಲಿತ್ತು. ಒಂದೇ ಹೆಣ್ಣು ದೇವತೆ ಅನೇಕ ಕುಲಗಳನ್ನು ಒಂದೆಡೆ ತರುವ ಕೇಂದ್ರಶಕ್ತಿಯಾಗಿರುವದು ಇಲ್ಲಿನ ಇನ್ನೊಂದು ಮುಖ್ಯ ಸಂಗತಿ.

ಆಂಧ್ರದ ವೆಲಮ ಜಾತಿಯ ಒಂದು ವಿಭಾಗದ ವಿಧವೆ ಹೆಂಗಸು ೭ ಸಲ ಮದುವೆಯಾಗುವ ಪದ್ಧತಿಯಿದೆ. ಕಾಡು ಸ್ಥಿತಿಯಲ್ಲಿರುವ ಆಂಧ್ರದ **"ಯಾನಡಿ"** ಹೆಂಗಸರೂ ೭ ಸಲ(2-VII-340) ಮದುವೆಯಾಗಬಹುದಾಗಿದೆ (2-VII-42.3) ಮದುವೆಯು ಹೆಚ್ಚಾದಷ್ಟು ಆಕೆಯ ಸಾಮಾಜಿಕ ಸ್ಥಾನಮಾನಗಳೂ ಹೆಚ್ಚುತ್ತವೆ **"ಯಾನಾಡಿ"** ಗಂಡಸೂ ೭ ಹೆಂಗಸರನ್ನು ಮದುವೆಯಾಗಬಹುದಾಗಿದೆ.

ತಮಿಳುನಾಡಿನ ಕೆಲವು ಭಾಗಗಳಿಗೆ ವಲಸೆ ಹೋದ ಕನ್ನಡ ಕೃಷಿಕರಲ್ಲಿ "ಅನುಪ್ಪನ್" ಜಾತಿಯೂ ಒಂದು ಇವರು ಮದುವೆಯಲ್ಲಿ ತಾಳಿಯನ್ನು ಕಟ್ಟುವುದಿಲ್ಲ. ಆದರೆ ಸವ

ದಂಪತಿಗಳ ಬೆರಳನ್ನು ೭ ವಿಭಿನ್ನ ಸಂದರ್ಭಗಳಲ್ಲಿ ಕೂಡಿಸುವರು. ಇದು ಅವರಲ್ಲಿ ಕಡ್ಡಾಯವಾದ ವಿಧಿ ಆರಚಣೆ.

ಬಡಗರ ಮೂಲದ ಐತಿಹ್ಯದಲ್ಲಿ ೭ ರ ಪ್ರಸ್ತಾಪ ಅನೇಕ ಸಲ ಬರುತ್ತದೆ. ೭ ಸೋದರರು, ಸೋದರಿಯರು ತಲಮರೈ ಬೆಟ್ಟದಲ್ಲಿದ್ದರು. ಯಾವುದೋ ಮಹಮ್ಮದ್ ಅರಸ ತಮ್ಮ ಸೋದರಿಯರನ್ನು ಆಶಿಸಿದ್ದರಿಂದ ಇವರು ವಲಸೆ ಬಂದರು. ಈ ಏಳು ಸೋದರರೇ **"ಹೆತ್ತಪ್ಪನ"** ರೂಪದಲ್ಲಿ ಪೂಜಿಸಲ್ಪಡುತ್ತಾರೆ. ಕೃಷಿ ಸಂಭಂಧಿ ಆಚರಣೆಗಳಲ್ಲಿ ಏಳು ಪ್ರಕಾರದ ಕಾಳುಗಳನ್ನು **"ದೆವ್ವ"** ಗುಡಿ ಪೂಜಾರಿ ಮತ್ತು ಒಬ್ಬ ಕುರುಬ ಇಬ್ಬರೂ ಸೇರಿ ಬಿತ್ತುವರು.

ಬೆಂಕಿ ಕೊಂಡವನ್ನು ಹಾಯುವ ವಿಧಿ ಆಚರಣೆಯಲ್ಲಿ ಏಳು ಜನರನ್ನು ಹಾಯಿಸುವ ಪದ್ಧತಿ ಇವರಲ್ಲಿದೆ ತುಂಬ ವಿಶೇಷವಾದ ರೀತಿಯಲ್ಲಿ ಮಾಡುವ ಶವ ಸಂಸ್ಕಾರದಲ್ಲಿ ೭ ಹಂತದ ತೇರು ಕಟ್ಟುವ ಪದ್ಧತಿಯು ಇವರಲ್ಲಿದೆ. ಹಿರಿಯರ ಜಾತ್ರೆಯಲ್ಲಿ ೭ ಕುಡಿ ತೇರನ್ನು ನಿರ್ಮಿಸಿ ಎಳೆಯುತ್ತಾರೆ.

ಹಾಸನದ ಹಾಸನಾಂಬೆ ಸಪ್ತ ಮಾತೃಕೆಯಲ್ಲಿ ಒಬ್ಬಳು ಎಂಬ ಪ್ರತೀತಿಯಿದೆ. ಜಾತ್ರೆಯ ಕೊನೆಯ ದಿನ ಹಾಸನಂಬೆಗೆ ಹಾಕಿದ್ದ ಒಡವೆ ಪೆಟ್ಟಿಗೆಯ ಪೂಜೋತ್ಸವ ಮುಚ್ಚುತ್ತದೆ [೧೦೫-೧೩, ವಸಂತ ಕುಮಾರ].

ಬಿಲ್ಲವರು (ಬಂಟ) ಪುಕರೆಯೆಂಬ ಕೋವಿಗೆ ಏಳು ಮಂಟಪಗಳನ್ನು ಕಟ್ಟಿ ಕಂಬಳದ ಸಂದರ್ಭದಲ್ಲಿ ಪೂಜುವ ಹಕ್ಕು ಹೊಂದಿದ್ದಾರೆ (೨-೧-೧೬೨) ಮಲ್ಹಾರಿ ಮಹಾತ್ಮೆಯ ಪ್ರಕಾರ ಸಪ್ತ ಧರ್ಮಪುತ್ರರ ಆಪೇಕ್ಷೆಯಂತೆ ಶಿವನು ಸ್ವಯಂಭೂ ರೂಪ ತಾಳಿ ಮೈಲಾರ ಕ್ಷೇತ್ರದಲ್ಲಿ ಅವತರಿಸಿದ ಮಲ್ಲಿಮಣಿಕ ಖಡ್ಗದಷ್ಟು ಉಲ್ಕಾಮುಖ, ಕುಂತಲೋಮ ಎಂಬ ೫ ರಾಕ್ಷಸರನ್ನು ಕೊಂದ.

ಒಡಿಸ್ಸಾದ ಬುಟ್ಟಿ ಹೆಣೆಯುವ ಬಾವುರಿ ಎಂಬ ಜಾತಿ ಜನರಲ್ಲಿ (ಇವರು ಬೋವಿಗಳನ್ನು ಹೋಲುವರು) ಎರಡು ಗೋತ್ರಗಳಿವೆ ೧) ಸಪ್ತ ಭವುನಿಯ ೨) ನಾಗ ಸಪ್ತ ಭವುನಿಯರು ಏಳು ಎಲೆಗಳಲ್ಲಿ ದೇವರಿಗೆ ಎಡೆ ಮಾಡುವರು.

ಸತ್ತವನ ಸೂತಕವನ್ನು ಕಳೆಯಲು ಕೊಂಡರು, ವ್ಯಕ್ತಿ ಸತ್ತ ಏಳನೇ ದಿನ ಕೋಣವನ್ನು ಬಲಿ ಕೊಡುವರು. ಸತ್ತವನು ಹುಲಿ ಅಥವಾ ದೆವ್ವ ಆಗುವನೆಂದು ಇವರ ನಂಬಿಕೆ.

ಕೊರಟರ ಮೂಲದ ಐತಿಹ್ಯದ ಕಥೆಯಲ್ಲಿ ಏಳು ಗ್ರಹಗಳು ವೇಣುಡುವಿನ ಬಲದೊಡೆಯಿಂದ ನಿಶುದವನ್ನು; ಬಲ ಭುಜದಿಂದ ಪ್ರೋಥಾ ಚಕ್ರವರ್ತಿಯನ್ನು ನಿರ್ಮಿಸುತ್ತವೆ ಕೂರೂಪಿಯಾದ ನಿಶದುವಿನ ಮಕ್ಕಾಳೆ ಕೊರಚರು.

ತಮಿಳುನಾಡಿನ "ಮರವನರ" ಏಳು ರಾಜ್ಯಗಳು, ಚೋಳ, ಚೇರಾ ಪಾಂಡ್ಯ ಪೂರ್ವದಲ್ಲಿದ್ದುವೆಂದು ಐತಿಹ್ಯವಿದೆ(2-V-25) ಇವ ಜಾತಿಯ ೭ ಉಪವಿಭಾಗಗಳಿವೆ.

ಸವದತ್ತಿಯ ಎಲ್ಲಮ್ಮ ಏಳು ಕೊಳ್ಳದವಳು ಎಂಬುದು ಪ್ರಖ್ಯಾತ ಸಂಗತಿ. ಅದೇ ರೀತಿ ಮೈಲಾರದ ದೇವರು ಏಳುಕೋಟಿ ಹಿಂದೆ "ಏಳ್ಕೋಡಿ ಸಮಯ" ಎಂಬುದು ಪಂಥವಾಗಿತ್ತು.

ಕನ್ನಡ ಪಶುಪಾಲಕ ಕಾಡುಗೊಲ್ಲರಲ್ಲಿ ಅನೇಕ ಸಂದರ್ಭಗಳಲ್ಲಿ ಏಳು ಗೂಡುಗಳು, ಎತ್ತು, ಹಸು, ಕುರಿಗಳ, ಪ್ರಸ್ತಾಪ ಬರುತ್ತದೆ.

ಮದ್ದೂರು ತಾಲೂಕು ತೈಲೂರು ಪಟ್ಟಲದಮ್ಮ ಊರ ಹೊರ ಬಯಲಲ್ಲಿ ಮಣ್ಣಿನ ಮೂರ್ತಿ ಸುತ್ತಲು ಏಳು ಊರುಗಳನ್ನು ಕಾಯಲು ಅನುಕೂಲವಗುವಂತೆ ಸುತ್ತಲೂ ಗೋಡೆ ಕಟ್ಟಿಲ್ಲ (೧೦೨) ಈಕೆ ಶಿವನ ಮೊಮ್ಮಗಳು (ಅದೆ)

೭ ಸೋದರಿಯರಲ್ಲಿ ಒಬ್ಬಳಾದ ಚಾಮುಂಡಿ ರಾಯಚೂರು ಕೋಣವೆ ಗೌಡನ ಮಗ ಕೋಣನನ್ನು ಮದುವೆ ಆಗಲು ಇಚ್ಛಿಸಿ " ನಿನ್ನ ಏಳು ಕೋಟೆಯು ಚೆನ್ನದೆ, ಏಳು ಬಾಕುಲು ಚೆನ್ನದೆ" ಎನ್ನುತ್ತಾಳೆ. ಕೊನೆಗೆ ಏಳು ಸುತ್ತು ತಿರುಗಾಡಿ ಕೋಣನಿಗೆ ತ್ರಿಶೂಲದಿಂದ ಹೊಡೆಯುತ್ತಾಳೆ.

ನೀಲಗಿರಿಯ ಇರುಳರಲ್ಲಿ ಏಳು ಕನ್ನಿಕೆಯರು ಮುಖ್ಯ ದೇವತೆ, ಕಣಿ ಹೇಳುವವನು ಈ ದೇವತೆಯ ಗುಡಿಸಲು ಹತ್ತರವಿದ್ದು ಎಲ್ಲ ಜಾತಿ ಜನಗಳಿಗೂ ಕಣಿ ಹೇಳುವನು. ದೇವಿ ಅವನ ಮೈಯನ್ನು ತುಂಬುವಳು.

ನೀಲಗಿರಿಯ ಕೋಟರು ೭ ಹಳ್ಳಿಗಳಲ್ಲಿದ್ದಾರೆ; ಇವಕ್ಕೆ "ಕೊಟಗಿರಿ" ಅಥವಾ ಕೋಕಾಲ್ ಎನ್ನುವರು. ಇವರು ಗೌಡ ಗುಡಕಟ್ಟಿಗೆ ಸೇರಿದವರು ಸತ್ತ ಎಮ್ಮೆ ತಿನ್ನುವರು (2-IV-3) ಇವರು ನೀಲಗಿರಿಯ ಇತರ ಬುಡಕಟ್ಟು ಜನಗಳಿಗೆ ಗೃಹ , ಕೃಷಿ, ಉಪಯೋಗಿಸಿ ವಸ್ತುಗಳನ್ನು ಸರಬರಾಜು ಮಾಡುವ ಕರಕುಶಲ ಕರ್ಮಿಗಳು, ಕಂಬಾರಿಕೆ, ಕುಂಬಾರಿಕೆ, ಅಕ್ಕಸಾಲಿಕೆ ಬಡಗಿತನ, ಚರ್ಮ ಹದಗಾರಿಕೆ ಮುಂತಾಗಿ.

ಏಳರ ವಿಶೇಷ ಮಹತ್ವ ದ್ರಾವಿಡ ತತ್ವಶಾಸ್ತ್ರವಾದ "ಯೋಗ"ದಲ್ಲಿ ಪ್ರಕಟವಾಗುವ ರೀತಿಯು ಅದ್ಭುತವಾಗಿರುವದನ್ನು ಕಾಣುತ್ತೇವೆ. ತಾಂತ್ರಿಕರಲ್ಲಿ ಯೋಗ ಸಾಧನೆಗೆ ದೇಹದಲ್ಲಿ ಏಳು ಕಮಲ ಸ್ಥಾನಗಳಿವೆ. ೭ ಕಮಲಗಳ ಪರಿಕಲ್ಪನೆ ೭ ಕಮಲಗಳೆಂದರೆ ೭ ಯೋನಿಗಳು ೭ ಅಮ್ಮಂದಿರ ಸ್ಥಾನಗಳು (೩–೨೮೧) ಸಪ್ತ ಮಾತೃಕೆಯರು ಹೀಗೆ ಪ್ರತಿಯೊಬ್ಬರ ದೇಹದಲ್ಲಿಯೂ ಪ್ರತಿಷ್ಠಾಪಿತರಾಗಿದ್ದಾರೆ. ಯೋಗವು ಈ ಏಳನ್ನು ಏಳು ಶಕ್ತಿಯೆನ್ನುತ್ತದೆ.

ಕುಂಡಿಲಿನಿ, ವರುಣಿ, ಲಶಿನಿ ಇತ್ಯಾದಿ(೩–೨೮೧) ಸಹಸ್ರಾರ ದಳಕಮಲಕ್ಕೆ ಕುಂಡಿಲಿನಿ ಶಕ್ತಿಯನ್ನು ತಂದು ಸ್ಥಾಪಿಸುವುದು ಎಂದರೆ ಪುರುಷತ್ವವನ್ನು ಸಂಪೂರ್ಣ ನಾಶಗೊಳಿಸಿ ಸ್ತ್ರೀತ್ವದ ಅರಿವು ಮಾಡಿಕೊಳ್ಳುವ ಕೃಷಿಕರ ಜೊತೆ ವಲಸೆಗರ ದ್ರಾವಿಡರ ಸಂಯೋಗದ ನಂತರ ಯೋಗ ಸಿದ್ಧಾಂತದಲ್ಲಿ ಒಂದು ಪರಿಪೂರ್ಣತೆ ಲಭ್ಯವಾಯಿತು.

ಏಳು ಊರಿನ ದೇವತೆ ಲಕ್ಷ್ಮೀ ಜಾತ್ರೆ (ಸಾತ್‌ತೊಂಡಿ ಲಕ್ಷ್ಮೀ)

ಚಿಕ್ಕೋಡಿಯಿಂದ ೧೫ ಕಿ.ಮೀ ಅಂತರದಲ್ಲಿ ಸಾತತೋಂಡಿ ಲಕ್ಷ್ಮೀಯ ಮಂದಿರವಿದೆ. ಮರಾಠಿಯಲ್ಲಿ "ತೊಂಡ" ಎಂದರೆ ಮುಖ, "ತೊಂಡಿ" ಎಂದರೆ ಬಾಯಿ, ನಿಪ್ಪಾಣಿಯ ಪೂರ್ವದಿಕ್ಕಿಗೆ ಏಳು ಊರುಗಳಿವೆ. ಪಟ್ಟಣಕುಡಿ, ರಾಮಪುರ, ಚಿಖಲವಾಡ, ಖಡಕಲಾಟ, ನಾಯಿಂಗ್ಲಜ, ಹಂಡ್ಯಾನವಾಡಿ ಮತ್ತು ಯಾದ್ಯಾನವಾಡಿ. ಈ ಏಳು ಸೀಮೆಗಳು ಒಂದೇ ಕಡೆಗೆ ಸೇರುತ್ತವೆ. ಏಳು ಸೀಮೆಯನ್ನು ಕಾಪಾಡುವವಳು. ಲಕ್ಷ್ಮೀ ಮೊದಲು ಈ ಏಳು ಊರುಗಳಲ್ಲಿ ಏನಾದರೂ ತಂಟೆ ತಕರಾರು ಬಂದರೆ ಈ ಮಂದಿರಕ್ಕೆ ಬಂದು; ದೇವಿಯ ಮುಂದೆ ಪ್ರಮಾಣ ಮಾಡಿ ನ್ಯಾಯ ನಿರ್ಣಯ ಮಾಡುತ್ತಿದ್ದರು. ದೇವಿಗೆ ಎಲ್ಲ ಜಾತಿಯ ಭಕ್ತರೂ ನಡೆದುಕೊಳ್ಳುತ್ತಾರೆ. ಹೆಚ್ಚಾಗಿ ಝುಂಡಾ ಕುರುಬರ ಪ್ರಾಬಲ್ಯ ಹೆಚ್ಚಾಗಿದೆ ಹಾಗು ಈ ಮಂದಿರ ಏಳು ಊರಿನ ಮಧ್ಯಭಾಗದಲ್ಲಿದೆ. ಕುರುಬರು ಈ ದೇವಿಗೆ "ಲಗಮವ್ವ" ಎಂದು ಕರೆಯುತ್ತಾರೆ.

ವರ್ಷದಲ್ಲಿ ಒಂದು ಸಲ ಜಾತ್ರೆಯಿರುತ್ತದೆ. ಏಳು ಊರಿನಿಂದಲೂ ಜನ ನಡೆದುಕೊಂಡು ನೀರು ತರುತ್ತಾರೆ. ಆ ನೀರಿನಿಂದ ಅಭಿಷೇಕ ಮಾಡುತ್ತಾರೆ. ಡೊಳ್ಳು ಕುಣಿತವಿರುತ್ತದೆ. ದೇವಿಗೆ ಇಲ್ಲಿ ಪ್ರಾಣಿ ಬಲಿಯಿದೆ.

ಈ ಭಾಗದಲ್ಲಿ ಮರಾಠಿ ಪ್ರಾಬಲ್ಯ ಹೆಚ್ಚಿರುವದರಿಂದ "ತೊಂಡ" ಎಂಬ ಹೆಸರು ಬಂದಿದೆ ಮಂದಿರ ದಕ್ಷಿಣೋತ್ತರವಿದೆ. ಮಂದಿರದ ಮುಂದೆ ಒಂದು ದೀಪಸ್ತಂಭವಿದೆ. ಹುಣಸೆ ಗಿಡಗಳಿವೆ, ಮಂದಿರದ ಒಳಗಡೆ ಕರಿಯ ಸಣ್ಣ ಲಕ್ಷ್ಮೀಮೂರ್ತಿಯಿದೆ. ದಕ್ಷಿಣ ಪಶ್ಚಿಮ ದಿಕ್ಕಿನಲ್ಲಿ ಭಕ್ತರಿಗೆ ಇರಲಿಕ್ಕೆ ವ್ಯವಸ್ಥೆಯಿದೆ. ಇದೊಂದು ಜಾಗೃತ ದೇವಸ್ಥಾನವೆಂದು ಪ್ರಸಿದ್ಧಿ ಪಡೆದಿದೆ.

ಲಖನಾಪೂರ ಮಹಾಲಕ್ಷ್ಮೀ ಜಾತ್ರೆ

ಚಿಕ್ಕೋಡಿಯಿಂದ ೧೫ ಕಿ.ಮೀ ಅಂತರದಲ್ಲಿರುವ ಲಖನಾಪೂರ ಗ್ರಾಮ ದೇವತೆ ಮಹಾಲಕ್ಷ್ಮೀ. ಎಲ್ಲ ಜಾತಿ ಧರ್ಮದವರು ಈ ದೇವತೆಗೆ ನಡೆದುಕೊಳ್ಳುತ್ತಾರೆ. ದಕ್ಷಿಣಾಭಿಮುಖವಾಗಿರುವ ಗುಡಿ ಸುತ್ತಮುತ್ತಲಿನ ಎಲ್ಲ ಲಕ್ಷ್ಮೀ ಗುಡಿಗಳಿಗೆ ಹೋಲಿಸಿದರೆ

ಇದೊಂದೇ ದಕ್ಷಿಣಾಭಿಮುಖವಾಗಿರುವದು. ಪೂಜಾರಿಕೆ ಲಿಂಗಾಯತ ಉಪಜಾತಿ ಗುರುವವರಿಗೆ ವಂಶಪರಂಪರೆಯದಾಗಿದೆ.

ಸರಿಸುಮಾರು ೪೦೦ ವರುಷಗಳ ಹಳೆಯ ದೇವಾಲಯ ಬ್ರಾಹ್ಮಣರಿಂದ ಪ್ರತಿಷ್ಠಾಪಿಸಲ್ಪಟ್ಟದ್ದು ಮೇಲಾಗಿ ಬನದಲ್ಲಿ ಸ್ವಯಂಭೂವಾಗಿದ್ದ ಕಾರಣ 'ಬನದ ಲಕ್ಷ್ಮೀ' ಎಂದೇ ಕರೆಯುವ ವಾಡಿಕೆ.

ಅಪ್ಪಾಸಾಹೇಬ ನಿಂಬಾಳಕರ (ದೇಸಾಯಿ) ನಿಪ್ಪಾಣಿಕರ ರಾಜಾ ಈಗಿನ ದೇವಾಲಯವನ್ನು ಕಟ್ಟಿಸಿದ್ದು ಭಕ್ತರಿಗೆ ಅನುವಾಗಲೆಂದು ಭೂಮಿಯಲ್ಲಿದ್ದ ಲಕ್ಷ್ಮೀಯನ್ನು ಎತ್ತರಕ್ಕೆ ಏರಿಸಿದ್ದಾರೆ.

ಭೂಮಿ ಪಾತಾಳಗಿಂತ ೬ ಅಡಿ ಎತ್ತರ, ಪ್ರವೇಶದ್ವಾರದಿಂದ ನೋಡಬಹುದು. ೪ ಕೈಗಳಿವೆ. ಕುಳಿತ ಭಂಗಿಯಲ್ಲಿರುವ ಮೂರ್ತಿ ಯಾವುದೇ ವಾಹನದ ಮೇಲೆ ಆಸೀನಳಾಗಿಲ್ಲ. ಎಡಗಡೆಗೆ ರಾಕ್ಷಸನ ಮೂರ್ತಿ ಇದೆ. ಪ್ರತಿ ವರ್ಷ ಅಕ್ಷಯ ತೃತೀಯಾ ಆದಮೇಲೆ ಬರುವ ಮೊದಲ ಶುಕ್ರವಾರ ಜಾತ್ರೆಯ ದಿನ. ಹೋಳಿಗೆ ನೈವೇದ್ಯ ಮದುವೆಯಾಗಿ ಗಂಡನ ಮನೆ ಸೇರಿದ ಹೆಣ್ಣುಮಕ್ಕಳನ್ನು ಕರೆದು ಉಡಿ ತುಂಬಿಸುವದು ವಾಡಿಕೆ.

ಗುಡಿಗೆ ಶಿಖರವಿದ್ದರೆ ಶಿಖರಕ್ಕೆ ಅನೇಕ ದೇವಾನುದೇವತೆಗಳ ಮೂರ್ತಿಗಳಿವೆ. ಜಾತ್ರೆಯ ಹಕ್ಕು ಊರ ಗೌಡರಿಗೆ ಸಲ್ಲುತ್ತದೆ. ಮೊದಲು ಮೂರ್ತಿಯ ಮುಖವಾಡ ಒಂದೇ ಆಗಿತ್ತು. ನಂತದಲ್ಲಿ ಅದರಲ್ಲಿಯೇ ಜಗಳ ಶುರುವಾಗಿ ೩ ಜನ ಅಣ್ಣ ತಮ್ಮಂದಿರಲ್ಲಿ ಅವರದೇ ಆದ ದೇವಿಯ ಮುಖಗಳಿವೆ. ಜಾತ್ರೆಯ ಕಾಲದಲ್ಲಿ ಅವುಗಳನ್ನು ದೇವಿಗೆ ತೊಡಿಸುತ್ತಾರೆ. ಹಸಿರು ಸೀರೆ ಹಸಿರು ಕುಪ್ಪಸ ಲಕ್ಷ್ಮೀಗೆ ಅಚ್ಚುಮೆಚ್ಚು. ಬೆಳ್ಳಿಯ ಮುಖಗಳಿವೆ. ಅನ್ಯಧರ್ಮಿಯರ ಅನ್ಯಜಾತಿಯವರ ನೈವೇದ್ಯವನ್ನು ದೇವಿಗೆ ತೋರಿಸಿ ಮರಳಿ ಅವರಿಗೆ ಕೊಡುವದು ಊರಿನ ಯಾವುದೇ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ದೇವಿಯ ಆಶೀರ್ವಾದ ಪಡೆದೇ ಮುಂದುವರಿಯುತ್ತಾರೆ.

ರಾಶಿ ಮಾಡುವಾಗ ಜೋಳದ ತೆನೆಗಳಿಗೆ ಅಂಗಾರ ಹಚ್ಚಿ ತೆನೆ ಮುರಿಯುತ್ತಾರೆ. ಶ್ರಾವಣ ಮಾಸದಲ್ಲಿ ವಿಶೇಷ ಪೂಜೆ ಸಲ್ಲಿಸುವರು. ಮುತ್ತೈದೆಯರಿಗೆ ಉಡಿ ತುಂಬುವದು ನವರಾತ್ರಿಯಲಿ ಒಂಭತ್ತು ದಿನ ದೀಪವಿರುವದು ಅದೇ ರೀತಿ ಕುಂಭವನ್ನು ಹಾಕುತ್ತಾರೆ. ಈ ದೇವಾಲಯಕ್ಕೆ ಒಟ್ಟು ಕಂಬಗಳೇ ಇಲ್ಲ. ಉರುಳು ಸೇವೆಯಿದೆ.

ಈ ಊರಿಗೆ ಲಖನಾಪೂರ ಎಂಬ ಹೆಸರು ಬರಲು ಕಾರಣ ಈ ಊರಿಗೆ ಸಮೀಪದಲ್ಲಿ ರಾಂಪೂರ ಎಂಬ ಹೆಸರಿನ ಊರಿದೆ. ಅಂದರೆ (ರಾಮ ಮತ್ತು ಲಖನ)

ಎಂಬ ನಾಮದಿಂದಲೂ ಬಂದಿರಬಹುದು. ಕಾರಣ ನಿಪ್ಪಾಣಿಯ ಸಮೀಪದ ರಾಮನಿಂದ ಪ್ರತಿಷ್ಠಾಪಿಸಲ್ಪಟ್ಟ 'ರಾಮಲಿಂಗ' ಎಂಬ ಕ್ಷೇತ್ರವಿದೆ. ಇದರ ಪ್ರಭಾವದಿಂದ ಈ ಹೆಸರು ಬಂದಿರಬಹುದೆಂದು ನಂಬಿಕೆ ಸ್ಥಳೀಯರದಾಗಿದೆ.

ದೇವಿಗೆ ಹರಕೆ ಹೊತ್ತವರ, ಹರಕೆ ಪೂರೈಸಿದ ಮೇಲೆ ಜನರಿಗೆ ಗುಡಿಯ ಪೌಳಿಯಲ್ಲಿ ಊಟ ಹಾಕಿಸುವ ಪದ್ಧತಿಯಿದೆ. ದೇವಿಗೆ ಸಂಬಂಧಪಟ್ಟ ಎಲ್ಲ ಹಾಡುಗಳನ್ನು ಜನರೆಲ್ಲಾ ಕೂಡಿ ಹಾಡುತ್ತಾರೆ.

ಮಹಾಲಕ್ಷ್ಮೀ ಜಾತ್ರೆ ಪಟ್ಟಣಕುಡಿ

ಚಿಕ್ಕೋಡಿಯಿಂದ ೧೭ ಕಿ.ಮೀ ಅಂತರದಲ್ಲಿರುವ ಪಟ್ಟಣಕುಡಿಯ ಮಹಾಲಕ್ಷ್ಮೀ ಮಂದಿರವು ವಾಳಕಿ ರಸ್ತೆಯ ಪೂರ್ವಕ್ಕೆ ಮುಖ ಮಾಡಿ, ಮಂದಿರವಿದೆ. ಕಲ್ಲಿನಿಂದ ಕಟ್ಟಿದ ಭವ್ಯವಾದ ಪ್ರವೇಶದ್ವಾರವಿದೆ. ನಗರಖಾನೆ ಮತ್ತು ದೇವಾಲಯವು ಗೋಪುರದ ಮೇಲೆ ದಾಕ್ಷಿಣಾತ್ಯ ಕಂಡುಬರುತ್ತದೆ. ಗರ್ಭಗ್ರಹದಲ್ಲಿರುವ ಮೂರ್ತಿ ಚತುರ್ಭುಜಧಾರಿಯಾಗಿದೆ. ದೇವಿಯ ಕೈಯಲಿ ಪದ್ಮ, ಸರ್ಪ, ಖಡ್ಗ ಮತ್ತು ಒಂದು ವರಹಸ್ತ ಹಾಗೂ ಲಕ್ಷ್ಮೀಯ ತಲೆಯ ಮೇಲೆ ೭ ಸುತ್ತಿನ ಹಾವಿನ ಹೆಡೆಯಿದೆ. ಹೊರಗಡೆ ಚೌಕಟ್ಟು ಪೂರ್ತಿ ಹಿತ್ತಾಳೆಯದಿದೆ. ಅದರ ಮೇಲೆ ಗಣೇಶ ಮೂರ್ತಿ ಎಡಗಡೆ ೫ ಹೆಡೆಯ ನಾಗರ ಹಾವಿನ ಮೂರ್ತಿಯಿದೆ.

ಶಾಲಿವಾಹನ ಶಕೆ ೧೫೨೧ ವರ್ಷ ವೈಶಾಖ ನಾಮಸಂವತ್ಸರ ಚೈತ್ರ ದಶಮಿ ಮಂಗಳವಾರ ಕಟ್ಟಿದರೆಂಬ ಬಗ್ಗೆ ಶಿಲಾಲೇಖವಿದೆ. ಪಟ್ಟಣಕುಡಿಗೆ ಮೊದಲು 'ಕುಡಿ' ಎಂಬ ಹೆಸರಿತ್ತು ಆ ಮೇಲೆ ಪಟವರ್ಧನ ಆಳ್ವಿಕೆ ಬಂದ ಮೇಲೆ ಪಟವರ್ಧನಕುಡಿಯಾಯ್ತು. ಅಪ್ರಭಂಶವಾಗಿ ಪಟ್ಟಣಕುಡಿಯಾಯ್ತು.

ಈ ಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಜಿಂಕೆಗಳಿದ್ದವು. ಅವುಗಳ ಬೇಟೆಗೆ ಛತ್ರಪತಿ ರಾಜಾರಾಮ ಮಹಾರಾಜರು ಬರುತ್ತಿದ್ದರು. ಅವರೇ ಈ ಪೌಳಿಯನ್ನು ಕಟ್ಟಿಸಿದ್ದಾರೆ. ಪ್ರತಿವರ್ಷ ಭಾದ್ರಪದ ಮಹಾಲಯ ಅಮವಾಸ್ಯೆಯ ಮುಂಚೆ ಬರುವ ಮಂಗಳವಾರ ಅಥವಾ ಶುಕ್ರವಾರ ದೊಡ್ಡ ಜಾತ್ರೆಯ ಆಯೋಜನವಾಗಿರುತ್ತದೆ. ಕೃಷ್ಣಾ ನದಿಯಿಂದ ನೀರು ತಂದು ಅಭಿಷೇಕ ಮಾಡುತ್ತಾರೆ.

ಮೊದಲನೇಯ ದಿನ ವಾದ್ಯ ಸಮೇತ ಮೂರ್ತಿಯ ಪಲ್ಲಕ್ಕಿ ಮೆರವಣಿಗೆ ನಡೆಯುತ್ತದೆ. ಮುತ್ತೈದೆಯರು ಜಲಾಮೃತ ಮಂಗಲ ಕಲಶ ತೆಗೆದುಕೊಂಡು ಹೋಗುತ್ತಾರೆ. ಎರಡನೇಯ ದಿನ ಮಹಾಪ್ರಸಾದವಿರುತ್ತದೆ. ಮೂರನೇಯ ದಿನ ಸಾಂಸ್ಕೃತಿಕ ಸ್ಪರ್ಧೆ ಮತ್ತು ಕುಸ್ತಿಯಿರುತ್ತದೆ.

ಮಮದಾಪೂರ ಅಂಬಿಕಾ ದೇವಾಲಯ

ನಿಪ್ಪಾಣಿಯಿಂದ ೧೨ ಕಿ.ಮೀ ಮತ್ತು ಚಿಕ್ಕೋಡಿಯಿಂದ ೩೦ ಕಿ.ಮೀ ಅಂತರದಲ್ಲಿ ಅಂಬಿಕಾ ದೇವಿಯ ಅಪ್ರತಿಮ ಸುಂದರ ದೇವಾಲಯವಿದೆ. ಸ್ವಯಂಭೂ ಮೂರ್ತಿ ಮತ್ತು ಜಾಗೃತ ದೇವಸ್ಥಾನವೆಂದು ಪ್ರಸಿದ್ದಿ ಪಡೆದಿದೆ. ೧೮, ೧೯ ನೇ ಶತಮಾನದಲ್ಲಿ ದಿಕ್ಕನ್ ಸರ್ ಲಫರ್ ಶ್ರೀಮಂತ ಸಿದ್ದೋಜಿರಾವ ನಾಯಕ ನಿಂಬಾಳಕರ ದೇಸಾಯಿ ನಿಪ್ಪಾಣಿಕರ ಇವರು ಕಟ್ಟಿಸಿದ್ದು. ಮಂದಿರ ಹೊರಗೋಡೆಯ ಮೇಲೆ ಸುಂದರವಾದ ಕೆತ್ತನೆಯಿದೆ. ಈ ದೇವಾಲಯವನ್ನು ಕಟ್ಟಿಸುವಾಗ ದಕ್ಷಿಣದ ಶಿಲ್ಪಕಲೆಯನ್ನು ಜಾರಿಗೆ ತಂದಿದ್ದಾರೆ. ಭಕ್ತರಿಗೆ ನಿಲ್ಲಲು ೩೨ ಪೌಳಿಗಳಿವೆ. ಪೂರ್ವ ದಿಕ್ಕಿಗೆ ಕಲ್ಲಿನ ಪ್ರವೇಶ ದ್ವಾರವಿದೆ. ಅಲ್ಲಿ ನಗಾರಿ ಬಾರಿಸುವದನ್ನು ಕಾಣುತ್ತೇವೆ. ಅದರ ಬದಿಗೆ ದೊಡ್ಡ ಆಲದ ಮರ ಮಂದಿರ ಮುಂದಿನ ಭಾಗದಲ್ಲಿ ಒಂದು ದೊಡ್ಡ ಆಲದ ಮರವಿದೆ. ಅದರ ಹತ್ತಿರ ೨೦೦ ವರ್ಷಗಳ ಹಿಂದಿನ ಬಾವಿಯಿದೆ. ಬಾವಿಗೆ ಸಾಗವಾನಿ ಕಟ್ಟಿಗೆಯಿಂದ ತಳಪಾಯ ಹಾಕಲಾಗಿದೆ. ೨೦೦ ವರ್ಷವಾದರೂ ಇನ್ನೂ ಯಥಾಸ್ಥಿತಿಯಲ್ಲಿಯೇ ಇದೆ.

ಮಹಾರಾಷ್ಟ್ರದ ಕುಲದೇವತೆಯೆಂದೇ ಖ್ಯಾತಳಾಗಿರುವ ತುಳಜಾಪುರ ನಿವಾಸಿನಿ ದೇವಿ ಅಂಬಾ ಭವಾನಿ ಪೌರಾಣಿಕ ಹಾಗೂ ಇತಿಹಾಸಿಕ ಮಹತ್ವಗಳನ್ನುಳ್ಳ ಭಾಗ್ಯದೇವತೆ ಶರನ್ನವರಾತ್ರಿ ಉತ್ಸವದಲ್ಲಿ ವಿಶೇಷವಾಗಿ ಸಿಂಗಾರಗೊಂಡು ಪೂಜೆಗೊಳ್ಳುವ ದೇವಿ ಮಹಾರಾಷ್ಟ್ರದ ಉಸ್ಮಾನಾಬಾದ ಜಿಲ್ಲೆಯಲ್ಲಿನ ಒಂದು ಧಾರ್ಮಿಕ ಸ್ಥಳವಾಗಿದೆ. ಬಾಲಘಾ ಬೆಟ್ಟದಲ್ಲಿರುವ ಶ್ರೀ ತುಳಜಾ ಅಂಬಿಕಾ ಭವಾನಿಯ ಮಂದಿರಕ್ಕೆ ಹೋಗಲು ಎರಡು ವಿಶಾಲವಾದ ಎತ್ತರವಾದ ಪ್ರವೇಶದ್ವಾರಗಳು ಇದ್ದು ಮೆಟ್ಟಿಲುಗಳನ್ನು ಇಳಿಯುತ್ತಾ ಹೊರಟಾಗ ಬಲಗಡೆಯಲ್ಲಿ ಗೋಮುಖ ತೀರ್ಥ ಎಡಗಡೆಗೆ ಕಲ್ಲೋಳ ತೀರ್ಥ ಬರುತ್ತವೆ. ಗೋಮುಖ ತೀರ್ಥದಲ್ಲಿ ಹಸುವಿನ ಮುಖದಿಂದ ಹನ್ನೆರಡು ತಿಂಗಳು ನೀರು ಬೀಳುತ್ತಿದ್ದು, (ನೀರಿನ ಉಗಮಸ್ಥಾನ ರಹಸ್ಯ) ಆ ನೀರು ಕಾಶಿಕ್ಷೇತ್ರದ ಗಂಗೆಗೆ ಸಮಾನ ಎಂದು ಹೇಳುತ್ತಿದ್ದು ಅಲ್ಲಿ ಸ್ನಾನ ಮಾಡಿದರೆ ಎಲ್ಲಾ ತರಹದ ಪಾಪಗಳು ಕಳೆಯುತ್ತವೆ ಎನ್ನುತ್ತಾರೆ. ಕಲ್ಲೋಳ ತೀರ್ಥದಲ್ಲಿ ಸ್ನಾನ ಮಾಡಿದರೆ ಎಲ್ಲಾ ತರಹದ ರೋಗಗಳು ದೂರವಾಗುವವು ಎಂಬ ನಂಬಿಕೆಯಿದೆ.

ತುಳಜಾ ಅಂಬಿಕಾದೇವಿಯ ಮಹಾರಾಷ್ಟ್ರದ ಕುಲದೇವತೆಯಾಗಿದ್ದು ಹಾಗೂ ಉತ್ತರ ಕರ್ನಾಟಕ ಮತ್ತು ಆಂಧ್ರಪ್ರದೇಶದ ಬಹಳಷ್ಟು ಕುಟುಂಬಗಳಿಗೆ ಕುಲದೇವತೆಯಾಗಿದ್ದು ಒಂದು ಸಲ ಬಂದ ಭಕ್ತರ ಸಂಕಟಗಳನ್ನು ತನ್ನ ಮುಗುಳ್ನಗೆಯಿಂದಲೇ ಪರಿಹರಿಸಿ ಮತ್ತೊಮ್ಮೆ ಬರುವಂತೆ ಮಾಡುವ ಕರುಣಾ ಮಯಿಯಾಗಿರುವದರಿಂದ ವರ್ಷದ ಹನ್ನೆರಡು ತಿಂಗಳು ಶ್ರೀ ಕ್ಷೇತ್ರವು ಭಕ್ತಜನರಿಂದ ತುಂಬಿ ತುಳುಕುತ್ತಿರುತ್ತದೆ. ಆದ್ದರಿಂದ ಸರತಿಯ ಸಾಲಿನಲ್ಲಿ ನಿಂತು ದರ್ಶನ ಪಡೆಯಬೇಕು.

ಸ್ಥಳ ಮಹಿಮೆ:

ಮಹಾರಾಷ್ಟ್ರದ ನಾಲ್ಕು ಶಕ್ತಿಪೀಠಗಳಲ್ಲಿ ಶ್ರೀ ಅಂಬಿಕಾ ಭವಾನಿಯ ದೇವಸ್ಥಾನವೂ ಒಂದು ಪೀಠವಾಗಿದೆ. ದೇವಿಯು ಶಕ್ತಿದೇವತೆ ಪಾರ್ವತಿಯ ಅವತಾರ. ಕೃತ ಯುಗದಲ್ಲಿ ಕದ್ರ ಮಹಾಮುನಿಗಳ ಪತ್ನಿ ಅನುಭೂತಿ ತಪಸ್ಸು ಮಾಡುತ್ತಿರುವಾಗ ಅವಳ ರೂಪಕ್ಕೆ ಮಾರುಹೋಗಿ ಕುಕರ ಎಂಬ ರಾಕ್ಷಸನು ಅವಳನ್ನು ಪೀಡಿಸತೊಡಗಿದನು. ಅವಳು ತನ್ನ ಪಾತಿವ್ರತ್ಯವನ್ನು ಕಾಪಾಡಲು ಶ್ರೀ ದೇವಿಯನ್ನು ಸತತವಾಗಿ ಪ್ರಾರ್ಥಿಸಿದಾಗ ದೇವಿಯು ತ್ವರಿತವಾಗಿ ಬಂದು ರಾಕ್ಷಸನನ್ನು ಸಂಹರಿಸಿ ಅನುಭೂತಿಯನ್ನು, ರಕ್ಷಿಸಿ ನಿನಗೆ ಏನು ವರಬೇಕು ಕೇಳಿಕೊ ಎಂದಳು. ಆಗ ನೀನು ಇಲ್ಲಿಯೇ ನಿಂತು ಆರ್ತಭಕ್ತರ ಸಂಕಟಗಳನ್ನು ಪರಿಹರಿಸು ಎಂದು ಕೋರಲಾಗಿ ಅನುಭೂತಿಯ ಕೋರಿಕೆ ಮೇರೆಗೆ ದೇವಿ ಭವಾನಿಯು ಬಾಲಘಾಟದ ಕೊಳ್ಳದಲ್ಲಿ ವಾಸವಾಗಿದ್ದಾಳೆ ಎನ್ನುತ್ತದೆ ಸ್ಥಳ ಪುರಾಣ. ತುಳಜಾಪುರ ಇರುವ ಬಾಲಘಟವು ಈ ಹಿಂದೆ ರಾಮಾಯಣದ ಕಾಲದಲ್ಲಿನ ದಂಡಕಾರಣ್ಯವಾಗಿದ್ದು ಇವತ್ತಿಗೂ ಅಲ್ಲಿ ಸಹಸ್ರಾರು ಹುಣಸೇಮರಗಳು ಇವೆ. ಮರಾಠಿಯಲ್ಲಿ ಹುಣಸೆಗೆ **"ಚಿಂಚ್"** ಎಂದು ಕರೆಯುತ್ತಾರೆ. ಆದ್ದರಿಂದ ಆ ಸ್ಥಳವನ್ನು ಚಿಂಚಾಪುರ ಎಂದು ಕರೆಯುತ್ತ ಕಾಲಾನಂತರ ಅಪಭ್ರಂಶವಾಗಿ ತುಳಜಾಪುರವಾಗಿದೆ ಎನ್ನುತ್ತಾರೆ.

ಇಂತಹ ತುಳಜಾ ಅಂಬಿಕಾ ದೇವಿಯ ಪರಮಭಕ್ತರು ಶ್ರೀಮಂತ ಸಿದ್ದೋಜಿರಾವ ನಿಂಬಾಳಕರ ದೇಸಾಯಿ ಇವರು ಪ್ರತಿವರ್ಷ ತುಳಜಾಪುರದ ಅಂಬಿಕೆಗೆ ಭಯಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಅವರಿಗೆ ವಯಸ್ಸಾದ ಮೇಲೆ ಒಂದು ಸಲ ಅವರ ಭಕ್ತಿಗೆ ಮನಸೋತು ಅಂಬಿಕೆಯು ಪ್ರಸನ್ನಳಾಗಿ ತಾನು ನಿಪಾಣಿಯಲ್ಲಿ ನೆಲೆಸುವದಾಗಿ ಹೇಳಿದಳು. ಆದರೆ ಈ ಮಾತನ್ನು ಹೇಳುವಾಗ ಶ್ರೀ ಸಿದ್ದೋಜಿರಾವ ನಿಂಬಾಳಕರಿಗೆ ನಾನು ನಿನ್ನ ಪಟ್ಟಣವನ್ನು ಸೇರುವತನಕ ನೀನು ಹಿಂತಿರುಗಿ ನೋಡಬಾರದೆಂದಳು. ಆದರೆ ನಿಪ್ಪಾಣಿ ಇನ್ನು ೧೦ ಕಿ.ಮೀ ದೂರದಲ್ಲಿದ್ದಾಗಲೇ ದೇವಿ ಬರುತ್ತಿದ್ದಾಳೋ ಇಲ್ಲವೊ ಎಂದು ದೇಸಾಯಿ ಹಿಂತಿರುಗಿ ನೋಡಲಾಗಿ ದೇವಿಯು ಮದಾಪುರದಲ್ಲಿಯೇ ಉಳಿದುಕೊಂಡಳು ಎಂಬ ದಂತ ಕಥೆಯಿದೆ.

ಪ್ರತಿ ವರ್ಷ ವೈಶಾಖ ಶುದ್ಧ ತೃತೀಯಾದಂದು ಐದು ದಿನ ಜಾತ್ರೆ ಜರುಗುತ್ತದೆ. ಪ್ರತಿ ೫ ವರ್ಷಕ್ಕೊಮ್ಮೆ ಚಂಡಿಹೋಮ ಯಾಗ ಮಾಡಲಾಗುತ್ತದೆ. ಪ್ರತಿ ರವಿವಾರ, ಮಂಗಳವಾರ, ಶುಕ್ರವಾರ, ಪೌರ್ಣಿಮೆ ಮತ್ತು ಪ್ರತಿ ಹಬ್ಬದ ದಿನ ಭಕ್ತರು ಬರುತ್ತಾರೆ. ಈ ದೇವಿಗೆ ಜಾಗೃತ ದೇವಸ್ಥಾನ ಹಾಗೂ ಶಕ್ತಿ ಪೀಠವೆಂದು ಖ್ಯಾತಿ ಪಡೆದಿದೆ. ಒಂದು ಟ್ರಸ್ಟ ಸ್ಥಾಪನೆ ಮಾಡಲಾಗಿದ್ದು ಪರಿಸರ ಸ್ವಚ್ಛ ವೃಕ್ಷಾರೋಪಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಅಯೋಜಿಸಿರುತ್ತಾರೆ.

ಇತಿಹಾಸ ಪುರಾಣ :

ತನ್ನ ಭಕ್ತ ಛತ್ರಪತಿ ಶಿವಾಜಿ ಮಹಾರಾಜರಿಗೆ ಕನಸಿನಲ್ಲಿ ಬಂದು ನಿಜವಾಗಿ ತಲವಾರ ನೀಡಿದ್ದಾಳೆಂದು ಪ್ರತೀತಿಯಿದೆ. ತ್ರೇತಾಯುಗದಲ್ಲಿ ಸೀತಾಪಹರಣವಾದ ವೇಳೆಯಲ್ಲಿ ರಾಮನು ದುಃಖಿತನಾಗಿ ಅವಳನ್ನು ಹುಡುಕತ್ತಾ ಹೊರಟು ಇದೇ ಬಾಲಘಾಟಕ್ಕೆ ಬಂದಾಗ ದೇವಿಯು ಸೀತಾ ಮಾತೆಯ ರೂಪ ಧರಿಸಿ ರಾಮನ ಮುಂದೆ ಬಂದಾಗ ರಾಮನು ದೇವಿಯನ್ನು ಗುರುತಿಸಿ ತುಕಾ ಆಯಿ ಮಾಯಿ (ನೀನು ಏಕೆ ಬಂದೆ ತಾಯಿ) ಎಂದು ಕೇಳಿದನಂತೆ. ಸೀತೆಯನ್ನು ಹುಡುಕಲು ದಾರಿ ತೊರಿದಳಂತೆ ಆದ್ದರಿಂದ ತುಳಜಾಭವಾನಿಗೆ ರಾಮ ವರದಾಯಿಸಿ, ತುಕಾರಾಮಮಾಯಿ ಮಹಿಸುರ ಮರ್ದಿನಿ , ಅಂಬಾಭವಾನಿ ತ್ವರಿತಾದೇವಿ ಹೀಗೆ ಅನೇಕ ನಾಮಗಳಿಂದ ಭಕ್ತರು ದೇವಿಯನ್ನು ಆರಾಧಿಸುತ್ತಾರೆ.

ಮಮದಾಪುರ ಅಂಬಿಕಾದೇವಿಯ ಕಾರ್ಯಕ್ರಮ :

೧. ಶುಕ್ರವಾರ ದಿ: ೧೦–೦೫–೨೦೧೩ ಶ್ರೀ ಅಂಬಿಕಾ ದೇವಾಲಯಲ್ಲಿ ಪುಣ್ಯ ವಾಚನ ಸ್ಥಳಶುದ್ಧಿ ಧ್ವಜಾರೋಹಣ–ದೀಪಪೂಜನು–ಗೋಪುಜನ ಉದಕ ಶಾಂತಿ–ಧಾನಾದಿವಾಸ–ಜಲಾದಿವಾಸ ಇತ್ಯಾದಿ

೨. ಶನಿವಾರ ದಿ: ೧೧–೦೫–೨೦೧೩ ಪ್ರಧಾನ ಸಂಕಲ್ಪ, ಸಪ್ತಶತ ಪಾಟ ವಾಚನ–ದೇವತಾ ಸ್ಥಾಪನ ಶ್ರೀದೇವಿಗೆ ಅಷ್ಟಕಲಶ ಸ್ನಾನ ಇತ್ಯಾದಿ.

೩. ರವಿವಾರ ದಿ: ೧೨–೦೫–೨೦೧೩ ಬೆಳಿಗ್ಗೆ ಶ್ರೀದೇವಿ ಪುನಃ ಪ್ರಾಣ ಪ್ರತಿಷ್ಠಾ ಹವನ ಮತ್ತು ಮುಂಜಾನೆ ೬–೧೫ ರಿಂದ ೮–೧೫ ರ ಅವಧಿಯಲ್ಲಿ ಶ್ರೀದೇವಿ ಪುನ ಪ್ರಾಣ ಪ್ರತಿಷ್ಠಾ ಇತ್ಯಾದಿ ಮುಂಜಾನೆ ೮–೩೦ ರಿಂದ ೧೨–೩೦ ರ ವೇಳೆಗೆ ನವಚಂಡಿ ಹವನ ಮತ್ತು ಪೂರ್ಣಾಹೃತಿ ಮಧ್ಯಾಹ್ನ ೧೨–೩೦ ರಿಂದ ೫–೦೦ ರ ವರೆಗೆ ದೇವಾಲಯದಲ್ಲಿ ಮಹಾಪ್ರಸಾದ.

ಮಹಾಲಕ್ಷ್ಮೀ ಜಾತ್ರೆ ಹತ್ತರವಾಟ

ಚಿಕ್ಕೋಡಿಯಿಂದ ೧೫ ಕಿ.ಮೀ ಅಂತರದಲ್ಲಿರುವ ಹತ್ತರವಾಟ ಎಲ್ಲ ಧರ್ಮೀಯರನ್ನೊಳಗೊಂಡ ಗ್ರಾಮ. ಈ ಊರಿನ ಲಕ್ಷ್ಮೀ ಜಾತ್ರೆ ಮೂರು ವರ್ಷಕ್ಕೊಮ್ಮೆ ಫೆಬ್ರುವರಿ ತಿಂಗಳಿನಲ್ಲಿ ಜರುತ್ತದೆ. 'ಶ್ರೀ ಮಹಾಲಕ್ಷ್ಮೀ ಜಾತ್ರಾ ಕಮೀಟಿ ಹತ್ತರವಾಟ' ಮೊದಲಿಗೆ ಗೌಡರು, ಕುಲಕರ್ಣಿ ಹಕ್ಕುದಾರರು. ಗ್ರಾಮ ಪಂಚಾಯತ ಸದಸ್ಯರು ಗ್ರಾಮ ಸೇವಾ ಸಹಕಾರಿ ಸಂಘ ಎಲ್ಲ ಭಕ್ತರು ಸೇರಿ ಗೌಡರ ಮನೆಯಿಂಥ ಡಬಕರಿವಾದ್ಯ

ಚಾರಿಸುತ್ತ ಬಂದು ಬಡಿಗೇರ ಮನೆಯಲ್ಲಿ ಮಹಾಲಕ್ಷ್ಮೀ ಮೂರ್ತಿಗೆ ತವರು ಮನೆಯ ಸೀರೆ ತೊಡಿಸಿ ಉಡಿ ತುಂಬಿ, ಕುಂಕುಮಾರ್ಚನೆ ಮಾಡಿ ಕಮೀಟಿಯ ಗೌಡರು ಮತ್ತು ಕುಲಕರ್ಣಿ ಹುಮಾಲೆ ಹಾಕಿ ನಮಸ್ಕಾರ ಮಾಡಿ ಹಕ್ಕುದಾರರೆಲ್ಲಾ ಭಂಡಾರ ಹಾರಿಸುವದು.

೨೫ ಜನ ಮಹಾಲಕ್ಷ್ಮೀ ಮೂರ್ತಿಯನ್ನು ಹಿಡಿದು ಹರಗಾಪೂರೆಯವರ ಮನೆಗೆ ಹೋಗಿ ಕೂಡ್ರಿಸಿ ಗೌಡರು, ಕುಲಕರ್ಣಿ ಎಲ್ಲರೂ ಸೇರಿ ಮತ್ತೆ ಉಡಿ ತುಂಬುವದು ಒಟ್ಟಾಗಿ 'ಲಕ್ಷ್ಮೀಚ ನಾವ್ಹಾನ' (ಲಕ್ಷ್ಮೀಯ ಹೆಸರಿನಲ್ಲಿ) ಚಾಂಗಬಲೋ ಅನ್ನುತ್ತಾ ಎರಡೂವರೆ ತಾಸು ಆದ ನಂತರ ಹರಗಾಪೂರೆಯವರ ಮನೆಯಿಂದ ಗೌಡರ ಮನೆಯ ತನಕ ಶ್ರೀ ದೇವಿಯನ್ನು ಕುಣಿಸುತ್ತ ಗೌಡರ ಮನೆಗೆ ತಂದು ಕೂಡ್ರಿಸುವದು ಗೌಡರು ಮತ್ತು ಮನೆಯವರು ಸೀರೆಯುಡಿಸಿ ಉಡಿ ತುಂಬಿ ಹಾಗೂ ' ಇಂಗಳೋಬಾ"ಗೆ (ಈತ ಲಕ್ಷ್ಮೀಯ ಮಗನೆಂದು) ಸ್ಥಳೀಯರು ಹೇಳುತ್ತಾರೆ. ಇಂಗಳೋಬಾನಿಗೆ ಪಟಗಾ ದಡಿ ಧೋತರ ತೊಡಿಸಿ ಭಂಡಾರ ಹಾರಸಿ ಊರಿನ ಪ್ರತಿಯೊಂದು ಮನೆಯನವರು ಆರತಿ ಹಿಡಿದು ಗೌಡರ ಮನೆಯಲ್ಲಿ ದೇವಿಗೆ ಉಡಿ ತುಂಬಿ ಆರತಿ ಬೆಳಗಿ ಕುಲಕರ್ಣಿಯವರ ಮನೆಗೆ ತಂದು ಅಲ್ಲಿ ಉಡಿ ತುಂಬಿ ರಂಗಮಂದಿರದ ವಿಶಾಲ ಬಯಲಿನಲ್ಲಿ ಇಡಿ ರಾತ್ರಿ ದೇವಿಯನ್ನು ಕುಣಿಸುವದು (ಆಡಿಸುವದು) ಇಡೀ ಭಕ್ತ ಸಮೂಹ ಭಯಭಕ್ತಿಯಿಂದ ನೋಡುತ್ತಾರೆ.

ಶ್ರೀ ಮಹಾಲಕ್ಷ್ಮೀಗೆ ಹೂ, ಭಂಡಾರ, ಖಾರೀಖ (ಉತ್ತತ್ತಿ) ಖೊಬ್ಬರಿ ಹಾರಿಸಿ, ಇಂಗಳೋಬಾಗೆ ಗೊಂಚಿನ (ಕುಲಾಯಿ) ಕಟ್ಟಿ ಬೆಳಿಗ್ಗೆ ೫-೩೦ ಕ್ಕೆ ಶ್ರೀ ಲಕ್ಷ್ಮೀಯನ್ನು ಗುಡಿಯಲ್ಲಿ ಕೂಡ್ರಿಸುವರು.

ಶನಿವಾರ ಶ್ರೀದೇವಿಯ ಕೋಣಿನ ಮೆರವಣಿಗೆ ಊರಲ್ಲಿಯ ಎಲ್ಲ ಓಣಿಗಳಲ್ಲಿ ಮೆರವಣಿಗೆ ಮಾಡಿಸುತ್ತ ನೀರು ಹಾಕಿ, ಎಣ್ಣೆ ಹಚ್ಚಿ ಭಂಡಾರ ಹಾರಿಸಿ, ಪ್ರತಿಯೊಂದು ಮನೆಗಳು ಆದ ನಂತರ ಶ್ರೀದೇವಿ ಕುಳಿತ ಸ್ಥಳಕ್ಕೆ ತಂದು ರಂಗದ, ಕೋಣ ಬಲಿ ಬಿಳುವದು. ನಂತರ ಹರಿಜನ ಕೇರಿಗೆ ಕೋಣವನ್ನು ತೆಂಗಿನಕಾಯಿ ಒಡೆಯಲು ಪ್ರಾರಂಭಿಸುತ್ತಾರೆ. ರಾತ್ರಿ ೧೦-೩೦ಕ್ಕೆ ನಾಟಕ ಪ್ರದರ್ಶನಗೊಳ್ಳುವದು.

ರವಿವಾರ ಬೆಳಿಗ್ಗೆ ೪-೦೦ ಗಂಟೆಗೆ ದೀಡ ನಮಸ್ಕಾರ ಹರಕ್ಕೆ ಹೊತ್ತವರು ನೆರವೇರಿಸುವರು. ನಂತರ ಸಾಯಂಕಾಲ ೪-೦೦ ಗಂಟೆಗೆ ಗಾಡಿ ಶರ್ಯತ್ತು, ಕುಸ್ತಿ ಪಂದ್ಯಗಳು ಜರುಗುವವು. ಮತ್ತೆ ರಾತ್ರಿ ೧೦ ಗಂಟೆಗೆ ನಾಟಕ ಪ್ರದರ್ಶನ.

ಸೋಮವಾರ ಎಲ್ಲ ಭಕ್ತರು ದೇವಿಯ ಹೆಸರಿನಲ್ಲಿ ತಮ್ಮ ಮನಸ್ಸಿನಲ್ಲಿರುವುದನ್ನು ಬೇಡಿಕೊಂಡು ಸಂಕಲ್ಪ ಮಾಡಿ ದೇವಿಗೆ ಉಡಿ ತುಂಬುವರು. ಮಧ್ಯಾಹ್ನ ೪-೦೦ ಗಂಟೆಗೆ

೨೫ ಜನ ಶ್ರೀ ಲಕ್ಷ್ಮೀಯನ್ನು ತೆಗೆದುಕೊಂಡು ನಾಯಕರ ಮನೆಗೆ ಹೋಗಿ ಮತ್ತೆ ಉಡಿ ತುಂಬಿ ದೇವಿಯನ್ನು ಆಡಿಸುತ್ತಾ (ಕುಣಿಸುತ್ತ) ಲಕ್ಷ್ಮೀ ಗುಡಿಯ ಮುಂದೆ ತಟ್ಟೆಗೆ ಬೆಂಕಿ ಹಾಕಿ ಬೆಂಕಿಯಿಂದ ಆಡಿಸುತ್ತ ಸೀಮೆಗೆ ಹೋಗವರು. ಸೀಮೆ ಮೇಲೆ ಚಾಂಗಬಲೋ ಚಾಂಗಬಲೋ ಎನ್ನುತ್ತಾ ದೇವಿಯನ್ನು ಕೂಡ್ರಿಸಿ ಸೀಮೆಯ ಮೇಲೆ ತಗ್ಗು ತಗೆದು ಪೂಜೆ ಮಾಡಿ ಅಂಬಲಿ ಕುಡಿದು ಭಂಡಾರ ಹಾರಿಸಿ ಶ್ರೀದೇವಿಯ ಮೇಲೆ ಕೆಂಪುವಸ್ತ್ರ ಮುಚ್ಚಿ ಯಾರು ಮಾತಾಡದೆ ಯಾರೂ ಹಿಂತಿರುಗಿ ನೋಡದೆ ಬಡಿಗೇರ ಮನೆಗೆ ಶ್ರೀದೇವಿಯನ್ನು ಕೂಡ್ರಿಸವರು. ಶಾಂತ ರೀತಿಯಿಂದ ನಮಸ್ಕಾರ ಮಾಡಿ ತಮ್ಮ ತಮ್ಮ ಮನೆಗೆ ಹೋಗುವ ಸಂಪ್ರದಾಯವಿದೆ.

ಮಂಗಳವಾರ ಸೀಮೆ ಲಕ್ಷ್ಮೀದೇವಿಗೆ ಮೊಸರನ್ನು ನೈವೇದ್ಯ ತೋರಿಸಿ ಜಾತ್ರೆಗೆ ಬಂದ ಹೆಣ್ಣು ಮಕ್ಕಳಿಗೆಲ್ಲಾ ಹೊಸ ಸೀರೆ ಕೊಡುವರು. ಮಂಗಳವಾರ ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕಳುಹಿಸುವದಿಲ್ಲ. ಬುಧವಾರ ಕಳಿಸುತ್ತಾರೆ ಇಲ್ಲಿಗೆ ಜಾತ್ರೆ ಮುಗಿಯುತ್ತದೆ.

೫.೩. ಸಾಧು ಸಂತರ ಜಾತ್ರೆಗಳು

"ಸಂತ" ಶಬ್ದವನ್ನು ನಮ್ಮ ಸಾಹಿತ್ಯ ಪರಂಪರೆಯಲ್ಲಿ ಬಹು ಆಯಾಮಿ ಅರ್ಥಗಳಲ್ಲಿ ಬಳಸಲಾಗಿದೆ. ಸಜ್ಜನ, ಪವಿತ್ರಾತ್ಮ, ಪರೋಪಕಾರಿ ಸದಾಚಾರಿ, ಸರ್ವಭೂತಹಿತ ಬಯಸುವವ, ಜಪ-ತಪ, ದಾನ-ಧರ್ಮಾದಿಗಳಲ್ಲಿ ನಿರತನಾಗಿರುವವ. ಆಧ್ಯಾತ್ಮ ಚಿಂತನೆಯನ್ನು ಬದುಕಿನ ಅವಿಭಾಜ್ಯ ಅಂಗವಾಗಿರಿಸಿಕೊಂಡಿರುವವ, ನಡೆನುಡಿಯಲ್ಲಿ ಸಾಂಗತ್ಯವುಳ್ಳವ, ನಿಷ್ಕಾಮಿಯಾಗಿರುವವ ಸೇವಾಭಾವ ಮತ್ತು ಮಾನವೀಯ ಅಂತಃಕರಣವನ್ನು ಆತ್ಮೀಕರಿಸಿಕೊಂಡಿರುವ ವ್ಯಕ್ತಿಯನ್ನು/ ಸಾಧಕನನ್ನು ಸಂತ ಎಂದು ವ್ಯಾಪಕಾರ್ಥದಲ್ಲಿ ಕರೆದಿದ್ದಾರೆ.

"ಸಂತ" ಶಬ್ದ ಸಂಸ್ಕೃತ, ಸತ್ ನಿಂದ ರೂಪುಗೊಂಡಿದ್ದು, ಇದರ ಅರ್ಥ ಶುದ್ಧ ಅಸ್ತಿತ್ವವುಳ್ಳದ್ದು ಎಂದೂ ನಾಶವಾಗದ ಶಾಶ್ವತವಾದ ಅವಿಕೃತ ರೂಪದಲ್ಲಿರುವ ಪರತತ್ವವೇ ಸತ್. ಈ "ಸತ್" ನ ಚಿಂತನೆಯಲ್ಲಿ ತೊಡಗಿರುವವನೆ ಸಂತ ಹೀಗೆ ಸಂತರು ಪರಮಾರ್ಥ ಚಿಂತಕರು. "ಸತ್" ತತ್ವದ ಅನ್ವೇಷಕರು, ಪ್ರಾಚೀನ ಸಾಹಿತ್ಯಕ್ಕೆ ಸಂತ ಶಬ್ದವನ್ನು ಈ ಅರ್ಥದಲ್ಲಿಯೇ ಉಪಯೋಗಿಸಿದೆ. ಸಂತ ನಿರ್ವೈರಿಯಾಗಿರಬೇಕು. ಕಾಮನಾರಹಿತನಾಗಿರಬೇಕು, ಪರಮಾತ್ಮನಲ್ಲಿ ಅನುರಾಗವುಳ್ಳವನಾಗಿರಬೇಕು. ವಿಷಯಾ ಸಕ್ತಿಯಿಂದ ದೂರವಾಗಿರಬೇಕು. ಅಂತು ಸಂತರ ಸಾಲಿನಲ್ಲಿ ಚಿಕ್ಕೋಡಿಯ ಅನೇಕ ಸಂತರು ಸೇರುತ್ತಾರೆ.

ಪರಮ ಪೂಜ್ಯ ಮಹಾದೇವಸ್ವಾಮಿ ಜಾತ್ರೆ ಜನವಾಡ (ಸಂತರು)

ಆದಿ ಕಾಲದಿಂದಲೇ ಸಿದ್ಧಿಪುರುಷರ ಪಾದಸ್ಪರ್ಶದಿಂದ ಪುನೀತವಾದ ಗ್ರಾಮಜನವಾಡ, ದೂದಗಂಗೆಯ ದಡದ ಅಸ್ತಿತ್ವದಲ್ಲಿರುವ ಗ್ರಾಮವು ಚಿಕ್ಕೋಡಿಯಿಂದ ೨೨ ಕಿ.ಮೀ ಅಂತರದಲ್ಲಿದೆ. ಈ ಮಠವು ಮಹಾದೇವಸ್ವಾಮಿಯ ಧರ್ಮರ ಮಠವೆಂದು ಪ್ರಸಿದ್ಧ ಪಡೆದಿದೆ. ಫಲವತ್ತಾದ ಮಣ್ಣು ಜಲವತ್ತಾದ ಪರಿಸರ ಇಲ್ಲಿಯ ಜನರಿಗೆ ಬೆಳೆ ಬೆಳೆಯಲು ಹೇಳಿ ಮಾಡಿಸಿದಂತಿದೆ. ತಾಲೂಕಿನಲ್ಲಿಯೇ ಅತಿ ದೊಡ್ಡ ಜಾತ್ರೆಯೆಂದು ಮಾನ್ಯತೆ ಪಡೆದಿದೆ.

ಮಹಾದೇವ ಸ್ವಾಮಿಯವರ ಜನನ : ಮಹಾದೇವ ಸ್ವಾಮಿಯವರು ಈಗೀನ ಬಾಗಲಕೋಟೆ ಜಿಲ್ಲೆಯ ಸೀತಿಮನಿಯಲ್ಲಿ ಶ್ರೀ ಕಾಳಿಂಗಸ್ವಾಮಿ ಮರಳಸಿದ್ದಮ್ಮ ಅವರ ಉದರದಲ್ಲಿ ಕ್ರಿ.ಶ ೧೮೫೧ ರಲ್ಲಿ ಜನಿಸಿದರು. ಇವರ ಮೊದಲ ಹೆಸರು 'ಮರಳಸಿದ್ದ' ಇವರ ತಂದೆ ಸಾಮಾನ್ಯ ರೈತರಾಗಿದ್ದರು. ಕಾಳಿಂಗಸ್ವಾಮಿಯ ತಂದೆ ಮರುಳಸ್ವಾಮಿ ಮರುಳಸ್ವಾಮಿಯವರಿಗೆ ಒಟ್ಟು ನಾಲ್ಕು ಜನ ಮಕ್ಕಳು, ಕಾಳಿಂಗಸ್ವಾಮಿ, ರಾಮದೇವ, ಅಪ್ಪಯ್ಯ, ಲಕ್ಷ್ಮಣ, ರಾಮದೇವ, ಅಪ್ಪಯ್ಯ, ಲಕ್ಷ್ಮಣರ ಮದುವೆಯಾಯಿತು. ಯುಗಾದಿಯ ದಿನ ವಾಡಿಕೆಯಂತೆ ೨೦೦-೩೦೦ ಜನ ಊರಿನವರೊಡನೆ ಕೂಡಿಕೊಂಡು ರಾಮದೇವರು ಕಾಡಿಗೆ ಬೇಟೆಗೆ ಹೊರಟರು, ಸಂಜೆವರೆಗೆ ಅಲಿದರೂ ಬೇಟೆ ಸಿಗದೆ ಮನೆಗೆ ಖಾಲಿ ಕೈಗಳಿಂದ ಬಂದಾಗ ರಾಮದೇವರ ಮೇಲೆ ಸಿಟ್ಟಾಗಿ 'ನೀನು ಗುಂಡು ಹಾಕಿಕೊಂಡು ಸಾಯು' ಎಂದಾಗ ರಾಮ ಅಪ್ಪನ ಮಾತಿನಂತೆ ಗುಂಡು ಹಾರಿಸಿಕೊಂಡು ಸತ್ತನು.

ರಾಮದೇವರು ಗುಂಡು ಹಾರಿಸಿಕೊಳ್ಳುವ ಮೊದಲು ತಂದೆಗೆ ಹೀಗೊಂದು ವಚನವಿತ್ತನು "ನಾನು ಕಲಿಯುಗದಲ್ಲಿ ಅಣ್ಣನ ಹೊಟ್ಟೆಗೆ ಮಗನಾಗಿ" ಹುಟ್ಟುತ್ತೇನೆಂದು. ಇದಾದ ನಂತರ ಮರಳುಸ್ವಾಮಿ ಹಿರಿಯ ಮಗ ಕಾಳಿಂಗಸ್ವಾಮಿ ಮದುವೆ ಮಾಡಿ ಪಟ್ಟಾಭಿಷೇಕ ಮಾಡಿದರು. ಕಾಳಿಂಗಸ್ವಾಮಿಯವರಿಗೆ ಮರುಳಸ್ವಾಮಿ, ಅಪ್ಪಯ್ಯಸ್ವಾಮಿ ಎಂಬ ಗಂಡು ಮಕ್ಕಳು ಯಂಕವ್ವಾ ಹಾಗೂ ನೀಲಗಂಗಾ ಎಂಬ ಹೆಣ್ಣು ಮಕ್ಕಳು ಜನಿಸಿದರು. ನೀಲಗಂಗಾಳನ್ನು ಸೀತಿಮನಿಗೆ ಬ್ರಹ್ಮಾಚಾರಿಣಿಯನ್ನಾಗಿ ಮಾಡಿ ಪಟ್ಟಾಭಿಷೇಕ ಮಾಡಿದರು. ಯಂಕವ್ವಳ ಮದುವೆಯಾಯ್ತು. ಹಾಗೂ ಮರುಳಸ್ವಾಮಿ ಮತ್ತು ಅಪ್ಪಯ್ಯಸ್ವಾಮಿಯವರಿಗೂ ಮದುವೆ ಮಾಡಿಸಿದರು.

ಮಹಾದೇವ ಸ್ವಾಮಿಯವರ ಕೌಟುಂಬಿಕ ಜೀವನ

ತಂದೆ ಕಾಳಿಂಗಸ್ವಾಮಿ ಮತ್ತು ಮರುಳಸಿದ್ದಮ್ಮನವರ ಆಧ್ಯಾತ್ಮಕತೆಯಲ್ಲಿ ಒಳ್ಳೆಯ ಸಂಸ್ಕಾರದಲ್ಲಿ ಮರುಳುಸಿದ್ಧರಿಗೆ, ಮಹಾದೇವ ಸ್ವಾಮಿ ಎಂದು ನಾಮಕರಣ ಮಾಡಿ ಪಟ್ಟಾಭಿಷೇಕ ಮಾಡಿದರು. ಶ್ರೀ ಮಹಾದೇವ ಸ್ವಾಮಿಯವರಿಗೆ ಪಾರ್ವತಿದೇವಿ ಹಾಗೂ

ಗಿರೆವ್ವಾತಾಯಿ ಅಂತಾ ಇಬ್ಬರು ಹೆಂಡಿರು. ಗಿರೆವ್ವಾ ತಾಯಿಯವರು ೧೮೭೦ ರಲ್ಲಿ ಶ್ರೀ ರಾಮಸ್ವಾಮಿಯವರಿಗೆ ಜನ್ಮ ನೀಡಿದರು. ಶ್ರೀ ಮಹಾದೇವಸ್ವಾಮಿಯವರಿಗೆ ಬಬಲಾದಿಂದ ಶ್ರೀ ಚಿಕ್ಕಯ್ಯ ಅಪ್ಪಾ ಎಂಬ ಗುರುಗಳು. ಚಿಕ್ಕಯ್ಯಪ್ಪಾ ಗುರುಗಳು ೨೪ ವರ್ಷಗಳ ಕಾಲ ತಪಸ್ಸು ಮಾಡಿದವರು. ಇಂಥವರ ಮಾರ್ಗದರ್ಶನದಿಂದ ಶ್ರೀಗಳು ವೀರಶೈವ ಸಂಘಟನೆ ಮಾಡಿಕೊಂಡು ಶ್ರೀ ಬಸವಣ್ಣನವರ ತತ್ವದಲ್ಲಿ ನಂಬಿಕೆಯಿಟ್ಟು ಧರ್ಮ ಪ್ರಚಾರ ಮಾಡುತ್ತ, ಇದರ ಜೊತೆಗೆ ಭಿಕ್ಷಾಟನೆ ಮಾಡುತ್ತಿದ್ದರು. ಶ್ರೀ ಚಿಕ್ಕಯ್ಯಪ್ಪನವರ ಮಾರ್ಗ ದರ್ಶನದಿಂದ 'ಅಡಗಟ್ಟೆ'ಯಲ್ಲಿ ಮಠ ಸ್ಥಾಪನೆ ಮಾಡಿದರು. ಮುಂದೆ ದೇಶ ಸಂಚಾರ ಮಾಡುತ್ತ ಕೊಲ್ಹಾಪೂರ ಜಿಲ್ಲೆಯ 'ಶಿರೋಳ' ತಾಲೂಕಿನ ಶೇಡಶ್ಯಾಳ ಗ್ರಾಮಕ್ಕೆ ಬಂದು ನೆಲೆಸಿದರು. ಅಲ್ಲಿ ಹೊಸಮಠ ಸ್ಥಾಪಿಸಿ ಸುಮಾರು ೨೦ವರ್ಷ ಅಲ್ಲಿಯೇ ಕಾಲಕಳೆದು ಅವರ ಮೊದಲ ಪತ್ನಿ ಪಾರ್ವತಿದೇವಿ ಲಿಂಗೈಕ್ಯರಾದರು. ನಂತರ ಶಿವನಾಕವಾಡಿಗೆ ಬಂದರು. ಹೀಗೆ ದೇಶ ಸಂಚಾರ ಮಾಡುತ್ತ ೩೫೯ ಧರ್ಮರ ಮಠಗಳನ್ನು ಸ್ಥಾಪಿಸಿ ಕೊನೆಯದಾಗಿ ಕ್ರಿ.ಶ ೧೮೯೫ ರಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನ ಜನವಾಡ ಗ್ರಾಮದ ಶ್ರೀ ಬಾಳಪ್ಪಾ ಮಗದುಮ್ ಇವರ ತೋಟದಲ್ಲಿ ಉಳಿದು ಕೊಂಡರು. ಮಗದುಮರ ೮ ಗುಂಟೆ ಜಾಗಾದಲ್ಲಿ ೩೬೦ನೇ ಮಠವನ್ನು ಸ್ಥಾಪಿಸಿದರು. ೧೮೯೭ ರಲ್ಲಿ ಶ್ರೀ ರಾಮಸ್ವಾಮಿಯವರಿಗೆ ಪಟ್ಟಾಭಿಷೇಕ ಮಾಡಿದರು. ಶ್ರೀ ರಾಮಸ್ವಾಮಿಯವರು ತಂದೆಯ ಮಾರ್ಗದರ್ಶನದಲ್ಲಿ ನಡೆದರು. ಆದರೆ ಮೂರೆ ವರ್ಷದಲ್ಲಿ ಅಂದರೆ ಕ್ರಿ.ಶ ೧೯೦೦ ರಲ್ಲಿ ರಾಮಸ್ವಾಮಿಯವರು ಹನ್ನೆರಡು ವರುಷ ಉಗ್ರತಪಸ್ಸು ಮಾಡಿದರು. ತಪಸ್ಸು ಮಾಡಿದ ಪುಣ್ಯಭೂಮಿಯೇ 'ಜನವಾಡ' ಈ ಪುಣ್ಯನಗರಿಯಲ್ಲಿಯೇ ದಿನಾಂಕ: ೧೪-೦೫-೧೯೧೫ ರಲ್ಲಿ ಲಿಂಗೈಕ್ಯರಾದರು.

ಶ್ರೀ ಮಠದ ಪರಿಚಯ :

ಜನವಾಡ ಗ್ರಾಮದಲ್ಲಿ ಸುಮಾರು ೮ ರಿಂದ ೯ ಸಾವಿರ ಜನ ನೆಲೆಸಿದ್ದಾರೆ. ಈ ಊರಿಗೆ ಬಸ್ಸಿನಲ್ಲಿ ಬಂದರೆ ಮೊದಲಿಗೆ ಕಾಣಿಸುವುದೇ ಶ್ರೀಮಠದ ದ್ವಾರ. ಈ ಊರಿನಲ್ಲಿ ವಿಠ್ಠಲ, ರುಕ್ಮೀಣಿ, ಬೀರೋಬಾ, ಯಲ್ಲಮ್ಮಾ, ಮರುಗುಬಾಯಿ, ಮಂದಿರವಿದ್ದು, ಶ್ರೀ ಮಹಾದೇವಸ್ವಾಮಿಯವರನ್ನು ಈ ಊರಿನ ಗ್ರಾಮದೇವರೆಂದು ಇಲಿಯ ಜನ ನಡೆದುಕೊಳ್ಳುತ್ತಾರೆ. ದ್ವಾರದಿಂದ ಒಳಗೆ ಬಂದರೆ ಮೊದಲು ಕಾಣಿಸುವುದು ಈ ಮಹಾದೇವಸ್ವಾಮಿಯವರ ಸಮಾಧಿ. ಸಮಾಧಿಯ ಎಡಭಾಗದಲ್ಲಿ ಇರುವುದೇ ಗಿರಿಮ್ಮನವರ ಸಮಾಧಿ. ಹಿಂಭಾಗದಲ್ಲಿ ಕಟ್ಟಿಸಿದ ಭವ್ಯವಾದ ಕಲ್ಯಾಣ ಮಂಟಪ, ದ್ವಾರದಿಂದ ಒಳಗೆ ಬಂದರೆ ದರ್ಶನವಾಗುವದೇ ಆದಿಶಕ್ತಿಯ ದರ್ಶನ(ಸಪ್ತಮಾತೃಕೆಯರು) ಆದಿಶಕ್ತಿಯ ಹಿಂಭಾಗದ ಬಲಭಾಗದಲ್ಲಿ ಇರುವುದೇ ರಾಮಸ್ವಾಮಯವರ ಸಮಾಧಿ. ಶ್ರೀರಾಮಸ್ವಾಮಿಯವರ ಬಲಭಾಗದಲ್ಲಿ ಕೊಶ್ವಾಲ (ಕುದುರೆ)

ಮನೆ ಮತ್ತು ಆಫಿಸು. ಎಡಭಾಗದಲ್ಲಿ ಭವ್ಯವಾದ ಪ್ರಸಾದ ನಿಲಯ ಮತ್ತು ಅಡುಗೆಮನೆ. ಶ್ರೀಮಠದ ರೂವಾರಿಯನ್ನು ಜನವಾಡ ಭಕ್ತ ಕಮೀಟಿ ವಹಿಸಿಕೊಂಡಿದ್ದು ಶ್ರೀಮಠದಲ್ಲಿ ತ್ರಿಕಾಲ ಪೂಜೆ, ನಿತ್ಯ ದಾಸೋಹ, ನಡೆಸುತ್ತಿದ್ದು ತ್ರಿಕಾಲ ಪೂಜೆಯನ್ನು ಶ್ರೀಗಳ ಸೇವಕರು (ಕಾರುಬಾರಿ) ನಡೆಸುತ್ತಾರೆ. ಶ್ರೀಯವರ ದೊಡ್ಡದಾದ ಭಾವಚಿತ್ರದ ಮುಂದೆ ಕಾಣಿಸುವದೆ ಶ್ರೀಗಳ ಗಾದಿ ಮತ್ತು ಉಪಯೋಗಿಸಿದ ಪೂಜಾ ಸಾಮಗ್ರಿಗಳು

ಶ್ರೀಮಠದ ವಿಶೇಷತೆ :

ಮಹಾದೇವ ಸ್ವಾಮಿಯವರು ನಡುಗನ್ನಡದಲ್ಲಿ ಬರೆದ ಹಸ್ತಪ್ರತಿಗಳಿವೆ. ಇದರ ಮೇಲೆ ಹೆಚ್ಚಿನ ಸಂಶೋದನೆಯಾಗಬೇಕಿದೆ. ಮಂದಿರ ಭವಿಷ್ಯವನ್ನು ಹಸ್ತಪ್ರತಿಯಲಿ ಬರೆದಿಟ್ಟಿದ್ದಾರೆ. ಭಾರತೀಯ ಸಂಸ್ಕೃತಿಯ ಪ್ರಕಾರ ಯುಗಾದಿಯೆಂದು ಒಂದು ಹಸ್ತಪ್ರತಿಯನ್ನು ಓದುತ್ತಾರೆ, (ಸಂವಸ್ತರಿಕಾ) ಆ ಒಂದು ಹಸ್ತಪ್ರತಿ ವರ್ಷದ ಭವಿಷ್ಯವನ್ನು ಹೇಳುತ್ತದೆ. ಅಂದರೆ ಮುಂದೆ ಆಗುವದನ್ನು ಮೊದಲೇ ಹೇಳಿದ ಭವಿಷ್ಯವನ್ನು ಹೇಳುತ್ತದೆ. ಅಂದರೆ ಮುಂದೆ ಆಗುವದನ್ನು ಮೊದಲೇ ಹೇಳಿದ ಮಹಾದೇವ ಸ್ವಾಮಿಯವರೇ ಭಾರತದಲ್ಲಿ ಮೊದಲಿಗರು. ಈ ಭೂತಾಯಿಯ ಮಡಿಲಲ್ಲಿ ಬೆಳೆದ ಪ್ರತಿಯೊಂದು ಹಣ್ಣು, ದವಸ, ಧಾನ್ಯ, ತರಕಾರಿ ಮೊದಲ ಶ್ರೀಮಠಕ್ಕೆ ಸಲ್ಲಿಸುತ್ತಾರೆ. ಅದನ್ನೇ ಶ್ರೀಗಳಿಗೆ ನೈವೇದ್ಯ ಮಾಡಿ ಭಕ್ತರಿಗೆ ಪ್ರಸಾದವನ್ನು ನೀಡುತ್ತಾರೆ. ಮಠದ ಭಕ್ತರು ಮತ್ತು ರೈತರು ತಾವು ಬೆಳೆದ ಬೆಳೆಯ ಹಣ ಮೊದಲು ಶ್ರೀಮಠಕ್ಕೆ ಅರ್ಪಿಸಿ ನಂತರ ಅವರು ಸ್ವೀಕರಿಸುತ್ತಾರೆ.

ಶ್ರೀ ಮಠದ ಜಾತ್ರೆ:

ಶ್ರೀಮಠದ ಜಾತ್ರೆ ಪ್ರತಿ ವರುಷ ಶಿವರಾತ್ರಿಯಾದ ಮೊದಲನೆ ಸೋಮವಾರ ನಡೆಯುತ್ತದೆ. ಇದೊಂದು ಸರ್ವಧರ್ಮ ಸಮನ್ವಯ ಜಾತ್ರೆಯಲ್ಲಿ ಒಂದು ಲಕ್ಷಕ್ಕೆ ಮೇಲ್ಪಟ್ಟು ಭಕ್ತರು ಪಾಲ್ಗೊಳುವಿಕೆ.

ಸೋಮವಾರ– ಊರ ವತಿಯಿಂದ ಹೋಳಿ ನೈವೇದ್ಯ

ಮಂಗಳವಾರ–ಪರಊರಿನಿಂದ ಬಂದ ಭಕ್ತರ ಕೋಳಿ ನೈವೇದ್ಯ

ಬುಧವಾರ – ಟ್ರಸ್ಟ ಕಮೀಟಿಯಿಂದ ಊರಿಗೆ ಮಹಾಪ್ರಸಾದ

ಗುರುವಾರ – ಆದಿಶಕ್ತಿ ಪೂಜೆ/ ಉಡಿತುಂಬುವ ಕಾರ್ಯಕ್ರಮ

ಶುಕ್ರವಾರ – ಮಹಾದೇವಸ್ವಾಮಿಯವರ ಪೂಜೆ

ಶನಿವಾರು - ಎಲ್ಲ ಭಕ್ತರ ನೈವೇದ್ಯ

ರವಿವಾರ - ಒಳ್ಳೇಯ ಎತ್ತುಗಳ ಪ್ರದರ್ಶನ ಅವುಗಳಿಗೆ ಬಹುಮಾನ

ಇಡೀ ಒಂದು ವಾರದತನಕ ನಡೆಯುವ ವಿಜೃಂಭಣೆಯ ಜಾತ್ರೆಯಲ್ಲಿ ಜೋಡೆತ್ತಿನ ಗಾಡಿ ಶರ್ಯತ್ತು, ಕುದುರೆ ಶರ್ಯತ್ತು, ಜಂಗಿಕುಸ್ತಿ, ನಾಟಕಗಳ ಪ್ರದರ್ಶನ ತಮಾಷಾ, ಬಟ್ಟೆ ವ್ಯಾಪಾರ, ಪಾತ್ರೆಗಳು, ಆಟಕೆ ಸಾಮಾನುಗಳು, ಕಬ್ಬಿಣದ ಸಾಮಾನುಗಳು ಒಂದೇ ಎರಡೇ ಒಂದು ವಾರದ ಈ ಜಾತ್ರೆ ಇಡೀ ಚಿಕ್ಕೋಡಿ ತಾಲೂಕಿನಲ್ಲಿಯೇ ಪ್ರಸಿದ್ಧಿ. ಟ್ರಸ್ಟ್ ಕಮೀಟಿಯಿಂದ ನೀರು ಸರಬರಾಜು, ಆರೋಗ್ಯ, ಶಿಕ್ಷಣ, ಕಾನ್ವೆಂಟ ಶಾಲೆ ನಡೆಸಿಕೊಂಡು ಹೋಗುತ್ತಾರೆ.

ಶ್ರೀ ಮಹಾದೇವ ಸ್ವಾಮಿಯವರು ಮಾಡಿದ ಪವಾಡಗಳು.

೧. ತುಪ್ಪವನ್ನು ನೀರಾಗಿ ಮಾಡಿದ್ದು

೨. ಕಣ್ಣು ಇಲ್ಲದ ಮಹಿಳೆಗೆ ಕಣ್ಣು ದೊರಕಿಸಿದ್ದು

೩. ಕಂಬಳಿಯ ಮೇಲೆ ಕುಳಿತು ಬೆಳ್ಳಿಬಂಗಾರ ನಾಣ್ಯಗಳನ್ನು ಭಕ್ತರಿಗೆ ಕೊಟ್ಟದ್ದು

೪. ಮಗುವಾಗಿ ಶಾಹುಮಹಾರಾಜರ ಹತ್ತಿರ ಹೋದದ್ದು

ಅನೇಕ ಪವಾಡಗಳನ್ನು ಮಾಡಿ ತಮ್ಮ ಅಂತ್ಯದ ವೇಳೆಗೆ ವೀರಬಸವೇಶ್ವರ ಚೆನ್ನಬಸವೇಶ್ವರನಾಗಿ ಹುಟ್ಟಿ ಬರುತ್ತೇನೆಂದು ಹೇಳಿ ಅಲ್ಲಿಯತನಕ ಗದ್ದುಗೆಯ ಪೂಜೆ ಮಾಡಬೇಕೆಂದು ಭಕ್ತರಿಗೆ ಸಾರಿ ಹೇಳಿದರು. ಇಲ್ಲಿಯತನಕ ಗದ್ದುಗೆಗೆ ಪೂಜೆ ಮಾತ್ರ ನೆರವೇರುತ್ತದೆ. ಇವರು ಮೋಡಿ ಲಿಪಿಯಲ್ಲಿ ಬರೆದಿರುವ ಕಾಲಜ್ಞಾನ ವಚನಗಳು ಮತ್ತು ತಾಳೆಗರಿಯ ಮೇಲೆ ಬರೆದ ಹಸ್ತ ಪ್ರತಿಗಳ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲಬೇಕಾಗಿದೆ.

ಶ್ರೀ ಮಹಾದೇವ ಸ್ವಾಮಿಯವರ ಮುಂದಿನ ಭವಿಷ್ಯವಾಣಿ

ಮಾವಿನ ಗಿಡಕ್ಕೆ ಮರಣವ ಮುಂದಿಟ್ಟು

ಕರಣದಲ್ಲಿ ಕೇಳಿರಣ್ಣಾ

ಹುಲಿಯ ಚಾವಡಿಯೊಳಗೆ ಹೊಲೆಯ

ಕುಂತಕೊಂಡ ಸಾಲತೇಲೊ ಹೋಯ್ತಣ್ಣಾ

ಸಪ್ಪದಿಯ ಸಾಮಾನು ಒಪ್ಪತ ಊಟ ನೆಲವಿಲ್ಲಣ್ಣಾ

ಒಂದ ಕೊಡಾ ನೀರು ಒಂಭತ್ತಾಣೆ ದುಡ್ಡು
ಒಮ್ಮೇ ಮಾರೋದ ಖರೇ ಅಣ್ಣಾ
ಒಬ್ಬ ಗಂಡಸೀಗೆ ಒಂಭತ್ತು ಹೆಂಡಿರಾಗುವದು
ಖರೇ ಅಣ್ಣಾ
ಹಾಲ ಮಾರಿದ್ಹಾಂಗ ನೀರ ಮಾರೀತ ಮುಂದ
ಮೇಘರಾಜ ತಡದಾವೇಳಣ್ಣಾ
ಹರಿಹರ ಭಕ್ತರ ಕೇಳುತ್ತ ಸುಳ್ಳಲ್ಲಾ
ಈ ಮಾತು ನೀರ ಮುಳುಗಿ ಹೋತು
ಜನ್ಮಕ ಜನ್ಮ ಜಡಿ ಆದಾವೇಳಣ್ಣಾ ।

ಪರಮಪೂಜ್ಯ ಶಾಂತಿ ಸಾಗರ ಮಹಾರಾಜ ೧೦೮ ಭೋಜ

ಭಾರತ ದೇಶದಲ್ಲಿ ಸಾಧು ಸಂತರಿಗೆ ಕೊರತೆಯಿಲ್ಲ. ಈ ದೇಶದಲ್ಲಿ ಅನೇಕ ಪಂತ, ಜಾತಿ, ಧರ್ಮದವರು ಒಂದೇ ಕಡೆ ವಾಸಿಸುತ್ತಾರೆ. ಅದರಲ್ಲಿ ಅತಿ ಪ್ರಾಚೀನ ಧರ್ಮ ಜೈನ, ಜೈನಧರ್ಮದಲ್ಲಿ ಪ್ರಥಮ ತೀರ್ಥಂಕರ ಭಗವಾನ ಆದಿನಾಥರ ನಂತರ ೨೪ ಜನ ತೀರ್ಥಂಕರರ ಜನ್ಮ ಉತ್ತರ ಭಾರತದಲ್ಲಿಯೇ ಆಗಿದೆ. ಆದರೆ ಶಾಂತಿ ಸಾಗರ ಮಹಾರಾಜರ ಜನ್ಮ ದಕ್ಷಿಣ ಭಾರತದಲ್ಲಿ ಶಾಂತಿಸಾಗರ ಮಹಾರಾಜರು ಜೈನಧರ್ಮದ ಮುನಿ ಪರಂಪರೆಯನ್ನು ಪುನರುಜ್ಜೀವನಗೊಳಿಸಿದವರು. ಪ್ರಥಮಾಚಾರ್ಯ ರಕ್ಷಣೆಯ ಸಲುವಾಗಿ ಜೀವದ ಹಂಗುದೊರೆದರು.

ಚಿಕ್ಕೋಡಿಯಿಂದ ಸುಮಾರು ೨೦ ಕಿ.ಮೀ ಅಂತರದಲ್ಲಿರುವ ಭೋಜ ಗ್ರಾಮವು ಸುಮಾರು ೭ ರಿಂದ ೮ ಸಾವಿರ ಜನಸಂಖ್ಯೆ ಹೊಂದಿದೆ. ಈ ಊರಿನಲ್ಲಿ ಪ್ರತಿಶತ ೬೦% ರಷ್ಟು ಜೈನಧರ್ಮಿಯರಿದ್ದಾರೆ. ಶಾಂತಿಸಾಗರರ ತಂದೆ ತಾಯಿ ಭೀಮಗೌಡಾ ಮತ್ತು ಸತ್ಯವತಿ. ಇವರ ಜನ್ಮ ೧೮೭೨ ಜೈನಧರ್ಮದಲ್ಲಿ ಮುನಿ ಪರಂಪರೆ ಕೊನೆಗೊಂಡಿತ್ತು. ಆ ಸಮಯದಲ್ಲಿ ತೇಜೋಮಯ ಭಾಸ್ಕರ ಇವರ ಉದಯವಾಯಿತು. ಅಖಿಲ ಭಾರತದಲ್ಲಿ ಜ್ಞಾನ, ಆತ್ಮಾನುಭೂತಿ, ಮತ್ತು ಮೋಕ್ಷದ ಮಾರ್ಗ ತೋರಿಸಿದರು. ಇವರ ಗುರು ದೇವೆಂದ್ರಕೀರ್ತಿ ೮೩ ನೇ ವಯಸ್ಸಿನಲ್ಲಿ ಸಲ್ಲೇಖನ ವ್ರತ ತೆಗೆದುಕೊಂಡು ೧೯೫೫ ರಲ್ಲಿ ದೇಹತ್ಯಾಗ ಮಾಡಿದರು.

ಇವರು ೯ ವರ್ಷದವರಿದ್ದಾಗ ಇವರ ಮದುವೆ ೬ವರ್ಷದ ಸರಸ್ವತಿ ಜೊತೆ ನೆರವೇರಿತು. ಮದುವೆಯಾದ ಆರು ತಿಂಗಳಿನಲ್ಲಿಯೇ ಹೆಂಡತಿಯ ಮರಣ ಅಲ್ಲಿಂದಲೇ ವಿರಕ್ತಿ. ಅವರೇ ರಚಿಸಿದ ಒಂದು ಕವಿತೆ ಹೀಗಿದೆ.

ಬೀಸೊ ದೊಣ್ಣೆಯಲ್ಲಿ ನನಗೆ ಭಗವಂತ ಕಂಡ

ಪಕ್ಷಿಗಳೊಳಗೆ ಅರಿಹಂತ ಕಂಡ

ಪಕ್ಷಿಗಳಿಗಿಲ್ಲ ಕುದುರೆ ಗಾಡಿ ಎತ್ತಿನ ಗಾಡಿ

ಈ ಹೊತ್ತು ಇಲ್ಲಿ ತಿಂದು ನಾಳೆ ಅಲ್ಲಿ ತಿಂದು

ಸ್ವಾತಂತ್ರ್ಯ ಸೌಖ್ಯದಲ್ಲಿ ದಂಗಾಗಿದ್ದೇನೆ ಅರಿಹಂತಾ;

ಗುಟುಕು ನೀರು ಸಾಕು ಪಕ್ಷಿಯ ಚುಂಚಿನೊಳಗಿರುವಷ್ಟೆ

ಆಹಾರ ಸಾಕು;

ಆಕಾಶ ಅಂಗಳದಲ್ಲಿ ಇಡಿ ದಿನ ತಿರುಗಾಡಿ

ಮರದ ಮಂಚದ ಮೇಲೆ ಮಲಗಿ

ಗಾಳಿಯಲ್ಲಿ ಬಿಸಿಲಲ್ಲಿ ಮಳೆಯಲ್ಲಿ ಚಳಿಯಲ್ಲಿ

ನನ್ನ ದೇಹದೊಳಗೆ ಸಾಧು ದಿಂಗಬರ ಕಂಡೆ

ಇಂತಹ ಶಾಂತಿ ಸಾಗರರ ಬದುಕಿನಲ್ಲಿ ಶಾಂತಿಯಿರಲಿಲ್ಲ. ತಂಗಿಯ ವಿವಾಹವಾಗಿತ್ತು. ಮದುವೆಯಾದ ಸಹೋದರಿ ಕೃಷ್ಣಾಬಾಯಿಯ ಗಂಡ ಕೇವಲ ಒಂಭತ್ತನೆ ತಿಂಗಳಿಗೆ ಮರಣ ಹೊಂದಿದ್ದರು. ಆದರೆ ಅವಳ ಮದುವೆಯಾಗಲಿಲ್ಲ. ಶಾಂತಿ ಸಾಗರರ ಮದುವೆ ಪ್ರಸ್ತಾಪ ಬಂದಾಗ ನನ್ನ ಸಂಸಾರದಲ್ಲಿ ಸುಖವಿತ್ತಿದ್ದರೆ ತನ್ನ ಹೆಂಡತಿ ಬದುಕಿರುತ್ತಿದ್ದಳು. ಹೆಚ್ಚಿಗೆ ಒತ್ತಾಯ ಮಾಡಿದರೆ ಜೈನದೀಕ್ಷೆ ತೆಗೆದುಕೊಂಡು ಮುನಿಯಾಗಿ ಹೋಗುತ್ತೇನೆಂದಾಗ ಅವರ ತಾಯಿಗೆ ದುಃಖವಾಗಿ ಆತನ ಕಡೆಯಿಂದ ವಚನ ತೆಗೆದುಕೊಂಡರು. ತಾವು ದೇಹತ್ಯಾಗ ಮಡುವತನಕ ಎಲ್ಲಿಗೂ ಹೋಗಬಾರದೆಂದು.

ಶಾಂತಿಸಾಗರ ಮೊದಲ ಹೆಸರು ಸಾತಗೌಡ ಇವರ ಸ್ನೇಹಿತ ಲಿಂಗಾಯತ ಧರ್ಮದ ರುದ್ರಪ್ಪಾ ಇವರ ಸಹವಾಸದಿಂದ ಜೈನ ಧರ್ಮದ ನಿತ್ಯನಿಯಮಗಳನ್ನು ಮಾಡುತ್ತಿದ್ದರು.

ಶಾಂತಿ ಸಾಗರರು ಹದಿನೆಂಟನೆಯ ವಯಸ್ಸಿಗೆ ಹಾಸಿಗೆ ತ್ಯಾಗ, ಇಪ್ಪತ್ತೈದನೇಯ ವಯಸ್ಸಿಗೆ ವಾಹನ ತ್ಯಾಗ, ಮೂವತ್ತೇರಡನೆಯ ವಯಸ್ಸಿಗೆ ಎಣ್ಣೆ ತುಪ್ಪ ತ್ಯಾಗ ಮಾಡಿದರು.

ಮನೆಯಲ್ಲಿ ಯಾರಿಗೂ ಹೇಳದೆ ಕೃಷ್ಣಾಬಾಯಿಯನ್ನ ಸ್ತವನಿಧಿಗೆ ಕರೆದುಕೊಂಡು ಅಲ್ಲಿ ದರ್ಶನ ಪಡೆದು ಉತ್ತರಕ್ಕೆ ೧೦೫ ದೇವೇಂದ್ರ ಕೀರ್ತಿ ಮಹಾರಾಜರಿಂದ ದೀಕ್ಷೆ ತೆಗೆದುಕೊಂಡು ಶಿಷ್ಯರಾದರು. ಹೀಗೆ ದೇಶ ಸಂಚಾರ ಮಾಡುತ್ತ ಜೈನ ಧರ್ಮವನ್ನು ಪುನರುಜ್ಜೀವನಗೊಳಿಸಿ ಪ್ರಥಮಾಚಾರ್ಯರೆನಿಸಿದರು.

ಜನವಾಡ ಜಾತ್ರೆಯಲ್ಲಿ ಜಾನುವಾರುಗಳ ಜಾತ್ರೆ

ಇಂದಿನ ಆಧುನಿಕ ಕಾಲದ ಭರಾಟೆಯ ನಡುವೆಯಂತೂ ಗಡಿಭಾಗದ ಜಾತ್ರೆಗಳಲ್ಲಿ ರೈತರಿಗೆ ಬೆನ್ನೆಲುಬಾಗಿ ದುಡಿಯುವ ಎತ್ತುಗಳು ಇಂದು ಲಕ್ಷ ಲಕ್ಷ ರೂಗಳಿಗೆ ಮಾರಾಟವಾಗುತ್ತಿರುವುದು ಗಡಿಭಾಗದ ರೈತರ ಪ್ರಾಣಿ ಪ್ರಿತಿಗೆ ಸಾಕ್ಷಿಯಾಗಿದೆ.

ಹೌದು. ಇದಕ್ಕೆ ನಿದರ್ಶನವೆಂಬಂತೆ ಯಕ್ಸಂಬಾ ಸಮೀಪದ ಸುಕ್ಷೇತ್ರ ಜನವಾಡದ ಆರಾಧ್ಯದೈವ ಶ್ರೀ ಮಹಾದೇವ ಸ್ವಾಮಿ ಜಾತ್ರೆಯಂಗವಾಗಿ ಏರ್ಪಡಿಸಲಾದ ಜಾನುವಾರು ಜಾತ್ರೆ ಗಡಿಭಾಗದ ರೈತರ ಆಕರ್ಷಣೆಯ ಕೇಂದ್ರವಾಗಿದೆ. ದೂದಂಗಂಗಾ ನದಿ ತೀರದಲ್ಲಿರುವ ಜನವಾಡದ ಶ್ರೀ ಮಹಾದೇವ ಸ್ವಾಮಿ ಸ್ಥಾಪಿಸಿದ ಧರ್ಮದ ಮಠ ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಗಳ ಭಕ್ತರಿಗೆ ಆರಾಧ್ಯ ದೈವನಿಧಿಯಾಗಿದೆ. ಮಹಾದೇವ ಸ್ವಾಮಿ ಧರ್ಮದ ಮಠ ಧರ್ಮ ಸಮನ್ವಯ ಕೇಂದ್ರವಾಗಿದೆ.

ಜಾತ್ರೆ ಅಂಗವಾಗಿ ನಡೆಯುವ ಜಾನುವಾರು ಜಾತ್ರೆ ಜನಮನ ಸೆಳೆಯುತ್ತದೆ. ಈ ಜಾತ್ರೆಯಲ್ಲಿ ಕರ್ನಾಟಕ, ಮಹಾರಾಷ್ಟ್ರದ ೧೦ ಸಾವಿರಕ್ಕೂ ಹೆಚ್ಚು ಜಾನುವಾರುಗಳು ಹಾಗೂ ೩೦೦೦ ಕ್ಕೂ ಹೆಚ್ಚು ಜೋಡೆತ್ತುಗಳು ಪಾಲ್ಗೊಂಡಿದೆ. ಜಾನವಾರುಗಳ ಭರ್ಜರಿ ಮಾರಾಟದಿಂದ ಲಕ್ಷಾಂತರ ರೂ.ವಹಿವಾಟು ನಡೆದಿದೆ. ಜಾತ್ರೆಯಲ್ಲಿ ೫೦ಲಕ್ಷ ರೂಗಳಿಗೂ ಹೆಚ್ಚು ವ್ಯಾಪಾರವಾಗಿದೆ ಎಂದು ಅಂದಾಜಿಸಲಾಗಿದೆ.

ಖಿಲಾರಿ, ಖರಸುಂಡಿ, ಕರಜನ್ನಿ, ಜವಾರಿ, ಮೈಸೂರಿ, ಜರ್ಷಿ ಎತ್ತುಗಳು ಜಾತ್ರೆಯಲ್ಲಿ ಪಾಲ್ಗೊಂಡಿವೆ. ಒಂದು ಹಲ್ಲು, ಎರಡು ಹಲ್ಲು, ಆರು ಹಲ್ಲು ಸೇರಿದಂತೆ ಎತ್ತುಗಳ ವಯಸ್ಸಿನ ಮೇಲೆ ವ್ಯಾಪಾರ ನಡೆಯುತ್ತಿದೆ. ಒಂದು ಎತ್ತಿನ ಅತ್ಯಂತ ಕಡಿಮೆ ಬೆಲೆ ಎಂದರೆ ೩೦ ಸಾವಿರ ರೂ. ಹಾಗೂ ಅತಿ ಹೆಚ್ಚು ಅಂದರೆ ೨.೫ ಲಕ್ಷ ರೂ ಗಳಿಗೆ ಎತ್ತುಗಳು

ಮಾರಾಟವಾಗಿವೆ. ಎತ್ತುಗಳ ಮಾರಾಟ ಮತ್ತು ನಾನಾ ಜಾನುವಾರುಗಳ ಮಾರಾಟದಿಂದ ಅಂಗಡಿ ಮಾಲೀಕರು, ಹೊಟೇಲ್ ಮಾಲೀಕರು, ಹಾಗು ಜಾನುವಾರುಗಳಿಗೆ ಶೃಂಗಾರ ಮಾಡುವವರಿಗೆ ಭರ್ಜರಿ ವ್ಯಾಪಾರವಾಗಿದೆ. ಜಾತ್ರೆಯ ಅಂಗವಾಗಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿದೆ.

ಚಿಕ್ಕೋಡಿಯ ಪರಟಿ ನಾಗಲಿಂಗೇಶ್ವರರ ಜಾತ್ರೆ :

ಕರ್ನಾಟಕದ ಗಡಿನಾಡಿನ ಕೋಟೆ, ಬೆಳಗಾವಿ ಇದಕ್ಕೆ ತನ್ನದೆಯಾದ ಶೈಕ್ಷಣಿಕ ಮಹತ್ವವಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ವಿಸ್ತೀರ್ಣತೆ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ರಾಜ್ಯದಲ್ಲಿಯೇ ದೊಡ್ಡ ತಾಲೂಕು ಇದು ತಾಲೂಕು ಕೇಂದ್ರವಾಗಿ ತನ್ನ ಹಲವು ವಿಶೇಷತೆಗಳಿಂದ ಗಮನವನ್ನು ಸೆಳೆಯುತ್ತದೆ. ವಾಯುವ್ಯ ಭಾಗದಲ್ಲಿರುವ ಚಿಕ್ಕೋಡಿ ೧೮೧೮ರ ವರೆಗೆ ಮರಾಠಾ ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿತ್ತು. ಅನಂತರ ಬ್ರಿಟಿಷರ ಆಡಳಿತಕ್ಕೊಳಪಟ್ಟಿತು. ೧೮೩೬ ರಲ್ಲಿ ಬೆಳಗಾವಿ ಜಿಲ್ಲಾ ರಚನೆಯೊಂದಿಗೆ ಇದು ತಾಲುಕಾ ಸ್ಥಾನಮಾನಗಳನ್ನು ಪಡೆಯಿತು. ಅಂದಿನಿಂದ ಇಂದಿನವರೆಗೆ ಇದು ಹಲವಾರು ಬದಲಾವಣೆಗಳೊಂದಿಗೆ ಅಭಿವೃದ್ಧಿ ಪಥದಲ್ಲಿ ಸಾಗಿಬಂದು ಇತ್ತೀಚೆಗೆ ಜಿಲ್ಲಾ ಸ್ಥಾನಮಾನಗಳನ್ನು ಪಡೆದುಕೊಂಡಿದೆ.

"ಚಿಕ್ಕೋಡಿ" ಈ ಪದದ ನಿಷ್ಪತ್ತಿಯನ್ನು ಹೇಳಲು ಈಗಿರುವ ಐತಿಹಾಸಿಕ ದಾಖಲೆಯೆಂದರೆ ೧೨೪೬ ರ ಸುಗಂಧವತಿ (ಸೌಂದತ್ತಿ) ರಟ್ಟರ ಶಾಸನ ಇದರಲ್ಲಿ ಚಿಕ್ಕೋಡಿಯನ್ನು "ಚಿಕವಾಡಿ" ಎಂದು ಗುರುತಿಸಲಾಗಿದೆ. ಇದೆ ಚಿಕವಾಡಿ– ಚಿಕ್ವಾಡಿ– ಚಿಕ್ಕೋಡಿ ಆಗಿರಬಹುದೆಂದು ಹಲವರ ಅಭಿಮತ "ವಾಡಿ" ಎಂದರೆ ಸಣ್ಣ ಊರು ಎಂದರ್ಥ. ಈ ಭಾಗದಲ್ಲಿ ಹಲವಾರು ದೊಡ್ಡದೊಡ್ಡ ಊರುಗಳ ಪಕ್ಕದಲ್ಲಿ ಅದೇ ಹೆಸರಿನ ವಾಡಿಗಳಿರುವದನ್ನು ಕಾಣುತ್ತೇವೆ.

ಶಂಭಾ ಜೋಶಿಯವರ ಪ್ರಕಾರ ಚಿಕ್ಕ+ಕೋಡಿ ಎಂದರೆ ಚಿಕ್ಕದಾಗಿ ಹರಿಯುವ ನೀರು. ಚಿಕ್ಕೋಡಿಯ ಪಕ್ಕದಲ್ಲಿಯೇ, ಹಿರೇಕೋಡಿ, ಬಾವನಕೋಡಿ, ಬಾಣತಿಕೋಡಿಗಳಿವೆ. ನಗರ ಮಧ್ಯದಲ್ಲಿ ಹರಿಯುವ ಸಣ್ಣ ನೀರಿನ ಹಳ್ಳವಿದೆ. ಇದಕ್ಕೆ "ಚಿಕುತ್ರಾ" ಎಂಬ ಹೆಸರಿನ ದಾಖಲೆಯಿದೆ ಇದೂ ಕೂಡಾ ಈ ಹೆಸರಿಗೆ ದಾಖಲೆಯಾಗಿರಬಹುದು.

ಚಿಕ್ಕೋಡಿಯು ಹಳೆಯ ಕಾಲದ ಹಲವಾರು ಮಂದಿರ, ಮಠ, ಗುಡಿ, ಮಸಿದಿ, ಬಸದಿ ಮತ್ತು ದರ್ಗಾಗಳನ್ನು ಹೊಂದಿದೆ. ನಗರ ಮಧ್ಯದ ಮಹಾದೇವ ಮಂದಿರವು ಅತ್ಯಂತ ಪುರಾತನವಾಗಿದ್ದು ಅಲ್ಲಿ ಮೂರು ಸ್ಥಾವರಲಿಂಗಗಳು ಸ್ಥಾಪಿತಗೊಂಡಿವೆ. ನೂರಾರು ವರ್ಷಗಳ ಹಿಂದೆ ವೆಂಕಟೇಶ್ವರ ಮಂದಿರ, ದತ್ತ ಮಂದಿರ, ಸಾಯಿಬಾಬಾರ ಮದಿರಗಳಿವೆ.

ಚಾಲುಕ್ಯ ಶೈಲಿಯಲ್ಲಿರುವ ಪುರಾತನ ಪ್ರಭು ದೇವರ ದೇವಾಲಯವಿದೆ. ಇದನ್ನು ಗ್ರಾಮದೇವರು ಎನ್ನುವರು. ವಾಡಾದ ಹಿಂದೆ ಇನ್ನೊಂದು ಪ್ರಭುದೇವರ ಗುಡಿಯಿದೆ. ಚಿಕ್ಕೋಡಿಯ ಸಂಪಾದನಾ ಚರಮೂರ್ತಿ ಮಠ ಹಾಗೂ ಸಾವಳಿಗಿಯ ಮಠಗಳು ಭಾವೈಕ್ಯತೆಯ ಕೇಂದ್ರಗಳಾಗಿ ಮೆರೆಯುತ್ತವೆ.

ಇದೂ ಅಲ್ಲದೇ ಮರಡಿ ಬಸವಣ್ಣ, ವಿಠ್ಠಲ ಮಂದಿರ, ದಾನಲಿಂಗ, ಮುರಸಿದ್ದೇಶ್ವರ, ಬನಶಂಕರಿ, ಎಲ್ಲಮ್ಮಾ, ಮರಗುಬಾಯಿ, ಚಂದ್ರಕೋಡಿ ಗುಡ್ಡದ ಸ್ವಯಂಭೂ ಗಣಪತಿ, ನವನಾಥ ಮಂದಿರ, ಮೂರುನೂರು ವರ್ಷಗಳಷ್ಟು ಹಳೆಯದಾದ ಪಾರ್ಶ್ವನಾಥ, ಆದಿನಾಥ ಬಸದಿಗಳಿವೆ. ಶ್ರದ್ಧಾ ಕೇಂದ್ರಗಳಾಗಿ ಅನೇಕ ಮಸೀದಿ ಮತ್ತು ದರ್ಗಾಗಳು ಇಲ್ಲಿ ನೆಲೆಗೊಂಡಿವೆ.

ಪರಟಿ ನಾಗಲಿಂಗೇಶ್ವರರ ಜನನ :

ಚಿಕ್ಕೋಡಿಯಲ್ಲಿ ಹಾಲುಮತದಾರರ ಸಂಖ್ಯೆ ಗಣನೀಯವಾಗಿದೆ. ಕುರಿ ಸಾಕಾಣಿಕೆ ವ್ಯವಸಾಯಗಳನ್ನೆ ಅವಲಂಭಿಸಿರುವ ಬಹುಸಂಖ್ಯಾತ ಜನರು ತೋಟ ಪಟ್ಟಿಗಳಲ್ಲಿ, ಹೊರ ಸಂಚಾರದಲ್ಲಿ ಇರುವುದುಂಟು, ಇನ್ನುಳಿದವರು ನಗರದ ಕುರುಬರ ಗಲ್ಲಿಯಲ್ಲಿ ಇದ್ದಾರೆ. ಈ ಜನರ ಆರಾಧ್ಯ ದೈವವಾದ ಮುರಸಿದ್ಧೇಶ್ವರ ದೇವರ ಹಳೆಯ ಭವ್ಯ ದೇವಾಲಯವಿದೆ. ಪ್ರತಿ ರವಿವಾರ ರಾತ್ರಿಯಿಡೀ ಡೊಳ್ಳಿನ ಹಾಡು, ಕೈಪಟ್ಟು ಕಾರ್ಯಕ್ರಮಗಳನ್ನು ನಡೆಸುವುದುಂಟು. ಈ ಓಣಿಯ ಹಾಲುಮತಸ್ಥರ ಮನೆತನಗಳಲ್ಲಿ "ಬತ್ತ್ಯಾಗೋಳ" ಮನೆತನ ಒಂದು ಇಲ್ಲಿಯ ಜಕ್ಕಪ್ಪ ಹಾಗೂ ಈರವ್ವಳು ನಾಗಲಿಂಗೇಶ್ವರರ ತಂದೆ ತಾಯಿಗಳು.

ವಿರಾಗಿಯದ ನಾಗಪ್ಪ :

ಬಾಲಕ ನಾಗಪ್ಪನ ನಡೆನುಡಿಗಳಲ್ಲಿ ಅವನ ವಿಭಿನ್ನತೆ ಒಡೆದು ಕಾಣತೊಡಗಿತು. ಮನೆತನದ ಉದ್ಯೋಗವಾಗಲಿ ಬಂಧು ಬಳಗದವರ ಯಾವ ಬಂದನವಾಗಲಿ ಅವನ ಇರುವಿಕೆಯನ್ನು ಭಾಗಿಸಲಿಲ್ಲ. ನಾಗಪ್ಪರ ಮನಸ್ಸು ದಿನಗಳೆಂದತೆ ಇಹದೆಡೆಗಿಂತ ಪರದೆಡೆಗೆ ಸಾಗುತ್ತಿತ್ತು. ಹೊರಗಡೆ ಹೋದ ನಾಗಪ್ಪ ಮನೆಗೆ ಮರಳಲು ತಡಮಾಡತೊಡಗಿದ ಬರಬರುತ್ತಾ ಮನೆಗೆ ಬರುವುದನ್ನು ಮರೆಯತೊಡಗಿದ. "ಚಿತ್ತದ ಪ್ರಸನ್ನತೆ ಉಂಟಾದರೆ ಅವನ ಸಮಸ್ತ ದುಃಖಗಳ ನಾಶವು ಉಂಟಾಗುತ್ತದೆ" ಎಂಬ ಗೀತೋಕಶಕ್ತಿಯಂತೆ ನಾಗಪ್ಪರು ವಿರಾಗಿಯಾಗಿ, ಪ್ರಸನ್ನಚಿತ್ತರಾಗಿ ಭಗವಂತನ ಚಿಂತನೆಯಲ್ಲಿಯೇ ಕಾಲಕಳೆಯ ತೊಡಗಿದರು.

ಮಸ್ತಕದಲ್ಲಿ ಗುರುವಿನ ಹಸ್ತ

ಕ್ರಿ.ಶ. ೧೮೪೯ ರಲ್ಲಿ ದಿವ್ಯಜ್ಞಾನಿಗಳೂ ಮಹಾಜ್ಞಾನಿಗಳೂ ಚಿಕ್ಕೋಡಿ ತಾಲೂಕಿನ ದತ್ತವಾಡದ ಶ್ರೀ ಸದ್ಗುರು ಸಮರ್ಥ ಬಾಬಾ ಮಹಾರಾಜರು ಚಿಕ್ಕೋಡಿಗೆ ಆಗಮಿಸಿದರು.

ಆ ವೇಳೆಯಲ್ಲಿ ಆಕಸ್ಮಿಕವಾಗಿ ಬಾಬಾರ ಭೇಟಿಯಾಯಿತು. ಅಲಾವಧಿಯಲ್ಲಿಯೇ ನಾಗಪ್ಪರ ಸಂಗ ಬಾಬಾರವರ ಅಂತಃಕರಣವನ್ನು ಕಲಕಿತು. ನಾಗಪ್ಪನು ಬಾಬಾರನ್ನು ಗುರುವನ್ನಾಗಿ ಸ್ವೀಕರಿಸುವಂತೆ ಅವರ ಅಂತಃಕರಣ ಪ್ರಚೋದಿಸಿತು. ಗುರುಶಿಷ್ಯರ ಸಂಬಂದ ಉಂಟಾಗಿ ತತ್ವೋಪದೇಶದ ಜೊತೆಗೆ ಬೋಧನೆ ಆಯಿತು. ಅನಂತರ ಸಹಜವಾಗಿ ಯೋಗಕ್ಷೇಮದ ವಿಚಾರ ನಡೆಯಿತು. ಈ ವೇಳೆಯಲ್ಲಿ ನಾಗಪ್ಪರು ಹಗಲಿರುಳು ತನ್ನನ್ನು ಕಾಡುತ್ತಿದ್ದ ಹಸಿವೆಯ ಸಮಸ್ಯೆಯನ್ನು ಪ್ರಸ್ತಾಪಿಸಿದರು.

ದಿವ್ಯಜ್ಞಾನಿಗಳಾದ ಸದ್ಗುರು ಬಾಬಾರವರಿಗೆ ಪರಟಿ ನಾಗಪ್ಪರ ಹಸಿವೆಯ ಕಾರಣ ಅರಿವಿಗೆ ಬಂದು ಅವರು ಆತನ ಪೂರ್ವಜನ್ಮದ ವೃತ್ತಾಂತವನ್ನೆಲ್ಲಾ ತಿಳಿಸಿದರು. ನಾಗಪ್ಪ ನೀನು ಹಿಂದಿನ ಜನ್ಮದಲ್ಲಿ ಅನ್ನದಾನ, ಅನ್ನಸಂತರ್ಪಣೆ ಮಾಡದೆ ಕೇವಲ ಅನುಷ್ಠಾನ, ತಪಸ್ಸುಗಳನ್ನು ಶಾಸ್ತ್ರ ಶ್ರವಣಾದಿಗಳನ್ನು ಮಾಡಿರುವಿ. ನೀನು ಈ ಜನ್ಮದಲ್ಲಿ ಅನ್ನ ಅನ್ನವೆಂದು ಹಸಿವೆಯಿಂದ ಬಳಲಬೇಕಾಗಿದೆ. ಹೀಗೆ ನಾಗಪ್ಪನಿಗೆ ಸಮಸ್ಯೆಯಾಗಿ ಕಾಡುತ್ತಿದ್ದ ಹಸಿವೆಯ ಪೂರ್ವಾಪರಗಳನ್ನು ತಿಳಿಸಿ ಹೇಳಿದರು.

ಮುಂದೆ ಒಂದು ದಿನ ನಾಗಪ್ಪನು ಸದ್ಗುರು ಬಾಬಾರ ಬಳಿಬಂದು ನನಗೆ ನಿಮ್ಮ ಜೊತೆ ಸ್ವಲ್ಪ ಮತನಾಡುವದಿದೆ ಎಂದು ಮನದ ಬಯಕೆಯನ್ನು ಮುಂದಿಟ್ಟರು. ಆಗ ಅವರು ಇದಕ್ಕೆ ತಕ್ಕ ಸಮಯವನ್ನು ನೀನೆ ನಿರ್ಧರಿಸಿಕೊಂಡು ಬಾ ಎಂದು ಹೇಳದರು. ಆಗ ನಾಗಪ್ಪರು ರಾತ್ರಿ ನೊಣದ ಕಣ್ಣು ಮುಚ್ಚಲಿ ಆ ಮೇಲೆ ಬರುತ್ತೇನೆಂದು ಹೇಳಿ ಹೊರಟು. ರಾತ್ರಿ ನೊಣದ ಕಣ್ಣು ಮುಚ್ಚಲಿ ಎಂದರೆ ನೊಣಕ್ಕೆ ಸದೃಶರಾದ ಈ ಲೋಕದ ಜನರು ರಾತ್ರಿ ಮಲಗಲಿ ಎಂಬುದು ಅವನ ಮಾತಿನ ಒಳಾರ್ಥವಾಗಿತ್ತು. ಜ್ಞಾನಿಗಳ ಭಗವತ ಚಿಂತನಕ್ಕೆ ಶಾಂತವಾತಾವರಣ ಅವಶ್ಯವಲ್ಲವೇ ಆದ್ದರಿಂದ ಗುರುವಿನ ಜೊತೆ ಚಿಂತನೆಗೆ ಇಂತಹ ಸೂಕ್ತ ಸಮಯವನ್ನು ಆಯ್ದುಕೊಂಡನು.

ತನ್ನ ಮನದ ಬಯಕೆಯನ್ನು ನಾಗಪ್ಪರು ಒಂದು ದಿನ ಮಧ್ಯಾತ್ರಿ ಸದ್ಗುರು ಬಾಬಾರ ಹತ್ತಿರ ಮಾತನಡಲು ಬಂದರು ಅವರೀರ್ವರು ಕೂಡಿಕೊಂಡು ಹಾಳು ದೇಗುಲವೊಂದಕ್ಕೆ ಬಂದು; ಜಗವೆಲ್ಲಾ ಮಲಗಿರಲು ಇವರಿಬ್ಬರೇ ಕುಳಿತುಕೊಂಡು ಬೆಳಗಿನವರೆಗೆ ವಿವಿಧ ವಿಷಯಗಳನ್ನು ಚರ್ಚಿಸಿದರು. ನಾಗಪ್ಪ ತಮ್ಮ ಆಂತರಿಕ ಜ್ಞಾನದ ಹಸಿವೆಯನ್ನೆಲ್ಲಾ ನಿವೇದಿಸಿಕೊಂಡರು. ಗುರು ತಮ್ಮ ಶಿಷ್ಯ ನಾಗಪ್ಪರಿಗೆ " ನಿಮ್ಮ ಹಸ್ತವನ್ನು ಇಲ್ಲಿ ತರ್ರಿ" ಎಂದು ಗೌರವಸೂಚಕವಾಗಿ ಸಂಬೋಧಿಸುತ್ತ ಅವರ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಬಂದು ನಾಡಿಯನ್ನು ಹಿಡಿದು ಕಣ್ಣು ಮುಚ್ಚಿ ಧ್ಯಾನಿ ಸುತ್ತ ನಿಧಾನವಾಗಿ ಒತ್ತಗೊಡಗಿದರು. ನಾಗಪ್ಪನವರ ಕೈನಾಡಿಯನ್ನು ಒತ್ತಿದಂತೆಲ್ಲಾ ಅವರ ಹೊಟ್ಟೆಯ ಹಸಿವೆಯ ಬಾಧೆ

ಹಿಂಗತೊಡಗಿತು. ಅವರಿಗೆ ಅವರ್ಣನೀಯವಾದ ಅನುಭವ ಆಗತೊಡಗಿತು. ಕೊನೆಗೆ ಹೊಟ್ಟೆಯೇ ತುಂಬಿದಂತಾಗಿ ಸಮಧಾನವಾಯಿತು.

ನಾಗಪ್ಪರಲ್ಲಿ ಜ್ಞಾನಿಯ ಎಲ್ಲ ಲಕ್ಷಣಗಳು ನೆಲೆಗೊಂಡಿದ್ದವು. ಇದಿರಂದಾಗಿ ಸಾರ್ವಜನಿಕರಲ್ಲಿ ನಾಗಪ್ಪರವನ್ನು ಕುರಿತಾಗಿ ಈ ಮೊವಲಿನ ಭಾವನೆಗಳು ಬದಲಾಗಿ ಅವರತ್ತ ಗೌರವತ್ವ ವ್ಯಕ್ತವಾಗತೊಡಗಿತು. ಜನರ ಗೌರವಾದರಗಳು ಭಕ್ತಿಯತ್ತ ಮುಖ ಮಾಡತೊಡಗಿದ್ದವು. ಅದರಂತೆ ಪರಟಿ ನಾಗಪ್ಪನವರು ಈ ಜಗದ ಮಧ್ಯ ಹುಚ್ಚು ವೇಷದಲ್ಲಿದ್ದರು, ಹುಚ್ಚನಂತೆ ಕಂಡರೂ ಅವರು ಮಹಾದಿವ್ಯಜ್ಞಾನಿಗಳಾಗಿದ್ದರು. ಅವರು ಪಡೆದಿದ್ದ ನೋಟ ಸಿದ್ಧಿ, ವಾಕಸಿದ್ಧಿ, ಹಸ್ತಸಿದ್ಧಿ, ಪಾದಸಿದ್ಧಿ, ಮತ್ತು ಪ್ರಸಾದ ಸಿದ್ಧಿಗಳು ಅವರಿಗೆ ಅರಿವಿಲ್ಲದಂತೆಯೇ ಜನರಿಗೆ ವಿವಿಧ ಸಂದರ್ಭ ಸನ್ನವೇಶ ಮತ್ತು ಘಟನೆಗಳ ಕಾಲದಲ್ಲಿ ಗೋಚರವಾಗತೊಡಗಿದ್ದವು.

ಕೊನೆಗೊಂಡ ಇಹಲೋಕ ಯಾತ್ರೆ

ಕುರುಬರ ಜಾತಿಯಲ್ಲಿ ನಾಗಪ್ಪ ಹುಟ್ಟಿದರು ಗುರುವಿನ ಅಂತಃಕರಣದಿಂದ ಅಜ್ಞಾನದ ಕತ್ತಲೆಯನ್ನು ಕಳೆದುಕೊಂಡು, ಆತ್ಮಜ್ಞಾನದ ಬೆಳಕನ್ನು ಪಡೆದು ಭಗವಂತನ ಸಾಕ್ಷಾತ್ಕಾರಕ್ಕೆ ಪಕ್ಕಾಗಿದ್ದರು, ಸಾಮಾನ್ಯರಾಗಿ ಜನಿಸಿದ ನಾಗಪ್ಪನವರು ಅಸಾಮಾನ್ಯರಾಗಿ ಬೆಳೆದು ಇದೀಗ ಅವರೊಬ್ಬ ಅಪ್ರತಿಮ, ಅದ್ಭುತ ಶಕ್ತಿಯಾಗಿ ಹೊರಹೊಮ್ಮಿದರು. ಜಾತಿ ಭೇದಗಳೆನ್ನದೆ ತಮ್ಮಲ್ಲಿಗೆ ಬರುತ್ತಿದ್ದ ಪ್ರತಿಯೊಬರನ್ನು ಅವರು ತುಂಬು ಹೃದಯದಿಂದ ಬೀಳ್ಕೊಡುತ್ತಿದ್ದರು.

ಹೀಗೆ ಪರಟಿ ನಾಗಪ್ಪನವರು ಪೂಜ್ಯರಾಗಿ ಸಮಾಜ ೮೦ ವರ್ಷಗಳ ತುಂಬು ಜೀವನ ಬದುಕಿದರು. ಕ್ರಿ.ಶ ೧೯೨೫ ರಲ್ಲಿ ಇಹಲೋಕದ ವ್ಯವಹಾರಗಳಿಗೆ ಕೊನೆ ಹೇಳಿದರು. ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡಿದ್ದನು.

ಸುಂದರವಾದ ಜಾತ್ರೆ :

ಪ್ರತಿವರ್ಷ ಶ್ರಾವಣ ಮಾಸದಲ್ಲಿ ಶ್ರೀ ಪರಟಿ ನಾಗಲಿಂಗೇಶ್ವರರ ಅದ್ದೂರಿಯ ಜಾತ್ರಾ ಮಹೋತ್ಸವವು ಜರಗುತ್ತದೆ. ಮುರೂ ದಿನಗಳ ಕಾಲ ನಡೆಯುವ ಈ ಜಾತ್ರೆಯು ಶ್ರಾವಣ ಮಾಸದ ಮೂರನೇಯ ವಾರದ ಸೋಮವಾರ, ಮಂಗಳವಾರ, ಬುಧವಾರದಂದು ನಡೆಯುತ್ತದೆ. ಮುಖ್ಯವಾಗಿ ಈ ಮೂರು ದಿನಗಳಲ್ಲಿ ಸೋಮವಾರದಂದು ಪಲ್ಲಕ್ಕಿ ಉತ್ಸವ ಮತ್ತು ಮಹಾನೈವೇದ್ಯ ಮಂಗಳವಾರದಂದು ದೇವರಪೂಜೆ ಮತ್ತು ಮಹಾಪ್ರಸಾದ ಹಾಗೂ ಬುಧವಾರದಂದು ಮದ್ಯಾಹ್ನ ಜಂಗಿ ಕುಸ್ತಿಗಳು ಜರುಗುತ್ತವೆ. ಈ ಕುಸ್ತಿ ಸ್ಪರ್ಧೆಗಾಗಿ

ಕರ್ನಾಟಕ ಮಹಾರಾಷ್ಟ್ರದ ದೂರ ದೂರದ ಸ್ಥಳಗಳಿಂದ ಖ್ಯಾತ ನಾಮಾಂಕಿತ ಕುಸ್ತಿ ಪಟುಗಳು ಬರುತ್ತಾರೆ. ಇವರಲ್ಲಿ ವಿಜೇತರಾದವರಿಗೆ ಬೆಳ್ಳಿ ಕಡಗ, ಡಾಲು ಹಾಗೂ ನಗದು ಬಹುಮಾನಗಳನ್ನು ನಿಡಲಾಗುತ್ತದೆ.

ಬುಧವಾರದಂದು ರಾತ್ರಿ ೮-೦೦ ಗಂಟೆಗೆ ಶ್ರೀ ನಾಗಲಿಂಗೇಶ್ವರರ ಪಲ್ಲಕ್ಕಿಯು ನಗರದ ಪ್ರಮುಖ ಬೀದಿಗಳಲ್ಲಿ ವಿವಿಧ ವಾದ್ಯಮೇಳಗಳಿಂದ ಹೊರಡುತ್ತದೆ. ಶ್ರೀ ಪರಟಿ ನಾಗಪ್ಪನವರು ತಮ್ಮ ಜೀವಿತ ಕಾಲದಲ್ಲಿ ಹೆಚ್ಚಾಗಿ ವಾಸ್ತವ್ಯ ಮಾಡಿದ್ದ ಮಹಾದ್ವಾರದ ಮನೆಯನ್ನು ತಲುಪುತ್ತದೆ. ಆ ಮನೆಯವರು ಪಲ್ಲಕ್ಕಿಗೆ ಶ್ರದ್ಧೆ ಭಕ್ತಿಗಳಿಂದ ಪೂಜೆ ಸಲ್ಲಿಸಿದ ನಂತರವೇ ಅದು ಪುನಃ ದೇವಾಲಯದತ್ತ ಮರಳುತ್ತದೆ. ಇಲ್ಲಿಗೆ ಸತತವಾಗಿ ಮೂರು ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವವು ಕೊನೆಗೊಳ್ಳುತ್ತದೆ.

ಗಡಿನಾಡಿನ ಈ ಪ್ರಮುಖ ಜಾತ್ರೆಯು ಸರ್ವಧರ್ಮ ಸಮನ್ವಯದ ಸಂಕೇತವಾಗಿ ಆಚರಿಸಲ್ಪಡುವದು ಇಲ್ಲಿ ಜಾತಿ, ಮತ, ಧರ್ಮ ಭೇದವಿಲ್ಲದೆ ಅಪಾರ ಸಂಖ್ಯೆಯ ಜನರು ಸೇರುತ್ತಾರೆ. ತಮ್ಮ ತಮ್ಮ ಸೇವೆಯನ್ನು ಭಕ್ತಿ ಶ್ರದ್ಧೆಗಳಿಂದ ಸಲ್ಲಿಸುತ್ತಾರೆ. ಜಾತ್ರೆಯಲ್ಲಿ ಚಿಕ್ಕ ಮಕ್ಕಳ ಆಟಿಗೆ ವಸ್ತುಗಳ ಅಂಗಡಿಗಳು, ಮಿಠಾಯಿ ಅಂಗಡಿಗಳು, ಕಾಯಿ, ಕರ್ಪೂರ, ಹೂಮಾಲೆ, ಹೊಸ ಹೊಸ ಬಟ್ಟೆಗಳ ಮಾರಾಟ ಇವುಗಳನ್ನೆಲ್ಲಾ ನೋಡುವುದೇ ಕಣ್ಣಿಗೆ ಹಬ್ಬ.

ಜಾತ್ರಾ ವೈಭವ

ಏನಚೆಂದ ಏನ ಚೆಂದ
ಶ್ರೀ ನಾಗಲಿಂಗನ ಜಾತ್ರೆ ಅಂದ
ಏನಚಂದ ಏನಚಂದ ॥ ಪಲ್ಲಿ॥

ಶ್ರಾವಣ ಮಾಸದ ಮೂರನೇಯ ವಾರ
ಜಾತ್ರೆಯ ವೈಭವ ಹೆಳತೀರ
ಭಕ್ತಕೋಟಿಯ ಮಹಾಪೂರ
ಕೈಯಲ್ಲಿ ಹಿಡಿದ ಕಾಯಿಕರ್ಪೂರ ॥೧॥

ಸೋಮವಾರ ಪಲ್ಲಕ್ಕಿ ಉತ್ಸವ
ಮಂಗಳವಾರ ಮಹಾಪ್ರಸಾದ

ಬುಧವಾರ ಕುಸ್ತಿಯ ಆಟ
ಮೂರು ದಿನಗಳ ಈ ಜಾತ್ರಾಕೂಟ ॥ ೨॥

ವಾದ್ಯವೈಭವದ ಸಡಗರ ನೋಡಾ
ಬೆಂಡ ಬತ್ತಾಸಿನ ಅಂಗಡಿ ಸಾಲ
ಆಟ ನೋಟಗಳ ಸರತಿಯ ಸಾಲ
ಜಾತ್ರೆಯಲ್ಲಿ ಸಗ್ಗದ ಮೇಳ ॥ ೩॥

ಸಮರ್ಥ ಸದ್ಗುರು ಬಾಬಾ ಮಹಾರಾಜ ಜತ್ರಾಟ

ಶ್ರೀ ಸಮರ್ಥ ಸದ್ಗುರು ರಾಮಚಂದ್ರ ಉರ್ಫ ಬಾಬಾ ಮಹಾರಾಜ ಇವರ ಜನ್ಮ ಜತ್ರಾಟ ಊರಿನ ಜಾಧವ ಉರ್ಫ ಘಟಿಂಗ ಮನೆತನದಲ್ಲಾಯ್ತು. ಇವರಮ್ಮ ಬೂದಿಹಾಳದ ಸತ್ಪುರುಷ ಶ್ರೀ ಫಿರಗೋಜಿ ಮಹಾರಾಜ ಇವರ ಕೊನೆಯ ಮಗಳು. ಶ್ರೀ ಸಮರ್ಥ ಸದ್ಗುರು ಬಾಬಾ ಮಹಾರಾಜ ಇವರಿಗೆ ತಾಯಿ ತಂದೆ ಮತ್ತು ತಂಗಿ ಮಮತಾಬಾಯಿ ಎಂಬ ಪರಿವಾರವಿತ್ತು. ಸದ್ಗುರು ಬಾಬಾ ಮಹಾರಾಜ ಚಿಕ್ಕ ವಯಸ್ಸಿನಿಂದ ಅವರ ತಾತ ಶ್ರೀ ಫಿರಗೋಜಿ ಬಾಬಾ ಮಹಾರಾಜರ ಜತೆಗಿದ್ದರು. ಅವರ ಪ್ರಭಾವ ಬಾಬಾ ಮಹಾರಾಜ ಮೇಲೆ ಬಹಳಷ್ಟು ಪರಿಣಾಮ ಬೀರಿತು.

ಇಲ್ಲಿ ಸಾಧುಪುರುಷರು ತೀರ್ಥಯಾತ್ರೆಗೆ ಬಂದಾಗ ಅವರಲ್ಲಿ ಚರ್ಚೆ ನಡೆಯುತ್ತಿತ್ತು. (ಅಳುದೆಲೆಯ ಬಗ್ಗೆ ಚರ್ಚೆ) ಆವಾಗ ಬಾಬಾ ಮಹಾರಾಜರು ಅಳುದೆಲೆಯ ಮೇಲೆ ನೀರು ಹಿಡಿದು ತೋರಿಸಿದರು. ಆಗ ಎಲ್ಲ ಸಾಧು ಸಂತರು ಇವರು ಈಶ್ವರಿ ಅವತಾರವೆಂದು ಆಶೀರ್ವದಿಸಿದರು. ಆ ಮೇಲೆ ಬಾಬಾ ಜತ್ರಾಟದಲ್ಲಿ ಪ್ರತಿದಿನ ಐದು ಮನೆ ಭಿಕ್ಷೆ ಬೇಡುತ್ತಿದ್ದರು.

ಶ್ರೀ ಬಾಬಾ ಮಹಾರಾಜರಿಗೆ ವಾಕಸಿದ್ಧಿಯಿತ್ತು. ಈಗಲೂ ಅವರ ವಂಶಜರೇ ಇದ್ದಾರೆ ಹಾಗೆಯೇ ಇವರ ಅನುಯಾಯಿಗಳು ಆಜರಾ, ಅಂಬೋಲಿ, ಪುಣೆ, ಕೊಲ್ಹಾಪೂರ, ಬೆಳಗಾವಿ, ನಾಗಪೂರ ಮತ್ತು ತುಮಕೂರದಲ್ಲಿದ್ದಾರೆ. ಇವರ ಅಖಂಡ ಪರಂಪರೆ ಈ ಹೊತ್ತಿಗೂ ನಡೆಯುತ್ತದೆ.

ಸಂತ ಬಾಳು ಮಾಮಾ

ಸಂತ ಬಾಳು ಮಾಮಾ ಇವರ ಜನ್ಮ ಅಶ್ವಿನ ದ್ವಾದಶ ಶಕೆ (೧೮೧೪) ಮಾಯಪ್ಪಾ ಮತ್ತು ಸತ್ಯವ್ವಾ ಇವರ ಉದರದಲ್ಲಿ ಅಕ್ಕೋಳದಲ್ಲಿ ಜನಿಸಿದರು. ಇವರ ಹೆಸರು ಬಾಳಪ್ಪಾ

ಇವರ ತಾಯಿಯ ಊರು ಅದಮಾಪೂರ (ಮಹಾರಾಷ್ಟ್ರ) ಇವರ ಸಹೋದರಿಯನ್ನು ಕೊಟ್ಟದು ಮೆತಗೆ ಎಂಬ ಊರು ಗಡಹಿಂಗ್ಲೆಜ ತಾಲೂಕು (ಮಹಾರಾಷ್ಟ್ರ).ಇವರ ತಂದೆ ಇವರಿಗೆ ಕುರಿ ಮೇಯಿಸುವ ಕೆಲಸ ಕೊಟ್ಟಿದ್ದರು. ವಯಸ್ಸಿಗೆ ಬಂದ ನಂತರ ಇವರ ಮದುವೆ ಮಾಡಿದರು. ಕುರಿಗಳನ್ನು ಮೇಯಿಸುತ್ತ ದೂರದೂರ ಊರುಗಳಿಗೆ ಹೋದರು.

ಜನರು ಇವರ ಬಗ್ಗೆ ಹೇಳುವುದೇನೆಂದರೆ, ಇವರಿಗೆ ಕೆಲಸಕ್ಕಿಂತ ಯೋಗಧಾರಣೆಯಲ್ಲಿ ಹೆಚ್ಚಿನ ಒಲವಿತ್ತು. ಇವರ ಹೆಂಡತಿ ಗಂಗೂಬಾಯಿ ಗರ್ಭಿಣಿಯಿದ್ದಾಗ ಕುರಿಗಳನ್ನು ಕಟ್ಟಿಹಾಕುವ ದೊಡ್ಡಿಯಲ್ಲಿ ಅವಳಿಗ ಪ್ರಸವ ವೇದನೆ ಪ್ರಾರಂಭವಾಯ್ತು. ಆಗ ಬಾಳಪ್ಪಾ ಇವರು ಹೆಂಡತಿಯು ವೇದನೆಯಲ್ಲಿದ್ದಾಗ ಅವಳ ಸುತ್ತ ಲಕ್ಷ್ಮನ ರೇಖೆಯನ್ನು ಎಳೆದರು. ಈ ರೇಖೆ ದಾಟಿ ಹೊರಗೆ ಬರಬೇಡ. ಆದರೆ ಗಂಗೂಬಾಯಿಗೆ ವೇದನೆಯನ್ನು ತಡೆದುಕೊಳ್ಳಲಿಕ್ಕಾಗದೇ ಗಂಡ ಹಾಕಿದ ರೇಖೆ ದಾಟಿ ಹೊರಗೆ ಬಂದರು. ಆಗ ಗಂಗೂಬಾಯಿ ಮಗುವಿಗೆ ಜನ್ಮವಿತ್ತರು. ಆದರೆ ಮಗು ಬದುಕಲಿಲ್ಲ. ಆವಾಗ ಬಾಳಪ್ಪಾ ಇವರಿಗೆ ಜೀವನದಲ್ಲಿ ಸಂಪೂರ್ಣ ಜಿಗುಪ್ಸೆ ಹುಟ್ಟಿ ಸಂಸಾರವನ್ನು ತೊರೆದು ಸಂತರಾದರು.

ಇವರು ತಾಯಿಯ ಊರಿಗೆ ಹೋಗುತ್ತಿದ್ದುದರಿಂದ ಮತ್ತು ತಂಗಿಯ ಊರಿಗೆ ಹೋಗುತ್ತಿದ್ದುರಿಂದ ಅಲ್ಲಿಯ ಹುಡುಗರು ಇವರಿಗೆ ಬಾಳು ಮಮಾ ಎಂದು ಕರೆಯುತ್ತಿದ್ದರು. ಅದೇ ಸಂತ ಬಾಳು ಮಾಮಾ ಎಂದು ಹೆಸರಾಯ್ತು.

ಲೋಕ ಕಲ್ಯಾಣಕ್ಕಾಗಿ ಮಹಾರಾಷ್ಟ್ರದ ಪರಮಹಂಸ ಶ್ರೀ ಮುಳೆ ಮಹಾರಾಜ ಇವರ ಶಿಷ್ಯರಾದರು. ಹದಿನೇಳು ವರ್ಷಗಳ ಕಾಲ ಜ್ಞಾನವನ್ನು ಹಂಚುತ್ತಾ ಊರೂರು ಅಲೆದರು. ನಂತರ ೪ ಸೆಪ್ಟೆಂಬರ ೧೯೬೬ ರಲ್ಲಿ **"ಆದಮಾಪುರ"** ದಲ್ಲಿ ಸಮಾಧಿ ತೆಗೆದುಕೊಂಡರು. ಅವರ ಸಮಾಧಿ ಸ್ಥಳದಲ್ಲಿ ಪರಮಹಂಸ ಶ್ರೀ ಮುಳೆ ಮಹಾರಾಜ ಮತ್ತು ಬಾಳುಮಾಮಾ ಇವರ ಭವ್ಯ ಮಂದಿರ ಕಟಿದ್ದಾರೆ. ಈ ಮಂದಿರಕ್ಕೆ ಕಲ್ಲಿನ ಭವ್ಯ ಮಹಾದ್ವಾರವಿದೆ. ಈ ಮಂದಿರದ ಮೇಲ್ಬಾವಣಿಯ ಮೇಲೆ ಶ್ಲೋಕ ಬರೆದಿದ್ದಾರೆ (ಮರಾಠಿ) ಮಂದಿರದ ಗರ್ಭಗುಡಿಯಲ್ಲಿ ಶ್ರೀ ಮುಳೆ ಮಹಾರಾಜ ಸದ್ಗುರು, ಬಾಳುಮಾಮಾ, ವಿಠ್ಠಲ ರುಕ್ಮೀಣಿ ಇವರ ಮೂರ್ತಿಗಳಿವೆ ಮಂದಿರದ ಗರ್ಭಗುಡಿಯಲ್ಲಿ ಸಂಗಮರವರಿ ಸಮಾಧಿ ಪಾದುಕೆಗಳಿವೆ. ಭಕ್ತರಿಗೆ ಇಲ್ಲಿ ಧರ್ಮಶಾಲೆ ಕಟ್ಟಿಸಿದ್ದಾರೆ. ಪ್ರತಿವರ್ಷ ಅಶ್ವಿನ ಶುದ್ಧ ದ್ವಾದಶಿಗೆ ಬಾಳು ಮಾಮಾ ಜಯಂತಿಯಂದು ಜಾತ್ರೆಯಿರುತ್ತದೆ. ಪೂರ್ತಿದಿನ ಕೀರ್ತನ ಭಜನೆ, ಪಲ್ಲಕ್ಕಿ ಮೆರವಣಿಗೆ ಹಾಗೂ ಮಹಾಪ್ರಸಾದವಿರುತ್ತದೆ.

೫.೪. ಮುಸ್ಲಿಮ್ ಜಾತ್ರೆಗಳು (ಉರುಸುಗಳು):

ಉರುಸಿನ ಪ್ರಸ್ತಾವನೆ:

ಮಾನವನಿಗೂ, ಧರ್ಮಕ್ಕೂ ಬಹು ಹತ್ತಿರದ ಸಂಬಂಧವಿದ್ದು, ಅದು ಮಾನವ ಆತ್ಮಕ್ಕೂ ಮತ್ತು ದೇಹಕ್ಕೂ ಇದ್ದ ನಂಟೆಂದು ಹೇಳಬೇಕು. ಮನುಷ್ಯ ತನ್ನನ್ನು ತಾನು ಅರಿಯಲು ಹಾಗೂ ಪಾರಮಾರ್ಥಿಕ ಸುಖವನ್ನು ಹೊಂದಲು, ಧರ್ಮವನ್ನು ಅರಸದೇ ಬೇರೆ ಗತಿಯಿಲ್ಲವೆಂಬುದು ಪ್ರಂಪಚದ ಪ್ರತಿಯೊಂದು ಧರ್ಮದ ತಿರುಳು. ಜಾಗತಿಕ ಹಾಗೂ ಭಾರತೀಯರ ಹಿನ್ನೆಲೆಯಲ್ಲಿ ನೋಡುವುದಾದರೆ ಮನುಷ್ಯ ಜನ್ಮತಃ ಒಂದು ಧರ್ಮದಲ್ಲಿಯೇ ಜನಿಸುವನು. ಅದು ಅವನ ಅಂತರಂಗಕ್ಕೆ ಸಂಬಂಧಿಸಿದ್ದು. ಧಾರ್ಮಿಕ ಇತಿಹಾಸವನ್ನು ಅವಲೋಕಿಸುತ್ತಾ ಬಂದಾಗ ಒಂದು ವಿಚಾರ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಕಾಲಕಾಲಕ್ಕೆ ಆಯಾ ಪ್ರದೇಶದಲ್ಲಿ ಧರ್ಮಗಳು ಜನ್ಮ ತಳೆದದ್ದುಂಟು.

ಕರ್ನಾಟಕದ ಆಧ್ಯಾತ್ಮಿಕ ರಂಗದಲ್ಲಿ ಎರೆದ ಸಂತರು, ಸತ್ಪುರುಷರು, ಶಿವಶರರಣರೂ ಹರಿದಾಸರುಗಳಾದ ಭಕ್ತಿ ಭಂಡಾರಿ ಬಸವಣ್ಣ, ಶೂನ್ಯ ಸಿಂಹಾಸನಾಧಿಪತಿ ಅಲ್ಲಮ ಪ್ರಬುದೇವ, ರಾಮಾನುಜರು, ಮಧ್ವಾಚಾರ್ಯರು, ಪುರಂದರದಾಸ, ಕನಕದಾಸರಂತಹ ದೈವೀ ಪುರುಷರನ್ನು ಪಡೆದ ಭೂಮಿ. ಈ ಮಹಾತ್ಮರು ಆಧ್ಯಾತ್ಮಿಕ ಅಮೃತವನ್ನುಣಿಸಿದರಲ್ಲದೇ, ಸಮಸ್ತ ಮಾನವ ಸೇವಾಕಾರ್ಯಗಳ ಬಗ್ಗೆ ಜನತೆಗೆ ಬೋಧಿಸಿದರು. ಇದರಿಂದ ಭಾರತೀಯರ ಜನಜೀವನದಲ್ಲಿ ಸಂಜೀವಿನಿ ಶಕ್ತಿ ಪ್ರವಹಿಸಿ, ಅದು ಅಮರಗೊಳ್ಳುವಂತಾಯಿತು. ಇಂತಹ ಮಹಾತ್ಮರ ಸಾಲಿನಲ್ಲಿ ಸೂಫಿ ಸಂತರು ಪ್ರಮುಖರು.

ಉರುಸು ಎಂಬ ಶಬ್ದಕ್ಕೆ ಸಾಂಕೇತಿಕ ಹಾಗೂ ಪಾರಮಾರ್ಥಿಕ ಅರ್ಥವುಂಟು ಮದುಮಕ್ಕಳು ಮೊದಲ ಸಲ ಸಮಾಗಮದ ಶುಭ ಮಹೂರ್ತಕ್ಕೆ ಉರುಸೆಂಬ ಅರ್ಥ ಬಹು ಮಾರ್ಮಿಕವಾದುದು. ಸತಿಪತಿ ಭಾವದಿಂದ ಅಲ್ಲಾಹ (ಪರಮಾತ್ಮ) ನನ್ನು ಪೂಜಿಸುವ ಪದ್ಧತಿ ಅನೇಕ ಪಂಥಗಳಲ್ಲಿದ್ದುದು ಕಂಡು ಬರುವದು. ಭಕ್ತಸತಿ, ಭಗವಂತ ಪತಿಯೆಂಬ ಅನನ್ಯಭಾವದಿಂದ ಸೇರುವ ಆತ್ಮಾನಂದದ ಸಮಾಗಮವೇ ಉರುಸು, ಇದು ಶರಣ ಸತಿ ಲಿಂಗಪತಿ ಕಲ್ಪನೆಯನ್ನು ಸ್ಫುರಿಸುತ್ತದೆ.

ಜನಪದರ 'ಉರುಸು' ಎಂಬ ಶಬ್ದವನ್ನು ಜಾತ್ರೆ ಎಂದು ಅರ್ಥೈಸುತ್ತಾರೆ. ಅದು ಕನ್ನಡ ಸಂಸ್ಕೃತೀಕರಣದ ಹಿನ್ನೆಲೆಯಲ್ಲಿ ಜಾತ್ರೆಯೆಂಬ ಅರ್ಥವನ್ನು ಪಡೆದುಕೊಂಡಿದೆ. ಜಾತ್ರೆಯು ಒಂದು ಮಠಕ್ಕೆ ಅಥವಾ ಮಂದಿರಕ್ಕೆ ಸೀಮಿತಗೊಂಡಿರಬಹುದು. ಅಲ್ಲದೇ ಒಬ್ಬ ಪುಣ್ಯ ಪುರುಷ ಅಥವಾ ಸ್ವಾಮಿಗಳಿಗೆ ಸಂಬಂಧಪಟ್ಟಿರುತ್ತದೆ. ಆದರೆ 'ಉರುಸು' 'ವಲಿ'ಗೆ

ಸಂಬಂಧಿಸಿದ್ದಾಗಿರುತ್ತದೆ. ವಲಿಯು ಭಗವಂತನಲ್ಲಿ ಐಕ್ಯ ಹೊಂದಿದ ದಿನದಂದು ಉರುಸು ನಡೆಯುವುದು. ಉರುಸು ಶಬ್ದ ಶಬ್ದಶಃ ಅರ್ಥ ಖುದಾ (ಭಗವಂತ) ನೊಡನೆ ಮದುಮಗಳ ಸಮಾಗಮವೆಂದಾಗುವುದು. ಉರುಸಿನ ದಿನ ಹಿಂದೂ ಮುಸ್ಲಿಮರು ಜಾತ್ರೆಗೆ ಬಂದು ಸೇರುವಂತೆ ಉರುಸಿಗೆ ಬಂದು ಸೇರುವರು. ಉರುಸಿನಲ್ಲಿ ಎರಡು ಧರ್ಮೀಯರಲ್ಲಿ ಪರಸ್ಪರರ ಸಮಾಗಮದ ಸಾಮರಸ್ಯ ಎದ್ದು ತೋರುತ್ತದೆ.

ಕ್ರಿ.ಶ ೬೧೨ ರಲ್ಲಿ ಮಹಮ್ಮದ ಪೈಗಂಬರ ಅವರು ಇಸ್ಲಾಂ ಧರ್ಮ ಪ್ರಚಾರಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಅವತ್ತು ಸೌದಿ ಅರೇಬಿಯಾದ ಮಕ್ಕಾದ ಕಾಬಾ ಜನರು ೩೬೦ಕ್ಕೂ ಹೆಚ್ಚು ಮೂರ್ತಿಗಳನ್ನು ಪೂಜಿಸುತ್ತಿದ್ದರು. ಅವುಗಳ ಪ್ರೀತ್ಯಾರ್ಥದ್ಯೋತಕವಾಗಿ ಬಲಿಪಶುಗಳು ರೂಢಿಯಲ್ಲಿದ್ದವು. ಅನ್ನ, ನೀರು, ಮಳೆ,ಗಾಳಿ, ಬೆಂಕಿ ಹೀಗೆ ಒಂದೊಂದಕ್ಕಾಗಿ ಒಂದೊಂದು ದೇವರ ಮೂರ್ತಿಗಳನ್ನು ಸೃಷ್ಟಿಸಿಕೊಂಡು ಆರಾಧಿಸುತ್ತಿದ್ದರು. ಅವರಿಗೆ ಮಧ್ಯಪಾನ, ವ್ಯಭಿಚಾರ, ಜೂಜಾಟಗಳೆಂದರೆ ಪಂಚಪ್ರಾಣದ ಚಟಗಳಾಗಿ ಪರಿಣಮಿಸಿದ್ದವು. ಹೆಣ್ಣು ಶಿಶುಹುಟ್ಟಿದ ಕೂಡಲೇ ಹೂಳುವ ಪದ್ಧತಿ ಅವರಲ್ಲಿ ರೂಢಿಗತವಾಗಿತ್ತು. ಈ ಎಲ್ಲಾ ಬಗೆಯ ಅಂಧಕಾರದ ಆಚರಣೆಗಳು, ಅನಾಚಾರಗಳು, ಅನ್ಯಾಯಗಳು, ಜಗಜ್ಜಾಹಿರಗಳಾಗಿದ್ದವು. ಇಂತಹ ಪರಿಸ್ಥಿರಿಯಲ್ಲಿ ಹಜರತಮಹ್ಮದ ಪೈಗಂಬರ ಅವರು 'ಹೆಣ್ಣು ಪೂಜನೀಯಳು, ಕೊಲ್ಲುವುದನ್ನು ತ್ಯಜಿಸಿ' ಎಂದು ಕರೆಕೊಟ್ಟರು. ಅಲ್ಲದೆ ಏಕೇಶ್ವರಿವಾದವನ್ನು ಶಾಶ್ವತಗೊಳಿಸಲು ಮುಂದಾದರು. ಸಂಪ್ರದಾಯದ ಸನಾತನಿಗಳಿಗೆ ಪೈಗಂಬರ ಅವರ ವರ್ಚಸ್ಸು ಮತ್ತು ಕೀರ್ತಿಯ ಮದೀನಾದಲ್ಲಿಯೇ ದಿನೇ ದಿನೇ ಹೆಚ್ಚುತ್ತಿರುವ ಪ್ರಸಂಗ ಹಾಗೂ ಇಸ್ಲಾಂ ಧರ್ಮದ ಪ್ರಸಾರವು ಅಸಹನೀಯವಾಗಿ ಕಂಡಿತು.

ಸನಾತನಿಗಳು ಕ್ರಿ.ಶ ೬೧೨ ರಲ್ಲಿ ೧೦೦೦ ಕ್ಕಿಂತಲೂ ಅಧಿಕ ಅಧರ್ಮಿಯರೊಂದಿಗೆ ಬದರ ಎಂಬ ಸ್ಥಳದಲ್ಲಿ ಶಸ್ತ್ರಾಸ್ತ್ರವಿಲ್ಲದ ಪೈಗಂಬರರ ಕೇವಲ ೩೧೩ ಜನರಿಂದ ಕೂಡಿದ ಸೈನ್ಯದ ಮೇಲೆ ಯುದ್ಧ ಸಾರಿದರು. ಜಂಗ–ಎ–ಬದರ ಎಂದು ಕರೆಯುವ ಇಸ್ಲಾಂ ಧರ್ಮ ಸಂಸ್ಥಾಪನೆಗಳಿಗಾಗಿ ಆದ ಮೊಟ್ಟ ಮಒದಲನೆಯ ಯುದ್ದ ಇದಾಗಿದ್ದು. ಇದರಲ್ಲಿ ಪೈಗಂಬರರಿಗೆ ಜಯವಾಯಿತು. ತದನಂತರ ಬದರ ಯುದ್ಧದಲ್ಲಿ ಆದ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಕ್ರಿ.ಶ ೬೧೪ ರಲ್ಲಿ ಅಬು ಸೂಫಿಯಾನನು ತನ್ನ ನಾಲ್ಕು ಸಾವಿರ ಸೈನಿಕರೊಡನೆ ಮದೀನಾ ಸಮೀಪದ ಊಹದ್ ಬೆಟ್ಟದ ಪಕ್ಕದಲ್ಲಿ ಹ.ಮಹಮ್ಮದ ಪೈಗಂಬರರ ೭೦೦ ಸೈನಿಕರ ಜೊತೆ ಭೀಕರ ಯುದ್ಧ ಮಾಡಿ ಸೋತು ಹಿಂದಿರುಗಿದನು. ಈ ಯುದ್ಧದಲ್ಲಿ ಪೈಗಂಬರ ಎಪ್ಪತ್ತು ಸಹಾಬಾಗಳ ಧರ್ಮಕ್ಕಾಗಿ ನಡೆದ ಯುದ್ಧದಲ್ಲಿ ವೀರ ಮರಣ ಹೊಂದುವರು. ಸ್ಥಳದಲ್ಲಿಯೇ ಆ ಸಹಾಬಾಗಳ ಸಮಾಧಿ ಮಾಡಿಸಿದರಲ್ಲದೇ,

ಪೈಗಂಬರರು ಸತ್ಯದ ಮಾರ್ಗದಲ್ಲಿ ಧರ್ಮ ರಕ್ಷಣೆಗಾಗಿ ಮರಣ ಹೊಂದಿದ ಸಹಾಬಾಗಳು ಚಿರಂಜೀವಿಗಳು ಎಂದು ಸಾರಿದರು. ಅವರು ಮಡಿದ ದಿನದಂದು ಜಿಯಾರತಗಾಗಿ ಕರೆಕೊಟ್ಟು, ಸ್ವತಃ ಪೈಗಂಬರರೇ ಮೇಲಿಂದ ಮೇಲೆ ಜಿಯಾರತ ಮಾಡಿದರು. ಎಂಬುದು ಇತಿಹಾಸದಿಂದ ಸುವ್ಯಕ್ತಗೊಳ್ಳುತ್ತದೆ. ಇಂದಿಗೂ ಸಹಧರ್ಮಮಾರ್ಗದಲ್ಲಿ ಧರ್ಮರಕ್ಷಣೆಗಾಗಿ ಸಾಧನೆ ಮಾಡಿ ಕೀರ್ತಿಶಾಲಿಗಳಾದ ವಲಿಗಳ ಜಿಯಾರತಿಗಾಗಿ ಅಂದರೆ ಉರುಸಿಗಾಗಿ ಇಸ್ಲಾಮೀಯರ ಹಿಂದೂಗಳು ಸೇರಿ ವಿಜೃಂಭಣೆಯಿಂದ ಆಚರಿಸುತ್ತಿರುವರು.

ಉರುಸುಗಳ ಉಗಮ :

ಉರುಸುಗಳ ಉಗಮ ಮತ್ತು ಆಚರಣೆ ಕುರಿತು ನಿರ್ದಿಷ್ಟವಾಗಿ ಹೇಳುವದು ಕಷ್ಟಸಾಧ್ಯ . ಆದರೆ ವಿದ್ವಾಂಸರ ಹೇಳಿಕೆಯ ಪ್ರಕಾರ ಸುಮಾರು ಒಂದು ಸಾವಿರ ವರ್ಷದ ಇತಿಹಾಸ ಹೊಂದಿದೆ ಇದಕ್ಕೆ ಆಧಾರವಾಗಿ ಹ। ಸೈಯದನಾ ಗೌಸುಲ್ ಆಝುಮ್ ರ ಉರುಸು ಸುಮಾರು ೮೦೦ ವರ್ಷಗಳ ದಾಖಲೆ ನೀಡುತ್ತದೆ. ಹ। ಖ್ವಾಜಾ ಮಯನೂದ್ದೀನ್ ಚಿಸ್ತಿ ಇವರ ಉರುಸು ೭೮೬ ಇತಿಹಾಸ ನೀಡುವುದಲ್ಲಿದೇ **" ಚಕ್ರವರ್ತಿ ಅಕ್ಬರನ ಕಾಲಕ್ಕೆ ಪ್ರಸಿದ್ಧಿ ಪಡೆಯಿತು"** ಹ। ಖ್ವಾಜಾ ಬಂದೇನವಾಜ ಇವರ ಉರುಸು ೫೬೬ ವರ್ಷಗಳ ಇತಿಹಾಸ ಒದಗಿಸುತ್ತದೆ. ಹೀಗೆ ಚಿಕ್ಕೋಡಿ ತಾಲುಕಿನಲ್ಲಿಯೂ ಕೂಡ ಸೂಫೀ- ಸಂತರ ಉರುಸುಗಳು ಪ್ರಸಿದ್ಧಿ ಪಡೆದಿವೆ. ಇವುಗಳಲ್ಲಿ ಪ್ರಮುಖವಾಗಿ ಚಿಕ್ಕೋಡಿ, ಕರೋಶಿ, ಹಿರೇಕೂಡಿ, ಸದಲಗಾ, ಯಕ್ಸಂಬಾ, ಖಡಕಲಾಟ,ಕಾರದಗಾ, ಕೋಥಳಿ, ನಿಪ್ಪಾಣಿ, ಚಾಂದ್-ಶಿರದವಾಡ, ಅಂಕಲಿ, ಮಾಂಜರಿ, ಬೋರಗಾಂವ ಇತ್ಯಾದಿ ಉರುಸುಗಳು ತಾಲೂಕಿನಲ್ಲಿ ಅನೇಕ ಕಡೆ ಆಚರಿಸುವದನ್ನು ಕಾಣುತ್ತೇವೆ.

ಸೂಫಿಗಳೆಂದರೆ ಯಾರು? :

ಸೂಫಿಗಳೆಂದರೆ ಯಾರು? ಅವರು ಎಲ್ಲಿಂದ ಬಂದರು? ಯಾವ ರೀತಿಯಾಗಿ ಬಂದರು? ಭಾರತವನ್ನು ಹೇಗೆ ಪ್ರವೇಶ ಮಾಡಿದರು? ಕರ್ನಾಟಕಕ್ಕೆ ಅವರ ಆಗಮನ ಇದೆಲ್ಲವುಗಳ ಮೇಲೆ ಡಾ॥ ರೆಹಮತ ತರೀಕೆರೆ ಇವರು 'ಕರ್ನಾಟಕದ ಸೂಫಿಗಳು' ಈ ಗ್ರಂಥದಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

ಸೂಫಿಸಂ ಮೂಲತಃ ಒಂದು ತತ್ವವಾಗಿದೆ. ಅನುಭಾವ ಪಂಥವಾಗಿದೆ. ಅದು ಸಾಂಪ್ರದಾಯಿಕ ಇಸ್ಲಾಂ ಧರ್ಮ ಅಲ್ಲ. ಸನಾತನ ಇಸ್ಲಾಮಿನ ಜೊತೆಗೆ ಸೂಫಿಸಂ ಮುಖಾಮುಖಿ ಮಾಡಲು ಹಲವು ಮೂಲಭೂತ ಕಾರಣಗಳಿವೆ. ಸೂಫಿ ಅನುಭಾವವು ಒಂದು ಆದಿಮ ತತ್ವವಾಗಿ ಇಸ್ಲಾಂಗಿಂತ ಮೊದಲೇ ಅರಬ್ ಸ್ಥಾನದಲ್ಲಿತ್ತು. ಈ ಅರಬ್

ರಹಸ್ಯವಾದ ಮೇಲೆ ಸೂಫಿ ದರ್ಶನಶಾಸ್ತ್ರದ ಚರಿತ್ರೆಯಲ್ಲಿ **"ಫಲಾತುನ್"** ಎಂದು ಜನಪ್ರಿಯವಾಗಿರುವ ಪ್ಲೇಟೊ ಗಾಢ ಪ್ರಭಾವ ಬೀರಿದ್ದನು. ಗ್ರೀಕ್ ತತ್ವ ಶಾಸ್ತ್ರದ ಸೂಫಿಸ್ಮರಿಂದ ಸೂಫಿ ಎಂಬ ಶಬ್ದ ಬಂದಿತೆಂಬ ವಾದವೂ ಇದೆ ಈ ಸಂಗತಿ ಗ್ರೀಕರ ಅರಬರ ನಡುವಣ ತತ್ವದರ್ಶನಗಳ ಕೊಳುಕೊಡೆಯನ್ನು ಸೂಚಿಸುತ್ತದೆ. ಅನೇಕ ಸೂಫಿಗಳು, ಗ್ರೀಕ್ ಸಂಪ್ರದಾಯದಂತೆ, ಏಕಕಾಲಕ್ಕೆ ದಾರ್ಶನಿಕರೂ ಕವಿಗಳೂ, ಗಣಿತ ಶಾಸ್ತ್ರಜ್ಞರೂ ಆಗಿದ್ದರು. ಕವಿಯಾಗಿ ನಮಗೆ ಗೊತ್ತಿರುವ ಉಮರ್ ಖಯ್ಯುಮ್ ಇಂತಹವನು.

ಅವನು ತನ್ನ ಕಾಲದ ಪ್ರಸಿದ್ಧ ತತ್ವಶಾಸ್ತ್ರಜ್ಞನೂ ಜ್ಯಾಮಿತಿ ತಜ್ಞನೂ ವೈದ್ಯನೂ, ಖಗೋಳಶಾಸ್ತ್ರಜ್ಞನೂ ಆಗಿದ್ದನು. ಆದಿಮ ಸೂಫಿಗಳು ಕ್ರೈಸ್ತ ಸುವಾರ್ತೆಗಳಿಂದಲೂ ಇರಾನಿನ ಜರಾತುಷ್ಟ್ರನಿಂದಲೂ ತಮಗೆ ಬೇಕಾದ ಚಿಂತನೆಗಳನ್ನು ಪಡೆದುಕೊಂಡಿದ್ದರು. ಇಸ್ಲಾಂ ಬಂದ ಬಳಿಕ ಅವರಿಗೆ ಮಹಮ್ಮದ್ ಪೈಗಂಬರ್ ಚೈತನ್ಯವೂ ಸೇರಿಕೊಂಡಿತು. ನಂತರ ಸೂಫಿಸಂ ಚಿಲುಮೆಯ ಗರ್ಭಕ್ಕೆ ನಿಜವಾಗಿ ಒಳಜಲ ಒದಗಿಸಿದ್ದು, ಭಾರತ; ಇಲ್ಲಿನ ಉಪನಿಷತ್ತು ಅದ್ವೈತ ದರ್ಶನ, ಯೋಗ ಫಿಲಾಸಾಫಿಗಳು ಅದರಲ್ಲೂ ಸೂಫಿಗಳಲ್ಲಿರುವ ವಿರಕ್ತಿ ಹಾಗೂ ಮಠದ ಕಲ್ಪನೆಗಳು ಬೌದ್ಧ ಹಾಗೂ ಕ್ರೈಸ್ತ ಸನ್ಯಾಸಿಗಳಿಂದ ಬಂದವು. ಇಸ್ಲಾಂಮಿಕ್ ವಿದ್ವಾಂಸರಾದ ಅಬ್ಬಾಸ್ ಅಹಮ್ಮದ ಶಾಸ್ತ್ರೀ ಹೇಳುವಂತೆ ಆದಿಮ ಸೂಫಿಗಳು ಬೌದ್ಧಸಿದ್ಧರ ಜೊತೆ ಸಂವಾದ ಹೊಂದಿದ್ದರು. ಬಹು ಹಿಂದೆಯೇ ಬೌದ್ಧಧರ್ಮವು ಕಾಬೂಲ್ ಕಂದಹಾರಗಳನ್ನು ದಾಟಿಹೋಗಿತ್ತು. ಮತ್ತು ನಾಥಪಂಥದ ಕೇಂದ್ರಗಳೂ ಈ ಸೀಮೆಯಲ್ಲಿದ್ದವಷ್ಟೆ ಈ ದಾರಿಯ ಮೂಲಕ ಪರ್ಶಿಯಾದ ಸೂಫಿಗಳು ಭಾರತಕ್ಕೆ ಬಂದು ಹೋಗುವುದನ್ನು ಮಾಡುತ್ತಿದ್ದರು. ಸೂಫಿ ದಾರ್ಶನಿಕ ಹಲ್ಲಾಜನು ಅದ್ವೈತ ಫಿಲಾಸಾಫಿಯ ಪ್ರೇರಣೆ ಪಡೆದದ್ದು ತನ್ನ ಭಾರತ ಭೇಟಿಯಲ್ಲೆ ಗ್ರೀಸ್ ಇರಾನ್ ಭಾರತ ಅಫಘಾನಿಸ್ತಾನ ಇವೆಲ್ಲಾ ಆಧುನಿಕ ರಾಷ್ಟ್ರಗಳಾಗುವ ಮುಂಚೆ ಪಡೆದುಕೊಂಡಿದ್ದ ಗಡಿಗಳ ಕಲ್ಪನೆಯೇ ಬೇರೆ. ಮೂಲತಃ ಸಂಚಾರಿಗಳಾದ ಬೌದ್ಧಭಿಕ್ಷುಗಳು, ಸೂಫಿಗಳು ಹಾಗೂ ನಾಥಸಿದ್ದರು ಮಾಡಿರಬಹುದಾದ ಸುತ್ತಾಟ ಹಾಗೂ ಪಡೆದಿರಬಹುದಾದ ಪ್ರಭಾವ ಸಮಕಾಲೀನ ಧಾರ್ಮಿಕ ರಾಜಕೀಯ ಹಿನ್ನೆಲೆಯಲ್ಲಿ ವಿಚಿತ್ರ ಅನಿಸುತ್ತವೆ. ಗುರುವನ್ನೂ ಜ್ಞಾನವನ್ನು ಹುಡುಕುತ್ತಾ ಅವರು ಮಹಾ ತಿರುಗಾಟಗಳನ್ನ ಮಾಡಿದರು. ಕರ್ನಾಟಕದ ಮಳೆಯ ಮಲ್ಲೇಶ ಹಾಗೂ ಬೇಲೆಯೊಡೆಯರು ಮಕ್ಕಾಕ್ಕೆ ಹೋಗುವದು, ಬಾಗ್ದಾದಿನ ಸೂಫಿಗಳು ಬಿಜಾಪೂರಕ್ಕೆ ಬರುವದು, ನೇಪಾಳದ ಗೋರಖನಾಥನು ಶ್ರೀಶೈಲ ಕದಳಿಗಳಿಗೆ ಬರುವದು ಇವೆಲ್ಲಾ ಕಡಲಮೀನು ಖಂಡಾಂತರಗಳಲ್ಲಿ ತಿರುಗುವಷ್ಟು ಸಹಜ ಸಂಚಾರಗಳಾಗಿದ್ದವು.

ಇಂತೂ ಸೂಪಿವಾದವು ಹಲವು ಧಾರೆಗಳನ್ನೊಳಗೊಂಡ ನದಿಯಂತೆ ಹಲವು ದೇಶಗಳ ಹಲವು ಕಾಲದ ಹಲವಾರು ಪಂಥಗಳ ಪ್ರಭಾವಗಳನ್ನು ಪಡೆದು ಕೊಂಡಿತು. ಶರಣ ಆರೂಢ ನಾಥ ಮುಂತಾದ ಯೋಗ ಪಂಥಗಳು ತುಂಬಿದ್ದ ಭಾರತಕ್ಕೆ ಬಂದಾಗ ಸೂಫಿಗಳಿಗೆ ತಾತ್ವಿಕವಾಗಿ "ನಾವು ಹೊಸ ತಾಣಕ್ಕೆ ಬಂದೆವು" ಎಂದು ಬಹುಶಃ ಅನಿಸಲಿಲ್ಲ **"ಭಕ್ತಪಂಥೀಯರು"** ಎಂದು ದುಂಡಾಗಿ ಕರೆಯಲಾಗುವ ಮಹಾನುಭಾವ ವಾರಕರಿ ಚೈತನ್ಯ ಕಬೀರ ಪಂಥಗಳ ಅನುಭಾವಿಗಳಿಗೂ **"ಸೂಫಿ"** ಗಳು ಹೊರಗಿನವರು ಅನಿಸಲಿಲ್ಲ. ಕರ್ನಾಟಕದ ಸೂಫಿಗಳು ಅಲ್ಲಮನನ್ನು ನೆನೆಯುವದು, ಶಿರಹಟ್ಟಿ ಫಕೀರೇಶನು ಅಮೀನದ ಶಿಷ್ಯನಾಗುವದು ಮಡಿವಾಳಪ್ಪನಿಗೆ ಮೋಟ್ನಳ್ಳಿ ಹಸನಸಾಬನು ಶಿಷ್ಯನಾಗುವದು ಇವೆಲ್ಲಾ ಯಾಕೆ ವಿಚಿತ್ರವಲ್ಲ ಎಂಬುದು ತನಗೆ ತಾನೇ ಸ್ಪಷ್ಟವಾಗಿದೆ.

"ಸೂಫಿಸಂ" ಬೆಳೆದು ಬಂದ ಬಗೆ:

ಶಿಶುವಿನಂತೆ ಮುಗ್ಧವೂ ಸ್ವತಂತ್ರವೂ ಆಗಿದ್ದ ಆದಿಮಸೂಫಿ ಅನುಭಾವವು, ೧೧ನೇ ಶತಮಾನದ ಹೊತ್ತಿಗೆ ವೈಚಾರಿಕತೆ ಹೊಸ ಬೌದ್ಧಿಕ ಅವಸ್ಥೆಗೆ ಚಲಿಸಿತು. ಗುರುಮುಖದಿಂದ ಹರಿದು ಸಾಧಕರ ಆಚರಣೆಗಳಲ್ಲಿ ಬದುಕಬೇಕಾದ ತತ್ವವು ಬರಹ ಪರಂಪರೆಗೆ ಹೊರಳಿಕೊಂಡಿತು. ಇದು ಅನುಭಾವ ತತ್ವವು 'ಇಸಂ', ಆಗುವ ಪಂಥಗಳಾಗುವ, ಸಂಸ್ಥೀಕರಣ ಪಡೆಯುವ ಅವಸ್ಥೆ ಈ ಹೊತ್ತಲ್ಲಿ ಪ್ರತಿಭಾವಂತ ಸೂಫಿ ದಾರ್ಶನಿಕರು ತಮ್ಮ ತಮ್ಮ ಅನುಭಾವಿ ಸಿದ್ಧಾಂತಗಳನ್ನ ನಿರ್ಮಿಸುತ್ತ ಹೋದರು. ಇವನ್ನು ನಂಬುವ ವ್ಯಾಖ್ಯಾನಿಸುವ ಹರಡುವ ಅನುಯಾಯಿಗಳು ಆಯಾ ಸೂಫಿಗಳ ಹೆಸರಿನಲ್ಲಿ ಹುಟ್ಟಿಕೊಂಡರು. ಇದನ್ನು ಸಿಲ್‌ಸಿಲಾ (ಪಥ) ಎನ್ನಲಾಗುತ್ತದೆ ಚಿಸ್ತಿಯಾ ಖಾದ್ರಿಯಾ ನಕ್ಷಬಂದಿಯಾ ಸುಹರ್ವರ್ದಿಯ ಖಲಂದರಿಯಾ ಸತ್ತಾರಿಯಾ ರಫಾಯಿಯಾ ಇವು ಪ್ರಸಿದ್ಧ ಸಿಲ್‌ಸಿಲಾಗಳು.

ಅಪಘಾನಿಸ್ತಾನದ ಚಿಸ್ತ್ ಎಂಬ ಹಳ್ಳಿಯಲ್ಲಿ ಹುಟ್ಟಿದ ಅಬೂ ಅಬ್ದುಲ್ಲಾ ಚಿಸ್ತಿ (೯೬೬) ಯಿಂದ ಆರಂಭವಾಗಿದ್ದು ಚಿಸ್ತಿಯಾ; ಇರಾನಿನ ಜೀಲಾನನಗರದ ಅಬ್ದುಲ್ ಖಾದರ್ ಜೇಲಾನಿ (೧೧೬೬) ರಲ್ಲಿ ಸ್ಥಾಪಿಸಿದ್ದು ಖದ್ರಿಯಾ; ಹೀಗೆ ಇರಾಕಿನ ಅಲ್‌ಅಲ್ ರಫಿಯ (೧೧೮೨) ಯಿಂದ ರಫಾಯಿಯಾ ಸಿಲ್‌ಸಿಲಾ ಶುರುವಾಯಿತು. ಭಾರತದಲ್ಲಿ ಚಿಸ್ತಿಯಾ ಖಾದ್ರಿಯಾ ನಕ್ಷಬಂದಿಯಾ ಹೆಚ್ಚು ಜನಪ್ರಿಯವಾದ ಶಾಖೆಗಳು ಕರ್ನಾಟಕದ ಮಟ್ಟಿಗೆ ಬಹುಸಂಖ್ಯೆಯಲ್ಲಿರುವದು ಖಾದ್ರಿಯಾ ಸೂಫಿಗಳು, ಉತ್ತರ ಕರ್ನಾಟಕದ ಮಟ್ಟಿಗೆ ಬಹುಸಂಖ್ಯೆಯಲ್ಲಿರುವದು ಖಾದ್ರಿಯಾ ಸೂಫಿಗಳು ಉತ್ತರ ಕರ್ನಾಟಕದ ಪ್ರತಿ ಊರಲ್ಲಿ ಮರವೊಂದಕ್ಕೆ ಹಸಿರುನಿಶಾನೆ ಏರಿಸಿ, ಕೆಳಗೆ ಕಟ್ಟೆ ಕಟ್ಟಿ, ಅದರಲ್ಲಿ ದೀಪದ ಗೂಡು ಮಾಡಿರುವದನ್ನು ಕಾಣಬಹುದು. ಇವಕ್ಕೆ ಮೆಹಬೂಬ್ ಸುಬಾನಿಕಟ್ಟೆ ಎಂದು ಹೆಸರು. ಈ

ಕಟ್ಟೆಗಳು ಖಾದ್ರಿಯಾ ಸಿಲ್‌ಸಿಲಾದ ಪ್ರಮಥನಾದ ಅಬ್ದುಲ್ ಖಾದರ ಜೇಲಾನಿಯ ಹೆಸರಲ್ಲಿವೆ. ಕೇಸುಪೀರ್ ದಸ್ತಗೀರ ಇತ್ಯಾದಿ ಹೆಸರುಳ್ಳ ಈ ಸಂತನ ಹೆಸರಲ್ಲಿ ಹಬ್ಬ ಮಾಡಿ ಊತಣ ನೀಡಲಾಗುತ್ತದೆ. ಆದರೆ ಸಾಂಸ್ಕೃತಿಕವಾಗಿ ಕರ್ನಾಟಕದ ಚಿಸ್ತಿ ಸೂಫಿಗಳ ಪ್ರಭಾವವೇ ಆಳವಾದುದು. ಬಂದೇನವಾಜ, ಲಾಡ್ಲೇಮಶಾಯಿಕ್, ಗಾಮಿರಾಂಜ. ಅಮೀನುದ್ದಿನ, ಖಾದರಲಿಂಗ ಹೊನ್ನೂರಸ್ವಾಮಿ, ಮಹ್ಮದ ಬಹ್ರಿ ಇವರೆಲ್ಲಾ ಕರ್ನಾಟಕದ ಚಿಸ್ತಿ ಸೂಫಿಗಳು ವೈಚಾರಿಕ ಧೀಮಂತಿಕೆ ಪ್ರತಿಭೆಗಳಿಂದ ತಮ್ಮ ಬಾಳಿಗೂ ತತ್ವಜ್ಞಾನ ಸಾಹಿತ್ಯ ಸಂಗೀತಗಳಿಗೂ ಕ್ರಿಯಾಶೀಲತೆ ತಂದುಕೊಂಡವರು. ಭಾರತದ ಉಪಖಂಡದಲ್ಲೇ ಚಿಸ್ತಿ ಸೂಫಿಗಳ ಸಾಧನೆ ದೊಡ್ಡದು, ಆದರೂ ಯಾವುದೇ ಒಂದು ಸಿಲಸಿಲಾ ಇಡಿಯಾಗಿ ಕ್ರಾಂತಿಕಾರಿಯಾಗಿತ್ತು. ಅಥವಾ ಸಂಪ್ರದಯವಾದಿಯಾಗಿತ್ತು. ಎನ್ನುವಂತಿಲ್ಲ ಬೇರೆ ಬೇರೆ ಸಂದರ್ಭಗಳಲ್ಲಿ ಸೂಫಿಗಳು ವೈಯಕ್ತಿಕವಾದ ತಮ್ಮ ಸಾಧನೆಯಿಂದಲೊ ಚಾರಿತ್ರಿಕ ಸಂದರ್ಭದಿಂದಲೊ ದೊಡ್ಡವರು ಸಣ್ಣವರು ಆಗಿದ್ದಾರೆ.

ಭಾರತ ಹಾಗು ಕರ್ನಾಟಕಗಳಿಗೆ ಸೂಫಿಸಂ ಬಂದುದನ್ನು ನಾಲ್ಕು ಬಗೆಯಲ್ಲಿ ವಿವರಿಸಬಹುದು.

೧. ಕಡಲ ವ್ಯಾಪಾರಿಗಳ ಜೊತೆಯಲ್ಲಿ ಮಿಶನರಿಗಳ ರೂಪದಲ್ಲಿ ಆಗಮನ

೨. ಸೈನಿಕ ದಂಡಯಾತ್ರೆಗಳ ಜತೆಗೆ ಧರ್ಮಯೋಧರ ರೂಪದಲ್ಲಿ ಆಗಮನ

೩. ರಾಜಕೀಯ ಆಹ್ವಾನ ಅಥವಾ ಒತ್ತಡದಿಂದ ರಾಜರುಗಳ ರೂಪದಲ್ಲಿ ಆಗಮನ

೪. ಜ್ಞಾನವನ್ನು ಗುರುವನ್ನೊ ಹುಡುಕಿಕೊಂಡು ತತ್ವಾರ್ಥಿಗಳಾಗಿ ಆಗಮನ.

ಕರ್ನಾಟಕಕ್ಕೆ ಸೂಫಿಗಳ ಆಗಮನ

(ವಾರಕರಿ ಸಂಪ್ರದಾಯ, ದತ್ತ ಸಂಪ್ರದಾಯ,ಸಮರ್ಥ ಸಂಪ್ರದಾಯ)

ಹೀಗೆ ಅನೇಕ ಮಾರ್ಗಗಳಿಂದ ಆಗಮಿಸಿದ ಸೂಫಿಗಳು ಕರ್ನಾಟಕಕ್ಕೆ ಹೇಗೆ ಬಂದರು. ಇಲ್ಲಿ ಬಂದು ಯಾರ ಜೊತೆ ಅವರು ಮಿಶ್ರಿತರಾದರು ಹಾಗೂ ಅವರಿಲ್ಲಿಗೆ ಬಂದಾಗ ಯಾವ ಯಾವ ಪಂಥಗಳಿದ್ದವು. ಯಾರ ಜೊತೆ ಅವರು ಮುಖಾಮುಖಿಯಾದರು. ಇದನ್ನೆಲ್ಲಾ ನೋಡಿದಾಗ ಆ ವೇಳೆಯಲ್ಲಿ ವಾರಕರಿ ಸಂಪ್ರದಾಯ, ದತ್ತ ಸಂಪ್ರದಾಯ, ಸಮರ್ಥ ಸಂಪ್ರದಾಯ ಮಹಾರಾಷ್ಟ್ರದಲ್ಲಿ ಮೂಂಚೂಣಿಯಲ್ಲದ್ದವು. ಪಂಢರಪುರದ 'ವಿಠೋಭಾ' ನನ್ನು ಆರಾಧ್ಯ ದೈವನನ್ನಾಗಿ ಮಾಡಿಕೊಡು 'ವಾರಕರಿ' ಸಂಪ್ರದಾಯ ಮುಂಚೂಣಿಗೆ ಬಂದಿತ್ತು. 'ವಾರಿ' ಅಂದರೆ ಹೋಗುವದು ಬರುವದು 'ಕರಿ' ಅಂದರೆ ಮಾಡುವದು ಹೀಗೆ

ಆಷಾಡ, ಕಾರ್ತಿಕ, ಏಕಾದಶಿಯಂದು ಪಂಢರಪುರಕ್ಕೆ ಹೋಗಿ ಬರುವದಕ್ಕೆ 'ವಾರಕರಿ' ಎಂದು ಹೆಸರು. ಪಂಢರಪುರದ ತನಕ ಕಾಲ್ನಡಿಗೆಯಿಂದ ಹೋಗಿ ಬರಬೇಕು. ಇವರು ತಮ್ಮ ಕೊರಳಲ್ಲಿ ಕಟ್ಟಿಗೆಯ ತುಳಸಿ ಮಾಲೆ ಧರಿಸಿರುತ್ತಾರೆ. ಸಂಪೂರ್ಣವಾಗಿ ಮಾಂಸಾಹಾರ, ನಿಷೇಧ ಅಸತ್ಯ ನುಡಿಯಬಾರದು. ಮಧ್ಯ ಸೇವನೆ ಮಡಬಾರದು. ಜೀವನದಲ್ಲಿ ಒಳ್ಳೇಯ ಮೌಲ್ಯಗಳನ್ನು ಅಳವಡಿಸಿಕೊಂಡು ಸದಾ ವಿಠ್ಠಲನ ಭಕ್ತಿಯಲ್ಲಿ ತಲ್ಲೀಣರಾಗಿರಬೇಕೆನ್ನುವದು ಇವರ ತತ್ವ ಸಿದ್ಧಾಂತ.

'ಚಂದ್ರಭಾಗಾ' ತೀರದಲ್ಲಿ ೧೮ಜಾತಿಯ ಜನರು ಒಂದಾಗಿ ವಿಠ್ಠಲನ ಆರಾಧನೆ ಮಾಡುತ್ತಿದ್ದರು. ಭಜನೆ, ಕೀರ್ತನೆ, ಗಾಯನದಲ್ಲಿ ಅನೇಕ ಸಂತರಿದ್ದರು ಜ್ಞಾನೇಶ್ವರ(ಬ್ರಾಹ್ಮಣ) ತುಕಾರಾಮ (ವೈಶ್ಯ), ನರಹರಿ(ಅಕ್ಕಸಾಲಿಗ) ಸೇನಾ (ಕ್ಷೌರಿಕ), ಜನಾಬಾಯಿದಾಸಿ(ಮಾದಾರ), ನಾಮದೇವ (ಸಿಂಪಿ), ಚೋಕಾ ಮೇಳಾ (ಮಾದಾರ), ಏಕನಾಥ (ಬ್ರಾಹ್ಮಣ) ಕಾನೋಪಾತ್ರಾ (ವೇಶ್ಯೆ), ಬಂಕಾ(ಕುಂಬಾರ ಹೀಗೆ ಎಲ್ಲರೂ ವಿಠ್ಠಲನಿಗೆ ಸಂಬಧಪಟ್ಟ ಅಭಂಗಗಳನ್ನು ರಚಿಸಿದರು.

ಜನಾಬಾಯಿ,ಕಾನೋಪಾತ್ರಾ, ಮುಕ್ತಾಬಾಯಿ, ಸೋಯರಬಾಯಿ ಸಂತ ಸಖುಬಾಯಿ ಇವರೆಲ್ಲ ಮಹಿಳೆಯರು ಸ್ವತಂತ್ರವಾಗಿ ಅಭಂಗಗಳನ್ನು ಸುಂದರವಾಗಿ ರಚಿಸಿ ಹಾಡುತ್ತಿದ್ದರು. ಸ್ತ್ರೀಯರಿಗೆ ಮುಕ್ತವಾದ ಸ್ವಾತಂತ್ರ್ಯ ಆ ಕಾಲದಲ್ಲಿತ್ತು. ಹಾಗೆಯೇ ಜ್ಞಾನೇಶ್ವರನ ಸಹೋದರರಾದ, ನಿವೃತ್ತನಾದ, ಸೋಪಾನದೇವ ಇವರು 'ಅಭಂಗ' ಗಳನ್ನು ರಚಿಸುತ್ತಿದ್ದರು. ಅತ್ರಿ ಅನುಸೂಯಾ ತನ್ನ ಒಂದು ಅಭಂಗದಲ್ಲಿ ಹೀಗೆ ಹೇಳಿದ್ದಾಳೆ.

'ಜ್ಞಾನದೇವೆ ರಚಿಲಾ ಪಾಯಾ

ತುಕಾ ಝಾಲಾಸೇ ಕಳಸ

ಖಾಂಬಾ ದಿಲಾ ಏಕನಾಥ'

(ವಾರಕರಿ ಸಂಪ್ರದಾಯದ ಅಡಿಗಲ್ಲು ಹಾಕಿದವರು ಜ್ಞಾನದೇವ ಅದರ ಮೇಲೆ ಕಳಸ ಇಟ್ಟವರು ತುಕಾರಾಮ)

ಜ್ಞಾನೇಶ್ವರನಿಂದ ಪ್ರಾರಂಭವಾದ ಈ ಸಂಪ್ರದಾಯ ಚಿಕ್ಕೋಡಿ ಭಾಗದ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಅನೇಕ ಜನರು ವಾರಕರಿ ಸಂಪ್ರದಾಯವರಿದ್ದಾರೆ.

ದತ್ತ ಸಂಪ್ರದಾಯ: ಭಾರತದ ಜಾಗೃತ 'ದತ್ತ' ದೇವಸ್ಥಾನಗಳಲ್ಲಿವೆಯೋ ಅಲ್ಲಿ ಪೂಜೆ ನಡೆಯುತ್ತದೆ. ಶ್ರೀಶೈಲ, ಕುರವಪುರ, ಔದುಂಬರ, ನರಸಿಂಹವಾಡಿ, ಬಾಬಾ ಬುಡನಗಿರಿ,

ಪೀಠಾಪುರ ನರಸಿಂಹವಾಡಿ ಈ ಸಂಪ್ರದಾಯ ಬಗ್ಗೆ ಒಂದು ಇತಿಹಾಸವಿದೆ. ಬ್ರಹ್ಮ ವಿಷ್ಣು, ಮಹೇಶ್ವರರು (ಉತ್ಪತ್ತ, ಸ್ಥಿತಿ,ಲಯ) ಪತಿವೃತಾ ಶಿರೋಮಣಿಯಾದ ಅನುಸೂಯಾಳನ್ನು ಪರೀಕ್ಷಿಸಲು ಭೂಲೋಕಕ್ಕೆ ಬರುತ್ತಾರೆ. ಮೂರೂ ಜನ ಅನುಸೂಯಾಳಿಗೆ ನೀನು ನಗ್ನವಾಗಿ ನಮಗೆ ಊಟಕ್ಕೆ ಬಡಿಸಬೇಕೆಂದಾಗ ಅವಳು ತನ್ನ ತಪಸ್ಸಿನ ಫಲದಿಂದ ಮತ್ತು ಪತಿವೃತಾ ಧರ್ಮದಿಂದ ಅವರನ್ನು 'ಕೂಸು' ಗಳನ್ನಾಗಿ ಮಾಡಿ ಊಟಕ್ಕೆ ನೀಡುತ್ತಾಳೆ. ನಂತರ ಅವರು ಪ್ರಸನ್ನರಾಗಿ ಏನು ವರ ಬೇಕೆಂದು ಕೇಳಲಾಗಿ ನೀವೂ ಮೂರು ಜನ ಒಂದಾಗಿರೆಂದು ಹೇಳುತ್ತಾಳೆ. ನಿಮ್ಮನ್ನು ಪೂಜಿಸುತ್ತೇನೆ. ದೇಹ ಒಂದು ಮುಖ ಮೂರು ಈ ದತ್ತ ಸಂಪ್ರದಾಯದವರು ಆರತಿ, ಭಜನ, ಸ್ತೋತ್ರಗಳಿಂದ ಆ ಕಾಲದಲ್ಲಿ ಇದು ಮುಂಚೂಣಿಯಲ್ಲಿತ್ತು.

ಸಮರ್ಥ ಸಂಪ್ರದಾಯ: ಈ ಸಂಪ್ರದಾಯದ ಮೂಲ ವ್ಯಕ್ತಿ ಸಮರ್ಥ ರಾಮದಾಸ ಮಹಾರಾಷ್ಟ್ರದ ಸಾತಾರದವರು. ೧೨ನೇ ವಯಸ್ಸಿಗೆ ಮದುವೆಯನ್ನು ಧಿಕ್ಕರಿಸಿ ಮದುವೆ ಮಂಟಪದಿಂದಲೇ ಓಡಿಹೋಗಿ 'ಸಜ್ಜನಗಢ' ಮತ್ತು 'ಶಿವಧರಫಳ' ದಲ್ಲಿ ಕುಳಿತು, ಧ್ಯಾನ ಮಾಡಿದವರು. ಇವರು ಶ್ರೀರಾಮನ ಭಕ್ತರು. ಇವರು ಕ್ರಿಯಾಶೀಲರು, ರಾಷ್ಟ್ರ ಉತ್ಥಾನ ಸಂಕಲ್ಪ ತೊಟ್ಟವರು, ಯುವಕರನ್ನು ಬಲಶಾಲಿಗಳನ್ನಾಗಿ ಮಾಡಿ ಅವರಲ್ಲಿ ಕುಸ್ತಿ, ವ್ಯಾಯಾಮ, ಬಲೋಪಾಸನೆಯನ್ನು ತುಂಬಿದರು. ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. 'ದಾಸಭೋದ' 'ಕರುನಾಷ್ಟಕ' 'ಮನಾಚೆ ಶ್ಲೋಕ' ಈ ಸಂಪ್ರದಾಯದವರು ಇಂದಿಗೂ 'ಸಜ್ಜನಗಡ'ದಲ್ಲಿ ಉಪಾಸನೆ ಮಾಡುತ್ತಾರೆ.

ಹೀಗೆ ಕರ್ನಾಟಕದ ಸೂಫಿಗಳಿಗೆ ಬಂಗಾಲ ಸಿಂಧಗಳಲ್ಲಿ ಸಿಕ್ಕಂತೆ ನಾಥಪಂಥಗಳ ನೇರ ಒಡನಾಟ ಸಿಗಲಿಲ್ಲ. ಬದಲಿಗೆ ಗೋರಖ ಮಚ್ಛೇಂದ್ರನಾಥರ ಮೂಲವುಳ್ಳ ಮಹಾನುಭಾವ ವಾರಕರಿ ದತ್ತ ಪಂಥಗಳ ಮೂಲಕ ನಾಥ ಸಂಪರ್ಕ ಸಿಕ್ಕಿತು. ಉತ್ತರದಿಂದ ಬರುವ ಸೂಫಿಗಳೆಲ್ಲ ಈ ಮರಾಠಿ ಪಂಥಗಳಿದ್ದ ಪ್ರದೇಶದ ಮೂಲಕ ಹಾದೇ 'ಕರ್ನಾಟಕ' ವನ್ನು ಪ್ರವೇಶಿಸಬೇಕಿತ್ತು. ಸಿಂಧ್ ಸೀಮೆಯಿಂದ ಹೊರಟ ಮೀರ ಆಲಂ ನವಾಜನು, ಅಕ್ಕಲಕೋಟೆಯ ದತ್ತಪಂಥದ ಸಿದ್ಧರ ಜತೆ ಕೆಲಕಾಲ ಇದ್ದು, ನಂತರ ಹಂಪಿಯತ್ತ ಬಂದವನು. ಹೊಸಪೇಟೆಯಲ್ಲಿ ನಡೆಯುವ ಅವನ ಉರುಸಿಗೆ ಈಗಲೂ ಅಕ್ಕಲಕೋಟೆಯ ಲಿಂಗಾಯತರು ಬರುತ್ತಾರೆ. ಕರ್ನಾಟಕದ ಸೂಫಿಗಳು ಮಹಾರಾಷ್ಟ್ರದ ಗಡಿಪ್ರದೇಶಗಳಲ್ಲಿ ಹೆಚ್ಚಾಗಿದ್ದಾರಷ್ಟೇ. ಕರ್ನಾಟಕ, ಮಹಾರಾಷ್ಟ್ರಗಳು ಬೇರೆ ರಾಜ್ಯಗಳು ಎಂಬ ದಂದುಗ ಬಿಟ್ಟು ನೋಡಿದರೆ, ಬೀದರ, ಗುಲ್ಬರ್ಗಾ, ಬಿಜಾಪೂರ, ಸೋಲ್ಹಾಪೂರ, ಕೊಲ್ಹಾಪೂರ, ಮಂಗಳವೇಡ, ಪಂಡರಾಪುರಗಳು, ಶರಣ ಮಹಾನುಭಾವ, ವಾರಕರಿ, ದತ್ತ ಪಂಥ ಸೂಫಿಗಳ ಪಾಲಿಗೆ ಒಂದೇ ಸೀಮೆಯಾಗಿದ್ದವು. ರಾಜಕೀಯವಾಗಿ ಕೂಡ ಈ ಸೀಮೆ ರಾಷ್ಟ್ರಕೂಟ ಚಾಲುಕ್ಯರಿಂದ ಮೊದಲ ಮಾಡಿ ಬಹನಿ ಆದಿಲಶಾಹಿ, ಮುಂಬೈ ಪ್ರೆಸಿಡೆನ್ಸಿಗಳ ತನಕ, ಒಂದೇ ಪ್ರಭುತ್ವದಡಿ ಬರುತ್ತಿತ್ತು. ಬಹಮನಿ

ಆದಿಲಶಾಹಿ ಪ್ರಭುಗಳ ತಮ್ಮ ವೈವಾಹಿಕ ಸಂಬಂಧಗಳಿಂದ ಮರಾಠಿ ಭಾಷೆ, ಹಾಗೂ ಮರಾಠರನ್ನು ಆಡಳಿತದಲ್ಲಿ ಸೇರಿಸಿಕೊಂಡ ನೀತಿಯಿಂದ ಈ ಸಂಬಂಧದ ಎಳೆಗಳು ಮತ್ತಷ್ಟು ಗಟ್ಟಿಯಾದವು.

ದತ್ತಪಂಥ ವಾರಕರಿ ಮಹಾನುಭಾವ ಪಂಥಗಳು ಒಳಗೆ ಬೆಳೆಯುವಾಗ, ಸೂಫಿಗಳಿಗೆ ಅನ್ಯತೆ ಕಾಡಲಿಲ್ಲ. ಅವರು ಈ ಪಂಥಗಳ ಒಳಗೆ ಸಹಜವಾಗಿ ಪ್ರವೇಶ ಪಡೆದರು. ಇದರ ಪರಿಣಾಮ ಯಾವ ಮಟ್ಟಕ್ಕೆ ಹೋಯಿತೆಂದರೆ, ಮಹಾನುಭಾವರು 'ಮುಸಲ್ಮಾನ ಪ್ರವೃತ್ತಿ'ಯವರು ಎಂಬ ನಿಂದೆಗೆ ಒಳಗಾದರು. ಇದಕ್ಕೆ ತಕ್ಕಂತೆ ಕಾಬೂಲು ಕಂದಹಾರಗಳಲ್ಲಿ ಅದರ ಅನುಯಾಯಿಗಳು ಹರಡಿದರು. ಮಹಾನುಭಾವ ಮತ್ತು ವಾರಕರಿ ಪಂಥದ ಅನೇಕ ಸಂತರ ಗದ್ದುಗೆಗಳು ದರ್ಗಾಗಳಂತೆ ಇವೆ ಅದಕ್ಕೆ ಸೂಫಿ ಸಂತರಿಗೆ ನಡೆದುಕೊಳ್ಳುವಂತೆಯೇ ಮುಸಲ್ಮಾನರು ನಡೆದುಕೊಳ್ಳುತ್ತಾರೆ. ನಾಸಿರುದ್ದೀನ ನಾಗನಾಥ ಪರಂಪರೆಯಲ್ಲಿ ಬರುವ ಅಜ್ಞಾನ ಸಿದ್ಧನ ದರ್ಗಾ ಇಂತಹ ಒಂದು ಕೇಂದ್ರ ಆದರೆ ಕರ್ನಾಟಕದಲ್ಲಿ ದತ್ತ ಪೀಠಗಳು ಈ ಬಗೆಯಲ್ಲಿ 'ಮುಸ್ಲಿಮ್' ಭಕ್ತರನ್ನು ಆಕರ್ಷಿಸುವ ತಾಣಗಳಾಗಿ ಉಳಿದಂತೆ ಕಾಣುವುದಿಲ್ಲ.

ಹೀಗೆ ಹಲವು ಪಂಥಗಳಿದ್ದ ಕಾಲದಲ್ಲಿ ಸೂಫಿಗಳು ಕರ್ನಾಟಕ ಪ್ರವೇಶ ಪಡೆದರು. ಮುಖ್ಯವಾಗಿ ಚಿಕ್ಕೋಡಿ ತಾಲೂಕಿನಲ್ಲಿ ಬರುವ ಕಾರದಗಾ, ನಿಪ್ಪಾಣಿಗೆ ಮಹಾರಾಷ್ಟ್ರದಿಂದ ಸೂಫಿಗಳು ಬಂದರೇ; ಸದಲಗಾ, ಕರೋಶಿ, ಅಂಕಲಿ, ಯಕ್ಸಂಬಾ, ಖಡಕಲಾಟ ಊರುಗಳಿಗೆ ಬಿಜಾಪುರದ ಕಡೆಯಿಂದ ಬಂದರೆಂದು ಇಲ್ಲಿಯ ಸ್ಥಳೀಯರು ಹೇಳುತ್ತಾರೆ.

ಚಿಕ್ಕೋಡಿ ತಾಲೂಕಿನ ಮುಸ್ಲಿಂ ಉರುಸುಗಳು (ಜಾತ್ರೆಗಳು)

ಹಜರತ್ ಪೀರ್ ರಾಜೇನೂರ ಬಾಬಾ ಉರ್ಫ ಶಾನೂರವಲಿ ಬಾಬಾ ದೇವರ ಉರುಸು (ಜಾತ್ರೆ) ಕರೋಶಿ

ಚಿಕ್ಕೋಡಿಯಿಂದ ೮ ಕಿ.ಮೀ ಅಂತರದಲ್ಲಿರುವ ಕರೋಶಿ ಗ್ರಾಮವು ಮಹಾದೇವ ಮಂದಿರ, ವಿಠ್ಠಲ ಮಂದಿರ, ಬಸವಣ್ಣ ಮಂದಿರ, ಲಕ್ಷ್ಮೀ ಮಂದಿರಗಳು, ಇಲ್ಲಿವೆ. ಈ ಊರಿಗೆ ಮೊದಲು 'ಕುರೇಶಿ', 'ಕರ್ವೇಶಿ', ಕರೋಶಿ ಎಂಬ ಸ್ಥಳನಾಮ ಬಂದಿದೆ. ಇಲ್ಲಿ ೮ರಿಂದ ೯ ಸಾವಿರ ಜನಸಂಖ್ಯೆಯಿದೆ.

ಶಾನೂರು ಬಾಬಾರು ಅರಬಸ್ತಾನದಿಂದ ಮೊದಲಿಗೆ ಬಿಜಾಪೂರಕ್ಕೆ ಬಂದು ಅಲ್ಲಿಂದ ಕರೋಶಿಗೆ ಆಗಮನ. ಇಲ್ಲಿ ಬಂದಾಗ ಅವರು ಪ್ರಾರ್ಥನೆಯಿಂದ ಜನರನ್ನು ಆಕರ್ಷಿಸಿ ಧರ್ಮದಲ್ಲಿ ನಂಬುಗೆ ಭಕ್ತಿ, ಶ್ರದ್ಧೆ, ಮೂಡುವಂತೆ ಮಾಡಿದರು. ಅವರ ಪ್ರಾರ್ಥನೆಯಲ್ಲಿ ಅದ್ಭುತ ಶಕ್ತಿಯಿತ್ತು. ಎಲ್ಲ ಸಮೂದಾಯದವರು ಅವರ ಕಡೆಗೆ ವಾಲಿದರು. ಸುಮಾರು

೫೦೦ ವರ್ಷಗಳ ಹಿಂದೆ ಆಗಮಿಸಿದ ಶಾನೂರು ಬಾಬಾರ ಧರ್ಮಭೋದನೆ ಜನರಲ್ಲಿ ಹೊಸ ಚೈತನ್ಯವನ್ನು ಹುಟ್ಟು ಹಾಕಿತು.

ಇಲ್ಲಿ ಆಗಮಿಸುವ ಜನರ ಭಕ್ತಿ ಎಷ್ಟಿದೆಯೆಂದರೆ ಭೂತ ಹಿಡಿದವರು, ಮಾಟ–ಮಂತ್ರ ಮಾಡಿದವರು, ಗಂಡ–ಹೆಂಡತಿಯ ಜಗಳವಿದ್ದವರು, ಮಕ್ಕಳಿಲ್ಲದವರು ಅನೇಕ ಜನ ಅನೇಕ ಸಮಸ್ಯೆಗಳನ್ನು ಹೊತ್ತುಕೊಂಡು ಬಂದು ಈ ಶಾನೂರು ಬಾಬಾರಲ್ಲಿ ಬೇಡಿಕೊಳ್ಳುತ್ತಾರೆ. ಭೂತ ಹಿಡಿದ ವ್ಯಕ್ತಿಗಳ ಚೀರಾಟ, ನರಳಾಟವನ್ನು ನೋಡಿದರೆ ಇಲ್ಲಿ ಮನೋವಿಜ್ಞಾನಕ್ಕೆ ಸವಾಲೆನ್ನುವಂತಿದೆ. ದಕ್ಷಿಣ ಆಫ್ರೀಕಾ, ಜಿಂಬಾಬ್ವೆಯಿಂದ ಕೆಲವರು ಕಾಲುಗಳಿಲ್ಲದ ಮಕ್ಕಳನ್ನು ಇಲ್ಲಿಗೆ ಕರೆದುಕೊಂಡು ಬಂದು ಗುಣ ಮುಖರಾಗಿ ಹೋಗಿದ್ದಾರೆ. ಇಲ್ಲಿ ಹಿಂದೂ ಭಕ್ತರೇ ಹೆಚ್ಚು. ಇದೊಂದು ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತ. ಶಾನೂರ ಬಾಬಾರ ಮರಣದ ಬಗ್ಗೆ ಮಾಹಿತಿ ಇಲ್ಲ.

ಇಲ್ಲಿ ಗುರುಶಿಷ್ಯ ಪರಂಪರೆಯಿದೆ ೧೮೪೯ ರಲ್ಲಿ ಪೂನಾದಲ್ಲಿ ದೊರೆತ ರೀಕಾರ್ಡದಲ್ಲಿ ಈ ಪರಂಪರೆ ಮಾಹಿತಿ ದೊರೆಕಿತು.

ಗುರುಶಿಷ್ಯ ಪರಂಪರೆ:

೧. ಮುಸ್ತಫಾ ಶಹಾ ೨. ಅಹಮದ್ ಅಲಿ ಶಹಾ ೩) ಮಹಮದ್ ಅಲಿ ಶಹಾ

ಕರೋಶಿಯ ದರ್ಗಾಕ್ಕೆ ಆದಿಲ್‌ಶಾಹಿ ಆಡಳಿತವಿದ್ದಾಗ ಇದಕ್ಕೆ ಜಮೀನು ಮಂಜೂರಾಗಿತ್ತು. ೧೮೫೩ ರಲ್ಲಿ ಸರ್ವೇ ನಡೆಯಿತು. ೧೮೬೧ ರಲ್ಲಿ ಬ್ರಿಟಿಷ್ ಸರಕಾರ ಬಂದಿತು. ವಿಕ್ಟೋರಿಯಾ ರಾಣಿ ಸನದ ಕೊಟ್ಟರು. ಮುಲ್ಲಾ ಕುಟುಂಬ ಮತ್ತು ಮಕಾನದಾರ ಕುಟುಂಬ ಸೇವೆಯಲ್ಲಿ ನಿರತವಾಗಿವೆ.

೧೯೫೦ ರಲ್ಲಿ 'ಬಾಂಬೆ ಪಬ್ಲಿಕ್ ಟ್ರಸ್ಟ್' ಅಸಿಸ್ಟಂಟ ಚಾರಿಟಿ ಕಮೀಷನರ ಬೆಳಗಾವಿ ಇವರು ರಜಿಸ್ಟರ ಮಾಡಿದರು ೧೯೬೦ ರಲ್ಲಿ ವಕ್ಫ ಬೋರ್ಡದಲ್ಲಿ ಮುಸ್ಲಿಂ ದೇವಸ್ಥಾನಗಳು ಸೇರಿದವು. ಹಿಂದೂ ದೇವಸ್ಥಾನಗಳು ಚಾರಿಟಿ ಕಮೀಟಿಯಲ್ಲಿ ಉಳಿದವು. ಇದರಲ್ಲಿ ಮತ್ತೆ ಎರಡು ರಿವೈಜ್ ಸರ್ವೇಗಳಾದವು. ಬಿ.ಪಿ.ಟ.ನಂ ೪೬೦ ಮತ್ತು ೪೬೨ ಬಿ.ಪಿ.ಟಿ. ಬಂದಾಗಿನಿಂದ ಎಲ್ಲ ದರ್ಗಾ ವ್ಯವಹಾರ ಟ್ರಸ್ಟ್ ಮುಖಾಂತರ ನಡೆಯುತ್ತದೆ, ದರ್ಗಾಕ್ಕೆ ಸುಮಾರು ೧೪ ಎಕರೆ ಜಮೀನಿದೆ. ಒಂದು ಎಕರೆ ಒಂಭತ್ತು ಗುಂಟೆ ಜಾಗೆಯಲ್ಲಿ ಶ್ರೀ ಶಾನೂರ ಬಾಬಾರ ಸಮಾಧಿಯಿದೆ.

ಯುಗಾದಿ, ಪಾಡ್ಯ ಆದ ಹನ್ನೊಂದನೇಯ ದಿನಕ್ಕೆ ಜಾತ್ರೆ ಪ್ರಾರಂಭವಾಗುತ್ತದೆ. ಕರ್ನಾಟಕ, ಗೋವಾ, ಮಹಾರಾಷ್ಟ್ರಗಳಿಂದ ಭಕ್ತರು ಆಗಮಿಸುತ್ತಾರೆ. ೧೫ ದಿನಗಳ ಕಾಲ ಉರುಸು ನಡೆಯುತ್ತದೆ. ಮೊದಲ ದಿನ ಗಂಧ ಏರಿಸುವದು, ಮರುದಿನ ನೈವೈದ್ಯ, ಮೂರನೇಯ ದಿನ ಗಲೀಫ ನಂತರ ಮಹಾಪ್ರಸಾದ ಬಲಿಪದ್ಧತಿಯದೆ ಇದು ಹಿಂದೂ ಮುಸ್ಲಿಂ ಭಾವೈಕ್ಯತೆಯ ಉರುಸು.

ಶ್ರೀ ಮರ್ದ ಗೈಬಿಪೀರ ದೇವರ ಉರುಸು(ಜಾತ್ರೆ) ಖಡಕಲಾಟ

ವೈಭವಶಾಲಿ ದಿವಸ ಬೆಳಗಾಯಿತು. ದೇವರ ದರ್ಶನದ।

ಅರ್ಪಣೆ ಮಾಡೋಣ ನಡೆಯಿರಿ ಗಲೀಫ, ಸಂದಲ ಧೂಪ ಚಂದನ ।

ಹಿಂದು ಮುಸ್ಲಿಂ ಬಂಧು ಬಳಗ ಶೋಭಿಸಿತು ಭಾರತಕ್ಕೆ।

ಅರ್ಪಣೆ ಮಾಡೋಣ ಸಂತರ ಪಾದಕ್ಕೆ ಒಗ್ಗಟ್ಟಿನ ಮಾಲೆ।

ಚಿಕ್ಕೋಡಿಯಿಂಧ ೧೫ ಕಿ.ಮೀ ಅಂತರದಲ್ಲಿರುವ ಖಡಕಲಾಟ ಎಂಬ ಊರು ೨೦,೦೦೦ ಸಾವಿರ ಜನಸಂಖ್ಯೆ ಉಳ್ಳದ್ದಾಗಿದೆ. ಇಲಿನ ಜನ ಭಯಭಕ್ತಿಯಿಂದ ಈ ಮೇಲಿನ ಹಾಡನ್ನು ಹಾಡುತ್ತ ಉರುಸು ಪ್ರಾರಂಭಿಸುತ್ತಾರೆ. ಪ್ರತಿವರ್ಷ ಮುಸಲ್ಮಾನ ತಾರೀಖ ಶಾಬಾನ ೧೬ ರಂದು ಆಗುತ್ತದೆ. ಮೊದಲು ಬಿಜಾಪೂರ ಆದಿಲ್ ಶಾಹಿ ಕಾಲದಲ್ಲಿ ಖಡಕಲಾಟ ಹುಕ್ಕೇರಿ ಪ್ರಾಂತ್ಯದಲ್ಲಿತ್ತು. ತದನಂತರ ಕೊಲ್ಹಾಪೂರ ಸಂಸ್ಥಾನದ ಕಾಪಸೀಕರ ಸೇನಾಪತಿ ಜಯಸಿಂಗರಾವ ಘೋರ್ಪಡೆ ಜಹಗೀರದಾರವಿತ್ತು. ಈ ಊರಿಗೆ ಈಗಲೂ ಚಿನ್ನದ ತಟ್ಟೆಯೆಂದು ಹೆಸರಿದೆ. ಗೈಬಿಪೀರ ಭವ್ಯದರ್ಗಾ ನೋಡಿ ಮನ ಪ್ರಸನ್ನವಾಗುತ್ತದೆ. ಈ ದರ್ಗಾದ ರಚನೆ ಬಿಜಾಪೂರ ಆದಿಲ್‌ಶಾಹಿ ಆಳ್ವಿಕೆಯಲ್ಲಿ ಆಗಿದೆ. ಇದರ ಕಟ್ಟಡ ಮೊಗಲ ಪದ್ಧತಿ ಪೂರ್ವ ಪಶ್ಚಿಮಕ್ಕೆ ಭವ್ಯದ್ವಾರಗಳಿವೆ. ಉತ್ತರ ಪ್ರವೇಶದ್ವಾರ ಕೊಲ್ಹಾಪೂರದ ಛತ್ರಪತಿ ಶಾಹು ಮಹಾರಾಜರು ಕಟ್ಟಿದ್ದಾರೆ.

'ಗೈಬಿ' ಶಬ್ದದ ಉರ್ದು ಅರ್ಥ 'ಗುಪ್ತವಾಗುವದು'; 'ಕಾಣೆಯಾಗುವುದು' ಗೈಬಿ ದರ್ಶನ ಕೊಟ್ಟು ಜನರಲ್ಲಿ ಭಕ್ತಿ ಮತ್ತು ಶಾಂತತೆಯನ್ನು ತುಂಬಿ ಊರಿಂದ ಊರಿಗೆ ಧರ್ಮಪ್ರಚಾರ ಮಾಡುತ್ತಾ; ಖಡಕಲಾಟ ಮುಗಿದ ನಂತರ, ಕಾಗಲ ತಾರಳೆ, ರಾಧಾನಗರ ಇಲ್ಲೆಲ್ಲಾ ಧರ್ಮಪ್ರಚಾರ ಮಾಡಿದರು. ಇವರ ಪವಾಡಗಳಿಗೆ ಎಷ್ಟೋ ಜನ ಹಿಂದೂಗಳು ಮುಸಲ್ಮಾನರಾಗ ತೊಡಗಿದರು.

ಕಾಪಸೀಕರ ಸೇನಾಪತಿ ಕಟ್ಟಿಸಿದ ಪೂರ್ವದ್ವಾರದಿಂದ ಗಲೀಫನ್ನು ಸಾರ್ವಜನಿಕ ಮೆರವಣಿಗೆಯೊಂದಿಗೆ ಮತ್ತು ಮಾನ ಸನ್ಮಾನದೊಂದಿಗೆ ತರುತ್ತಾರೆ. ಈ ದೇವರ ಅರ್ಚನೆಯ ಸಲುವಾಗಿ ಹುಕ್ಕೇರಿಯ ರಣದುಲ್ಲಾಖಾನರು ಇಬ್ಬರು ಮುಜಾವರರನ್ನು ಕಳಿಸಿದ್ದರು, ಹುಕ್ಕೇರಿಯ ಬಾಬಾರವರಿಗೆ ಗಂಧಲೇಪನ ಅಗ್ರಮಾನ್ಯವಿರುತ್ತದೆ. ಕಾಪಸೀಕರ ಸರಕಾರ ಪ್ರತಿದಿನ ನೈವೇದ್ಯ ಪೂಜಾರ್ಚನೆ, ನಂದಾದೀಪದ ಸಲುವಾಗಿ ಜಮೀನು ಕೊಟ್ಟಿದ್ದಾರೆ.

ಖಡಕಲಾಟ ಹದ್ದಿನಲ್ಲಿ 'ಪೀರವಾಡಿ' ಎಂಬ ಗ್ರಾಮದ ಹೊಲದ ಕಂದಾಯ ಹಣವನ್ನು ಉರುಸಕ್ಕೆ ಉಪಯೋಗಿಸುತ್ತಾರೆ. ಉಳಿದ ಹಣವನ್ನು ಸನದಿ, ಸಿಪಾಯಿಗಳಿಗೆ, ನಗಾರಿ ಬಾರಿಸುವವರಿಗೆ, ಸೇವಕರಿಗೆ ಉಳಿದ ಹಣವನ್ನು ಕೊಡುತ್ತಾ ೧೯೪೮ ರಲ್ಲಿ ಸಂಸ್ಥಾನ ವಿಲೀನವಾದಾಗ ಈ ಪದ್ಧತಿ ನಿಂತು ಹೋಯಿತು. ಆದರೆ ಭಕ್ತರು ಉದಾರ ದೇಣಿಗೆಯಿಂದ ಈ ಪರಂಪರಾಗತ ಪದ್ಧತಿ ಇನ್ನೂ ಇದೆ.

ಮುಸಲ್ಮಾನ ತಾರೀಖ ೧೬ ಶಾಬಾನಾ ೧ ರಿಂದ ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ಸನದಿ, ಸಿಪಾಯಿ, ಸೇವಕರು ದಿನಾಲು ಸಾಯಂಕಾಲ ವಾದ್ಯ ಸಮೇತ ಪೂಜೆ ಸಲ್ಲಿಸುತ್ತಾರೆ. ಉರುಸಿನ ಹಿಂದಿನ ರಾತ್ರಿ ಗಂಧರಾತ್ರಿ ಉರುಸಿನ ದಿನ ನೈವೇದ್ಯ, ಧೂಪ ಸಕ್ಕರೆ ಹೂವು ಏರಿಸುತ್ತಾರೆ. ವಾದ್ಯಸಮೇತ ಭಕ್ತರು ಗಲೀಫ ಹಾಕುತ್ತಾರೆ. ಫಕೀರರಿಗೆ ಧಾನ್ಯ ಮತ್ತು ಹಣ ಕೊಡತ್ತಾರೆ.

ಉರುಸಿನ ಮೂರನೇ ದಿನ 'ಕವ್ವಾಲಿ' ಭವ್ಯ ಕಾರ್ಯಕ್ರಮ, ಎರಡೆತ್ತಿನ ಗಾಡಿಗಳ ಶರ್ಯತ್ತು, ಕುದುರೆ ಶರ್ಯತ್ತು, ಕುದುರೆ ಗಾಡಿ ಶರ್ಯತ್ತು, ಕುಳಿತ ಕುದುರೆ ಶರ್ಯತ್ತು, ಜಂಗಿ ಕುಸ್ತಿ, ಇವೆಲ್ಲಾ ಜನರ ಮನಸ್ಸನ್ನು ಆಕರ್ಷಿಸುತ್ತದೆ. ೭ನೇ ದಿನ ಪುರಾಣವಾಡಿ ಊರಿನಲ್ಲಿರುವ ಕಾಶ್ಮೀರ ದೇವರಿಗೆ ಗಲೀಫ ಹಾಕಿದ ನಂತರ ಉರುಸು ಮುಕ್ತಾಯವಾಗುತ್ತದೆ.

ಖಾದಿರ ಶಮಸುದ್ಧಿನ ಶಮನಾಪೀರ ಉರುಸು (ಜಾತ್ರೆ) ಸದಲಗಾ

ಸದಲಗಾ ಕ್ಷೇತ್ರದಲ್ಲಿಯೇ ಅತ್ಯಂತ ದೊಡ್ಡ ಹಾಗೂ ಪ್ರಾಚೀನ ದರ್ಗಾ ಎಂದರೆ ಅದು 'ಖಾದಿರ ಶಮಸುದ್ಧಿನ' 'ಶಮನಾಪೀರ ದರ್ಗಾ'

ಚಿಸ್ತಿಯಾ ಖಾಂದಾನದ ಮೈನುದ್ದಿನ ಚಿಸ್ತಿ ತ್ಯಾಚನ ಸೂಫಿ ಸಂತರು ಅರಬಸ್ತಾನದಿಂದ ಧರ್ಮಪ್ರಚಾರಕ್ಕೆ ೧೬ನೇ ಶತಮಾನದಲ್ಲಿ ಆಗಮಿಸಿ ಇಲ್ಲಿನ ಸುತ್ತಮುತ್ತಲಿನ ಜನರಿಗೆ (ಹಿಂದೂ-ಮುಸ್ಲಿಮ್) ಧರ್ಮ ನೀತಿ ಭೋದನೆ ಮಾಡುತ್ತಿದ್ದರು.

೧೭೦೦ನೇ ಇಸ್ವಿಯಲ್ಲಿ ಖಾಜಿರ ಶಮಸುದ್ಧಿನ ಶಮನಾಪೀರ ಅವರ ಮರಣವಾದಗ, ಇವರ ಸಂಗಡಿಗ ಮಿರಸ್–ಮೀರಾಸಾಬ ಎಂಬುವವರು ಅವರ ಸಮಾಧಿಯನ್ನು ಕಟ್ಟಿದರು. ಅದೇ ಇಂದಿನ ದರ್ಗಾ ಆಗಿದ್ದು ಆಗ ಜೊತೆ ಬಂದ ಸಂಗಡಿಗರಿಗೂ ಅಲ್ಲಿಯೇ ಪಕ್ಕದಲ್ಲಿ ಸಮಾಧಿ ಕಟ್ಟಲಾಗಿದೆ. ಅಂದಿನಿಂದ ಇಂದಿನವರೆಗೆ ಪ್ರತಿವರ್ಷ ಅವರ ಪುಣ್ಯತಿಥಿಯಂದು (ರಜಬ್ ೨೦ನೇ ತಾರೀಖ) ಜಾತ್ರೆ (ಉರುಸು) ನಡೆಯುತ್ತದೆ. (ಉರ್ದು ಕ್ಯಾಲೆಂಡರ್ ಪ್ರಕಾರ).

ಪ್ರತಿವರ್ಷ ಜಾತ್ರೆ ನಿಮಿತ್ತ ಭಕ್ತರಿಂದ ಅಂಬಲಿ ಮತ್ತು ಮಲೀದಾನವನ್ನು ನೈವಧ್ಯವಾಗಿ ಸ್ವೀಕರಿಸುತ್ತಾರೆ (ಪ್ರಾಣಿ ಬಲಿ ಬಯಸುವುದಿಲ್ಲ).

ಇತ್ತೀಚೆಗೆ ಈ ದರ್ಗಾವನ್ನು 'ಪೀರ ಗುಡಿ' ಎಂದು ಕರೆಯುವುದುಂಟು (ಪೀರ್=ಓಲೆ), ಇಲ್ಲಿ ಹಿಂದೂ ಮುಸ್ಲಿಮ್ ಭಾವೈಕ್ಯದ ಸಂಗಮ ಕಾಣಿಸುತ್ತದೆ. ಇತ್ತೀಚೆಗೆ ಗುಮ್ಮಟವನ್ನು ಕಟ್ಟಲಾಗಿದೆ.

ಇಲ್ಲಿನ ಕೆಲಸಕಾರ್ಯಗಳ ಮೇಲುಸ್ತವಾರಿ ಮಾಡುವವರೆಲ್ಲರಿಗೂ ಭೂಮಿಯನ್ನು ದಾನ ಕೊಡಲಾಗಿದೆ. ಇಲ್ಲಿನ ಎತ್ತರದ ನಗಾರಿ ಖಾನೆಯನ್ನು ಹಾಲಪ್ಪನವರ ಮನೆತನ ಕಟ್ಟಿಸಿದೆ. ಹಾಗೂ ಜಾತ್ರೆ ಸಮಯದಲ್ಲಿ (ರಜಬ ೨೦ನೇ ತಾರೀಖನಂದು) ಗಂಧ ಏರಿಸುವ ಜವಾಬ್ದಾರಿಯನ್ನು ಜೈನರ ಹುದ್ದಾರ ಮನೆತನಕ್ಕೆ ಸಹಿಸಲಾಗಿದೆ. ನಗಾರಿ ಬಾರಿಸುವ ಹಕ್ಕು ಭೋಜೆ ಮನೆತನಕ್ಕೆ ವಹಿಸಲಾಗಿದೆ. ಇಲ್ಲಿನ ಆಗು ಹೋಗುಗಳನ್ನು ವ್ಯವಹರಿಸಲು ರಜಿಸ್ಟರ್ ಕಮೀಟಿ ಇದ್ದು ಪ್ರತಿ ೩ ವರ್ಷಕ್ಕೆ ಬದಲಾಗುತ್ತದೆ.

ಸ್ಥಳೀಯ ಅನೇಕ ಜನರ ಸಹಕಾರ ಮತ್ತು ಧಾರ್ಮಿಕ ಕಾರ್ಯಗಳಿಂದ ಕ್ಷೇತ್ರವು ತನ್ನ ಮಹಿಮೆಯನ್ನು ಹೆಚ್ಚಿಸಿಕೊಂಡಿದೆ. ಇಲ್ಲಿನ ಅನೇಕ ಜನರು ಗಲೀಫ ಹಾಕುವುದನ್ನು ರೂಢಿಯಾಗಿ ಅಚರಿಸುತ್ತಿದ್ದಾರೆ.

ಸ್ಥಳೀಯ ಐದು ಮುಜಾವರ ಮನೆತನಗಳು ಇಲ್ಲಿನ ಪೂಜೆ–ಪುನಸ್ಕಾರಗಳನ್ನು ನಡೆಸುತ್ತಾರೆ. ಮತು ಇತ್ತಿಚೆಗೆ ಇಲ್ಲಿಯೇ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಾಲೆಯನ್ನು ತೆರೆಯಲಾಗಿದೆ.

ಶ್ರೀ ಪೀರ ಬಂಗಾಲಿಬಾಬಾ ಉರುಸು (ಜಾತ್ರೆ) –ಕಾರದಗಾ

ವೇದಗಂಗಾ ದೂಧಗಂಗಾ ನದಿಯ ದಂಡೆಯ ಒಂದು ಎಕರೆ ಜಮೀನಿನಲ್ಲಿ ಕಾರದಗಾದ ಗ್ರಾಮದೇವತೆಯಾದ ಪೀರ್ ಬಂಗಾಲಿ ದರ್ಗಾ ಇದೆ ಇದು ಹಿಂದು ಮುಸ್ಲಿಂ ಭಾವೈಕ್ಯತೆಯ ಸಂಕೇತ. ಈ ಊರಲ್ಲಿ ಮಾರುತಿ, ಜ್ಯೋತಿಬಾ, ರುಕ್ಮೀಣಿ, ಯಲ್ಲಮ್ಮಾ, ಲಕ್ಷ್ಮೀ, ಜಂಗಲಿ ಬಾಬಾರ ಮಂದಿರಗಳಿವೆ. ೨೫ ವರ್ಷಗಳ ಕಾಲ ಬಾಬಾ ಜನರ

ಕಷ್ಟಕಾರ್ಪಣ್ಯಗಳನ್ನು ಕಳೆದು ಬೇಡಿದ ವರವನ್ನು ನೀಡುವ ದೇವರಾಗಿದ್ದನು.ಇಲ್ಲಿಯ ಜನ ಈ ದರ್ಗಾಕ್ಕೆ ಅತ್ಯಂತ ಭಯಭಕ್ತಿಯಿಂದ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ.

ಒಂದು ಐತಿಹ್ಯದ ಪ್ರಕಾರ ಬಾಬಾರವರು ಬಂಗಾಲದಿಂದ ಬಂದರು. ಇಲ್ಲಿ ಮೊದಲು ಕಾದರಖಾನ ಬಾದಶಹಾ ಎಂಬ ವ್ಯಕ್ತಿಯ ಹೆಸರಿನಿಂದ ಈ ಊರಿಗೆ ಕಾರದಗಾ ಎಂಬ ಹೆಸರು ಪ್ರಾಪ್ತವಾಯಿತು. ಬಂಗಾಲದಿಂದ ಸುಮಾರು ೫೦೦ ವರ್ಷಗಳ ಹಿಂದೆಯೇ ಬಾಬಾ ಆಗಮಿಸಿದರು. ಇವರು ಬಂದಾಗ ನದಿ ತುಂಬಿ ಹರಿಯುತ್ತಿತ್ತು. ಬಾಬಾರವರು ಒಬ್ಬ ಮುದುಕಿಯ ಹತ್ತಿರ ಊಟ ಕೇಳಿದರು. ಅಜ್ಜಿ ಊಟ ಕೊಟ್ಟಮೇಲೆ ನದಿಯ ದಂಡೆಗೆ ಬಂದು ಅಂಬಿಗನಿಗೆ ಈ ನದಿಯನ್ನು ದಾಟಿಸು ಎಂದು ಕೇಳಿದಾಗ ಇವರು ಅವನಿಗೆ ವಿಚಿತ್ರವಾಗಿ ಕಾಣುತ್ತಾರೆ. ಅಂಬಿಗನು ಹೊಳೆಯನ್ನು ದಾಟಿಸುವದಿಲ್ಲ. ನಿನ್ನದೆಲ್ಲವೂ ಸರ್ವನಾಶವಾಗಲಿ ಎಂದು ಶಾಪ ಕೊಟ್ಟರು. ನಂತರ ಅವರು ಕಂಬಳಿಯ ಮೇಲೆ ಕುಳಿತು ನದಿ ದಾಟಿ ದಂಡಗೆ ಬಂದರೆಂಬ ಕಥೆ ಪ್ರಚಲಿತದಲ್ಲಿದೆ.

ದರ್ಗಾದ ಪೂಜಾರಿ ಮಹಿಬೂಬ ಅಪ್ಪಾಲಾಲ ಮುಜಾವರ ದರ್ಗಾವನ್ನು ಸ್ವಚ್ಛವಾಗಿಡುವದು ಇವರ ಕೆಲಸ, ಗುರುವಾರ ವಿಶೇಷದಿನ, ಉರುಸಿನ ಜವಾಬ್ದಾರಿ ಅಪ್ಪಾಲಾಲ ಗುಲಾಬ ಮಕಾನದಾರರು ವಹಿಸಿರುತ್ತಾರೆ.

ಕಾರದಗಾ ಉರುಸು– ೫ ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಭಕ್ತಿಭಾವದಿಂದ ನಾವೆಲ್ಲಾ ಒಂದೇ ಎನ್ನುವ ತೆರನಾಗಿ ಉರುಸು ನಡೆಯುತ್ತದೆ. ಸೋಮವಾರ ಮಂಟಪ ಏರಿಸುವದು (ಸಂದಲ)ಮಂಗಳವಾರ ರಾತ್ರಿ ಗಂಧ ಏರಿಸುವದು. ಬುಧವಾರ ಬಲಿದಾನ (ಕುರಿ) ಗುರುವಾರ ಮಹಾಪ್ರಸಾದ ಹುಗ್ಗಿ, ಅನ್ನ ಸಾರು, ಶುಕ್ರವಾರ ಮಂಟಪ ಇಳಿಸುವದು.

ಗಲೀಫ ಏರಿಸುವ ದಿನ ಜನರಿಂದ ದೇಣಿಗೆ ಸಂಗ್ರಹಿಸಿದ ಹಣದಿಂದ ಸುಮಾರು ೩೬ಮೀಟರದಷ್ಟು ಬಟ್ಟೆಯನ್ನು ಸಾರ್ವಜನಿಕ ಮೆರವಣಿಗೆಯೊಂದಿಗೆ ತರುತ್ತಾರೆ. ಇಡೀ ದಿನ ಗಲೀಫ ಏರಿಸುವ ಕಾರ್ಯಕ್ರಮವಿರುತ್ತದೆ. ಮಾಳಿಯವರ ಮನೆತನದಿಂದ ಗಲೀಫ ಬರುತ್ತದೆ. ಯಾರಾದರೂ ಗಲೀಫ ಹಾಕುವವರಿದ್ದರೆ ಅವರು ಮುಜಾವರ, ಬಾವಾ, ಮಾಳಿ, ಕಲಾವಂತ, ತರಾಳ, ವಾಜಂತ್ರಿ, ಸಿಂಪಿ ಪ್ರತಿಯೊಬ್ಬರಿಗೂ ಐದೈದು ರೊಟ್ಟಿ ಮಾಲೀದಾ ಕೊಡಬೇಕೆನ್ನುವ ಸಂಪ್ರದಾಯ ಇಲ್ಲಿದೆ. ಮಹಾಪ್ರಸಾದ ಮುಗಿದ ಮೇಲೆ ಕುದುರೆ ಶರ್ಯತ್ತು ಎತ್ತುಗಳ ಗಾಡಿ ಶರ್ಯತ್ತು ಹಾಗೂ ಕುಸ್ತಿ ಪಂದ್ಯಗಳಿರುತ್ತದೆ.

ವೈಜಂತಾ ಗುಲಾಬ ಕಲಾವಂತ ಎಂಬ ಮಹಿಳೆಯಿಂದ ಗಂಧ ರಾತ್ರಿಯ ದಿನ, ಮಂಟಪ ದಿನ ನಾಟ್ಯ ಪ್ರದರ್ಶನವಿರುತ್ತದೆ. ಗ್ರಾಮ ಪಂಚಾಯತಿಯಿಂದ ಹಾಡುತ್ತ

ಕುಣಿಯುತ್ತ ದರ್ಗಾದವರೆಗೆ ಬರುತ್ತಾರೆ ಹಾಡುವಾಗ, ಕುಣಿಯುವಾಗ ಯಾರೂ ಆ ಮಹಿಳೆಯ ಮೇಲೆ ಹಣ ಹಾರಿಸುವದಿಲ್ಲ. ಸಿಳ್ಳು ಹಾಕುವದಿಲ್ಲ. ಗದ್ದಲವಿಲ್ಲ, ಅಷ್ಟೊಂದು ತನ್ಮಯತೆಯಿಂದ ಭಯಭಕ್ತಿಯಿಂದ ಕಾರ್ಯಕ್ರಮ ನಡೆಯುತ್ತದೆ.

ಸಾವಿರಾರು ಜನ ಹಿಂದುಗಳು ಮನೆಯಲ್ಲಿ ಸ್ನಾನ ಮಾಡಿ ಕೆಲವರು ನದಿಯಲ್ಲಿ ಸ್ನಾನ ಮಾಡಿ ಉರುಳು ಸೇವೆ ಮಾಡುತ್ತಾರೆ. ಹೊಲದೊಳಗಿನ ಮೊದಲ ಬೆಳೆಯನ್ನು ಭಕ್ತಿಯಿಂದ ದರ್ಗಾಕ್ಕೆ ಅರ್ಪಿಸುತ್ತಾರೆ. ದರ್ಗಾದ ಮಹಿಮೆಯೆಂದರೆ ೨೦೦೫ ರಲ್ಲಿ ಮಹಾಪೂರ ಬಂದಾಗ ಮತ್ತು ೧೯೮೩ ರಲ್ಲಿ ದೊಡ್ಡ ಮಹಾಪೂರ ಬಂದಾಗ ಇಡೀ ಊರಿಗೆ ಊರೇ ಮುಳಗಿದರೂ ಬಾಬಾರ ಸಮಾಧಿ ಮಾತ್ರ ಮುಳುಗಿರಲಿಲ್ಲ. ಇನ್ನೊಂದು ವೈಶಿಷ್ಟ್ಯವೆಂದರೆ ರಾತ್ರಿ ೧೧ ರ ನಂತರ ಅಲ್ಲಿ ಯಾರೂ ವಾಸ್ತವ್ಯ ಮಾಡುವುದಿಲ್ಲ ಉರುಸು ದಿನ ಮಾತ್ರ ೫ ದಿನ ವಾಸ್ತವ್ಯ ಮಾಡುತ್ತಾರೆ. ವಂಶಪಾರಂಪರ್ಯ ದರ್ಗಾಕ್ಕೆ ಸಂಬಂಧಪಟ್ಟಂತೆ ಕಲಾವಂತರಿಗೆ, ಮುಜಾವರ, ಚೌಗಲೆ, ಮಾಲಿ, ತರಾಳ, ತೇಲಿ, ವಾಜಂತ್ರಿ, ಮಾದಾರ ಸನದಿ ಇವರೆಲ್ಲರಿಗೂ ದರ್ಗಾದ ವತಿಯಿಂದ ಜಮೀನಿದೆ.

ಇಲ್ಲಿಯತನಕ ನಡೆದು ಬಂದ ಗುರುಶಿಷ್ಯ ಪರಂಪರೆ

೧. ಮಲಂಗಷಾ ಇಮಾಷಾ ಫಕೀರ

೨. ಬಾಬಾಷಾ ಇಮಾಮಷಾ ಫಕೀರ

೩. ರಹೀಮ ಷಾ ಜೈನುಲ್ಲ ಫಕೀರ

೪. ಅಪ್ಪಾಲಾಲ ಗುಲಾಬ ಮಜಾನದರ

ಹೀಗೆ ಹಿಂದು ಮುಸ್ಲಿಂರ ಭಾವೈಕ್ಯತೆಯ ಸಂಕೇತವಾಗಿ ಕಾರದಗಾ ಊರು ಬಹಳಷ್ಟು ಯಾತ್ರಿಕರನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ.

ಉರುಸಿಗೆ ಸಂಬಂಧಿಸಿದ ಜನಪದ ಸಾಹಿತ್ಯ

ಕನ್ನಡ ಜನಪದ ಸಾಹಿತ್ಯದಲ್ಲಿ ಸೂಫಿ ಸಂತರನ್ನು ಕುರಿತು ಎರಡು ವಿಧದ ಗೀತೆಗಳು ರಚಿತಗೊಂಡಿವೆ. ಅವುಗಳನ್ನು ತ್ರಿಪದಿಯ ರೂಪದಲ್ಲಿರುವ ಗೀತೆಗಳು ಹಾಗೂ ಶಾಹಿರದಿಂದ ರಚಿತಗೊಂಡ ಲಾವಣಿಗಳೆಂದು ವರ್ಗೀಕರಿಸಬಹುದು. ಬಹುತೇಕ ತ್ರಿಪದಿಗಳು ಸ್ತ್ರೀ ರಚನೆಗಳಾಗಿದ್ದು, ಅವು ಸಮೂಹದಲ್ಲಿ ಹಾಡಲು ಹುಟ್ಟಿದಂತವುಗಳಲ್ಲ. ಭಕ್ತರ ಭಕ್ತಿ ಮತ್ತು ಶ್ರದ್ಧೆಗಳನ್ನು ನಿವೇದಿಸುವ ಸ್ವಗತಗಳಾಗಿವೆ. ಇಂದಿಗೂ ದರ್ಗಾಗಳು ಸಾಂಸ್ಕೃತಿವಾಗಿ ಉಳಿದುಕೊಂಡಿರುವುದು ಮಹಿಳೆಯರ ನಂಬಿಕೆಯ ಪ್ರಪಂಚದಿಂದ ಎಂದು ಹೇಳಬಹುದು. ಕನ್ನಡ ಛಂದಸ್ಸಿನ

ಗಾಯತ್ರಿಯೆನಿಸಿದ ತ್ರಿಪದಿಯು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಹಿರಿದಾರ್ಥವನ್ನೊಳಗೊಂಡ ಛಂದಸ್ಸಾಗಿದೆ.

"ಸಕ್ಕರಿ ಹಂಚೇನಿ ಸುತ್ತುಳ್ಳ ದೇವರಿಗೆ

ಸತ್ ಹುಟ್ಟಿ ಬರುವ ಶರಣರಿಗೆ । ಅಲ್ಲಾಸಾಬ

ಸಲ್ಲಿಗೆ ಮೊದಲ ನೆನೆದೇನ" ಎಂಬ

ಗೀತದಲಕ್ಲಿ ದೇವರಲ್ಲಿ, ದೇವದೂತರಲ್ಲಿ ಪವಿತ್ರ ಆಚಾರ ವಿಚಾರಗಳಿಂದ ನಡೆದುಕೊಳ್ಳುವುದು, ಬೆಳಗಿನ ಜಾವದಲ್ಲಿ ಎದ್ದು ಜನಪದರು ತಮ್ಮ ದಿನನಿತ್ಯದ ಕಾರ್ಯ ಪ್ರಾರಂಭಿಸುವ ಮೊದಲು ಅವರನ್ನು ಸ್ಮರಿಸುವದಾಗಿದೆ.

ದೇವರಿಗೆ ಹರಕೆ ಹೊತ್ತ ಭಕ್ತರು ಹನ್ನೆರಡು ವರ್ಷದೊಳಗಿನ ಈಡೇರಿಸಿದಿದ್ದರೆ ಮನೆಗೆ ಕಾಡಾಟ ಹತ್ತುತ್ತದೆಂಬುದು ಜನಪದರ ನಂಬಿಕೆ ಆಗಿದೆ. ಆದಕಾರಣ ಅಂತಹ ಭಕ್ತರು ಬ್ಯಾಟಿಗಳೊಂದಿಗೆ ದೀನಹಾಕುತ್ತ ಸಂತರ ದರಗಾ ಏರುವ ಪದ್ಧತಿಯನ್ನು ಕಾಣಬಹುದಾಗಿದೆ.

ಬಂದದ್ದು ಬೈಲುಮಾಡ ತಂದಿ ಜಾಲ್ಯಾಳಮನ್ನ

ಅಂದವರ ಬಾಯಿ ಅಡಿಮಾಡ

ಅಂದವರ ಬಾಯಿ ಅಡಿಮಾಡ

ಅಂದವರ ಬಾಯಿ ಅಡಿಮಾಡ।ನಡಿಸಿದರ

ನಂದಾ ದೀವಿಗೆ ಹಚ್ಚೇನ

ಬಂದ ಕಷ್ಟಗಳನ್ನು ಪರಿಹರಿಸಿ, ಆಡಿಕೊಳ್ಳುವವರ ಬಾಯಿ ಮುಚ್ಚವಂಗ ಮಾಡು ಎಂದ ಗರತಿಯು ದೇವರಲ್ಲಿ ಬೇಡಿಕೊಳ್ಳುತ್ತ ನಂದಾ ದೀಪದ ಹರಕೆಯನ್ನು ಹೊರುವಳು.

ಸುತ್ತುಳ್ಳ ಮಾಬುಸುಹಾನಿ ಇತ್ತ ಮಾರಿ ತಿರುವ

ಮುತ್ತ ತಂದೇನಿ ಉಡಿವಡ್ಡ। ಬಗಲಾಗ

ಪುತ್ರನ ತಂದೇನಿ ಜವಳಿಳುವ

ಮಹಿಳೆಯರು ಉರುಸಿಗೆ ಬರುತ್ತಿದ್ದರೂ, ಅವರು ದರ್ಗಾವನ್ನು ಪ್ರವೇಶಿಸುವದಿಲ್ಲ. ಹೆಚ್ಚಾಗಿ, ತಂತಮ್ಮ ಗಂಡ ಇಲ್ಲವೆ ಮಗನನ್ನ ಸಂತರ ಉರುಸಿಗೆ ಕಳುಹಿಸುತ್ತಿದ್ದ ಸಾಧ್ಯತೆಗಳು

ಹೆಚ್ಚು ಕಂಡು ಬರುವವು. ಹೀಗೆ ದೂರದ ಊರಿನಿಂದ ಗುಲ್ಬರ್ಗಾಕ್ಕೆ ಬಂದ ವ್ಯಕ್ತಿಯೊಬ್ಬ ಹಾದಿಯ ವಿವರಣೆ ಹಾಗೂ ವರ್ಣನೆಗಳನ್ನು ಮಾಡಿದ್ದಾನೆ.

"ಹಾದೀಗೆ ಹೈದ್ರಾಬಾದಿ ಬೀದಿಗ್ ಸೊಲ್ಲಾಪೂರ

ಸೆಡಕಿನ ಮ್ಯಾಲ ಕಲಬುರ್ಗಿ। ಕೆರಿಮ್ಯಾಲ

ಬಂಗಾರದ ಕಳಸ ಬಂದೇ ನವಾಜ್

ಸಿಂದಗಿ ಸಿರಸೀಗಿ ಮುಂದ ಪ್ಯಾರಬಾದಿ

ಇಂಜಾನದೂರ ಕಲಬುರ್ಗಿ ಕೆರಿಮ್ಯಾಲ

ಬಂಗಾರದ ಕಳಸ ಶರಣಾಗ"

ಯಾವುದೇ ಒಂದು ಪಂಥದಿಂದ ಗುರು ಬೋಧೆ ಪಡೆದ ಶಾಹೀರರು ತಮ್ಮ ಲಾವಣಿಗಳಲಿ ಆಯಾ ಸೂಫಿಸಂತರ ಹೆಸರನ್ನು ಸೀಮೆಯ ವಿವರಣೆಗಳೊಂದಿಗೆ ಆರಂಭವಾಗಿ ಸೂಫಿ ಸಂತರ ಜೀವನ ಕಥೆಯನ್ನು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಈ ಲಾವಣಿಗಳನ್ನು ಯಾವುದೇ ಸಂತರ ಉರುಸಿನಲ್ಲಿ ಹಾಡುವ ಪದ್ಧತಿಯುಂಟು. ಹೀಗೆ ಶಾಹೀರರು ಒಂದಿಲ್ಲೊಂದು ಸೂಫಿ ಪಂಥಕ್ಕೆ ಬಂಧಿತರಾಗಿದ್ದು, ಅವರು ೧೮,೧೯ ನೇ ಶತಮಾನಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಬಡೇಸಾಬ, ಮಂಜರ್ಲ ಖಾದರಸಾಬ, ಮಗಾಂವರ ಮೀರಾಸಾಬ, ಲಾಡಂತಿಯಲಾಡಮದನಸಾ, ಕೊಳೂರಹಸನಸಾ, ರೋಣದಹೈದರಲಿ, ಸಂಗೋಳ್ಳಿಯ ಮೋದಿನಸಾ, ಸಾವಳಗಿ ಮಹಮ್ಮದ , ಕಲಬುರ್ಗಿ ಅರಬಾದಾಶ, ಕೊಹಿನೂರಿನ ಹಸನ, ಮಂಗಲಗಿ ನನ್ನೆಸಾಬ ಹೀಗೆ ಹೇಳುತ್ತಾ ಹೋದರೆ ಉದ್ದನೆಯ ಪಟ್ಟಿಯು ಹನುಮಂತನ ಬಾಲದಂತೆ ಬೆಳೆಯುತ್ತ ಹೋಗುತ್ತದೆ. ಈ ಶಾಹಿರರು ಹೆಚ್ಚಾಗಿ ಮೊಹರಂ ಹಾಗೂ ಉರುಸುಗಳಲ್ಲಿ ಹಾಡಿ ಜನಮನವನ್ನು ರಂಜಿಸುವರು.

ಕರ್ಬಲಾ ಪದಗಳು :

ಹೆಜ್ಜೆ ಪದಗಳು ಕೂಡ ಕರ್ಬಲಾ ಕಾಳಗ ಘಟನೆಯ ವಿವರಗಳನ್ನೊಳಗೊಂಡಿರುತ್ತವೆ ಇವನ್ನು ಮುಮ್ಮೇಳದಲ್ಲಿ ಇಬ್ಬರು ಹಾಡಿದರೆ, ಹಿಮ್ಮೇಳದಲ್ಲಿ ದಪ್ಪು, ತಾಳ, ನಾಜು ಸನಾದಿಗಳೊಂದಿಗೆ ನಾಲ್ಕು ಜನರು ಹಾಡುವ ಪದ್ಧತಿಯುಂಟು. ಉಳಿದ ಜನರು ತಾಳಗಳಿಗೆ ತಕ್ಕಂತೆ ಹೆಜ್ಜೆ ಕುಣಿತದಲ್ಲಿ ತೊಡಗಿರುತ್ತಾರೆ. ಹೆಜ್ಜೆ ಪದಗಳಿಗಿಂತ ಹೆಜ್ಜೆ ಕುಣಿತ ಮತ್ತು ಅದರ ಪ್ರದರ್ಶನಕ್ಕೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ.

ಹ.ಇ. ಹುಸೇನರು ಯುದ್ಧ ಮಾಡುವ ಉದ್ದೇಶದಿಂದ ಕರ್ಬಲಾ ಮರುಭೂಮಿಗೆ ಹೋದವರಲ್ಲ. ಅಲ್ಲಿಯ ನಿವಾಸಿಗಳ ಕರೆಗೆ ಓಗೊಟ್ಟು, ಅವರ ಕಲುಷಿತ ಮನಸ್ಸುಗಳನ್ನು ಹಸನಗೊಳಿಸಲು ಹೋದವರೆಂಬ ಭಾವನೆ ಸ್ಪುರಿಸುವ ಪದ ಹೀಗಿದೆ.

"ಕಲಹ ಕದನಕ್ಕೆ ಹೋಗಿಲ್ಲೋ ಹಸನ ಹುಸೇನಾ

ವಿಚಾರ ಮಾಡಕ ಹೋಗಿದ್ರೋ ಇಮಾಮ ಹುಸೇನ

ಇಮಾಮ ಹುಸೇನಾ ಕರ್ಬಲಾದೊಳಗೆ

ವಿಚಾರ ಮಾಡುವಲ್ಲಿ ಆತವರ ಮರಣಾ

ಹ.ಇ. ಹುಸೇನ ಉದ್ದೇಶವನ್ನು ನಾಲ್ಕು ಸಾಲಿನ ಪದ್ಯದಲ್ಲಿ ಸಮರ್ಥವಾಗಿ ಜನಪದ ಕವಿ ಹಿಡಿದಿಟ್ಟಿದ್ದಾನೆ.

ಈ ರೀತಿಯಾದ ರಿವಾಯತಪದಗಳು ಮತ್ತು ಹೆಜ್ಜೆಪದಗಳನ್ನು ಮೊಹರಂ ಹಬ್ಬದ ಆಚರಣೆಗಳಲ್ಲಷ್ಟೇ ಸೂಫಿ ಸಂತರ ಉರುಸುಗಳಲ್ಲಿ ಸಹ ಹಾಡಿ, ನೆರೆದ ಭಕ್ತ ಸಮೂಹಕ್ಕೆ ಇಸ್ಲಾಂ ಧರ್ಮದ ತತ್ವ ಸಿದ್ಧಾಂತಗಳ ಆಚರಣೇ, ಕರ್ಬಲಾ ಕಾಳಗದ ಭೀಕರ ಘಟನೆಗಳ, ಧರ್ಮದ ಉಳುವಿಗಾಗಿ ಹ.ಇ. ಹಸನ ಹುಸೇನರ ತ್ಯಾಗಗಳನ್ನು ಪ್ರಚುರ ಪಡಿಸುವರು

ಉರುಸುಗಳಲ್ಲಿ ಗಝಲ್ ಹಾಡುಗಳು :

ಗಝಲ್ ಮೂಲತಃ ಫಾರಸಿ ಪದವಾಗಿದ್ದು; ಅದರರ್ಥ ಪ್ರಣಯ ಪ್ರಧಾನ ಗೀತೆ ಎಂದಾಗುವುದು, ಗಝಲದ ಶಾಬ್ದಿಕ ಅರ್ಥವು ಪ್ರೇಮದ ಮಾತುಗಳನ್ನು ಅಭಿವ್ಯಕ್ತಪಡಿಸುವುದಾಗಿದೆ. ನೈಜವಾದ ಲೌಕಿಕ ಪ್ರೇಮದ ನುಡಿಗಳನ್ನು ಬಹುಪರಿಣಾಮಕಾರಿಯಾಗಿ ವ್ಯಕ್ತಪಡಿಸುವ, ಶೃಂಗಾರ ರಸ ಪ್ರಧಾನವುಳ್ಳ, ಸುಂದರ ಕಾವ್ಯವನ್ನು ಗಝಲ್ ಎಂದು ಕರೆಯುವರು. "ಗಝಲ್ ಗಾಯನದ ಪ್ರಭಾವವು ಅದರ ಭಾವ ಮತ್ತು ಭಾವಪ್ರದರ್ಶನ ಶೈಲಿಯಲ್ಲಿ ಅಡಗಿರುತ್ತದೆ.

ಉರ್ದು ಮತ್ತು ಫಾರಸಿ ಭಾಷೆಯಲ್ಲಿರುವ ಪರ್ಶಿಯನ್ ಭಾಷೆಯಿಂದಲೇ ಉಗಮವಾಯಿತೆಂಬುದಕ್ಕೆ ಬಹುಜನ ವಿದ್ವಾಂಸರ ಒಮ್ಮತವಿದೆ. ಗಝಲದ ಭಾವ ಮಾರ್ದವತೆ ಅಂದರೆ ಮೃದುಲತೆ, ಮುಖ್ಯರಸ ಶೃಂಗಾರ ರಸವಾಗಿರುತ್ತದೆ. 'ಆಶುಕೊ' ಅಂದರೆ ಪ್ರೇಮಿ **'ಮಾಶುಕೊ'** ಅಂದರೆ ಪ್ರೇಮಿಕಾ ಎಂದಿದ್ದು; ಪ್ರೇಮ ಸಂಭಾಷಣೆಯೇ ಗಝಲದ ಪ್ರಮುಖ ವಿಷಯ. "ಗಝಲ ಇದು ಶಬ್ದ ಪ್ರಧಾನವಾದ ಹಾಡುಗಾರಿಕೆಯಾಗಿದ್ದು, ಅದರರ್ಥವು

ಪ್ರೇಮಭಾವಪೂರ್ಣ ಹಾಗೂ ಹೃದಯ ಸ್ಪರ್ಶಿಯಾಗಿರುತ್ತದೆ" ಎಂಬುದು ಸ್ಪಷ್ಟವಾಗಿದೆ. ಒಟ್ಟಿನಲ್ಲಿ ಗಝಲ್ ಎಂದರೆ ನಾರಿಯರೊಡನೆ ಮಾತನಾಡುವುದು, ಅವರ ಸೌಂದರ್ಯ ಹಾಗೂ ಗುಣಲಕ್ಷಣಗಳ ವರ್ಣನೆ ಮಾಡುವುದು ಎಂದು ಹೇಳಬಹುದು.

ಗಝಲ್ ಹಾಡುವ ರೂಢಿಯ ಅಮೀರ ಖುಸ್ರೋರವರಿಂದ ಆರಂಭವಾಯಿತೆಂಬುದಕ್ಕೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಆದರೆ ಅದು ಭಾರತದಲ್ಲಿ ಸುಲ್ತಾನ ಆಳ್ವಿಕೆಯೊಂದಿಗೆ ಪ್ರವೇಶ ಮಾಡಿತೆಂಬುದು ಮಾತ್ರ ಸತ್ಯ. ಮೊದ ಮೊದಲು ಇಸ್ಲಾಂ ಧರ್ಮದಲ್ಲಿ ಸಂಗೀತವು ನಿಷಿದ್ಧವಿದ್ದದರಿಂದ ಅಂದಿನ ಅರಸರಲ್ಲಿ ಅದರ ಬಗ್ಗೆ ತಿರಸ್ಕಾರ ಭಾವನೆಯಿತ್ತು. ನಂತರ ಹಿಂದೂ ಸಂಸ್ಕೃತಿಯ ಸಾಮಿಪ್ಯ ಹೊಂದಿದ ಮುಸ್ಲಿಂ ಸಮಾಜದಲ್ಲಿ ಸಂಗೀತದ ಅಭಿರುಚಿಯುಂಟಾಯಿತು. ಸೂಫಿ ಸಂತರು ಭಾರತೀಯ ಸಂಸ್ಕೃತಿಯ ಮಾರ್ಮಿಕತೆಯನ್ನು ತಿಳಿದುಕೊಂಡು ಗಝಲ್ ಹಾಗೂ ಕವ್ವಾಲಿ ಗಾಯನ ಪದ್ಧತಿಯಲ್ಲಿ ಭಕ್ತಿ ಮತ್ತು ಪ್ರೇಮದ ಸಂದೇಶಗಳನ್ನು ಪ್ರಸಾರ ಮಾಡಿದುದು ಗಮನಾರ್ಹ.

ಸಾಮಾನ್ಯವಾಗಿ ಗಝಲದಲ್ಲಿ ಐದಕ್ಕಿಂತ ಕಡಿಮೆ ಮತ್ತು ಹನ್ನೊಂದಕ್ಕಿಂತ ಹೆಚ್ಚು ನುಡಿಗಳಿರುವುದಿಲ್ಲ. ಒಮ್ಮೊಮ್ಮೆ ಹದಿನೇಳನೆಯ ನುಡಿಗಳವರೆಗೆ ಗಝಲಗಳು ಇದ್ದದು ಕಂಡು ಬರುತ್ತವೆ. ವಿವಿಧ ಛಂದಸ್ಸಿನಲ್ಲಿ ರಚನೆಗೊಂಡ ಗಝಲದ ಉರ್ದುಭಾಷೆ ಶಬ್ದಗಳು ಅಧಿಕವಾಗಿದ್ದು, ಭಾಷೆ ಸರಳ ಮತ್ತು ಸುಂದರ ರಚನೆಗಳ ಮೂಲಕ ಜನಪ್ರಿಯ ಗಾಯನವೆನಿಸಿದೆ.

ಸೂಫಿ ಸಂತರು ಸಂಗೀತದ ಮುಖಾಂತರ ಲೌಕಿಕ ಪ್ರೇಮವನ್ನು ಅಲೌಕಿಕ ಪ್ರೇಮವನ್ನಾಗಿ ಮಾರ್ಪಡಿಸಿ ವ್ಯಕ್ತಪಡಿಸುವ ವಿಧಾನವಾಗಿದೆ. ಅವರು ಪ್ರೇಮವನ್ನು ಅತ್ಯಂತ ಶ್ರೇಷ್ಠ ವಿಷಯ ಎಂದು ಪರಗಣಿಸಿರುವರು. ಬಹುತೇಕ ಸಂತರು ಪ್ರೇಮ ಮಾರ್ಗದಿಂದ ಭಗವಂತನನ್ನು ಪ್ರಾರ್ಥಿಸಿ ಅವನಲ್ಲಿ ಲೀನವಾಗಿರುವ ಚರಿತ್ರೆಗಳಿವೆ.

ಹಿಂದೂ ಧರ್ಮದಲ್ಲಿ ಈಶ್ವರ(ಲಿಂಗ)ನನ್ನು ಪತಿ, ಭಕ್ತ(ಶರಣ) ಸತಿಯೆಂದು ಆರಾಧಿಸಿದರೆ; ಸೂಫಿ ಪಂಥದಲ್ಲಿ ಈಶ್ವರ ಮಾಶುಕ (ಪ್ರಿಯತಮೆ) ಸಂತ ಆಶಿಕ್ (ಪ್ರಿಯತಮ) ಎಂದು ಭಾವಿಸಿ ಆರಾಧಿಸುವರು. ಅಂದರೆ ಭಗವಂತ ಸ್ತ್ರೀಯೆಂದೂ, ಸಾಧಕ ಪುರುಷನೆಂದೂ ಅರಿತು ಪ್ರೀತಿ, ವಿರಹವೇದನ, ಮಿಲನ ಇತ್ಯಾದಿ ಭಾವನೆಗಳನ್ನು ಅನುಭವಿಸಿ ಕೊನೆಗೆ ಅವನಲ್ಲಿ ಒಂದಾಗುವ ಮೂಲಕ ಐಕ್ಯ ಹೊಂದುತ್ತೇವೆ. ಎಂದು ಸಮರ್ಥಿಸಿಕೊಳ್ಳುವರು.

ಸೂಫಿ ಸಂತರು ತಮ್ಮ ಪ್ರಾರ್ಥನೆಗೋಸ್ಕರ ಫಾರಸಿಶೈಲಿಯ ಗಝಲಗಳನ್ನು ಬಳಸಿ, ಅವುಗಳಿಗೆ ಭಾರತೀಯ ರಾಗ ಮತ್ತು ತಾಳಗಳನ್ನು ಹೊಂದಿಸಿಕೊಂಡರು. ಆದುದರಿಂದ ಸೂಫಿ ಸಂಪ್ರದಾಯದ ಗಝಲ್ ಹಾಡುಗಾರಿಕೆಯ ಪ್ರಸಾರದ ಮಾಧ್ಯಮಗಳಾದರು.

ಒಂದೆಡೆಗೆ ಗಝಲ್ ಮತ್ತು ಕವ್ವಾಲಿ ಗಾಯನಗಳು ಪ್ರಸಾರವಾದರೆ ಮತ್ತೊಂಡೆಗೆ ಸೂಫಿ ಪಂಥದ ತತ್ವ ಸಿದ್ಧಾಂತಗಳು ಪ್ರಸಾರಗೊಳ್ಳುತ್ತಿದ್ದವು. ಇವೆರಡು ಗಾಯನಗಳ ಮುಖಾಂತರ ಸೂಫಿ ಸಂತರು ವಿಭಿನ್ನ ಧರ್ಮಗಳ ನಡುವೆ ಸಾಮ್ಯತೆ ಹಾಗೂ ಏಕತೆ ತರಲು ತುಂಬಾ ಪ್ರಯತ್ನಿಸಿದರು. ಅವರೆಡು ಸಂಗೀತಗಳು ಮಿಶ್ರವಾದ ಸೂಫಿ ತತ್ವಗಳು ಭಾರತೀಯರಿಗೆ ಬಹುವಾಗಿ ಹಿಡಿಸಿದ್ದವು.

ಮಾನವನ ಜೀವನ ಸಂಪೂರ್ಣವಾಗಿ ಭಾವ ಸಮಾಧಿಯಲ್ಲಿರುತ್ತದೆ. ಗಝಲ್ ಸಂಗೀತವು ಮಾನವನ ಭಾವನೆಗಳನ್ನು ಚೆನ್ನಾಗಿ ವ್ಯಕ್ತ ಮಾಡುತ್ತದೆ. ಅಂತಹ ಗಝಲಗಳನ್ನು ಆಲಿಸಿದ ಜನರು ಆನಂದಪಡುವರು. ಉತ್ತಮವಾದ ಗಝಲಗಳನ್ನು ಪದೇ ಪದೇ ಕೇಳುವುದರಿಂದ ಮಾನವ ಹೃದಯಲ್ಲಿ ಉದಾತ್ತವಾದ ಭಾವನೆಗಳು ಹುಟ್ಟಿಕೊಳ್ಳುತ್ತವೆ.

ಈತ್ತೀಚೆಗೆ ಗಝಲಗಳಲ್ಲಿ ಪ್ರೇಮದ ರಮಣೀಯ ಸನ್ನಿವೇಶಗಳನ್ನು ವ್ಯಕ್ತಪಡಿಸುವ ಪದಗಳನ್ನು ಸ್ವರ ಮತ್ತು ತಾಳಗಳ ಸಮ್ಮಿಶ್ರದಿಂದ ಬಹು ಆಕರ್ಷಕವಾಗಿ ಹಾಡುವರು. ಈ ಮೇಲಿನ ಅಂಶಗಳಿಂದಾಗಿ ಇಂದಿನ ಶಾಸ್ತ್ರೀಯ ಸಂಗೀತಗಾರರ ಮಧ್ಯದಲ್ಲಿಯೂ ಗಝಲ್ ಗಾಯಕರಿಗೆ ಸಾಕಷ್ಟು ಪ್ರೋತ್ಸಾಹ ಹಾಗೂ ಪುರಸ್ಕಾರವಿದೆ. ಇತ್ತಿತ್ತಲಾಗಿ ಗಝಲಗಳು ಚಲನಚಿತ್ರಗಳಲ್ಲಿ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತಿರುವುದು ಸಮಾಧಾನಕರ ಸಂಗತಿ. ಅತಿ ಕಡಿಮೆ ವೇಳೆಯಲ್ಲಿ ಅಧಿಕ ಆನಂದವನ್ನು ಕೊಡುವ ಗಝಲ್ ಸಂಗೀತಕ್ಕೆ ತನ್ನದೇ ಆದ ಸ್ವತಂತ್ರ ಮತ್ತು ಪರಿಪೂರ್ಣವಾದ ಶೈಲಿಯಿದೆ.

ಈಗೀಗ ಕನ್ನಡದಲ್ಲಿ ಗಝಲಗಳು ರಚನೆಗೊಳ್ಳುತ್ತಿರುವುದು ಸ್ವಾಗತಾರ್ಹವಾಗಿದೆ. ಹೀಗೆ ಸೂಫಿ ಸಂತರಿಗೆ ಪ್ರಿಯವಾದ ಗಝಲ್ ಮತ್ತು ಕವ್ವಾಲಿಗಳನ್ನು ಇಂದಿಗೂ ಉರುಸುಗಳಲ್ಲಿ ಮನರಂಜನೆಯ ಸಾಧನಗಳಾಗಿವೆ. ಉರುಸಿನ ಆರಂಭದಿಂದ ಹಿಡಿದು ಮುಕ್ತಾಯದವರೆಗೂ ಪ್ರತಿದಿನ ರಾತ್ರಿ ಸಂಗೀತ ಸಭೆಗಳು ಜರುಗುತ್ತವೆ. ಅವುಗಳಲ್ಲಿ ಗಝಲ್ ಹಾಗೂ ಕವ್ವಾಲಿಗಳದೇ ಆರ್ಭಟವೆನ್ನಬಹುದು.

ಕನ್ನಡ ಮೊಹರಂ ಪದಗಳು :

ಕನ್ನಡ ಜನಪದ ಸಾಹಿತ್ಯದಲ್ಲಿ ಮೊಹರಂ ಪದಗಳಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಮೊಹರಂ ಹಬ್ಬದ ಸಂದರ್ಭದಲ್ಲಿ ಹೇಳಲಾಗುವ ಈ ಹಾಡುಗಳನ್ನು ರಿವಾಯತ ಪದಗಳು, ಕರ್ಬಲಾ ಹಾಡುಗಳು, ಜಂಗೀನ ಪದಗಳು, ಮೊಹರಂ ಹಾಡುಗಳು ಮೊದಲಾದ ಹೆಸರುಗಳಿಂದ ಕರೆಯುಲಾಗುತ್ತದೆ. ಉತ್ತರ ಕರ್ನಾಟಕದ ಪ್ರದೇಶಗಳಲ್ಲಿ ಈ ಹಬ್ಬವನ್ನು ಹಿಂದೂ ಮುಸ್ಲಿಂ ಬಾಂಧವರು ಕೂಡಿ ಈ ಹಬ್ಬವನ್ನು ಆಚರಿಸುತ್ತಾರೆ. ಹಳ್ಳಿಗಳಲ್ಲಿ

'ಅಲಾಯ' ಹಬ್ಬವೆಂದು ಕರೆಯಲಾಗುವ ಮೊಹರಂ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಮೊಹರಂ ತಿಂಗಳಲ್ಲಿ ಚಂದ್ರದರ್ಶನವಾದ ದಿನವೇ ಮಸೀದೆ ಮುಂದೆ ಗ್ರಾಮದ ಮುಲ್ಲಾನ ಹಿರಿತನದಲ್ಲಿ ಊರ ಹಿರಿಯರು ಕೂಡಿಕೊಂಡು ಗುದ್ದಲಿ ಪೂಜಾ ಸಮಾರಂಭ ನೆರವೇರಿಸುತ್ತಾರೆ. ಬೆಂಕಿ ಹಾಕುವ ಹೊಂಡ ಮಡವು ಸಲುವಾಗಿ ತಗ್ಗು ತೊಡುತ್ತಾರೆ. ಇದನ್ನೇ 'ಗುದ್ಲಿ ಬಿತ್ತು' ಎನ್ನುತ್ತಾರೆ. ಈ ಗುದ್ದಲಿ ಬಿದ್ದ ಆಚರಣೆಯ ಐದನೆಯ ದಿನಕ್ಕೆ ದೇವರು ಕೂಡ್ರಿಸುವ ಕಾರ್ಯಕ್ರಮ ಜರುಗುತ್ತದೆ. ಕೂಡ್ರಿಸಿದ ಈ ದೇವರುಗಳಾದ ಗಜ್ಜಿಪೀರಾ, ಲಾಲಸಾಹೇಬ, ಹಸನ, ಹುಸೇನಿಗಳಿಗೆ ಹಿಂದೂ ಮುಸ್ಲಿಮರು ಕೂಡಿಯೇ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ದೇವರುಗಳಿಗೆ ಗಂಧ ಏರಿಸುವ ಕಾರ್ಯಕ್ರಮ ಕತ್ತಲ ರಾತ್ರಿ ದಿವಸ ಮಾದಲಿ, ಚೊಂಗೆ, ಮೊದಲಾದ ಸಿಹಿ ತಿನಿಸುಗಳನ್ನು ಮಾಡಿ ನೈವೇದ್ಯ ಹಿಡಿಯುತ್ತಾರೆ. ಈ ಸಂದರ್ಭದಲ್ಲಿ ಹಬ್ಬದ ಐದು ದಿನವೂ ಸಣ್ಣವರು ದೊಡ್ಡವರು ಕೂಡಿಕೊಂಡು ಅಲಾಯಿ ಕುಣಿಯ ಸುತ್ತಲು 'ಧೂಲಾ ಧೂಲಾ' ಎಂದು ಹೇಳುತ್ತ ಕುಣಿದು ಕುಪ್ಪಳಿಸುವ ದೃಶ್ಯ ಸಾಮಾನ್ಯವಾಗಿರುತ್ತದೆ. ಜೊತೆಗೆ ಊರ ಕರ್ಬಲಾ ಮೇಳಗಳು ಎರಡು ತಂಡಗಳಾಗಿ ಹಲಗೆ ವಾದ್ಯದೊಡನೆ ಹೆಜ್ಜೆ ಕುಣಿತ ಕುಣಿಯುತ್ತಾ ಲೇಜಮ್ ಬಾರಿಸುತ್ತಾ, ಕರಬಲಾ ಹಾಡು ಹೇಳುತ್ತಾ ದೇವರು ಕುಳಿತ ಸ್ಥಳಕ್ಕೆ ಬಂದು ಬೆಳಗು ಹರಿಯುವವರೆಗೂ ಹಾಡು ಹೇಳುತ್ತಾರೆ. ಇವೇ 'ರಿವಾಯತ ಪದ'ಗಳಾಗಿ ಜನಜನಿತವಾಗಿವೆ.

ಕನ್ನಡ ಮೊಹರಂ ಪದಗಳು ಇತಿಹಾಸವನ್ನು ಕಟ್ಟಿಕೊಡುವ ಬಹುಮುಖ್ಯವಾದ ಪಾರಂಪರಿಕ ಗೀತ ಪರಿಕಾರಗಳಾಗಿವೆ. ಹಿಂದೂ ಮುಸ್ಲಿಂ ಧಾರ್ಮಿಕ ವಸ್ತು ಸಂಗತಿಗಳನ್ನು ಸರಳ ಮತ್ತು ಸುಲಭವಾಗಿ ಹಳ್ಳಿಗರಿಗೆ ಮನದಟ್ಟಾಗುವಂತೆ ಹಾಡಿನಲ್ಲಿ ಹೇಳುವ ಕಥನ ರೂಪದ ಈ ಪದ್ಯಗಳು ಜನಸಾಮಾನ್ಯರ, ಅನಕ್ಷರಸ್ಥರ, ಜ್ಞಾನ ಕ್ಷಿತಿಜವನ್ನು ವಿಸ್ತರಿಸಿವೆ. ಒಂದು ಕಾಲಕ್ಕೆ ಈಗಿನಂತಿರುವ ಬಹುಮುಖಿ ಮಾಧ್ಯಮಗಳ ಅಬ್ಬರವೇ ಇಲ್ಲದ ಕಾಲದಲ್ಲಿ ಭಾರತೀಯ ಪುರಾಣೇತಿಹಾಸಗಳನ್ನು ಆಗಾಗ್ಗೆ ಘಟಿಸುವ ನೆರೆಹಾವಳಿ, ಬರಗಾಲ, ದುರಂತಗಳನ್ನು ಈ ಪದ್ಯದಲ್ಲಿ ಕಟ್ಟಿಕೊಡುವುದರ ಮೂಲಕ ಕರ್ಬಲಾ ರಚನೆಕಾರರು ಖಂಡಿತವಾಗಿಯೂ ಚರಿತ್ರೆ ಪುರಾಣ ಮತ್ತು ಸಾಂದರ್ಭಿಕ ಘಟನೆಗಳಷ್ಟೇ ವಸ್ತುಗಳಾಗಿರದೆ ಇಲ್ಲಿನ ಸವಾಲು ಜವಾಬು ಪದಗಳಲ್ಲಿ ಬೆಡಗು ಮತ್ತು ಒಗಟಿನ ಬೆರಗಿದೆ.

ಮೊದಲಗಿ ನೆನೆದಿನೋ
ಪ್ರಥಮಕ ನೆನುವೆನೋ ಶಿವನ ಧ್ಯಾನಾ
ಬಂತೋ ಮೋರಮ ರಾಜೇಕ ಪ್ರೇಮಾ

ಹಸನ ಹುಸೇನಿ ನಾಮಾ ...

ಆರೋ ಪಾವನಾ.

ಕನ್ನಡ ಜನಪದ ಸಾಹಿತ್ಯದಲ್ಲಿ ಗುರುತಿಸಿಕೊಂಡಿರುವ ರಿವಾಯತ ಪದಗಳು ಜನಪದ ಗೀತ ಪ್ರಕಾರದ ಬಹುಮುಖ್ಯವಾದ ಕೊಡುಗೆಗಳಾಗಿವೆ. ಗ್ರಾಮೀಣರ ಧಾರ್ಮಿಕ, ಸಾಂಸ್ಕೃತಿಕ, ಆರಾಧನಾ ಮನೋಭಾವಗಳ ಆಚರಣೆಯ ಹಿನ್ನೆಲೆಯಲ್ಲಿ ಬೆಸೆದುಕೊಂಡಿರುವ ಭಾವೈಕ್ಯತೆಯ ಪ್ರತೀಕವಾಗಿ ಒಡಮೂಡಿದ ಇಂಥ ರಚನೆಗಳು ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನ ಯೋಗ್ಯವಾಗಿವೆ.

ರಿವಾಯತ ಭಕ್ತಿ ಪದಗಳಲ್ಲಿ ಬಂತೋ ಮೊಹರಮ್ ರಾಜೇಕ ಪ್ರೇಮಾ, ಫಕೀರನ ಪವಾಡ, ಪೈಗಂಬರರು ಮದಿನಾ ಬಿಟ್ಟಿದ್ದು, ತಿಕೋಟಾ ಹಾಜಿಸಾಹೇಬನ ಕಥೆ, ಇಬ್ರಾಹಿಮ ಲೀಲಾ ಮೊದಲಾದ ಹಾಡುಗಳು ಮುಸ್ಲಿಮ ಸಂತರ, ಶರಣರ ಪವಾಡ ಮತ್ತು ಸಾಧನೆಯನ್ನು ಸಾರುತ್ತವೆ. ರಿವಾಯತದಲ್ಲಿ ಸವಾಲು ಪದಗಳು ಸಭಾದಾಗ ನಿಂತು ಕೊಡಬೇಕೊ ಉತ್ತರಾ, ಪೃಥ್ವಿಯ ಪಂಚಾಂಗ, ಬರುವಾಗ ಯಾವದಿತ್ತೋ ನಿನ್ನ ದಾರಿ ಮೊದಲಾದ ಸವಾಲು ಪದಗಳಿವೆ. ಮೊಹರಂ ಪದಗಳು ಚಿಂತನೆಗೆ ಹಚ್ಚುತ್ತವೆ.

ಬಂದೀರಿ ಕರ್ಬಲದೊಳಗ

ನೀವು ಎಲ್ಲಾರು ಕೂಡಿ

ಬೆಳತನಕಾ ಆಗಿ ಹೋಗಲೋ

ಪದಕ ಪದಾ ಜೋಡ

ಅಲಾಯಿ ತಗೀತಿರ

ಬೆಂಕಿ ಹಾಕತೀರಿ ಏನ ಕಾರಣಾ.

ಅಲಾಯಿ ಮುಚ್ಚತೀರಿ

ಟೊಂಗಿ ಹಚ್ಚತೀರಿ ಏನ ನಿಮ್ಮ ಖೂನಾ

ಹೀಗೆ ಹಲವಾರು ಸವಾಲು ಪದಗಳು ಇಲ್ಲಿವೆ. ಈ ಹಾಡುಗಳನ್ನು ಮೊಹರಂ ಸಂದರ್ಭದಲ್ಲಿ ಎದುರಾಳಿ ತಂಡಗಳು ಸವಾಲು ಜವಾಬು ರೀತಿಯಲ್ಲಿ ಹೇಳುತ್ತಾ ನೆರೆದ ಜನರಲ್ಲಿ ಕೌತುಕ ಮೂಡಿಸುತ್ತಾರೆ. ಬೆಳವಡಿ ಮಲ್ಲಮ್ಮನ ಕಾಳಗ, ಗಾಂಧೀಜಿ ಬಗ್ಗೆ ಕರ್ಬಲಾ ಮಾಡಿದ್ದು, ರಾಮದುರ್ಗ ದುರಂತ, ಸಾಂಗಲಿ ಊರಾಗ ಆದ ಕದನಾ ಮೊದಲಾದ ಐತಿಹಾಸಿಕ ಸಂಗತಿಗಳು ಜೊತೆಗೆ ಬಸವ ಪುರಾಣ, ಶಿವನೇ ಬಸವಾ ಬಸವಾ

ಶಿವನೇ, ಏಕ ಅಲ್ಲಾ ಅನೇಕ ನಾಮಾ ಕೊಲ್ಲಾವಕಿಂತ ಕಾಯಾಂವ ದೊಡ್ಡವ ಈ ಬಗೆಯ ವೈವಿಧ್ಯಮಯ ಗೀತೆಗಳಿವೆ.

ಮೊಹರಂ ಸಂದರ್ಭದಲ್ಲಿ ಹಾಡು ಹೇಳುವ ಆಚರಣೆ ಇಂದು ಬಹಳಷ್ಟು ಮರೆಯಾಗುತ್ತಿದೆ. ಮುಸ್ಲಿಮರ ಬಾಂಧವ್ಯದ ಸಂಕೇತವಾಗಿ ಆಚರಿಸಲ್ಪಡುವ ಈ ಹಬ್ಬದಲ್ಲಿ ಇಸ್ಲಾಂ ಧರ್ಮಕ್ಕೆ ಸಂಬಂಧಪಟ್ಟ ಪದಗಳಲ್ಲದೆ ಮಹಾಭಾರತದ ಯುದ್ಧದ ಘಟನೆಗಳನ್ನು ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭಗಳು ಇದರಲ್ಲಿ ಬರುತ್ತವೆ. ಇಂಥ ಅಪೂರ್ವ ಸಾಮಗ್ರಿಗಳನ್ನು ತುಂಬಿಕೊಂಡಿದ್ದರೂ ರಿವಾಯತ ಪದಗಳತ್ತ ಜಾನಪದಾಸಕ್ತರ ದೃಷ್ಟಿ ವಿಶೇಷವಾಗಿ ಹರಿದಿಲ್ಲ. ಈ ಕೊರತೆಯನ್ನು ತುಂಬುವ ಕೆಲಸ ನಡೆದಷ್ಟೂ ಕನ್ನಡ ಜನಪದ ಗೀತೆಗಳ ದಾಖಲೆ ಭಂಡಾರಕ್ಕೆ ಮತ್ತಷ್ಟು ಹೊನ್ನಿನ ಉಡಿ ತುಂಬಿದ ಧನ್ಯತೆ ಪ್ರಾಪ್ತವಾಗುತ್ತದೆ.

ಸೂಫಿ ಸಂತರಿಗೆ ಸಂಬಂಧಿಸಿದ ಜನಪದ ಸಾಹಿತ್ಯ :

'ಜನವಾಣಿಬೇರು, ಕವಿವಾಣಿ ಹೂ ಎಂಬ' ನಾಣ್ನುಡಿಯಂತೆ, ಒಂದು ನಾಡಿನ ಸಂಸ್ಕೃತಿಗೆ ಹಿಡಿದ ಕೈಗನ್ನಡಿಯಂತಿರುವ ಜನಪದ ಸಾಹಿತ್ಯದ ಅಧ್ಯಯನವೆಂದರೆ, ಆ ನಾಡಿನ ಇಡೀ ಜನಾಂಗದ ಸಮಗ್ರ ಜೀವನದ ಅಧ್ಯಯನವಾಗಿದೆ. ಅಂದರೆ ಅದು ಬಹುಸಂಖ್ಯಾತರ ಜನಪದ ಸಂಸ್ಕೃತಿ ಎಂದು ಅರ್ಥೈಸಬಹುದಾಗಿದೆ. ಮೌಖಿಕ ರೂಪದಲ್ಲಿ ಬೆಳೆದು ಬಂದ ಜನಪದ ಸಾಹಿತ್ಯವು ಕಳೆದ ಎರಡು ಮೂರು ದಶಕಗಳ ಹಿಂದಿನಿಂದ ಚಾಕ್ಷುಷ ರೂಪಕ್ಕಿಳಿಯುತ್ತಿದ್ದರೂ, ಇನ್ನೂ ಅದು ವಿಪುಲವಾಗಿ ಮೌಖಿಕ ಪರಂಪರೆಯಲ್ಲಿಯೇ ಉಳಿದುಕೊಂಡಿದೆ.

ಒಟ್ಟು ಸಾಹಿತ್ಯವನ್ನು ಶಿಷ್ಟಸಾಹಿತ್ಯ ಮತ್ತು ಜನಪದಸಾಹಿತ್ಯವೆಂದು ಎರಡು ರೀತಿಯಾಗಿ ವಿಂಗಡಿಸುತ್ತೇವೆ. ಸಾಹಿತ್ಯವೂ ಜೀವನದ ಪ್ರತಿಬಿಂಬ. ಅದರ ಸಹಜತೆ ಮತ್ತು ಚಲ್ವಿಕೆಯಲ್ಲಿ ಶಿಷ್ಟ ಸಾಹಿತ್ಯಕ್ಕಿಂತ ಜನಪದ ಸಾಹಿತ್ಯವೇ ಮೇಲು. ಜನಪದರಿಂದ ಹಲವು ಹತ್ತು ಬಗೆಗಳಲ್ಲಿ ಹೊರ ಹೊಮ್ಮುವ ಜನಪದ ಸಾಹಿತ್ಯವು ಸಮೃದ್ಧವಾದ ಕಣಜದಂತಿದ್ದು, ಒಂದು ದೃಷ್ಟಿಯಿಂದ ಅದು ಅಕ್ಷಯನಿಧಿಯೆನಿಸಿದೆ. ಅಗೆದು ತೆಗೆದಷ್ಟು ಅದು ಇನ್ನೂ ಇಳಿದೇ ಇರುವಂತಹದ್ದು.

ಇಸ್ಲಾಂ ಧರ್ಮದ ತತ್ವ ಮತ್ತು ಸಿದ್ಧಾಂತಗಳನ್ನು ಸರ್ವರೂ ಅರಿತುಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮಾಡುವುದಕ್ಕಾಗಿ ಸೂಫಿ ಜನಪದ ಸಾಹಿತ್ಯವು ತನ್ನ ಶಕ್ತಿಗಿಂತ ಮಿಗಿಲಾದ ಪಾತ್ರ ವಹಿಸಿತು. ಸೂಫಿ ಸಂತರ ಪ್ರಭಾವವು ಜನಪದ ಸಾಹಿತ್ಯದ ಮೂಲಕ ಜನಪದರಲ್ಲಿ ಎಷ್ಟೊಂದು ಆಳವಾಗಿ ಬೇರು ಬಿಟ್ಟಿದೆ ಎಂದು ಅಳೆಯಲಕ್ಕೂ

ಅಸಾಧ್ಯ. ಏಕೆಂದರೆ ಸೂಫಿ ಸಂತರನ್ನು ಕಾಣದವರು, ಅವರ ದರ್ಗಾ ಶರೀಫಕ್ಕೆ ಹೋಗದವರು ಜನಪದ ಗೀತೆಗಳಿಂದ ಅವರ ಜೀವನ ಚಿತ್ರಣ, ತತ್ವ ಸಿದ್ಧಾಂತಗಳ ಪರಿಚಯ, ಕಾರ್ಯವೈಖರಿ ನಡೆನುಡಿ, ಸಮಾಜಸೇವೆ, ಅಲ್ಲಾಹನ(ಈಶ್ವರನ) ಆರಾಧನೆಯ ಸರಳ ವಿಧಾನಗಳನ್ನು ಅರಿತುಕೊಂಡು, ದರ್ಗಾಗಳ ಆರಾಧನೆಯ ಆಚರಣೆಗೆ ಒಳಗಾಗಿದ್ದ ನಿದರ್ಶನಗಳಿವೆ.

ಈ ಬಗೆಯಾಗಿ ಹುಟ್ಟಿಕೊಂಡ ಜನಪದಗೀತೆಗಳನ್ನು ಲೋರಿನಾಮಾ(ಜೋಗುಳಪದ) ಚರಕಾನಾಮ (ನೂಲ ಪದ) ಹಾಗೂ ಚಕ್ಕಿನಾಮಾ (ಬೀಸುಕಲ್ಲು ಪದ) ಎಂದು ಮೂರು ವಿಧಗಳಾಗಿ ವಿಂಗಡಿಸುವರು. ತಾಯಂದಿರು, ಚಿಕ್ಕಮಕ್ಕಳನ್ನು ತೊಟ್ಟಿಲಲ್ಲಿ ಹಾಕಿ ಮಲಗಿಸುವಾಗ ಲೋರಿನಾಮ (ಜೋಗುಳ ಪದ)ಗಳನ್ನು ಹಾಡಿದರೆ, ಬಟ್ಟೆಗಳನ್ನು ನೂಲುವ ಸಂದರ್ಭದಲ್ಲಿ ಚರಕಾನಾಮಾವೆಂಬ ಜನಪದ ಗೀತೆಗಳ ಮೂಲಕ ಸೂಫಿ ಸಂತರನ್ನು ಸ್ಮರಿಸುತ್ತಾರೆ. ಹೆಣ್ಣು ಮಕ್ಕಳು ಕಾಳುಕಡಿಗಳನ್ನು ಬೀಸುವ ಸಮಯದಲ್ಲಿ ಚಕ್ಕಿನಾಮಾ (ಬೀಸುಕಲ್ಲು ಪದ) ಗೀತೆಗಳನ್ನು ಹಾಡಿ ದಣಿವಾರಿಸಿಕೊಳ್ಳುವುದಂಟು.

ಒಟ್ಟಿನಲ್ಲಿ ಲೋರಿನಾಮಾ ಚರಕಾನಾಮ ಮತ್ತು ಚಕ್ಕಿ ನಾಮವೆಂಬ ಹೆಸರುಗಳಿಂದ ಗುರುತಿಸುವ ಜನಪದ ಗೀತೆಗಳನ್ನು ಬಿಜಾಪೂರವನ್ನೊಳಗೊಂಡಂತೆ ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಹಾಡುವುದನ್ನು ಇಂದಿಗೂ ಕೇಳಬಹುದು.

ಉರುಸುಗಳಲ್ಲಿ ಹಿಂದೂ ಮುಸ್ಲಿಮರ ಭಾವೈಕ್ಯತೆ :

ಕಾಲದ ಅಗತ್ಯಗಳನ್ನು ಪೂರೈಸಲು ಉದಯಿಸಿದ ಜಾಗತಿಕ ಧರ್ಮಗಳ ಮೂಲೋದ್ದೇಶ ಸತ್ಯಾನ್ವೇಷಣೆಯಾಗಿದೆ. ಧರ್ಮ, ಜಾತಿ, ಮತ, ಭಾಷೆ, ಬಣ್ಣ, ಆಚಾರ ವಿಚಾರಗಳ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವುದು. ಭಾರತ ದೇಶವು ಒಳಗಿನ ಹಾಗೂ ಹೊರಗಿನ ಸಂಸ್ಕೃತಿಗಳ ಮೂಲಾಂಶಗಳನ್ನು ಗರ್ಭೀಕರಿಸಿಕೊಂಡು ಸಮಷ್ಟಿ ಸಂಸ್ಕೃತಿಯಾಗಿ ಮೈದಳೆದಿರುವುದು ಮತ್ತೊಂದು ವೈಶಿಷ್ಟ್ಯವೆನ್ನಬಹುದು. ಎಲ್ಲ ಧರ್ಮಗಳು ಮತ್ತು ನಂಬಿಕೆಗಳನ್ನು ಪೋಷಿಸುವುದರಲ್ಲಿ ಜನರ ನೀತಿ ನಡುವಳಿಕೆಗಳನ್ನು ಉತ್ತಮ ಪಡಿಸುವದಲ್ಲಿ ತಮ್ಮದೇ ಆದ ನೀತಿಸಂಹಿತೆಯನ್ನೊಳಗೊಂಡಿವೆ.

ಭಾರತದ ಧಾರ್ಮಿಕ ಚರಿತ್ರೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವಿಪರ್ಯಾಸದ ಅಂಶಗಳು ಕಂಡು ಬರುವವು. ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯಲ್ಲಿ ಅಮೂಲಾಗ್ರ ಬದಲಾವಣೆ ಮಾಡಿದ ಬುದ್ಧ, ಬಸವಾದಿ ಶರಣ, ಶರಣೆಯರು, ಹರಿದಾಸರು ಹಾಗೂ ಸೂಫಿ ಸಂತರು ಈ ಮೊದಲಾದವರು ಏಕ ದೇವತಾರಾಧನೆಯ ಮಹತ್ವವನ್ನೂ ವ್ಯಕ್ತಿಯು ದೇವನಾಗಲಾರನೆಂದೂ, ಬಹಳೆಂದರೆ ಅವನು ದೇವರ ಪ್ರತಿನಿಧಿಯೆಂದೂ ಉಪದೇಶಿಸಿದರು.

ನಾವು ನಿಮ್ಮಂತ ಸಾಮಾನ್ಯ ಮನುಜರೆಂದು ಸಾಮಾಜಿಕರಿಗೆ ಸ್ಪಷ್ಟಪಡಿಸಿದರು. ಆದರೆ ವಿಪರ್ಯಾಸದ ಸಂಗತಿಯೆಂದರೆ ಯಾರು ಬಹುದೇವತಾರಾಧನೆಯನ್ನು ಖಂಡಿಸಿದರೋ! ಯಾರು ತಮ್ಮನ್ನು ಆರಾಧಿಸುವುದಾಗಲಿ ಮಾಡಕೂಡದೆಂದು ಹೇಳಿದರೋ! ಅಂತಹವರು ಜೀವನದಿಂದ ಪರಿತ್ಯಕ್ತರಾದ ಮೇಲೆ ಅವರವರ ಹೆಸರಿನಲ್ಲಿ ದೇವಾಲಯ, ಮಠ , ಮಂದಿರ ಹಾಗೂ ದರ್ಗಾಗಳನ್ನು ನಿರ್ಮಿಸಿರುವುದು ವಿಷಾದಕರ.

'ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ' ಎಂಬ ಸಹಕಾರ ತತ್ವದಂತೆ ನಮ್ಮ ಹಳ್ಳಿಗರ ಬದುಕು ಒಬ್ಬರಿಗೊಬ್ಬರು ಅವಲಂಬಿಸಿ ಬದುಕುವುದು ಅನಿವಾರ್ಯ. ನಗರವಾಸಿಗಳು ಹಣದ ಮೂಲಕ ಜೀವನದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಂತೆ ಗ್ರಾಮೀಣ ಜನರು ಪೂರೈಸಿಕೊಳ್ಳುವುದು ಅಷ್ಟೊಂದು ಸುಲಭ ಸಾಧ್ಯವಲ್ಲ. ಅವರು ಪರಸ್ಪರರನ್ನು ಅವಲಂಬಸಿ, ಬದುಕಬೇಕಾಗಿರುತ್ತದೆ. ಆದ್ದರಿಂದ ಒಬ್ಬನ ಅನುಭವ ಎಲ್ಲರದಾಗಿ ಎಲ್ಲರ ಅನುಭವ ಒಬ್ಬನದಾಗಿ ಎಂಬ ಸಾಮೂಹಿಕ ಪ್ರಜ್ಞೆಪ್ರಾಪ್ತವಾಗುತ್ತದೆ. ಪರಸ್ಪರರು ಕೊಡುಕೊಳ್ಳುವ ಪ್ರಕ್ರಿಯೆಗಳಿಂದ ಸಮೃದ್ಧಿ ಬದುಕನ್ನು ಸಾಗಿಸುವರು. ಅವರ ಜೀವನದ ಮೂಲ ಮಂತ್ರ, ಸಹಬಾಳ್ವೆಯಾಗಿರುತ್ತದೆ.

ವರ್ಷವಿಡೀ ದುಡಿದು ಮಾನವನಿಗೆ ತನ್ನ ಬದುಕಿಗೆ ಹಸನತೆ ಕೊಡುವ ಭಗವಂತನ ಆರಾಧನೆ ಅಗತ್ಯವೆನಿಸಿತು. ಸಕಾಲಕ್ಕೆ ಮಳೆ ಬೆಳೆಗಳು ಚೆನ್ನಾಗಿ ಬರಲೆಂದೂ ನೈಸರ್ಗಿಕ ವಿಕೋಪಗಳಾದ ಗುಡುಗು, ಸಿಡಿಲು, ಭೂಕಂಪ, ನೆರೆಹಾವಳಿ, ಅತಿವೃಷ್ಟಿ, ಅನಾವೃಷ್ಟಿ ಮೊದಲಾದವುಗಳಿಂದ ಪಶು ಪಕ್ಷಿ ಪ್ರಾಣಿಗಳಗೆ ರಕ್ಷಣೆ ಒದಗಲೆಂದೂ, ಮಕ್ಕಳಿಗೆ ದನಕರುಗಳಿಗೆ ರೋಗ ರುಜಿಗಳು ತಗಲದಿರಲೆಂದೂ ದೈವತ್ವವನ್ನು ಕೋರುವ ಆಚರಣೆಯಲ್ಲಿ ತೊಡಗಿದರು. ಅವರವರ ಬೇಡಿಕೆಗಳು ಇಚ್ಛೆಗಳು ಈಡೇರಿದಾಗ ಉತ್ಸವ ರೂಪದ ಹಲವಾರು ಆಚರಣೆಗಳಲ್ಲಿ ನಿರತರಾದರು. ಮುಂದೆ ಅವು ಚಂದ್ರ, ಸೂರ್ಯರ ಚಲನೆಯನ್ನವಲಂಬಿಸಿ ವಾರ, ತಿಂಗಳು, ಜಾತ್ರೆ ಉತ್ಸವಗಳು ಹಬ್ಬ ಹುಣ್ಣಿಮೆಗಳಾಗಿ ಹುಟ್ಟಿಕೊಂಡವು.

ಸೃಷ್ಟಿಕರ್ತನಾದ ಅಲ್ಲಾಹ(ಭಗವಂತ) ನು ಆರಾಧನೆಗೆ ತಕ್ಕವನು, ಅವನನ್ನು ಹೊರತುಪಡಿಸಿ ಯಾರೂ ಪೂಜೆಗೆ ಅರ್ಹರಲ್ಲವೆಂದು ಪವಿತ್ರ ಕುರಾನ್ ಸ್ಪಷ್ಟೀಕರಣಗೊಳಿಸಿದೆಯಲ್ಲದೆ, ಮೂರ್ತಿರೂಪದ ದೇವರ ಪೂಜೆಯನ್ನು ನಿಷೇಧಗೊಳಿಸಿದೆ. ಭಾರತೀಯ ಸಂಸ್ಕೃತೀಕರಣದಡಿಯಲ್ಲಿ ಬರುವ ಇಸ್ಲಾಮೀಯ ಭಕ್ತಿ ಪಂಥ ಸೂಫಿಸಂತರನ್ನು ತಮ್ಮ ದೇವರನ್ನಾಗಿ ಸ್ವೀಕರಿಸಿ ಆರಾಧನೆಗೆ ಒಳಪಡಿಸಿ, ಇದು ದರ್ಗಾ ಸಂಸ್ಕೃತಿಯ ಉಗಮಕ್ಕೆ ಕಾರಣವಾಯಿತು. ಆಧ್ಯಾತ್ಮಿಕ ಜ್ಞಾನದ ಕೇಂದ್ರಗಳಾದ ದರ್ಗಾಗಳು ಹಿಂದೂ ಸಂಸ್ಕೃತಿಯ ನೆರಳಿನಡಿಯಲ್ಲಿ ಸೃಷ್ಟಿಗೊಂಡಿದ್ದರೂ, ಕೇವಲ ಮುಸ್ಲಿಮ ಭಕ್ತರಿಗೆ ಮಾತ್ರವಲ್ಲದೆ

ಅಸಂಖ್ಯಾತ ಹಿಂದೂ ಭಕ್ತರನ್ನು ಒಳಗೊಂಡಿದ್ದು, ಐತಿಹಾಸಿಕ ಹಾಗೂ ಧಾರ್ಮಿಕ ಸಮನ್ವಯಕ್ಕೆ ನಿದರ್ಶನವಾಗಿದೆ.

೧. ಹಿಂದೂ ಧರ್ಮ, ಹಿಂದೂ ತತ್ವಜ್ಞಾನ, ಹಿಂದೂ ಸಂಸ್ಕೃತಿಗಳ ಪ್ರಭಾವದಿಂದ ರಾಜ್ಯವಾಳಿದ ಭಾರತದ ಮುಸ್ಲಿಂ ಸುಲ್ತಾನರಲ್ಲಿ ಮೊಗಲ ಚಕ್ರವರ್ತಿ ಅಕ್ಬರನನ್ನು ಬಿಟ್ಟರೆ, ದಕ್ಷಿಣ ಭಾರತದಲ್ಲಿ ಬಿಜಾಪೂರದ ೨ನೇ ಇಬ್ರಾಯಿಂ ಆದಿಲ್ ಷಾ ಇವನಿಗೆ ಸರಿಸಮನಾದ ಬಾದಶಾಹರೇ ಇರಲಿಲ್ಲ. ಎಂಬುದು ಗಮನಾರ್ಹ ವಿಷಯ, ಸ್ವತಃ ಷಾ ಸಾಹಿತಿ ಮತ್ತು ಸಂಗೀತಗಾರನಾಗಿದ್ದ ೨ನೇ ಇಬ್ರಾಯಿಂ ಬಾದಶಾಹನು ದಖನಿ ಉರ್ದುವಿನಲ್ಲಿ ರಚಿಸಿದ ಕಿತಾಬ್ ಎ ನವರಸನಲ್ಲಿ ನರಸಿಂಹ, ಪಾರ್ವತಿ, ಸರಸ್ವತಿ, ಮೊದಲಾದವರ ಸ್ತೋತ್ರಗಳೊಂದಿಗೆ ಹ ಮಹಮ್ಮದ (ಸ) ಪೈಗಂಬರರನ್ನು ಕುರಿತು ಪ್ರಾರ್ಥನಾ ಗೀತೆಗಳಿವೆ. ಇವನ ಅನ್ಯಧರ್ಮ ಸಹಿಷ್ಣುತೆಯನ್ನು ಕಂಡು ಕೆಲವು ಜನ ಅಸಮಾಧಾನಗೊಂಡರೆ ಕೆಲವು ಮುಸ್ಲಿಮ ಪ್ರಜೆಗಳು ಅವನನ್ನು ಜಗದ್ಗುರು ಎಂಬ ಹೆಸರಿನಿಂದ ಪ್ರಚಾರ ಪಡಿಸಲು ಪ್ರಯತ್ನಿಸಿದರು. ಇದನ್ನರಿತ ಬಾಹಶಹನು ಜಗದ್ಗುರು ಎಂಬ ಹೆಸರಿನ ನಾಣ್ಯಗಳನ್ನು ಟಂಕಿಸಿ "ಬಾಕಾ ನ್ಯಾರೊ ನ್ಯಾರೋಭಾವ್ಯ ಏಕ ಕಹಾ ತುರುಕ ಕಹಾ ಬರಹಮಾನ" ಅರಸ ಬಾಷೆಗಳು ಬೇರೆ ಬೇರೆಯಾದರೂ ಭಾವ ಒಂದೇ, ತುರುಕ ಮತ್ತು ಬ್ರಾಹ್ಮಣ ಎಂಬ ಭೇದವೆಲ್ಲಿದೆ ಎಂದು ಪ್ರಶ್ನಿಸಿದನು. ಇವೆಲ್ಲವುಗಳನ್ನು ಪರಿಶೀಲಿಸಿದಾಗ ಮುಸ್ಲಿಂ ಅರಸರ ಕಾಲದಲ್ಲಿ ಹಿಂದೂ ಮುಸ್ಲಿಮರು ಸಾಮರಸ್ಯದಿಂಧ ಕೂಡಿದ ಸಹಬಾಳ್ವೆಯನ್ನು ನಡೆಸುತ್ತಿದ್ದುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ.

ಹಿಂದೂ ಧರ್ಮದ ಶಿವಶರಣರ, ಹರಿದಾಸರ ಸಂಸರ್ಗ ಹೊಂದಿದ ಸೂಫಿ ಸಂಥರು ಆಗಾಗ ನಡೆಯುವ ಆಧ್ಯಾತ್ಮಿಕ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಪರಸ್ಪರರು ಹೊಂದಾಣಿಕೆಯ ಪ್ರವೃತ್ತಿಯನ್ನು ಬೆಳೆಸಿಕೊಂಡರಲ್ಲದೆ, ವಿವಿಧ ಕೋಮುಗಳ ಜನರಲ್ಲಿ ಸ್ನೇಹಮಯ ವಾತಾವರಣ ನಿರ್ಮಿಸುವಲ್ಲಿ, ಪರಸ್ಪರರು ಸಹಬಾಳ್ವೆ ಸೋದರತ್ವದಿಂದ ನಡೆದುಕೊಳ್ಳುವಿಕೆ ಬಹುವಾಗಿ ಶ್ರಮಿಸಿದರು. ಜನಸಾಮಾನ್ಯರ ಬದುಕಿಗೆ ರಕ್ಷಣೆಯೊನ್ನೊದಗಿಸಿದ ಸಂತರು ಅಲ್ಲಾಹನ ಆರಾಧನೆಯ ಸರಳ ಮಾರ್ಗವನ್ನು ತೋರಿಸಿಕೊಟ್ಟರು. ಜಾತಿ ಮತ, ಅಂತಸ್ತುಗಳ ಭೇದವಿಲ್ಲದೆ ಸರ್ವಭಕ್ತರ ಕಲ್ಯಾಣ ಬಯಸಿದ ಸಂತರು ಐಕ್ಯರಾದ ಮೇಲೆ ಅವರ ಸಮಾಧಿಯನ್ನು ದರ್ಗಾಗಳನ್ನಾಗಿ ಪರಿವರ್ತಿಸಿದುದಕ್ಕೆ ಭಾರತೀಕರಣದ ಪ್ರಭಾವವೇ ಕಾರಣವೆನ್ನಬಹುದು.

ಕರ್ನಾಟಕದ ಬಹುತೇಕ ದರ್ಗಾಗಳ ಆಡಳಿತ ಮಂಡಳಿಯ ಸದಸ್ಯರು, ಅಧ್ಯಕ್ಷರು ಹಿಂದೂ ಬಾಂಧವರು ಆಗಿದ್ದು, ಇಡೀ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿಕೊಂಡು

ಹೋಗುತ್ತಿರುವುದು ಸಂತೋಷದ ಸಂಗತಿಯಾಗಿದೆ. ದರ್ಗಾದ ಆಚರಣೆಗಳಲ್ಲಿ ಪ್ರಮುಖ ಪಾತ್ರವಹಿಸುವವರು, ಬಹಳಷ್ಟು ಉರುಸುಗಳಲ್ಲಿ ದೀವಟಿಕೆಗಳನ್ನು ಹಿಡಿಯುವವರು, ಉರುಸಿನ ಜವಾಬ್ದಾರಿವಹಿಸಿಕೊಳ್ಳುವವರು ಹಿಂದೂ ಬಾಂಧವರೇ ಆಗಿರುವರು.

ಜಾತ್ಯಾತೀತ ಸಂತರೆಂದು ಸಮಾಜದಿಂದ ಗುರುತಿಸಲ್ಪಟ್ಟಿದ್ದ ಅವರು ಮಾನವೈಕ್ಯತೆಯ ತತ್ವದ ಪರಿಕಲ್ಪನೆಯ ಮೂಲಕ ಜಾತಿ ವರ್ಗಗಳ ವೈಷಮ್ಯಗಳನ್ನು ಹೋಗಲಾಡಿಸಿ ಪರಸ್ಪರರಲ್ಲಿ ಗೌರವ, ಸಮಾನತೆ, ಸ್ನೇಹಮ ಸಹಬಾಳ್ವೆ, ವಿಶ್ವಭ್ರಾತೃತ್ವದ ಭಾವನೆಗಳನ್ನು ಒಡಮೂಡಿಸಿದರು. ಅಂತಹ ಅನುಭಾವಿಗಳ ಮಾರ್ಗದಲ್ಲಿ ಇಂದಿಗೂ ನಡೆಯುತ್ತಿರುವ ಅವರ ಅನುಯಾಯಿಗಳು ಆಯಾ ಪ್ರದೇಶದ ಸಂತರ ಉರುಸಿನ ಉತ್ಸವದಲ್ಲಿ ಯಾವುದೇ ರೀತಿಯ ವೈಷಮ್ಯವಿಲ್ಲದೆ, ಹಿಂದೂ ಮುಸ್ಲಿಮರು ಪ್ರಸನ್ನ ಮನಸ್ಸಿನಿಂದ ಪಾಲ್ಗೊಂಡು ಅತುಳಭಕ್ತಿಯಿಂದ ಆಚರಿಸುವ ದೃಶ್ಯಗಳು ಭಾವೈಕ್ಯತೆಯ ಹೆಗ್ಗುರುತುಗಳಾಗಿವೆ.

ಹಿಂದೂ ದೇವಾಲಯಗಳಿಗೆ ಕರ್ಪೂರ ಒಯ್ಯುವಂತೆ ದರ್ಗಾದಲ್ಲಿ ಹಿಂದೂ ಮುಸ್ಲಿಮರಿಂದ ಕಾಯಿಗಳನ್ನು ಒಡೆಯುವುದು, ಕರ್ಪೂರ ಸ್ಥಾನದಲ್ಲಿ ಲೋಬಾನ, ಊದಬತ್ತಿ ಹಚ್ಚುವದು, ದೀಪ ಬೆಳಗಿಸುವುದು, ಹಣೆ ಹಚ್ಚಿ ನಮಸ್ಕರಿಸುವುದು, ದೀರ್ಘದಂಡ ನಮಸ್ಕಾರ ಹಾಕುವುದು, ಹೀಗೆ ಹೇಳುತ್ತ ಹೋದರೆ ಮುಗಿಯದ ರೀತಿಯಲ್ಲಿ ನಾನಾ ಬಗೆಯ ಆಚರಣೆಗಳಿವೆ. ಇವೆಲ್ಲವುಗಳು ಹಿಂದೂ ಮುಸ್ಲಿಮರನ್ನು ಭಾವನಾತ್ಮಕವಾಗಿ ಬೆಸೆಯುವ ಪರಸ್ಪರರಲ್ಲಿ ಕೋಮುಸೌಹಾರ್ದತೆನ್ನುಂಟು ಮಾಡುವ ರೀತಿಯಲ್ಲಿ ದರ್ಗಾದ ಆಚರಣೆಗಳು ನಡೆಯುವವು.

ಈ ಮೇಲಿನ ಎಲ್ಲಾ ಸನ್ನಿವೇಶ ಸಂದರ್ಭದ ಸಂಗತಿಗಳನ್ನು ಪರಿಶೀಲಿಸಿದಾಗ ಭಾರತೀಯ ಸಂಸ್ಕೃತಿಯ ವ್ಯಷ್ಟಿಯಿಂದ ಸಮಷ್ಟಿಯತ್ತ ಸಾಗಿ ವಿಶಾಲರೂಪ ತಳೆದು, ಅದು ಸಾಮರಸ್ಯವನ್ನು ತನ್ನ ಜೀವಾಳವನ್ನಾಗಿ ಹೊಂದಿರುವುದಕ್ಕೆ ಸಾಕ್ಷಿಗಳೆನಿಸಿವೆ. ಇಂದಿಗೂ ನಮ್ಮ ಗ್ರಾಮಗಳಲ್ಲಿ ಮಾರಿದೇವಿ, ದುರ್ಗಮ್ಮ ದೇವಿ ಜಾತ್ರೆಗಳಲ್ಲಿ, ಮಂಗಳ ಉತ್ಸವಗಳಲ್ಲಿ ಎಲ್ಲರೂ ಒಂದೆ ಕುಟುಂಬದವರಂತೆ ಪಾಲ್ಗೊಂಡು ಪರಸ್ಪರರು ಸಹಕಾರದ, ಸ್ನೇಹದ ಹಸ್ತ ಚಾಚುವುದನ್ನು ನೋಡಬಹುದಾಗಿದೆ.

ಧರ್ಮದಲ್ಲಿ ರಾಜಕೀಯ ಸೇರಿರುವುದರಿರುಂದ ಧರ್ಮದ ದುರ್ಬಳಕೆಯುಂಟಾಗಿ ರಾಷ್ಟ್ರದುದ್ದಕ್ಕೂ ಕೋಮುದಳ್ಳುರಿ ಹೊತ್ತಿ ಸಾವಿರಾರು ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಿರುವ ಹೃದಯವಿದ್ರಾವಕ ಬರ್ಬರ ಕೃತ್ಯಗಳು ದಿನನಿತ್ಯ ನಡೆಯುತ್ತಿರುವುದು ವಿಷಾದದ ಸಂಗತಿಯಾಗಿದೆ. ಭಾರತವು ಅಹಿಂಸೆ ಮತ್ತು ಶಾಂತಿ ತತ್ವಗಳ ಕಟ್ಟುನಿಟ್ಟಿನ ಆಚರಣೆಗಳಿಗೆ ಪ್ರಖ್ಯಾತಿ

ಹೊಂದಿದೆ. ಇಂಥ ದೇಶದಲ್ಲಿ ಮತೀಯ ಗಲಭೆಗಳು ತಲೆಯೆತ್ತುವಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ದೊಡ್ಡ ಜಾಲವಿದೆ. ಅವರ ಮೂಲೋದ್ದೇಶ ಕೇವಲ ರಾಜಕೀಯ ಅಧಿಕಾರ. ಅವರಿಂದಾಗಿ ವಿವಿಧ ಕೋಮುಗಳ ಜನರ ಮನಸ್ಸು ಕಲುಷಿತಗೊಂಡಿವೆ. ಇಂತಹ ವಿಷಮ ಪರಿಸ್ಥಿತಿಯನ್ನು ನೋಡಿದಗ ಅಲ್ಲಾಹನ ಸನ್ನಿಧಿ ಹೊಂದಿ, ಗೋರಿ(ಸಮಾಧಿ) ಸೇರಿದ ಸೂಫಿ ಸಂತರ, ಲಿಂಗೈಕ್ಯರಾದ ಮಠದ ಪವಾಡ ಪುರುಷರ, ಉರುಸುಗಳ, ಜಾತ್ರೆ ಉತ್ಸವಗಳ ಮೂಲಕ ಮಾನವೈಕ್ಯತೆ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಪುನರ್ ನಿರ್ಮಿಸಬೇಕಾಗಿದೆ. ಅವರಿರದಿದ್ದರೇನಾಯಿತು? ಅವರ ದರ್ಗಾಗಳೂ, ಮಂದಿರಗಳೂ, ದೇವಾಲಯಗಳೂ, ಮಠ ಮಾನ್ಯಗಳೂ ಹಿಂದೂ ಮುಸ್ಲಿಮರ ಕೋಮು ಸಾಮರಸ್ಯದ ಸಹಬಾಳ್ವೆಯ ಕೆಲಸ ಮಾಡುತ್ತಿರುವುದು ಸಂತೋಷಕರ ಸಂಗತಿಯೆನ್ನಬಹುದು. ಅವರ ಉತ್ಸವಗಳು ಹಿಂದೂ ಮುಸ್ಲಿಮರನ್ನು ಒಂದೆಡೆಗೆ ತಂದು, ಪರಸ್ಪರರಲ್ಲಿ ಸಾಮರಸ್ಯದ ಸ್ನೇಹ, ಸಹಬಾಳ್ವೆಯನ್ನುಂಟು ಮಾಡುವ ರೀತಿಯಲ್ಲಿ ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ನಡೆಯಬೇಕು.

೫.೫. ಜೈನ ಧರ್ಮದ ಬಸದಿಗಳು ಮತ್ತು ಆಚರಣೆಗಳು :

ಜೈನ ಧರ್ಮದ ಮೂಲ ಸಿದ್ಧಾಂತವೇ 'ಜಿನ' ಜಿನ ಎಂದರೆ ಜೀವಿಗಳ ಮೇಲೆ ನಮ್ರತೆ ಇರತಕ್ಕ ಆತ್ಮವೇ 'ಜೀವಾತ್ಮ' ಇದನ್ನೇ ಆಂಗ್ಲಭಾಷೆಯಲ್ಲಿ 'ಜೀನ್ಸ್' ಎನ್ನುವರು. ಈ ಜೀವಾತ್ಮವನ್ನೇ ದೇವರೆಂದು ನಂಬುವವರೇ ಜೈನರು. ಜೈನ ಧರ್ಮಕ್ಕೆ ಜಾತಿಭೇದ ಏನೂ ಇಲ್ಲ.

ಮನು ಚಕ್ರವರ್ತಿ ಕಾಲದಲ್ಲಿ ೧೦ ಬಗೆಗಳ ಕಲ್ಪವೃಕ್ಷಗಳು ಸಕಲ ಜೀವಿಗಳಿಗೆ ನೀರು, ಗಾಳಿ, ಬೆಳಕು ಮತ್ತು ಆಹಾರಗಳನ್ನು ಕೊಡುತ್ತಿದ್ದವಂತೆ. ಆದರೆ ಪ್ರಥಮ ತೀರ್ಥಂಕರ ವೃಷಭನಾಥನ ಕಾಲದಲ್ಲಿ ವೃಕ್ಷಗಳ ಫಲ ನಿಂತು ಹೋದವಂತೆ ಆಗ ಪ್ರಥಮ ಚಕ್ರವರ್ತಿ ವೃಷಭನಾಥರು 'ಇನ್ನು' ಮುಂದೆ ವೃಕ್ಷಗಳು ಫಲ ಕೊಡುವದಿಲ್ಲ. ಭೋಗ, ಭೂಮಿ, ಕಾಲ ಮುಗಿದು ಇನ್ನು ಕರ್ಮಭೂಮಿ ಕಾಲ ಆರಂಭವಾಗಿದೆ. ನೀವು ಏನಾದರೂ ಕೆಲಸ ಮಾಡಿದರೆ ಮಾತ್ರ ಬದುಕಲು ಸಾಧ್ಯ ಎಂದರಂತೆ.

ಹಾಗಾಗಿಯೇ ಅವರು ಅಸಿ(ಅಸ್ತ್ರ) ಮಸಿ(ಬರವಣಿಗೆ) ಮತ್ತು ಕೃಷಿ ತತ್ವಗಳನ್ನು ತಂದರು. ಜೈನ ಸಂಪ್ರದಾಯದ ಪ್ರಕಾರ 'ಬ್ರಾಹ್ಮಿ' ಲಿಪಿಯ ಸೃಷ್ಟಿಕರ್ತ ಪ್ರಥಮ ತೀರ್ಥಂಕರನಾದ ಆದಿವೃಷಭ, ಆದಿವೃಷಭನು ತನ್ನ ಮಗಳಾದ 'ಬ್ರಹ್ಮಿ'ಗೆ ಬಲಗೈಯಲ್ಲಿ 'ಲಿಪಿ' ಗಳನ್ನೂ; ಇನ್ನೊಬ್ಬ ಮಗಳಾದ ಸೌಂದರಿಗೆ 'ಎಡಗೈಯಲ್ಲಿ' 'ಗಣಿತ"ವನ್ನೂ ಭೋದಿಸುತ್ತಾನೆ. ಹನ್ನೊಂದನೆ ತೀರ್ಥಂಕರರಾದ ಶ್ರೇಯಾಂಶನಾಥರ ಕಾಲದಲ್ಲಿ ಜೈನರು ಯಜ್ಞೋಪವೀತ ಎಂದರೆ ಜನಿವಾರ

ಧರಿಸುವ ಪದ್ಧತಿಯನ್ನು ಜಾರಿಗೆ ತಂದರು. ಶ್ರಾವಣ ಶುದ್ಧ ಹುಣ್ಣಿಮೆಗೆ ದಿನದಂದು ಜನಿವಾರ ಧರಿಸಲು ಉತ್ತಮ ದಿನ. ಆ ದಿನದ ನಕ್ಷತ್ರ ಸಹ ಶ್ರಾವಣ ಜನಿವಾರದಲ್ಲಿರುವ ಮೂರು ಎಳೆಗಳೇ ಸಮ್ಯಗ್ದರ್ಶನ,ಸಮ್ಯಕಜ್ಞಾನ, ಸಮ್ಯಕಚಾರಿತ್ರ್ಯಗಳಾಗಿವೆ ಇವನ್ನೆ ರತ್ನಾತ್ರೆಯಗಳೆನ್ನವರು.

ಅಂದಿನ ಸಮಕಾಲೀನ ಸಂದರ್ಭದಲ್ಲಿ ಯಜಮಾನ ಸಂಸ್ಕೃತಿಯಾಗಿ ಮೆರೆದಂತಹ ವೈದಿಕ ಸಂಸ್ಕೃತಿಗೆ ಪ್ರತಿ ಸಂಸ್ಕೃತಿಯಾಗಿ ಅರಳಿದುದು ಶ್ರಮಣ ಸಂಸ್ಕೃತಿ ಆರ್ಯೇತರ ಚಿಂತನೆಯ ಮೂಲ ಸೆಲೆ ಶ್ರಮಣ ಪರಂಪರೆಯಲ್ಲಿದ್ದು ಈ ಪರಂಪರೆ ವೈದಿಕ ಪರಂಪರೆಯಿಂದ ದೂರ ಸರಿದು ಶೂದ್ರ ಮನೋಧರ್ಮಕ್ಕೆ ಹತ್ತಿರವಾದುದು. ಇಂತಹ ಮನೋಭೂಮಿಕೆಯ ಶ್ರಮಣ ಪರಂಪರೆಯ ಹಿನ್ನೆಲೆಯಲ್ಲಿ ಬೌದ್ಧ, ಜೈನ, ಅಜೀವಕ, ಲೋಕಾಯತ ಮುಂತಾದ ಧರ್ಮಗಳು ಆಕಾರ ತಳೆದವು. ಶ್ರಮಣ ಪರಂಪರೆಯಲ್ಲಿ ಬಂದ ಈ ಎಲ್ಲ ಧರ್ಮಗಳಲ್ಲಿ ಅತ್ಯಂತ ಪ್ರಾಚೀನ ಧರ್ಮವೆಂದರೆ ಜೈನಧರ್ಮ, ಧರ್ಮ, ದರ್ಶನ, ಆಚಾರ-ವಿಚಾರಗಳನ್ನು ಒಂದಾಗಿಸಲು ಹವಣಿಸುತ್ತ ಮೈದಳೆದ ಈ ಧರ್ಮ ಬೌದ್ಧ ಧರ್ಮಕ್ಕಿಂತಲೂ ಪ್ರಾಚೀನ ವೇದಕಾಲಕ್ಕಿಂತಲೂ ಪ್ರಾಚೀನವೆಂಬುದರಲ್ಲಿ ಸಂದೇಹವಿಲ್ಲ.

ಕುಲಂಕರರಲ್ಲಿ ಕೊನೆಯವನಾದ ನಾಭಿರಾಜನ ಮಗನೇ ವೃಷಭದೇವ. ಇವನಿಂದಲೇ ಜೈನಧರ್ಮ ಪ್ರವರ್ತಿತವಾಯಿತೆಂದು ತಿಳಿದು ಬರುತ್ತದೆ. ನಾಭಿರಾಜ ಮತ್ತು ಮರುದೇವಿಯಲ್ಲಿ ಹುಟ್ಟಿದ ವೃಷಭನಾಥನು ಪ್ರಥಮ ತೀರ್ಥಂಕರನಾಗಿದ್ದು ಇವನು ಅಸಿ,ಮಸಿ, ಕೃಷಿ, ಶಿಲ್ಪ, ವಾಣಿಜ್ಯ ಮತ್ತು ವಿದ್ಯಾ ಈ ಆರು ಜೀವನ ಕ್ರಮಗಳನ್ನು (ಷಟ್ಕರ್ಮ) ಬೋಧಿಸಿದನು. ಪ್ರಜಾಪತಿ ಎನಿಸಿದ ಇವನು ಸಾಮಾಜಿಕ ವ್ಯವಸ್ಥೆಗಾಗಿ ಮೂರು ವರ್ಣಗಳನ್ನು ಸ್ಥಾಪಿಸಿದನು. ಭಗವಾನ ವೃಷಭನಿಗೆ ಸುನಂದಾ, ನಂದಾ ಇಬ್ಬರು ಹೆಂಡತಿಯರಲ್ಲಿ ನೂರು ಜನ ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು ಜನಿಸಿದರು. ಮುಂದೆ ವೃಷಭದೇವನು ಹಿರಿಯ ಮಗನಾದ ಭರತನಿಗೆ ಪಟ್ಟಗಟ್ಟಿ ಸನ್ಯಾಸವನ್ನು ಸ್ವೀಕರಿಸಿ, ಉಗ್ರ ತಪಸ್ಸು-ಸಾಧನೆಯ ಮೂಲಕ ಸಿದ್ಧಿಯನ್ನು ಪಡೆದನು. ಕಠೋರ ತಪಸ್ವನ್ನಾಚರಿಸುತ್ತಾ ಕುಟುಕಾಚಲ ಪರ್ವತಗಳಲ್ಲಿ ನಗ್ನವಾಗಿ ವಿಹರಿಸುತ್ತಿದ್ದಂತಹ ಸಮಯದಲ್ಲಿ ಬಿದಿರು ಮಳೆಯಿಂದ ವನಕ್ಕೆ ಬೆಂಕಿ ಹತ್ತಿರಲಾಗಿ ಅದರಲ್ಲಿ ತಾನು ಭಸ್ಮವಾಗಿ ಹೋದನು.

ಹೀಗೆ ಜೈನ ಪುರಾಣಗಳಲ್ಲಿ ಮತ್ತು ಜೈನೇತರ ಸಾಹಿತ್ಯದಲ್ಲಿ ವೃಷಭದೇವನ ಜೀವನ, ತಪಸ್ಸು, ಕೇವಲ ಜ್ಞಾನಪ್ರಾಪ್ತಿ, ಧರ್ಮೋಪದೇಶಗಳ ವರ್ಣನೆಯು ಬರುತ್ತದೆ. ಇವುಗಳ ಹಿನ್ನೆಲೆಯಲ್ಲಿ ಭಗವಾನ ವೃಷಭದೇವನೇ ಜೈನಧರ್ಮದ ಆದಿಪ್ರವರ್ತಕನೆಂದು ಇತಿಹಾಸ

ಪುರುಷನೆಂದು ಸಿದ್ಧವಾಗುತ್ತದೆ. ಜೈನಧರ್ಮ ಮಹಾವೀರನಿಗಿಂತಲೂ ಅತಿ ಪುರಾತನ ಎಂಬುದಕ್ಕೂ ಅನೇಕ ಆಧಾರಗಳು ದೊರೆಯುತ್ತವೆ. ಹರಪ್ಪ ಮೆಹೆಂಜೋದಾರೊ ಸಂಸ್ಕೃತಿಯ ಜೈನಧರ್ಮದ ಪುರಾತನತೆಗೆ ಆಧಾರಗಳನ್ನು ಒದಗಿಸುತ್ತದೆ. ವೃಷಭನ ಕಾಲ ಐದು ಸಾವಿರ ವರ್ಷಗಳಷ್ಟು ಪ್ರಾಚೀನ.

ವೃಷಭದೇವನ ನಂತರ ೨೪ ಜನ ತೀರ್ಥಂಕರರು ಜೇನಧರ್ಮ ಪ್ರವರ್ತನಗೈದಿದ್ದಾರೆ.

ತೀರ್ಥಂಕರರು	ಲಾಂಛನ
೧. ವೃಷಭನಾಥ	ಎತ್ತು
೨. ಅಜೀತನಾಥ	ಆನೆ
೩. ಸಂಭವನಾಥ	ಅಶ್ವ
೪. ಅಭಿನಂದನನಾಥ	ಕಪಿ
೫. ಸುಮತಿನಾಥ	ಚಕ್ರವಾಕಪಕ್ಷಿ
೬. ಪದ್ಮಪ್ರಬ	ಕಮಲ
೭. ಸುಪಾರ್ಶ್ವನಾಥ	ಸ್ವಸ್ತಿಕ
೮. ಚಂದ್ರಪ್ರಭ	ಚಂದ್ರ
೯. ಪುಷ್ಪದಂತ	ಮೊಸಳೆ
೧೦. ಶೀತಲನಾಥ	ಕಲ್ಪವೃಕ್ಷ
೧೧. ಶ್ರೇಯಾಂಶ	ಗಂಡಕ
೧೨. ವಾಸುಪೂಜ್ಯ	ಮಹೇಶ
೧೩. ವಿಮಲನಾಥ	ಸುಖರ
೧೪. ಅನಂತನಾಥ	ಸಾಯಾಳಪಕ್ಷಿ
೧೫. ಧರ್ಮನಾಥ	ವಜ್ರ
೧೬. ಶಾಂತಿನಾಥ	ಚಿಗರೆ

೧೭.	ಕುಂತುನಾಥ	ಆಡು
೧೮.	ಅರಣ್ಯನಾತ	ಮೀನ
೧೯.	ಮಲ್ಲಿನಾಥ	ಕುಂಭ
೨೦.	ಮುಲನಿಸುವ್ರತ	ಆಮೆ
೨೧.	ನಮಿನಾಥ	ನೀಲಕಮಲ
೨೨.	ನೇಮಿನಾಥ	ಶಂಖ
೨೩.	ಪಾಶ್ವನಾಥ	ಸರ್ಪ
೨೪.	ಮಹಾವೀರ	ಸಿಂಹ

೨೩ ನೇಯ ತೀರ್ಥಂಕರನಾದ ಪಾರ್ಶ್ವನಾಥನನ್ನು ಐತಿಹಾಸಿಕ ಪುರುಷನೆಂದು ಮನ್ನಿಸಿದ್ದಾರೆ. ಅದಕ್ಕೆ ತಕ್ಕ ಆಧಾರಗಳು ಬೌದ್ಧ ಮತ್ತು ಜೈನ ಗ್ರಂಥಗಳೆರಡಲ್ಲಿಯೂ ದೊರೆಯುತ್ತವೆ. ವಾರಣಾಸಿಯ ರಾಜನಾದ ಅಶ್ವಸೇನ ಮತ್ತು ವರ್ಮಲಾದೇವಿಯಲಿ ಹುಟ್ಟಿದ ಪಾರ್ಶ್ವನಾಥ (ಕ್ರಿಪೂ ೮೨೦) ೩೦ ವರ್ಷಗಳ ನಂತರದಲ್ಲಿ ಸನ್ಯಾಸನ ಸ್ವೀಕರಿಸಿ ೭೦ ವರ್ಷಗಳವರೆಗೆ ಶ್ರಮಣ ಧರ್ಮದ ಪ್ರಚಾರಗೈದು ಕೊನೆಗೆ ೧೦೦ನೇ ವರ್ಷದಲ್ಲಿ ಸಮ್ಮೇದ ಶಿಖರಗಳಲ್ಲಿ ೮೪ ದಿನಗಳ ಕಠಿಣ ಸಮಾಧಿಯ ಮೂಲಕ ಮೋಕ್ಷ ಹೊಂದಿದನು. ಇಂದಿಗೂ ಸಮ್ಮೇದ ಶಿಖರ, 'ಪಾರಸಹಿಲ್' ಎಂದು ಪ್ರಸಿದ್ಧವಾಗಿ ಜೈನ ಧರ್ಮಬಾಂಧವರ ಮನುಗಳ ಪವಿತ್ರ ಯಾತ್ರಾ ಸ್ಥಳವಾಗಿದೆ.

ಪಾರ್ಶ್ವನಾಥನು ಕೇವಲ ಜ್ಞಾನಿಯಾದ ನಂತರ ಅಹಿಛತ್ರ, ಶ್ರಾವಸ್ಥಿ, ಸಾಕೇತ, ರಾಜ್ಯಗ್ರಹ ಹಸ್ತಿನಾಪುರ, ಮುಂತಾದ ಕಡೆ ಶ್ರಮಣ ಧರ್ಮವನ್ನು ಬೋಧಿಸುತ್ತ ಸಂಚರಿಸಿದನು. ಇವನ ಪ್ರಭಾವಕ್ಕೊಳಗಾಗಿ ಆ ಕಾಲದ ಅನೇಕ ರಾಜ ಮಹಾರಾಜರು, ಚಕ್ರವರ್ತಿಗಳು ಜೈನ ಧರ್ಮವನ್ನು ಸ್ವೀಕರಿಸಿದರು. ಪಾರ್ಶ್ವನಾಥನ ಚತುರ್ಯಾಮಗಳೇ ಮುಂದೆ ಮಹಾವೀರನ ಪಂಚಮಹಾವ್ರತಗಳ ರೂಪವನ್ನು ಪಡೆದುಕೊಂಡಿವೆ. ಪಾರ್ಶ್ವನಾಥನ ಈ ವಿಚಾರ ಸರಣಿಗೆ ಸಮಾಜದ ಎಲ್ಲ ವರ್ಗದ ಜನರು ಪ್ರತಿಕ್ರಿಯಿಸಿದಂತೆ ಮತ್ತು ಅನುಯಾಯಿಗಳಾದಂತೆ ತಿಳಿದು ಬರುತ್ತದೆ. ಸ್ವತಃ ಮಹಾವೀರನ ತಂದೆ–ತಾಯಿಗಳೇ ಪಾಶ್ವನಾರ್ಥನ ಅನುಯಾಯಿಗಳಾಗಿದ್ದರು. ಮಹಾವೀರನ ಪ್ರಚಾರದ ಕಾಲದಲ್ಲಿ ಪಾರ್ಶ್ವನಾಥನ ಪಂಥದ ಅನೇಕರು ಮಹಾವೀರನನ್ನು ಭೇಟಿಯಾದರು. ಅದರಲ್ಲಿ ಪ್ರಮುಖರು ಮುನಿಚಂದ್ರ ಮತ್ತು

ನಂದಿಸೇನ. ಹೀಗೆ ಪಾರ್ಶ್ವನಾಥನಿಂದಾಗಿ ಆ ಕಾಲಕ್ಕೆ ನಿರ್ಗ್ರಂಥ ಧರ್ಮವು ವ್ಯಾಪಕವಾಗಿ ಪ್ರಚಾರ ಪಡೆದಿದ್ದು ಭಾರತೀಯ ಧಾರ್ಮಿಕ ಕ್ಷೇತ್ರದಲ್ಲಿ ಬಹಳಷ್ಟು ಪ್ರಭಾವಶಾಲಿಯಾಗುತ್ತೆಂದು ತಿಳಿದು ಬರುತ್ತದೆ. 'ಕಲ್ಪಸೂತ್ರ' ಕೊಡುವ ಅಂಕಿ ಅಂಶಗಳ ಪ್ರಕಾರ ಮುನಿಗಳು ೧೬,೦೦೦ ಆರ್ಯಕೆಯರು, ೩೮,೦೦೦ ಶ್ರಾವಕರು, ೧೬,೪೦೦ ಶ್ರಾವಕಿಯರು, ೩೭,೦೦೦ ಪಾರ್ಶ್ವನಾಥನ ಅನುಯಾಯಿಗಳಾಗಿದ್ದರು.

ಮಹಾವೀರನು ತನ್ನ ಕೇವಲ ಜ್ಞಾನಪ್ರಾಪ್ತಿಯ ನಂತರ ೩೦ ವರ್ಷಗಳು ದೇಶದ ತುಂಬೆಲ್ಲಾ ಪರ್ಯಟನ ಮಾಡುತ್ತಾ ಧರ್ಮೋಪದೇಶವನ್ನು ಮಾಡಿದನು. ಈತನು ಮಗಧ, ಮಿಥಿಲಾ,ವೈಶಾಲಿ, ಚಂಪಾ,ಬನಾರಸ, ಕಾಳಿಂಗ, ವಂಗ, ಪಾಂಚಾಲ, ಉತ್ತರ ಮಥುರಾ ಮೊದಲಾದ ಕಡೆಗಳೆಲ್ಲಾ ಸಂಚಾರ ಮಾಡುತ್ತಾ ದಕ್ಷಿಣಕ್ಕೆ ಬಂದನು. ನಂತರ ರಾಜಸ್ತಾನ, ಗುಜರಾತ, ಪಂಜಾಬ, ಮುಂತಾದೆಡೆ ಸಂಚರಿಸಿದನು. ಹೋದಲ್ಲೆಲ್ಲಾ ಮಹಾವೀರನ ವ್ಯಕ್ತಿತ್ವ ಮತ್ತು ಭೋದನೆಗಳಿಗೆ ಪ್ರಭಾವಿತರಾಗಿ ರಾಜಮಹಾರಾಜರುಗಳೂ, ಚಕ್ರವರ್ತಿಗಳೂ, ಈತನ ಅನುಯಾಯಿಗಳಾದರು. ಶ್ರೇಣಿಕ,ಉದಯ, ಚೇಟಕ, ಪಾಟಲಿ ಪುತ್ರದ ಉದಯ, ಕಾಸಿ ಕೋಸಲದ ಹದಿನೆಂಟು ಜನ ಗಣರಾಜರು, ಬ್ರಹ್ಮಕುಂಡದ ವೃಷಭ ದತ್ತ, ದರ್ಶನಭದ್ರ, ದದಿವಾಹನ, ಶಾಖ,, ಕುಣಿಕ, ಸ್ಕಂದಕ, ಕಾಮದೇವ ಮುಂತಾದವರು ಮಹಾವೀರನ ಶಿಷ್ಯರಾದರು.

ಮಹಾವೀರನು ವರ್ಗಭೇದ, ಲಿಂಗಭೇದ, ಜಾತಿಭೇದಗಳನ್ನು ಒಪ್ಪಲಿಲ್ಲವಾಗಿ ಎಲ್ಲ ವರ್ಗ ಜಾತಿಗಳವರಿಗೂ ಮಹಾವೀರನ ಸಂಘ ವ್ಯವಸ್ಥೆಯಲ್ಲಿ ಬಾಗಿಲನ್ನು ತೆರೆಯಲಾಯಿತು. ಹರಿಕೇಶಿಯಂತಹ ಅಸ್ಪೃಶ್ಯನು ಮಹಾವೀರನಿಂದ ದೀಕ್ಷೆ ಹೊಂದಿ ಜೀನ ಮುನಿಯಾದನು. ಮಹಾವೀರನ ನಿರ್ವಾಣ ಕಾಲಕ್ಕೆ ೧೪,೦೦೦ ಮುನಿಗಳು ಗೌತಮ ಇಂದ್ರಭೂತಿಯ ನೇತೃತ್ವದಲ್ಲಿಯೂ ಚಂದ್ರನಾರ್ಯಕೆಯ ನೇತೃತ್ವದಲ್ಲಿ ೩೬,೦೦೦ ಆರ್ಯಕೆಯರೂ, ಶಂಕಶತನಕ, ನೇತೃತ್ವದಲ್ಲಿ ೩,೧೮,೦೦೦ ಜನ ಶ್ರಾವಕಿಯರು ಇದ್ದಂತೆ ತಿಳಿದು ಬರುತ್ತದೆ. ಮಹಾವೀರನು ತನ್ನ ಅನುಯಾಯಿಗಳನ್ನು ಮುನಿ, ಆರ್ಯಕಾ, ಶ್ರಾವಕ, ಶ್ರಾವಿಕ ಎಂದು ನಾಲ್ಕು ಭಾಗಗಳಲ್ಲಿ ವಿಭಜಿಸಿದನು. ಇದಕ್ಕೆ ಚತುರ್ವಿಧ ಸಂಘವೆಂದು ಕರೆಯಲಾಗಿದೆ. ಇದರಲ್ಲಿ ಮೊದಲೆರಡು ವರ್ಗಗಳು ಪರಿವ್ರಾಜಕರಿಗೂ ಉಳಿದೆರಡು ಗ್ರಹಸ್ಥರಿಗೂ ಸಂಬಂಧಿಸಿವೆ. ಅಹಿಂಸೆಯ ಧರ್ಮದ ಮೂಲಾಧಾರವಾಗಿದ್ದು ಅದರ ವಿಸ್ತಾರ ರೂಪದ ಆಚರಣೆಗಳೆಂದು ಅಹಿಂಸಾ. ಅಮೃಷಾ, ಅಚಾರ್ಯ, ಅಮೈಥುನ, ಅಸಂಗ್ರಹ ಎಂದು ಐದು ವ್ರತಗಳನ್ನು ಪಾಲಿಸಲು ಹೇಳಿದನು.

ಕರ್ನಾಟಕಕ್ಕೆ ಜೈನಧರ್ಮ ಪ್ರವೇಶ :

ಕ್ರಿಶ ೪ನೇ ಶತಮಾನದಲ್ಲಿ ಜೈನಧರ್ಮ ಕರ್ನಾಟಕದಲ್ಲಿ ವ್ಯಾಪಿಸಿತು. ಶ್ರವಣಬೆಳಗೊಳದ ಗುಹೆಯಲ್ಲಿ ಜೈನಮುನಿ ಭದ್ರಬಾಹುವು ತಪಸ್ಸನ್ನಾಚರಿಸುತ್ತಿದ್ದ. ಈತನ ಪ್ರಾಭಾವದಿಂದ ಚಂದ್ರಗುಪ್ತ ಮೌರ್ಯನು ರಾಜ್ಯತ್ಯಾಗ ಮಾಡಿ ದಕ್ಷಿಣಕ್ಕೆ ಬಂದು ಕೊನೆಯವರೆಗೂ ಭದ್ರಬಾಹುವಿನ ಜೊತೆಯಲ್ಲಿ ಉಳಿದನೆಂದು ತಿಳಿದುಬರುತ್ತದೆ. ಆದ್ದರಿಂದ ಇಲ್ಲಿನ ಬೆಟ್ಟವು 'ಚಂದ್ರಗಿರಿ' ಬೆಟ್ಟವೆಂದು ಹೆಸರು ಪಡೆಯಿತೆಂದು ಹೇಳಲಾಗುತ್ತದೆ. ಉತ್ತರ ಭಾರತದಲ್ಲಿ ಭಯಂಕರ ಕ್ಷಾಮ ಬೀಳಲು ಜೈನಾಚಾರ್ಯನಾದ ಭದ್ರಬಾಹು ತನ್ನ ೧೨,೦೦೦ ಮುನಿ ಸಂಘದೊಡನೆ ದಕ್ಷಿಣಕ್ಕೆ ಪ್ರಯಾಣ ಬೆಳೆಸಿದರು. ಆ ಸಂದರ್ಭದಲ್ಲಿ ಭದ್ರಬಾಹುಗಳ ಶಿಷ್ಯನಾದ ಚಂದ್ರ ಗುಪ್ತನೂ ಅವರೊಂದಿಗೆ ಹೊರಟು 'ಕಪ್ಪಿಪ್ಪು'ಗೆ (ಶ್ರವಣಬೆಳಗೊಳ) ಕ್ಕೆ ಬಂದಂತೆ ತಿಳಿದು ಬರುತ್ತದೆ. ಶ್ರವಣಬೆಳಗೊಳದ ಪಾರ್ಶ್ವನಾಥ ಬಸದಿಯ ಬಂಡೆಯ ಮೇಲೆ ಕೆತ್ತಲಾಗಿರುವ ಹಾಗೂ ಪ್ರಭಾಚಂದ್ರಗಳು ಮುನಿ ಸಮಾಧಿ ಹೊಂದಿದ್ದನ್ನು ಮತ್ತು ಭದ್ರಬಾಹು ಚಂದ್ರಗುಪ್ತರಿಗೆ ಸಂಬಂಧಿಸಿದ ವಿವರಗಳು ಸಿಗುತ್ತವೆ.

ಇದರಿಂದ ಕ್ರಿ.ಶ ಮೂರನೆಯ ಶತಮಾನದಲ್ಲಿಯೇ ಕರ್ನಾಟಕದಲ್ಲಿ ಜೈನಧರ್ಮ ಅಸ್ತಿತ್ವದಲ್ಲಿತ್ತೆಂದು ತಿಳಿಯಬಹುದು. ಕ್ರಿ.ಶ ಪೂರ್ವ ೫,೬ನೆಯ ಶತಮಾನದಲ್ಲಿ ಮಹಾವೀರನ ಸಮವಸರಣವು ಕರ್ನಾಟಕಕ್ಕೆ ಬಂದಿತ್ತೆಂದು ಆಗ ಹೇಮಾಂಗವನ್ನಾಳುತ್ತಿದ್ದ (ಮೈಸೂರ ಪ್ರಾಂತ) ಸತ್ಯಂಧರ ರಾಜನ ಮಗನಾದ ಜೀವಂಧರ ಮಹಾರಾಜನು ಮಹಾವೀರನ ಅನುಯಾಯಿಯಾಗಿ ತಾನೂ ಜಿನದೀಕ್ಷೆ ವಹಿಸಿ ವೀರಸಂಘದಲ್ಲಿ ಸೇರಿದಂತೆ ಗುಣಭದ್ರಾಚಾರ್ಯರ ಉತ್ತರ ಪುರಾಣದಿಂದಲೂ ಭಾಸ್ಕರ ಕವಿಯಿಂದಲೂ ತಿಳಿದು ಬರುತ್ತದೆ.

ಬೆಳಗಾವಿಯ ಅರಸು ಮನೆತನಗಳು :

ಬೆಳಗಾವಿಯ ಅರಸು ಮನೆತನಗಳಲ್ಲಿ ರಾಷ್ಟ್ರಕೂಟರು, ಗಂಗರು, ಚಾಲುಕ್ಯರು, ಕದಂಬರು, ಸವದತ್ತಿ ರಟ್ಟರು, ಗೋವಾ ಕದಂಬರು, ಹೊಯ್ಸಳರು, ಕೊಲ್ಲಾಪೂರದ ಶಿಲಾಹರರು, ಸೇಂದ್ರಕವಂಶ ಈ ಎಲ್ಲ ಅರಸು ಮನೆತನಗಳು ಇಲ್ಲಿ ಆಳ್ವಿಕೆ ನಡೆಸಿ ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿವೆ.

ಈ ಪ್ರದೇಶದಲ್ಲಿ ಶಾತವಾಹನರು ಆಳ್ವಿಕೆ ನಡೆಸಿದ್ದು ಕಂಡು ಬರುತ್ತದೆ. ಆದರೆ ಯಾವುದೇ ಜೈನ ಧರ್ಮಕ್ಕೆ ಸಂಬಂಧಪಟ್ಟ, ಶಾಸನ, ಬಸದಿ ದೊರೆತಿಲ್ಲ. ಕದಂಬರ ಕಾಲದಲ್ಲಿ ಶಾಸನಗಳು ಬಸದಿಗಳು ಹೇರಳವಾಗಿ ದೊರೆಯುತ್ತವೆ. ವಿರಳವಾಗಿ ಗಂಗರ ಕಾಲದಲ್ಲಿ ಅಲ್ಲಲ್ಲಿ ಬಸದಿಗಳು ಶಾಸನಗಳು ಸಿಗುತ್ತವೆ. ರಾಷ್ಟ್ರಕೂಟರ ಕಾಲದಲ್ಲಿ ಬಸದಿ, ಶಾಸನಗಳು ದೊರೆಯುತ್ತವೆ ನಂತರ ಸವದತ್ತಿ ರಟ್ಟರ ಕಾಲದಲ್ಲಿ ಶಾಸನಗಳು, ಬಸದಿಗಳು ಮುನಿಗಳು ಕವಿಗಳ ಬಗ್ಗೆ ವಿಫುಲವಾಗಿ ದಾಖಲೆ ಸಿಗುತ್ತವೆ. ರಟ್ಟರು ಈ ಪ್ರದೇಶವನ್ನು

೩೦೦ ವರ್ಷಗಳವರೆಗೆ ಆಳಿದ್ದು ಕಂಡು ಬರುತ್ತದೆ. ಈ ಬೆಳಗಾವಿಯು ಜೈನಧರ್ಮದ ಸುವರ್ಣ ಯುಗವೆಂದು ಹೇಳಬಹುದು. ಈ ಜಿಲ್ಲೆಯಲ್ಲಿ ಬರುವ ಎಲ್ಲ ರಾಜಮನೆತನಗಳು ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿ ಆ ಧರ್ಮವನ್ನು ಉತ್ತುಂಗಕ್ಕೇರಿಸಿದ್ದಾರೆ.

ಚಿಕ್ಕೋಡಿ ತಾಲೂಕಿನ ಜೈನ ಬಸದಿಗಳು :

ಚಿಕ್ಕೋಡಿ ಕ್ರಿ.ಶ ೮ನೇ ಶತಮಾನದಿಂಧ ೧೨ನೇ ಶತಮಾನದ ತನಕ ಜೈನಧರ್ಮ ಮತ್ತು ಬಸದಿಗಳು ಉಚ್ರಾಯ ಕಾಲದಲ್ಲಿದ್ದವೆಂದು ತಿಳಿದು ಬರುತ್ತದೆ. ನಾನು ಕ್ಷೇತ್ರ ಕಾರ್ಯಕ್ಕೆ ಹೋದಾಗ ಅಲ್ಲಿಯ ಬಸದಿಗಳು ಪಾಳುಬಿದ್ದುದನ್ನು ನೋಡಿ ಮನಸ್ಸಿಗೆ ಖೇದವೆನಿಸಿತು. ಈ ಭಾಗದಲ್ಲಿ ೧೨ನೇ ಶತಮಾನದ ತನಕ ಬಹಳಷ್ಟು ಜೈನ ಧರ್ಮಿಯರಿದ್ದರು. ಈ ಭಾಗದಲ್ಲಿ ಹೆಚ್ಚಾಗಿ ಪಾರ್ಶ್ವನಾಥನ ಬಸದಿಗಳೇ ಕಂಡು ಬರುತ್ತವೆ ಅವುಗಳ ವಿವರ ಕೆಳಗಿನಂತಿದೆ.

೧) ಇಂಗಳಿ (ದೇಸಾಯಿ)

ಇದು ಚಿಕ್ಕೋಡಿಯಿಂದ ೨೮ ಕಿ.ಮೀ ಅಂತರದಲ್ಲಿದೆ ಇದೊಂದು ಐತಿಹಾಸಿಕ ಗ್ರಾಮ ಇಲ್ಲಿನ ಕಲ್ಲಿನ ಬಸದಿಯಲ್ಲಿ ೨೩ನೇಯ ತೀರ್ಥಂಕರನಾದ ಪಾರ್ಶ್ವನಾಥನ ಕಪ್ಪು ಶಿಲೆಯ ಖಡ್ಗಾಸನ ಮೂರ್ತಿಯಿದೆ ತಲೆಯ ಮೇಲೆ ಏಳು ಹೆಡೆಗಳ ಹಾವಿನ ಕೆತ್ತನೆ ಇದೆ ಗರ್ಭಗ್ರಹದ ಮೇಲೆ ಶಿಖರವಿದೆ. ಶಿಲ್ಪಕಲಾ ದೃಷ್ಟಿಯಿಂದ ಇದು ಸುಮಾರು ೧೧ನೇಶತಮಾನದ್ದಾಗಿದೆ.

೨) ಕಬ್ಬೂರ

ಐತಿಹಾಸಿಕ ಗ್ರಾಮವಾಗಿರುವ ಇದು ಚಿಕ್ಕೋಡಿಯಿಂದ ೧೮ಕಿ.ಮೀ ಅಂತರದಲ್ಲಿದೆ. ಕ್ರಿ.ಶ ೧೯೮೬ ರಲ್ಲಿ ಕಟ್ಟಲಾದ ಬಸದಿಯು ಉತ್ತರಾಭಿಮುಖವಾಗಿದೆ. ಈ ಬಸದಿಯನ್ನು ಖೇಮಲಾಪುರೆ ಕುಟುಂಬದವರು ಕಟ್ಟಿಸಿದ್ದಾರೆ. ಬಸದಿಯಲ್ಲಿ ಶಾಂತಿನಾಥನ ಸಿದ್ಧಾಸನದ ಮೂರ್ತಿಯಿದೆ. ಬಸದಿಯ ಮೇಲೆ ಶಿಖರವಿದೆ. ಇದೇ ಗ್ರಾಮದಲ್ಲಿ ಪೂರ್ವಾಭಿಮುಖವಾಗಿರುವ ಪುರಾತನ ಶೈವದೇವಾಲಯವಿದೆ. ಅದು ಭಾಗಶಃ ಬಿದ್ದು ಹೋಗಿದ್ದು ಅದು ಜೈನ ಬಸದಿಯಾಗಿತ್ತೆಂದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

೩) ಕರೋಶಿ

ಐತಿಹಾಸಿಕ ಗ್ರಾಮವಾದ ಇದು ಚಿಕ್ಕೋಡಿಯಿಂದ ೧೦ ಕಿ.ಮೀ ಅಂತರದಲ್ಲಿದೆ. ಮಣ್ಣಿನಿಂದ ಕಟ್ಟಿದ ಕೋಟೆಯ ಅವಶೇಷವಿದೆ. ಹಾಳುಮಣ್ಣು ಅಗೆಯುತ್ತಿದ್ದಾಗ ಅಪರೂಪದ ಜೈನಪೀಠ ದೊರೆತಿದೆ. ಇದು ೧೨ ಶತಮಾನದ್ದೆಂದು ಡಾ॥ಷಡಕ್ಷರಯ್ಯನವರು ಅಭಿಪ್ರಾಯ

ಪಡುತ್ತಾರೆ. ಅದು ೭೮ ಸೆಂಟಿಮೀಟರ ಉದ್ದ, ೪೮ ಸೆಂಟಿಮೀಟರ ಅಗಲ ಮತ್ತು ೩೦ ಸೆಂಟಿಮೀಟರ ಎತ್ತರವಾಗಿದೆ. ವಿಗ್ರಹ ಕೂಡ್ರಿಸಲು ಮಧ್ಯದಲ್ಲಿ ರಂಧ್ರವಿದೆ ಪೀಠದ ಹಿಂದೆ ಮುಂದೆ ಮೂರು ಸಿಂಹದ ಕೆತ್ತನೆಗಳಿವೆ. ಪಟ್ಟಿಯ ಮೇಲಿನ ನಾಲ್ಕು ಸಾಲಿನ ಶಾಸನದಲ್ಲಿ ೧೬ನೆಯ ತೀರ್ಥಂಕರನಾದ ಶಾಂತಿನಾಥ ಮೂರ್ತಿಯನ್ನು ಮಾಡಿಸಿದ್ದನೆಂದು ಹೇಳಿದೆ. ಜಯಶೆಟ್ಟಿಯರ ಮಗ ಸೇನಭೋವ ಸಿಂಗಯ್ಯನು ಈ ಶಾಸನವನ್ನು ಬರೆದನೆಂದು ಹೇಳಲಾಗಿದೆ. ಸಿಂಹ ಲಾಂಛನವಿರುವ ಈ ಪೀಠವು ಮಹಾವೀರನದ್ದಾಗಿದೆ. ಈ ಭಾಗದಲ್ಲಿ ಯಕ್ಷ–ಯಕ್ಷಿಯರ ಮೂರ್ತಿಯ ಅವಶೇಷಗಳನ್ನು ಪತ್ತೆ ಹಚ್ಚುವಲ್ಲಿ ಡಾ॥ ಷಡಕ್ಷರಯ್ಯನವರು ಬೆಳಕಿಗೆ ತಂದಿರುವದನ್ನು ಇಲ್ಲಿ ಸ್ಮರಿಸಬಹುದು.

೪) ಕಲ್ಲೋಳ

ಚಿಕ್ಕೋಡಿಯಿಂದ ೧೫ಕಿ.ಮೀ ಅಂತರದಲ್ಲಿರುವ ಈ ಗ್ರಾಮವು ಐತಿಹಾಸಿಕವಾಗಿದೆ ಕ್ರಿ.ಶ ೧೯೪೧ ರಲ್ಲಿ ಕಟ್ಟಲ್ಪಟ್ಟ ಜೈನ ಬಸದಿಯಿಂದೆ ಮೂರು ಅಡಿ ಎತ್ತರದ ಖಡ್ಗಾಸನದ ಪಾರ್ಶ್ವನಾಥ ಮೂರ್ತಿಯಿದೆ. ಶಿಲ್ಪ ಶೈಲಿಯಿಂದ ಇದು ೧೨ನೇಯ ಶತಮನಾನದ್ದಾಗಿದೆ.

೫) ಕೇರೂರ

ಚಿಕ್ಕೋಡಿಯಿಂದ ೮ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಕ್ರಿ.ಶ ಸು ೧೧೯೯ ರ ಶಾಸನದಲ್ಲಿ ಕೆರೆಯೂರು ಎಂದು ಹೇಳಲಾಗಿದೆ. ೨೩ನೇಯ ತೀರ್ಥಂಕರನಾದ ಪಾರ್ಶ್ವನಾಥನ ಬಸದಿ ಇದಾಗಿದೆ. ಗರ್ಭಗ್ರಹ ಚೌಕಾಕಾರವಾಗಿದ್ದು, ನವರಂಗವು ನಾಲ್ಕು ಕಂಬಳಗಲ ಮಧ್ಯ ಎತ್ತರವಾದ ಕಂಬಗಳಿಂದ ಕೂಡಿದೆ. ಕಂಬಗಳು ಸುಂದರವಾದ ಕೆತ್ತನೆಯಿಂದ ಕೂಡಿವೆ. ಆಳವಾದ ಸುಂದರವಾದ ಭುವನೇಶ್ವರಿಯ ಮೂರ್ತಿಯಿದೆ. ಕಪ್ಪು ಶಿಲೆಯ ಖಡ್ಗಾಸನದ ಪಾರ್ಶ್ವನಾಥ ಮೂರ್ತಿಯಿದೆ. ತಲೆಯ ಮೇಲೆ ಏಳು ಹೆಡೆಗಳನ್ನು ಕೆತ್ತಲಾಗಿದೆ. ಬಲ ಮತ್ತು ಎಡದಲ್ಲಿ ಯಕ್ಷ,ಯಕ್ಷಿ ಪದ್ಮಾವತಿಯ ಲಲಿತಾಸನ ಮೂರ್ತಿಗಳಿವೆ. ಪಾದಪೀಠದ ಶಾಸನ ತೃಟಿತವಾಗಿದ್ದು ಅದು ಮೂಲಸಂಘದ ಗುಣಭದ್ರರನ್ನು ಪ್ರಸ್ತಾಪಿಸುತ್ತದೆ. ಇದರ ಕಾಲ ಕ್ರಿ.ಶ ೧೫ನೇ ಶತಮಾನ

೬) ಕೋಥಳಿ ಶಾಂತಿಗಿರಿ

ಚಿಕ್ಕೋಡಿಯಿಂದ ೧೨ಕಿ.ಮೀ ಅಂತರದಲ್ಲಿದೆ. ಶ್ರೀಕ್ಷೇತ್ರ ಶಾಂತಿಗಿರಿ ಜೈನರ ಶ್ರದ್ಧಾಕೇಂದ್ರ ೧೯೬೩ ರಲ್ಲಿ ಆಚಾರ್ಯರತ್ನ ಶ್ರೀ ೧೦೮ ದೇಶಭೂಷಣ ಮಹಾರಾಜ ಇವರು ಉತ್ತರ ಭಾರತದ ವಿಹಾರ ಮುಗಿಸಿ ಶ್ರೀ ಕ್ಷೇತ್ರ ಸ್ತವನಿಧಿಗೆ ಆಗಮಿಸಿದ್ದರು. ಆಗ ಕೋಥಳಿ ಕುಪ್ಪಾನವಾಡಿಯ ಶ್ರಾವಕರು ತಮ್ಮೂರಿಗೆ ಬರಬೇಕೆಂದು ವಿನಂತಿಸಿಕೊಂಡರು. ಮಹಾರಾಜರು

ಶ್ರಾವಕರ ಆತ್ಮೀಯತೆ ನೋಡಿ ಆಮಂತ್ರಣ ಸ್ವೀಕರಿಸಿ ಕೋಥಳಿಗೆ ಆಗಮಿಸಿದರು. ಒಂದು ದಿವಸ ೧೦೮ ಆಚಾರ್ಯ ದೇಶಭೂಷಣ ಮಹಾರಾಜರು ಕೋಥಳಿಯ ಶ್ರೀ ಹರಿಜನ ಧುಮಾಳೆ ಇವರ ತೋಟದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಾಗ ಶ್ರಾವಕರು ಬಂದು ಒಂದು ಜಿನ ಮಂದಿರ ಕಟ್ಟಿಸಬೇಕೆಂದು ವಿನಂತಿಸಿದರು. ಆಗ ಆ ಮಂದಿರಕ್ಕಾಗಿ ಕೊಲ್ಲಾಪೂರದ ದಾನಶೂರರಾದ ಶ್ರೀ ಗಣಪತಿರಾವ ಮತ್ತು ವನಕುಂದ್ರೆ ಬಂಧುಗಳ ಧನಸಹಾಯ ಮಾಡಿದರು. ಇವರ ಸಹಾಯದಿಂದ ಭಗವಾನ ಬಾಹುಬಲಿ ಮತ್ತು ಶ್ರೀ ಆದಿನಾಥ ತೀರ್ಥಂಕರ ಜಿನಮಂದಿರ, ಮನೋಜ್ಞ ಮಾನಸ್ತಂಭ ಹಾಗೇ ಗುರುಕುಲ ಸ್ಥಾಪನೆಯಾಯ್ತು. ೧೯೬೮ ರಲ್ಲಿ ಇಲ್ಲಿಯ ಜೈನ ಬಸದಿಯ ಪಂಚಕಲ್ಯಾಣ ಮತ್ತು ಪ್ರಾಣ ಪ್ರತಿಷ್ಠಾ ಮಹೋತ್ಸವ ಅದ್ದೂರಿಯಿಂದ ನೆರವೇರಿತು.

ಈ ಮೂರ್ತಿಯ ಎಡಗಡೆಗೆ ೧೯ ಅಡಿ ಎತ್ತರದ ಶ್ರೀ ೧೦೦೮ ಭಗವಾನ ಮಹಾವೀರ ತೀರ್ಥಂಕರ ಹಾಗೂ ಬಲಗಡೆ ಶ್ರೀ ಭಗವಾನ ೧೦೦೮ ಚಂದ್ರಪ್ರಭು ತೀರ್ಥಂಕರ ಭವ್ಯ ಮೂರ್ತಿಗಳಿಡಿ ಈ ಮೂರ್ತಿಯ ಎದುರುಗಡೆ ೪೧ ಅಡಿ ಎತ್ತರದ ಕೆಂಪು ಕಲ್ಲಿಂದ ಕಟ್ಟಿದ ಮನೋಜ್ಞ ಮಾನಸ್ತಂಭವಿದೆ. ಹಾಗೆ ಈ ಪ್ರಾಂಗಣದ ಉತ್ತರಾಭಿಮುಖವಾಗಿರುವ ೧೭ಅಡಿ ಎತ್ತರದ ಶ್ರೀ ೧೦೦೮ ಭಗವಾನ ಪಾರ್ಶ್ವನಾಥ ತೀರ್ಥಂಕರರ ಶ್ವೇತವರ್ಣೀಯ ಸಂಗಮರವರಿ ಮೂರ್ತಿಯಿದೆ. ಈ ಮೂರ್ತಿಯ ಎಡಗಡೆ ೧೧ ಅಡಿ ಎತ್ತರದ ಶ್ರೀ ೧೦೦೮ ಭಗವಾನ ಆದಿನಥ ತೀರ್ಥಂಕರ ಮೂರ್ತಿಯಿದೆ ಹಾಗೆ ೯ ಅಡಿ ಎತ್ತರದ ಶ್ರೀ ಭರತ ಚಕ್ರವರ್ತಿ ಮತ್ತು ಭಗವಾನ ಬಾಹುಬಲಿಯವರ ಶ್ವೇತ ಸಂಗಮರವರಿ ಕಲ್ಲಿನ ಮೂರ್ತಿಗಳು ಈ ಕ್ಷೇತ್ರದ ಸುಂದರತೆಯನ್ನು ಅದ್ವೀತಿಯವಾಗಿಸಿವೆ.

ಇಲ್ಲಿಯ ಮುಖ್ಯ ಮೂರ್ತಿಯ ಹಿಂದುಗಡೆ ಶ್ರೀ ೨೪ ತೀರ್ಥಂಕರರ ಹಿತ್ತಾಳೆಯ ಮೂರ್ತಿಗಳಿವೆ. ಗೌತಮ ಗಣಧರ ಜೈನ ಆಚಾರ್ಯ ಕುಂದಕುಂದರಿಂದ ಆಚಾರ್ಯ ಜಯಕೀರ್ತಿ ಇವರ ತನಕ ಸುಂದರ ಆಕರ್ಷಕ ಮೂರ್ತಿಗಳಿವೆ. ಶ್ರೀ ಭಗವಾನ ಬಾಹುಬಲಿ, ಶ್ರೀಮಂಧರ ಸ್ವಾಮಿ ಅಜಿತವೀರ್ಯ ಇವರ ಮೂರ್ತಿಗಳಿವೆ.

ಇಲ್ಲಿಯ ಮುಖ್ಯ ಆಕರ್ಷಣೆಯೆಂದರೆ 'ಸಿದ್ಧಾಂತ ದರ್ಶನ' ಇಲ್ಲಿ ಚಂದನದಲ್ಲಿ ತಯಾರಿಸಲಾದ ೫೨ ಜಿನ ಮೂರ್ತಿಗಳ ಸಮೂಹವಿದೆ. ಇದರಲ್ಲಿ ಸ್ಪಟಿಕ, ಶ್ವೇತ ಸ್ಪಟಿಕ, ಹಸಿರು ಸ್ಪಟಿಕ, ನೀಲಸ್ಪಟಿಕ,ನೀಲ ಮಣಿ, ಶುದ್ಧ ನೀಲಮಣಿ, ಮಾಣಿಕ್ಯ ಗರುಡಮಣಿ ಪಂಚಧಾತು, ಬೆಳ್ಳಿಯಿಂದ ತಯಾರಿಸಲಾದ ೪೨ ಮನೋಜ್ಞ ಜಿನಮೂರ್ತಿಗಳಿವೆ. ಹಾಗೆ ಬೆಳ್ಳಿಯಿಂದ ತಯಾರಿಸಿದ ಪಾಂಡುಕ ಶಿಲೆಯ ರಾಜಮಹಲವಿದೆ. ಇದರಲ್ಲಿ ಚಂದನದ ೫

ಗುಡಿಗಳು ನಡುವೆ ಸಾಧು ಪ್ರತಿಮೆ, ಎಡಕ್ಕೆ, ಬಲಕ್ಕೆ ತೀರ್ಥಂಕರ ಮೂರ್ತಿ ಮೇಲ್ಗಡೆ ಪುಷ್ಕರ ಮತ್ತು ಮಾಣಿಕ್ಯದಿಂದ ತಯಾರಾಗಿದ್ದ ಜಿನ ಮೂರ್ತಿಯಿದೆ. ಹಾಗೆ ಎದುರುಗಡೆ ೫ ಅಡಿ ಎತ್ತರದ ಶ್ವೇತ ಸಂಗಮರವರಿ ಕಲ್ಲಿನಿಂದ ಕಟ್ಟಿದ ಮಾನಸ್ತಂಭವಿದೆ.

ಪಾಕಿಸ್ತಾನದ ಜೈನ ಶ್ರಾವಕರು ರಾಷ್ಟ್ರಸಂತ ಆಚಾರ್ಯ ಶ್ರೀ ೧೦೮ ವಿದ್ಯಾನಂದ ಮಹಾರಾಜರಿಗೆ ದೇಣಿಗೆ ಸ್ವರೂಪದಲ್ಲಿ ಕೊಟ್ಟಿದ್ದು ಗರುಡ ಮನಿಯಿಂದ ತಯಾರಿಸಿದ ಶ್ರೀ ೧೦೦೮ ಭಗವಾನ ಮಹಾವೀರ ತೀರ್ಥಂಕರ ಚತುರ್ಮುಖ ಜಿನಮೂರ್ತಿಯಿದೆ. ಈ ಮಂದಿರ ಎಡಕ್ಕೆ ಬಲಕ್ಕೆ ಬೆಳ್ಳಿಯಿಂದ ತಯಾರಿಸಲಾದ ಆನೆ ಮತ್ತು ಸಿಂಹಗಳ ಮುಖವಿದೆ. ಈ ಮಂದಿರದಲ್ಲಿ ಚಂದನ ಕಟ್ಟಿಗೆಯ ರಥವಿದೆ. ಈ ರಥಕ್ಕೆ ಸುವರ್ಣ ಲೇಪನ ಮಾಡಿದ್ದಾರೆ. ಇದರ ಮೇಲೆ ಐರಾವತ ನರ್ತಕಿಯ, ಕೆತ್ತನೆ ಮಾಡಿದ್ದಾರೆ. ಈ ನಿಸರ್ಗರಮ್ಯ ಪರಿಸರದಲ್ಲಿ ಆಚಾರ್ಯರತ್ನ ಶ್ರೀ ದೇಶಭೂಷಣ ಮಹಾರಾಜ ಮತ್ತು ಶ್ರೀಮಂಧರ ಮುನಿ ಇವರ ಸಮಾಧಿ ಸ್ಥಳವಿದೆ.

ಒಟ್ಟಿನಲ್ಲಿ ಕೋಥಳಿ ಗ್ರಾಮದಲ್ಲಿ ಏಳು ಬಸದಿಗಳಿರುವದು ಸ್ಪಷ್ಟವಾಗುತ್ತದೆ.

೭) ಚಿಂಚಣಿ

ಚಿಕ್ಕೋಡಿಯಿಂದ ೫ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ೧೦ನೇ ಶತಮಾನಕ್ಕೆ ಸಂಬಂಧಿಸಿದ ಉತ್ತರಭಿಮುಖವಾಗಿ ಪಾರ್ಶ್ವನಾಥನ ಬಸದಿಯಿದೆ. ಭಾಗಶಃ ಬಿದ್ದು ಹೋಗಿದ್ದುದನ್ನು ಸಾಧಾರಣವಾಗಿ ಜೀರ್ಣೋದ್ಧಾರ ಮಾಡಿದ್ದಾರೆ.

೮) ನಿಪ್ಪಾಣಿ

ಚಿಕ್ಕೋಡಿಯಿಂದ ೨೦ ಕಿ.ಮೀ ಅಂತರದಲ್ಲರುವ ಈ ಪಟ್ಟಣದಲ್ಲಿ ಪ್ರಥಮ ತೀರ್ಥಂಕರ ಆದಿನಾಥನ ಬಸದಿಯು ಸೇತವಾಳ ಪಂಗಡಕ್ಕೆ ಸೇರಿದೆ. ಇದು ರಟ್ಟರ ಮೂಲಸ್ಥಾನವಾದ ಲಾತೂರಿನ ಒಂದು ದೊಡ್ಡ ಪೀಠವಾಗಿತ್ತು. ಇದು ೧೦ನೇ ಶತಮಾನಕ್ಕೆ ಸಂಬಂಧಪಟ್ಟ ಸಿದ್ಧನಾದ ಆದಿನಾಥನ ಮೂರ್ತಿಯಿದೆ.

ಹಾಗೆಯೇ ನಿಪ್ಪಾಣಿಯಲ್ಲಿ ೨೨ನೇ ತೀರ್ಥಂಕರರಾದ ನೇಮಿನಾಥರ ಕಪ್ಪು ಶಿಲೆಯ ಸಿದ್ಧಾಸನವಿದೆ. ಇದನ್ನು ೩೦೦ ವರ್ಷಗಳ ಹಿಂದೆ ಸ್ಥಾಪಸಲಾಗಿದೆ. ಗರ್ಭಗ್ರಹದಲ್ಲಿ ೨೪ ಜನ ತೀರ್ಥಂಕರರ ಮೂರ್ತಿಯನ್ನು ಇಡಲಾಗಿದೆ. ಮಧ್ಯದಲ್ಲಿ ಪಾರ್ಶ್ವನಾಥರದಾಗಿದೆ. ಒಟ್ಟಿನಲ್ಲಿ ನಿಪ್ಪಾಣಿ ಪಟ್ಟಣದಲ್ಲಿ ಮೂರು ಬಸದಿಗಳಿದ್ದುದ್ದು ಕಂಡು ಬರುತ್ತದೆ.

೯) ನೇಜ

ಚಿಕ್ಕೋಡಿಯಿಂದ ೧೮ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ೧೨ನೇಯ ಶತಮಾನಕ್ಕೆ ಸಂಬಂಧಿಸಿದ ಪಾರ್ಶ್ವನಾಥನ ಬಸದಿಯಿದೆ. ಇದನ್ನು ೧೯೩೨ ರಲ್ಲಿ ಜೀರ್ಣೋದ್ಧಾರ ಮಾಡಿದ್ದಾರೆ. ಎದುರಿಗೆ ಸುಮಾರು ೩೧ ಅಡಿ ಎತ್ತರದ ಮಾನಸ್ತಂಭವಿದೆ

೧೦) ಪಟ್ಟಣಕುಡಿ :

ಚಿಕ್ಕೋಡಿಯಿಂದ ೧೫ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ೧೧ನೇಯ ಶತಮಾನಕ್ಕೆ ಸಂಬಂಧಪಟ್ಟ ಪಾರ್ಶ್ವನಾಥನ ಬಸದಿಯಿದೆ. ಕಮಲದ ಕೆತ್ತನೆ ನವರಂಗದ ಮಧ್ಯದ ನಾಲ್ಕು ಕಂಬಗಳ, ಬಸದಿಯಿದೆ. ಕಮಲದ ಕೆತ್ತನೆ ನವರಂಗದ ಮಧ್ಯದ ನಾಲ್ಕು ಕಂಬಗಳು ಕಲ್ಲಿನಲ್ಲಿ ರಚಿತವಾದ ಎತ್ತರದ ಜಗುಲಿ, ಮುಖ ಮಂಟಪದಲ್ಲಿ ದುಂಡಾಗಿ ಕೆತ್ತಿದ ಕಂಬಗಳಿವೆ. ಕುಳಿತುಕೊಳ್ಳಲು ಸುಖಾಸನಗಳನ್ನು ಸುತ್ತಲೂ ಹಾಕಲಾಗಿದೆ. ಪಾದಪೀಠ ಶಾಸನವು ಸಂಪೂರ್ಣ ನಷ್ಟವಾಗಿದೆ.

೧೧) ಬೆಡಕಿಹಾಳ :

ಚಿಕ್ಕೋಡಿಯಿಂದ ೨೨ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯ ಪಾರ್ಶ್ವನಾಥ ತೀರ್ಥಂಕರ ಖಡ್ಗಾಸನದ ಮೂರ್ತಿ ಸುಮಾರು ೩ ಅಡಿ ಎತ್ತರವಿದೆ. ಕ್ರಿಶ ಸುಮಾರು ೯೯ ರ ಮೂರ್ತಿ ಇದಾಗಿದೆ.

೧೨) ಭೋಜ :

ಚಿಕ್ಕೋಡಿಯಿಂದ ೨೪ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಪಾರ್ಶ್ವನಾಥನ ಬಸದಿಯಿದೆ. ಈ ಸ್ಥಳದ ಉಲ್ಲೇಖ ಕದಂಬರ ಶಾಂತಿವರ್ಮನ ಕಾಲದ ತಾಮ್ರ ಶಾಸನದಲ್ಲಿದೆ. ಈ ಬಸದಿಯು ಸುಮಾರು ೧೦ನೇಯ ಶತಮಾನದ್ದಾಗಿದೆ.

೧೩) ಯಕ್ಸಂಬಾ

ಚಿಕ್ಕೋಡಿಯಿಂದ ೧೨ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ೨೨ನೇಯ ತೀರ್ಥಂಕರನಾದ ನೇಮಿನಾಥನ ಬಸದಿಯಿದೆ. ೧೧೫೫ ರ ಶಿಲಾಹಾರರ ಪಡೆವಳನಾದ ಕಾಳಿಯಣ್ಣನು ಕಟ್ಟಿಸಿ ಶ್ರೀಕುಮಾರ ಕೀರ್ತಿ ಪಂಡಿತರ ದೇವರಿಗೆ ಒಪ್ಪಿಸಿದ್ದಾರೆ. ೧೧೬೫ ರ ಕಾಲದ್ದೆನ್ನಲಾದ ಕಳಚೂರಿ ಬಿಜ್ಜಳನ ಒಂದು ಶಾಸನವಿದೆ. ಸಂಪೂರ್ಣವಾಗಿ ಅಕ್ಷರಗಳು ಸವೆದು ಹೋಗಿವೆ.

೧೪) ಶಮನೇವಾಡಿ :

ಚಿಕ್ಕೋಡಿ ತಾಲೂಕಿನ ಐತಿಹಾಸಿಕ ಗ್ರಾಮದಲ್ಲಿ ಕ್ರಿ.ಶ ೧೭೬೩ ರ ಕಾಲದಲ್ಲಿ ಚಂದ್ರಪ್ರಭ ತೀರ್ಥಂಕರರ ಸಿದ್ಧಾಸನದ ಮೂರ್ತಿಯಿದೆ. ಇದು ಜನಸೇನ ಭಟ್ಟಾರಕರ ಉಲ್ಲೇಖ ಮಾಡುತ್ತದೆ ಈ ಬಸದಿಯ ಎದುರಿನಲ್ಲಿ ಸುಮಾರು ೩೨ ಅಡಿ ಎತ್ತರದ ಮಾನಸ್ತಂಭವಿದೆ

೧೫) ಸದಲಗಾ :

ಚಿಕ್ಕೋಡಿಯಿಂದ ೨೪ ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲಿ ಪಾರ್ಶ್ವನಾಥ ತೀರ್ಥಂಕರರ ಕಪ್ಪು ಶಿಲೆಯ ಖಡ್ಗಾಸನದ ಮೂರ್ತಿಯಿದೆ. ಪಾದಪೀಠದ ಶಾಸನ ಕಲ್ಯಾಣ ಚಾಲುಕ್ಯರದಾಗಿದ್ದು ಅದು ಸವೆದಿದೆ ಕೆಳಗಡೆ ಪ್ರಥಮ ತೀರ್ಥಂಕರ ಆದಿನಾಥ ಮೂರ್ತಿಯ ಪಾದ ಪೀಠ ೧೭೯೧ ರ ಕಾಲದ್ದಾಗಿದ್ದು ಅದೂ ಸವೆದು ಹೋಗಿದೆ.

೧೬) ಸ್ತವನಿಧಿ :

ಚಿಕ್ಕೋಡಿಯಿಂದ ೨೪ಕಿ.ಮೀ ಅಂತರದಲ್ಲಿರುವ ಈ ಗ್ರಾಮದಲ್ಲ ಜೈನ ಬಸದಿಗಳ ಸಮೂಹವೇ ಇಲ್ಲಿದೆ. ಬ್ರಹ್ಮದೇವರ ಗುಡಿ, ಶಾಂತಿನಾಥನ ಮೂರ್ತಿ, ಪಾರ್ಶ್ವನಾಥನ, ಮೂರ್ತಿ, ಸಿದ್ಧಾಸನದ ಪದ್ಮವತಿ ಮೂರ್ತಿ, ೧೯೯೩ ರಲ್ಲಿ ಸ್ಥಾಪಿತವಾದ ಪಾರ್ಶ್ವನಾಥನ ಬಸದಿ ಹೀಗೆ ಒಟ್ಟು ೫ ಬಸದಿಗಳಿರುವದು ಸ್ಪಷ್ಟವಾಗುತ್ತದೆ.

ಕ್ರಿ.ಶ ಮೂರನೇಯ ಶತಮಾನದಿಂದ ೧೨ನೇ ಶತಮಾನದತನಕ ಜೈನ ಧರ್ಮವು ಉಚ್ಛ್ರಾಯ ಕಾಲದಲ್ಲಿದ್ದಂತೆ ಕಂಡು ಬರುತ್ತದೆ.

ಜೈನಧರ್ಮದ ಆಚರಣೇಗಳು :

ನೋಂಪಿ : ಜೈನಧರ್ಮದಲ್ಲಿ ಪ್ರಮುಖವಾಗಿ ಎರಡು ನೋಂಪಿಗಳು ಬರುತ್ತವೆ. ಒಂದು 'ಜೀವದಯಾಷ್ಟಮಿ' ಇನ್ನೊಂದು 'ನಂದೀಶ್ವರದಯಾಷ್ಟಮಿ' ಈ ಭಾಗದಲ್ಲಿ 'ನೋಂಪಿ' ಲೋಪವಾಗಿ 'ಲೋಪಿ' ಎನ್ನುತ್ತಾರೆ ಮನುಷ್ಯ ತಿಳಿದೂ ತಿಳಿಯದೆಯೋ ರಾಗದ್ವೇಷಗಳಿಗೆ ವಿಶರಾಗಿ ಹಿಂಸೆ ಮಾಡುತ್ತಾರೆ. ಈ ಹಿಂಸೆಯನ್ನು ಪರಿಹರಿಸಲೋಸುಗ ನೋಂಪಿಯನ್ನು ಆಚರಿಸುತ್ತಾರೆ. ಈ ವೃತದ ನಿಯಮಗಳು ಹೀಗಿವೆ. ನೋಂಪಿ ಆಚರಿಸುವವರು ಕ್ರಿಯಾಪಕ ಶುದ್ಧಿ, ಭೂಮಿ ಶುದ್ಧಿ, ಮೌನವೃತ ಪಾತ್ರೆ ಶುದ್ದಿ, ದ್ರವ್ಯ ಶುದ್ಧಿ ಇವನ್ನೆಲ್ಲಾ ಶುದ್ಧಿ ಮಾಡಿಕೊಳ್ಳಬೇಕು. ಮೌನ ವೃತಾಚಾರಿಯಾಗಿರಬೇಕು. ಇದನ್ನೆಲ್ಲಾ ಬಸದಿಗೆ ಹೋಗಿ ಮಾಡಬೇಕು.

೧. ಜಲ – ಜನ್ಮ ಮರಣದ ದುಃಖ ನೀಗುವಿಕೆ

೨. ಗಂಧ – ಸಂಸಾರ ತಾಪ ನಾಶವಾಗಿ ಜೀವನದಲ್ಲಿ ಸುಗಂಧ ಬರಲಿ

೩. ಅಕ್ಷಯ – ಜನ್ಮ ಮರಣ ಬೇಡ ಅಖಂಡ ಸುಖ ಪ್ರಾಪ್ತವಾಗಲಿ

೪. ಪುಷ್ಪ – ಕಾಮವಾಸನೆ ನಷ್ಟವಾಗಲಿ

೫. ಚರು – ಮನುಷ್ಯನಿಗೆ ಮಿತಿಇಲ್ಲ ಈ ಇಚ್ಛೆ ವಿನಾಶವಾಗಲಿ

೬. ದೀಪ – ಕೇವಲ ಜ್ಞಾನ, ಮೋಹ ನಷ್ಟವಾಗಿ ಹೃದಯದ ಅಂಧಕಾರ ತೊಲಗಿ ಪ್ರಕಾಶಮಯವಾಗಲಿ

೭. ಧೂಪ – ಸಂಸಾರದಲ್ಲಿರುವ ೮ ಕರ್ಮಗಳು ಭಸ್ಮವಾಗಲಿ

೮. ಫಲ – ಮೋಕ್ಷ ಫಲ ದೊರೆಯಲಿ

ಈ ನೋಂಪಿಯ ಮಹಿಮೆಯನ್ನು ವಿವರಿಸಲೋಸುಗವಾಗಿಯೇ ಕನ್ನಡದಲ್ಲಿ ಕೇಲವು ಕಥೆಗಳಿವೆ ಈ ಸಮಯದಲ್ಲಿ ದಾನ ಮಾಡುವುದು.

ನಂದಿಶ್ವರ ನೋಂಪಿ :

ರತ್ನತ್ರಯಗಳ ಆರಾಧನೆಯಿಂದ ಸಿದ್ಧ ಪದವಿಯನ್ನು ಪಡೆದುದರ ಸಂಕೇತವೇ ನಂದೀಶ್ವರದ ಮಹಿಮೆ. ನಂದಿಶ್ವರದ ಪೂರ್ಣ ಪ್ರತಿಮೆ ಹೇಗಿರಬೇಕೆಂದರೆ ಪ್ರತಿ ಮುಖದ ಮೇಲೂ ತೀರ್ಥಂಕರ ೧೦೧೪ ಪ್ರತಿಮೆಗಳಿದ್ದು ತುದಿಯಲ್ಲಿ ಸಿದ್ಧನ ಚಿತ್ರವಿರಬೇಕು. ಇದರ ಜೊತೆಯಲ್ಲಿ ಸಿದ್ಧಚಕ್ರದ ನೋಂಪಿ ಮತ್ತ ಶ್ರುತ ಪಂಚಮಿಯೆಂಬ ಎರಡು ನೋಂಪಿಗಳಿವೆಯೆಂಬುದು ಶಾಸನಗಳಿಂದ ತಿಳಿದು ಬರುತ್ತದೆ.

ಪಂಚ ಕಲ್ಯಾಣಗಳು :

ಚಿಕ್ಕೋಡಿ ತಾಲೂಕಿನಲ್ಲಿ ತೀರ್ಥಂಕರರ ಹೊಸ ಮೂರ್ತಿಪ್ರತಿಷ್ಠಾಪನೆ ಮಾಡಬೇಕಾದ ಆ ಸಂಧರ್ಭದಲ್ಲಿ ಅತ್ಯಂತ ವೈಭವಯುತವಾಗಿ ಈ ಭಾಗದಲ್ಲಿ ಪಂಚಕಲ್ಯಾಣಗಳು ನೆರವೇರುತ್ತವೆ. ತೀರ್ಥಂಕರ ಮೂರ್ತಿಯನ್ನು ಸಂಸ್ಕಾರ ಮಾಡುವ ಸಲುವಾಗಿ ೫ ಬಗೆಯ ಮಹೋತ್ಸವವನ್ನು ನೆರವೇರಿಸುತ್ತಾರೆ. ೧) ಗರ್ಭವತಾರ ಕಲ್ಯಾಣ ೨) ಜನ್ಮ ಕಲ್ಯಾಣ ೩) ತಪಕಲ್ಯಾಣ ೪) ದೀಕ್ಷಾ ಕಲ್ಯಾಣ ೫) ಮೋಕ್ಷ ಕಲ್ಯಾಣ ಮೂರ್ತಿಯನ್ನು ಒಂದು ದೊಡ್ಡದಾದ ಹಂಡೆಯಲ್ಲಿಡುವದು ಹಂಡೆಯಿಂದ ಮೂರ್ತಿಯನ್ನು ಹೊರಗೆ ತಗೆಯುವದು. ಸಮವಸಕರಣದಲ್ಲಿ

ತಪ, ಪಾಂಡುಕ ಶಿಲೆಯಲ್ಲಿಟ್ಟು ಸಂಸ್ಕಾರ, ನಂತರ ಮೂರ್ತಿ ಪ್ರತಿಷ್ಠಾಪನೆ ಇದೆಲ್ಲವನ್ನು ಸಾಂಗವಾಗಿ ಭಟ್ಟಾರಕ ಮುನಿಗಳು ನೆರವೇರಿಸಿಕೊಡತ್ತಾರೆ. ಪಂಚಕಲ್ಯಾಣ ಮಹೋತ್ಸವವನ್ನು ಅನೇಕರು ಒಂದು ಲಕ್ಷದಿಂದ ಒಂದು ಕೋಟಿಯತನಕ ಸವಾಲು ಹಿಡಿಯುವ ಜನರು ಈ ಭಾಗದಲ್ಲಿದ್ದಾರೆ.

ಬ್ರಹ್ಮದೇವರ ಪೂಜೆ (ಭರಮಪ್ಪ)

ಅಷ್ಟಗಂಧ ಲೇಪಿಸಿದ ಕಲ್ಲನ್ನು ಬಸದಿಯೊಳಗೆ ಪೂಜಿಸುತ್ತಾರೆ ಮತ್ತು ಮನೆಯ ಉದ್ಘಾಟನೆಯ ಸಂದರ್ಭದಲ್ಲಿ ಸರಸ್ವತಿಯನ್ನು ಮೂರ್ತಿಯನ್ನಾಗಿ ಪೂಜಿಸುವದಿಲ್ಲ. ಹೊಸ ಗ್ರಂಥವನ್ನು ಹೊಸಬಟ್ಟೆಯಲ್ಲಿ ಕಟ್ಟಿ ಪೂಜೆ ನೆರವೇರಿಸುತ್ತಾರೆ.

ಚಾತುರ್ಮಾಸ್ಯ :

ಮಳೆಗಾಲದ ನಾಲ್ಕು ತಿಂಗಳು ಮಾತ್ರ ಮುನಿಗಳು ಒಂದು ಕಡೆ ವಾಸಿಸಬೇಕು. ಇದಕ್ಕೆ ಚಾತುರ್ಮಾಸ್ಯ ಎನ್ನುತ್ತಾರೆ. ಹಿಂದುಗಳಲ್ಲೂ ಈ ಪದ್ಧತಿಯಿದೆ. ಬೌದ್ಧರು ಇದನ್ನು 'ವಸ್ಸ' ಎಂದು ಕರೆಯುತ್ತಾರೆ. ಅಂದರೆ ವಾಸ. ಆಷಾಡದ ಹುಣ್ಣಿಮೆಯಿಂದ ಹಿಡಿದು ಮಾರ್ಗಶಿರದ ಹತ್ತನೆ ದಿನದ ತನಕ (ಜೂನ್ ಮಧ್ಯಭಾಗದಿಂದ ಅಕ್ಟೋಬರ ಮಧ್ಯದವರೆಗೆ) ಈ ಸಮಯವನ್ನು ಅವರು ಅಭ್ಯಾಸ, ಧ್ಯಾನ, ಉಪವಾಸಾದಿಗಳಲ್ಲಿ ಕಳೆಯುತ್ತಾರೆ. ಮಳೆಗಾಲವನ್ನು ಬಿಟ್ಟು ಉಳಿದ ಕಾಲಗಳಲ್ಲೆಲ್ಲಾ ಸಂಚರಿಸಬೇಕೆಂಬ ನಿಯಮವಿದೆ ಅವರು ಯಾವ ಸ್ಥಳದ ಅನುರಕ್ತತೆಯನ್ನು ಬೆಳೆಸಿಕೊಳ್ಳ ಕೂಡದೆಂಬುದೇ ಇದಕ್ಕೆ ಪ್ರಧಾನ ಕಾರಣ. ಅವರು ಗ್ರಾಮ ನಗರ, ಖೇಡ ಖರ್ವಡ, ಮಡಂಬ ಪತ್ತಣ ದ್ರೋಣಾಮುಖಗಳಾಗಿ ವಿಹರಿಸುತ್ತ ತಪಸ್ಸನ್ನಾಚರಿಸುತ್ತಿದ್ದರೂ. ತೀರ್ಥಂಕರನು ಕೇವಲ ಜ್ಞಾನವನ್ನು ಪಡೆದು ನಂತರ ದೇಶದ ನಾನಾ ಭಾಗಗಳಲ್ಲಿ ಸಂಚಾರ ಮಾಡುತ್ತ ಉಪದೇಶ ಮಾಡಲು ಆರಂಭಿಸಿದಾಗ ನೆರೆಯುತ್ತಿದ್ದ ಸಭೆಗೆ 'ಸಮವಸರಣವೆಂದು' ಹೆಸರು.

ಹೀಗೆ ಜೈನ ಧರ್ಮವು ತನ್ನದೆಯಾದ ತತ್ವಗಳನ್ನು ಭಾರತದ ತುಂಬೆಲ್ಲಾ ಹರಡಿದೆ. ಈ ಧರ್ಮವು ಅತ್ಯಂತ ಪ್ರಾಚೀನ, ಚಿಕ್ಕೋಡಿಯಲ್ಲಿ ೪,೫ ನೇ ಶತಮಾನದಿಂದ ೧೨ನೇ ಶತಮಾನದ ತನಕ ಬಾಳಿ ಬದುಕಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ೧೨ನೇ ಶತನಾನದಲ್ಲಿ ಬಸವಣ್ಣನವರ ಸಾಮಾಜಿಕ ಕ್ರಾಂತಿಯಾದಾಗ ಈ ಧರ್ಮ ಇಳಿಮುಖವಾಯಿತು.

ಅಧ್ಯಾಯ ಆರು

ವಿಭಿನ್ನ ತಾಣಗಳಾಗಿ ಜಾತ್ರೆಗಳು

ಅಧ್ಯಾಯ ಆರು

ವಿಭಿನ್ನ ತಾಣಗಳಾಗಿ ಜಾತ್ರೆಗಳ ಅನಾವರಣ

೬.೧. ಧಾರ್ಮಿಕ ಕೇಂದ್ರಗಳಾಗಿ ಜಾತ್ರೆಗಳು

ಭಾರತದೇಶ ಹಲವಾರು ಧರ್ಮಗಳ ನೆಲೆಬೀಡು. ಭಾರತೀಯ ಪರಂಪರೆಯಲ್ಲಿ ಧರ್ಮದ ಪ್ರಾಧ್ಯಾನ್ಯತೆಯೇ ಹೆಚ್ಚು. ಹಲವಾರು ಮತ, ಧರ್ಮ, ಜಾತಿಗಳ ಕ್ಷೇತ್ರವಾಗಿರುವ ನಮ್ಮದೇಶ ಇತರ ದೇಶಗಳಿಗಿಂತ ಭಿನ್ನವಾಗಿದೆ. ಜನ, ಭಾಷೆ, ಸಂಸ್ಕೃತಿ, ಸಾಹಿತ್ಯ, ಕಲೆ, ವಾಸ್ತುಶಿಲ್ಪ, ನೆಲ,ಜಲ ಹೀಗೆ ಹಲವಾರು ರೀತಿಯಲ್ಲಿ ನಮ್ಮ ದೇಶವು ಭೂಮಂಡಲದಲ್ಲಿ ತನ್ನದೇ ಆದ ಸ್ಥಾನ ಮಾನವನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಹಾಗೆಯೇ ನಮ್ಮಲ್ಲಿ ಅನ್ಯ ಧರ್ಮಗಳ ಪ್ರಭಾವವೂ ಸಾಕಷ್ಟಿದೆ. ನಮ್ಮಲ್ಲಿ ಇಷ್ಟೊಂದು ಧರ್ಮಗಳು ಜನ್ಮ ತಾಳಲು ಕಾರಣವನ್ನು ಶೋಧಿಸಿದರೆ ಭಾರತದ ನೆಲೆ ಹಲವಾರು ವರ್ಷಗಳ ಕಾಲ ಪರಕೀಯರ ಆಳ್ವಿಕೆಯಲ್ಲಿ ಸಿಲುಕಿಕೊಂಡಿರುವುದನ್ನು ಸೂಚಿಸುತ್ತದೆ. ಪ್ರಾಚೀನ ಕಾಲದಿಂದಲೂ ಪಾಶ್ಚಿಮಾತ್ಯರು ನಮ್ಮದೇಶದ ಮೇಲೆ ದಾಳಿ ಮಾಡಿ ಇಲ್ಲಿಯೇ ಅವರು ತಮ್ಮ ನೆಲೆಗಳನ್ನು ಸ್ಥಾಪಿಸಿ ಅಳಿಸಲಾರದಂತಹ ಗುರುತುಗಳನ್ನು ನಮಗೆ ಬಿಟ್ಟು ಹೋಗಿದ್ದಾರೆ.

ಅದೇರೀತಿಯಲ್ಲಿ ಭಾರತೀಯ ನೆಲದಲ್ಲಿ ಜನಿಸಿದಂತಹ ಮಹಾನ ಪುಣ್ಯ ಪುರುಷರು ತಮ್ಮ ತತ್ವ–ಸಿದ್ಧಾಂತಗಳು ಅಚ್ಚಳಿಯದೆ ಜೀವಂತವಾಗಿರಲು ಅವರದೇ ಆದ ಪ್ರತ್ಯೇಕ ಧರ್ಮವನ್ನು ಸೃಷ್ಟಿಸಿ, ಪ್ರಚಾರ ಮಾಡಿ ಜನಸಾಮಾನ್ಯರನ್ನು ತಬ್ಬಿಬ್ಬು ಮಾಡಿರುವುದು ಇದೆ. ಯಾವಧರ್ಮ ಶ್ರೇಷ್ಠ, ಯಾವಧರ್ಮ ಕನಿಷ್ಠ ಎಂಬ ಮಾನಸಿಕ ತಳಮಳದಲ್ಲಿ ಇಂದಿಗೂ ಸಿಲುಕಿಕೊಂಡು ಭಾರತೀಯರು ಅದರಿಂದ ಹೊರಬರಲಾರದೆ ಧರ್ಮ ಸಂಕೋಲೆಯಿಂದ ಮುಕ್ತಿ ಪಡೆಯುವ ಪ್ರಯತ್ನದಲ್ಲಿಯೇ ಇದ್ದಾರೆ. ಬೌದ್ಧ, ಜೈನ, ಹಿಂದೂ, ಕ್ರೈಸ್ತ, ಇಸ್ಲಾಂ, ಸಿಖ್ ಇತ್ಯಾದಿ ಧರ್ಮಗಳು ಭಾರತದಲ್ಲಿ ನೆಲೆಯೂರಿವೆ. ಅವರವರ ಧರ್ಮ ನಂಬಿಕೆಗಳು, ಕಟ್ಟುಪಾಡುಗಳು ಆಯಾ ಧರ್ಮದವರಿಗೆ ಶ್ರೇಷ್ಠ. ಇದೇರೀತಿ ನಮ್ಮಲ್ಲಿ ಆಗಾಗ ಆಂತರಿಕ ಕಲಹಗಳೂ ನಡೆಯುತ್ತಲೇ ಇವೆ. ಭಾರತವನ್ನಾಳಿದ ರಾಜ–ಮಹಾರಾಜರುಗಳು ಒಂದೊಂದು ಕಾಲಘಟ್ಟದಲ್ಲಿ ಒಂದೊಂದು ಧರ್ಮವನ್ನು ಅನುಸರಿಸುತ್ತಿದ್ದರು. ತನ್ನ ಪ್ರಜೆಗಳು ಸಹ ಅದೇ ಧರ್ಮವನ್ನು ಪಾಲಿಸುವಂತಹ ನಿಯಮಗಳನ್ನು ಜಾರಿಗೊಳಿಸುತ್ತಿದ್ದರು. ಇದರ ಪ್ರತಿಫಲವಾಗಿ ಇಂದಿನ ಸಂದರ್ಭದಲ್ಲಿ ಇಂತಹ ಹಲವಾರು ಧಾರ್ಮಿಕ ಗೊಂದಲಗಳು ಹೆಚ್ಚಾಗಿ ಮಾನವ

ಧರ್ಮವನ್ನು ಮರೆಯುತ್ತಿದ್ದಾರೆ ಎನ್ನುವಷ್ಟರ ಮಟ್ಟಿಗೆ ಧರ್ಮ ಎಂಬುದು ಜನಮಾನಸದಲ್ಲಿ ತನ್ನ ರೂಪವನ್ನು ಪ್ರತಿಷ್ಠಾಪಿಸುತ್ತಿದೆ.

ಆದಿಮಾನವ ನಡೆದುಬಂದ ದಾರಿಯನ್ನು ಒಮ್ಮೆ ಅವಲೋಕಿಸಿದಾಗ ಆಚರಣೆಯ ಮೂಲವನ್ನು ತಿಳಿಯಲು ಸಾಧ್ಯವಾಗುತ್ತಿದೆ. ಪ್ರಕೃತಿಯಿಂದ ದುಷ್ಟಶಕ್ತಿಯಿಂದ, ಕ್ರೂರ ಮೃಗಗಳಿಂದ ತಮ್ಮನ್ನುತಾವು ಕಾಪಾಡಿಕೊಳ್ಳಲು ಮಾನವ ತನ್ನದೇ ಆದ ಕಲ್ಪನೆಯ ದೇವರನ್ನು ಸೃಷ್ಠಿ ಮಾಡಿಕೊಂಡ. ದೇವರ ಹೆಸರಿನ ಭಯವೊಂದನ್ನು ಹುಟ್ಟುಹಾಕಿ ಅದರ ಮೂಲಕ ತನ್ನನ್ನು, ತನ್ನ ಕುಟುಂಬವನ್ನು ಹಾಗೂ ತನ್ನ ಸಮಾಜವನ್ನು ಕಾಪಾಡಿಕೊಳ್ಳುವಂತಹ ಪ್ರಯತ್ನ ಮಾಡಿದ. ಈ ಪ್ರಯತ್ನ ಯಾವಾಗ ಫಲಿಸಿತೋ ಆಗ ಆ ಕಾಣದ ದೇವರನ್ನು ತಮ್ಮ ಊರಿನ ದೇವತೆಯನ್ನಾಗಿ ಘೋಷಿಸಿಕೊಂಡು ಆ ದೇವರಿಗೆ ತನಗೆ ಇಷ್ಟವಾದ ಪೂಜೆ–ಪುನಸ್ಕಾರಗಳನ್ನು ನಡೆಸಿಕೊಂಡು ಬಂದ. ಹೀಗೆ ಮುಂದುವರೆಯುತ್ತ ಆ ದೇವರನ್ನು ವಿಜೃಂಭಣೆಯಿಂದ ಪೂಜಿಸುವ ಮೂಲಕ ಹಬ್ಬ–ಹರಿದಿನಗಳನ್ನು, ಜಾತ್ರೆ–ಉತ್ಸವಗಳನ್ನು ರೂಪಿಸಿಕೊಂಡು ಅಲ್ಲಿಂದ ಮುಂದೆತನ್ನ ಆಸೆ ಆಕಾಂಕ್ಷೆಗಳು ಫಲಿಸಿದಾಗಲೆಲ್ಲ ಆ ದೇವರನ್ನುತಲೆಯ ಮೇಲೆ ಹೊತ್ತು ಮೆರವಣಿಗೆ ಮಾಡಿ, ತನ್ನ ಬಂಧು–ಬಳಗವನ್ನೆಲ್ಲ ಸೇರಿಸಿಕೊಂಡು ದೇವರನ್ನು ಕೊಂಡಾಡತೊಡಗಿದ. ಹೀಗೆ ಭಯದಿಂದ ಸೃಷ್ಟಿ ಮಾಡಿಕೊಂಡ ದೇವರನ್ನು ಸಂಪೂರ್ಣವಾಗಿ ತನ್ನದೇ ಚೌಕಟ್ಟಿನಲ್ಲಿ ನೀತಿ–ನಿಯಮಗಳನ್ನು ಮಾಡಿಕೊಂಡು ಪ್ರತಿನಿತ್ಯ ಆ ದೇವರಿಗೆ ನೈವೇದ್ಯ, ಅಭಿಷೇಕ ಪೂಜೆ ಸಲ್ಲಿಸುವ ಮೂಲಕ ದೇವರನ್ನು ಪ್ರತಿಷ್ಠಾಪಿಸಿಕೊಂಡ. ತದನಂತರ ನಡೆದ ಘಟನೆಗಳೆಲ್ಲ ಇತಿಹಾಸದ ಗದ್ಯದಲ್ಲಿ ಸೇರಿಕೊಂಡು ಇಂದು ಆ ದೇವರುಗಳನ್ನು ಮರೆಸಲು ನಡೆಯುತ್ತಿರುವ ಜಾತ್ರೆಗಳು ಜನಪದರ ಜೀವನದಲ್ಲಿ ಅತೀ ಮುಖ್ಯವಾಗಿ ಆಚರಿಸಲ್ಪಡುವ ಆಚರಣೆಗಳಾಗಿವೆ.

ಮುಂಜಾನೆ ಸೂರ್ಯ ಉಗಮದಿಂದ ಸೂರ್ಯಾಸ್ತಮಾನದವರೆಗೂ ಪ್ರಕೃತಿಯಲ್ಲಿ ಕಾಣುವ ಸಕಲ ಜೀವರಾಶಿಗಳಲ್ಲಿ ದೇವರನ್ನು ಕಾಣತೊಡಗಿದ ಮಾನವ ಪ್ರಕೃತಿಯನ್ನು ಪೂಜಿಸಿದ. ಪ್ರಕೃತಿಗೂ ತನ್ನ ಮನದ ಮನೆಯಲ್ಲಿ ಪೂಜ್ಯನೀಯ ಗೌರವದ ಸ್ಥಾನವನ್ನು ಮೀಸಲಿಟ್ಟ. ಈ ಮೀಸಲಿಟ್ಟ ಸ್ಥಾನ ಇಂದಿಗೂ ಜನ ಮಾನಸದಲ್ಲಿ ಸ್ಥಿರವಾಗಿ ನೆಲೆಸಿದೆ. ಸಾಂಪ್ರದಾಯಿಕವಾಗಿ ಕಾಪಾಡಿಕೊಂಡು ಬಂದ ಈ ನಂಬಿಕೆಗೆ ಚ್ಯುತಿ ಬಾರದ ರೀತಿಯಲ್ಲಿ ಜನಪದರು ನಡೆದುಕೊಳ್ಳುತ್ತಿದ್ದಾರೆ. ದೇವರ ಕುರಿತು ಅಪಸ್ವರ ಎತ್ತಿದರೆ ತಮ್ಮ ಜೀವನವೇ ನಶ್ವರ ಎನ್ನುವಷ್ಟರ ಮಟ್ಟಿಗೆ ದೇವರ ಮೇಲೆ ಅವಲಂಬಿತವಾಗಿ ಪ್ರತಿಯೊಂದು ಹೆಜ್ಜೆಯೂ ದೇವರ ಕರುಣೆ, ದೇವರ ಲೀಲೆ, ದೇವರ ಅನುಗ್ರಹ ಎಂಬುದಾಗಿ ಸಿಂಗರಿಸುವುದು, ಕಾಯಿ ಕರ್ಪೂರ ಬೆಳಗುವುದು, ಹಬ್ಬ, ಹುಣ್ಣಿಮೆಗಳಲ್ಲಿ ವಿಶೇಷ ಪೂಜೆ ಮಾಡುವುದು, ದೇಹಿ

ಎಂದು ಬರುವ ಜನರನ್ನು ಕಾಪಾಡುವ ಜವಾಬ್ದಾರಿಯನ್ನು ಹೊರುವುದು ಹೀಗೆ ಮಾನವನ ಬದುಕು ಎಡೆಬಿಡದೆ ಪ್ರತಿನಿತ್ಯವೂ ದೇವರ ಪವಾಡವೆಂಬಂತೆ ಪ್ರತಿಕ್ಷಣವನ್ನು ಅನುಭವದ ಮೂಟೆಗೆ ಸೇರಿಸಿ ಆ ಅನುಭವವನ್ನು ತನ್ನ ಮುಂದಿನ ಪೀಳಿಗೆಯವರಿಗೆ ಮೀಸಲಿಟ್ಟು ಹೋದ. ಇಂತಹ ಜನಪದರ ಬದುಕಿನ ಸಾರಸತ್ವವನ್ನು ಒಂದು ಕಡೆ ಹಿಡಿದಿಡುವುದು ಅಸಾಧ್ಯವಾದ ಮಾತು. ಆದರೂ ಅವರು ಕೊಡುಗೆಯಾಗಿ ನೀಡಿದ ಪ್ರತಿಜೀವನದ ಕ್ಷಣಗಳನ್ನು ಅರಿತು, ಮುಂದುವರೆಸಿಕೊಂಡು ಹೋಗುವುದು ಇಂದಿನ ನಮ್ಮೆಲ್ಲರಕರ್ತವ್ಯವೂ ಹೌದು. ಭಕ್ತಿಮಾರ್ಗದ ಮುಖಾಂತರವಾಗಿ ವಶದಲ್ಲಿ ಮುಳುಗಿ ಜ್ಞಾನವನ್ನು ಪಡೆದು ಜನಸಾಮಾನ್ಯರನ್ನು ನಿರ್ದಿಷ್ಟ ಪಥಡೆಗೆ ಕೊಂಡೊಯ್ಯುವಲ್ಲಿ ಅವರ ಪಾತ್ರ ಮರೆಯಲಾಗದಂತಹದ್ದು.

ಮನುಷ್ಯನ ಬದುಕಿಗೆ ಬೇಕಾದಧರ್ಮದ ಆಚಾರ-ವಿಚಾರಗಳು ಹುಟ್ಟಿಕೊಂಡವು. ಊರಿಂದಊರಿಗೆ ಹೋಗುವ ಬರುವವರಿಗೆಲ್ಲ ತಂಗಲು ದೇವರಗುಡಿಯೇ ಆಶ್ರಯವಾದುದರಿಂದ ಚರ್ಚೆಗೆ, ವಿಚಾರ ವಿನಿಮಯಕ್ಕೆ ಸ್ಥಳವಾದುದರಿಂದ ಧರ್ಮದ ವೃಕ್ಷ ಬೆಳೆಯಲು ಗ್ರಾಮದೇವರು ಇದರತಾಯಿ ಬೇರು ಎಂದು ಹೇಳಬಹುದು. ಹೆತ್ತತಾಯಿ ಎದುರು ಯಾರುಕೂಡ ಯಾವುದೇ ಕೆಟ್ಟ ಕೆಲಸ ಅಥವಾ ಹೀನ ಕಾರ್ಯ ಮಾಡಲಿಕ್ಕೆ, ಹೀನ ಮಾತು ಆಡಲಿಕ್ಕೆ ಮನಸ್ಸು ಬರುವುದಿಲ್ಲ. ಹಾಗೆಯೇ ಊರಿನ ಗ್ರಾಮದೇವರ ಎದುರು ಹೀನ ವಿಷಯಗಳಿಗೆ ತೊಡಗಲಾರದ ಮನಸ್ಸು ಬಂದಾಗ ಧರ್ಮದ ವಿಚಾರಗಳು ಜನ್ಮ ತಳೆಯಲು ಕಾರಣವಾಯಿತು. ಹೀಗೆ ಮನುಷ್ಯ ಗ್ರಾಮದೇವರ ಸನ್ನಿಧಾನದಲ್ಲಿದ್ದಾಗ ಉಂಟಾದ ಭಾವನೆಗಳೇ ಧರ್ಮದರೂಪ ಹೊಂದಲುಕಾರಣವಾಯಿತು (ಮಾಹಿತಿ-ಹೈದ್ರಾಬಾದ ಕರ್ನಾಟಕದ ಗ್ರಾಮಜಾನಪದೀಯ ಅಧ್ಯಯನ ಡಾ.ಚನ್ನಣ್ಣ ವಾಲಿಕರ ಪು.ಸಂ ೨೮)

ಪ್ರಕೃತಿ ಮನುಷ್ಯನಿಗೆ ಭಯ ಹುಟ್ಟಿಸಲು ಕಾರಣವಾಯಿತು. ಈ ಭಯ ನಿವಾರಣೆಗಾಗಿ ಧರ್ಮ ಅತ್ಯಾವಶ್ಯಕ ಎಂಬುದನ್ನು ಅರಿತುಕೊಂಡು ಮನುಷ್ಯ ಪ್ರಕೃತಿ ದೇವತೆಗಳಾದ ಅಗ್ನಿ, ವಾಯು, ಸೂರ್ಯ, ಚಂದ್ರ, ಇಂದ್ರ, ವರುಣ ಇತ್ಯಾದಿ ರೂಪಗಳ ದೇವಾನುದೇವತೆಗಳನ್ನು ತನ್ನದೇ ರೂಪಗಳನ್ನು ಕಲ್ಪಿಸಿಕೊಂಡು ಪೂಜೆ-ಪುನಸ್ಕಾರ, ಆರಾಧನೆ, ದಾನ-ಧರ್ಮ ಮಾಡುತ್ತ ಬಂದ. ಹೀಗೆ ಜನ್ಮ ಪಡೆದ ಧರ್ಮ ಜನಪದರಲ್ಲಿ ಒಂದು ನಂಬಿಕೆಯಾಗಿ, ಸಂಪ್ರದಾಯವಾಗಿ ತಳವೂರಿ ಅವರ ಜೀವನವನ್ನು ಸಂಪೂರ್ಣವಾಗಿ ಆವರಿಸತೊಡಗಿತು. ಇಂತಹ ನಂಬಿಕೆ ಮೆಟ್ಟಿಲಿನ ಮೇಲೆ ಅನೇಕ ಹಬ್ಬ-ಆಚರಣೆಗಳು, ರೂಢಿ-ಸಂಪ್ರದಾಯಗಳು ಸೃಷ್ಠಿಯಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಜನಸಾಮಾನ್ಯರ ಬದುಕಿಗೆ ದಾರಿದೀಪವಾಯಿತು ಎನ್ನಬಹುದು.

ಈ ಹಿನ್ನೆಲೆಯಲ್ಲಿ ಜಾತ್ರೆಗಳು ಸ್ಪಷ್ಟರೂಪ ತಾಳಿ ಜನರು ಅನುಸರಿಸಿಕೊಂಡು ಬರುತ್ತಿದ್ದ ಧರ್ಮ ಅಥವಾ ಧಾರ್ಮಿಕತೆಯ ನೆಲೆಗಟ್ಟಿನ ಮೇಲೆ ಜನಪದರ ಆಚರಣೆಗಳಾಗಿ ಮುಂದುವರೆದವು. ನಮ್ಮ ಧಾರ್ಮಿಕ ಜೀವನವನ್ನು ರೂಪಿಸುವಲ್ಲಿ, ಪಾಲಿಸುವಲ್ಲಿ, ಪೋಷಿಸುವಲ್ಲಿ ಜಾತ್ರೆಗಳು ಮುಖ್ಯ ಪಾತ್ರ ವಹಿಸುತ್ತವೆ. ಜೀವನದಲ್ಲಿ ಏನೇ ಅಡ್ಡಿ ಆತಂಕಗಳಿದ್ದರೂ ಅದರ ಪರಿಹಾರಕ್ಕೆ ತಮ್ಮ ಇಷ್ಟ ದೇವರನ್ನು ನಂಬಿ ಅದಕ್ಕೆ ಶರಣಾಗುವುದರಿಂದ ಮುಕ್ತಿ ಹೊಂದಲು ಸಾಧ್ಯ ಎಂಬ ನಂಬಿಕೆ ನಮ್ಮಜನಪದ ಪರಂಪರೆಯಲ್ಲಿ ಪಾಲಿಸಿಕೊಂಡು ಬಂದ ಪದ್ಧತಿಯಾಗಿದೆ. ಅದಕ್ಕಾಗಿ ಅವರು ಜಾತ್ರೆಯ ಸಂದರ್ಭದಲ್ಲಿ ಮಡಿಯಿಂದ ವ್ರತಗಳನ್ನು ಆಚರಿಸಿ, ಸಾಂಪ್ರದಾಯಿಕವಾಗಿ ತಮ್ ಇಷ್ಟ ದೇವರದರ್ಶನ ಮಾಡುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ವಿಶೇಷವಾಗಿ ಹೂವು, ಹಣ್ಣು, ಕಾಯಿ–ಕರ್ಪೂರ, ನೈವೇದ್ಯ, ಪ್ರಾಣಿಬಲಿಗಳ ಮೂಲಕ ತಮ್ಮ ಹರಕೆಗಳನ್ನು ನೆರವೇರಿಸಿಕೊಳ್ಳುತ್ತಾರೆ. ಗ್ರಾಮೀಣ ಜನರು ಮಳೆ–ಬೆಳೆಯ ಸಮೃದ್ಧಿಗಾಗಿ, ಜನತೆಯ ಕ್ಷೇಮಕ್ಕಾಗಿ, ಸುಖ–ಶಾಂತಿಗಾಗಿ ಇಷ್ಟ ದೇವರ 'ಉತ್ಸವಮೂರ್ತಿ'ಯನ್ನು ತೇರು, ರಥ, ಪಲ್ಲಕ್ಕಿಗಳಲ್ಲಿ ಮೆರವಣಿಗೆಯ ಮೂಲಕ ಉತ್ಸವಗಳನ್ನು ನಡೆಸುತ್ತಾರೆ. ಈ ಜಾತ್ರೆಯ ಸಂದರ್ಭದಲ್ಲಿ ಅನ್ನದಾನ, ವಸ್ತ್ರದಾನ, ಧನ–ಧಾನ್ಯಗಳ ದಾನಗಳ ಮೂಲಕ ತಮ್ಮ ಭಕ್ತಿಯನ್ನು ಮೆರೆಸುತ್ತಾರೆ. ದೇವರು ಮೈಯೊಳಗೆ ಬಂದವರಿಗೆತಮ್ಮ ಸಮಸ್ಯೆಗಳನ್ನು ತೋಡಿಕೊಂಡು ಪರಿಹಾರೋಪಾಯಗಳನ್ನು ಕೇಳಿಕೊಳ್ಳುತ್ತಾರೆ. ಅದರಿಂದತಮ್ಮ ಸುಖಜೀವನ ಮಾಡುತ್ತಾರೆ. ಇಂದಿನ ಆಧುನಿಕಯುಗದ ವೈಜ್ಞಾನಿಕ ದೃಷ್ಟಿಯಿಂದ ಇಂತಹ ಆಚರಣೆಗಳನ್ನು ನೋಡಿದಾಗ ಸಾಮಾನ್ಯವೆಂಬಂತೆ ಅದೊಂದು ಮೂಢನಂಬಿಕೆ ಎಂದುಕರೆದರೂ ಜನಪದರು ಮಾತ್ರ ಪರಂಪರೆಯಿಂದಲೂ ನಂಬಿಕೊಂಡು ಬಂದಂತಹ ಆಚರಣೆಗಳಿಗೆ ಎಂದೆಂದಿಗೂಚ್ಯುತಿ ಬಾರದ ರೀತಿಯಲ್ಲಿ ಮುಖ್ಯ ಸ್ಥಾನವನ್ನು ನೀಡುತ್ತಾ ಬಂದಿದ್ದಾರೆ.

ಸಂತರು, ಶರಣರು, ಜ್ಞಾನಿಗಳು ಹೇಳುವ ಮಾತಿನಂತೆ 'ದೇವನೊಬ್ಬ ನಾಮ ಹಲವು' ಎಂಬ ಮಾತು ವೈಚಾರಿಕತೆಯಿಂದ ಕೂಡಿದೆ. ಆದರೆ ಜನಪದರು ಮಾತ್ರ ಪರಂಪರಾಗತವಾಗಿ ನಂಬಿಕೊಂಡು ಬಂದಿರುವ ತಮ್ಮ ನಂಬಿಕೆಗಳನ್ನು ಬದಲಾಯಿಸಿಕೊಳ್ಳಲು ಸಾಧ್ಯವಾಗಿಲ್ಲ. ಇಂದಿಗೂ ಜನಪದ ಸಮುದಾಯಗಳಲ್ಲಿ ಅವರವರ ದೇವರ ಮೇಲಿನ ನಂಬಿಕೆ, ಆಚರಣೆಗಳು ಹೊಸ ರೂಪಗಳನ್ನು ಪಡೆದು ಇನ್ನಷ್ಟು ಗಟ್ಟಿಯಾಗಿ ಆಚರಿಸಲ್ಪಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. 'ನಂಬಿ ಕೆಟ್ಟವರಿಲ್ಲವೋ ಮನುಜ' ಎಂಬ ಹಿರಿಯರ ಹಿತ ನುಡಿಯಂತೆ ಜನಪದರು ನಂಬಿಕೆಗೆ ಮೊದಲ ಆದ್ಯತೆ ನೀಡಿದ್ದಾರೆ. ನಂಬಿದವರನ್ನು ದೇವರು ಎಂದಿಗೂ ಕೈಬಿಡಲಾರ ಎನ್ನುವಂತಹ ತತ್ವವು ಅವರ ಜೀವನವನ್ನು ಇಲ್ಲಿಯವರೆಗೆ ತಂದಿದೆ ಎಂದರೆ ಆಶ್ಚರ್ಯದ ವಿಷಯವೇ ಸರಿ. ಹಾಗಾಗಿ ಧಾರ್ಮಿಕ

ನಂಬಿಕೆಗಳು ಜನಪದರನ್ನು ಅಗಾಧವಾದ ಹಿಡಿತದಲ್ಲಿಟ್ಟುಕೊಂಡಿವೆ ಎಂದರೆ ಅತಿಶಯವಾಗಲಾರದು.

೬.೨ ಸಾಮಾಜಿಕ ಕೇಂದ್ರಗಳಾಗಿ ಜಾತ್ರೆಗಳು:

ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವ ಜನರ ಗುಂಪನ್ನು ಸಮಾಜ ಎಂದು ಸಾಮಾನ್ಯ ಅರ್ಥದಲ್ಲಿ ಗುರುತಿಸಲಾಗುತ್ತದೆ. ಇಲ್ಲಿನ ಜನರ ಪ್ರತಿಯೊಂದು ಕಾರ್ಯ ಚಟುವಟಿಕೆಗಳು ಸಮಾಜದ ಒಳಗೆ ನಡೆಯುವಂತವುಗಳಾಗಿವೆ. ಮಾನವನು ಹುಟ್ಟಿನಿಂದ ಸಾವಿನವರೆಗೆ ಪ್ರತಿಯೊಂದು ಕೆಲಸವನ್ನು ಸಮಾಜ ಸಮ್ಮತವಾಗಿಯೇ ನಿರ್ವಹಿಸುತ್ತಾನೆ. ಸಮಾಜವೆಂಬುದು ಒಬ್ಬ ವ್ಯಕ್ತಿಯಿಂದ ರಚನೆಯಾಗಿರುವಂತದ್ದಲ್ಲ. ಹಲವಾರು ಜನರು ಸೇರಿ ತಾವೇ ರಚಿಸಿಕೊಂಡಂತ ಅಥವಾ ನಿರ್ಮಿಸಿಕೊಂಡಂತಹ ವಾತಾವರಣವಾಗಿದೆ. ಸಹಜವಾಗಿಯೇ ಜನಪದರಲ್ಲಿ ಆಚರಿಸಲಾಗುವ ಆಚರಣೆಗಳು ಸಮಾಜಕ್ಕೆ ಬದ್ಧವಾಗಿ ನಡೆಯುವುದರಿಂದ ಇಲ್ಲಿ ನಡೆಯುವ ಪ್ರತಿಯೊಂದು ಕಾರ್ಯವು ಮಹತ್ವದ ಸ್ಥಾನವನ್ನು ಪಡೆಯುತ್ತವೆ. ಹಾಗೆಯೇ ಜಾತ್ರೆಗಳು ಪರಂಪರಾಗತವಾಗಿ ಜನಪದರು ಕಟ್ಟಿಕೊಂಡು ಬಂದಂತಹ ಬದುಕಿನ ಸೂತ್ರಗಳನ್ನು ನಿಯಮಕ್ಕನುಸಾರವಾಗಿಯೇ ಮುಂದುವರೆಸಿಕೊಂಡು ಬರುತ್ತಿರುವುದು ಸಂತೋಷದ ಸಂಗತಿಯಾಗಿದೆ. 'ಜನ ಮರುಳೋ ಜಾತ್ರೆ ಮರಳೋ' ಎಂಬ ನಾಣ್ಣುಡಿಯಂತೆ ಸಕಲ ಧರ್ಮ, ಪಂಥ, ವರ್ಗದವರು ಸೇರಿ ಆಚರಿಸುವ ಜಾತ್ರೆಗಳು ಸಾಮಾಜಿಕ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತವೆ.

ಗ್ರಾಮ ದೇವತೆ ಅಥವಾ ಜನಪದರೆಲ್ಲ ಒಪ್ಪಿದ ದೈವದ ಸಾಕ್ಷಾತ್ಕಾರಕ್ಕಾಗಿ, ದೈವ ಕೃಪೆಯನ್ನು ಪಡೆಯಲು ದೇವರನ್ನು ತಲೆಯ ಮೇಲೆ ಹೊತ್ತು ಮೆರೆಸುತ್ತಾರೆ. ಇದು ನೋಡುಗರಿಗೆ ಹಾಗೂ ಇಂದಿನ ವೈಜ್ಞಾನಿಕ ಮನೋಭಾವದವರಿಗೆ ಮೂಢನಂಬಿಕೆ ಎಂದು ಕಂಡುಬರುತ್ತದೆ. ಆದರೆ ಈ ಮನೋಭಾವದವರು ಕೂಡ ತಮಗೆ ತಿಳಿಯದಂತೆ ಅಂತರಾಳದಲ್ಲಿ ಒಮ್ಮೆಯಾದರೂ ಆ ದೇವರ ಬಗ್ಗೆ ನಂಬಿಕೆಯನ್ನು ಇಡುತ್ತಾರೆ. ಆ ನಂಬಿಕೆಯು ಒಮ್ಮೆ ಫಲಪ್ರದವಾದರೆ ಅದು ಎಂದಿಗೂ ಅಳಿಸಲಾಗದಂತಹ ಆಚರಣೆಯಾಗಿ ಅವರ ಜೀವನದಲ್ಲಿ ಬೆರೆತು ಹೋಗುತ್ತದೆ. ಒಂದು ಊರಿನಲ್ಲಿ ಜಾತ್ರೆ ನಡೆಯುತ್ತದೆ ಎಂದರೆ ಆ ಊರಿನ ಜನರ ಸಂಭ್ರಮ, ಸಡಗರವನ್ನು ಬಣ್ಣಿಸಲಾಗದು. ಚಿಕ್ಕಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ತಮ್ಮದೇ ಆದ ಸಂಭ್ರಮದಲ್ಲಿ ತೊಡಗಿರುತ್ತಾರೆ.

ಗ್ರಾಮದ ಜಾತ್ರೆಗಾಗಿ ಪರ ಊರಿನಿಂದ ಬಂದಿರುವ ಬಂಧು-ಬಳಗದವರೊಂದಿಗೆ ಸೇರಿಕೊಂಡು ಸಂತೋಷವನ್ನು ಹಂಚಿಕೊಳ್ಳುವ ಕ್ಷಣವೆಂದರೆ ಅದು ಜಾತ್ರೆಯ ಸಮಯದಲ್ಲಿ

ಮಾತ್ರ. ತಮ್ಮ ಸ್ವಂತ ಗ್ರಾಮವನ್ನು ತೊರೆದು ಉದ್ಯೋಗದ ನಿಮಿತ್ತ ಬಹುದೂರದ ಗ್ರಾಮ-ನಗರಗಳಲ್ಲಿ ವಾಸವಾಗಿರುವವರೂ ಕೂಡ ಜಾತ್ರೆಯ ದಿನದಂದು ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಜಾತ್ರೆಯ ಸಂಭ್ರಮದಲ್ಲಿ ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಊರಲ್ಲಿ ನಡೆಯುವ ಜಾತ್ರೆಗೆ ಎಲ್ಲಾ ಧರ್ಮದವರೂ ಪಾಲ್ಗೊಂಡು ಆ ಜಾತ್ರೆಯ ಯಶಸ್ವಿಗೆ ಕಾರಣರಾಗುತ್ತಾರೆ. ಜಾತ್ರೆ ಆರಂಭವಾದ ದಿನದಿಂದ ಊರಿನ ಎಲ್ಲಾ ಜನರು ತಮ್ಮ ಪ್ರಾಮಾಣಿಕ ಸೇವೆಯನ್ನು ಸಲ್ಲಿಸುವುದರ ಮೂಲಕ ತಮ್ಮದೇ ಆದ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಾರೆ. ಜಾತ್ರೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳಲ್ಲಿ ಭಾಗವಹಿಸುವ ಮುಖಾಂತರ ಆ ಜಾತ್ರೆಯ ಯಶಸ್ವಿಗೆ ಕಾರಣಕರ್ತರಾಗುತ್ತಾರೆ.

ಗ್ರಾಮಕ್ಕೆ ಯಾವುದಾದರು ಖಾಯಿಲೆ ಆಕ್ರಮಿಸಿದಾಗ ಅಂದರೆ ಕಾಲರಾ, ಸಿಡುಬು, ಅಮ್ಮ ಮುಂತಾದ ಸೋಂಕು ರೋಗಗಳು ಬಂದಾಗ ಜನರೆಲ್ಲ ಸೇರಿ ಸಾಮೂಹಿಕವಾಗಿ ಆ ಗ್ರಾಮದ ದೇವರಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ಮಳೆಗಾಗಿ, ಫಲವತ್ತಾದ ಬೆಳೆಗಾಗಿ, ಬರಗಾಲ ಬಂದಾಗ ದೇವರಿಗೆ ಹರಕೆ ಹೊರುವುದರ ಮೂಲಕ ಆ ದೇವರನ್ನು ಜಾತ್ರೆ, ಉತ್ಸವಗಳಲ್ಲಿ ಅದ್ದೂರಿಯಾಗಿ ಹರಕೆಗಳನ್ನು ತೀರಿಸುವುದು, ದೇವರನ್ನು ಅತ್ಯಂತ ವಿಜೃಂಭಣೆಯಿಂದಲೇ ಅಲಂಕರಿಸಿ ಜನರೆಲ್ಲ ಸೇರಿಕೊಂಡು ಆ ಹಬ್ಬವನ್ನು ಸಂತೋಷ, ಸಡಗರಗಳಿಂದ ಎಲ್ಲರೂ ಸೇರಿ ಆಚರಿಸುತ್ತಾರೆ. ಇದು ಅವರಲ್ಲಿರುವ ಸಮಾಜದ ಬಗೆಗಿನ ಕಾಳಜಿಯ ಗುಣವನ್ನು ಸಂಕೇತಿಸುತ್ತದೆ. ತಾವು ನಂಬಿದ ದೇವರಿಗೆ ಬಹಳ ಶ್ರದ್ಧೆ-ಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ಇವರ ಬೇಡಿಕೆಗಳನ್ನು ದೇವರು ಈಡೇರಿಸಿದಾಗ ಆ ದೇವರನ್ನು ನೆನಪಿಸಿಕೊಳ್ಳುವುದಕ್ಕೆ ಅಥವಾ ದೇವರ ಮೇಲಿನ ಭಕ್ತಿಯನ್ನು ತೋರಿಸಲು ಜಾತ್ರೆಗಳ ಮೂಲಕ ತಮ್ಮ ಶ್ರದ್ಧೆ-ಭಕ್ತಿಯನ್ನು ಪೂರೈಸುತ್ತಾರೆ. ಇದು ಜನಪದ ಪರಂಪರೆಯಲ್ಲಿ ಕಾಣುವಂತಹ ಅತೀ ದೊಡ್ಡ ಗುಣವಾಗಿದೆ. ಉಪಕಾರ ಭಾವನೆ ಜನಪದರಲ್ಲಿ ಅವರ ಜೀವನಾಡಿಯಂತೆ ಕಾಣುವ ಮಹತ್ವದ ಗುಣವಾಗಿದೆ. ಹೀಗಾಗಿ ಜಾತ್ರೆಗಳು ಸಮಾಜದ ಉನ್ನತಿಗಾಗಿ, ಸಮಾಜವನ್ನು ಸರಿಯದ ಮಾರ್ಗದಲ್ಲಿ ಕೊಂಡೊಯ್ಯುವ ಕೇಂದ್ರಬಿಂದುಗಳಾಗಿ ಕಾರ್ಯ ನಿರ್ವಹಿಸುತ್ತವೆ.

ಜಾತ್ರೆ ಎಂಬುದು ಯಾವುದೇ ಒಂದು ದೇವರ ವಾರ್ಷಿಕ ಹಬ್ಬವಾಗದೆ ಅಲ್ಲಿನ ವರ್ಷದ ಇಡೀ ಸಮಯದ ಒಂದು ಗಡಿ ಇದ್ದಂತೆ. ವರ್ಷಪೂರ್ತಿಯಾಗಿ ದೇವಾಲಯದಲ್ಲಿಯೇ ಕುಳಿತು ದರ್ಶನ, ಪೂಜೆಯನ್ನು ಸ್ವೀಕರಿಸಿದ ದೇವರು ವರ್ಷದಲ್ಲಿ ಒಂದು ದಿನ ಸಮಾಜದ ಮಧ್ಯೆ ಬಂದು ನೆರೆದಿರುವ ಎಲ್ಲಾ ಭಕ್ತವೃಂದಕ್ಕೆ ತನ್ನ ನಿಜ ದರ್ಶನವನ್ನು ನೀಡುವುದೇ ಆಗಿದೆ. ಯಾಕೆಂದರೆ ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಜಾತಿ ಎಂಬ ಪೆಡಂಭೂತದ

ಪರಿಣಾಮದಿಂದ ಅದೆಷ್ಟೋ ಜನರಿಗೆ ದೇವರ ಮುಖವನ್ನು ನೋಡುವ ಅವಕಾಶ ಸಿಕ್ಕಿರುವುದಿಲ್ಲ. ಅಂತಹವರಿಗೆ ಹಾಗೂ ದೂರದ ಊರಿನಿಂದ ಬಂದಂತಹ ಜನರಿಗೆ ದರ್ಶನ ಭಾಗ್ಯ ಕಲ್ಪಿಸುವುದರ ಮುಖಾಂತರ ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿಯೂ ಸಾಕಾರ ಮೂರ್ತಿಯಾಗಿ ಇಷ್ಟ ದೇವರಾಗುತ್ತಾನೆ.

ಜಾತ್ರೆ ಎಂದರೆ ಸುಮ್ಮನೆ ಆಗುವಂತಹ ಕೆಲಸವಲ್ಲ, ಅಲ್ಲಿ ಆಗುವ ಕೆಲಸಗಳು ಸಾಕಷ್ಟಿರುತ್ತದೆ. ಅದಕ್ಕೆ ಸಮಾಜದ ಜನರೆಲ್ಲರೂ ಸೇರಿಕೊಂಡು ದೇವರ ಕೆಲಸವನ್ನು ಹಂಚಿಕೊಂಡು ಎಲ್ಲ ಕಾರ್ಯವನ್ನು ಸುಸೂತ್ರವಾಗಿ ಮಾಡಿಕೊಂಡು ಹೋಗಬೇಕು. ಹೇಗೆಂದರೆ ಊರಿನ ರೈತ, ಬಡಗಿ, ಕಮ್ಮಾರ, ಮಡಿವಾಳ, ತಳವಾರ, ಗಾಣಿಗೆ ಹೀಗೆ ಪ್ರತಿಯೊಂದು ಜಾತಿಯವರು ತಮ್ಮ ವೃತ್ತಿಗೆ ಅನುಸಾರವಾಗಿ ದೇವರ ಜಾತ್ರಾ ಉತ್ಸವಕ್ಕೆ ಬೇಕಾದಂತಹ ಅಗತ್ಯ ಸಾಮಗ್ರಿ ಹಾಗೂ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಇದು ದೇವರ ಮೇಲೆ ಅವರಿಗಿರುವ ನಂಬಿಕೆ ಹಾಗೂ ಶ್ರದ್ಧೆಯನ್ನು ತಿಳಿಸುತ್ತದೆ. ತಮ್ಮೂರಿನ ದೇವರ ಕಾರ್ಯಕ್ಕೆ ಯಾವುದೇ ಕಾರಣಕ್ಕೂ ಇಲ್ಲವೆನ್ನದೆ ತನ್ನ ಶಕ್ತಿಯನುಸಾರ ಕಾರ್ಯಗಳನ್ನು ಮಾಡಲೇಬೇಕು. ಇಲ್ಲವಾದರೆ ದೇವರ ಕೋಪಕ್ಕೆ ಗುರಿಯಾಗಬೇಕಾಗುತ್ತದೆ. ಜೊತೆಗೆ ಊರಿನವರ ಶಾಪಕ್ಕೂ ಗುರಿಯಾಗಿ ಇಲ್ಲಸಲ್ಲದ ಆರೋಪಗಳನ್ನು ಹೊರಬೇಕಾಗುತ್ತದೆ ಎಂಬ ಭಯದಿಂದಲೇ ಜನರು ದೇವರ ಕೆಲಸದಲ್ಲಿ ನಿಸ್ವಾರ್ಥಭಾವದಿಂದ ತಮಗೆ ಒಪ್ಪಿಸಿದ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಾರೆ. ಅವರು ನಂಬಿದ ದೇವತಾಕಾರ್ಯ ಯಾವುದೇ ವಿಘ್ನವಿಲ್ಲದೆ ಸರಾಗವಾಗಿ ನಡೆಯಬೇಕಾದರೆ ಪರಸ್ಪರವಾಗಿ ಊರಿನ ಎಲ್ಲ ವರ್ಗದ ಜನರ ಸಹಕಾರ, ಸಹಾಯ, ಒಮ್ಮತ ಮನಸ್ಸು ಬೇಕು. ಆಗ ಆ ಕೆಲಸವು ಯಾವುದೇ ಅಡ್ಡಿ–ಆತಂಕಗಳಿಲ್ಲದೆ ಜಾತ್ರೆಗಳು ನಡೆಯುತ್ತವೆ.

ಜಾತ್ರೆಯ ಕುರಿತಾದ ಅಧ್ಯಯನ ಜನಪದ ಜೀವನದಲ್ಲಿ ಅನೇಕ ಹೊಂದಾಣಿಕೆ, ಹಕ್ಕುಬಾಧ್ಯತೆಗಳ ಹಾಗೂ ಕರ್ತವ್ಯದ ಜವಾಬ್ದಾರಿಯುತವಾದ ವಿವರಣೆಯನ್ನು ನೀಡುತ್ತದೆ. ಜಾತ್ರೆಗಳು ನಮ್ಮ ಎಲ್ಲಾ ಸಾಮಾಜಿಕ ಪರಂಪರೆಯನ್ನು ಪ್ರತಿನಿಧಿಸುವ ಬಹುತೇಕ ಅಂಶಗಳನ್ನು ಮೈಗೂಡಿಸಿಕೊಂಡಂತಹವುಗಳು. ಜಾತ್ರೆಯ ರೂಪದಲ್ಲಿ ನಡೆಯುವ ಸಂಕೀರ್ಣ ಸ್ವರೂಪದ ಎಲ್ಲಾ ಚಟುವಟಿಕೆಗಳು ಕ್ರಿಯಾವಿಧಿಗಳು ಸಾಮಾಜಿಕವಾಗಿಯೇ ನಡೆಯುವಂತವು. ನಿರ್ದಿಷ್ಟಪಡಿಸಿದ ಪ್ರದೇಶದಲ್ಲಿ, ಗೊತ್ತುಪಡಿಸಿದ ದಿನದಂದು ಸಮಸ್ತರೂ ಸೇರಿ ದೇವರನ್ನು ಭಜಿಸುವ, ಪೂಜಿಸುವ, ಆರಾಧಿಸುವ ವ್ಯವಸ್ಥೆಯನ್ನು ಜಾತ್ರೆ ಎಂದು ಕರೆಯಬಹುದೆಂಬ ರೂಢಿ ಇದೆ. ಇದನ್ನು ಹಿನ್ನೆಲೆಯಾಗಿಟ್ಟುಕೊಂಡು ನಿಗದಿಪಡಿಸಿದ ಜಾತ್ರಾ ಸ್ಥಳಕ್ಕೆ ದೂರದ ಊರುಗಳಿಂದ ಬರುವಂತಹ ಬಂಧು–ಬಾಂಧವರನ್ನು ಕಲೆಹಾಕುವ ಸಾಮಾಜಿಕ ಬಾಂಧವ್ಯವನ್ನು ಭದ್ರಗೊಳಿಸುವ

ಕೊಂಡಿಯಾಗಿ ಕಾರ್ಯವನ್ನು ಹಂಚಿಕೊಳ್ಳುವ ಈ ಸಂದರ್ಭ ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಡುತ್ತದೆ. ನಮ್ಮಲ್ಲಿ ನಡೆಯುವ ಅನೇಕ ಜಾತ್ರೆ ಆಚರಣೆಗಳು ಮೇಲ್ನೋಟಕ್ಕೆ ಸ್ವರೂಪದಲ್ಲಿ ಒಂದೇ ರೀತಿಯಾಗಿ ಕಂಡರೂ ಅಲ್ಲಿ ಶಿಷ್ಟ ಸಂಸ್ಕೃತಿ ಮತ್ತು ಜನಪದ ಸಂಸ್ಕೃತಿಗಳ ಮಿಲನವಿರುತ್ತದೆ. ಜೊತೆಗೆ ದೇವತೆಗಳ ಜಾತ್ರೆಗಳಲ್ಲಿ ಸಾಕಷ್ಟು ವ್ಯತ್ಯಾಸಗಳು ಹಾಗೂ ವೈಶಿಷ್ಟ್ಯಗಳನ್ನು ಗುರುತಿಸಬಹುದು. ಪುರಾಣಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಶಿಷ್ಟ ಸಂಪ್ರದಾಯದ ದೇವರುಗಳ ಜಾತ್ರೆಗಳೂ ನಡೆಯುತ್ತವೆ. ಅದರಂತೆ ನಾಗರಿಕತೆಯಿಂದ ದೂರವಿರುವ ಜನಪದ ಸಂಸ್ಕೃತಿಯನ್ನು ತೋರಿಸುವ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಜಾತ್ರೆಗಳು ತಮ್ಮದೇ ಆದ ಕಟ್ಟುಪಾಡುಗಳನ್ನು ಕಲ್ಪಿಸಿಕೊಂಡು, ಹಿರಿಯರು ಹಾಕಿಕೊಂಡು ಬಂದಂತಹ ಯಾವುದೇ ಸಂಪ್ರದಾಯ ನಿಯಮಗಳನ್ನು ಬದಲಾಯಿಸದೆ ಯಥಾವತ್ತಾದ ಆಚರಣೆ, ಸಂಪ್ರದಾಯಗಳಿರುತ್ತವೆ. ಈ ಎರಡು ಸಂಸ್ಕೃತಿಗಳು ಆಚರಿಸಲ್ಪಡುವ ಜಾತ್ರೆಗಳಲ್ಲಿ ಅವರಲ್ಲಿರುವ ಪರಸ್ಪರ ಭಾವನಾತ್ಮಕ ಸಂಬಂಧಗಳು ಇಂತಹ ಸಂದರ್ಭದಲ್ಲಿ ಅವರನ್ನೇ ಸಾಮಾಜಿಕವಾಗಿ ಒಟ್ಟುಗೂಡಿಸುತ್ತದೆ.

ಜಾತ್ರೆ ಎಂಬುದು ಸ್ಥಿರವಾದ ಆಚರಣೆಗಳ ಒಂದು ಸಾಮಾನ್ಯ ಕ್ರಿಯಾ ಚಟುವಟಿಕೆಯಾಗಿರದೆ, ಅದು ಸಾಮಾಜಿಕ ಬದುಕಿನ ಪ್ರತಿಬಿಂಬವಾಗಿರುತ್ತದೆ. ಧಾರ್ಮಿಕ, ಆರ್ಥಿಕ, ಸಾಮಾಜಿಕ ಬದಲಾವಣೆಗಳಿಂದ ಉಂಟಾಗುವ ಜಾತ್ರೆಗಳು ತಮ್ಮ ಸ್ವರೂಪಗಳಲ್ಲೂ ಬದಲಾವಣೆಗೆ ಹಾಗೂ ಹೊಂದಾಣಿಕೆಗಳನ್ನು ಹೊಂದಿರುತ್ತವೆ. ಈ ಸಂದರ್ಭದಲ್ಲಿ ನಾವೆಲ್ಲ ಜಾತ್ರೆಗಳ ಸ್ವರೂಪವನ್ನು ಸಾಮಾಜಿಕ ಚಲನಶೀಲತೆಯ ದೃಷ್ಟಿಯಿಂದ ಅವಲೋಕಿಸಲಾಗುತ್ತದೆ ಹಾಗೂ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ದೇವಸ್ಥಾನಗಳೆಂದರೆ ಅಲ್ಲಿ ಒಂದು ಸಾಮುದಾಯಿಕ ಭಾವನೆಗಳಿರುತ್ತವೆ. ಈ ಭಾವನೆಗಳು ಜನರ ಬದುಕಿನ ಅವಿಭಾಜ್ಯ ಅಂಗಗಳೂ ಆಗಿವೆ.

ನಮ್ಮ ದೇಶ ಮೂಲತಃ ಹಳ್ಳಿಗಳಿಂದ ಕೂಡಿರುವ ಪ್ರದೇಶವಾಗಿರುವುದರಿಂದ ಇಲ್ಲಿನ ಸಾಮಾಜಿಕ ಬದುಕು ಸಮಾಜದ ಕೇಂದ್ರಬಿಂದು ಎಂದೇ ಹೇಳಬಹುದು. ಇದರಿಂದ ಆರಾಧನೆಯ ವಿಧಾನಗಳಾದ ಪ್ರಾರ್ಥನೆ, ಪೂಜೆ, ನೈವೇದ್ಯ, ಬಲಿ, ಮೆರವಣಿಗೆ ಮುಂತಾದ ಚಟುವಟಿಕೆಗಳು ರೂಪುಗೊಳ್ಳುತ್ತವೆ. ಅದರಂತೆ ಒಂದೇ ಜನಾಂಗ ಅಥವಾ ಸಮುದಾಯಗಳು ಆಚರಿಸುವ ಜಾತ್ರೆಗಳು ಊರಿನ ಎಲ್ಲಾ ವರ್ಗದವರು ಸೇರಿ ಆಚರಿಸುವಂತಹ ಜಾತ್ರೆಗಿಂತ ಭಿನ್ನವಾಗಿರುತ್ತವೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ನಗರ ಪ್ರದೇಶದ ಜಾತಿಯಾಧಾರಿತ ಮಠಗಳಲ್ಲಿ ನಡೆಸುವಂತಹ ಶ್ರೀಸ್ವಾಮಿಗಳ ಮೆರವಣಿಗೆ, ಪಲ್ಲಕ್ಕಿ ಉತ್ಸವಗಳು ಕೆಲವೊಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಅಲ್ಲಿ ಸಾಮಾನ್ಯವಾಗಿ ಎಲ್ಲಾ ವರ್ಗದ ಜನರು ಬಂದು ಸೇರಿ ಆಚರಿಸುವ ಜಾತ್ರೆಯಾಗಿರುವುದಿಲ್ಲ. ಈ ರೀತಿಯ ಸಂಕೀರ್ಣದಿಂದ ಕೂಡಿದ

ಜಾತ್ರೆಗಳಲ್ಲಿ ದೇವಾಲಯದ ಕಾರ್ಯ, ಶ್ರಮ ವಿಭಜನೆಯು ಜಾತಿ ಭೇದದ ಆಧಾರದ ಮೇಲೆ ನಡೆಯುತ್ತಿರುತ್ತವೆ. ಯಾಕೆಂದರೆ ಇಲ್ಲಿ ದೇವಸ್ಥಾನದ ಪ್ರತಿ ಕೆಲಸ ಕಾರ್ಯಗಳು ಮಡಿ–ಮೈಲಿಗೆ, ಯಂತ್ರ–ಮಂತ್ರ, ಹಗಲು–ರಾತ್ರಿ, ಮೇಲು–ಕೀಳು, ಒಳಗೆ–ಹೊರಗೆ ಇತ್ಯಾದಿ ಅಂಶಗಳಿಂದ ವಿಭಜನೆಗೊಂಡಿರುತ್ತವೆ. ಹೀಗೆ ಆಚರಿಸಲ್ಪಡುವ ಕಾರ್ಯವೈಖರಿ ಸಾಮಾಜಿಕ ರಚನೆಯ ಮೇಲೆ ಬಹಳಷ್ಟು ಪರಿಣಾಮ ಬೀರುತ್ತದೆ. ಆದ್ದರಿಂದ ಸಮಾಜದ ರಚನೆಯಲ್ಲಿ ಬದಲಾವಣೆ ಉಂಟಾದಾಗ ದೇವಾಲಯದ ಕಾರ್ಯ ವಿಧಾನಗಳಲ್ಲಿಯೂ ಬದಲಾವಣೆಗಳು ಕಂಡುಬರುತ್ತವೆ. ಇದನ್ನು ಜಾತ್ರೆಗಳ ಆಚರಣೆಗಳಲ್ಲಿ ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಹೀಗಾಗಿಯೇ ದೇವಸ್ಥಾನಗಳ ಚಟುವಟಿಕೆಗಳಲ್ಲಿ ಅನೇಕ ಸ್ತರಗಳುಂಟು. ಗರ್ಭಗುಡಿ, ಒಳಾಂಗಣ, ಪ್ರದಕ್ಷಿಣಪಥ, ಹೊರಾಂಗಣ, ಜಗುಲಿ ಎಂಬ ಇತ್ಯಾದಿ ಸ್ಥಳಗಳಲ್ಲಿ ನಡೆಯುವ ಕ್ರಿಯೆಗಳು ವಿವಿಧ ಸಮುದಾಯದವರಿಗೆ ಸೀಮಿತಗೊಂಡಿರುತ್ತವೆ. ಆದರೆ ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ಹಲವಾರು ಪ್ರಗತಿಪರ ಸಂಘಟನೆಗಳಿಂದ ಈ ಕ್ರಮದಲ್ಲಿ ಬದಲಾವಣೆ ಬಂದಿದೆ ಎನ್ನಬಹುದು. ಜಾತ್ರೆಯನ್ನು ಒಂದು ಕ್ರಿಯಾತ್ಮಕ ಹಾಗೂ ಸಂಘಟನಾತ್ಮಕವಾದ ಸಾಮಾಜಿಕ ಚಟುವಟಿಕೆ ಎಂದು ಹೇಳುವಾಗ ಅದರಲ್ಲಿ ಮುಖ್ಯವಾಗಿ ಮೂರು ವಿಭಾಗಗಳಿರುತ್ತವೆ.

ಒಂದು ದೇವಾಲಯದ ಒಳಗಿನ ಆವರಣ ಗರ್ಭಗುಡಿ, ನಂತರ ಪ್ರದಕ್ಷಿಣ ಆವರಣ. ಹಾಗೆಯೇ ಮುಂದುವರೆದು ಜಾತ್ರೆಯ ವ್ಯವಸ್ಥೆಯ ಸಭಾಂಗಣ, ಅಂದರೆ ಉತ್ಸವ ನಡೆಯುವ ಬೀದಿ. ಹೀಗೆ ಜಾತ್ರೆಯ ಔಪಚಾರಿಕ ಹಾಗೂ ತಾಂತ್ರಿಕ ಕ್ರಿಯಾ ಭಾಗಗಳೆಲ್ಲ ಭಿನ್ನವಾಗಿಯೇ ಇರುತ್ತವೆ. ಉತ್ಸವ ಅಥವಾ ಮೆರವಣಿಗೆ ನಡೆಯುವ ಸ್ಥಳದಲ್ಲಿ ಊರಿನವರೆಲ್ಲರು ಸೇರಿ ಸಾಂಪ್ರದಾಯಿಕ ಆಚರಣೆಗೆ ಪ್ರಾರಂಭ ಮಾಡುತ್ತಾರೆ. ಅದರಂತೆಯೇ ಮೂರನೇ ಭಾಗದಲ್ಲಿ ಜನಸಾಮಾನ್ಯರು ಆಟ–ಆಡಂಬರ, ವ್ಯಾಪಾರ–ವಹಿವಾಟು, ಮನೋರಂಜನೆಯ ಚಿತ್ರಣ ಕಾಣಬಹುದು. ಈ ಮೂರು ರೀತಿಯ ಭಾಗಗಳಲ್ಲಿ ಕ್ರಿಯಾತ್ಮಕವಾಗಿ ಪರಸ್ಪರ ಪೂರಕವಾಗಿದ್ದು, ಅಲ್ಲಿ ನಡೆಯುವ ಪ್ರತೀ ಚಟುವಟಿಕೆಗಳಲ್ಲಿ ಎಲ್ಲರೂ ಸೇರಿ ಸಾಮೂಹಿಕವಾಗಿ ಜಾತ್ರೆಯನ್ನು ನೆರವೇರಿಸಿದಾಗ ಮಾತ್ರ ಜಾತ್ರೆ ಅರ್ಥಪೂರ್ಣವಾಗಿಯೂ, ಯಶಸ್ವಿಯಾಗಿಯೂ ಆಗುತ್ತದೆ ಎಂಬುದು ಇಲ್ಲಿ ತಿಳಿಯಬೇಕಾದ ಸಂಗತಿ (ಸಂತೆ ಮತ್ತು ಜಾತ್ರೆಗಳು:ಡಾ.ಕರೀಗೌಡ ಬೀಚನಹಳ್ಳಿ, ಪು.೦೩).

ಜಾತ್ರೆಗಳು ಸಾಮೂಹಿಕ ಉತ್ಸವಗಳಾದ್ದರಿಂದ ಅದರ ಯಶಸ್ವಿಗೆ ಇಡೀ ಊರಿನ ಅಥವಾ ಅನೇಕ ಊರುಗಳ ಸಹಕಾರ, ಪ್ರೋತ್ಸಾಹ ಅಗತ್ಯವಿರುತ್ತದೆ. ಇದರಿಂದಾಗಿ ಜನರ

ಮಧ್ಯೆ ಸೌಹಾರ್ದತೆ ಮಾಡಲು ಅವಕಾಶವಿರುತ್ತದೆ. ಎಷ್ಟೋ ಸಮಯಗಳಲ್ಲಿ ಊರಿನಲ್ಲಿ ಜಗಳ, ವೈಷಮ್ಯಗಳ ಕಾರಣಗಳಿಂದಾಗಿ ಒಡೆದು ಬೇರೆ ಬೇರೆಯಾಗಿರುವಂತಹ ಮನಸುಗಳು ಇಂತಹ ಜಾತ್ರೆಯ ಸಮಯದಲ್ಲಿ ಅದೆಲ್ಲವನ್ನು ಮರೆತು ಪರಸ್ಪರ ಪ್ರೀತಿ, ಆತ್ಮೀಯತೆಯಿಂದ ಸಾಮೂಹಿಕವಾಗಿ ಒಂದಾಗಿ ಬೆರೆತು ಶುದ್ಧ ಮನಸ್ಸಿನಿಂದ ಒಮ್ಮತದಿಂದ ಇಡೀ ಗ್ರಾಮದ ಜನರೆಲ್ಲ ಸೇರಿ ಉತ್ಸಾಹದಿಂದ ಜಾತ್ರೆಯನ್ನು ಆಚರಿಸುತ್ತಾರೆ. ಇದರಿಂದ ಅವರ ಮಧ್ಯೆ ಸಂಬಂಧಗಳು ವಿನಿಮಯಗೊಂಡು ಮನುಕುಲದ ಅಭಿವೃದ್ಧಿಗೆ ಪೂರಕವಾಗುತ್ತವೆ. ಜೊತೆಗೆ ಪರಸ್ಪರ ಒಂದೆಡೆ ಸೇರುವುದರಿಂದ ಕುಟುಂಬದ ಕಷ್ಟ-ಸುಖಗಳನ್ನು ಹಂಚಿಕೊಳ್ಳುವ ಸನ್ನಿವೇಶ ತುಂಬಾ ಅಪ್ಯಾಯಮಾನವಾಗಿರುತ್ತದೆ. ಹಾಗಾಗಿ ಜಾತ್ರೆಗಳು ರಸೋತ್ಕರ್ಷೆಯ ಸೆಲೆಯಾಗಿ ನವ ಚೈತನ್ಯದ ಚಿಲುಮೆಗಳಾಗಿ, ಭಾವೈಕ್ಯದ ಸ್ಫೂರ್ತಿ ಮಾಧ್ಯಮಗಳಾಗಿ ನೂತನ ವಿಚಾರಾನುಭವಗಳ ಜೀವಂತ ಖಣಿಯಾಗಿ ಅನೇಕ ಸಾಮಾಜಿಕಾವಶ್ಯಕತೆಗಳನ್ನು ಪೂರೈಸುತ್ತ ಇಂದು ಜನಪದರಿಗೆ ಸಾಮಾಜಿಕ ಕೇಂದ್ರಗಳಾಗಿರುವುದನ್ನು ಕಾಣುತ್ತೇವೆ (ಸಂಯುಕ್ತ ಕರ್ನಾಟಕ ದಿನಪತ್ರಿಕೆ, ಹೈದ್ರಾಬಾದ್ ಕರ್ನಾಟಕ, ವಿಶೇಷ ಪುರವಣಿ, ಪು.೩, ೨೦೦೪).

ಅದೇ ರೀತಿಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಆಚರಿಸಲಾಗುವ ಜಾತ್ರೆಗಳ ಅಧ್ಯಯನವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಪಡೆದಂತಹ ಮಹತ್ವವನ್ನು ಇಲ್ಲಿ ಪರಿಶೀಲಿಸಬಹುದಾಗಿದೆ. ಈ ಭಾಗವು ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರಬಲಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಇಲ್ಲಿನ ಜನಪದರ ರೀತಿ-ನೀತಿ, ಆಚರಣೆ-ಉತ್ಸವಗಳ ಕುರಿತಾಗಿ ತಿಳಿಯಬೇಕಾದ ಅಗತ್ಯವಿದೆ. ಕರ್ನಾಟಕದಾದ್ಯಂತ ಸಾಮಾನ್ಯವಾಗಿ ಆಚರಿಸಲ್ಪಡುವ ಜನಪದರ ಆಚರಣೆಗಳನ್ನು ಗಮನಿಸಿದಾಗ ಇಲ್ಲಿನ ಜನಪದರ ಸಾಮಾಜಿಕ ಬದುಕು ಪ್ರಾದೇಶಿಕವಾಗಿ ಅನೇಕ ವೈರುಧ್ಯಗಳಿಂದ ಕೂಡಿದೆ. ಜನಪದರೆಲ್ಲ ಒಂದೇ ಆಗಿದ್ದರೂ ಅವರು ಆಚರಿಸಿಕೊಂಡು ಬರುತ್ತಿರುವ ಆಚರಣೆಗಳಲ್ಲಿ ಮಾತ್ರ ಭಿನ್ನತೆಯ ಅಂಶಗಳು ಕಂಡುಬರುತ್ತವೆ. ಭಾರತೀಯ ಪರಂಪರೆಯಲ್ಲಿ ಪ್ರಮುಖವಾಗಿ ಎರಡು ರೀತಿಯ ಸಂಪ್ರದಾಯಗಳು, ಆಚರಣೆಗಳು ಕಂಡುಬರುತ್ತವೆ. ವೇದಗಳು ನಿರೂಪಿಸಿರುವಂತೆ ಮಂತ್ರೋಚ್ಚಾರಣೆ, ಹೋಮ, ಯಜ್ಞಗಳನ್ನು ಮಾಡುತ್ತ ತಮ್ಮದೇ ಆದ ಪುರೋಹಿತಶಾಹಿ ಮಾದರಿಯಲ್ಲಿ ಪೂಜಾವಿಧಾನವನ್ನು ಅನುಸರಿಸುತ್ತಾರೆ. ಆದರೆ ಜನಪದರ ಆಚರಣೆಗಳು ಇದಕ್ಕೆ ಭಿನ್ನವಾಗಿರುತ್ತವೆ. ಜನಪದರ ಆಚರಣೆಗಳು ವೇದಗಳು ನಿರೂಪಿಸಿರುವಂತೆ ವಿಧಿ-ವಿಧಾನಗಳು ವೈವಿಧ್ಯತೆಯಿಂದ ಕೂಡಿರುವುದಿಲ್ಲ. ಜನಪದರು ತಮ್ಮದೇ ರೀತಿ-ನೀತಿಗಳ ಮೂಲಕವಾಗಿ ವಿಭಿನ್ನ ಸಂಪ್ರದಾಯಗಳನ್ನು ತಮ್ಮ ಬದುಕಿನಲ್ಲಿ ಒಬ್ಬರಿಗೊಬ್ಬರು ಪರಸ್ಪರ ಸಹಾಯ ಸಹಕಾರದಿಂದ ಕೊಡುಕೊಳ್ಳುವಿಕೆಯು ಹೆಚ್ಚಿರುತ್ತದೆ. ಸಂಪ್ರದಾಯಗಳು ಮನುಷ್ಯನ

ಹುಟ್ಟಿನೊಂದಿಗೆ ಪ್ರಾರಂಭವಾಗಿ ಸಾವಿನ ನಂತರವೂ ಆಚರಿಸಲ್ಪಡುತ್ತವೆ. ಇವುಗಳಿಗೆ ಕೊನೆ ಎಂಬುದಿಲ್ಲ. ಅದೇ ರೀತಿ ಈ ಮುಂದಿನ ಹಂತಗಳಲ್ಲಿ ಅಂತಹ ಆಚರಣೆಗಳಿಗೆ ಒಳಪಟ್ಟಿರುವಂತಹ ಜಾತ್ರೆಗಳ ಕುರಿತಾಗಿ ಇನ್ನಷ್ಟು ಹೆಚ್ಚಿನ ವಿವರಣೆಯನ್ನು ತಿಳಿಯಬಹುದಾಗಿದೆ.

ಜಾತ್ರೆಗಳಲ್ಲಿ ಎಲ್ಲಾ ವರ್ಗದ ಜನರು ಬಂದು ಸೇರುವುದರಿಂದ ಆ ಭಾಗದ ಸಿರಿವಂತರು ಹಾಗೂ ದೇವಸ್ಥಾನಗಳ ಜೀರ್ಣೋದ್ಧಾರ ಸಮಿತಿಗಳು ದೂರದ ಊರುಗಳಿಂದ ಬಂದಂತಹ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಕಾರ್ಯವನ್ನು ಸಹ ಹಮ್ಮಿಕೊಂಡಿರುತ್ತಾರೆ. ಇದನ್ನು ದಾಸೋಹ ಎಂಬುದಾಗಿ ಕರೆಯಲಾಗುತ್ತದೆ. ಈ ದಾಸೋಹವನ್ನು ಊರಿನ ಜನರು ಹಾಗೂ ಸುತ್ತಮುತ್ತಲಿನಿಂದ ಬಂದಂತಹ ಭಕ್ತರುಗಳು ಇದನ್ನು ಮಹಾಪ್ರಸಾದವೆಂದು ಭಕ್ತಿಯ ಭಾವದಿಂದ ಸ್ವೀಕರಿಸುತ್ತಾರೆ. ಹಾಗೆಯೇ ಹಣವಂತರು ತಮ್ಮ ದೇವರ ಮೇಲಿನ ಭಕ್ತಿಯಿಂದಾಗಿ ಅನೇಕ ಜನ ಹಿತಕಾರ್ಯವನ್ನು ಹಮ್ಮಿಕೊಳ್ಳುತ್ತಾರೆ. ಜಾತ್ರೆಗಳು ಬಹುತೇಕವಾಗಿ ಮಳೆಗಾಲ ಮುಗಿದು ರೈತರು ವಿಶ್ರಾಂತಿಯಲ್ಲಿರುವ ಬೇಸಿಗೆ ಸಮಯದಲ್ಲಿಯೇ ಹೆಚ್ಚಾಗಿ ನಡೆಯುತ್ತವೆ. ಈ ಬೇಸಿಗೆಯ ಬಿಸಿಲಿನಲ್ಲಿ ದಣಿದಿರುವಂತಹ ಭಕ್ತರಿಗೆ ಪಾನಕ, ಮಜ್ಜಿಗೆಯನ್ನು ಉಚಿತವಾಗಿ ನಿಡುವುದು, ಅವಘಡ ಸಂಭವಿಸಿದಾಗ ತುರ್ತು ಚಿಕಿತ್ಸೆಯನ್ನು ಕಲ್ಪಿಸುವುದು ಇತ್ಯಾದಿಯಾಗಿ ಹಲವಾರು ಸೇವೆಗಳನ್ನು ಜನರ ಸೇವೆಯೇ ದೇವರ ಸೇವೆಯೆಂದು ನೆರವೇರಿಸುವಂತಹ ವಾತಾವರಣವು ಜಾತ್ರೆಯ ಸಂದರ್ಭದಲ್ಲಿ ಕಂಡುಬರುತ್ತದೆ. ಅದೇ ರೀತಿಯಾಗಿ ಚಿಕ್ಕೋಡಿ ಭಾಗದಲ್ಲಿ ಆಚರಿಸಲ್ಪಡುವ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಜಾತ್ರೆಯಲ್ಲಿ, ಅಪ್ಪಾಜಿವಾಡಿಯ ಹಾಲಸಿದ್ಧನಾಥನ ಜಾತ್ರೆಯಲ್ಲಿ, ಯಡೂರು ಕ್ಷೇತ್ರದ ಜಾತ್ರೆಯಲ್ಲಿ ಹಾಗೂ ಮುಗಳಿ ಗ್ರಾಮಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ತಪ್ಪದೆ ದಾಸೋಹ ಕಾರ್ಯಕ್ರಮಗಳು ಇದ್ದೇ ಇರುತ್ತವೆ. ಹೀಗೆ ಜಾತ್ರೆಗಳಲ್ಲಿ ಜನಪರ ಕಾಳಜಿಯುಳ್ಳ ಅನೇಕ ಜನಹಿತ ಕಾರ್ಯಗಳು ನಡೆಯುತ್ತಿರುವುದರಿಂದ ಜಾತ್ರೆಗಳು ಜನಪದರ ದೃಷ್ಟಿಯಲ್ಲಿ ಜನಪದರ ಮನಸ್ಸುಗಳನ್ನು ಬೆಸೆಯುವ, ಸಂಪರ್ಕ ಸಂವಹನದ ರೀತಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ ಎಂದರೆ ತಪ್ಪಾಗಲಾರದು.

ಜಾತ್ರೆಗಳಲ್ಲಿ ಸಾಮಾಜಿಕ ಸಮಾನತೆಯನ್ನು ಸಂಕೇತಿಸುವ ಮತ್ತೊಂದು ಆಚರಣೆ ಎಂದರೆ ನಂದಿಕೋಲು ಕುಣಿತ. ಅನೇಕ ಜಾತ್ರೆ ಉತ್ಸವಗಳಲ್ಲಿ ಈ ನಂದಿಕೋಲು ಕುಣಿತ ಸರ್ವೇ ಸಾಮಾನ್ಯವಾಗಿ ಕಂಡುಬರುವಂತಹ ಒಂದು ಕ್ರಿಯೆ. ಈ ನಂದಿಕೋಲು ಬೇರೆ ಬೇರೆ ಕಾರಣಗಳಿಂದ ಹುಟ್ಟಿಕೊಂಡಿದ್ದರೂ ಅವು ಸಂಕೇತಿಸುವ ಅರ್ಥ ಮಾತ್ರ ಇಡೀ ಮನುಕುಲದ ಏಳಿಗೆಯನ್ನು ಬಯಸುವುದೇ ಆಗಿದೆ. ಜಾತ್ರೆ ನಡೆಯುವ ಸ್ಥಳಗಳಲ್ಲಿ ನೆರೆಯುವ ಭಕ್ತ ಸಮೂಹವೆಲ್ಲ ಒಂದೇ ಎಂಬಂತಹ ಅರ್ಥವನ್ನು ಈ ನಂದಿಕೋಲು ಸಂಕೇತಿಸುತ್ತದೆ.

ದೇವರಿಗೆ ಎಲ್ಲಾ ಜನಸಮೂಹವೂ ಒಂದೇ. ಅವನು ಯಾವ ಭೇದ-ಭಾವ ಮಾಡದೆ ಸಕಲ ಜನಸಮೂಹವನ್ನು ಸದ್ಭಾವನೆಯಿಂದ ನೋಡುತ್ತಾನೆ. ಆದುದರಿಂದ ಅದನ್ನು ಅರ್ಥಪೂರ್ಣವಾಗಿ ತೋರಿಸಲು ಜಾತ್ರೆಗಳಲ್ಲಿ ನಂದಿಕೋಲು ಕುಣಿತವನ್ನು ಆಚರಿಸುತ್ತಾರೆ. ನಂದಿಕೋಲಿಗೆ ಬೇಕಾಗುವಂತಹ ಬಿದಿರನ್ನು ಯಾವುದಾದರೂ ಪ್ರಸಿದ್ಧ ಯಾತ್ರಾ ಸ್ಥಳದಿಂದ ಅಥವಾ ದೇವರುಗಳು ವಾಸವಾಗಿರುವ ಕಾಡುಗಳಿಂದ ತಂದು ಅದನ್ನು ಸಮವಾಗಿ ಮಾಡಿ ಅದಕ್ಕೊಂದು ದೇವರ ಪಟದ ಧ್ವಜವನ್ನು ಕಟ್ಟಿ ನಂತರ ಉತ್ಸವಗಳಲ್ಲಿ ಅವುಗಳನ್ನು ಕುಣಿಸುತ್ತಾರೆ. ಈ ನಂದಿ ಕುಣಿತ ಒಂದು ವಿಶೇಷ ಕಲೆಯಾಗಿದೆ. ಹಾಗೆಯೇ ಕಸರತ್ತಿನ ಕಲೆಯು ಹೌದು. ತಲೆಗೆ ರುಮಾಲು ಸುತ್ತಿಕೊಂಡು ನಂದಿಕೋಲನ್ನು ಹೆಗಲಿಗೆ ಹಾಕಿಕೊಂಡು ಉತ್ಸವಗಳಲ್ಲಿ ಬಾಜಾಭಜಂತ್ರಿಯ ತಾಳಕ್ಕೆ ತಕ್ಕಂತೆ, ಲಯಕ್ಕೆ ತಕ್ಕಂತೆ ಕುಣಿಸಬೇಕು. ಇದನ್ನು ಹೊರಬೇಕಾದರೆ ದೈಹಿಕವಾಗಿ ಸದೃಢರಿರಬೇಕು. ಇಲ್ಲವಾದರೆ ನಂದಿಕೋಲಿನ ಭಾರವನ್ನು ತಡೆಯಲು ಸಾಧ್ಯವಾಗುವುದಿಲ್ಲ ಹಾಗೂ ತಾಳಕ್ಕೆ ತಕ್ಕಂತೆ ಸಮತೋಲನದಿಂದ ಕುಣಿಸಲು ಆಗುವುದಿಲ್ಲ. ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಿಂದ ಮಾತ್ರ ಇದು ಸಾಧ್ಯ. ಈ ನಂದಿಕುಣಿತವು ಸಾಮಾನ್ಯವಾಗಿ ಪುರುಷ ದೇವತೆಗಳ ಜಾತ್ರೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಸ್ತ್ರೀ ದೇವತೆಗಳ ಜಾತ್ರೆಗಳಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲ. ಈ ಸಂಪ್ರದಾಯ ಇಂದಿಗೂ ಮುಂದುವರೆದು ಬಂದಿದೆ. ಮೆರವಣಿಗೆಯ ಸಂದರ್ಭದಲ್ಲಿ ಈ ನಂದಿಕುಣಿತದ ಕಲೆ ಪ್ರದರ್ಶನಗೊಳ್ಳುವುದು ಸಹಜವಾದುದ್ದಾಗಿದೆ.

ಸಾಮೂಹಿಕ ವಿವಾಹಗಳು ಜಾತ್ರೆಯ ಸಂದರ್ಭದಲ್ಲಿ ಹೆಚ್ಚಾಗಿ ಕಾಣಿಸುತ್ತವೆ. ಸಮಾಜದಲ್ಲಿನ ಕೆಳಸ್ತರದವರು ಅಥವಾ ಆರ್ಥಿಕವಾಗಿ ದುರ್ಬಲರಿರುವ ಜನರಿಗೆ ಈ ಸಾಮೂಹಿಕ ವಿವಾಹ ಕಾರ್ಯ ಅತ್ಯಂತ ಉಪಯುಕ್ತವಾದ ಸಾಮಾಜಿಕ ಕಾರ್ಯವಾಗಿದೆ. ಬಹುಶಃ ಈ ಸೇವೆಯಿಂದ ಎಷ್ಟೋ ಕುಟುಂಬಗಳಲ್ಲಿ ನೆಮ್ಮದಿಯ ವಾತಾವರಣ ಕಾಣಬಹುದಾಗಿದೆ. ಮದುವೆ ಎಂದರೆ ಸುಮ್ಮನೆ ಆಗುವಂತಹ ಕಾರ್ಯವಲ್ಲ. 'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಎಂಬ ನಾಣ್ಣುಡಿಯಂತೆ ಇಂತಹ ಶುಭಕಾರ್ಯಗಳು ನೆರವೇರಲು ಅದೆಷ್ಟೋ ವಿಘ್ನಗಳು ಅಡ್ಡಿಯಾಗುತ್ತವೆ. ಸಾಕಷ್ಟು ಹಣವೂ ವ್ಯಯವಾಗುತ್ತದೆ. ಈ ಸಂದರ್ಭದಲ್ಲಿ ಅವಮಾನ, ಸನ್ಮಾನಗಳು ಅನುಭವಕ್ಕೆ ಬರುತ್ತದೆ. ಇಂತಹದನ್ನೆಲ್ಲ ಸಂಭಾಳಿಸುವ ಶಕ್ತಿ ಸಾಮಾನ್ಯರಿಗೆ ಇರುವುದಿಲ್ಲ. ಅಂತವರು ಜಾತ್ರೆ, ಉತ್ಸವಗಳಲ್ಲಿ ಏರ್ಪಡಿಸುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಈ ವಿವಾಹ ಕಾರ್ಯವನ್ನು ಕಡಿಮೆ ಖರ್ಚಿನಲ್ಲಿ ಮಾಡಿ ಮುಗಿಸುತ್ತಾರೆ. ಇದರಿಂದ ಎರಡು ರೀತಿಯ ಪ್ರಯೋಜನವಿದೆ. ಒಂದು ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡಿದಂತಾಗುತ್ತದೆ. ಮತ್ತೊಂದು ಸಾಮೂಹಿಕ ವಿವಾಹ ನಡೆಯುವ ಸ್ಥಳವು

ಮತ್ತಷ್ಟು ಪ್ರಸಿದ್ಧಿಯನ್ನು ಪಡೆಯುತ್ತದೆ. ಈ ರೀತಿಯ ಕಾರ್ಯಕ್ರಮಗಳಿಂದ ಜನಪದರಲ್ಲಿ ಆದರ್ಶ ಭಾವನೆ ಮೂಡುತ್ತದೆ. ಭಕ್ತಿಯು ಹೆಚ್ಚಾಗುತ್ತದೆ. ದೇವರ ಸಾನಿಧ್ಯದಲ್ಲಿ ನಡೆಯುವ ಪ್ರತಿಯೊಂದು ಶುಭಕಾರ್ಯವು ಮಂಗಳಕರವಾಗಿರುತ್ತದೆ ಎಂಬ ನಂಬಿಕೆ ಜನಪದರದ್ದಾಗಿದೆ. ಈ ರೀತಿಯ ಸಾಮಾಜಿಕ ಉನ್ನತಿಯ ಕಾರ್ಯಗಳು ಸದರಿ ತಾಲ್ಲೂಕಿನ ಅನೇಕ ಕಡೆಗಳಲ್ಲಿ ಇಂದಿಗೂ ನಡೆಯುತ್ತಿದೆ. ಅಷ್ಟಲ್ಲದೆ ರಾಜಕೀಯ ಧುರೀಣರು, ಕೆಲವು ಸಂಘ-ಸಂಸ್ಥೆಗಳು ತಮ್ಮ ಸಮಾಜ ಸೇವೆಯನ್ನು ಪ್ರದರ್ಶಿಸುವ ಸಲುವಾಗಿಯೂ ಇಂತಹ ಶುಭಕಾರ್ಯಗಳನ್ನು ಹಮ್ಮಿಕೊಳ್ಳುತ್ತಾರೆ. ಮತ್ತೆ ಕೆಲವರು ಪ್ರಾಮಾಣಿಕತೆಯಿಂದ ಜನರಿಗೆ ಉಪಕಾರವಾಗಲಿ, ಬಡವರ ಉದ್ಧಾರವಾಗಲಿ, ಸಮಾಜ ಪ್ರಗತಿ ಹೊಂದಲಿ ಎನ್ನುವ ಆದರ್ಶ ತತ್ವಗಳಿಂದ ಆರ್ಥಿಕ ದುಂದುಗಾರಿಕೆಯನ್ನು ತಪ್ಪಿಸುವ ಸಲುವಾಗಿ ಒಂದೇ ವೇದಿಕೆಯಲ್ಲಿ ಹಲವಾರು ವಧು-ವರರಿಗೆ ಸರಳವಾದ ವಿಧಾನಗಳ ಮೂಲಕ ಜೀವನ ಸಾರ್ಥಕತೆಯ ಅವಕಾಶವನ್ನು ನೀಡಿ, ಆ ಮೂಲಕ ಹೊಸ ಜೋಡಿಗಳಿಗೆ ಚೈತನ್ಯದಾಯಕ ಜೀವನ ರೂಪಿಸಿಕೊಳ್ಳಲು ಮುಕ್ತ ಅವಕಾಶ ನೀಡಿದಂತಾಗುತ್ತದೆ. ಇದರಿಂದ ಸಮಾಜ, ಸಮಾಜದಲ್ಲಿರುವ ಜನಸಾಮಾನ್ಯರು ಎಲ್ಲರಿಗೂ ಒಳ್ಳೆಯದಾಗುತ್ತದೆ ಎಂಬ ಆಶಾಭಾವನೆಯೇ ಕಾರಣವಾಗಿದೆ. ಮದುವೆ ಮಾಡಿಸುವುದು ಪುಣ್ಯದ ಕೆಲಸ, ಇಂತಹ ಸಮಾಜ ಸೇವೆಯಿಂದ ದೇವರ ಅನುಗ್ರಹಕ್ಕೆ ಪಾತ್ರರಾಗುವ ಮೂಲಕ ಪ್ರತೀ ಸಮಾಜವು ಇವರನ್ನು ಗುರುತಿಸಲು ಈ ಕಾರ್ಯ ಪ್ರಮುಖ ವೇದಿಕೆಯಾಗಿದೆ. ಇಂತಹ ಸಂದರ್ಭದಲ್ಲಿ ಜೀವನವನ್ನು ರೂಪಿಸಿಕೊಂಡು ದಂಪತಿಗಳಲ್ಲಿ ಆತ್ಮವಿಶ್ವಾಸ ಬಂದು ದೇವರ ಮೇಲೆ ಭಯ-ಭಕ್ತಿಯ ಭಾವನೆ ಮೂಡಿ ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ಬದುಕುವುದರಲ್ಲಿ ಸಂದೇಹವಿರಲಾರದು. ಅದೇ ರೀತಿಯಲ್ಲಿ ಅವರ ಪ್ರಯತ್ನಗಳೂ ಮುಂದುವರೆಯುತ್ತವೆ.

ಹಾಗೆಯೇ ಜನಪದರಲ್ಲಿ ನಂಬಿಕೆಗಳು ಅಷ್ಟೇ ಮಹತ್ವಪೂರ್ಣವಾಗಿವೆ. ನಂಬಿಕೆಗಳು ಸಂಸ್ಕೃತಿಯ ಮೂಲ ಬೇರು ಇದ್ದಂತೆ. ಅದಿಲ್ಲದೆ ಸಮಾಜವಿಲ್ಲ. ನಂಬಿಕೆಯೇ ಮಾನವನ ಮುಂದಿನ ಜೀವನ. ಈ ನಂಬಿಕೆಗಳು ಸಾರ್ವಜನಿಕವಾಗಿ ಒಂದೇ ರೀತಿಯಲ್ಲಿದ್ದರೂ ಅವುಗಳನ್ನು ಅನುಸರಿಸುವ ರೀತಿ ಸಮಾಜದಿಂದ ಸಮಾಜಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದನ್ನು ಗಮನಿಸಬಹುದು. ನಂಬಿಕೆ ಎನ್ನುವುದು ಮನುಷ್ಯನ ವೈಯಕ್ತಿಕ ಭಾವನೆ. ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ರೂಢಿ ಸಂಪ್ರದಾಯಗಳಿಗನು ಗುಣವಾಗಿ ಬದಲಾವಣೆಗೊಳ್ಳುತ್ತಾ ಬಂದಿರುವಂತಹ ಒಂದು ಗುಣ. ಒಂದು ಹೇಳಿಕೆ ಅಥವಾ ವಸ್ತುಸ್ಥಿತಿಯ ಬಗ್ಗೆ ಮಾನಸಿಕ ಒಪ್ಪಿಗೆಯನ್ನು ತೋರುವ ಪ್ರವೃತ್ತಿಯನ್ನು ನಂಬಿಕೆ ಎನ್ನಬಹುದು. ಜನತೆಯ ಆಂತರಿಕ ಮನೋಭಾವವು ಮೂಲ ಸಂಸ್ಕೃತಿಯ ಬೇರು.

ಪ್ರಾರಂಭದಿಂದಲೂ ಮುಂದುವರೆದು ಬಂದಿರುವ ಸಂಪ್ರದಾಯ, ನಂಬಿಕೆಗಳನ್ನು ಪರಿಚಯಿಸುತ್ತದೆ. ಪ್ರಪಂಚದಾದ್ಯಂತ ಸಾರ್ವತ್ರಿಕವಾಗಿರುವ ಈ ನಂಬಿಕೆಗಳು ಜನಪದರ ಜೀವನದ ದಾರಿಯನ್ನು ನಿರ್ದೇಶಿಸಿರುತ್ತದೆ. ಇವುಗಳಲ್ಲಿ ಬಹಳಷ್ಟು ಮೂಢನಂಬಿಕೆಗಳಿದ್ದರೂ ಕೆಲವು ನಂಬಿಕೆಗಳಲ್ಲಿ ಸತ್ಯ, ವೈಜ್ಞಾನಿಕತೆಗೆ ಹಾಗೂ ಸಾಮಾನ್ಯ ತಿಳುವಳಿಕೆಗಳಿಂದ ಕೂಡಿರುತ್ತವೆ. ಭಯ ಮತ್ತು ಮನಸ್ಸಿನ ಅಸ್ಥಿರತೆಯಿಂದ ಹುಟ್ಟಿಕೊಂಡಂತಹ ನಂಬಿಕೆಗಳನ್ನು ಧಾರ್ಮಿಕ ನಂಬಿಕೆಗಳು ಎಂದು ಕರೆಯಲಾಗುತ್ತದೆ. ಸಮಾಜದ ಒಪ್ಪಿಗೆಯ ಪರಿಣಾಮವಾಗಿ ರೂಪುಗೊಂಡಿರುವ ಸಾಂಸ್ಕೃತಿಕ ಆಚರಣೆಗಳು, ವೈಯಕ್ತಿಕ ನಂಬಿಕೆಗಳು ಕೆಲವೊಮ್ಮೆ ಮಾನವನಿಗೆ ಮಾರಕ ಹಾಗೂ ಅನಾಹುತಗಳನ್ನು ತಂದೊಡ್ಡುತ್ತವೆ. ಇದರಿಂದ ಮನುಷ್ಯನು ಸಾವಿಗೂ ಶರಣಾಗಿದ್ದಾನೆ. ಭೂತ-ಪ್ರೇತಗಳೆಂದು ನಂಬಿದಂತಹ ಜನಪದರು ಕೆಲವೊಮ್ಮೆ ಸಾಮಾನ್ಯ ರೋಗಕ್ಕೆ ಸೂಕ್ತ ಚಿಕಿತ್ಸೆ ನೀಡದೆ ಯಾವುದೋ ದೇವರ ಮೇಲೆ ನಂಬಿಕೆಯಿಂದ ಎಷ್ಟೋ ಜನರು ಪ್ರಾಣಗಳನ್ನು ಕಳೆದುಕೊಳ್ಳುವಂತಾಗಿದೆ.

ಜನರಿಗಿರುವ ಅತಿಮಾನುಷ ಭಯದ ವಾತಾವರಣದಿಂದಾಗಿ ನಂಬಿಕೆಗಳು ಭದ್ರವಾಗಿರಲು ಸಾಧ್ಯವಾಗಿದೆ. ಪ್ರತಿಯೊಂದಕ್ಕೂ ಒಂದೊಂದು ಕಲ್ಪನೆಯಿದೆ. ವಾರ, ತಿಥಿ, ನಕ್ಷತ್ರ, ಹುಟ್ಟು, ಸಾವು, ರೋಗ-ರುಜಿನಗಳು, ನೆಲ-ಜಲ ಇಂತಹ ಎಲ್ಲದರಲ್ಲಿಯೂ ಅವರದ್ದೇ ಆದ ಪ್ರತ್ಯೇಕ ನಂಬಿಕೆಗಳು ತುಂಬಿ ತುಳುಕುತ್ತಿವೆ. ಪ್ರತಿ ಕ್ಷಣಕ್ಕೂ ನಂಬಿಕೆಗಳು ಅನ್ವಯಿಸುತ್ತವೆ. ಹಾಗೆಯೇ ಪ್ರಾಣಿ-ಪಕ್ಷಿಗಳಲ್ಲಿ ದೈವವನ್ನು ಗುರುತಿಸುತ್ತಾರೆ. ನಾಯಿಯನ್ನು ನಾರಾಯಣ, ಕತ್ತೆಯನ್ನು ವಾಸುದೇವ, ಕಾಗೆಯನ್ನು ಶನಿಮಹಾತ್ಮನ ವಾಹನ, ಹಸು ಸಮೃದ್ಧಿಯ ಸಂಕೇತ ಎಂಬುದಾಗಿ ನಂಬಿಕೊಂಡು ಬಂದಿದ್ದಾರೆ. ಅದರಂತೆಯೇ ಧರ್ಮದ ಎರಡು ಅಂಗಗಳಾಗಿರುವ ನಂಬಿಕೆ ಮತ್ತು ಆಚರಣೆಗಳಲ್ಲಿ ನಂಬಿಕೆ ಎನ್ನುವುದು ಮಾನಸಿಕವಾದ ಪರಿಕಲ್ಪನೆಯಾಗಿದ್ದು, ಅದರ ಕಾರ್ಯಪ್ರವೃತ್ತಿಯೇ ಆಚರಣೆ ಎಂದೆನಿಸಿಕೊಳ್ಳುತ್ತದೆ. ಯಾವುದಾದರೂ ಒಂದು ಆಚರಣೆ ಇದೆ ಎಂದರೆ ಅಲ್ಲಿ ಅದಕ್ಕೆ ಸಂಬಂಧಿಸಿದ ಒಂದು ನಂಬಿಕೆ ಇದ್ದೇ ಇರುತ್ತದೆ. ನಂಬಿಕೆಗಳಿಲ್ಲದೆ ಮಾನವನ ಬದುಕು ನಿರಂತರವಾಗಿ, ನಿಸ್ಸಂದೇಹವಾಗಿ ಸಾಗಲಾರದು. ಇಂತಹ ನಂಬಿಕೆಗಳಿಂದ ಬದ್ಧವಾಗಿರುವುದರಿಂದ ಮನುಷ್ಯ ಇಲ್ಲಿಯವರೆಗೂ ಬದುಕಿದ್ದಾನೆ. ಈ ಮನುಷ್ಯನ ಒಂದೊಂದು ಕ್ಷಣವೂ ಅನೇಕ ನಂಬಿಕೆಗಳ ಕೇಂದ್ರಬಿಂದು. ಜನರು ಬದುಕುವ ಪರಿಸರ, ಅವರ ತಿಳುವಳಿಕೆಯ ಇತಿಮಿತಿಗಳು ಮುಖ್ಯವಾಗಿ ಜನಪದರ ಜೀವನದಲ್ಲಿ ನಂಬಿಕೆಗಳನ್ನು ಅವಲಂಬಿಸಲು ಕಾರಣವಾಗಿವೆ. ಸಮಾಜಕ್ಕೆ ಅಪಾಯಕಾರಿಯಾದ ಅನೇಕ ಧಾರ್ಮಿಕ ನಂಬಿಕೆಗಳು, ಸಾಮಾಜಿಕ ಅಸಮಾನತೆಗಳು, ಸಾಂಸ್ಕೃತಿಕ ನಂಬಿಕೆಗಳು, ವ್ಯಕ್ತಿಯಲ್ಲಿ ಭಯ, ಅಸ್ತಿರತೆಯನ್ನು ತುಂಬುವ ವೈಯಕ್ತಿಕ ನಂಬಿಕೆಗಳು ಇಂತಹವುಗಳು ಮನುಷ್ಯನ ಬದುಕನ್ನು ಅಳಿವಿನಂಚಿಗೆ ಕೊಂಡೊಯ್ಯುತ್ತಿದ್ದು, ಇಂತಹವುಗಳನ್ನು ತೊಡೆದುಹಾಕುವ

ಕಾರ್ಯ ಅಗತ್ಯವಾಗಿ ಆಗಬೇಕಿದೆ. ಜನಪದರ ನಂಬಿಕೆಗಳು ಹುಟ್ಟಿದ ಸಾಂಸ್ಕೃತಿಕ ಸಂದರ್ಭ ಅವುಗಳು ನೆರವೇರಿಸುತ್ತಿದ್ದ ಕಾರ್ಯ ಉಂಟು ಮಾಡುತ್ತಿದ್ದ ಪರಿಸರ ಇಂದು ಇಲ್ಲವಾದ್ದರಿಂದ ಅಂತಹ ಜನಪದ ನಂಬಿಕೆಗಳ ಅಗತ್ಯವೂ, ಪ್ರಸ್ತುತ ಸಂದರ್ಭದಲ್ಲಿ ಸುಲಭವಾಗುತ್ತಿರುವುದನ್ನು ಕಾಣಬಹುದು.

ನಂಬಿಕೆಗಳಲ್ಲಿ ಮೊಟ್ಟಮೊದಲ ಅಂಶವಾಗಿ ಹರಕೆಯನ್ನು ಗುರುತಿಸಬಹುದು. ಹರಕೆ ಎಂದರೆ ಬೇಡಿಕೊಳ್ಳುವುದು. ಶಪಥ ಮಾಡುವುದು ಎಂಬಿತ್ಯಾದಿ ಅರ್ಥವನ್ನು ನೀಡಬಹುದು. ಜನಪದರು ತಮ್ಮ ಕಷ್ಟಕಾಲದ ಸಂದರ್ಭದಲ್ಲಿ ದೇವರನ್ನು ಬೇಡಿಕೊಳ್ಳುವುದು. ಹಾಗೆಯೇ ಊರಿಗೆ ಊರೇ ರೋಗ-ರುಜಿನ, ಸಾಂಕ್ರಾಮಿಕ ರೋಗಗಳಿಂದ ಬಳಲುತ್ತಿದ್ದರೆ, ಮಳೆ ಕಾಣದೆ ಬೆಳೆ ಬಾರದಿದ್ದರೆ, ಬರಗಾಲ ಸಂಭವಿಸಿದರೆ ಹೀಗೆ ಮನುಕುಲಕ್ಕೆ ಅಪಾಯಕಾರಿಯಾಗಿ ಬಂದಂತಹ ಸಂದರ್ಭಗಳಲ್ಲಿ ಸಾಮೂಹಿಕವಾಗಿ ಊರಿನ ಜನರೆಲ್ಲ ಸೇರಿ ಪೂಜೆ ಸಲ್ಲಿಸುವುದರ ಮೂಲಕ ತಮ್ಮ ಬೇಡಿಕೆಗಳನ್ನು ದೇವರ ಮುಂದಿಟ್ಟು ಬೇಡಿಕೊಳ್ಳುತ್ತಾರೆ. ನಂಬಿದ ದೇವರು ಕೈಬಿಡಲಾರ ಎಂಬ ಅಪಾರ ನಂಬಿಕೆಯಿಂದಲೇ ಜನರು ತಮ್ಮ ಕಷ್ಟ ಸುಖಗಳನ್ನು ದೇವರ ಹತ್ತಿರ ನಿವೇದಿಸಿಕೊಳ್ಳುತ್ತಾರೆ. ಆಣೆ, ಪ್ರಮಾಣಗಳನ್ನು ಮಾಡುವುದರ ಮೂಲಕ, ಮಾಡಿಸುವುದರ ಮೂಲಕ ತಮಗೊದಗಿದಂತಹ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಹಾಗೆಯೇ ಈ ಹರಕೆಗಳನ್ನು ಕೌಟುಂಬಿಕವಾಗಿ, ವೈಯಕ್ತಿಕವಾಗಿ, ಸಾಮಾಜಿಕವಾಗಿ ವಿಂಗಡಿಸಲಾಗುತ್ತದೆ. ವ್ಯಕ್ತಿಗತವಾಗಿ ಒಬ್ಬರು ಅಥವಾ ಇಬ್ಬರು ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಲು ಬೇಡಿಕೊಳ್ಳುವುದು. ಕೌಟುಂಬಿಕವಾಗಿ ಎಂದರೆ ಕುಟುಂಬದವರ ಕ್ಷೇಮಕ್ಕಾಗಿ ಬಂದಂತಹ ನೋವುಗಳು ದೂರವಾಗಲಿ ಎಂದು ಬೇಡಿಕೊಳ್ಳುವುದು. ಇದಕ್ಕೆ ಉದಾಹರಣೆಯೆಂದರೆ ಇಡೀ ಕುಟುಂಬ ಭೂಮಿಗೆ ಅವಲಂಬಿತವಾಗಿ ಬದುಕುವುದು. ಸಕಾಲಕ್ಕೆ ಮಳೆ, ಬೆಳೆಯಾದರೆ ಬಂದಂತಹ ಫಸಲಿನಲ್ಲಿ ಇಂತಿಷ್ಟು ಪ್ರಮಾಣದಲ್ಲಿ ದೇವರಿಗೆ ಕಾಳು-ಕಡಲೆಗಳನ್ನು ಅರ್ಪಿಸುವುದು. ಮನೆಯಲ್ಲಿ ಅಕಾಲಿಕವಾಗಿ ವಾಸಿಯಾಗದ ಬೇನೆಯಿಂದ ಬಳಲುತ್ತಿದ್ದಾರೆ. ಅದು ಪರಿಹಾರವಾದರೆ ಇಡೀ ಕುಟುಂಬವೇ ಜಾತ್ರೆಯಿಂದ ಹರಕೆ ತೀರಿಸುವುದು. ಇಲ್ಲವೇ ದೇವರ ದರ್ಶನ ಮಾಡುತ್ತೇವೆ ಎಂದು ಬೇಡಿಕೊಳ್ಳುವುದು. ಅದೇ ರೀತಿಯಲ್ಲಿ ಸಮಾಜಮುಖಿಯಾಗಿ ಎಂದರೆ ಊರಿನಲ್ಲಿ ಸಕಾಲಕ್ಕೆ ಸರಿಯಾಗಿ ಮಳೆ, ಬೆಳಯಾಗದೆ ಹೋದರೆ ಅಥವಾ ಯಾವುದಾದರೂ ಸಂಕಷ್ಟಗಳಿಗೆ ತುತ್ತಾದರೆ ಊರಿನ ಜನರೆಲ್ಲರೂ ಸೇರಿ ದೇವರಿಗೆ ಹರಕೆ ಹೋರುವುದರ ಮೂಲಕ ಜಾತ್ರೆ, ಉತ್ಸವಗಳನ್ನು ಇನ್ನಷ್ಟು ವಿಜೃಂಭಣೆಯಿಂದ, ಭಕ್ತಿಯಿಂದ ಎಲ್ಲರೂ ಸೇರಿ ದೇವರಿಗೆ ಹರಕೆ ಹೋರುವುದರ ಮೂಲಕ ಜಾತ್ರೆ, ಉತ್ಸವಗಳನ್ನು ಇನ್ನಷ್ಟು ವಿಜೃಂಭಣೆಯಿಂದ, ಭಕ್ತಿಯಿಂದ ಎಲ್ಲರೂ ಸೇರಿ ಆಚರಿಸುತ್ತೇವೆ ಎಂದು ಸರ್ವರು ಒಮ್ಮತದಿಂದ ಬೇಡಿಕೊಳ್ಳುವುದು.

ಇಲ್ಲಿ ಕೇವಲ ಒಂದು ಸಮುದಾಯಕ್ಕೆ, ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಾಗಿರುವುದಿಲ್ಲ. ಆ ಸಮಾಜದ ಎಲ್ಲಾ ಜನಪದರಿಗೆ ಸಂಬಂಧಪಡುತ್ತದೆ. ಆ ಊರಿನ ಕಟ್ಟುಪಾಡುಗಳಂತೆ ಅಲ್ಲಿನ ಜನಪದರು ಅಂತಹ ಆಚರಣೆಗಳನ್ನು ಆಚರಿಸುತ್ತಾರೆ. ಈ ರೀತಿಯ ಆಚರಣೆಗಳು, ಹರಕೆಗಳನ್ನು ಚಿಕ್ಕೋಡಿ ತಾಲ್ಲೂಕಿನಲ್ಲಿ ನಡೆಯುವ ಜಾತ್ರೆಗಳಲ್ಲಿ ಹಲವಾರು ಭಕ್ತರು ಇಂದಿಗೂ ಅದನ್ನು ಮುಂದುವರೆಸಿಕೊಂಡು ಬಂದಿದ್ದು, ಇನ್ನು ಹೆಚ್ಚಿನ ಪ್ರಮಾಣದಲ್ಲಿ ಹರಕೆಗಳನ್ನು ಭಿನ್ನವಿಸುವುದು, ಅದರಿಂದ ಫಲ ಸಿಕ್ಕಾಗ ಅತ್ಯಂತ ಸಂತೋಷದಿಂದ ಹಣ, ಒಡವೆ, ಆಭರಣಗಳು ಇತ್ಯಾದಿ ವಿಧದ ಹರಕೆಗಳನ್ನು ತೀರಿಸುವುದನ್ನು ಈ ಭಾಗದಲ್ಲಿ ನಡೆಯುವ ಜಾತ್ರೆಗಳಲ್ಲಿ ಪ್ರತ್ಯಕ್ಷವಾಗಿ ಕಾಣಬಹುದು.

೬.೩ ಆರ್ಥಿಕ ಕೇಂದ್ರಗಳಾಗಿ ಜಾತ್ರೆಗಳು

ಸಮಾಜ ಕೇವಲ ಒಬ್ಬ ವ್ಯಕ್ತಿಯಿಂದ ರೂಪಗೊಂಡಿರುವಂತದ್ದಲ್ಲ, ಹಲವಾರು ಜನಪದರ ಗುಂಪು ಸೇರಿ ಒಂದು ಸಮಾಜವಾಗಲು ಸಾಧ್ಯ ಸಕಲ ದೃಷ್ಟಿಯಿಂದಲೂ ಸಮಾಜವನ್ನು ಅಧ್ಯಯನ ಮಾಡಬೇಕಾಗುತ್ತದೆ. ಅಲ್ಲಿ ಕಂಡುಬರುವ ಸಂಪ್ರದಾಯ, ಸಂಸ್ಕೃತಿ, ಆಚಾರ-ವಿಚಾರ, ಧರ್ಮ, ವೃತ್ತಿ ಹೀಗೆ ಎಲ್ಲ ಅಂಶಗಳು ಗ್ರಾಮೀಣ ಪ್ರದೇಶಗಳಲ್ಲಿ, ಗ್ರಾಮ ಜನಜೀವನದಲ್ಲಿ ಮಹತ್ವದ ವಿಷಯವಾಗಿದೆ. ಜನಪದರು ತಾವು ಬೆಳೆದ ಫಸಲನ್ನು ಸುಗ್ಗಿಯಾದ ಮೇಲೆ ಸೂಕ್ತ ಬೆಲೆಗೆ ಮಾರಾಟ ಮಾಡಿ ತಮ್ಮ ಜೀವನಕ್ಕೆ ಅಗತ್ಯವಾದ ಮೂಲಭೂತ ವಸ್ತುಗಳನ್ನು ಮಾರುಕಟ್ಟೆಯಿಂದ ತರುವುದರ ಮೂಲಕ ತಮ್ಮ ಸಾಮಾಜಿಕ ಸ್ಥಿತಿಯನ್ನು ಸದೃಢಪಡಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಸಾಮಾಜಿಕ ಸ್ಥಳಗಳಲ್ಲಿ ನಡೆಯುವ ವ್ಯಾಪಾರ ವಹಿವಾಟಿಗಿಂತ ವಿಶೇಷ ದಿನಗಳಲ್ಲಿ ನಡೆಯುವ ವ್ಯವಹಾರಗಳು ಭಿನ್ನವಾಗಿರುತ್ತವೆ. ದಿನನಿತ್ಯದ ಬೆಲೆಗಿಂತ ಹೆಚ್ಚು ದರದಲ್ಲಿ ವಹಿವಾಟು ನಡೆಯಬಹುದು. ಜಾತ್ರೆಗಳೆಂದರೆ ಅಲ್ಲಿ ಸುತ್ತಮುತ್ತಲಿನ ಪ್ರದೇಶದ ಜನರು ಬಂದು ಸೇರುವುದರಿಂದ ಆ ಸ್ಥಳದಲ್ಲಿ ನಡೆಯುವ ವ್ಯಾಪಾರ ವಿಶೇಷವಾಗಿಯೇ ಇರುತ್ತದೆ. ಅಪಾರ ಜನಸಂಖ್ಯೆ ಸೇರುವ ಜಾತ್ರಾ ಸ್ಥಳ ವ್ಯಾಪಾರಸ್ಥರಿಗೆ ಅತ್ಯಂತ ಅನುಕೂಲಕರವಾದ ಪ್ರದೇಶ. ವರ್ಷವಿಡೀ ಅಂಗಡಿಗಳಲ್ಲಿ ಕುಳಿತರೂ ವ್ಯಾಪಾರದ ವಹಿವಾಟು ಅಷ್ಟಕಷ್ಟೇ ಇರುತ್ತದೆ. ಜಾತ್ರೆ-ಉತ್ಸವಗಳಲ್ಲಿ ಕೆಲವೇ ದಿನಗಳಲ್ಲಿ ಅಪಾರವಾದ ಲಾಭವನ್ನು ಪಡೆಯಬಹುದಾಗಿದೆ. ಸಣ್ಣ ವ್ಯಾಪಾರಿಯಿಂದ ದೊಡ್ಡ ದೊಡ್ಡ ವ್ಯಾಪಾರಸ್ಥರವರೆಗೆ ಜಾತ್ರೆಗಳಲ್ಲಿ ಅಂಗಡಿಯನ್ನು ತೆರೆಯಲು ಹಾತೊರೆಯುತ್ತಿರುತ್ತಾರೆ. ಈ ಸಂದರ್ಭದಲ್ಲಿ ಆಕರ್ಷಣೀಯ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ. ಜಾತ್ರೆಗಳೆಂದರೆ ಅಲ್ಲಿ ತರಾವರಿ ವಸ್ತುಗಳು. ಚಿಕ್ಕಮಕ್ಕಳಿಂದ ಹಿಡಿದು ವಯಸ್ಸಾದವರಿಗೂ ಕೆಲವು ಅಗತ್ಯ ವಸ್ತುಗಳು ದೊರೆಯುವ ಸೂಕ್ತ ಸ್ಥಳವೆಂದರೆ ಅದು ಜಾತ್ರಾ ಸ್ಥಳವೇ. ಮಕ್ಕಳು ಮರಿಗಳಿಗೆ

ಬಟ್ಟೆ-ಬರೆ, ತಿಂಡಿ-ತಿನಿಸು, ಗೃಹ ಉಪಯೋಗಿ ವಸ್ತುಗಳು, ವ್ಯವಸಾಯ ಸಾಮಗ್ರಿಗಳು, ಆಭರಣಗಳು ಹೀಗೆ ಹತ್ತಾರು ಬಗೆಯ ವಸ್ತು ಜಾತ್ರೆಗಳಲ್ಲಿ ವ್ಯಾಪಾರವಾಗುತ್ತವೆ. ಬೇರೆ ಬೇರೆ ಪ್ರದೇಶಗಳಿಂದ ವ್ಯಾಪಾರ ಮಾಡುವವರು ಬರುವುದರಿಂದ ವಸ್ತುಗಳ ವೈವಿಧ್ಯತೆಯಲ್ಲಿ ಭಿನ್ನತೆಗಳು ಗೋಚರಿಸುತ್ತವೆ. ಉತ್ತಮ ಗುಣಮಟ್ಟದ, ದೀರ್ಘಕಾಲ ಬಾಳಿಕೆ ಬರುವಂತಹ ವಸ್ತುಗಳು ನಿರ್ದಿಷ್ಟ ಅಥವಾ ಜನರಿಗೆ ಕೈಗೆಟುಕುವ ಬೆಲೆಯಲ್ಲಿ ದೊರೆಯುತ್ತವೆ. ಇದರಿಂದ ವ್ಯಾಪಾರ ಮಾಡುವವರಿಗೂ, ಕೊಂಡುಕೊಳ್ಳುವ ಜನಪದರಿಗೂ ಉತ್ತಮ ಲಾಭವಾಗುತ್ತದೆ. ಹಾಗೆಯೇ ಈ ಜಾತ್ರೆಗಳು ಪರಸ್ಪರವಾಗಿ ಸಾಮುದಾಯಿಕ ಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊಳ್ಳುವಂತೆ ನಿರ್ಮಾಣ ಮಾಡುತ್ತವೆ. ಪರಸ್ಪರ ಕೂಳು ಕೊಡುಗೆಯ ಮೂಲಕ ಎಷ್ಟೋ ಒಡೆದ ಮನಸ್ಸುಗಳು ಈ ಜಾತ್ರೆಯಲ್ಲಿ ಒಂದಾಗುವುದನ್ನು ಕಾಣಬಹುದಾಗಿದೆ.

ಮುಂದುವರೆದಂತೆ ಜಾತ್ರೆಗಳಲ್ಲಿ ಕಂಡುಬರುವ ವ್ಯಾಪಾರಸ್ಥರು ಹಾಗೂ ವಹಿವಾಟಿನ ವಿಷಯವನ್ನು ಈ ಮುಂದಿನಂತೆ ಅಮೂಲಾಗ್ರವಾಗಿ ಅಭ್ಯಾಸ ಮಾಡಬಹುದಾಗಿದೆ. ಯಾವುದೇ ಜಾತ್ರೆಯಿರಲಿ ಮುಖ್ಯವಾಗಿ ಜಾತ್ರೆ ನಡೆಯುವ ಸ್ಥಳ ಅಥವಾ ಊರಿನ ಜನರಿಗೆ ಮೊದಲ ಆದ್ಯತೆ. ಊರಿನಲ್ಲಿ ಯಾರೇ ಆದರೂ ಜಾತ್ರೆ ನಡೆಯುವ ಸ್ಥಳದಲ್ಲಿ ತಮಗೆ ಇಷ್ಟ ಬರುವಂತಹ ಅಥವಾ ತಮ್ಮ ಶಕ್ತಿಯಾನುಸಾರ ವ್ಯಾಪಾರವನ್ನು ಮಾಡುವುದು ಅವರಿಗೆ ಬಿಟ್ಟ ವಿಚಾರವಾಗಿದೆ. ಸ್ಥಳೀಯರಿಗೆ ಜಾತ್ರಾ ಸ್ಥಳಗಳಲ್ಲಿ ಮುಕ್ತ ಅವಕಾಶವಿದ್ದು, ಇವರಿಗೆ ಮೊದಲ ಆದ್ಯತೆಯನ್ನು ಕಲ್ಪಿಸಿಕೊಡಲಾಗುತ್ತದೆ. ಸ್ಥಳೀಯವಾಗಿ ವ್ಯಾಪಾರ ಮಾಡುವವರು ಜಾತ್ರೆಗಿಂತ ಒಂದೆರಡು ದಿನ ಮುಂಚಿತವಾಗಿಯೇ ತಮ್ಮ ಅಂಗಡಿಯನ್ನು ತೆರೆಯುತ್ತಾರೆ. ಅಲ್ಲಿ ತಾವು ಮಾರಬಹುದಾದ ವಸ್ತುಗಳನ್ನು ಇಟ್ಟು ಅಂಗಡಿಯನ್ನು ಸುಂದರವಾಗಿ ಆಕರ್ಷಿಸುವ ನಿಟ್ಟಿನಲ್ಲಿ ಸಾಕಷ್ಟು ಪ್ರಯತ್ನಗಳು ನಡೆಯುತ್ತವೆ. ಸಾಲ ಮಾಡಿಯಾದರೂ ಅಂಗಡಿಗೆ ಬೇಕಾದಂತಹ ವಸ್ತುಗಳನ್ನು ತಂದು ವ್ಯಾಪಾರ ಮಾಡುತ್ತಾರೆ. ಅದಕ್ಕೆ ನಿಗದಿತ ಬೆಲೆಗಿಂತ ತುಸು ಹೆಚ್ಚಿನದಾಗಿಯೇ ಆ ವಸ್ತುಗಳನ್ನು ಮಾರಾಟ ಮಾಡುತ್ತಾರೆ. ಇದರಿಂದ ಅವರಿಗೆ ಅಪಾರವಾದ ಲಾಭವಾಗುತ್ತದೆ. ಇನ್ನು ಕೆಲವರು ಜಾತ್ರೆಗಳಲ್ಲಿ ಮಾತ್ರ ವ್ಯಾಪಾರ ಮಾಡುತ್ತಿದ್ದು, ಉಳಿದ ದಿನಗಳಲ್ಲಿ ತಮ್ಮ ನಿತ್ಯದ ಕೆಲಸ-ಕಾರ್ಯಗಳನ್ನು ನಿರ್ವಹಿಸುತ್ತಾರೆ. ಇಂತಹ ವ್ಯಾಪಾರ ಸಾಮಾನ್ಯವಾಗಿ ಹೋಟೆಲ್ ಮಾಡುವವರು, ಬಳೆ ಮಾರುವವರು, ಬಟ್ಟೆ ಮಾರುವವರು, ಗೃಹೋಪಯೋಗಿ ವಸ್ತುಗಳನ್ನು ಮಾರಾಟ ಮಾಡುವವರು ಕಡಿಮೆ ಬಂಡವಾಳ ಹಾಕಿ ಹೆಚ್ಚು ಲಾಭವನ್ನು ಪಡೆಯುತ್ತಾರೆ. ಮತ್ತೆ ಕೆಲವು ವ್ಯಾಪಾರಿಗಳಿಗೆ ನಷ್ಟವೂ ಸಹ ಆಗುತ್ತದೆ. ಆದರೆ ಇದೆಲ್ಲದರ ಮಧ್ಯೆ ಜನಪದರು ಈ ಸುಂದರವಾದ ಅಂಗಡಿಗಳನ್ನು ನೋಡುತ್ತ ಮೈಮರೆತು ಆ ಸಂದರ್ಭವನ್ನು ನೆನಪಿನಲ್ಲಿಟ್ಟುಕೊಂಡು ಆನಂದಪಡುತ್ತಾರೆ.

ಜಾತ್ರೆಗಳಲ್ಲಿ ನಡೆಯುವ ವ್ಯಾಪಾರದ ವಹಿವಾಟು, ಪ್ರತಿನಿತ್ಯ ಊರುಗಳಲ್ಲಿ ಅಥವಾ ಅಂಗಡಿಗಳಲ್ಲಿ ನಡೆಯುವ ವ್ಯಾಪಾರದ ವಹಿವಾಟು ಪ್ರಮಾಣ ಭಿನ್ನವಾಗಿಯೇ ಇರುತ್ತದೆ. ಇದಕ್ಕೆ ಕಾರಣ ಆಯಾ ಸಂದರ್ಭ, ಕಾಲ, ಸ್ಥಳಗಳ ಪ್ರಭಾವವೇ ಆಗಿರುತ್ತದೆ.

ಜಾತ್ರೆಗಳೆಂದ ಮೇಲೆ ಹೋಟೆಲುಗಳ ಸಂಖ್ಯೆ ಅಧಿಕವಾಗಿರುತ್ತವೆ. ಜನಪದರಿಗೆ ಒಂದು ಸಂತಸದ ಸಂಗತಿಯೆಂದರೆ ಹೋಟೆಲಿನಲ್ಲಿ ಎಲ್ಲರೂ ಸರಿಸಮನಾಗಿ ಕುಳಿತು ತಿಂಡಿ-ತಿನಿಸುಗಳನ್ನು ತಿನ್ನುವುದು. ಜಾತ್ರೆ ಎಂದ ಮೇಲೆ ಮಕ್ಕಳು-ಮರಿ ಸೇರುವುದು ಸಹಜ. ಅದರಲ್ಲೂ, ಮಕ್ಕಳು ಕಣ್ಣಿಗೆ ಕಾಣುವ ವಸ್ತುಗಳನ್ನೆಲ್ಲ ಕೇಳುತ್ತಿರುತ್ತಾರೆ. ಅವರನ್ನು ಸಮಧಾನಪಡಿಸಲು ಹಿರಿಯರು ಹೋಟೆಲುಗಳಲ್ಲಿ ಸಿಗುವಂತಹ ತಿಂಡಿಗಳನ್ನು ತಂದುಕೊಟ್ಟು ಸಮಾಧಾನಪಡಿಸುತ್ತಾರೆ. ಇದರಿಂದ ಮಕ್ಕಳಿಗೂ ಒಂದು ಸಂತಸದ ಅನುಭವವಾಗುತ್ತದೆ. ಬಗೆ ಬಗೆಯ ಭಕ್ತರುಗಳು ಜಾತ್ರೆಯಲ್ಲಿ ಸಿಗುವುದರಿಂದ ಜನಪದರು ನೋಡಿ ಕಂಡರಿಯದಂತಹ ಸಿಹಿ ಹಾಗೂ ಖಾರದ ತಿನಿಸುಗಳು ಸಿಗುತ್ತವೆ. ಹೋಟೆಲ್ ಮಾಲೀಕರು ಜನರನ್ನು ಮಂತ್ರ ಮುಗ್ಧರನ್ನಾಗಿಸಲು ಅಂತಹ ಹಲವಾರು ಬಗೆಯ ತಿಂಡಿ ಪದಾರ್ಥಗಳನ್ನು ಮಾಡಿ ಜನರಿಗೆ ಕೈ ಮಾಡಿ ತೋರಿಸಿ, ಅದರ ರುಚಿ ಹೀಗದೆ, ಈ ಪದಾರ್ಥವನ್ನು ತಿಂದರೆ ಸ್ವರ್ಗವನ್ನು ಪಡೆದಂತಾಗುತ್ತದೆ. ಇಂತಹ ಪದಾರ್ಥಗಳು ದೂರದ ನಗರಗಳಲ್ಲಿ ದೊರೆಯುವಂತಹವು ಈಗ ನಿಮ್ಮಲ್ಲಿಗೆ ಬಂದಿವೆ. ಕಡಿಮೆ ದರದಲ್ಲಿ ಈ ಸವಿಯನ್ನು ಸವಿಯಬಹುದು ಎಂದು ಜಾಹಿರಾತಿನಂತೆ ಕೂಗಿಕೊಳ್ಳುತ್ತಾರೆ. ಇಂತಹ ಕೂಗನ್ನು ಕೇಳಿದ ಜನರು ಅವುಗಳ ಮೇಲೆ ಆಸೆಯಾಗಿ ಹಣ ಎಷ್ಟಾದರೂ ಖರ್ಚಾಗಲಿ ಎಂದು ಹೋಟೆಲ್‌ಗಳಿಗೆ ನುಗ್ಗಿ ತಿಂದು ಬರುತ್ತಾರೆ. ಇದರಿಂದ ಹೋಟೆಲುಗಳು ಕೆಲವೇ ದಿನಗಳಲ್ಲಿ ಆರ್ಥಿಕವಾಗಿ ಸುಸ್ಥಿತಿಗೆ ಬಂದು ಲಾಭದಾಯಕವಾಗಿ, ವೈಯಕ್ತಿಕ ಬೆಳವಣಿಗೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತವೆ.

ಜಾತ್ರೆಗಳೆಂದರೆ ಅಲ್ಲಿನ ಸುತ್ತಮುತ್ತಲಿನ ಪ್ರದೇಶ ಅಥವಾ ಜಾತ್ರಾ ನಡೆಯುವ ಸ್ಥಳ ಸಾಮಾನ್ಯವಾಗಿಯೇ ಗಲೀಜಿನಿಂದ ಕೂಡಿರುತ್ತದೆ. ಅದೇ ಸ್ಥಳದಲ್ಲಿ ಹೋಟೆಲಿನವರು ತಾವು ತಯಾರಿಸಿದಂತಹ ಅಥವಾ ತಯಾರಿಸಿಕೊಂಡು ತಂದಂತಹ ತಿಂಡಿ ಪದಾರ್ಥಗಳನ್ನು ಅಲ್ಲಿಯೇ ಇಟ್ಟು ಮಾರುತ್ತಿರುತ್ತಾರೆ. ಜಾತ್ರೆಗೆ ಬಂದಿರುವಂತಹ ಜನರು ನಡೆದಾಡಿದ ನೆಲದ ಧೂಳು, ಸೊಳ್ಳೆ, ನೊಣಗಳು ಹಾಗೂ ಇತರೆ ಸಾಂಕ್ರಾಮಿಕ ರೋಗಗಳನ್ನು ಹರಡುವ ಜೀವರಾಶಿಯಿದ್ದರೂ ಅದನ್ನೆಲ್ಲ ಲೆಕ್ಕಿಸದೆ ಜನಪದರು ಪದಾರ್ಥಗಳ ಆಸೆಗೆ ಬಲಿಯಾಗಿ ಅನಾರೋಗ್ಯಕ್ಕೆ ತುತ್ತಾಗುವುದು ಸಹ ಸಾಮಾನ್ಯ ಸಂಗತಿಯಾಗಿದೆ. ಸ್ವಚ್ಛತೆ ಇಲ್ಲದಿರುವ ಆ ಸ್ಥಳದಲ್ಲಿ ಜನಪದರ ಮನಸ್ಸು ಮಾತ್ರ ಯಾವುದೇ ಕಲ್ಮಶವಿಲ್ಲದೆ ಅಲ್ಲಿನ ಸವಿಯನ್ನು ಮನಸಾರೆ ಸವಿದು ಆನಂದಪಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಸಾಮಾಜಿಕ ಪ್ರಜ್ಞೆ

ಮೂಡುತ್ತಿದ್ದು, ಹೀಗೆ ಬೀದಿಗಳಲ್ಲಿ ದೊರೆಯಬಹುದಾದ ಹಾಗೂ ಸ್ವಚ್ಛತೆಯಿಲ್ಲದೆ ದೊರೆಯಬಹುದಾದ ತಿಂಡಿ-ತಿನಿಸುಗಳನ್ನು ತಿನ್ನುವುದು ಕಡಿಮೆ ಮಾಡಿದ್ದಾರೆ. ಜೊತೆಗೆ ಸಮಾಜದಲ್ಲಿ ನಡೆಯುವ ಅಕಾಲಿಕ ಘಟನೆಗಳು ಜನರಲ್ಲಿ ಜಾಗ್ರತೆಯನ್ನು ಉಂಟುಮಾಡುತ್ತಿದ್ದು, ಜನಪದರು ಎಚ್ಚೆತ್ತುಕೊಂಡು ವರ್ತಿಸುತ್ತಿದ್ದಾರೆ ಎನ್ನಬಹುದು.

ಹೋಟೆಲುಗಳ ಹಾವಳಿಯಂತೆ ಜಾತ್ರೆಗಳಲ್ಲಿ ನೋಡಬಹುದಾದ ಮತ್ತೊಂದು ಸಂಗತಿಯೆಂದರೆ ಹೂ-ಹಣ್ಣಿನ ವ್ಯಾಪಾರ. ತಂಪು ಪಾನೀಯಗಳ ವ್ಯಾಪಾರ. ಹೂ ಮಾರಾಟ ಮಾಡುವವರು ಹೂವು ಹಾಗೂ ಹೂಮಾಲೆಗಳನ್ನು ದುಬಾರಿ ಬೆಲೆಯಲ್ಲಿ ಮಾರಾಟ ಮಾಡುತ್ತಿರುತ್ತಾರೆ. ತಮ್ಮ ಹೊಲ-ಗದ್ದೆಗಳಲ್ಲಿ ಸಾರ್ವತ್ರಿಕವಾಗಿ ದೊರೆಯುವಂತಹ ಹೂವುಗಳನ್ನು ತಂದು ಮಾಲೆ ಮಾಡಿ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುತ್ತಾರೆ. ಜಾತ್ರೆ ಎಂದ ಮೇಲೆ ಭಕ್ತರು ದೇವರಿಗೆ ಕೊಂಡೊಯ್ಯಲು ಎಷ್ಟೇ ಬೆಲೆಯಾದರೂ ಕೊಳ್ಳುತ್ತಾರೆ ಎಂಬ ಭಾವನೆಯಿಂದ ತಮಗೆ ತೋಚಿದಂತೆ ಬೆಲೆ ನಿಗದಿಪಡಿಸಿ ಯಾವುದೇ ಚೌಕಾಸಿಯಿಲ್ಲದೆ ಜನಪದರನ್ನು ಸುಲಿಗೆ ಮಾಡುತ್ತಾರೆ. ಇದೊಂದು ರೀತಿಯಲ್ಲಿ ದೇವರ ಹೆಸರಿನಲ್ಲಿ ವ್ಯಾಪಾರಸ್ಥರು ಮಾಡುವ ಹಗಲು ದರೋಡೆಯಿದ್ದಂತೆ ಎಂದು ಕರೆಯಬಹುದು. ಎಷ್ಟೋ ಜನರು ದೇವರ ದರ್ಶನಕ್ಕೆಂದು ಕಾಲುನಡಿಗೆಯಿಂದ, ಬಂಡಿಗಳನ್ನು ಕಟ್ಟಿಕೊಂಡು ಮಕ್ಕಳು, ಕುಟುಂಬ, ಹಿರಿಯರು-ಕಿರಿಯರುಗಳನ್ನೆಲ್ಲ ದೂರದ ಊರುಗಳಿಂದ ಆಯಾಸಪಟ್ಟುಕೊಂಡು ಬರುತ್ತಾರೆ. ಆದರೆ ಜಾತ್ರೆ ನಡೆಯುವ ಸ್ಥಳದಲ್ಲಿನ ಸಮಾಜದ ವ್ಯವಸ್ಥೆಯು ಅವರ ಆಸೆಗಳಿಗೆ ತಣ್ಣೀರು ಎರಚುವಂತಹ ಕೆಲಸ ಮಾಡುತ್ತಿರುತ್ತದೆ.

ಅದೇ ತೆರನಾಗಿ ಹಣ್ಣು-ಕಾಯಿಯ ವ್ಯಾಪಾರಿಗಳು ಸಹ ಜನರನ್ನು ವಂಚಿಸುತ್ತಾರೆ. ಕೇವಲ ಒಂದು ಅಥವಾ ಎರಡೇ ದಿನಗಳಲ್ಲಿ ಪ್ರತಿನಿತ್ಯದ ಲಾಭಕ್ಕಿಂತ ಹೆಚ್ಚಿಗೆ ದುಡಿಯುತ್ತಾರೆ. ಜಾತ್ರೆ ನಡೆಯುವುದು ಕೆಲವು ಗಂಟೆಗಳು ಮಾತ್ರ, ಅಂದರೆ ಜಾತ್ರೆಯಲ್ಲಿ ಉತ್ಸವ ಅಥವಾ ಮೆರವಣಿಗೆಯ ಸಂದರ್ಭದಲ್ಲಿ ಭಕ್ತರು ಹಣ್ಣುಗಳನ್ನು ತರುವುದರ ಮೂಲಕ ತಮ್ಮ ಭಕ್ತಿಯನ್ನು ಪ್ರದರ್ಶಿಸುತ್ತಾರೆ. ದೇವರ ಪೂಜೆಗೆಂದು ಹಣ್ಣುಗಳನ್ನು ಕೊಂಡೊಯ್ಯುತ್ತಾರೆ. ಮುಖ್ಯವಾಗಿ ಜಾತ್ರೆಗಳಲ್ಲಿ ದೇವರಿಗೆಂದೇ ಬೇಕಾಗುವ ಅಮೂಲ್ಯ ವಸ್ತುಗಳೆಂದರೆ ಹೂವು, ಹಣ್ಣು, ಕಾಯಿ ಹಾಗಾಗಿ ಜಾತ್ರೆಗಳಲ್ಲಿ ಈ ಮೂಲ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಸ್ಥರೇ ಬಹಳಷ್ಟು ಜನರಿರುತ್ತಾರೆ. ಬೇರೆ ಎಲ್ಲಾ ವ್ಯಾಪಾರಸ್ಥರಿಗಿಂತ ಹೂವು, ಹಣ್ಣು, ಕಾಯಿ ಮಾರುವವರು ಹತ್ತಿರ ಭಕ್ತರು ಮೊದಲು ಭಕ್ತಿ ನೀಡುತ್ತಾರೆ. ಯಾಕೆಂದರೆ ದೇವರ ಪೂಜೆ ಮೊದಲು. ವ್ಯಾಪಾರ, ವ್ಯವಹಾರ ನಂತರದ ಮಾತು ಆದ್ದರಿಂದ ಹೂವು, ಹಣ್ಣು, ಕಾಯಿ ಮಾರುವವರು ಅಂದು ಮಹತ್ವದ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ನಂತರ ತಂಪು ಪಾನೀಯವನ್ನು

ಮಾರಾಟ ಮಾಡುವವರೂ ಜಾತ್ರೆಯಲ್ಲಿ ಮುಖ್ಯರಾಗುತ್ತಾರೆ. ಜನರು ಬಿಸಿಲಿನ ದಾಹವನ್ನು ನೀಗಿಸಿಕೊಳ್ಳಲು ಜಾತ್ರೆ ನಡೆಯುವ ಸ್ಥಳದಲ್ಲಿ ಸೂಕ್ತವಾದ ನೀರಿನ ವ್ಯಾಪಾರಸ್ಥ ಇರುವುದಿಲ್ಲ. ನೀರಿನ ವ್ಯವಸ್ಥೆಯನ್ನು ಕಲ್ಪಿಸಿದ್ದರೂ ಕೆಲವರು ಶೋಕಿಗೆಂದು ಬಂದಂತವರು. ತಮ್ಮ ಘನತೆಯನ್ನು ಪ್ರದರ್ಶಿಸಲು ತಂಪು ಪಾನಿಯ ಬಾಟಲಿಗಳನ್ನು ಹಿಡಿದುಕೊಂಡು ಜಂಭದಿಂದ ಕುಡಿಯುತ್ತಾರೆ. ಇದು ಜಾತ್ರೆಗಳಲ್ಲಿ ಕಾಣಬಹುದಾದ ಒಂದು ವಿಶೇಷತೆಯೇ ಆಗಿದೆ. ವಿವಿಧ ಜಾತಿಯ ಹಣ್ಣುಗಳಿಂದ ಪಾನೀಯ ತಯಾರಿಸಿ ಅದಕ್ಕೆ ನೀರು ಬೆರೆಸಿ ಸ್ವಲ್ಪ ಇರುವುದನ್ನು ಬಹಳಷ್ಟು ಮಾಡಿ ಮಾರುವುದು ಅಥವಾ ಕೂಡುವುದು. ಇಂತಹ ಪಾನಿಯಗಳು ಜನಪದರಿಗೆ ನಿತ್ಯವೂ ದೊರೆಯಲಾರವು. ದಿನನಿತ್ಯ ಮನೆಗಳಲ್ಲಿ ಟೀ, ಉತ್ಸವಗಳಲ್ಲಿ ಬರುವಂತಹ ಪಾನಿಯಗಳನ್ನು ಅತ್ಯಂತ ವಿಶೇಷತೆಯಿಂದ ಸೇವಿಸಿ, ಸಂತಸಪಡುತ್ತಾರೆ. ಜೊತೆಗೆ ಆ ಪಾನಿಯಗಳನ್ನು ಹೊಗಳುವುದು, ತೆಗಳುವುದು ಸಾಮನ್ಯವೆ. ಜಾತ್ರೆ ಎಂದರೆ ದುಂದುವೆಚ್ಚಕ್ಕೆ ಸೂಕ್ತ ಸ್ಥಳವಾಗಿದೆ. ಜನಪದರು ತಾವು ಗಳಿಸಿದ ಹಣವನ್ನು ಈ ಜಾತ್ರೆಯ ದಿನ ಹಲವಾರು ಕಾರಣಗಳಿಗೆ ಖರ್ಚು ಮಾಡುತ್ತಾರೆ. ಬಹುಶಃ ಈ ರೀತಿಯ ಕಾರ್ಯ ವೈಖರಿಯನ್ನು ಗಮನಿಸಿಯೇ ಹಿರಿಯರು ಜಾತ್ರೆಯು ದುಂದುವೆಚ್ಚದ ಸೂಕ್ತ ಸ್ಥಳವೆಂದು ಹೇಳಿರಬಹುದು. ಸಾಮಾನ್ಯವಾಗಿ ಜನಪದರ ಬದುಕಿನಲ್ಲಿ ಕಾಣುವ ಹಣ್ಣು-ಹಂಪಲುಗಳಿಂದ ಜಾತ್ರೆಗಳಲ್ಲಿ ಅಮೂಲ್ಯವಾಗಿ ದೊರೆಯುವ, ವಿಶೇಷವಾಗಿ ಬೆಳೆಸಿದಂತಹ ಹಣ್ಣು-ಹಂಪಲುಗಳನ್ನು ನೋಡಿ ಅದರ ಮೇಲಿನ ಆಕರ್ಷಣೆಯಿಂದ ಹಣ ಎಷ್ಟಾದರೂ ಸರಿಯೇ ಕೊಳ್ಳುತ್ತಾರೆ.

ಗೃಹ ಉಪಯೋಗಿ ವಸ್ತುಗಳು ಜಾತ್ರೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗುತ್ತವೆ. ಮಡಿಕೆ-ಕುಡಿಕೆ, ಪಾತ್ರೆ ಸಾಮಾನುಗಳು, ಅಡುಗೆ ಸಾಮಾನುಗಳು, ಬುಟ್ಟಿ ಬಕೇಟು, ಒಲೆ, ಅಂಚು ಇತ್ಯಾದಿ ಅನೇಕ ಗೃಹ ಬಳಕೆಗೆ ಬೇಕಾಗುವಂತಹ ಹಲವಾರು ವಸ್ತುಗಳು ಜಾತ್ರೆಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಜನಪದರು ಅಂತಹ ವಸ್ತುಗಳನ್ನು ಖರೀದಿಸಿ ತಮ್ಮ ಮನೆಗಳಿಗೆ ಕೊಂಡೊಯ್ಯುತ್ತಾರೆ. ಸಾಮಾನ್ಯ ಅಡುಗೆಗಳಲ್ಲಿ ಕೆಲವೇ ಕೆಲವು ವಸ್ತುಗಳು ದೊರೆಯುತ್ತಿದ್ದು, ಅಲ್ಲಿನ ಬೆಲೆಯು ದುಬಾರಿಯಾಗಿರುತ್ತದೆ. ಹೀಗಾಗಿ ಜನರು ವರ್ಷದಲ್ಲಿ ನಡೆಯುವ ಜಾತ್ರೆಗಳಿಗಾಗಿ ಕಾದು ಜಾತ್ರೆಯ ಸಂದರ್ಭದಲ್ಲಿ ತಮಗೆ ಬೇಕಾಗುವಂತಹ ಉಪಯುಕ್ತ ವಸ್ತುಗಳನ್ನು ಸೂಕ್ತ ಬೆಲೆ ನೀಡಿ ಕೊಂಡುಕೊಳ್ಳುತ್ತಾರೆ. ಆಧುನಿಕ ಸಂದರ್ಭದಲ್ಲಿ ಇಂತಹ ವಸ್ತುಗಳು ವಿಭಿನ್ನ ಶೈಲಿಗಳಲ್ಲಿ ದೊರೆಯುತ್ತಿದ್ದು, ಬದಲಾವಣೆಯ ಹಿತಾಸಕ್ತಿಗೆ ಹೊಂದಾಣಿಕೆಯಾಗುವಂತಹ ವಸ್ತುಗಳು ಮಾರಾಟಕ್ಕೆ ಲಭ್ಯವಿರುತ್ತವೆ. ಸ್ವಚ್ಛತೆ, ಶುಭ್ರತೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿರುವ ಈ ಕಾಲದಲ್ಲಿ ಮಣ್ಣಿನ ಮಡಿಕೆಗಳಿಂದ, ಕಟ್ಟಿಗೆಯ ಒಲೆಗಳನ್ನು ಉಪಯೋಗಿಸುತ್ತಿರುವುದು ಕಡಿಮೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ಆಧುನಿಕತೆ

ತಲೆದೂರಿ ಹಳ್ಳಿಯ ಮನೆಗಳಲ್ಲೂ ಆಧುನಿಕ ಯಂತ್ರೋಪಕರಣಗಳು ಕಂಡುಬರುತ್ತವೆ. ಗ್ಯಾಸ್, ಮಿಕ್ಸರ್, ಸ್ಟೀಲ್ ವಸ್ತುಗಳು, ಬಟ್ಟೆ ತೊಳೆಯುವ ವಸ್ತುಗಳು, ವಸ್ತುಗಳನ್ನು ತಂಪಾಗಿಡಲು ಫ್ರಿಡ್ಜ್‌ಗಳು, ಪ್ಲಾಸ್ಟಿಕ್ ವಸ್ತುಗಳು ಹೀಗೆ ಯಂತ್ರಗಳಿಂದ ತಯಾರಾದ ಆಧುನಿಕ ಗೃಹ ಉಪಯೋಗಿ ವಸ್ತುಗಳ ಅಬ್ಬರ ಹೆಚ್ಚಾಗಿದ್ದು, ಜನರಲ್ಲಿ ಹೊಸತನ, ಚೈತನ್ಯದಾಯಕ ಜೀವನ, ಉಡುಗೆ–ತೊಡುಗೆ, ಆಹಾರ, ರೀತಿ–ನೀತಿಗಳು ಎಲ್ಲವೂ ಕಾಲಕ್ಕೆ ತಕ್ಕಂತೆ ರೂಪಾಂತರ ಹೊಂದುತ್ತಿವೆ. ಹೀಗಾಗಿ ದೊಡ್ಡ ದೊಡ್ಡ ಜಾತ್ರೆಗಳಲ್ಲಿ ಮಾತ್ರ ಇಂತಹ ವ್ಯಾಪಾರಗಳು ನಡೆಯುತ್ತಿದ್ದು, ಕೆಲವು ಸಣ್ಣ ಪ್ರಮಾಣದ ಜಾತ್ರೆಗಳಲ್ಲಿ ಇಂತಹ ವಸ್ತುಗಳು ಕಾಣುವುದಿಲ್ಲ. ಕೇವಲ ಕಡಿಮೆ ಪ್ರಮಾಣದ ವಸ್ತುಗಳು ಮಾತ್ರ ಲಭ್ಯವಿರುತ್ತವೆ. ಇನ್ನುಳಿದಂತೆ ಖಾಸಗಿ ಅಂಗಡಿಗಳಲ್ಲಿಯೇ ಅಂತಹ ವಸ್ತುಗಳನ್ನು ಖರೀದಿಸಬೇಕು.

ಹಿಂದಿನ ಕಾಲದಲ್ಲಿ ಅಂದರೆ ಸುಮಾರು ೪೦–೫೦ ವರ್ಷಗಳಿಗಿಂತ ಹಿಂದೆ ಅಥವಾ ಅದಕ್ಕೂ ಹಿಂದೆ ಜಾತ್ರೆಗಳಲ್ಲಿ ದವಸ–ಧಾನ್ಯಗಳ ಮಾರಾಟಕ್ಕೆ ಪ್ರಸಿದ್ಧಿಯನ್ನು ಪಡೆದಿರುತ್ತಿದ್ದವು. ಕೆಲವು ಜಾತ್ರೆಗಳಲ್ಲಿ ರಾಗಿ, ಜೋಳ, ಅಕ್ಕಿ, ಗೋಧಿ, ಸಾಂಬಾರ ಪದಾರ್ಥಗಳು, ಕಾಳು–ಕಡಿಗಳು ದೊರೆಯುತ್ತಿದ್ದವು. ಒಂದೊಂದು ಭಾಗದ ಜಾತ್ರೆಗಳಲ್ಲಿ ಒಂದೊಂದು ವರ್ಗಕ್ಕೆ ವಿಶೇಷತೆ ಇರುತ್ತಿತ್ತು. ಜನರು ಆ ಸಂದರ್ಭಕ್ಕಾಗಿ ಕಾದು ಜಾತ್ರೆಯ ದಿನದಂದು ಅನತಿ ದೂರದಿಂದ ಗಾಡಿಗಳ ಮೂಲಕ ತಮಗೆ ಅಗತ್ಯವಿರುವ ದವಸ–ಧಾನ್ಯಗಳನ್ನು ವರ್ಷಪೂರ್ತಿ ಉಪಯೋಗವಾಗುವಂತೆ ಕೊಂಡೊಯ್ಯುತ್ತಿದ್ದರು. ಹಾಗೆಯೇ ಹೆಚ್ಚಾಗಿ ಬೆಳೆದಂತಹ ಬೆಳೆಗಾರರು ಜಾತ್ರೆಗಳಲ್ಲಿ ಅವರು ಬೆಳೆದಂತಹ ಫಸಲುಗಳನ್ನು ತಂದು ವ್ಯಾಪಾರ ಮಾಡುತ್ತಿದ್ದರು. ಅಷ್ಟೇ ಅಲ್ಲದೆ ದವಸ–ಧಾನ್ಯಗಳನ್ನು ವ್ಯಾಪಾರ ಮಾಡುವ ವ್ಯಾಪಾರಸ್ಥರು ಸಹ ಜಾತ್ರೆಗಳಲ್ಲಿ ತಮ್ಮ ಅಂಗಡಿಗಳನ್ನು ತೆರೆಯುತ್ತಿದ್ದರು. ಹೆಚ್ಚಾಗಿ ದವಸ–ಧಾನ್ಯಗಳು ಬೇಕಾಗಿರುವವರು ಹರಾಜಿನಲ್ಲಿ ಬೆಲೆಕಟ್ಟಿ ತಮಗೆ ಬೇಕಾದ ದವಸ–ಧಾನ್ಯಗಳನ್ನು ಕೊಂಡೊಯ್ಯುತ್ತಿದ್ದರು. ಮಹಿಳೆಯರು ಅಡುಗೆಗೆ ಬೇಕಾದಂತಹ ಸಾಂಬಾರು ಪದಾರ್ಥಗಳನ್ನು ದೀರ್ಘಕಾಲ ಬಳಕೆಗೆ ಬೇಕಾಗುವಷ್ಟು ವಸ್ತುಗಳನ್ನು ಒಮ್ಮೆಗೆ ತೆಗೆದುಕೊಂಡು ಹೋಗುತ್ತಿದ್ದರು. ಅಂದರೆ ಅಂತಹವರು ಆರ್ಥಿಕವಾಗಿ ಸುಸ್ಥಿತಿಯಲ್ಲಿರುವವರು ಮಾತ್ರ ಹೆಚ್ಚಾಗಿ ಕೊಂಡೊಯ್ಯುತ್ತಿದ್ದರು. ಆದರೆ ಆಧುನಿಕ ಸಂದರ್ಭದಲ್ಲಿ ಜಾತ್ರೆಗಳಲ್ಲಿ ಈ ರೀತಿಯ ದವಸ–ಧಾನ್ಯಗಳು, ವ್ಯಾಪಾರ–ವಹಿವಾಟು ಕಡಿಮೆಯಾಗುತ್ತಿದೆ. ಯಾಕೆಂದರೆ ಸರ್ಕಾರ ಜನರಿಗೆ ಅಗತ್ಯ ವಸ್ತುಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ಜನಸಾಮಾನ್ಯರಿಗೆ ಕೈಗೆಟುಕುವ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದು, ಜನರ ಅಗತ್ಯ ವಸ್ತುಗಳನ್ನು ಅಲ್ಲಿಯೇ ಕೊಳ್ಳುತ್ತಾರೆ. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ವಾರಕ್ಕೊಮ್ಮೆ ನಡೆಯುವ ಸಂತೆಗಳಲ್ಲಿಯೂ ತಮಗೆ ಅಗತ್ಯವಾದ ವಸ್ತುಗಳು ಹೇರಳವಾಗಿ ದೊರೆಯುತ್ತವೆ.

ಜನರು ಇಂತಹ ಪ್ರದೇಶಗಳಲ್ಲಿ ಅಗತ್ಯವಿದ್ದಷ್ಟು ಧಾನ್ಯಗಳನ್ನು ಕೊಂಡೊಯ್ಯುತ್ತಾರೆ. ಹೀಗಾಗಿ ಇಂದಿನ ಜಾತ್ರೆಗಳಲ್ಲಿ ಕೇವಲ ಬೇರೆ ಬೇರೆ ವಸ್ತುಗಳ ವಹಿವಾಟೇ ಅಧಿಕವಾಗಿರುತ್ತದೆ. ಇದಕ್ಕೆ ಮತ್ತೊಂದು ಪ್ರಮುಖ ಕಾರಣವೇನೆಂದರೆ ಇತ್ತೀಚಿನ ಜಾತ್ರೆಗಳಲ್ಲಿ ಜಾತ್ರಾ ಸಮಿತಿಯವರು ವ್ಯಾಪಾರಕ್ಕೆ ಬರುವಂತಹ ವ್ಯಾಪಾರಸ್ಥರು ತೆರಿಗೆ (ಜಕಾತಿ)ಯನ್ನು ವಸೂಲಿ ಮಾಡುತ್ತಿದ್ದು, ಒಮ್ಮೊಮ್ಮೆ ವ್ಯಾಪಾರಕ್ಕಿಂತ ತೆರಿಗೆಯೇ ಅವರಿಗೆ ಹೆಚ್ಚಾಗಿರುತ್ತದೆ. ಕೆಲವೊಮ್ಮೆ ತಾವು ತಂದಂತಹ ವಸ್ತುಗಳು ಸರಿಯಾದ ಬೆಲೆಗೆ ಮಾರಾಟವಾಗದೆ ತಂದಂತಹ ವಸ್ತುಗಳು ಹಾಗೆ ಉಳಿದರೆ ಅದರಿಂದ ನಷ್ಟವಾಗುವುದು ವ್ಯಾಪಾರಸ್ಥರಿಗೆ ಸೇರುತ್ತದೆ. ಇದರಿಂದ ಕೆಲವು ವ್ಯಾಪಾರಿಗಳು ಜಾತ್ರೆ ನಡೆಯುವ ಸ್ಥಳ, ಅಲ್ಲಿನ ವಿಶೇಷತೆ, ಸೇರುವ ಜನಸಂಖ್ಯೆ ಇವುಗಳನ್ನೆಲ್ಲ ಮೊದಲೇ ತಿಳಿದು ನಂತರ ತಮ್ಮ ವಹಿವಾಟಿನ ಅಂಗಡಿಗಳನ್ನು ಅಲ್ಲಿ ತೆರೆಯಲು ಮುಂದಾಗುತ್ತಾರೆ. ಇದರಿಂದ ಮುಂಜಾಗ್ರತೆಯಾಗಿಯೇ ಆಗುವಂತಹ ಅನಾಹುತಗಳನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಜಾತ್ರೆಗಳಲ್ಲಿ ಗಮನಿಸಬಹುದಾದ ಮತ್ತೊಂದು ಅಂಶವೆಂದರೆ ಜಾತ್ರೆಗಳಲ್ಲಿ ಕಾಣುವ ವಸ್ತು ಪ್ರದರ್ಶನಗಳು, ಪ್ರಾಣಿ ಸಂಗ್ರಹಾಲಯಗಳು, ಸರ್ಕಸ್ ಕಂಪನಿಗಳು, ಕುದುರೆ ಸವಾರಿ, ತೊಟ್ಟಿಲು ಸರ್ಕಸ್ ಮುಂತಾದ ಕಲೆಗಳ ಪ್ರದರ್ಶನಗಳ ಜೊತೆಗೆ ನಾಟಕ ಕಂಪನಿಗಳು ಜಾತ್ರೆ ಸಂದರ್ಭದಲ್ಲಿ ವಿಶೇಷ ತಯಾರಿ ಮಾಡಿಕೊಂಡು ಉತ್ತಮ ನಾಟಕಗಳನ್ನು ಅಭಿನಯಿಸುವುದರ ಮೂಲಕ ತಮ್ಮ ಜೀವನವನ್ನು ಸಾಗಿಸುತ್ತಿರುತ್ತಾರೆ. ಕಾಡಿನಲ್ಲಿರುವ ಪ್ರಾಣಿಗಳನ್ನು ತಂದು ಅವುಗಳನ್ನು ಸೂಕ್ತ ರಕ್ಷಣೆಯಲ್ಲಿಟ್ಟು ಜಾತ್ರೆಗೆ ಬಂದಂತಹ ಜನರನ್ನು ಆಕರ್ಷಿಸುವುದು ಅವರ ಕೆಲಸ. ಪ್ರಾಣಿಗಳನ್ನು ನೋಡಲು ನಿಗದಿತ ದರವನ್ನು ನಿಗದಿಪಡಿಸಿರುತ್ತಾರೆ. ಸಾಮಾನ್ಯವಾಗಿ ಜಾತ್ರೆಗಳಲ್ಲಿ ಹುಲಿ, ಸಿಂಹ, ಆನೆ, ನರಿ, ತೋಳ, ಕರಡಿ, ಜಿರಾಫೆ, ಮೊಸಳೆ ಮುಂತಾದ ಕಾಡುಪ್ರಾಣಿಗಳನ್ನು ಹಿಡಿದು ತಂದು ಅವುಗಳನ್ನು ಪ್ರದರ್ಶಿಸುವ ಮೂಲಕ ಹಣ ಗಳಿಸುತ್ತಾರೆ. ಜನರಾದರೂ ಇಂತಹ ಪ್ರಾಣಿಗಳನ್ನು ಸಾಮಾನ್ಯವಾಗಿ ಬೇರೆ ದಿನಗಳಲ್ಲಿ ನೋಡಲು ಸಾಧ್ಯವಿಲ್ಲ. ಆದುದರಿಂದ ಜಾತ್ರೆಗಳಿಗೆ ಬಂದಂತಹ ಪ್ರಾಣಿ ಸಂಗ್ರಹಾಲಯಗಳಲ್ಲಿ ಆ ಪ್ರಾಣಿಗಳನ್ನು ನೋಡಿ ಆನಂದಿಸುತ್ತಾರೆ. ಇತ್ತೀಚಿನ ಸರ್ಕಾರದ ಕಟ್ಟುನಿಟ್ಟಿನ ಕಾನೂನಿನ ನಿಯಮಗಳಿಂದ ಇಂತಹ ಪ್ರಾಣಿಗಳ ಪ್ರದರ್ಶನಗಳನ್ನು ನಿಲ್ಲಿಸಲಾಗಿದೆ. ಹೀಗಾಗಿ ಈಗ ಅಂತಹ ಪ್ರಾಣಿಗಳನ್ನು ನೋಡಬೇಕೆಂದರೆ ದೊಡ್ಡ ದೊಡ್ಡ ನಗರ ಪ್ರದೇಶಗಳಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಸರ್ಕಾರದ ಕಾನೂನಿನ ಚೌಕಟ್ಟಿನೊಳಗೆ ಸೂಕ್ತ ಸಂಗ್ರಹಾಲಯವನ್ನು ಕಟ್ಟಿಕೊಂಡು ಅಲ್ಲಿ ಪ್ರಾಣಿಗಳನ್ನು ಪ್ರದರ್ಶನಕ್ಕೆ ಇಟ್ಟಿರುತ್ತಾರೆ. ಹಾಗೆಯೇ ಸರ್ಕಸ್ ಕಂಪನಿಗಳು ವಿವಿಧ ಆಟಗಳನ್ನು ಪ್ರದರ್ಶಿಸುವುದರ ಮುಖಾಂತರ ಜನರಿಗೆ

ಮನರಂಜನೆಯನ್ನು ನೀಡುವಂತವುಗಳಾಗಿವೆ. ಜನರನ್ನು ಒಂದೆರಡು ಗಂಟೆಗಳ ಕಾಲ ಮೈನರಳಿಸುವ ಆಟಗಳಲ್ಲಿ ತಲ್ಲೀನರಾಗುವಂತೆ ಈ ಸರ್ಕಸ್ ಕಂಪನಿಗಳು ತಮ್ಮ ಪ್ರದರ್ಶನಗಳನ್ನು ನೀಡುತ್ತಿರುತ್ತಾರೆ. ಹೆಣ್ಣು-ಗಂಡು, ಮಕ್ಕಳು ಹೀಗೆ ಆಯಾ ವಯೋಮಾನಕ್ಕೆ ತಕ್ಕಂತೆ ಅವರು ಕಸರತ್ತು ನಡೆಸಿ ಕಲಿತಂತಹ ಕಲೆಗಳನ್ನು ಈ ಸರ್ಕಸ್‌ನಲ್ಲಿ ಪ್ರದರ್ಶಿಸುತ್ತಾರೆ. ಅಲ್ಲಿ ಯಾವುದೇ ರೀತಿಯ ಅಪಾಯಕಾರಿ ಪ್ರದರ್ಶನಗಳು ನಡೆಯುವುದಿಲ್ಲ. ಸರ್ಕಸ್ ಮಾಡುವವರು ಎಲ್ಲಾ ರೀತಿಯಿಂದಲೂ ಸೂಕ್ತ ರಕ್ಷಣೆಯನ್ನು ಪಡೆದುಕೊಂಡೇ ತಮ್ಮ ಕಲೆಯನ್ನು ಪ್ರದರ್ಶಿಸುತ್ತಾರೆ. ಆದರೆ ಅದನ್ನು ನೋಡುಗರಿಗೆ ಮಾತ್ರ ಆಶ್ಚರ್ಯಕರವಾಗಿರುತ್ತದೆ. ಅವರು ಅಷ್ಟೊಂದು ಕ್ರಿಯಾಶೀಲರಾಗಿ ತಮ್ಮ ಆಟವನ್ನು ಪ್ರದರ್ಶಿಸುತ್ತಾರೆ. ಇಂತಹ ಪ್ರದರ್ಶನಗಳಿಂದ ಜಾತ್ರೆಗೆ ಬಂದಂತಹ ಜನರಿಗೂ ವರ್ಷವಿಡಿ ದುಡಿದು ಬೇಸತ್ತ ಮನಸ್ಸಿಗೆ ಈ ಸಂದರ್ಭದಲ್ಲಿ ಮುದವನ್ನು, ಉಲ್ಲಾಸವನ್ನು, ಆನಂದವನ್ನು, ಮನೋರಂಜನೆಯನ್ನು ನೀಡುವ ತಾಣವಾಗಿ ಸಾಕಷ್ಟು ಪ್ರಾಮುಖ್ಯತೆಯನ್ನು ಪಡೆದಿದೆ.

ಇನ್ನೂ ಕುದುರೆ ಸವಾರಿ, ತೊಟ್ಟಿಲು ಸರ್ಕಸ್, ರಾಟೆ ತಿರುಗಿಸುವ ಆಟಗಳು ಮಕ್ಕಳನ್ನು ಆಕರ್ಷಿಸುವಂತಹ ಕಲೆಗಳು ಜಾತ್ರೆಗಳಿಗೆ ಬಂದಂತಹ ಜನರು ತಮ್ಮ ಮಕ್ಕಳನ್ನು ಇಂತಹ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಮಕ್ಕಳನ್ನು ಸಂತೋಷಪಡಿಸಲು ಇದೊಂದು ಸುಸಂದರ್ಭ. ಮಕ್ಕಳಿಗೆ ಮನೆಯನ್ನು ಮರೆಸಲು ಅಥವಾ ಹಠ ಮಾಡುವಂತಹ ಮಕ್ಕಳನ್ನು ಈ ರೀತಿಯ ಮನೋರಂಜನೆಗೆ ತೊಡಗಿಸಿದರೆ ಅವರು ತೃಪ್ತಿಯಾಗಿ, ಸಂತೋಷದಿಂದ ಕುಣಿದು ಕುಪ್ಪಳಿಸುತ್ತಾರೆ. ಆಟವೊಂದಿದ್ದರೆ ಸಾಕು ಮಕ್ಕಳಿಗೆ ಊಟ-ತಿಂಡಿಗಳನ್ನೆಲ್ಲ ಮರೆಯುತ್ತಾರೆ. ಈ ಪ್ರದರ್ಶನ ಮಕ್ಕಳಿಗೋಸ್ಕರ ಹುಟ್ಟಿಕೊಂಡಂತಹ ಪ್ರದರ್ಶನಗಳಾಗಿವೆ. ಆಧುನಿಕ ಯುಗದಲ್ಲಿ ಜಾತ್ರೆಗಳಲ್ಲಿ ಇಂತಹ ಪ್ರದರ್ಶನಗಳು ಮತ್ತಷ್ಟು ಅದ್ದೂರಿಯಾಗಿಯೇ ನಡೆಯುತ್ತವೆ. ದೊಡ್ಡ ದೊಡ್ಡ ಜಾತ್ರೆಗಳು ನಡೆಯುವಂತಹ ಸ್ಥಳಗಳಲ್ಲಿ ಪ್ರಸಿದ್ಧ ಸಂಸ್ಥೆಗಳು ಇಂತಹ ಪ್ರದರ್ಶನಗಳನ್ನು ತೋರಿಸುತ್ತಾರೆ. ಇದರಿಂದ ಅವರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣ ಗಳಿಸಲು ಸಹಾಯಕವಾಗುತ್ತಿದ್ದು, ಆರ್ಥಿಕವಾಗಿ ಇನ್ನಷ್ಟು ಪ್ರಬಲರಾಗುವ ಸಂದರ್ಭವಿರುತ್ತದೆ. ಅದೇ ರೀತಿಯಾಗಿ ನಾಟಕ ಕಂಪನಿಗಳು ರಾತ್ರಿಯಿಡೀ ಜನರನ್ನು ಒಂದೆಡೆ ಕೂಡಿಹಾಕುವ ಕಲೆಯೆಂದರೆ ನಾಟಕಗಳು. ಜಾತ್ರೆಯಲ್ಲಿ ಸಾಮಾನ್ಯವಾಗಿ ದೇವರ ಕುರಿತಾದ ನಾಟಕಗಳು ಹೆಚ್ಚಾಗಿ ನಡೆಯುತ್ತವೆ ಹಾಗೂ ಹಾಸ್ಯಭರಿತವಾದ ಸಾಮಾಜಿಕ ಕಳಕಳಿ ಇರುವ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಇನ್ನಿತರ ಗ್ರಾಮಗಳಲ್ಲಿ ಜಾತ್ರೆಯ ಸಂದರ್ಭದಲ್ಲಿ ಊರಿನ ಜನರೇ ಸೇರಿಕೊಂಡು ತಮ್ಮದೇ ಆದ ನಾಟಕ ತಂಡವನ್ನು ರಚಿಸಿಕೊಂಡು ಈ ತಂಡದ ವತಿಯಿಂದ ತಮ್ಮ ಗ್ರಾಮದ ದೇವರ ಮಹಿಮೆಯನ್ನು ಎತ್ತಿ ಹಿಡಿಯುವಂತಹ ನಾಟಕಗಳನ್ನು, ಇಲ್ಲವೆ ಸಾಮಾಜಿಕ

ಜಾಗೃತಿಯನ್ನು ಮೂಡಿಸುವಂತಹ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಒಬ್ಬರಿಗೆ ರೂ.೧೦-೨೦ ಗಳಂತೆ ದರವನ್ನು ನಿಗದಿಪಡಿಸಿ ಜನರಿಗೆ ಮನೋರಂಜನೆಯನ್ನು ನೀಡುತ್ತಾರೆ. ಇಲ್ಲವೇ ನಾಟಕ ತಂಡದವರೆ ಹಣದ ಖರ್ಚು ಹಾಕಿಕೊಂಡು, ದಾನಿಗಳಿಂದ ಹಣವನ್ನು ಸಂಗ್ರಹಿಸಿ ತಮ್ಮ ಗ್ರಾಮದ ಹಾಗೂ ಅಕ್ಕಪಕ್ಕದ ಗ್ರಾಮದ ಜನರಿಗೆ ಉಚಿತವಾದ ನಾಟಕ ಪ್ರದರ್ಶನ ನೀಡುತ್ತಾರೆ. ಪ್ರಸಿದ್ಧ ಜಾತ್ರೆಗಳಲ್ಲಿ ದೂರದ ಪ್ರದೇಶದಿಂದ ನಾಟಕ ಕಂಪನಿಗಳು ಬಂದು ಅಲ್ಲಿ ತಮ್ಮ ನಾಟಕಗಳನ್ನು ಪ್ರದರ್ಶಿಸುತ್ತಾರೆ. ಶಿವಶರಣರ ನಾಟಕಗಳು, ದೇವರ ನಾಟಕಗಳು ಹೆಚ್ಚಾಗಿ ಪ್ರದರ್ಶನವಾಗುತ್ತಿದ್ದು, ಸಾಮಾನ್ಯವಾಗಿ ಊರಿನ ಜನರಾಡುವಂತಹ ನಾಟಕಗಳಿಗೂ, ವೃತ್ತಿ ನಾಟಕ ಕಂಪನಿಗಳಿಗೂ ಕೆಲವು ಭಿನ್ನತೆಗಳಿರುತ್ತವೆ. ಜನಪದ ನಾಟಕಕಾರರಿಗೆ ಅದೇ ವೃತ್ತಿಯಾಗಿರುತ್ತದೆ. ನಾಟಕಗಳ ಪ್ರದರ್ಶನಗಳಿಂದಲೇ ತಮ್ಮ ಜೀವನ ನಡೆಸುತ್ತಿದ್ದು, ಅಲ್ಲಿನ ಕಲಾವಿದರೂ, ಗ್ರಾಮೀಣ ಪ್ರದೇಶದ ಕಲಾವಿದರಿಗೂ ವ್ಯತ್ಯಾಸ ಇರುತ್ತದೆ. ಭಾಷೆಗಳಲ್ಲಿ ಸಾಕಷ್ಟು ವೈರುಧ್ಯಗಳಿರುತ್ತವೆ. ಅವುಗಳ ಮೂಲ ಉದ್ದೇಶ, ಆಶಯಗಳು ಮಾತ್ರ ಒಂದೇ ಆಗಿದ್ದು, ಅದರ ಅಭಿವ್ಯಕ್ತಿ ಪ್ರದರ್ಶನಗಳು ಮಾತ್ರ ಬೇರೆಯಾಗಿರುತ್ತವೆ. ಹೀಗಾಗಿ ಜಾತ್ರೆಗಳಲ್ಲಿ ನಾಟಕಗಳು ಸಹ ಆಕರ್ಷಣೀಯ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತವೆ.

ಜಾತ್ರೆಗಳೆಂದರೆ ಒಂದು ದನಗಳ ಜಾತ್ರೆ. ಮತ್ತೊಂದು ಜನಗಳ ಜಾತ್ರೆ. ಕೆಲವು ಜಾತ್ರೆಗಳು ದನಗಳ ಜಾತ್ರೆಗಳೆಂದೇ ಪ್ರಸಿದ್ಧಿಯನ್ನು ಪಡೆದಿವೆ. ಅಲ್ಲಿ ದನ ವ್ಯಾಪಾರ ಅದ್ದೂರಿಯಾಗಿಯೇ ಇರುತ್ತದೆ. ರೈತರಿಗೆ ಸ್ನೇಹಿತನೆಂದರೆ ಅದು ದನಗಳು. ತಮ್ಮ ಮನೆಯ ದನಗಳನ್ನು ಅಥವಾ ವಸ್ತುಗಳನ್ನು ಮನೆ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸುತ್ತಿರುತ್ತಾರೆ, ರಕ್ಷಿಸುತ್ತಾರೆ. ಅವುಗಳಿಲ್ಲದೆ ತಮ್ಮ ಬದುಕೇ ಇಲ್ಲ ಎನ್ನುವಷ್ಟರ ಮಟ್ಟಿಗೆ ರೈತರಿಗೂ ಮತ್ತು ಎತ್ತುಗಳಿಗೆ ಅವಿನಾಭಾವ ಬಾಂಧವ್ಯವಿರುತ್ತದೆ. ರೈತ ಕೃಷಿಯನ್ನೇ ಅವಲಂಬಿಸಿ ಬದುಕುತ್ತಿರುವುದರಿಂದ ಕೃಷಿ ಕೆಲಸಕ್ಕೆ ಅಗತ್ಯವಾದ ಎತ್ತುಗಳನ್ನು ಸಾಕುವುದು ಅವನ ವೃತ್ತಿಯಲ್ಲೊಂದು. ದನ-ಕರುಗಳು ಮನೆಯಲ್ಲಿದ್ದರೆ ಮನೆ ಸಮೃದ್ಧಿಯಾಗಿರುತ್ತದೆ ಎಂಬ ಗ್ರಾಮೀಣರ ನಂಬಿಕೆ ಸತ್ಯವಾಗಿದೆ. ಮನೆಯಲ್ಲಿ ದನ, ಹಸುಗಳಿದ್ದರೆ ಮನೆ ತುಂಬ ಹಾಲಿನ ಅಭಿಷೇಕ ಹರಿಯುತ್ತದೆ, ಹಾಲು ಅಮೃತವಿದ್ದಂತೆ ಎಂದು ಹೇಳುತ್ತಾ ಮನೆಯಲ್ಲಿ ಹಸು-ಕರುಗಳಿದ್ದರೆ ಮನೆ ಸಂಜೀವಿನಿಯಂತೆ ಇರುತ್ತದೆ ಎಂದು ಜನಪದರು ನಂಬಿದ್ದಾರೆ. ಹೀಗಾಗಿ ರೈತರ ಮನೆಗಳಲ್ಲಿ ದನ-ಕರುಗಳು ಸರ್ವೇಸಾಮಾನ್ಯ. ಎತ್ತುಗಳ ಜಾತ್ರೆಗಳಲ್ಲಿ ವಿಶೇಷವಾಗಿ ಕಂಡುಬರುವ ಎತ್ತುಗಳು ಬೇರೆ ಬೇರೆ ಪ್ರದೇಶಗಳಿಂದ ಅವುಗಳನ್ನು ಮಾರಲೆಂದೇ ತಂದಿರುವ ಜನರು ಅದನ್ನು ನೋಡಬೇಕೆಂದೇ ಹೋಗುವ ಜನರು ಎಲ್ಲದಕ್ಕೂ ಒಂದಿಲ್ಲೊಂದು ರೀತಿಯಲ್ಲಿ ಸಂಬಂಧವಿದೆ. ದನಗಳ ಜಾತ್ರೆಗಳಲ್ಲಿ ರೈತರೇ ಸಾಕಷ್ಟು ನೆರೆದಿರುತ್ತಾರೆ. ಇಂತಹ ಜಾತ್ರೆಗಳಲ್ಲಿ

ಉತ್ತಮವಾದ ಎತ್ತುಗಳು ಬಂದು ಸೇರುತ್ತವೆ. ಸುಮಾರು ಸಾವಿರಾರು ಬೆಲೆಯ ಎತ್ತುಗಳು ಇಲ್ಲಿ ಬಂದು ನೆರೆದಿರುತ್ತವೆ. ಅವುಗಳನ್ನು ತಂದಿರುವಂತಹ ಮಾಲಿಕರು ತಂದಂತಹ ಎತ್ತುಗಳನ್ನು ದಷ್ಟ-ಪುಷ್ಟವಾಗಿ ಬೆಳೆಸಿ ಅವುಗಳಿಗೆ ಉತ್ತಮವಾದ ಆಹಾರವನ್ನು ನೀಡಿ ಸಾಕುತ್ತಾರೆ. ಆರೋಗ್ಯಪೂರ್ಣವಾದ ಎತ್ತುಗಳು ಹೆಚ್ಚು ಬಲಶಾಲಿಯಾಗಿದ್ದು, ಹೆಚ್ಚು ಕಾಲ ಬಾಳಿಕೆ ಬರುತ್ತವೆ. ಇಂತಹ ಎತ್ತುಗಳು ರೈತನ ಜಮೀನಿನಲ್ಲಿ ಎಂತಹ ಕೆಲಸವಿದ್ದರೂ ಜಗ್ಗದೇ ರೈತನಿಗೆ ಹೆಗಲಾಗಿ ದುಡಿಯುತ್ತವೆ. ಇದರಿಂದ ರೈತನ ಬದುಕು ಹಸನಾಗಿ ಸರ್ವತೋಮುಖ ಬೆಳವಣಿಗೆಗೆ ಎತ್ತುಗಳು ಸಂಪೂರ್ಣ ಸಹಕಾರ ನೀಡುತ್ತವೆ. ಆದುದರಿಂದ ದನಗಳ ಜಾತ್ರೆಗಳು ರೈತನ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ತಮ್ಮ ಪಾತ್ರವನ್ನು ನಿರ್ವಹಿಸುತ್ತವೆ. ಇದೇ ಸಂದರ್ಭದಲ್ಲಿ ಎತ್ತುಗಳಿಗೆ ಸಿಂಗರಿಸುವ ಅಥವಾ ಅಲಂಕರಿಸುವ ವಸ್ತುಗಳು ಈ ಜಾತ್ರೆಗಳಲ್ಲಿ ವಿಶೇಷವಾಗಿ ದೊರೆಯುತ್ತವೆ. ಇದರಿಂದ ವ್ಯಾಪಾರ ವಹಿವಾಟಿನಲ್ಲಿ ಈ ಜಾತ್ರೆಗಳು ಕೇಂದ್ರಬಿಂದುವಾಗಿ ಪ್ರಾಮುಖ್ಯತೆಯನ್ನು ಪಡೆದಿರುತ್ತವೆ.

ಇನ್ನುಳಿದಂತೆ ಜಾತ್ರೆಗಳಲ್ಲಿ ಪುಸ್ತಕ ಮಳಿಗೆಗಳು, ಕ್ಯಾಸೆಟ್ ಅಂಗಡಿಗಳು ಹೆಚ್ಚು ಹಾಕುವರು. ಬೀಡಿ-ಸಿಗರೇಟು, ಪಾನ್‌ಮಸಾಲ ಮಾರಾಟ ಮಾಡುವವರು, ವಿದ್ಯುತ್ ದೀಪಗಳ ಅಂಗಡಿಯವರು ಇಂತಹ ಸಣ್ಣಪುಟ್ಟ ವ್ಯಾಪಾರಸ್ಥರು ಜಾತ್ರೆಗಳಲ್ಲಿ ಬಂದು ಸೇರುತ್ತಾರೆ. ಜಾತ್ರೆಗಳಲ್ಲಿ ಇಂತಹ ಎಷ್ಟೋ ಚಿಕ್ಕ ವ್ಯಾಪಾರಿಗಳಿಗೆ, ದೊಡ್ಡ ವ್ಯಾಪಾರಿಗಳಿಗೆ ಜೀವನವನ್ನು ರೂಪಿಸಿಕೊಳ್ಳಲು, ಜೀವನಕ್ಕೆ ಆಧಾರವಾಗುವಂತಹ ಕೇಂದ್ರಗಳಾಗಿ ಇಂದಿಗೂ ಪ್ರಸ್ತುತವೆನಿಸುತ್ತವೆ.

೬.೪ ಸಾಂಸ್ಕೃತಿಕ ಕೇಂದ್ರಗಳಾಗಿ ಜಾತ್ರೆಗಳು

ಭಾರತ ದೇಶ ಸಂಸ್ಕೃತಿಗೆ ಹೆಸರಾಂತ ದೇಶ. ಹಲವು ಮತ, ಧರ್ಮಗಳಿಂದ ಕೂಡಿರುವ ನಮ್ಮ ದೇಶದಲ್ಲಿ ಆಯಾ ಮತ, ಧರ್ಮಗಳು ತಮ್ಮದೇ ಆದಂತಹ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿವೆ. ಸಿಂಧೂ, ಹರಪ್ಪ, ಮೊಹೆಂಜೆದಾರೋ ಸಂಸ್ಕೃತಿಯನ್ನು ಹೊಂದಿವೆ. ಸಿಂಧೂ, ಹರಪ್ಪ, ಮೊಹೆಂಜೊದಾರೋ ಸಂಸ್ಕೃತಿಗಳು ಭಾರತೀಯ ಸಂಸ್ಕೃತಿಯ ಇತಿಹಾಸವನ್ನು ಎತ್ತಿ ಹಿಡಿಯುತ್ತವೆ. ಈ ಪ್ರಾಚೀನ ಸಂಸ್ಕೃತಿಯಿಂದ ಇಲ್ಲಿಯವರೆಗೆ ನಮ್ಮ ದೇಶದಲ್ಲಿ ಹಲವಾರು ಏಳುಬೀಳುಗಳನ್ನು ಕಂಡಿದ್ದು ನಂತರ ಮುಂದುವರೆದಂತೆ ವಿದೇಶಿಯರ ದಾಳಿಗೆ ಸಿಲುಕಿಕೊಂಡು ವಿದೇಶಿಯರು ನಮ್ಮಲ್ಲಿ ಬಿಟ್ಟು ಹೋದಂತಹ ಧರ್ಮ, ಸಂಸ್ಕೃತಿಗಳು ಸಹ ನಮ್ಮಲ್ಲಿ ಹಾಗೆಯೇ ಉಳಿದುಕೊಂಡು ನಮ್ಮ ಭಾರತೀಯ ಮೂಲದ ಹಿಂದೂ ಸಂಸ್ಕೃತಿ ಹಾಗೂ ಅನ್ಯ ಸಂಸ್ಕೃತಿಗಳು ಪರಸ್ಪರ ಘರ್ಷಣಾತ್ಮಕವಾಗಿ ಜೊತೆ ಜೊತೆಯಲ್ಲಿಯೇ

ಬೆಳೆಯುತ್ತಿರುವ ಇಂದಿನ ಸಂದರ್ಭ ಜನಸಾಮಾನ್ಯರ ಸಾಮಾಜಿಕ ಜೀವನದ ಮೇಲೆ ಅಗಾಧವಾದ ಪ್ರಭಾವ ಬೀರುತ್ತಿರುವುದು ಖೇದದ ಸಂಗತಿ. ಸನಾತನವಾದ ಹಿಂದೂ ಧರ್ಮ, ಹಿಂದೂ ಸಂಸ್ಕೃತಿ ಭಾರತೀಯ ಸಾಹಿತ್ಯದಲ್ಲಿ ತನ್ನದೇ ಆದ ಗುರುತಿಸುವಿಕೆಯನ್ನು ಪಡೆದುಕೊಂಡಿದೆ. ನಮ್ಮಲ್ಲಿ ಹಲವಾರು ಮಹಾನ್ ವಿದ್ವಾಂಸರು, ಕವಿ ಪಂಡಿತರು, ರಾಜ ಮಹಾರಾಜರು, ಧರ್ಮ ಗುರುಗಳು, ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಕಾರ್ಯಗಳು ಅತಿಯಾಗಿ ನಡೆದಿವೆ. ಜಗತ್ತಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಭಾರತದ ಕೊಡುಗೆ ಅಪಾರವಾದದ್ದು, ಅನನ್ಯವಾದುದು. ಮಾನವನ ಬದುಕಿಗೊಂದು ಅರ್ಥವನ್ನು ನೀಡಿ ಅವನ ಜೀವನ ಸುಂದರವಾಗಲು ನಮ್ಮ ಸಂಸ್ಕೃತಿ ಪೂರಕವಾಗಿ ನಿಸ್ವಾರ್ಥದ ವಾತಾವರಣವನ್ನು ನೀಡಿ ಬೆಳೆಸುತ್ತಿದೆ ಎಂದರೆ ಅತಿಶಯವಾಗಲಾರದು.

ಜನಪದರು ಆಚರಿಸುವ ಎಲ್ಲಾ ಚಟುವಟಿಕೆಗಳು, ಆಚರಣೆಗಳು, ಕಾರ್ಯಗಳು, ಶುಭ–ಅಶುಭ, ವರ್ತಮಾನಗಳು ಎಲ್ಲವೂ ಸಂಸ್ಕೃತಿಯ ಕೊಡುಗೆ. ಅದರಲ್ಲೂ ಜಾತ್ರೆ–ಉತ್ಸವಗಳು ಸಂಸ್ಕೃತಿಯನ್ನು ಮುಖ್ಯ ವೇದಿಕೆಯತ್ತ ಕೊಂಡೊಯ್ಯುವಲ್ಲಿ ಅತ್ಯಂತ ಪ್ರಮುಖವೆನಿಸುತ್ತವೆ. ಒಂದು ಸಂಸ್ಕೃತಿಯನ್ನು ಗುರುತಿಸಬೇಕೆಂದರೆ ಕೇವಲ ಜಾತ್ರೆ–ಉತ್ಸವಗಳಲ್ಲಿ ಕಾಣುವಂತಹ ಅಂಶಗಳಷ್ಟೇ ಅಲ್ಲ ಸಾಹಿತ್ಯಿಕವಾಗಿ, ಕಲಾತ್ಮಕವಾಗಿ, ಪ್ರದರ್ಶನಗಳ ಮೂಲಕ, ಸಂಗೀತದ ಮೂಲಕ, ಹಾಡು–ಕುಣಿತದ ಮೂಲಕ, ಜ್ಞಾನದ ಮೂಲಕ ಹೀಗೆ ವಿವಿಧ ಆಯಾಮಗಳಲ್ಲಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಲಕ್ಷಣಗಳು ನೇರವಾಗಿ ಅಥವಾ ಪರೋಕ್ಷವಾಗಿ ಕಂಡುಬರುತ್ತವೆ. ಆದುದರಿಂದ ಜಾತ್ರೆಗಳು ಸಾಂಸ್ಕೃತಿಕವಾಗಿ ಅಥವಾ ಸಂಸ್ಕೃತಿಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತವೆ.

ಮೊದಲನೆಯದಾಗಿ ಪ್ರದರ್ಶನ ಕಲೆಗಳನ್ನು ನೋಡುವಾಗ ಪ್ರದರ್ಶನ ಕಲೆಗಳಿಗೆ ಜನಪದರ ಕೆಲವು ಮೂಲ ಕಲೆಗಳನ್ನು ಒಳಪಡಿಸಬಹುದು. ಪ್ರದರ್ಶನಕ್ಕೆ ಒಳಗೊಳ್ಳುವಂತಹ ಕಲೆಗಳು ಜನಪದರ ನಂಬಿಕೆಗೆ ಅರ್ಹವಾಗಿದ್ದು, ಜನಪದರೇ ಸ್ವತಃ ಕಲಿಕೆಯಿಂದ ಕಲಿತುಕೊಂಡು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ದೇವರಿಗೆ ತಮ್ಮ ಕಲೆಯ ಸೇವೆಯನ್ನು ಅರ್ಪಿಸುತ್ತೇವೆಂದು ತಾವುಗಳು ಪೂರ್ವ ತಯಾರಿ ಮಾಡಿಕೊಂಡು ಸಂಪಾದಿಸಿದಂತಹ ಕಲೆಗಳನ್ನು ಮುಕ್ತವಾಗಿ ಪ್ರದರ್ಶಿಸುತ್ತಾರೆ. ಅವರು ಪ್ರದರ್ಶಿಸುವ ಕಲೆಗಳಲ್ಲಿಯೇ ಅವರ ಶಕ್ತಿ ಸಾಮರ್ಥ್ಯ, ಬುದ್ದಿವಂತಿಕೆ, ನಡೆ–ನುಡಿಗಳನ್ನು ಗುರುತಿಸಬಹುದು. ಈ ಕಲೆಗಳು ತಲೆಮಾರಿನಿಂದ ತಲೆಮಾರಿಗೆ ಹಾಗೆಯೇ ಪ್ರಸಾರಗೊಂಡು ಸಂಸ್ಕೃತಿಯ ಪ್ರಗತಿಯಲ್ಲಿ ತಮ್ಮ ಅಮೂಲ್ಯ ಸಾಧನೆ ಮಾಡಿವೆ. ಜನಪದರ ತಾನೇ ಸೃಷ್ಟಿಸಿಕೊಂಡು ಸಂಗೀತ, ಸಾಹಿತ್ಯಕ್ಕೆ ನಿರ್ದಿಷ್ಟವಾದ, ಲಯಬದ್ಧವಾದ ಹೆಜ್ಜೆಗಳನ್ನು

ಹಾಕುವುದರ ಮೂಲಕ ನೃತ್ಯ–ಕುಣಿತ, ಪುರವಂತರ ಕುಣಿತ, ಹಲಗೆ ಮೇಳ, ಲಾವಣಿ ಹಾಡುಗಳು, ಗೀಗಿ ಪದಗಳನ್ನು ಹಾಡುವುದು, ಹಗಲುವೇಷ, ವೀರಗಾಸೆ, ಶಕ್ತಿ ಪ್ರದರ್ಶನದ ಕಲೆಗಳು, ನಂದಿಕೋಲು ಕುಣಿತ, ನಾಟಕ ಪ್ರದರ್ಶನ, ಕ್ರೀಡಾ ಪ್ರದರ್ಶನ, ಚಿತ್ರಕಲಾ ಪ್ರದರ್ಶನ, ಸಂಗೀತ, ಸಾಹಿತ್ಯ, ಕಲೆಗಳ ಪ್ರದರ್ಶನಗಳು ಆಯಾ ಜಾತ್ರೆಗಳ ವೈಶಿಷ್ಟ್ಯತೆಗಳನ್ನು ತಿಳಿಸುತ್ತವೆ.

ಸಾಮಾನ್ಯವಾಗಿ ಜಾತ್ರೆಗಳಲ್ಲಿ ಹಲವಾರು ರೀತಿಯ ಜನರು ಬಂದು ಸೇರುವುದರಿಂದ ಅದು ಸಾಂಸ್ಕೃತಿಕ ತಾಣ ಎಂದು ಈಗಾಗಲೇ ಪ್ರಸಿದ್ಧಿಯನ್ನು ಪಡೆದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ದೈವ, ಧರ್ಮ, ಜನಜೀವನದ ಸ್ಥಿತಿಗತಿಗಳನ್ನು ಸಮಾಜಕ್ಕೆ ತೋರಿಸಿಕೊಡುವಂತಹ ಮಹತ್ತರ ಕೆಲಸವನ್ನು ಈ ಕಲೆಗಳು ಮಾಡುತ್ತವೆ. ಎಷ್ಟೋ ಜನರು ಅನ್ನಕ್ಕಾಗಿ ಏನೆಲ್ಲಾ ಕಸರತ್ತುಗಳನ್ನು ಮಾಡಿ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇಂತಹ ಜನವರ್ಗವು ಬದುಕಲು ರೂಪಿಸಿಕೊಂಡಂತಹ ಕಲೆಗಳು ಒಂದೊತ್ತಿನ ಊಟಕ್ಕೆ ಅವರಿಗೆ ನೆರವಾಗುತ್ತಿವೆ. ಹಾಗೆಯೇ ಜಾತ್ರೆಗಳಲ್ಲಿ ಆಯಾ ವರ್ಗಕ್ಕೆ ಸೇರಿದ ಜನಪದರು ತಮ್ಮ ಸಮುದಾಯದ ವಿಶೇಷ ಕಲೆಗಳನ್ನು ಪ್ರದರ್ಶಿಸುತ್ತಾರೆ. ಉದಾಹರಣೆಗೆ: ಡೊಳ್ಳು ಕುಣಿತ, ಗೊರವರ ಕುಣಿತ, ಕರಡಿ ಕುಣಿತ, ನಾಟಕ ಪ್ರದರ್ಶನ ಇಂತಹ ಕಲೆಗಳು ಕೆಲವು ವರ್ಗದವರಿಗೆ ಮಾತ್ರ ಸೀಮಿತವಾಗಿವೆ. ಬೇರೆ ವರ್ಗದ ಜನರು ಈ ಕೆಲಸಗಳನ್ನು ನಿರ್ವಹಿಸುವುದಿಲ್ಲ. ಊರಲ್ಲಿ ವೃತ್ತಿ ಕಸುಬುಗಳನ್ನು ಮಾಡುವವರು ಅಂದರೆ ಕಮ್ಮಾರ, ಅಕ್ಕಸಾಲಿ, ಕುಂಬಾರ, ಮಡಿವಾಳ ಈ ರೀತಿಯ ವೃತ್ತಿ ಪರಂಪರೆಯನ್ನು ಮಾಡಿಕೊಂಡು ಬಂದಂತಹವರು. ಆ ಕೆಲಸವನ್ನು ಬಿಟ್ಟು ಬೇರೆ ಕೆಲಸವನ್ನು ಮಾಡಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಕೆಲವು ಕಲೆಗಳು ಸೀಮಿತ ವರ್ಗಕ್ಕೆ ಮೀಸಲಾಗಿವೆ. ಜಾತ್ರೆಗಳಲ್ಲಿ ಅಂತಹ ಸಮುದಾಯಗಳು ದೇವರ ಮೇಲಿನ ಭಯ–ಭಕ್ತಿಗಳಾಗಿ ತಮ್ಮ ಸಮುದಾಯದ ಜನರ ನಡೆ–ನುಡಿ, ಆಚಾರ--ವಿಚಾರ ಪದ್ಧತಿಗಳನ್ನು ಅವರು ನಡೆಸಿಕೊಡುವ ಕಲೆಗಳಲ್ಲಿಯೇ ಅವರ ಸಂಸ್ಕೃತಿಯನ್ನು ಗುರುತಿಸಬಹುದಾಗಿದೆ. ಅದೇ ರೀತಿಯಲ್ಲಿ ಸಾಹಿತ್ಯದಲ್ಲಿ ಅಂದರೆ ಗಾದೆ, ಒಗಟುಗಳಲ್ಲಿ, ಹಾಡುಗಳಲ್ಲಿ ಜಾತ್ರೆಗಳ ವರ್ಣನೆ, ದೇವರ ವರ್ಣನೆ, ಜನಪದರ ಬದುಕು ಹೀಗೆ ಬದುಕಿನ ಎಲ್ಲಾ ಮುಖಗಳನ್ನು ಭಿನ್ನ ಶೈಲಿಯಲ್ಲಿ ತಿಳಿಸುವಂತಹ ಕಾರ್ಯವನ್ನು ಈ ಜಾತ್ರೆಗಳು ಮಾಡುತ್ತವೆ.

ಜನಪದ ಪ್ರದರ್ಶನ ಕಲೆಗಳು ಗ್ರಾಮೀಣ ಜನರ ಜೀವನದ ಅವಿಭಾಜ್ಯ ಅಂಗವಿದ್ದಂತೆ. ಕಲೆಗಳು ಜನಪದರ ಉಸಿರು. ಅನಕ್ಷರಸ್ಥರೆನಿಸಿಕೊಂಡಂತಹ ಜನಪದರು ತಮ್ಮ ಅಂತರಂಗದ ದೈವಗಳಿಗೆ ಹಾಗೂ ದೈವಕ್ಕೆ ಸಂಬಂಧಿಸಿದ ಆಚರಣೆಗಳಲ್ಲಿ ಪ್ರಾಮಾಣಿಕವಾದ ತಮ್ಮ

ಕಲೆಗಳನ್ನು ಪ್ರದರ್ಶಿಸುತ್ತಾರೆ. ನಿಸರ್ಗದತ್ತವಾಗಿ ಮಾನವನ ಕುತೂಹಲದಿಂದ ಹುಟ್ಟಿಕೊಂಡಂತಹ ಈ ಕಲೆಗಳು ಮುಂದೊಂದು ದಿನ ಅವರಿಗೆ ತಿಳಿಯದಂತೆ ಸಾಹಿತ್ಯದಲ್ಲಿ ಬೆರೆತು ಪ್ರಪಂಚದಾದ್ಯಂತ ಪ್ರಸಾರವಾಗಿವೆ. ಕಲೆಗಳ ಮೂಲಕವೇ ಜನಪದರ ಪ್ರತಿಯೊಂದು ಹೆಜ್ಜೆಯನ್ನು ಗುರುತಿಸಬಹುದು. ಅವರ ಆಚಾರ–ವಿಚಾರ, ನೀತಿ–ನಿಯಮಗಳು, ಸಂಪ್ರದಾಯ ರೂಢಿಗಳು ಹೀಗೆ ಜನಪದರು ಪ್ರತಿ ಅಂಶಗಳನ್ನು ಕಲೆಗಳು ನಮಗೆ ತೋರಿಸುತ್ತವೆ. ಬದುಕಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿರುವ ಮಾನವ ಅಥವಾ ಜನಪದರು ತಮ್ಮ ಬಿಡುವಿನ ವೇಳೆಯಲ್ಲಿ ಸುಗ್ಗಿಯ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಕಲಿತಂತಹ ಕಲೆಗಳು ಇಡೀ ಅವರ ಬದುಕನ್ನು ನಿರ್ದೇಶಿಸುವಂತಹ ಕಲೆಗಳಾಗಿ ಹೊರಹೊಮ್ಮಿದವು. ಇದರಿಂದ ಸಂಸ್ಕೃತಿಗೆ ಇನ್ನಷ್ಟು ಇಂಬು ಸಿಕ್ಕು ಸಂಸ್ಕೃತಿಯು ಪ್ರವರ್ಧಮಾನಕ್ಕೆ ಬರಲು ದಾರಿಯಾಯಿತು. ಧಾರ್ಮಿಕ ಸಂದರ್ಭದಲ್ಲಿ ಇಂತಹ ಕಲೆಗಳು ಪ್ರದರ್ಶನಗೊಳ್ಳುತ್ತಿದ್ದು, ಜನಪದರ ಸಮಸ್ತ ಬದುಕನ್ನು ಸಮಾಜಕ್ಕೆ ತಿಳಿಸಿಕೊಡುವಂತಹ ಪ್ರಯತ್ನ ಮಾಡಿದೆ, ಮಾಡುತ್ತಿವೆ. ಹಾಗೆಯೇ ಕಲೆಗಳು ಜನಪದರ ಅಂತರಂಗದ ಮಾನವೀಯ ಸಂವೇದನೆಗಳನ್ನು ಅಭಿವ್ಯಕ್ತಪಡಿಸಲು ಸಹಕಾರಿಯಾಗಿವೆ. ದಿನನಿತ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಮರೆಸಿ ಮಾನಸಿಕವಾಗಿ ನೆಮ್ಮದಿಯನ್ನು ತಂದುಕೊಡುವ ಸದಾವಕಾಶವನ್ನು ಕಲೆಗಳು ಜಾತ್ರೆಗಳಲ್ಲಿ ಪ್ರದರ್ಶನಗೊಳ್ಳುವ ಮುಖಾಂತರ ವ್ಯಕ್ತವಾಗುತ್ತವೆ. ಜನಪದರ ಸಂಸ್ಕೃತಿಯನ್ನು ಸಾಂಕೇತಿಕವಾಗಿ ಪ್ರತಿಬಿಂಬಿಸುವ ಸಾಧನಗಳಾಗಿ ಕಲೆಗಳು ಮಹತ್ವ ಪಡೆಯುತ್ತಿವೆ.

ಆರಾಧನ ಹಿನ್ನೆಲೆಯಲ್ಲಿ ಜನಿಸಿದಂತಹ ಕಲೆಗಳು ಕಾಲಕ್ರಮೇಣ ವೃತ್ತಿ ಕಲೆಗಳಾಗಿ ಪರಿವರ್ತನೆಯಾದವು. ಇನ್ನೂ ಕೆಲವು ಕಲೆಗಳು ಮನೋರಂಜನೆಯ ಮಾಧ್ಯಮಗಳಾಗಿ ಮುಂದುವರೆದವು. ಅಲ್ಲದೆ ಕೆಲವು ಉಪಜೀವನದ ಕಲೆಗಳಾಗಿ ಬೆಳವಣಿಗೆ ಹೊಂದಿದವು. ಚಿಕ್ಕೋಡಿ ಭಾಗಗಳಲ್ಲಿ ಜಾತ್ರೆಯ ಸಂದರ್ಭದಲ್ಲಿ ಪ್ರದರ್ಶನಗೊಳ್ಳುವ ಕಲೆಗಳೆಂದರೆ ಡೊಳ್ಳು, ಮೇಳ, ನಂದಿಕೋಲು ಕುಣಿತ, ಗೊರವರ ಮೇಳ, ಭಜನಾಮೇಳ, ಹಗಲುವೇಷ, ವೀರಗಾಸೆ, ಸನಾಯಿಮೇಳ, ಪಟಗಳ ಪ್ರದರ್ಶನ ಮುಂತಾದ ಕಲೆಗಳು ಪ್ರಚಲಿತದಲ್ಲಿವೆ. ಇಂತಹ ಕಲೆಗಳನ್ನು ಪ್ರದರ್ಶಿಸುವ ವಿಧಾನ, ಉಪಯೋಗಿಸುವ ಸಲಕರಣೆ–ಸಾಧನಗಳು, ವೇಷಭೂಷಣ, ಅಲಂಕಾರಗಳು, ಭಾಷೆ, ಆಂಗಿಕ ಅಭಿನಯ, ಕಲೆಗಾರಿಕೆ ಮುಂತಾದ ಎಲ್ಲ ದೃಷ್ಟಿಕೋನಗಳಿಂದಲೂ ಇಲ್ಲಿನ ಜಾತ್ರೆಗಳು ವೈವಿಧ್ಯಮಯವಾಗಿದ್ದು, ಅತೀ ಮುಖ್ಯವಾಗಿ ಜನಪದರು ಸಾಂಸ್ಕೃತಿಕ ಲೋಕಕ್ಕೆ ತಮ್ಮನ್ನು ಹೇಗೆ ತೊಡಗಿಸಿಕೊಂಡಿರುತ್ತಾರೆ ಎಂಬುದನ್ನು ತಿಳಿಯಬಹುದು. ಹಬ್ಬ, ಉತ್ಸವ, ಜಾತ್ರೆ, ಸಮಾರಾಧನೆಗಳು ಇಲ್ಲಿಯ ಸಂಸ್ಕೃತಿಯನ್ನು ಪೋಷಿಸಿಕೊಂಡು ಬರುತ್ತಿದ್ದು ಸಮಾಜದ ನ್ಯೂನ್ಯತೆಗಳನ್ನು ಒಳಿತು–ಕೆಡುಕುಗಳನ್ನು ತೋರಿಸುವುದರ

ಮೂಲಕ ಜನಪದರನ್ನು ಜಾಗೃತಗೊಳಿಸುವ ಕೆಲಸವನ್ನು ಇಂತಹ ಕಲೆಗಳು ನಿರ್ವಹಿಸುತ್ತಿದ್ದು, ಪ್ರಸ್ತುತ ಸಂದರ್ಭದಲ್ಲಿ ಆಧುನಿಕತೆಯ ತೆಕ್ಕೆಗೆ ಒಳಗಾದರೂ ಕೆಲವು ಸಂದರ್ಭಗಳಲ್ಲಿ ತಮ್ಮ ಹಿಂದಿನ ಮೌಲ್ಯಗಳನ್ನು ಉಳಿಸಿಕೊಂಡು ಬರುತ್ತಿವೆ. ಈ ಕಲಾ ಪ್ರಪಂಚವೆಂಬುದು ಸಾಮಾನ್ಯವಾಗಿ ಒಂದು ನಿರ್ದಿಷ್ಟತೆಗೆ ನಿಲುಕಲಾರದಂತಹ ಪ್ರಪಂಚ. ಅದರ ವಿಸ್ತಾರತೆ, ವಿಶಾಲತೆಗಳು ಅನಂತವಾದವು. ಹೀಗಾಗಿ ಈ ಅಧ್ಯಯನದ ಮಿತಿಗಳು ಒಳಗೆ ಸಂಗ್ರಹಿಸಲಾದಂತಹ ಕಲಾ ಸಂಸ್ಕೃತಿಯನ್ನು ಇದರಲ್ಲಿ ಅನಾವರಣ ಮಾಡಲಾಗಿದೆ.

ಅಧ್ಯಾಯ ಏಳು

ಜಾತ್ರೆಗಳು ಮತ್ತು ಆಧುನಿಕತೆ

ಅಧ್ಯಾಯ ಏಳು

ಜಾತ್ರೆಗಳು ಮತ್ತು ಆಧುನಿಕತೆ

ಜಾತ್ರೆಗಳು ಮತ್ತು ಜಾತ್ರೆಗಳಿಗೆ ಸಂಬಂಧಿಸಿದ ಸಂಪ್ರದಾಯಗಳು ಭಾರತೀಯರಲ್ಲಿ ತುಂಬಾ ಪ್ರಾಚೀನವಾಗಿ ಬೆಳೆದುಕೊಂಡು ಬಂದಿವೆ. ಮಾನವನು ಆದಿಮ ಸಂಸ್ಕೃತಿಯಿಂದ ನಾಗರಿಕ ಬದುಕನ್ನ ಕಟ್ಟಿಕೊಂಡಂತಹ ಸಂದರ್ಭದಲ್ಲಿ ಜಾತ್ರೆಗಳು ಉಗಮಗೊಂಡವು. ಈ ಜಾತ್ರೆಗಳು ಮಾನವನಿಗೆ ಬೇಕಾಗಿತ್ತೇ? ಅಥವಾ ಇದರ ಪ್ರಯೋಜನವೇನು, ಯಾವೆಲ್ಲಾ ಉದ್ದೇಶಗಳಿಂದ ಜಾತ್ರೆಗಳನ್ನು ನಡೆಸಿಕೊಂಡು ಬಂದರು ಎನ್ನುವಂತಹ ಪ್ರಶ್ನೆಗಳು ನಮ್ಮನ್ನು ಕೆರಳಿಸದೆ ಬಿಡುವುದಿಲ್ಲ. ತುಂಬಾ ಸೂಕ್ಷ್ಮವಾಗಿ ಗಮನಿಸುವುದಾದರೆ ಜಾತ್ರೆಗಳು ಹಲವಾರು ಕಾರಣದಿಂದ ಮಾನವನಿಂದಲೇ ಜನ್ಮ ತಾಳಿವೆ. ಜಾತ್ರೆಗಳ ಕೇಂದ್ರಬಿಂದು ಮನುಷ್ಯನೇ ಆಗಿದ್ದಾನೆ. ಮನುಷ್ಯನಿಗಾಗಿಯೇ ಹುಟ್ಟಿದಂತಹವು ಜಾತ್ರೆಗಳು. ಮನುಷ್ಯನ ಹಲವು ಉಪಯೋಗಕ್ಕಾಗಿ ಹುಟ್ಟಿಕೊಂಡವು ಈ ಜಾತ್ರೆಗಳು. ಹಾಗಾಗಿ ಜಾತ್ರೆಗಳೆಂದರೆ ಮಾನವನ ಜೀವನದಲ್ಲಿ ಅತಿ ಮುಖ್ಯವಾದ ಆಚರಣೆಗಳು ಒಂದು ರೀತಿಯಲ್ಲಿ ಮಾನವನ ಪ್ರಬುದ್ಧತೆಯನ್ನು ಲೋಕಕ್ಕೆ ತಿಳಿಸುವಂತಹ ಕೆಲಸವನ್ನು ಈ ಜಾತ್ರೆಗಳು ಮಾಡುತ್ತವೆ. ಈ ಜಾತ್ರೆಯ ಕಲ್ಪನೆ ಮನುಷ್ಯನಲ್ಲಿ ಹುಟ್ಟಿದ್ದೇ ಒಂದು ಆಶ್ಚರ್ಯಕರ ಸಂಗತಿ. ಒಂದೇ ಸ್ಥಳದಲ್ಲಿ ನೂರಾರು ಜನರು ಸೇರಿ ತಮ್ಮ ತಮ್ಮ ಜೀವನಾನುಭವವನ್ನು ಹಂಚಿಕೊಳ್ಳುವಂತಹ ಈ ಜಾತ್ರೆಯ ಸ್ಥಳ ಇಡೀ ಜನಜೀವನದ ಸ್ಥಿತಿಗತಿಯನ್ನು ಸಮಾಜಕ್ಕೆ ತೋರಿಸಿಕೊಡುತ್ತದೆ. ಪರಂಪರಾಗತವಾಗಿ ತಾವು ನಂಬಿದ ಅಥವಾ ತಾವು (ಜನಪದರು) ಪೂಜಿಸಿಕೊಂಡು ಬಂದಂತಹ ಆರಾಧ್ಯ ದೈವವನ್ನು ತಮ್ಮ ಮನಸಿಚ್ಚೆಯಂತೆ ಅಲಂಕರಿಸಿ, ಮೆರವಣಿಗೆ, ಉತ್ಸವಗಳ ಮೂಲಕ ಸಂಸ್ಕೃತಿಯ ಚಲನೆಗೆ ಸಾಕ್ಷಿಯಾಗಿದೆ.

ಈ ಹಿನ್ನೆಲೆಯಲ್ಲಿ ಇಟ್ಟುಕೊಂಡ ಜಾತ್ರೆಗಳ ಪಾರಂಪರಿಕ ಜ್ಞಾನವನ್ನು ಅವಲೋಕನ ಮಾಡುವುದರಿಂದ ಮಾನವನ ತಿಳುವಳಿಕೆ ಮನಗಾಣಬಹುದು. ನಂತರ ಪರಂಪರೆ ಮತ್ತು ವರ್ತಮಾನಗಳನ್ನು ಪ್ರಸ್ತುತಿಕರಿಸಿ ನೋಡುವುದರಿಂದ ಜಾತ್ರೆಗಳ ತಿಳುವಳಿಕೆ ಅರ್ಥವಾಗುತ್ತದೆ. ಆಧುನಿಕ ಸಂದರ್ಭದಲ್ಲಿ ಜಾತ್ರೆಗಳ ಪಾತ್ರವೇನು, ಅವುಗಳು ನಶಿಸಿ ಹೋಗುವಂತಹ ಸಂಸ್ಕೃತಿಯೇ? ಮತ್ತೊಂದು ಮೆರುಗನ್ನು ಹೊಂದಿ ರೂಪವನ್ನು ಬದಲಾಯಿಸುತ್ತದೆಯೇ? ಜಾಗತೀಕರಣದ ಪ್ರಭಾವದಿಂದ ಜಾತ್ರೆಗಳ ಗುಣ ಮತ್ತು ಉದ್ದೇಶ, ಮಹತ್ವಗಳು ಹಾಗೂ ಸಂಸ್ಕೃತಿಯು ನಶಿಸುತ್ತದೆಯೇ ಎನ್ನುವುದನ್ನು ಇಂದು ಅವಲೋಕಿಸುವುದು ಅನಿವಾರ್ಯವಾಗಿದೆ.

ಆಧುನಿಕತೆ ಎಂಬ ಪದಕ್ಕೆ ಒಂದು ನಿರ್ದಿಷ್ಟ ಅರ್ಥ ಕೊಡುವುದು ಸಾಧ್ಯವಿಲ್ಲವಾದರೂ ಹಲವು ಆಲೋಚನೆಗಳಿಂದ ಒಟ್ಟುಗೂಡಿದ ಒಮ್ಮತ ಅಭಿಪ್ರಾಯವನ್ನು ಸೂಕ್ಷ್ಮವಾಗಿ ಅರ್ಥೈಸಬಹುದು. ಆಧುನಿಕತೆ ಎಂದರೆ ನಾವು ತಿಳಿದಂತೆ ಮಾನವನ ಹೊಸ ರೂಪ. ರೂಪ ಎಂದರೆ ದೈಹಿಕವಾದ ರೂಪ ಅಲ್ಲ. ಮಾನಸಿಕವಾಗಿ ಹೊಸ ಆಲೋಚನೆಗಳ ರೀತಿ ಚೈತನ್ಯದ ಬುತ್ತಿ, ಕ್ರಿಯಾಶೀಲತೆಯ ಬದುಕು ಪಡೆಯಬೇಕು ಎಂಬ ಹಂಬಲ, ಆಸೆ ಹೀಗೆ ಇವೆಲ್ಲದರ ಒಟ್ಟಾರೆ ತಿರುಳು ಆಧುನಿಕತೆ ಹುಟ್ಟಲು ಕಾರಣ ಎಂದು ಹೇಳಬಹುದು. ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳದೆ ತನ್ನದೇ ಹೊಸ ಬದುಕನ್ನು ಕಟ್ಟಿಕೊಳ್ಳಲು ಮಾನವ ಹೂಡಿದಂತಹ ಪ್ರಯತ್ನ, ಸಾಧಿಸಿದ ಗುರಿ, ಶೋಧನೆಯ ಪ್ರತಿಫಲವೇ ಆಧುನಿಕತೆ ಎಂದರೆ ತಪ್ಪಾಗಲಾರದು. ಈ ಆಧುನಿಕತೆಯಲ್ಲಿ ಮಾನವ, ಪ್ರಕೃತಿ ಜೀವಿಗಳು, ಸಕಲ ಚರಾಚರ ವಸ್ತುಗಳೂ ಇದರಲ್ಲಿ ಒಳಗೊಂಡಿರುತ್ತದೆ. ಕಾಮಾಲೆ ಕಣ್ಣಿಗೆ ಕಾಣೋದೆಲ್ಲ ಹಳದಿ ಎನ್ನುವ ಮಾತಿನಂತೆ ಹೊಸತನದ ಹುಡುಕಾಟವೆಲ್ಲವೂ ಆಧುನಿಕತೆ ಎಂದು ತಿಳಿಯಬಹುದು. ಇತಿಹಾಸಕಾರರ ದೃಷ್ಟಿಕೋನದಲ್ಲಿ ಪ್ರಾಚೀನ, ಮಧ್ಯಮ, ಆಧುನಿಕ ಎಂದು ಹೀಗೆ ವಿಭಾಗಿಸುವುದು. ಇದು ಕಾಲಮಾನದ ದೃಷ್ಟಿಕೋನದಿಂದ. ಅಂದರೆ ದಿನಗಳು ಮರಳಿದಂತೆ ಹಿಂದೆ ಸರಿಯುತ್ತಲೇ ಇರುತ್ತದೆ. ಹಿಂದಿನ ದಿನವನ್ನು ಪ್ರಾಚೀನ ಪ್ರಸ್ತುತ ದಿನವನ್ನು ಮಧ್ಯಮ ಕಾಲ, ನಾಳೆಯ ದಿನವನ್ನು ಎಂದೆಲ್ಲಾ ಭಾವಿಸಬಹುದು.

ಏನೇ ಆದರೂ ಆಧುನಿಕತೆ ಎಂದರೆ ಹೊಸತಾದ ಆವಿಷ್ಕಾರವನ್ನು ಮಾನವ ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು. ಕೆಲವೊಂದು ವಿಚಾರಗಳು ನಿಧಾನವಾದರೂ ಅಗತ್ಯತೆ ಇದ್ದಾಗ ಆಧುನಿಕತೆಯ ಬಲೆಯೊಳಗೆ ಬೀಳಲೇಬೇಕು. ಅದು ಆಧುನಿಕತೆ ಬೇಟೆ ಸಂಸ್ಕೃತಿಯಿಂದ ಪ್ರಾರಂಭವಾದ ಮಾನವನ ಬದುಕು ಇಂದಿನ ಐಷಾರಾಮಿ ಬದುಕಿನೆಡೆಗೆ ಬಂದು ನಿಂತಿದೆ. ಅದು ಮುಂದಿನ ದಿನಗಳಲ್ಲಿ ಇನ್ನಷ್ಟು ಮುಂದುವರೆದು ಬದಲಾವಣೆ ಹೊಂದುತ್ತಾ ಮತ್ತೊಂದು ಸ್ಥಿತಿಯೆಡೆಗೆ ಕೊಂಡೊಯ್ಯಬಹುದು. ಅದೇನೇ ಇದ್ದರೂ ಮಾನವನ ಬೌದ್ಧಿಕ ವಿಕಾಸ ಹೊಸ ಸಂಸ್ಕೃತಿಯ ಉಗಮಕ್ಕೆ ಕಾರಣವಾಗಿ ಆಧುನಿಕತೆ ಎಂಬುದು ತಲೆ ಎತ್ತಿ ಅತ್ಯಂತ ಬಲಿಷ್ಠವಾಗಿ ಮನುಷ್ಯನನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದೆ ಎಂದರೆ ತಪ್ಪಾಗಲಾರದು. ಒಂದು ಕಾಲಕ್ಕೆ ನಿಸ್ವಾರ್ಥ, ಅಹಿಂಸೆ, ಧರ್ಮದ ನೆಲೆಗಟ್ಟಿನ ಮೇಲೆ ನಿಂತಿದ್ದು ಅಥವಾ ಅವುಗಳನ್ನು ಅನುಸರಿಸುತ್ತಿದ್ದ ಮಾನವ ಇಂದು ಅದರ ವಿರುದ್ಧ ದಿಕ್ಕಿನೆಡೆಗೆ ನಡೆಯುತ್ತಿದ್ದಾನೆ ಎಂದರೆ ತಪ್ಪಾಗಲಾರದು. ಅಂದರೆ ಇಂದಿನ ಮಾನವನ ಹೆಜ್ಜೆಯೆಲ್ಲವೂ ಅಧರ್ಮ, ಅನ್ಯಾಯ, ಹಿಂಸೆಗಳಿಂದ ಕೂಡಿದೆ ಎಂದರ್ಥವಲ್ಲ. 'ನಾನು' ಎಂಬ ಭಾವನೆ ಮನುಷ್ಯನನ್ನು ಹಿಡಿದಿಟ್ಟು ಅನೇಕ ಅನರ್ಥಗಳಿಗೆ ಎಡೆಮಾಡಿಕೊಡುತ್ತಿದೆ

ಎನ್ನಬಹುದು. ಅದೇನೆ ಇದ್ದರೂ ಆಧುನಿಕತೆ ಎಂಬುದು ಜನಪದರ ಜೀವನದ ಪ್ರತಿ ಹೆಜ್ಜೆಗೂ ಹೇಗೆ ಕಾರಣವಾಗುತ್ತಿದೆ ಎಂಬುದು ಇಲ್ಲಿನ ಮುಖ್ಯ ವಿಷಯ.

ಸ್ಫುಟವಾಗಿ ಆಧುನಿಕತೆಯ ಲಕ್ಷಣವನ್ನು ಹೇಳುವುದಾದರೆ ಆಧುನಿಕತೆ ಶಕೆ ಎಂಬುದು ತೀರಾ ಇತ್ತೀಚಿನ ಬ್ರಿಟೀಷರ ಕಾಲದಿಂದ ನಮ್ಮ ಭಾರತದಲ್ಲಿ ಆರಂಭವಾಯಿತೆನ್ನಬಹುದು. ಆಧುನಿಕತೆಯ ಲಕ್ಷಣ ವೈಜ್ಞಾನಿಕತೆ, ತಾತ್ವಿಕತೆ ಮತ್ತು ಭೌತಿಕವಾದುದು. ಸಮಾಜವಾದದ ಕಲ್ಪನೆಯನ್ನು ಹೊತ್ತು ನಿಂತಿದೆ. ಆಧುನಿಕತೆ ವಿಜ್ಞಾನವನ್ನು ಹೆಚ್ಚಾಗಿ ನಂಬಿರುವಂತಹದ್ದು. ವಿಜ್ಞಾನವೆಂದರೆ ಆಧುನಿಕತೆ ಎಂದೇ ಅದನ್ನು ವ್ಯಾಖ್ಯಾನಿಸಬಹುದಾಗಿದೆ. ಈ ಯಂತ್ರ ಜಗತ್ತಿನ ಪರಿಕಲ್ಪನೆಗೆ ಮಾನವನ ಅಗಾಧವಾದ ಬುದ್ಧಿಶಕ್ತಿ ಮತ್ತು ಯಂತ್ರಗಳ ಕಾರ್ಯವೈಖರಿ ಮೂಲಭೂತವಾಗಿರುವಂತದ್ದು. ಇಡೀ ಜಗತ್ತಿನ ಏನೆಲ್ಲಾ ಚಟುವಟಿಕೆಗಳನ್ನು ನ್ಯಾನೋ ವೇಗದಲ್ಲಿ ನೆರವೇರಿಸುವಂತಹ ನಡತೆ ಹೊಂದಿದೆ. ಸಾಮಾನ್ಯವಾಗಿ ಜನರು ಹೇಳುವ ಹಾಗೆ ಈ ಆಧುನಿಕ ಯುಗದಲ್ಲಿ ಏನೆಲ್ಲಾ ಆಗುತ್ತೆ ಎಂಬ ಮಾತು ತುಂಬಾ ಅರ್ಥವತ್ತಾಗಿದೆ. ಅಂದರೆ ಮಾನವನಿಗೆ ಅಸಾಧ್ಯವಾದುದು ಯಾವುದು ಇಲ್ಲ ಎಂಬ ಒಳ ಅರ್ಥದಲ್ಲಿ ಇದನ್ನು ಭಾವಿಸಬಹುದಾಗಿದೆ. ವಿಜ್ಞಾನದಿಂದ ಹೊಸ ಹೊಸ ಆವಿಷ್ಕಾರಗಳಾಗುತ್ತಿದ್ದು, ಮನುಷ್ಯ ಇದರಿಂದ ತನ್ನ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳುತ್ತಿದ್ದಾನೆ. ಇಂತಹ ವೈಜ್ಞಾನಿಕ ಚಿಂತನೆ ಬೆಳೆದಂತೆಲ್ಲಾ ಮಾನವನು ಹೊಸದನ್ನು ರೂಪಿಸಿದನು. ಮಾನವನ ನಿಧಾನಗತಿಯ ಬೆಳವಣಿಗೆ ವಿಜ್ಞಾನವೆನ್ನುವುದು ನ್ಯಾನೋ ವೇಗದಲ್ಲಿ ಬೌದ್ಧಿಕ ವಿಕಾಸಗೊಳ್ಳುವಂತೆ ಮಾಡಿತು. ಇಂತಹ ವೈಚಾರಿಕ ತತ್ವ ಇಡೀ ವಿಶ್ವವೇ ಬೆರಗು ಗಣ್ಣಿನಿಂದ ನೋಡತೊಡಗಿತು. ಯುರೋಪಿಯನ್ ರಾಷ್ಟ್ರಗಳು ವಿಶ್ವದೆಲ್ಲೆಡೆ ವಸಾಹತುಗಳನ್ನು ಸ್ಥಾಪಿಸಿ ವ್ಯಾಖ್ಯಾನ ಮತ್ತು ಆಡಳಿತ ಮಾಡಿದ್ದರಿಂದ ವಿಜ್ಞಾನದ ಅರಿವನ್ನು ಎಲ್ಲಾ ಕಡೆ ಪಸರಿಸಿದರು. ಇದು ನಮ್ಮ ಭಾರತಕ್ಕೂ ತಡವಾಗಿ ಪ್ರಭಾವ ಆದರೂ ಆಧುನಿಕತೆಗೆ ಸಂಪೂರ್ಣವಾಗಿ ತೆರೆದು ಕೊಳ್ಳುವಂತಾಯಿತು.

ವಿಶ್ವದೆಲ್ಲೆಡೆ ವೈಜ್ಞಾನಿಕತೆಯ ನಂಬಿಕೆ ಏಕಸಾಮ್ಯಗೊಂಡಿದ್ದರಿಂದ ವಿಶ್ವ ಜನತೆಗೆ ಒಂದೇ ರೀತಿಯ ಆಸೆ ಆಕಾಂಕ್ಷೆಗಳು ಹುಟ್ಟಿದವು. ಯಂತ್ರ ನಾಗರೀಕತೆಗೆ ಅಂಟಿಕೊಂಡು ಮನುಷ್ಯನ ಜೀವನ ಯಂತ್ರಗಳನ್ನು ನಂಬಿಯೇ ಬದುಕುವಂತಾಯಿತು. ವಿಧಿ ಕಾರ್ಯದಲ್ಲಿ, ಕುಟುಂಬ ವ್ಯವಸ್ಥೆಯಲ್ಲಿ, ಮೂಲಭೂತ ವ್ಯವಸ್ಥೆಗಳಲ್ಲಿ, ಸಾರಿಗೆ ವ್ಯವಸ್ಥೆ, ರೇಡಿಯೊ, ಪೋನ್, ಸಿನಿಮಾ ಮುಂತಾದ ಎಲ್ಲಾ ರೀತಿಯಿಂದಲೂ ಪ್ರಸ್ತುತವಾಗಿ ಯಂತ್ರಗಳಿಂದಲೇ ತನ್ನ ಕೆಲಸಗಳನ್ನು ತುಂಬಾ ವೇಗವಾಗಿ ಶ್ರಮವಿಲ್ಲದೆ ಪೂರೈಸಿಕೊಳ್ಳಲಾಗುತ್ತಿದೆ. ಈ ದೃಷ್ಟಿಯಿಂದ ಮನುಷ್ಯನ ಸಾಂಪ್ರದಾಯಿಕ ಜೀವನ ಪದ್ಧತಿ ಪ್ರಕೃತಿಗೆ ಪ್ರತಿನಿಧೀಕರಣವಾಗಿರು

ವಂತದ್ದು. ಆದರೆ ಮನುಷ್ಯನ ಜೀವನ ಉನ್ನತಕ್ಕೇರಿಸುವ ಯಂತ್ರ ನಾಗರೀಕತೆ ಪ್ರಕೃತಿಯನ್ನೇ ನಾಶ ಮಾಡಿಕೊಂಡು ಬರುತ್ತದೆ. ಗ್ಲೋಬಲ್ ವಿಲೇಜ್ ಎಂದು ಜಾಗತಿಕ ಮಟ್ಟದಲ್ಲಿ ಕರೆಯುವ ಕ್ರಮ ಇಡೀ ಜಗತ್ತನ್ನು ಒಂದು ಪುಟ್ಟ ಹಳ್ಳಿಯಾಗಿ ಪರಿಭಾವಿಸುವಂತಹದ್ದು ಆಧುನಿಕರಣದಿಂದಾಗಿದೆ. ಆಧುನೀಕರಣದಿಂದಾಗಿ ಜಾಗತಿಕ ಮಾರುಕಟ್ಟೆಗಳು ಸ್ಥಾಪಿತವಾದವು. ಇವು ಒಂದು ದೇಶಕ್ಕೆ ಸಂಬಂಧಿಸಿದ್ದಲ್ಲ, ಇಡೀ ವಿಶ್ವದ ಜನತೆಗೆ ಸಂಬಂಧಿಸಿವೆ. ಒಂದು ರೀತಿಯಲ್ಲಿ ಜಾಗತೀಕರಣದ ನಿರೂಪಣೆ "ಏಕ ಸಾಂಸ್ಕೃತಿಕ ಜೀವನ ತತ್ವ"ದ ಗುಣವನ್ನು ಹೊಂದಿದೆ. ಈ ಆಧುನಿಕತೆಯ ಪ್ರಭಾವದಿಂದ ಜಾಗತಿಕ ಮಾರುಕಟ್ಟೆಯ ವಸ್ತುಗಳು ನೇರವಾಗಿ ಹಳ್ಳಿಗೆ ಧಾವಿಸುವಂತಾಗಿದೆ.

ಹಳ್ಳಿಗಳು ಜಾಗತೀಕರಣದ ಸುಳಿಗೆ ಸಿಲುಕಿ ಜಾಗತಿಕ ಮಾರುಕಟ್ಟೆಯತ್ತ ಮುಖಮಾಡಿ ದೇಶೀಯ ಸತ್ವ ಗುಣಗಳನ್ನು ಒಂದೊಂದಾಗಿ ಕೈಬಿಡುತ್ತಿವೆ. ಹಳ್ಳಿಯೇ ದೇಶದ ಬೆನ್ನೆಲುಬಾಗಿ ನಿಂತಿರುವ ಭಾರತ ದೇಶದಲ್ಲಿ ಜಾಗತೀಕರಣದ ಪ್ರಭಾವಕ್ಕೆ ಹಿಂದಿನಿಂದ ರೂಢಿಸಿಕೊಂಡು ಬರುತ್ತಿರುವಂತಹ ಸಾಂಸ್ಕೃತಿಕ ಪರಂಪರೆಯು ಹಿಂಬಳಿಕೆಯನ್ನ ಹೊಂದುತ್ತಿದ್ದು, ಭಾರತೀಯ ಸಂಸ್ಕೃತಿಗೆ ಬೇರೊಂದು ಸಂಸ್ಕೃತಿ ಕೂಡಿಕೊಂಡು ಒಂದೇ ಹಳಿಯಲ್ಲಿ ಎರಡು ಗಾಲಿಗಳು ಚಲಿಸುವಂತೆ ನಮ್ಮ ಸಂಸ್ಕೃತಿ ತನ್ನದೇ ರೀತಿ ನೀತಿಗಳನ್ನು ರೂಪಿಸಿಕೊಂಡು ಹೋಗುತ್ತಿದೆ. ಮುಖ್ಯವಾಗಿ ಜಾಗತೀಕರಣ ಮತ್ತು ದೇಶೀಯತೆಯ ಒಳಗೆ ಆಚರಿಸಲಾಗುತ್ತಿರುವ ಜಾತ್ರೆಗಳ ಬದಲಾಪಣೆಯ ಸ್ಥಿತಿಗೆ "ಆರ್ಥಿಕವಾದ, ಸಾಮಾಜಿಕವಾದ ಮತ್ತು ಸಂಸ್ಕೃತೀಕರಣ" ತತ್ವಗಳ ಆಧಾರದ ಮೇಲೆ ವಿಷಯವನ್ನು ಚರ್ಚೆಗೆ ಒಳಪಡಿಸಬಹುದಾಗಿದೆ. ಅದನ್ನು ಈ ಮುಂದಿನಂತೆ ಅಧ್ಯಯನಕ್ಕೊಳಪಡಿಸಬಹುದಾಗಿದೆ.

ಸಂಸ್ಕೃತಿ, ಆರ್ಥಿಕತೆ, ಸಾಮಾಜಿಕತೆ ಇವು ದೇಶೀಯ ಪ್ರಾಚೀನ ಕೂಸುಗಳು. ದೇಶೀಯತೆಯನ್ನು ಪ್ರತಿನಿಧಿಕರಣಗೊಳಿಸುತ್ತಿದ್ದಂತಹ ಈ ಮೂರು ತತ್ವಗಳು ಜಾಗತೀಕರಣದಿಂದ ಅವುಗಳ ಗುರಿ ಮತ್ತು ಉದ್ದೇಶವನ್ನು ಮರೆಮಾಚುತ್ತಾ ಕೇವಲ ಜಾತ್ರೆಗಳೆಂದರೆ ಧಾರ್ಮಿಕತೆ ಹಾಗೂ ಮತ ಪ್ರಚಾರ, ಮನೋರಂಜನೆ ಇಂತಹ ಧ್ಯೇಯೋದ್ದೇಶಗಳನ್ನು ಹೊಂದುತ್ತಾ ಬರುತ್ತಿವೆ. ಅಂದಿನ ಜಾತ್ರೆಗಳ ಮೂಲಭಾವ ಮತ್ತು ಇಂದು ಬದಲಾದ ಉದ್ದೇಶಗಳನ್ನಿಟ್ಟುಕೊಂಡು ಆರ್ಥಿಕವಾದ, ಸಾಮಾಜಿಕವಾದ ಮತ್ತು ಸಂಸ್ಕೃತೀಕರಣ ತತ್ವಗಳೊಂದಿಗೆ ಸಮೀಕರಿಸಿ ವಿಶ್ಲೇಷಿಸಬೇಕಾದದ್ದು ಅಗತ್ಯವೆನಿಸುತ್ತದೆ.

ಮೊದಲನೆಯದಾಗಿ ಆರ್ಥಿಕವಾದ ಜಾತ್ರೆಗಳಿಗೆ ಧಾರ್ಮಿಕ ಸಿದ್ಧಾಂತವೇನೇ ಇದ್ದರೂ ಸಹ ಆರ್ಥಿಕವಾಗಿ ಲಾಭದಾಯಕ ಸ್ಥಿತಿ ಇರುತ್ತದೆ. ಜಾತ್ರೆಗಳಲ್ಲಿ ಬಹುಮುಖ್ಯವಾಗಿ ನಾವು ಗಮನಿಸಬೇಕಾದದ್ದು ಅಂಗಡಿ ಮುಗ್ಗಟ್ಟುಗಳು, ವ್ಯಾಪಾರ ಮಳಿಗೆಗಳು ಇವು ದೇಶೀ

ವಸ್ತುಗಳಿರಬಹುದು ಅಥವಾ ಪ್ಲಾಸ್ಟಿಕ್ ವಸ್ತುಗಳಾಗಿರಬಹುದು. ಇಂತವುಗಳೆಲ್ಲ ಜಾತ್ರೆಗಳಲ್ಲಿ ಮಾರಾಟಗೊಳ್ಳುತ್ತಿರುತ್ತದೆ. (ಈ ಹಿಂದೆಯೂ ಸಹ ಜಾತ್ರೆಗಳು ವ್ಯಾಪಾರ ಚಿಂತನೆಯನ್ನು ಹೊಂದಿದ್ದವು. ಅತ್ಯಂತ ಶ್ರದ್ಧೆ, ಪ್ರಾಮಾಣಿಕ, ಅತ್ಯುತ್ತಮ ಗುಣಮಟ್ಟದ ವಸ್ತುಗಳನ್ನು ಜನರೇ ತಯಾರಿಸಿಕೊಂಡು ಬಂದು ಜಾತ್ರೆಗಳಲ್ಲಿ ಮಾರಾಟ ಮಾಡುತ್ತಿದ್ದರು. ಅದಕ್ಕೆಂದೇ ಜನಪದರು ಹತ್ತಾರು ಕಿ.ಮೀ. ದೂರವನ್ನು ನಡೆದುಕೊಂಡೋ ಅಥವಾ ಗಾಡಿಯಲ್ಲಿಯೋ ಬಂದು ತಮಗೆ ಬೇಕಾದಂತಹ ವಸ್ತುಗಳನ್ನು ಪಡೆಯುತ್ತಿದ್ದರು. ಯಾಕೆಂದರೆ ಅಂದು ಸಾರಿಗೆ ವ್ಯವಸ್ಥೆ ಈಗಿನಷ್ಟು ಪ್ರಬುದ್ಧವಾಗಿರಲಿಲ್ಲ. ಜನಪದರು ತಾವು ಪಡೆಯಬೇಕೆನಿಸಿದ ವಸ್ತುಗಳಿಗೋಸ್ಕರ ವರ್ಷದ ಜಾತ್ರೆಗಳು ಬರುವವರೆಗೂ ಕಾಯುತ್ತಿದ್ದರು. ಅವರಿಗೆ ಅದೊಂದು ನೆನಪಿನ ಬುತ್ತಿಯಿದ್ದಂತೆ ಭಾಸವಾಗುತ್ತಿತ್ತು. ಎಷ್ಟೋ ಸಂದರ್ಭದಲ್ಲಿ ಕೆಲವರಿಗೆ ಸಿಗದೇ ವಾಪಸಾಗುತ್ತಿದ್ದಂತಹ ಸನ್ನಿವೇಶಗಳೂ ಉಂಟು. ವಸ್ತುಗಳು ಇರುವ ಕಡೆ ಜನರು ಹುಡುಕಿಕೊಂಡು ಹೋಗುತ್ತಿದ್ದರು. ವಸ್ತುಗಳನ್ನು ಕೊಳ್ಳಲೆಂದೇ ಸುಮಾರು ದಿನಗಳ ಹಿಂದಿನಿಂದಲೇ ಸಾಕಷ್ಟು ತಯಾರಿ ನಡೆಸುತ್ತಿದ್ದರು. ಎಂತಹ ವಸ್ತು ಬೇಕು, ಯಾವ ಬೆಲೆಗಳಲ್ಲಿ ಇರಬೇಕು, ಎಂತಹ ಗುಣಮಟ್ಟದಿಂದ ಕೂಡಿರಬೇಕು. ಹೀಗೆ ಮುಂತಾದ ವಿಷಯಗಳನ್ನೆಲ್ಲಾ ಚರ್ಚಿಸಿ ಜಾತ್ರೆಯ ದಿನದಂದು ತಾವೇ ಖುದ್ದಾಗಿ ಹೋಗಿ ಸೂಕ್ತ ವಸ್ತುಗಳನ್ನು ತರುವುದು ಹಿಂದಿನ ಜನಪದರ ಪದ್ಧತಿಯಾಗಿತ್ತು.

ಆಧುನಿಕತೆ ಕಾಲಿಡುವುದಕ್ಕಿಂತ ಮುಂಚೆ ಜನಪದರಲ್ಲಿ ಅಥವಾ ವ್ಯಾಪಾರ ಮಾಡುವರಲ್ಲಿ ಕೇವಲ ಜನಪದರ ಕಾಳಜಿಯುಳ್ಳ ಜನರಿಗೆ ದೀರ್ಘಕಾಲ ಉಪಯೋಗವಾಗಬೇಕು, ಜನರು ಮತ್ತೊಮ್ಮೆ ವಸ್ತುಗಳನ್ನು ಕೊಂಡುಕೊಳ್ಳಬೇಕು, ಅದರಿಂದ ಜನರಿಗೆ ಪ್ರಯೋಜನವೂ ಆಗುತ್ತದೆ ಹಾಗೂ ಜನಸೇವೆಯೂ ಆಗುತ್ತದೆ ಎಂಬ ವಿಶಾಲ ಮನೋಭಾವ ವ್ಯಾಪಾರಿಗಳಿಗಿರುತ್ತಿತ್ತು. ಅದೊಂದು ಸಾಮಾಜಿಕ ಸೇವೆ ಎಂತಲೇ ಭಾವಿಸಲಾಗುತ್ತಿತ್ತು. ಮಾನವ ಧರ್ಮ, ಮಾನವೀಯತೆ ಎಂಬ ಗುಣ ಮನುಷ್ಯನಿಗೆ ಸಹಜವಾಗಿಯೇ ಹೊಂದಿರುವಂತಹ ಗುಣವಾಗಿದ್ದವು.

ಕಾಲ ಬದಲಾದಂತೆಲ್ಲಾ ಮನುಷ್ಯನ ಸಹಜ ಗುಣಗಳು ಮರೆಯಾಗಿ ಬಹುಶಃ ಸಾಮಾನ್ಯವಾಗಿ ವ್ಯಾಪರ ಭಾವವೇ ತುಂಬಿಕೊಂಡಿರುವಂತಹ ಜಾತ್ರೆಗಳು ಕ್ರಮೇಣ ವಾಣಿಜ್ಯೀಕರಣಗೊಳ್ಳುತ್ತಾ ಪ್ರತಿಯೊಂದನ್ನು ವ್ಯಾಪಾರ ಮನೋಭಾವದಿಂದಲೇ ನೋಡುತ್ತಾರೆ. ಜೊತೆಗೆ ಇಂದಿನ ದಿನಗಳಲ್ಲಿ ಎಲ್ಲವೂ ಯಂತ್ರಗಳಿಂದಲೇ ತಯಾರಾಗುತ್ತಿದ್ದು, ಅವುಗಳ ಬೆಲೆ ಗುಣಮಟ್ಟ ಬದಲಾಗುತ್ತಿದೆ. ಮನುಷ್ಯನ ಭವಿಷ್ಯವನ್ನು ಒಂದು ಕಂಪ್ಯೂಟರ್ ಯಂತ್ರ ಹೇಳುತ್ತದೆ ಎಂದರೆ ಮಾನವನ ಜೀವನ ಎಂತಹ ಹಂತಕ್ಕೆ ತಲುಪಿದೆ, ಮನುಷ್ಯ ಯಂತ್ರಗಳ ಅಡಿಯಾಳಾಗಿ ದುಡಿಯುತ್ತಿರುವ ಸಂದರ್ಭಗಳು ಎದುರಾಗುತ್ತಿವೆ. ಎಲ್ಲಾ ವಸ್ತುಗಳು ಪ್ಲಾಸ್ಟಿಕ್‌ನಿಂದ ತಯಾರಾಗುತ್ತಿರುವುದೇ ಆಗಿದೆ. ಒಮ್ಮೆ ಕೊಂಡು ಹೋದರೆ ಅದು ಕೆಲವೇ

ದಿನ ಬಳಕೆಗೆ ಬರುವಂತಹ ವಸ್ತುವಾಗಿರುತ್ತದೆಯೇ ವಿನಾ ಮತ್ತೊಂದು ಸಲ ಉಪಯೋಗಕ್ಕೆ ಬರಲಾರದು.) ಇವು ದೇಶದ ಆರ್ಥಿಕ ಭದ್ರತೆಗೆ ಇಂದು ಮೂಲ ಕಾರಣವಾಗುತ್ತಿವೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ಬಿಕ್ಕಟ್ಟು ತಲೆದೋರಿ ರೂಪಾಯಿ ಮೌಲ್ಯ ಕುಸಿಯುತ್ತಿದೆ. ದೇಶೀಯ ಸೊಗಡಿನಿಂದ ತಯಾರಾಗುವ ವಸ್ತುಗಳ ಸಂಖ್ಯೆ ದಿನೇ ದಿನೇ ಕಡಿಮೆಯಾಗಿ ಹೊರ ದೇಶಗಳಿಂದ ಅಮದಾಗುವಂತಹ ವಸ್ತುಗಳೇ ಬಹಳಷ್ಟಾಗಿವೆ. ಕಾರಣ ಬ್ರಿಟಿಷ್ ಕಾಲದಿಂದಲೂ ನಮ್ಮಲ್ಲಿರುವ ವಸ್ತುಗಳು ಬೇರೊಂದು ದೇಶಗಳಿಗೆ ಬಹುವಾಗಿ ರಫ್ತಾಗಿರುವ ಕಾರಣದಿಂದ ನಮ್ಮಲ್ಲಿ ಇಂದು ಸಂಪತ್ತು ಕಡಿಮೆಯಾಗುತ್ತಾ ಬರುತ್ತಿದೆ. ಮನುಷ್ಯನ ಮೂಲಭೂತ ಅಥವಾ ಅವಶ್ಯಕ ವಸ್ತುಗಳು ಸಹ ದೊರೆಯುವುದು ದುಸ್ತರವಾಗುತ್ತಿದೆ. ನಮ್ಮ ಭಾರತೀಯರ ಬೇಕು ಬೇಡಗಳನ್ನು ಬೇರೊಂದು ದೇಶದವರು ವಿಚಾರಿಸಿ, ನಿರ್ಧರಿಸಿ ಅಂತಹ ವಸ್ತುಗಳನ್ನು ಅವರೇ ತಯಾರಿಸಿ ದುಬಾರಿ ಬೆಲೆಗೆ ನಮಗೆ ಮಾರಾಟ ಮಾಡುತ್ತಿರುವಂತಹ ಪರಿಸ್ಥಿತಿ ಇಂದು ನಮ್ಮ ಕಣ್ಣೆದುರಿಗಿದೆ.

ನಮ್ಮ ಭವಿಷ್ಯವನ್ನು ನಿರ್ಧರಿಸುವವರು ನಮ್ಮ ದೇಶದ ಪ್ರತಿನಿಧಿಗಳಲ್ಲ ಅಥವಾ ನಮ್ಮವರಲ್ಲ ಪರಕೀಯರು. ಪ್ರತಿ ಭಾರತೀಯನ ಬೇಕು ಬೇಡಗಳು ಅವರ ನಿರ್ಧಾರದಂತೆಯೇ ನಡೆಯಬೇಕು, ಇಲ್ಲವಾದರೆ ದೇಶದ ಬುಡಕ್ಕೆ ಆಪತ್ತು ಬರುತ್ತದೆ. ದೇಶದ ಬೆನ್ನೆಲುಬು ರೈತ ಎಂದು ದೇಶದ ಮೂಲ ವರಮಾನ ಕೃಷಿಯಿಂದಲೇ ಎಂದು ಬಹುವಾಗಿ ಭಾಷಣ ಮಾಡುವಂತಹ ಪ್ರತಿನಿಧಿಗಳು ಒಮ್ಮೆಯೂ ರೈತನ ಬಗ್ಗೆ ಕಾಳಜಿ ಮಾಡುತ್ತಿಲ್ಲ. ಪ್ರತಿದಿನ, ಪ್ರತಿ ಕ್ಷಣ ರೈತರ ಮೇಲೆ ಆಗುವಂತಹ ದೌರ್ಜನ್ಯ, ನೋವು, ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸದೆ ಸ್ವಾರ್ಥ ಬದುಕನ್ನು ನಡೆಸುತ್ತಿರುವವರೇ ನಮ್ಮಲ್ಲಿ ಬಹುವಾಗಿದ್ದಾರೆ. ರೈತ ಬೆಳೆದಂತಹ ಬೆಳೆಗಳಿಗೆ ಒಂದು ನಿರ್ದಿಷ್ಟ ಬೆಲೆಯನ್ನು ನೀಡಲಿಕ್ಕೂ ಸಾಧ್ಯವಿಲ್ಲ. ಅಕಾಲಕ್ಕೆ ತುತ್ತಾದ ಬೆಳೆಗಳಿಗೆ ಪರಿಹಾರ ಇಲ್ಲವೇ ಇಲ್ಲ. ರೈತನಿಗೆ ಉಳುಮೆಗೆ ಬೀಜ, ಗೊಬ್ಬರ, ಔಷಧಿ ಮುಂತಾದ ಅಗತ್ಯ ವಸ್ತುಗಳು ಸಾಮಾನ್ಯ ರೈತನ ಕೈಗೆ ಎಟುಕಲಾರದಂತಹ ದುಬಾರಿಯಾಗಿವೆ. ಅಲ್ಲದೇ ಯಾಂತ್ರೀಕರಣದಿಂದ ಮನುಷ್ಯ ಅನಾದಿ ಕಾಲದಿಂದಲೂ ನಂಬಿ–ಪೂಜಿಸಿಕೊಂಡು ತನ್ನ ತೋಳ ಶಕ್ತಿ ಎಂಬಂತೆ ನಂಬಿಕೊಂಡು ಬಂದಂತಹ ಜಾನುವಾರುಗಳಿಗೆ ಕೆಲಸವೇ ಇಲ್ಲದೆ, ಅವುಗಳ ಸಂಖ್ಯೆ ದಿನೇ ದಿನೇ ಕುಂಟಿತವಾಗಿ ಇಂದು ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯ ಕೆಲಸಗಳನ್ನೇ ಮಾಡುವುದು ಕೈ ಬಿಡುತ್ತಿದ್ದಾರೆ. ಜನರು ರೈತರಿಗೆ ಸರಿಯಾದ ಸಮಯದಲ್ಲಿ ಸರ್ಕಾರ ಅಥವಾ ಜನರಿಂದಲೇ ಚುನಾಯಿತರಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಜನರು ತಮ್ಮನ್ನು ಚುನಾಯಿಸಿದ ಜನರ ನೋವು ನಲಿವುಗಳಿಗೆ ಸ್ಪಂದಿಸದೆ ಸ್ವಹಿತಾಸಕ್ತಿಗಾಗಿ ಸಾಮಾನ್ಯ ಜನರನ್ನು ಬಲಿ ಪಡೆಯುತ್ತಿದ್ದಾರೆ. ಇದರಿಂದ ಪ್ರತಿ

ದಿನವೂ ಒಂದಲ್ಲಾ ಒಂದು ದೌರ್ಜನ್ಯ, ಅವಮಾನ, ಶೋಷಣೆಗಳು ರೈತನ ಮೇಲೆ ನಡೆಯುತ್ತಲೇ ಇವೆ. ಹೀಗಾಗಿ ದೇಶಕ್ಕೆ ವರಮಾನ ತಂದುಕೊಡುವ ರೈತನ ಸ್ಥಿತಿಯೇ ದುರಂತವಾಗಿರುವಾಗ ದೇಶದ ಆರ್ಥಿಕ ಸ್ಥಿತಿ ಹೇಗೆ ಸುಸ್ಥಿತಿಯಾಗಬಹುದು. ಕೈಗಾರಿಕೆಗಳಿಂದ, ಯಂತ್ರಗಳಿಂದ ನಡೆಯುವ ಕೆಲಸಗಳು ಎಷ್ಟರಮಟ್ಟಿಗೆ ಗುಣಮಟ್ಟವನ್ನು ಕಾಪಾಡಿಕೊಂಡು ಬರುವವು ಎಂಬುದು ಚರ್ಚೆಗೆ ಬಿಟ್ಟ ವಿಷಯವಾಗಿದೆ.

ಪ್ರತಿ ಮನುಷ್ಯನ ಸುಗಮ ಜೀವನಕ್ಕೆ ಪ್ರತಿ ಅಂಗವೂ ಹೇಗೆ ಕಾರಣವಾಗುತ್ತದೆಯೋ ಅದೇ ರೀತಿಯಲ್ಲಿ ಫಲವತ್ತಾದ ಭೂಮಿಯಲ್ಲಿ ಉತ್ತಮ ಫಸಲು ಬೆಳೆಯಲು ಎಲ್ಲಾ ರೀತಿಯಿಂದಲೂ ಆರೋಗ್ಯಕರವಾದ ವಾತಾವರಣ, ಪರಿಸರ, ಸಲಕರಣೆಗಳು, ಅತ್ಯಗತ್ಯ ವಸ್ತುಗಳು ಹೀಗೆ ಪ್ರತಿಯೊಂದು ಅವಶ್ಯಕವಾಗಿರುತ್ತದೆ. ಹಾಗಾದಾಗ ಭೂಮಿಯಲ್ಲಿ ಉತ್ತಮ ಬೆಳೆ ಬೆಳೆಯಲು ಸಾಧ್ಯವಾಗುತ್ತದೆ. ಹಾಗೆಯೇ ಒಂದು ದೇಶದ ಆರ್ಥಿಕ ಸ್ಥಿತಿ ಭದ್ರತೆಯಿಂದ ಕೂಡಿರಬೇಕಾದರೆ ದೇಶದ ಮೂಲ ಆದಾಯ ಬರುವಂತಹ ಕ್ಷೇತ್ರ ಅತ್ಯಂತ ಮುಖ್ಯವಾದ ಕ್ಷೇತ್ರ. ಭಾರತದಲ್ಲಿ ದೇಶದ ಮೂಲ ಬೆನ್ನೆಲುಬು ಕೃಷಿ, ರೈತ ಆಗಿರುವುದರಿಂದ ಇಲ್ಲಿನ ಪ್ರತಿ ಬೆಳವಣಿಗೆಯಲ್ಲಿ ರೈತನ ಶ್ರಮವಿದೆ. ರೈತನ ಬೆವರಿನಲ್ಲಿ ದೇಶ ಕೋಟೆಯನ್ನು ಕಟ್ಟಲಾಗುತ್ತಿದೆ. ಹೀಗೆ ರೈತ ಅಥವಾ ಕೃಷಿ ವ್ಯವಸ್ಥೆಗೆ ಮಾನವನ ಬದುಕಿನ ಮೇಲೆ ಅತ್ಯಂತ ಪರಿಣಾಮಕಾರಿ ಪ್ರಭಾವ ಬೀರುತ್ತಿದ್ದು, ಜೀವನದ ಸ್ಥಿತಿಗತಿಯನ್ನ ಪ್ರತಿಬಿಂಬಿಸುತ್ತಿರುವ ಜನಪದರ ಬದುಕು ಅವರ ಜೀವನದುದ್ದಕ್ಕೂ ಆಚರಿಸಿಕೊಂಡು ಬರಲಾಗುತ್ತಿರುವ ಆಚರಣೆಗಳ ಮೇಲೆಯೂ ಪ್ರಭಾವಿಸುತ್ತವೆ. ಅದೇ ತರನಾಗಿ ಜಾತ್ರೆಗಳಲ್ಲಿ ಕೃಷಿಯ ಪಾತ್ರ ಅಥವಾ ರೈತನ ಪಾತ್ರ ಅತ್ಯಂತ ಪ್ರಮುಖವಾದುದು.

ರೈತ ಬೆಳೆಯುವ ಬೆಳೆಗೆ ಉತ್ತಮವಾದ ಬೆಂಬಲ ಬೆಲೆ ದೊರೆಯದೆ ರೈತರು ಸಾಕಷ್ಟು ಕಷ್ಟಗಳನ್ನು ಅನುಭವಿಸುತ್ತಿರುವ ದೃಶ್ಯವನ್ನು ನಾವಿಂದು ಸಾಕಷ್ಟು ಕಾಣಬಹುದು. ಜನರಿಂದಲೇ ಆಯ್ಕೆಯಾಗಿ ಸರ್ಕಾರ ರಚಿಸಿಕೊಂಡು ಆಳ್ವಿಕೆ ನಡೆಸುತ್ತಿರುವ ಪ್ರತಿನಿಧಿಗಳು ರೈತರ ಜೀವನದಲ್ಲಿ ಚೆಲ್ಲಾಟವಾಡುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡುತ್ತಿದ್ದಾರೆ. ಜನಪದರು ಸುಗ್ಗಿಯನ್ನು ಮುಗಿಸಿಕೊಂಡು ಜಾತ್ರೆ, ಹಬ್ಬ, ಹರಿದಿನಗಳನ್ನು ಆಚರಿಸಲಿಕ್ಕೆ ಪ್ರಾರಂಭಿಸುತ್ತಿದ್ದು, ಜಾತ್ರೆಗಳಲ್ಲಿ ರೈತರು ಬೆಳೆದ ಬೆಳೆ, ಜನಪದರು ತಯಾರಿಸಿದ ವಸ್ತುಗಳು, ಜಾತ್ರೆಗಳಲ್ಲಿ ವ್ಯಾಪಾರ ಮಾಡಲಾಗುವ ವಸ್ತುಗಳು ಜನಪದರಿಗೆ ಕೈಗೆಟುಕುವ ಬೆಲೆಯಲ್ಲಿ ದೊರೆಯುವಂತೆ ಮಾರಾಟ ಮಾಡುವುದು ಸಹಜ ಧರ್ಮ. ಆದರೆ ಇಂದು ರೈತರು ಬೆಳೆದಂತಹ ಬೆಳೆಗಳು ನಗರ ಪ್ರದೇಶಗಳಲ್ಲಿ ರಚನೆ ಮಾಡಿರುವಂತಹ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲಾಗುತ್ತಿದ್ದು, ಸರ್ಕಾರದಿಂದ ನಿಯೋಜಿತಗೊಂಡಿರುವ ಅಧಿಕಾರಿಗಳು ಅಥವಾ

ಸರ್ಕಾರವೇ ಒಂದು ನಿಗದಿತ ಬೆಲೆಯಲ್ಲಿ ಕೊಂಡು ರೈತರಿಗೆ ಸುಲಭ ದಾರಿಯನ್ನು ಮಾಡಿಕೊಡುತ್ತಿದ್ದರೆ ಒಂದೊಂದು ಸಲ ಸರ್ಕಾರದಿಂದ ಸರಿಯಾದ ಬೆಲೆ ಸಿಗದೆ ಅದೆಷ್ಟೋ ರೈತರು ಅನ್ಯಾಯವಾಗಿ ಕಷ್ಟಗಳನ್ನು, ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಬಹಳ ಕ್ರೂರವಾದ ರೀತಿಯಲ್ಲಿ, ಅಮಾನುಷವಾದ ವರ್ತನೆಗಳಿಂದ ಬೇಸತ್ತ ರೈತರು ಕೃಷಿಯ ಕಾರ್ಯವನ್ನೇ ಕೈಬಿಡುತ್ತಿರುವಂತಹ ಸನ್ನಿವೇಶ ಇಂದು ನಿರ್ಮಾಣವಾಗುತ್ತಿದೆ. ಇದು ಒಂದು ರೀತಿಯಲ್ಲಿ ಯೋಚನೆ ಮಾಡಿದಾಗ ಕೃಷಿಯಲ್ಲಿ ಉಂಟಾಗುತ್ತಿರುವ ವೈಪರೀತ್ಯಗಳು, ಪ್ರತಿಕೂಲ ವಾತಾವರಣ ರೈತನ ಮೇಲೆ, ವಾತಾವರಣದ ಮೇಲೆ ಸಾಕಷ್ಟು ವಿಕೋಪಗಳು ಸೃಷ್ಟಿಯಾಗುತ್ತಿದ್ದು, ಕಾಲಕ್ಕೆ ತಕ್ಕಂತಹ ಪರಿಸರವೇ ಇಲ್ಲದಂತಾಗಿದೆ. ಚಳಿಗಾಲದಲ್ಲಿ ಬಿಸಲು ಬಹಳವಿರುವುದು.

ಮಳೆಗಾಲದಲ್ಲಿ ಮಳೆಯೇ ಬಾರದಿರುವುದು, ಸಮಯ ಮೀರಿಯೋ ಅಥವಾ ಅನಾವಶ್ಯಕ ಸಂದರ್ಭಗಳಲ್ಲಿ ಮಳೆ ಬಂದು ರೈತರಲ್ಲಿ ಆತಂಕ ಮೂಡಿಸುವುದು, ರೈತನ ಬಾಳಿನಲ್ಲಿ ಅಖಂಡ ಜೂಜಾಟವಾಡುವ ಪ್ರಕೃತಿ ಯಾವ ರೈತನಿಗೆ ಬೆನ್ನೆಲುಬಾಗಿ ಸಹಾಯಕ್ಕಿದೆ ಎಂಬುದೇ ತಿಳಿಯದಾಗಿದೆ. ಇಂದು ರೈತರು ಬೆಳೆದ ದವಸ–ಧಾನ್ಯಗಳಿಗೆ ವಿದೇಶಗಳಲ್ಲಿಯೂ ಉತ್ತಮ ಬೆಲೆ ದೊರೆಯುತ್ತಿದ್ದು, ಸಂತಸಪಡುವ ವಿಷಯವಾದರೂ ಅದೆಷ್ಟು ರೈತರು ತಮ್ಮ ಮೂಲ ಕೃಷಿಯನ್ನು ಬಿಟ್ಟು ಬೇರೆ ವಿಧಾನಕ್ಕೆ ತಮ್ಮನ್ನು ಒಗ್ಗಿಸಿಕೊಂಡಿಲ್ಲ. ಯಾಂತ್ರೀಕರಣದ ಈ ಸಂದರ್ಭದಲ್ಲಿ ಪ್ರತಿ ಕ್ಷಣ, ಪ್ರತಿ ದಿನ ಮನುಷ್ಯ ಬುದ್ಧಿವಂತನಾಗುತ್ತಿದ್ದು ಸುಲಭವಾಗಿ ಭೂಮಿಯನ್ನು ಉಳುಮೆ ಮಾಡುವ ಸಾಧನಗಳನ್ನು ಕಂಡುಕೊಂಡಿದ್ದಾನೆ. ಇಷ್ಟಾಗಿಯೂ ನಮ್ಮ ದೇಶದಲ್ಲಿ ಕೃಷಿ ಕ್ಷೇತ್ರವು ಮುಂದುವರೆಯಲಾಗದೆ ದುರಂತ ಸ್ಥಿತಿಯನ್ನು ಅನುಭವಿಸುತ್ತಿದೆ. ಆರ್ಥಿಕ ಭದ್ರತೆಗೆ ಕೃಷಿಯೇ ಮೂಲವಾಗಿದ್ದರೂ ಕೃಷಿಯಿಂದ ರೈತ ದೂರ ಸರಿಯುತ್ತಿದ್ದಾನೆ. ಇದಕ್ಕೆ ಆಧುನೀಕರಣ, ಯಾಂತ್ರೀಕರಣ, ನಗರೀಕರಣ ಇಂಥವು ಕಾರಣವಾಗಿವೆ. ಇದು ಕೇವಲ ಆರ್ಥಿಕ ಸ್ಥಿತಿಗೆ ಅಷ್ಟೇ ಅಲ್ಲದೆ ಜನಪದರು ಪರಂಪರಾಗತವಾಗಿಯೂ ಆಚರಿಸಿಕೊಂಡು ಬರಲಾಗುತ್ತಿರುವ ಆಚರಣೆಗಳ ಮೇಲೆ, ಸಂಪ್ರದಾಯಗಳ ಮೇಲೆ ಪ್ರತಿಕೂಲ ಪ್ರಭಾವ ಬೀರುತ್ತಿದ್ದು ಕ್ರಮೇಣ ಜನಪದರಿಂದ ಅಂತಹ ಆಚರಣೆಗಳು ಬೇರೊಂದು ರೂಪವಾಗಿ ಬದಲಾಗುತ್ತಿವೆ. ಹಾಗಾಗಿ ಜಾತ್ರೆಗಳ ಆಚರಣೆಗಳಲ್ಲಿ ಕೃಷಿಯೂ ಸಹ ಒಂದು ಮೂಲ ಕಾರಣವಾಗುತ್ತಿದ್ದು, ಇದರಿಂದಾಗಿ ಜಾತ್ರೆಗಳ ರೂಪ, ಸ್ವರೂಪ, ಆಚಾರ, ವಿಚಾರ ಇಂತಹ ಅನೇಕ ವಿಚಾರಗಳಲ್ಲಿಯೂ ತೀವ್ರವಾದ ಬದಲಾವಣೆ ಕಾಣುತ್ತಿದ್ದೇವೆ. ಜಾತ್ರೆಗಳನ್ನು ಸಾಮಾಜಿಕ ನೆಲೆಗಟ್ಟಿನಿಂದ ನೋಡುವುದಾದರೆ, ಅವಲೋಕಿಸುವುದಾದರೆ ಮಾನವ ಜಗತ್ತನ್ನ ವಿಸ್ತಾರವಾಗಿ ಹರಡಿಕೊಂಡಿರುವ ಬಳ್ಳಿಯಂತಿದೆ. ಸಮಾಜ ಮಾನವ ಜೀವನವನ್ನು ಕುರಿತಾಗಿ ವ್ಯವಸ್ಥಿತವಾಗಿ ತಾನೇ ಹೆಣೆದುಕೊಂಡು ಬಂದು ಬಲೆಯಂತೆ ಇಲ್ಲಿ ಅವನ ಬೌದ್ಧಿಕ ಮತ್ತು ಭೌತಿಕ

ಜೀವನದ ಎಂತಹ ರಹಸ್ಯ ಅಡಗಿದ್ದರೂ ಸಹ ಜೀವನದ ತತ್ವ ನಿತ್ಯವೂ ಹೊಸತನದಿಂದ ಕೂಡಿರುತ್ತದೆ. ಮಾನವ ನಿರ್ಮಿತ ಸಮಾಜವು ಮಾನವನ ಎಲ್ಲಾ ಚಟುವಟಿಕೆಗಳನ್ನು ಆಗರವಾಗಿ ಕಟ್ಟಿಕೊಂಡಿರುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ವಿವಾಹ, ಕುಟುಂಬ, ಶಿಕ್ಷಣ, ಒಕ್ಕಲುತನ, ಪರಿಸರ, ಸಾಂಸ್ಕೃತಿಕ, ಧಾರ್ಮಿಕ ಹೀಗೆ ಎಲ್ಲವನ್ನೂ ಸಮಾಜ ತನ್ನೊಳಗೆ ಸೇರಿಸಿಕೊಂಡಿರುತ್ತದೆ.

ಮನುಷ್ಯ ಎಂದು ನಾಗರಿಕನಾಗಿ ತನ್ನ ಜೀವನವನ್ನು ನಿರ್ವಹಿಸಿಕೊಂಡು ನಾಗರಿಕನಾಗಿ ಮುನ್ನಡೆಸಿಕೊಂಡು ಹೋದನೋ ಆಗ ಸಮಾಜವೂ ಸಹ ಅವನಿಂದಲೇ ಸೃಷ್ಟಿಯಾಯಿತು. ಅಂತಹ ಸಮಾಜದಿಂದ ತನ್ನೆಲ್ಲಾ ಬೇಕು ಬೇಡಗಳಾಗಿ ಇಷ್ಟು ಕಷ್ಟಗಳನ್ನು ಪೂರೈಸಿಕೊಳ್ಳತೊಡಗಿದ. ಸಾಮಾಜಿಕ ತತ್ವದ ಪ್ರಕಾರ 'ಸಮಾನತೆ, ಮುಕ್ತ ಸ್ವಾತಂತ್ರ್ಯ, ಸಹೋದರತೆ, ಸಹಬಾಳ್ವೆ, ಭಾವೈಕ್ಯತೆ, ಸಾಮಾಜಿಕ ನ್ಯಾಯ ಹೀಗೆ ಮನುಷ್ಯ ಕಲ್ಯಾಣ ತತ್ವಗಳನ್ನು ರೂಪಿಸಿಕೊಂಡು ಇವು ಆ ಸಮಾಜವನ್ನು ಪ್ರತಿಪಾದಿಸುವಂತಿರುತ್ತವೆ. ನಾವು ಎಲ್ಲರಿಗಾಗಿ, ಎಲ್ಲರೂ ನಮಗಾಗಿ ಎಂಬಂತೆ ಎಲ್ಲಾ ಮನುಷ್ಯ ವರ್ಗ ಒಂದಾಗಿ ಪ್ರೀತಿ–ಸ್ನೇಹಭಾವದಿಂದ ಬಾಳುವುದನ್ನು ಬಯಸುತ್ತಾನೆ. ಈ ದೃಷ್ಟಿಯಿಂದಲೇ ಮಾನವ ಸಂಘ ಜೀವಿ ಎಂದು ಹೇಳುವುದು. ತಾತ್ವಿಕವಾಗಿ ಸತ್ಯ. ಏಕೆಂದರೆ ಮನುಷ್ಯ ಜಗತ್ತಿನಲ್ಲಿ ಒಬ್ಬನೇ ಬದುಕುವುದಿಲ್ಲ. ಅವನ ಜೊತೆ ತಂದೆ–ತಾಯಿ, ಅಣ್ಣ–ತಮ್ಮ, ಅಕ್ಕ–ತಂಗಿ, ಸ್ನೇಹಿತ, ಹೆಂಡತಿ, ಮಕ್ಕಳು ಹೀಗೆ ಇಡೀ ಒಂದು ಸಮೂಹವೇ ಭೇದಿಸುತ್ತಿರುತ್ತದೆ. ಅಲ್ಲಿ ಸಾಮೂಹಿಕ ಜೀವನ ನಡೆಯುತ್ತಿರುತ್ತದೆ. ಆದ್ದರಿಂದ ಅಲ್ಲಿ ಸಾಮಾಜಿಕ ಬದ್ಧತೆಗೆ ಮಹತ್ವವನ್ನು ನೋಡಲಾಗುತ್ತದೆ. ಈ ರೀತಿಯ ಸಾಮಾಜಿಕ ನೆಲೆಯಿಂದ ಜಾತ್ರೆಗಳು ರೂಪುಗೊಂಡಂತಹವುಗಳು. ಇವುಗಳು ಮಾನವನಿಂದಲೇ ಪುರಾತನ ಕಾಲದಿಂದಲೇ ಬೆಳೆದು ಬಂದ ಕಾಲ ಕಾಲಕ್ಕೆ ರೂಪಾಂತರಗೊಂಡು ಆಯಾಕಾಲದ ಜನಸಾಮಾನ್ಯರ ಆಚರಣೆಗಳಿಗೆ ತಕ್ಕಂತೆ ಆಚರಿಸಿಕೊಂಡು ಬರುತ್ತಿವೆ.

ಹಿಂದೆ ಜಾತ್ರೆಗಳು ಒಂದು ಗ್ರಾಮಕ್ಕೆ, ಒಂದು ಜನಾಂಗಕ್ಕೆ, ಒಂದು ದೇವತೆಗೆ ಸಂಬಂಧಿಸಿರುತ್ತಿದ್ದವು. ಇಲ್ಲಿ ಒಂದು ವಿಧವಾದ ಜನರು ಪಾಲ್ಗೊಳ್ಳುತ್ತಿದ್ದರು. ಹೊರಗಿನ ಜನರು ಆಚರಣೆ ಸಂಪ್ರದಾಯಗಳಿಂದ, ಅಜ್ಞಾನ, ಮೌಢ್ಯತೆ, ಸಂಪರ್ಕದ ಅವ್ಯವಸ್ಥೆಯಿಂದ ಪಾಲ್ಗೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಆದರೆ ನಂತರದ ದಿನಗಳಲ್ಲಿ ಅಂದರೆ ಮಾನವನ ಬದುಕು ಮುಂದುವರಿದಂತೆಲ್ಲಾ, ಬುದ್ಧಿವಂತಿಕೆಯು ಬೆಳೆದಂತೆಲ್ಲಾ ತನಗೆ ಬೇಕಾದಂತಹ ಮೂಲಭೂತ ಸೌಲಭ್ಯಗಳನ್ನು ತಾನೇ ತಯಾರಿಸಿಕೊಳ್ಳತೊಡಗಿದ. ಮತ್ತೆ ಸಂಚಾರಿ ವ್ಯವಸ್ಥೆ ಬೆಳಕಿಗೆ ಬಂದು ಅಲ್ಲಿಂದ ಮುಂದಕ್ಕೆ ಅದೊಂದು ಮಾರ್ಗೋಪಾಯವಾಗಿ ಜನಸಂಪರ್ಕಕ್ಕೆ ನಾಂದಿಯಾಯಿತು. ಒಂದು ಪ್ರದೇಶದ ಜನ ಮತ್ತೊಂದು ಪ್ರದೇಶಕ್ಕೆ ಓಡಾಡತೊಡಗಿದರು.

ಇದರಿಂದ ಅಲ್ಲಿ ಬಾಂಧವ್ಯಗಳು ಬೆಳೆದವು. ಸಂಸ್ಕೃತಿಗಳು ಬೆಳೆದವು. ಜನರು ತಮ್ಮ ಸಂಬಂಧಗಳನ್ನು ಹೆಚ್ಚಿಸಿಕೊಂಡರು. ಮುಂದುವರಿದಂತೆ ಎಲ್ಲಾ ರೀತಿಯಿಂದಲೂ ಜನರು ಪರಸ್ಪರ ಹಂಚಿಕೊಳ್ಳುವ ಪದ್ಧತಿ ರೂಢಿಯಲ್ಲಿ ಬಂತು. ಅದು ಶತಮಾನಗಳಿಂದ ಹಾಗೆ ಮುಂದುವರೆದುಕೊಂಡು ಬಂದು ಇಂದಿನ ಆಧುನಿಕ ಯುಗಕ್ಕೆ, ಕಾಲಕ್ಕೆ ಸಂಪರ್ಕ ವ್ಯವಸ್ಥೆ ಎಂಬುದು ಭೂಮಿಯನ್ನು ಬಿಟ್ಟು ಗಗನಕ್ಕೆ ಹಾರಿದೆ. ಅನ್ಯ ಗ್ರಹಗಳವರೆಗೂ ಸಂಚರಿಸಬಹುದು ಎಂಬ ಸತ್ಯವನ್ನು ಇಂದು ನಮ್ಮ ಕಣ್ಮುಂದೆ ಕಾಣುತ್ತಿದೆ. ಅದಕ್ಕೆ ಅಥವಾ ಈ ಬೆಳವಣಿಗೆಗೆ ಮಾನವ ಹರಿಸಿರುವ ಬೆವರಿನ ಹನಿ ಸಾಕಷ್ಟಿದೆ. ನೂರಾರು, ಸಾವಿರಾರು ಜನರ ಶ್ರಮವಿದೆ. ಹಗಲು-ರಾತ್ರಿ ಎನ್ನದೆ ಹುಡುಕಾಟದ ಫಲವಿದೆ. ಆದ್ದರಿಂದ ಏಕ ಸಂಸ್ಕೃತಿಯಿಂದ ಅನೇಕ ಸಂಸ್ಕೃತಿಗಳ ಮಿಲನದಿಂದ ಆಚರಣೆಗಳು ಮತ್ತಷ್ಟು ಬೆಳಕಿಗೆ ಬರಲು ಸಾಧ್ಯವಾಯಿತು. ಇದು ಜಾತ್ರೆಗಳ ಉಗಮಕ್ಕೆ ಬುನಾದಿಯಾಯಿತು. ಹೀಗಾಗಿ ಜಾತ್ರೆಗಳು ಲೋಕಾನು ಸಂಧಾನಗೊಳ್ಳುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಜಾತ್ರೆಗಳು ಮತ್ತು ಲೋಕಾನುಸಂಧಾನ ಎನ್ನುವುದರೊಂದಿಗೆ ವಿಶ್ಲೇಷಣೆ ಮಾಡುವುದು ತೀರಾ ಅಗತ್ಯ ಕ್ರಮ. ಇದನ್ನು ಮತ್ತೊಂದು ಅರ್ಥದಲ್ಲಿ ಸಂಸ್ಕೃತೀಕರಣ ಎನ್ನಲೂಬಹುದಾಗಿದೆ.

ಜಾತ್ರೆಗಳು ಸಾಮಾಜಿಕ ಸಂಸ್ಕೃತಿಯನ್ನು ಕಾಪಾಡುತ್ತವೆ. ದೇವಾಲಯ, ಶಾಲೆ, ಪಂಚಾಯಿತಿಗಳು ಇವೆಲ್ಲ ಸಾರ್ವತ್ರಿಕವಾದವುಗಳು. ಜಾತ್ರೆಗಳು ತಮ್ಮಲ್ಲಿನ ಆದಾಯದಿಂದ ದೇವಾಲಯವನ್ನು ಜೀರ್ಣೋದ್ಧಾರವನ್ನು ಮಾಡಲು ಸಹಾಯಕವಾಗುತ್ತವೆ. ಶಾಲೆಗಳನ್ನು ದುರಸ್ತಿಗೊಳಿಸುತ್ತವೆ. ಪಂಚಾಯ್ತಿ ವ್ಯಾಪ್ತಿಗೆ ಬರುವ ಗ್ರಾಮಗಳ ಅಭಿವೃದ್ಧಿಗೆ ಬೇಕಾದ ಹಣಕಾಸು ಸೌಲಭ್ಯವನ್ನು ಜಾತ್ರೆಗಳು ಒದಗಿಸುತ್ತವೆ. ಜಾತ್ರೆಗಳು ಒಂದು ರೀತಿಯಲ್ಲಿ ಸಾಮಾಜಿಕ ಸೇವೆಯನ್ನು ಮಾಡುವ, ಆದಾಯ ತರುವ ವೇದಿಕೆಗಳಾಗಿವೆ.

ಜಾತ್ರೆಗಳು ವೈಯಕ್ತಿಕ ಆಸೆಗಳಿಗೆ ಹುಟ್ಟಿಕೊಂಡವುಗಳಲ್ಲ, ಅವು ಸಾಮಾಜಿಕ ಉಪಯೋಗಕ್ಕಾಗಿ ಹುಟ್ಟಿದವುಗಳಾಗಿವೆ. ಯಾರೊಬ್ಬರ ಆಸೆ, ಆಕಾಂಕ್ಷೆ, ಇಚ್ಚೆಗೆ ಅನುಸಾರವಾಗಿ ಹುಟ್ಟಿ ಅವರಿಗೆ ಲಾಭ ತರುವಂತವುಗಳಲ್ಲಿ ಇವೆಲ್ಲಾ ಸಾಮೂಹಿಕವಾಗಿ ಜನಸಮುದಾಯಕ್ಕೆ ಒಳಿತನ್ನು ಮಾಡುವ ಜಾತ್ರೆಯಲ್ಲಿ ತಮ್ಮ ಜೀವನೋಪಾಯಕ್ಕಾಗಿ ಹಲವಾರು ಕಾರ್ಮಿಕರು, ವ್ಯಾಪಾರಿಗಳು, ನಿರ್ಗತಿಕರು, ಹಗಲಿರುಳು ಬಂದ ಯಾತ್ರಾರ್ಥಿಗಳಿಗೆ ಸೇವೆಯನ್ನು ಮಾಡುತ್ತಾರೆ. ಜಾತ್ರೆಯು ಮುಖ್ಯವಾಗಿ ಧಾರ್ಮಿಕ ಸೇವೆಗಾಗಿ ಪಡೆಯುವಂತವುಗಳಾಗಿರುವುದರಿಂದ ಪೂಜೆ ಪುನಸ್ಕಾರಗಳಿಗೆ ಮತ್ತು ಜೀವನೋಪಾಯಕ್ಕೆ ಉಪಯೋಗವಾಗುವ ವಸ್ತುಗಳು ಇಲ್ಲಿ ವ್ಯಾಪಾರಿಗಳಿಂದ ಮಾರಾಟವಾಗುತ್ತವೆ. ಯಾತ್ರಾ ಸ್ಥಳದಲ್ಲಿ ಯಾತ್ರಾರ್ಥಿಗಳ ಯೋಗಕ್ಷೇಮವನ್ನು ಕೂಲಿಕಾರ್ಮಿಕರು ಮಾಡುತ್ತಾರೆ. ಒಂದು ಕಡೆ ಹಸಿವು, ಇನ್ನೊಂದು ಕಡೆ ನೆಮ್ಮದಿ,

ಮೋಕ್ಷ, ಮುಕ್ತಿ ಹೀಗೆ ಜನರ ಭಿನ್ನ ಭಿನ್ನವಾದ ಬಯಕೆಗಳನ್ನು ಇಂತಹ ಜಾತ್ರೆಗಳಲ್ಲಿ ಗಮನಿಸಬಹುದು. ಆಧುನಿಕತೆಯ ಪ್ರಭಾವದಿಂದ ಎಲ್ಲಾ ರೀತಿಯ ಜನರು ಒಂದೆಡೆ ಸೇರಿ ಸಂಭ್ರಮದಲ್ಲಿ ಪಾಲ್ಗೊಳ್ಳುವುದರಿಂದ ಸಮಾಜದಲ್ಲಿ ಶಾಂತಿ, ನೆಮ್ಮದಿ, ಸಡಗರ, ಜೀವನೋತ್ಸಾಹ ಉಂಟಾಗುತ್ತದೆ. ಜಾತ್ರೆಗಳು ಎಷ್ಟೋ ಜನರ ಪಾಲಿಗೆ ಮತ್ತೊಂದು ಬದುಕನ್ನು ನೋಡಿ ಜೀವನಕ್ಕೆ ಪ್ರೇರಣೆಗಳಾಗಿವೆ. ಇಂತಹ ಜಾತ್ರೆಗಳಿಂದ ಅನೇಕ ಸಂಬಂಧಗಳು ಭಾವನಾತ್ಮಕವಾಗಿ ಇನ್ನಷ್ಟು ಗಟ್ಟಿಗೊಳ್ಳುತ್ತವೆ. ಇದರಿಂದ ಜನರಲ್ಲಿನ ಆತ್ಮಾಭಿಮಾನ, ಆತ್ಮಗೌರವ ಮುಂತಾದ ಎಲ್ಲವೂ ಹೆಚ್ಚುವುದರಿಂದ ಜಾತ್ರೆಗಳು ಜನರಿಗೆ ಪೂರಕವಾಗಿವೆ ಎನ್ನಬಹುದು.

ಜಾತ್ರೆಗಳ ಸಾಂಸ್ಕೃತಿಕ ಸ್ಥಿತ್ಯಂತರ : ಸಮಕಾಲೀನತೆಯಲ್ಲಿ

ಪ್ರಸ್ತುತ ಸಂದರ್ಭದಲ್ಲಿ ಜಾತ್ರೆಗಳೆಂಬ ಪಳೆಯುಳಿಕೆ ಅದೊಂದು ಭೂತಕಾಲದ ಸಂಸ್ಕೃತಿ ಅಥವಾ ಅದೊಂದು ಟ್ರೆಡಿಷನಲ್ (Traditional) ಎಂದೇ ಹೇಳಬಹುದು. ಇದು ಮಾನವರಲ್ಲಿ ಎಲ್ಲಿಯವರೆಗೆ ಇರುತ್ತದೆ, ಎಲ್ಲಿಂದ ಹುಟ್ಟಿತು ಎಂಬುದಕ್ಕೆ ಉತ್ತರ ಕಂಡುಕೊಳ್ಳುವುದು ಸುಲಭದ ಮಾತಲ್ಲ. ಗಂಗೆಯ ಮೂಲ ಹುಡುಕಲಿಕ್ಕೆ ಸಾಧ್ಯವಿಲ್ಲದಂತೆ ಈ ಆಚರಣೆಯ ಮೂಲವನ್ನು ಹುಡುಕುವುದಾಗಲಿ, ಕಂಡುಕೊಳ್ಳುವುದಾಗಲಿ ಕಷ್ಟಕರವೇ. ಆದಿಮ ಪರಂಪರೆ ಅಂದು ಮಾನವನಲ್ಲಿ ಇತ್ತು. ಮಾನವನ ಬೌದ್ಧಿಕತೆ ವಿಕಾಸವಾದಂತೆಲ್ಲಾ ಹೊಸ ಹೊಸ ಆವಿಷ್ಕಾರಗಳು ರೂಢಿಗತಗೊಂಡು ಆದಿಮ ಪರಂಪರೆಯಂತೆಯೇ ಚಾಲನೆಗೆ ಬಂದವು. ಇದರ ಜೊತೆಗೆ ಹೊಸತನವೂ ಸೇರಿಕೊಂಡಿತು. ಭೂತ, ವರ್ತಮಾನ ಕಾಲಗಳು ಒಂದನ್ನೊಂದು ತಳುಕು ಹಾಕಿಕೊಂಡು ಒಂದು ಸ್ಥಿರ ಜ್ಞಾನವನ್ನು ಕಲ್ಪಿಸಿಕೊಡಲಿಕ್ಕೆ ಸಾಧ್ಯವಾಯಿತು ಎನ್ನಬಹುದು.

ಈ ರೀತಿ ನಿರಂತರ ವಿಕಾಸದ ಸಂಸ್ಕೃತಿಯ ಗುಣವಾಗಿರುತ್ತದೆ. ಹಾಗಾಗಿ ಜಾತ್ರೆಯ ಸಂಸ್ಕೃತಿಯು ಸಹ ಮಾನವನ ಜೀವನದಲ್ಲಿ ಅದೊಂದು ಭಾಗವಾಗಿರುವುದರಿಂದ ಇದು ನಿರಂತರ ಬದಲಾವಣೆಯ ಕ್ರಮವನ್ನು ಹೊಂದಿದೆ. ಪ್ರಸ್ತುತದ ಸಂದರ್ಭದಲ್ಲಿ ಅಥವಾ ವರ್ತಮಾನದಲ್ಲಿ ಜಾತ್ರೆಗಳ ಏರ್ಪಾಡು ಭೂತಕಾಲದೊಂದಿಗೆ ಸಮಕಾಲೀನದಲ್ಲಿ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಕಾಲಕ್ಕೆ ತಕ್ಕ ಹಾಗೆ ಜನರು ಭಾಷೆ, ನಾಡು, ಆಹಾರ, ಉಡುಗೆ-ತೊಡುಗೆ ಹೀಗೆಲ್ಲಾ ಸಂಸ್ಕೃತಿ ಬದಲಾವಣೆಯಿಂದ ಹೊಸ ರೂಪವನ್ನು ಹೊಂದಲಾಗುತ್ತದೆ. ಮನುಷ್ಯನ ಜೀವನ ಬದಲಾಗುತ್ತಾ ಹೋದಂತೆಲ್ಲಾ ಅವನ ಪರಂಪರೆ ಅಸ್ತಿತ್ವ ಸಹ ಬದಲಾವಣೆಗೊಳ್ಳುತ್ತಾ ಹೋಗುತ್ತದೆ. ಮಾನವನ ಜೀವನದ ಗತಿಯನ್ನು ಆಧರಿಸಿರುವ ಜಾತ್ರೆಗಳು ಸಹ ಬದಲಾಗುತ್ತವೆ. ಅಂದರೆ ಮಾನವನ ಬದುಕಿನ ಕ್ಷಣಗಳಲ್ಲಿ ಜಾತ್ರೆಗಳು ಸಹ ಪ್ರಮುಖವಾದವುಗಳಾಗಿರುವುದರಿಂದ, ಬದುಕಿನ ಭಾಗವಾಗಿರುವುದರಿಂದ

ಅವುಗಳಲ್ಲಿಯೂ ಸಹ ಅಷ್ಟೇ ಸಹಜವಾಗಿ ಬದಲಾವಣೆಗಳು ಕಂಡುಬರುತ್ತವೆ. ಪುರಾತನ ಕಾಲದಲ್ಲಿ ಮಾರಿ ಜಾತ್ರೆಯು ಕೆಲವು ಹಳ್ಳಿಗಳಲ್ಲಿ ನಡೆಯುತ್ತಿದ್ದವು. ಆ ತಾಯಿ ಮಾರಿಗೆ ನರಬಲಿಯನ್ನು ನೀಡಲಾಗುತ್ತಿತ್ತು. ಆ ದೇವರಿಗೆ ಹಸುಮಕ್ಕಳೆಂದರೆ, ಅಂದರೆ ಚಿಕ್ಕಮಕ್ಕಳೆಂದರೆ ಬಲು ಇಷ್ಟ. ಹಾಗಾಗಿ ಚಿಕ್ಕಮಕ್ಕಳನ್ನು ಬಲಿ ಕೊಡುವ ಪದ್ಧತಿ ಇತ್ತು ಮತ್ತು ಪ್ರಾಣಿಗಳನ್ನೂ ಸಹ ಬಲಿ ಕೊಡಲಾಗುತ್ತಿತ್ತು. ಅಷ್ಟಲ್ಲದೆ ಕೊಂಡಕ್ಕೆ ಹಾರುವಂತಹ ಹರಕೆ, ಆಚರಣೆಗಳು, ಸಿರಿಗೆ, ತಲೆ ಕೊಡುವ ಬಲಿ ಆಚರಣೆಯಲ್ಲಿತ್ತು. ಅಲ್ಲದೇ ಮಾನವನನ್ನು ಹಲವು ರೀತಿಯಲ್ಲಿ ಬಲಿ ಕೊಡಲಾಗುತ್ತಿತ್ತು. ಅಂದರೆ ಗಾವು ಜಿಗಿಯುವುದು, ಬೆತ್ತಲೆ ಸೇವೆ, ಮುಕ್ತ ಲೈಂಗಿಕ ದಾಸಿ ಪದ್ಧತಿ ಇಂತಹ ವಿವಿಧ ರೂಪಗಳಲ್ಲಿ ಆಚರಣೆಗಳು ಜಾತ್ರೆಗಳು ಸಾಮಾನ್ಯವೆಂಬಂತೆ ಕಂಡುಬರುತ್ತಿದ್ದವು. ವಿಶೇಷವಾಗಿ ಜಾತ್ರಾ ಸಂದರ್ಭಗಳಲ್ಲಿ ಹೆಚ್ಚು ವೈಭವೀಕರಿಸಲಾಗುತ್ತಿದ್ದು, ಅಲ್ಲಿ ಅಂತಹ ಆಚರಣೆಗಳು ಬೆಳಕಿಗೆ ಬರುತ್ತಿದ್ದವು. ನೋಡುಗರಿಗೆ ಅದೊಂದು ಮನೋರಂಜನೆಯಾಗಿದ್ದರೂ ಆ ನೋವನ್ನು ಅನುಭವಿಸುವವರಿಗೆ ಅದೊಂದು ಧರ್ಮಸಂಕಟದ ಸಂದರ್ಭವಾಗಿತ್ತು. ಹೀಗೆ ಜಾತ್ರೆಗಳು ಒಂದು ಕಾಲಕ್ಕೆ ಮಾನವನ ಮನೋರಂಜನಾ ಕ್ಷೇತ್ರವಾಗಿ ಮಾದರಿಯಲ್ಲಿತ್ತು.

ಆದರೆ ಇಂದಿನ ಜಾತ್ರಾಕ್ಷೇತ್ರ ಬೇರೊಂದು ರೂಪ ಪಡೆದು ಹೊಸ ರೀತಿಯ ಆನಂದವನ್ನು ನೀಡುವಂತ ಆಚರಣೆಯಾಗಿದೆ. ಸಮಯ ಬದಲಾದಂತೆಲ್ಲ ಕಾನೂನಿನ ಕಠಿಣ ನಿಯಮಗಳಿಂದ ಹಾಗೂ ಸಾಮಾಜಿಕ ಕಳಕಳಿಯಿಂದ ಕೆಲವು ಆಚರಣೆಗಳು ನಿಂತುಹೋಗಿ ಮತ್ತು ಕೆಲವು ಆಚರಣೆಗಳು ಹೆಚ್ಚು ವೈಭವೀಕರಣವಿಲ್ಲದೆ ಒಳ ಒಳಗೇ ನಡೆಯುತ್ತಿವೆ. ಅದು ಕಾನೂನಿನ ಭಯದಿಂದ ಜಾತ್ರೆಗಳ ಸಂದರ್ಭಗಳಲ್ಲಿ ಮಹಿಳೆ ಮತ್ತು ಮಕ್ಕಳನ್ನು ಅತ್ಯಂತ ಹೀನಾಯ ಸ್ಥಿತಿಯಲ್ಲಿ ಶೋಷಣೆ ಮಾಡಲಾಗುತ್ತಿತ್ತು. ಬಲಿ ಹೆಸರಿನಲ್ಲಿ ಮಕ್ಕಳನ್ನು ಸುಡುವುದು, ಆಹಾರವಾಗಿ ನೀಡುವುದು, ಕೆಳಜಾತಿ ವರ್ಗದವರನ್ನು ತುಚ್ಛವಾಗಿ ಬಳಸಿಕೊಳ್ಳುವುದು, ಅದು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದಂತಹ ಅತ್ಯಾಚಾರಗಳು. ಅದೇ ರೀತಿ ಬೆತ್ತಲೆ ಸ್ತ್ರೀಯೆಂಬ ಹೆಸರಿನಲ್ಲಿ ಹಾಗೂ ದೇವದಾಸಿಯ ಹೆಸರಿನಲ್ಲಿ ಆಚರಿಸಲಾಗುತ್ತಿದ್ದಂತಹ ಕೆಲವು ಆಚರಣೆಗಳು ಮಾನವ ಧರ್ಮದ ವಿರುದ್ಧವಾಗಿಯೇ ಇರುತ್ತಿದ್ದವು. ಪ್ರಗತಿಪರ ಚಿಂತನೆಗಳಿಗೆ ವಿರೋಧವಾಗಿ ಎಲ್ಲೂ ಅಂತಹ ಆಚರಣೆಗಳಿಗೆ ವಿರೋಧವೆಂಬುದೇ ಆಗುತ್ತಿರಲಿಲ್ಲ. ಕಾರಣ ಜಾತಿ ಅಥವಾ ಊಳಿಗಮಾನ್ಯ ಪದ್ಧತಿಯ ಅಂಚಿನಲ್ಲಿಯೇ ಬಹುತೇಕ ಜನಜೀವನ ಸಾಗಿಸುತ್ತಿದ್ದು, ಇದರಿಂದ ವಿರೋಧ ದನಿಗಳ ಕೊರತೆ ಅಂದು ಹೆಚ್ಚು ಇತ್ತು. ಇಂತಹ ಆಚರಣೆಗಳು ಸುಮಾರು ೨೦ನೇ ಶತಮಾನದವರೆಗೂ ಒಂದಲ್ಲ ಒಂದು ಕಡೆ ನಡೆಯುತ್ತಲೇ ಇರುತ್ತಿದ್ದವು.

ಸೇವೆ ಮಾಡುವ ರೂಪ ಬೇರೆ ಬೇರೆಯಾದರೂ ಅದರ ಮೂಲ ಆಶಯ ಮಾತ್ರ ದೌರ್ಜನ್ಯವೇ ಆಗಿತ್ತು. ಶೋಷಣೆಯೇ ಆಗಿತ್ತು. ಇಂದು ಸಹ ಮತ್ತೊಂದು ಮುಖವಾಡದಲ್ಲಿ ಈ ಶೋಷಣೆಗಳು ನಡೆಯುತ್ತವೆ. ಇಂದಿಗೂ ಜಾತ್ರೆಗಳಲ್ಲಿ ಆಯಾ ವರ್ಗಗಳಿಗೆ ಸೀಮಿತವಾದಂತಹ ಕೆಲಸಗಳನ್ನು ಅದೇ ವರ್ಗದ ಜನರು ಮಾಡಲೇಬೇಕು. ಅಂದರೆ ಮಡಿವಾಳ ದೇವರ ಬಟ್ಟೆಗಳನ್ನು ಶುದ್ಧ ಮಾಡಿಕೊಡುವುದು, ದೇವರು ಬರುವಾಗ ಕಾಲಿಗೆ ಬಟ್ಟೆ ಹಾಸುವುದು, ದೀಪ ಹಿಡಿಯುವುದು, ಕುಂಬಾರ ದೇವರಿಗೆ ಅಥವಾ ಹಬ್ಬಕ್ಕೆ ಬೇಕಾದಂತಹ ವಸ್ತುಗಳನ್ನು ಮಾಡಿಕೊಡುವುದು, ಹಲಗೆ ಬಾರಿಸುವವನು ಹಲಗೆ ಬಾರಿಸುವುದು, ಪೂಜಾರಿಕೆ ಮಾಡುವವನು ಪೂಜಾರಿಯಾಗಿ ಹೀಗೆ ರಾಷ್ಟ್ರ ಬೆಳೆದಂತೆಲ್ಲಾ ರಾಷ್ಟ್ರದಲ್ಲಿ ಆಚರಣೆಗಳು ಬದಲಾಗುತ್ತದೆ ಎಂಬುದು ಸತ್ಯಕ್ಕೆ ದೂರದ ಮಾತು. ಅದು ಹೊರನೋಟಕ್ಕೆ ಮಾತ್ರ. ಆಂತರಿಕವಾಗಿ ಅಂತಹ ಆಚರಣೆಗಳನ್ನು ಹೋಗಲಾಡಿಸುವುದು ಬಹು ಅಸಾಧ್ಯದ ಮಾತು. ಮಾತೃ ಮೂಲಗುಣ ಆಚರಣೆ ಆದಿಮ ಸಂಸ್ಕೃತಿಯಿಂದ ಬಂದವುಗಳಾಗಿವೆ. ಇಂತಹ ಆಚರಣೆಗಳು ಅಂದು ಅಸ್ತಿತ್ವದಲ್ಲಿದ್ದವು. ನಂತರ ಪುರುಷಾಧಿಕಾರತ್ವ ಆರಂಭವಾದ ಕ್ಷಣದಿಂದ ಮಾತೃ ಸಂಸ್ಕೃತಿ ಮಾಯವಾಗುತ್ತಾ ಹೋಯಿತು.

ಹೀಗೆ ಜಾತ್ರೆಗಳು ಒಂದೊಂದು ಹಂತದಲ್ಲಿ ಹಳೆಯದೆಲ್ಲವನ್ನು ಮರೆತು ಹೊಸದರ ತುಳಿತವನ್ನು ಮೈಗೂಢಿಸಿಕೊಂಡು ಮುಂದೆ ಸಾಗುತ್ತಿದೆ. ಇಂದು ಜಾತ್ರೆಗಳೆಂದರೆ ಮನೋರಂಜನೆಗೋಸ್ಕರ ಜನರು ಆಚರಿಸಿಕೊಳ್ಳುವ ಒಂದು ಹಬ್ಬ. ದಿನವಿಡೀ ದುಡಿತದಿಂದ ಬೇಸತ್ತ ಜನರು ನೆಮ್ಮದಿ, ಶಾಂತಿ ಹಾಗೂ ಮನೋರಂಜನೆಗಾಗಿ ಜಾತ್ರೆ ನಡೆಸುತ್ತಾರೆ.

ಅಧ್ಯಾಯ ಎಂಟು

ಜಾತ್ರೆ ಮತ್ತು ಜನಪದ ಪ್ರಕಾರಗಳು

ಅಧ್ಯಾಯ ಎಂಟು

ಜಾತ್ರೆ ಮತ್ತು ಜನಪದ ಪ್ರಕಾರಗಳು

ಹಳ್ಳಿಯ ಬಹುತರ ಉದ್ಯೋಗವು ಒಕ್ಕಲುತನ; ಅದಕ್ಕೆ ಸಂಬಂಧಿಸಿದಂತೆ ಇನ್ನೊಂದು ಕೆಲಸ ಒಕ್ಕಲುತನವು ಮಳೆಯನ್ನು ಅವಲಂಬಿಸಿದೆ. ಮಳೆ ಬಾರದಾಗ ಮುಗಿಲ ಕಡೆ ಮುಖ ಮಾಡಿ ಮಳೆ ಕೊಡಿರೆಂದು ದೇವತೆಗಳ ಪ್ರಾರ್ಥಿಸುತ್ತಾರೆ. ಒಳ್ಳೆಯ ಗಾಳಿ ಬೀಸಲೆಂದು ಬೇಡಿಕೊಳ್ಳುತ್ತಾರೆ. ಬೆಳೆ ಹುಲುಸಾಗಿ ಬೆಳೆಯಲೆಂದು ಬಗೆಯುತ್ತಾರೆ. ಇಚ್ಛೆ ಕೈಗೂಡಿದಾಗ ನೈವೇದ್ಯ ಮಾಡಿಸುತ್ತಾರೆ. ಬರಡು ಹಯನಾದರೆ ಹರಕೆ ಒಪ್ಪಿಸುತ್ತಾರೆ. ಮದುವೆಯಾದರೆ, ಮಕ್ಕಳಾದರೆ ಕೃತಜ್ಞತೆಗಳನ್ನು ಸಲ್ಲಿಸುತ್ತಾರೆ.

ಕುಲಕ್ಕೊಂದು ಕುಲದೇವತೆ; ಊರಿಗೊಂದು ಗ್ರಾಮದೇವತೆ, ಮನೆಯಿದ್ದಲ್ಲಿ ಮನೆದೇವತೆ, ಹೊಲವಿದ್ದಲ್ಲಿ ಹೊಲದೇವತೆ ಇವರೆಲ್ಲರೂ ಮನುಷ್ಯನ ಅಪೇಕ್ಷೆಯನ್ನು ಗುಪ್ತವಾಗಿಯೇ ಪ್ರಕಟವಾಗಿಯೇ ಪೂರೈಸಿಕೊಡುವರು. ಅದಕ್ಕೆ ಪ್ರತಿಯಾಗಿ ನೈವೇದ್ಯ ಬೇಡುವರು, ಎಡೆ ಬೇಡುವರು, ಒಟ್ಟಾರೆ ತಾನು ಉಪಯೋಗಿಸುವ ತಿನಿಸು, ತುತ್ತು, ಕುರಿ, ಕುದುರೆ ಏನಿದ್ದರೂ ಅದು ಸಂಬಂಧಪಟ್ಟ ದೇವತೆಗೆ ನೈವೇದ್ಯವಾಗಬೇಕು, ಅರ್ಪಣೆಯಾಗಬೇಕು.

ಬೆಳಗು ಮುಂಜಾನೆ ಬೀಸುವಾಗ, ಕೂಸುಗಳನ್ನು ಆಡಿಸುವಾಗ, ಗೌರಿಯನ್ನು ಪೂಜಿಸುವಾಗ, ಉಂಡು ಮಲಗುವಾಗ ಅವರು ಹಾಡಿಯೇಹಾಡುತ್ತಾರೆ. "ಹಾಡಿಗೆ ಇತಿಯಿಲ್ಲ ಮಿತಿಯಿಲ್ಲ, ಹಾಡಿಗೆ ಕ್ಷಣವಿಲ್ಲ, ಹಾಡೂನ ಬಾರ ಹಾಡೂನ ಬಾ" ಎಂದು ಹೆಣ್ಣು ಮಕ್ಕಳು ಹಾಡುವುದಕ್ಕೆ ನಡುಗಟ್ಟಿ ನಿಲ್ಲುತ್ತಾರೆ. ಕುಲದೇವರ ಪ್ರಾರ್ಥನೆ, ಮದುಮಕ್ಕಳ ಮುಂದೆ ವಿಧಾನ ಗೀತೆ, ಉಡಿ ತುಂಬುವ ಮುಂದೆ, ಕುಪ್ಪಸ ಮಾಡುವ ಮುಂದೆ, ಶೋಭನ ಗೀತೆ ಬೆಳದಿಂಗಳಲ್ಲಿ ಕೋಲಾಟದ ಹಾಡು, ಹಾದಿ ನಡೆಯುವಾಗ ಕಥನ ಹಾಡು ಇನ್ನೆಷ್ಟೋ ಸಂದರ್ಭಗಳಲ್ಲಿ ಹೆಣ್ಣು ಮಕ್ಕಳು ಹಾಡಬಲ್ಲರು. ಹೆಣ್ಣು ಮಕ್ಕಳಿಗೆ ಇಡೀ ಜೀವನವೇ ಹಾಡಿನ ಸಂದರ್ಭವಾಗಿದೆಯೆನ್ನಲಾಗಿದೆ.

ಜನಪದ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ "ಜನಪದ ಗೀತೆಗಳು" ಪ್ರಮುಖವಾಗಿವೆ. ವಾಕ್ ಸಂಪ್ರದಾಯದಲ್ಲಿ ಉಳಿದು ಬಂದಿರುವ ಜನಪದ ಗೀತೆ ಸಾಹಿತ್ಯವನ್ನು ಸ್ಥೂಲವಾಗಿ "ಭಾವಗೀತಾತ್ಮಕ ಮತ್ತು ಕಥನಾತ್ಮಕ" ಎಂದು ವರ್ಗೀಕರಿಸಿಕೊಳ್ಳಬಹುದಾಗಿದೆ. ಇದರಲ್ಲಿ ಒಂದು ಭಾವನಿಷ್ಠೆಯಾದರೆ, ಇನ್ನೊಂದು ವಸ್ತುನಿಷ್ಠ ಎರಡೂ ಹಾಡಲ್ಪಡುವಂತವು. ಇವುಗಳು

ನಿರ್ದಿಷ್ಟ ಸಮಯ ಸಂದರ್ಭಗಳಲ್ಲಿ ಪ್ರಕಟಗೊಳ್ಳುತ್ತವೆ. ಜನಪದರ ಅನೇಕ ಸ್ತರಗಳಲ್ಲಿ ಇವುಗಳ ಹರಹನ್ನು ಮತ್ತು ಮಹತ್ವವನ್ನು ಕಾಣುತ್ತೇವೆ. ವಾಚಿಕ ಸಂಪ್ರದಾಯದ ಕಥನಾತ್ಮಕ ಭಾಗದಲ್ಲಿ ಲಾವಣಿ, ಕಥನ ಗೀತೆ, ಖಂಡಕಾವ್ಯ, ಮಹಾಕಾವ್ಯ ಮೊದಲಾದವುಗಳು ಜನಪದ ಸಾಹಿತ್ಯದ ಮಹತ್ವಪೂರ್ಣ ಅಂಗಗಳಾಗಿವೆ. ಮೇಲ್ನೋಟಕ್ಕೆ ಇವು ಅನೇಕ ಸಾಮ್ಯತೆಯನ್ನು ಪಡೆದಿದ್ದರೂ ವಾಸ್ತವವಾಗಿ ಅವುಗಳಿಗೆ ಸ್ವತಂತ್ರ ಅಸ್ತಿತ್ವವಿದೆ ಎಂಬುದನ್ನು ಮರೆಯುವಂತಿಲ್ಲ. ಪುರಾಣ, ಪವಾಡ, ಚರಿತ್ರೆ, ಪರಾಕ್ರಮ, ಕ್ರೌರ್ಯ, ತ್ಯಾಗ, ಬಲಿದಾನ ಮೊದಲಾದ ಘಟನಾವಳಿಗಳನ್ನು ಹಾಡಿನ ರೂಪದ ಕಥಾನಕಗಳನ್ನು ಜನಪದ ಕಥನಗೀತೆಗಳೆಂದು ಕರೆಯಲಾಗಿದೆ. ಅವು ಸಮಾಜದ ಜೀವಂತ ಚಿತ್ರಣಗಳಾಗಿವೆ. ಘಟನೆಗಳ ವಾಸ್ತವಿಕಾಂಶ ಹೃದಯಸ್ಪರ್ಶಿ ಗೀತೆಗಳೇ ಜನಪದ ಕಥನ ಗೀತೆಗಳಾಗಿವೆ. ಕನ್ನಡ ಜನಪದ ಸಾಹಿತ್ಯದಲ್ಲಿ ಜನಪದ ಗದ್ಯಕತೆಗಳಿಗಿರುವಷ್ಟೇ ಮಹತ್ವ ಈ ಕಥನ ಗೀತೆಗಳಿಗಿದೆ.

ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ ಕಥನ ಗೀತೆಗಳ ಸಂಗ್ರಹ ಕಾರ್ಯ ನಡೆಯುತ್ತ ಬಂದಿದೆ. ಅವುಗಳಲ್ಲಿ ಗೋವಿನ ಹಾಡು, ಕಲಿಯುಗದ ಬಾಲೆ, ಈರೋಬಿ ಕಾಶಿಬಾಯಿ ಹಾಡು, ಬರದ ಹಾಡು, ಹಲಗಲಿ ಬೇಡರು, ಚಿಕ್ಕಿ ಉಂಗುರಕ ನಾರಿ, ಮನಸೋತಲೋ ಮುಂತಾದವು ಜನಪ್ರಿಯವಾದ ಕಥನ ಗೀತೆಗಳೆನಿಸಿವೆ.

ಚಿಕ್ಕೋಡಿ ತಾಲ್ಲೂಕಿನಲ್ಲಿ ಸುಮಾರು ಹಳ್ಳಿಗಳಿಗೆ ಇಂತಹ ಕಥನಗೀತೆಗಳನ್ನು ಹುಡುಕಲಿಕ್ಕೆ ಭೇಟಿ ಕೊಟ್ಟೆ. ಆದರೆ ಇಂದಿನ ತಲೆಮಾರಿನಲ್ಲಿ ಇಂತಹ ಹಾಡುಗಳನ್ನು ಹಾಡುವವರು ಒಬ್ಬರು ಸಿಗಲಿಲ್ಲ. ಕ್ಷೇತ್ರಕಾರ್ಯದಲ್ಲಿ ಈ ಕಥನ ಗೀತೆಗಳ ಬಗ್ಗೆ ನನಗೆ ತೊಂದರೆಯೆನಿಸಿತು. ಇನ್ನೇನು ಮಾಡಬೇಕು ಎಂದು ಯೋಚಿಸುತ್ತಿರುವಾಗ ನಾನು ಬಾಲ್ಯದಲ್ಲಿದ್ದಾಗ ನನ್ನ ತಾಯಿ ಕುಟ್ಟುವಾಗ, ಬೀಸುವಾಗ ಹಾಗೂ ಹಬ್ಬ ಹುಣ್ಣಿಮೆಗಳಲ್ಲಿ ಇಡೀ ರಾತ್ರಿ ಹೋಳಿಗೆ ಮಾಡುವಾಗ ಹಾಡಿದ ಹಾಡುಗಳು ನನ್ನ ನೆನಪಿಗೆ ಬಂದವು. ಅವಳನ್ನು ಕೇಳಲಾಗಿ ನನ್ನ ಮುಂದೆ ಜನಪದದ ಭಂಡಾರವನ್ನೇ ತೆರೆದಿಟ್ಟಳು. ಅವಳ ಎಂಭತ್ತರ ವಯಸ್ಸಿನಲ್ಲಿ ಇಷ್ಟೆಲ್ಲ ಹಾಡುಗಳ ಜ್ಞಾಪಕವನ್ನು ತುಂಬಿಕೊಂಡ ಬಗ್ಗೆ ಅಭಿಮಾನವೆನಿಸಿತು.

ಕಥನಗೀತೆ ಕೆಂಚೋಳಿ ಬಿಲ್ಲೋಳಿ

ಹಾಡಿದವರು ಶ್ರೀಮತಿ ಬಸಮ್ಮಾ ಅಪ್ಪಾಸಾಹೇಬ ಚೌಗಲಾ, ವಯಸ್ಸು: ೮೦ ಊರು: ಚಿಂಚಣಿ ತಾ: ಚಿಕ್ಕೋಡಿ

ದಂಡಿಮನಿ ಸಹದೇವ ದಂಡಿಲ್ಯಾರ ಹೋಗತೇರಿ

ಏನೇನ ತರತೀತಿ । ಕೋಲು ಕೋಲೆನ್ನ ಕೋಲ

ತಾಯವ್ವಗ ತರತೇನಿ ತಾರಕ್ಕಿ ಬಣ್ಣದ ಸೀರೆ

ಬಾಳಾಗ ತರತೇನಿ ಮಕಮಲ ಟೋಪಿಗೆ

ಮಡದೀಗೆ ತರತೇನಿ ಮುತ್ತಿನಕಾಳಿ ಸೀರೆ । ಕೋಲು ಕೋಲೆನ್ನ ಕೋಲ

ಸಹದೇವ ಹೋದ ಮೂರು ದಿವಸ

ಮಾಸ್ಯಾವ ಕೆಂಚೋಳಿ ತಲೀಯ

ಏಅತ್ತಿ ಏಅತ್ತಿ ನಮ್ಮ ತಲಿ ಮಾಸಿದಾವ

ನಿಮ್ಮ ತಲಿ ಮಾಸಿದರೆ ನೀರಿಟ್ಟ ಎರಕೊ । ಕೋಲು ಕೋಲೆನ್ನ ಕೋಲ

ಕೆಂಚೋಳಿ ಎರಕೊಂಡ ನೀರ

ಬಿಲ್ಲರೋಣಿ ಹರಿದಾವ ಈ ನೀರ

ಇಂತಾವ ನಾರಿ ಎಂಥಾಕಿದ್ದಾಳ । ಕೋಲು ಕೋಲೆನ್ನ ಕೋಲ

ದಂಡಿಮನಿ ಸಹದೇವ ದಂಡೀಲೆ ಬಂದನ

ಏಅವ್ವ ಏಅವ್ವ ಬಾಗಿಲ ತಗೀಯವ್ವ

ಬಾಗಿಲ ತೆರದಾಳ ನೀರ ತಂಬಿಗೆ ಕೊಡತಾಳ । ಕೋಲು ಕೋಲೆನ್ನ ಕೋಲ

ನೀನೀರ ಕೊಡಲಾಕ ನಾರಿ ಎಲ್ಲಿ ಹೋಗಿದಾಳ

ಕೆಂಚೋಳಿ ಬಿಲ್ಲೋಳಿ ಎದ್ದರ ಹೋಗಿದಾರ । ಕೋಲು ಕೋಲೆನ್ನ ಕೋಲ

ಮುತ್ತಿನಕಾಳಿ ಸೀರೆಸುಟ್ಟ ಬೂದೀನ ಮಾಡಿ

ಮೈಮ್ಮೈ ಹಚಗೊಂಡ ಮಕಮಲ

ಟೋಪಿಗೆ ಹರಿದು ಜೋಳಿಗಿ ಮಾಡ್ಯಾನ । ಕೋಲು ಕೋಲೆನ್ನ ಕೋಲ

ಒಂದಗುಡ್ಡ ದಾಟಿದಾಳ ಹಿಂದ ತಿರಗಿ ನೋಡತಾಳ

ಯಾಕ್ಯಾಕ ಕೆಂಚೋಳಿ ಬಾಳಾನ ನೆನಪಾಯ್ತೇನ। ಕೋಲು ಕೋಲೆನ್ನ ಕೋಲ

ಬಾಳಾನ ನೆನಪಾದರ ನಿಮ್ಮ ಸಂಗಡ

ಬರುವಿನೇನ । ಕೋಲು ಕೋಲೆನ್ನ ಕೋಲ

ಎರಡ ಗುಡ್ಡ ದಾಟಿದಳ ಹಿಂದ ತಿರಗಿ ನೋಡತಾಳ

ಯಾಕ್ಯಾಕ ಕೆಂಚೋಳಿ ಗಂಡ ನೆನಪಾದಳೇನ । ಕೋಲು ಕೋಲೆನ್ನ ಕೋಲ

ಗಂಡನ ನೆನಪಾದರ ನಿಮ್ಮ ಸಂಗದ

ಬರುವಿನೇನ । ಕೋಲು ಕೋಲೆನ್ನ ಕೋಲ

ಮೂರಗುಡ್ಡ ದಾಟಿದಾಳ ಹಿಂದ ತಿರುಗಿ ನೋಡತಾಳ

ಯಾಕ್ಯಾಕ ಕೆಂಚೋಳಿ ಅತ್ತಿ ನೆನಪಾದಳೇನ । ಕೋಲು ಕೋಲೆನ್ನ ಕೋಲ

ಅತ್ತಿ ನೆನಪಾದರ ನಿಮ್ಮ ಸಂಗಡ

ಬರುವಿನೇನ । ಕೋಲು ಕೋಲೆನ್ನ ಕೋಲ

ಮುತ್ತಿನ ಕಾಳ ಸೀರಿ ಸುಟ್ಟ ಬೂದೀಯ ಮಾಡ್ಯಾನ

ಬೂದೀಯ ಮಾಡಿ ಮೈಯೆಲ್ಲಾ ಹಚಗೊಂಡಾನ

ಮಕಮಲ ಟೋಪಿಗೆ ಹರದ ಜೋಳಿಗಿ ಮಾಡ್ಯಾನ। ಕೋಲು ಕೋಲೆನ್ನ ಕೋಲ

ಗುಡ್ಡಗುಡ್ಡ ಹೋಗಿದಾನ ಬಾವಿ

ಮ್ಯಾಗ ಕುಂತಿದಾನ । ಕೋಲು ಕೋಲೆನ್ನ ಕೋಲ

ಕೆಂಚೋಳಿ ಬಿಲ್ಲೋಳ ನೀರಿಗೆ ಬಂದಾರ

ಏಬಾವಾ ಏಬಾವಾ ಕೊಡನವರ ಹೊರಸಬಾ

ಕೊಡಹೊರಸತೇನಿ ನೀ ಗಂಡನ ಹೆಸರ ಹೇಳ। ಕೋಲು ಕೋಲೆನ್ನ ಕೋಲ

ಮೊದಲ ಗಂಡನ ಹೆಸರ ದಂಡಿನ ಸಹದೆವ

ಈಗೀನ ಗಂಡನ ಹೆಸರ ಕೆಂಚೋಲಿ ಬಿಲ್ಲೋಳಿ । ಕೋಲು ಕೋಲೆನ್ನ ಕೋಲ

ಕೊಡ ಹೊರಸಿದಾನ ಬೆನ್ನಬೆನ್ನ ಹೋಗಿದಾನ

। ಕೋಲು ಕೋಲೆನ್ನ ಕೋಲ

ಸಾಲಾಗಿ ನಿಲಿಸ್ಯಾನ ಕಚಕಚ ಕಡಿದಾನಿ

। ಕೋಲು ಕೋಲೆನ್ನ ಕೋಲ

ಮನಿಗರ ಬಂದಾಗ, ಏಅವ್ವ ಏಅವ್ವ

ಬಾಗೀಲ ತಗೀಯವ್ವ । ಕೋಲು ಕೋಲೆನ್ನ ಕೋಲ

ಖಡದ ಬಂದೀನ ತಾಯಿ

ಕನಕೀನಾರತಿ ಮಾಡ । ಕೋಲು ಕೋಲೆನ್ನ ಕೋಲ

ಮುಚ್ಚಿ ಬಂದೇನ ತಾಯಿ

ಮುತ್ತಿನಾರತಿ ಮಾಡ । ಕೋಲು ಕೋಲೆನ್ನ ಕೋಲ

ಹುಗದ ಬಂದೇನ ತಾಯಿ

ಹೂವಿನಾರತಿ ಮಾಡ । ಕೋಲು ಕೋಲೆನ್ನ ಕೋಲ

ಶಿವಗೌರಿ ಕಥನ

ಹಾಡಿದವರು ಶ್ರೀಮತಿ ಬಸಮ್ಮಾ ಅಪ್ಪಾಸಾಹೇಬ ಚೌಗಲಾ, ವಯಸ್ಸು: ೬೦ ಊರು:ಚಿಂಚಣಿ ತಾ:ಚಿಕ್ಕೋಡಿ

ಹಳ್ಳದ ದಂಡೀಲಿ ಎಳ್ಳಕೊಯ್ಯುವ ಬಾಲೆ

ಲಿಂಗಕ್ಕೆ ಐದ ಹೂವ ದಯಮಾಡ । ಕೋಲ

ಲಿಂಗಕ್ಕೆ ಐದ ಹೂವ ದಯ ಮಾಡಿದರ

ನಮ್ಮವರ ಬಯ್ದಾರ । ಕೋಲ

ನಿಮ್ಮವರ ಬಯದಾಂಗ ನಮ್ಮವರ ಅನದ್ಹಾಂಗ

ಹಿಂಗ ಬಾಗಂಗಿ ಜಡಿಯೊಳಗೆ । ಕೋಲ

ಹಿಂಗ ಬಾಗಂಗಿ ಜಡಿಯೊಳಗೆ ತಗೊಂಡ

ಮುಂದಕ್ಕ ಮೂರ ಹೆಜ್ಜೀ ನಡದಾನ । ಕೋಲ

ಮುಂದಕ ಮೂರ ಹೆಜ್ಜೀ ನಡದಾನ ಶಿವರಾಯ

ನಾಗರಹಾವ ಅಡಗಟ್ಟಿ । ಕೋಲ

ನಾಗರಹಾವ ಅಡಗಟ್ಟಿ ಏನಂದಾವ

ಸವತಿ ಮಕ್ಕಳಗ ಸರಿಜಗಳ । ಕೋಲ

ಸವತಿ ಮಕ್ಕಳಗ ಸರಿಜಗಳ

ಅನ್ನೋದ ಕೇಳ್ಯಾವ ಗೌರವ್ವನ ಅರಗಿಣಿ । ಕೋಲ

ಅರಗಿಣಿ ಕೇಳ್ಯಾವ ಕರುನಾಡಕ ಹೋದಾವ
ಮಲಗೀದ ಸ್ವಪ್ನಲಿ । ಕೋಲ

ಮಲಗೀದ ಗೌರವ್ವ ಮೈಮುರದ ಎದ್ದಾಳ
ತಣ್ಣೀರ ಗಿಂಡೀಲಿ ಮುಖತೊಳದ ಗೌರವ್ವ । ಕೋಲ

ತಣ್ಣೀರ ಗಿಂಡೀಲಿ ಮುಖತೊಳೆದ ಗೌರವ್ವ
ಹೋದಾಳ ಅತ್ತೀಗಿ ಅರಮನೀಗಿ । ಕೋಲ

ಎಂದಿಲ್ಲ ಗೌರವ್ವ ಇಂದ್ಯಾಕ ಬಂದಾಳ
ಕುಂಡರ ಕೊಡುವೆ ಮನೆಚೌಕಿ । ಕೋಲ

ಕುಂಡರ ಬಂದಿಲ್ಲ ನಿಂದರ ಬಂದಿಲ್ಲ
ಶಿವನನ್ನ ಮ್ಯಾಲ ಸವತೀನ । ಕೋಲ

ಊರ ಆಳುವ ಶಿವರಾಯಿ ನಾರೀನ ತಂದರ
ನಿನಗ್ಯಾಕ ಸಿಟ್ಟ ಸಿರಿಗೌರಿ । ಕೋಲ

ಅಷ್ಟಂಬು ಕೇಳ್ಯಾಳ ಚಟ್ಟಂದು ಎದ್ದಾಳ
ಬಂದಾಳ ತನ್ನ ಅರಮನೀಗಿ । ಕೋಲ

ದೇಶ ದೇಶ ತಿರುಗಿ ಬ್ಯಾಸತ್ತ ಬಂದೇನ
ಕಾಲಿಗೆ ಕಾಸ ಬಿಸಿನೀರ । ಕೋಲ

ಒಂದ ತಂಬೀಗಿ ಕೊಡಂದ್ರ
ಎರಡ ತಂಬಿಗಿ ಕೊಟ್ಟಾಳ । ಕೋಲ

ನಿನಗಿಬ್ಬರೇನ ಪುರುಷರ । ಕೋಲ

ಯಾಕ್ಯಾಕ ಶಿವರಾಯ ಅಣಕದ ಮಾತ್ಯಾಕ
ಗಂಗಿಗಿ ಒಂದ, ನಿನಗ ಒಂದ । ಕೋಲ

ಒಂದೇಡಿ ಮಾಡ ಅಂದರ
ಎರಡ ಎಡಿ ಮಾಡ್ಯಾಳ । ಕೋಲ

ಯಾಕ್ಯಾಕ ಶಿವರಾಯ ಅಣಕದ ಮಾತ್ಯಾಕ

ಗಂಗಿಗಿ ಒಂದ, ನಿನಗ ಒಂದ । ಕೋಲ

ನಿನಗಿಬ್ಬರೇನ ಪುರುಷರ । ಕೋಲ

ಗಂಗೀನ ತಂದರ ತಂಗೀನ ತಂದಂಗ

ಮುಂದ ಕುಂತರ ಮಗನಾಣೆ । ಕೋಲ

ಜನಪದ ಮಹಿಳೆಯರ ಹಾಡುಗಳು

ಹಾಡಿದವರು ಶ್ರೀಮತಿ ಬಸಮ್ಮಾ ಅಪ್ಪಾಸಾಹೇಬ ಚೌಗಲಾ, ವಯಸ್ಸು: ೮೦ ಊರು:ಚಿಂಚಣಿ ತಾ:ಚಿಕ್ಕೋಡಿ

ಭೂಮಿ ತಿರೆಯೆನಿಸುತ್ತದೆ ಮಹಿಳೆ ಅಸ್ಥಿರೆಯೆನಿಸುತ್ತಾಳೆ, ಎನ್ನುವ ಮಾತೊಂದು ಬಿಟ್ಟರೆ ಉಳಿದೆಲ್ಲ ಗುಣಗಳೂ ಅವರಿಬ್ಬರಲ್ಲಿ ಸಮಾನವಾಗಿರುವಂತೆ ತೋರುತ್ತದೆ. ಸರ್ವವನ್ನು ಒಳಗೊಳ್ಳುವದೇ ಭೂಮಿಯ ಲಕ್ಷಣವಾಗಿರುವಂತೆ, ಸರ್ವವನ್ನು ಒಳಗೊಂಡು ಬಾಳುವದೇ ಮಹಿಳೆಯ ಕುರುಹಾಗಿದೆಯೆಂದು ಹೇಳಬಹುದು. ಅಷ್ಟರಿಂದಲೇ ಪರಸ್ಪರರ ಸ್ವಭಾವ, ಗುಣಧರ್ಮ, ಐಶ್ವರ್ಯ, ಕಾರ್ಯಪದ್ಧತಿ ಮೊದಲಾದವುಗಳನ್ನು ಹೋಲಿಸಿಯೇ ಬಿಟ್ಟಂತಾಗುವದು. ಆದುದರಿಂದಲೇ ಶ್ರೀ ಬೇಂದ್ರೆಯವರು ಹೆಣ್ಣಿಗೆ 'ನಡೆದಾಡುವ ಭೂಮಿ'ಯೆಂದು ಹೆಸರಿಸಿ ತಮ್ಮ ಹೃದಯದೊಳಗಿನ ಗೌರವ ಬುದ್ಧಿಯನ್ನು ಸಾಕಷ್ಟು ತೋರ್ಪಡಿಸಿಕೊಂಡಿದ್ದಾರೆ. ಇಲ್ಲಿ ಹೆಣ್ಣಿನ ಲಕ್ಷಣವಾದ ಸರ್ವವನ್ನು ಒಳಗೊಳ್ಳುವ ಬುದ್ಧಿಯನ್ನು ರೇಖಿಸಿ ತೋರಿಸಬೇಕಾಗಿದೆ. ಆ ಬುದ್ದಿಯ ಪರಿಚಯವು ಹಾಡುಗಳಿಂದಲೇ ಉಂಟಾಗುವದು.

೧. ಸಂತಿ ನನ್ನ ಚಿಕ್ಕೋಡಿ । ಹಂಪಿ ನನ್ನ ಚಿಂಚಣಿಗೆ

ಚಿಂತಿ ಮಾಡಬ್ಯಾಡ ಹಡದವ್ವ । ನಾನಿನಗ

ಸಂತೋಷದ ಸುದ್ದಿ ಕಳುವೇನ ।

೨. ಸಕ್ಕರಿ ಸುರಳಿ ಹೋಳಿಗೆ । ಮಾವಿನ ಉಪ್ಪಿನಕಾಯಿ

ನಾಮಾಡಿ ನಾಹ್ಯಾಂಗ ಉಣಲಿ । ಗಿಳಿರಾಮ

ಹೋಗರಿ ನನ್ನ ತವರೀಗಿ

೩. ಬಣ್ಣಗೋಳ ಬರದಾರ ಸುಣ್ಣಗೋಳ ಕೊರದಾರ

ನಡುಗಂಬಕ ನವಿಲ ಕುಣಿದಾವ । ಹಡದಪ್ಪನ

ನಡುವೂರಾಗ ಐತಿ ದರವಾಜಿ ।

೪. ಅಣ್ಣತಮ್ಮರ ನೀವ ಒಂದ ಹೋಲಿಕೆಯವರ
ಮಂದೀಯ ನೆದರ ನಿಮ್ಯಾಲ । ಸುರೇಶ
ತಮ್ಮರಿಗೆ ತೋಳ ಮರಿಮಾಡ

೫. ನೀರಡಿಸಿ ನಮ್ಮ ರಾಯರ ಬಾವೀಯ ತಗಿಸ್ಯಾರ
ಜಾರಿಕಿ ಇಲ್ಲ ಹುದಲಿಲ್ಲ । ಜಾರೀಕಿ ಇಲ್ಲ ಹುದಲಿಲ್ಲ
ಬಾವ್ಯಾಗ । ಝಾಡಿಸಿ ತುಂಬೇನ ಅರಗೊಡ

೬. ಅರಗೂಡ ನೀರ ತಂದ ಗುರುವಿನ ಪೂಜೆ ಮಾಡಿ
ಕಂದವ್ವಗ ಏರದ ಕರಕುಡದ ನೀರ । ತವರೂರ
ಹಾದಿಲೇ ಹರದಾವ

೭. ತವರೂರ ಹಾದೀಲೆ ಹರದಾವ । ನನ್ನ ತಮ್ಮ
ಹರಗೋಲ ಹಾಕಿ
ಕರಿಬಂದಾನ।

೮. ನೀರಿಗಿ ಹೋಗಿನಿ ನಿಲ್ಲದ ಬಂದೀನಿ । ನಾಯಾರ ಮಾತ ತಗದಿಲ್ಲ
ನಾಯಾರ ಮಾತ ತಗದಿಲ್ಲ । ತವರಮನೆಯ
ಅಣ್ಣ ಬರುವ ಮಾತ ತಗದೇನ

೯. ಅಪ್ಪ ಬರುವ ದಾರೀಲೆ ತಪ್ಪತ ಬೀಳಲಿ ।
ತಪ್ಪಲ ಹುಣಸಿ ಚಿಗಿಯಲಿ । ಹಡದಪ್ಪನ
ಕುದುರೀಗಿ ನೆರಳ ದೊರೆಯಲಿ ।

೧೦. ಅಪ್ಪನ ಹೆಸರಿಟ್ಟ ಒಪ್ಪಲೀ ಕರಿದೇನ । ತುಪ್ಪಲಿ ಮುಖವ ತೊಳದೇನ
ತುಪ್ಪಲಿ ಮುಖವ ತೊಳದೇನ । ನನ್ನ ಬಾಳಾನ
ಅಪ್ಪ ಬರ್‍ಯೆಂದು ಕರಿದೇನು ।

೧೧. ಮಾವನ ಹೆಸರಿಟ್ಟು ಮನಸೀಲೆ ಕರದೇನ
ಹಾಲೂಲಿ ಕಾಲ ತೊಳದೇನ ನನ್ನ । ಮನಿಯ
ಹಿರಿಯರ ಬರ್‍ರೆಂದು ಕರದೇನ ।

೧೨. ಎಲ್ಲವ್ವಗ ಹೋಗವರ ಎಳ್ಳುಬೆಲ್ಲ ಒಯ್ಯೀರಿ
ಮಲ್ಲಿಗಿ ಒಯ್ಯೀರಿ ತುರುಬೀಗಿ । ಪರಶುರಾಮನ
ಬಿಲ್ಲೀಗಿ ಒಯ್ಯೀರಿ ಬಿಳಿಮುತ್ತಾ

೧೩. ಊರ ನನ್ನ ಚಿಂಚಣಿ ದೂರಿಂದ ನೋಡೇನಿ
ಕರಡಿಗಿ ಮಾಟ ಎಲಿತೋಟ । ಪ್ರಭುಸ್ವಾಮಿ
ಶಿಖರದ ಮ್ಯಾಲ ಶಿವನಾಟ

೧೪. ಕುಟ್ಟೋದು ಖುಷಿಬಾಳ ಬೀಸೋದು ಬಿರಿಬಾಳ
ರೊಟ್ಟಿ ಮಾಡೋದು ಜಡಬಾಳ ।
ಉಂಡ ಮಲಗೋದು ಸುಖಬಾಳ

೧೫. ಮಾಳಿಗಿ ಕುಂಬಿಮ್ಯಾಲ ಜೀರಿಗ ಗಿಡನಾಟ
ಜೀರಿಗಿ ಸಣ್ಣ ಎಳಿಸಣ್ಣ ಬಾಳಾನ ಓದುಸಾಲ್ಯಾಗ ದನಿ ಸಣ್ಣ । ಓಂಕಾರ
ಪುಸ್ತಕದ ಮ್ಯಾಲ ಬರೀ ಅಕ್ಷರ ಸಣ್ಣ

೧೬. ಸಾಲೀಯ ಸರಸ್ವತಿ ಕೇಳವ್ವ ನನ್ನ ಮಾತ
ಸಾಲ್ಯಾಗ ನನ್ನ ಬಾಳ ಅರವಳಿ । ಸರಸೋತಿ
ತಾಯಿ ಬಾರದ ಅಕ್ಷರ ಬರಕೊಡ

೧೭. ಕಲ್ಲಕಡದ ಮಾಡಿ ಮುಳ್ಳ ಶಾವಿಗಿ ಮಾಡಿ
ಬನ್ನಿಯಲಿ ಪುತ್ರೋಳಿ ಪಾಂಡುರವರ
ಉಣ್ಣದ ಹೋಗ್ಯಾರ ವನದೇಶ ।

೧೮. ಜನಕರಾಯನ ಮಗಳು ವನಕ ತೊಟ್ಟಿಲ ಕಟ್ಟಿ
ಲವಕುಶ ಮಗನ ಹಡದಾಳ । ಸೀತವ್ವ
ನಗತ ವನವಾಸ ತಗದಾಳ

೧೯. ಏಳೇಳ ಲಗಮವ್ವ ಎಷ್ಪೊತ್ತ ಮಲಗೀದಿ
ಹಾಲಬಂದಾವ ಹರಿವೀಲಿ । ಲಗಮವ್ವ
ಹೂವ ಬಂದಾವ ದುರಡೀಲಿ

೨೦. ಎಲ್ಲವ್ವ ನಿನ್ನಂತ ಚೆಲ್ಲಾಟ ನನಗಿರಲಿ

ಪರಶುರಾಮನಂತ ಮಗನಿರಲಿ । ಜೋಗುಳಬಾವಿ

ಸತ್ಯವನಂತ ಸೊಸೆಯಿರಲಿ

೨೧. ಹೆಣ್ಣು ಮಕ್ಕಳ ನನ್ನ ಪುಣ್ಯ ಫಲಗೋಳ

ಹೊನ್ನದರಗಿನಮನಿಗೆ ಕೊಡುವೇನ । ಬೆನ್ನಿಲೆಬಿದ್ದ

ತಮ್ಮಗ ದಾರಿ ಎರವೇನ

೨೨. ದಾರಿಯ ಎರಿವ್ಯಾಗ ಮಾರಿ ನಾ ನೋಡೇನ

ದೊರೆ ಒಪ್ಪ್ಯಾವ ಮಗಳಿಗೆ । ಸಾವಿರದ

ಗೋಲ ಒಪ್ಪ್ಯಾವ ಅಳಿಯಾಗ

೨೩. ಅಣ್ಣನ ಆರೆತ್ತ ತಮ್ಮನ ಮೂರ ಎತ್ತ

ಹಡದಪ್ಪನ ಎತ್ತ ಹದಿನಾರ । ಬರುವಾಗ

ನನ್ನೂರ ಭೂಮಿ ಅದರ್ಯಾವ

೨೪. ಬಿಲ್ಲಾಡುಬಾಳಾನ ಬಿಟ್ಟೀಗಿ ಕರದಾರ

ಮಲ್ಲೀಗಿ ಹೊರಿಯ ಹೊರಿಸ್ಯಾರ । ನನ್ನ ಬಾಳಾನ

ಪಲ್ಲಕ್ಕಿ ಮುಂದ ನಡಸ್ಯಾರ ।

೨೫. ಕಾಶಿಗೆ ಹೋಗೋದು ಏಸೆಂಬು ದಿನಬೇಕ

ತಾಸಹೊತ್ತಿನ ಹಾದಿ ತವರೂರ ಮನಿ । ಕಾಶಿ

ಇದ್ದಳ ನನ್ನ ಹಡದವ್ವ ।

೨೬. ಅಕ್ಕರತಿ ತವರವರ ಅಡಕೀಯ ಬಿತ್ತಿದಾರ

ಕಾಮಲಿಟ್ಟಾರ ಹುಲಿಕರಡಿ । ನನ್ನ ಹಡದಪ್ಪನ

ಗಿಡಿಕೊಂದ ಗಿನಿಯ ಸಲುಹಾವ

೨೭. ಸನ್ಯಾಸಿ ನಿನ್ನ ಮಠ ಸೆರಗೀಲೆ ಉಡಗೇನ

ಬಿನ್ನಹ ಹೇಳೇನಿ ಮಠಕ್ಕೆಲ್ಲ । ಪ್ರಭುಸ್ವಾಮಿ

ಬಡವೀಯ ಬಿನ್ನಹ ಸಲಸರಿ । ಪ್ರಭುಸ್ವಾಮಿ ನಾ ಆಡಿದ ಮಾತ ಗೆಲ್ಲಸರಿ

೨೮. ಕಟ್ಯಾನಿ ಕಟ್ಯಾಳ ಕಟ್ಟೀಮ್ಯಾಲ ಕುಂತಾಳ
ಬಟ್ಟಲ ಕಣ್ಣ ತಿರುವ್ಯಾಳ । ನನ್ನ ಅಂಜಕ್ಕಾ
ದೃಷ್ಟಿ ಮೂಡ್ಯಾವ ಒಳಗೋಗ

೨೯. ಮೂಡಲ ದಿಕ್ಕೀಗಿ ಹೂಡ್ಯಾರ ಎಂಟೆತ್ತಾ
ಕಾಡ್ಯಾವ ಎರಡ ಕೊನಿ ಹೋರಿ । ನನ್ನ ಬಸವಣ್ಣ
ಬೇಡ್ಯಾವ ಬೆಳ್ಳಿ ಹಣಪಟ್ಟ

೩೦. ಮಲ್ಲಿಗೆ ಹೂವಿನ ಮಾಲಿ ಅಲ್ಲಿಟ್ಟ ಇಲ್ಲಿಟ್ಟ
ಕಲ್ಲಮ್ಯಾಲಿಟ್ಟ ಕೈಬಿಟ್ಟ । ನನ್ನ ಬಸವಣ್ಣ
ಪಲ್ಲಕ್ಯಾಗಿಟ್ಟ ಶರಣೆಂದೆ

೩೧. ನೀರಿಲ್ಲದ ಬಾವ್ಯಾಗ ಬೇರಿಲ್ಲದ ಗಿಡಹುಟ್ಟಿ
ದೇಶದ ಮ್ಯಾಲ ಕುಡಿ ಸಾಗಿ। ಯಡೂರದ
ಈರಣ್ಣನ ಮ್ಯಾಲ ಗೊನಿಬಾಗಿ ।

ಹದಗಾ/ಭೋಂಡಲಾ

ಹಸ್ತಾ ನಕ್ಷತ್ರ ಪ್ರಾರಂಭವಾದ ಮೊದಲ ದಿನದಿಂದ ೧೬ ದಿನಗಳ ಕಾಲ ನಡೆಯುವ ಈ 'ಹದಗಾ'ದಲ್ಲಿ ಹೆಣ್ಣು ಮಕ್ಕಳು ಕೇವಲ ೧೬ ವಯಸ್ಸಿನೊಳಗಿನವರಿರಬೇಕು. ಆನೆಯ ಚಿತ್ರ ಕೊಡ್ರುವ ಮನೆಯ ಮೇಲೆ ತೆಗೆದು ಹೆಣ್ಣು ಮಕ್ಕಳು ಕೈಹಿಡಿದು ಆ ಚಿತ್ರದ ಸುತ್ತ ಹಾಡುತ್ತ ಸುತ್ತಬೇಕು. ಮೊದಲನೆ ದಿವಸ ಕೇವಲ ಒಂದೇ ಹಾಡನ್ನು ಹಾಡಿ ೧೬ ದಿನಗಳ ತನಕ ಹದಿನಾರ ಹಾಡುಗಳನ್ನು ಹಾಡುತ್ತಾರೆ. ಪ್ರತಿ ದಿನ ಒಂದು ತಿಂಡಿ ತಯಾರಿಸಿ ಅದರ ಗುರುತು ಹಿಡಿಯಲು ಹೇಳುತ್ತಾರೆ. ಕೊನೆಯ ದಿನ ಭೋಜನ ವ್ಯವಸ್ಥೆಯಿರುತ್ತದೆ ಇದನ್ನು ಮರಾಠಿಯಲ್ಲಿ "ಖಿಲಾಪತ್" ಎನ್ನುವರು

೧. 'ಐಲಮ್ಮಾ ಪೈಲಮ್ಮಾ ಗಣೇಶದೇವಾ ಮಾಝಾ ಖೇಳ ಮಾಂಡೊನದೇ ಕರೀನ ತುಜಿ ಸೇವಾ', 'ಅಕ್ಕನಮಾತಿ ಚಿಕ್ಕನಮಾತಿ ಖಳಗಾ ಜೋ ಖಣೀಲಾ', 'ಏಕನಿಂಬು ಜೇಲುಬಾಯಿ ದೋ ನಿಂಬು ಝೇಲು', ಇಂತಹ ಹಾಡುಗಳೆಲ್ಲಾ ಮರಾಠಿಮಯವಾಗಿವೆ. ಹೊಲದಲ್ಲಿಯ ದವಸ ಧಾನ್ಯಗಳು ಮನೆಗೆ ಬಂದಾಗ ಸಮೃದ್ಧಿಯ ಸಂಕೇತವಾಗಿ ಚಿಕ್ಕೋಡಿ ಭಾಗದಲ್ಲಿ ಈ 'ಹದಗಾ' ಈ ಹೊತ್ತಿಗೂ ಚಾಲ್ತಿಯಲ್ಲಿದೆ.

ಗೋಂದಳ

ಮನೆಯಲ್ಲಿ ಶುಭಕಾರ್ಯವಾದ ನಂತರ ಕುಲದೇವತೆಯ ಗೋಂದಳ ಹಾಕಲಿಕ್ಕೆ ಗೋಂದಳಿಗರನ್ನು ಮನೆಗೆ ಜಾಗರಣೆ ಮಾಡಲು ಕರೆಯಿಸುತ್ತಾರೆ. ಅದಕ್ಕೆ ಗೋಂದಳ ಎನ್ನುವರು. ಕುಲದೇವತೆಯ ಪೂಜೆ ಪ್ರಾರಂಭವಾದ ನಂತರ ಅರಿವೆಯ ದೀವಟಿಗೆಗೆ ನವವಧುವರರು ಎಣ್ಣೆಹಾಕಿ ದೇವಿಯ ಜಾಗರಣೆ ಮಾಡುವರು. ಇಡೀ ರಾತ್ರಿ ನೃತ್ಯ, ಗಾಯನ, ವಾದನದೊಂದಿಗೆ 'ಜೇಜೂರಿಚಾ ಖಂಡೇರಾಯ ಗೋಂದುಳಾಲಾ ಯಾಹೋ' 'ಕೊಲ್ಹಾಪೊರಚಿ ಅಂಬಾಬಾಯಿ ಗೋಂದುಳಾಲಾ ಯಾಹೋ,' 'ಪಂಢರಪುರಚ ವಿಠೋಬಾ ಗೋಂದುಳಾಲಾ ಯಾಹೋ', ಹೀಗೆ ಹಾಡುತ್ತ ಎಲ್ಲ ದೇವ ದೇವತೆಗಳನ್ನು ಆಹ್ವಾನಿಸಿಕೊಂಡು ಈ ಶುಭಕಾರ್ಯ ಮುಗಿಸುತ್ತಾರೆ. ಬ್ರಾಹ್ಮಣರನ್ನು ಹಿಡಿದುಕೊಂಡು ಎಲ್ಲ ಸಮಾಜದವರು 'ಗೋಂದಳ' ಹಾಕುವರು.

ಗುಳ್ಳವ್ವನ ಹಬ್ಬ

ಕೃಷಿ ಸಂಬಂಧಿಯಾದ ಈ ಹಬ್ಬವನ್ನು ಪ್ರತಿವರ್ಷ ಆಷಾಡ ಮಾಸದಲ್ಲಿ ಬರುವ ಈ ಹಬ್ಬವನ್ನು ಮಣ್ಣೆತ್ತಿನ ಅಮಾವಾಸ್ಯೆಯಿಂದ ನಾಗರ ಅಮಾವಾಸ್ಯೆಯವರೆಗೆ ಒಂದು ತಿಂಗಳ ಕಾಲ ನಡೆಯುತ್ತದೆ. ಹೆಣ್ಣು ಮಕ್ಕಳ ಅತ್ಯಂತ ವೈಭವದ ಹಬ್ಬ. ಯುವತಿಯರು ಕೆರೆಗೆ ಮಣ್ಣನ್ನು ತೆಗೆದುಕೊಂಡು ಹೋಗಿ ಅಲ್ಲಿ ಗುಳ್ಳವ್ವನನ್ನು ತಯಾರಿಸಿ, ಗುಳ್ಳವ್ವನಿಗೆ ದವಸಗಳಿಂದಲೇ ಮಾಡಿದ ಹಾರಗಳನ್ನು ಹಾಕಿ ಎಲ್ಲರೂ ಹಾಡುತ್ತ ಮನೆಗೆ ತರುವರು. 'ಒಂದು ಮೂಲೀಗಿ ಒಂದ ಪತ್ತರಿ ಸಾಲ ಮೂಲೀಗಿ ಬೆಲ್ಲ ಪತ್ತರಿ ಪತ್ತರ್‍ಯಾಗ ಪಣಿವಾರ ಗುಳ್ಳವ್ವ ನಿನ್ನ ಮುತ್ತಿನ್ಹಾಂಗ ಜನಿವಾರ', ಹಾಗೂ 'ಚಿಕ್ಕಮೀರಿ ಚೆನ್ನಕ್ಕ ನಿನ್ನ ಗಂಡ ಮಲ್ಲೇಶಿ ಬಳ್ಳೊಳ್ಳಿ ಪಾಟ್ಯಾಗ ಹೊಳ್ಯಾಡಿ ಅಳತಿದ್ದೆ ಹೋ ಗುಳ್ಳವ್ವಾ ಹೋ ಗೂಳ್ಳವ್ವಾ' ಎಂದು ಹಾಡುವರು.

ಐದು ಮಂಗಳವಾರದ ತನಕ ಸಂಜೆ ಪ್ರತಿಯೊಬ್ಬರು ಮನೆಮನೆಗೆ ತೆರಳಿ ಮಣ್ಣಿನಲ್ಲಿ ತಯಾರಾದ ಪ್ರಣತಿಯಿಂದಲೇ ಆರತಿ ಮಾಡುವರು. ಕೊನೆಯ ವಾರ ಎಲ್ಲರೂ ಹಳ್ಳದ ದಂಡೆಗೆ ಗುಳ್ಳವನ್ನು ತೆಗೆದುಕೊಂಡು ಹೋಗಿ ಅಲ್ಲಿ ಆಟವಾಡಿ ನೀರಿನಲ್ಲಿ ಬಿಟ್ಟು ಬರುವರು. ಇಂದಿಗೂ ಚಿಕ್ಕೋಡಿಯ ಗ್ರಾಮೀಣರಲ್ಲಿ ಈ ಆಚರಣೆಯನ್ನು ಕಾಣಬಹುದು.

ನಾಗರ ಪಂಚಮಿ

ನಾಗರ ಪಂಚಮಿಯ ದಿನ ನಿಪ್ಪಾಣಿ, ನಾಗನೂರ, ಬೇಡಕಿಹಾಳ, ಸುತ್ತಲಿನ ಊರುಗಳಲ್ಲಿ ಹಾವುಗಳಿಗೆ ಪೂಜೆ ಸಲ್ಲಿಸಿ ಹಾಲು ಎರಡಯುವ ಆಚರಣೆ ನಡೆಯುತ್ತಿತ್ತು. ಈ ಜೀವಂತ ಹಾವುಗಳ ಆಚರಣೆ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಬತ್ತೀಸ್ ಶಿರಾಳದಲ್ಲಿ ಹಲವು

ವರುಷಗಳಿಂದ ನಡೆದುಕೊಂಡು ಬರುತ್ತಿದ್ದು ಅಲ್ಲಿಂದ ಗಡಿ ಭಾಗದ ಜನ ಪ್ರೇರಿತರಾಗಿ ನಾಗರ ಪಂಚಮಿ ದಿನ ನಿಜ ಹಾವುಗಳಿಗೆ ಪೂಜೆ ಸಲ್ಲಿಸುವ ಆಚರಣೆಯಿತ್ತು. ಈಗ ಇಲ್ಲಿ ಮಣ್ಣಿನ ನಾಗಮ್ಮನನ್ನು ತಂದು ನಾಗರ ಪಂಚಮಿ ಆಚರಿಸುತ್ತಾರೆ.

ಜೋಕುಮಾರ

ಅನಂತ ಹುಣ್ಣಿಮೆಯಲ್ಲಿ ಉತ್ತರ ಕರ್ನಾಟಕದ ಕಡೆ ಈ ಆಚರಣೆ ನಡೆಯುತ್ತದೆ. ಭಾದ್ರಪದ ಮಾಸದಲ್ಲಿ ಶುಕ್ಲಪಕ್ಷದ ಸಂದರ್ಭದಲ್ಲಿ ಗಂಗಾಮತದ ಹೆಣ್ಣು ಮಕ್ಕಳು ಗಣಪತಿ ಕಳುಹಿಸಿದ ನಂತರ ಬೇವಿನ ಸೊಪ್ಪಿನಿಂದ ತುಂಬಿದ ಬುಟ್ಟಿಯಲ್ಲಿ ಒಂದು ಮೂರ್ತಿಯನ್ನಿಟ್ಟು ಕೊಂಡು ಮನೆ ಮನೆಗೂ ಹೋಗಿ ಕಾಳು ಕಡ್ಡಿಗಳನ್ನು ಪಡೆದುಕೊಳ್ಳುವ ವಿಶೇಷ ಆಚರಣೆ.

ಜೋಕುಮಾರನನ್ನು ಗ್ರಾಮೀಣ ದೇವತೆ, ಫಲದೇವತೆ, ಮಳೆದೇವತೆ, ಮಕ್ಕಳನ್ನು ಕೊಡುವ ದೇವತೆ ಹೀಗೆ ಹಲವು ವಿಧಗಳಿಂದ ನೋಡಿ ಭಕ್ತಿ ಗೌರವಗಳಿಂದ ಪೂಜಿಸುತ್ತಾರೆ. ಆದರೆ ಚಿಕ್ಕೋಡಿ ತಾಲೂಕಿನಲ್ಲಿ ಜೋಕುಮಾರನ ಬಗ್ಗೆ ಒಂದು ಕತೆಯಿದೆ. ಈತ ಕಾಮುಕ, ಹರೆಯದ ಹೆಣ್ಣು ಮಗಳ ಮೇಲೆ ಕಣ್ಣು ಹಾಕಿದಾಗ ಆ ಮನೆಯವರು ಇವನನ್ನು ಅರೆಜೀವವಾಗುವಂತೆ ಹೊಡೆದು ಅಗಸರು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ಇಡುತ್ತಾರೆ. ಅಲ್ಲಿಯೇ ಆತ ನರಳಿ ನರಳಿ ಸಾಯುತ್ತಾನೆ. ಮರುದಿನ ಅಗಸರು (ಮಡಿವಾಳರು) ಬಟ್ಟೆ ಒಗೆಯಲಿಕ್ಕೆ ಹೋದಾಗ ಇತನ ಶವವನ್ನು ಕಂಡುದಲ್ಲದೇ ಅವರೂ ಸಹಿತ ಸೂತಕ ಆಚರಿಸುತ್ತಾರೆ. ಅಗಸರು ಮೂರು ದಿನ ತಮ್ಮ ಕಾಯಕಕ್ಕೆ ರಜೆ ಹಾಕಿ ಎಲ್ಲ ಕರ್ಮಗಳನ್ನು ಮುಗಿಸಿ ನಾಲ್ಕನೇ ದಿನ ತಮ್ಮ ಕೆಲಸಕ್ಕೆ ಹಾಜರಾಗುತ್ತಾರೆ. ಮೌಖಿಕ ಸಾಹಿತ್ಯದ ಪ್ರಕಾರ ಜೋಕುಮಾರ ಒಬ್ಬ ಕಾಯಕ ದೈವವಾಗಿ ಕಂಡು ಬಂದರೆ ಇನ್ನೊಂದು ಕಡೆ ಈತ ಮಳೆ ದೇವತೆಯಾಗಿ ಕಂಡು ಬಂದಿದ್ದಾನೆ.

ಚೌಡಿಕೆ ಪದಗಳು

ಇದು ಶಕ್ತಿದೇವತೆಯ ವಾದ್ಯವಾದುದರಿಂದ ಚೌಡಿಕೆ ಎಂಬ ಹೆಸರು ಬಂದಿದೆ. ಈ ವಾದ್ಯ ಎಲ್ಲಮ್ಮನ ಭಕ್ತರ ವಾದ್ಯ. ಇದನ್ನು ಕಂಚು ಅಥವಾ ಹೊನ್ನೆ, ಬೇವು, ಮಾವು ತೆಂಗಿನ ಮರಗಳಲ್ಲಿ ಯಾವುದಾದರೂ ಒಂದನ್ನು ಬಳಸಿ ಮಾಡಿರುತ್ತಾರೆ. ಇಂತಹ ಚೌಡಿಕೆ ಹಾಡುಗಳನ್ನು ಹಾಡುವ ದೇವದಾಸಿಯರು ಚಿಕ್ಕೋಡಿಯ ಲಖನಾಪುರ, ಖಡಕಲಾಟ, ಚಿಂಚಣಿ, ಬಂಬಲವಾಡ, ನಿಪ್ಪಾಣಿ, ಧುಳಗುನವಾಡಿ ಹಾಗೂ ಜೈನಾಪುರದಲ್ಲಿ ಕಂಡು ಬರುತ್ತಾರೆ.

ನಾನು ಕ್ಷೇತ್ರ ಕಾರ್ಯಕ್ಕೆ ಹೋದಾಗ ಇವರನ್ನು ಸಂದರ್ಶಿಸಿದಾಗ ಇವರಿಗೆ ಯಾವುದೇ ರೀತಿಯ ಸಹಾಯವಿಲ್ಲ. ಶ್ರೀಮತಿ ನಂದಾ ಮಹಾದೇವಿ, ರೇಣುಕಾ, ಸುನಂದಾ ಇವರೆಲ್ಲರೂ ತಮ್ಮ ಗೋಳನ್ನು ತೋಡಿಕೊಂಡರು. ಕೆಲವರಿಗೆ ಮಾತ್ರ ತಿಂಗಳಿಗೆ ನಾನೂರು ರೂಪಾಯಿ ಮಾಶಾಸನ ಬರುತ್ತದೆ. ಕೆಲವರಿಗೆ ಮನೆಯಿಲ್ಲ ಹೊಲವಿಲ್ಲ ತಮ್ಮ ದಿನ ನಿತ್ಯದ ಉಪ ಜೀವನಕ್ಕಾಗಿ 'ಎಲ್ಲಮ್ಮ' ದೇವಿಯ ಜಗವನ್ನು ಹೊತ್ತುಕೊಂಡು ಹಾಡುತ್ತ ಮನೆಮನೆಗೆ ಭಿಕ್ಷೆ ಬೇಡುತ್ತಾರೆ. ಸರಕಾರ ಇಂಥವರ ಕಡೆಗೆ ಗಮನ ಹರಿಸಬೇಕಾಗಿದೆ.

ಹುಟ್ಟಿಗೆ ಉಡುವದು

ತಮ್ಮ ಆಸೆಗಳು ಈಡೇರಿದಾಗ ಹುಟ್ಟಿಗೆ ಉಡುವುದು ಈ ಭಾಗದಲ್ಲಿ ಒಂದು ವೃತವಾಗಿ ಪರಿಣಮಿಸಿದೆ. ಮಗನ ಮದುವೆಯ ಸಂದರ್ಭದಲ್ಲಿ ತಾಯಿಯಾದವಳು ಈ ಆಚರಣೆಯನ್ನು ಮಾಡುತ್ತಾರೆ. ಬೇವಿನ ತಪ್ಪಲಿನಿಂದ ಸಂಪೂರ್ಣ ಮೈ ಮುಚ್ಚಿಕೊಂಡು ಹೊರಗೆ ಬಂದು ಪ್ರದಕ್ಷಿಣೆ ಹಾಕಿದ ನಂತರ ಪಡ್ಡಲಿಗೆ ತುಂಬುವ ಕಾರ್ಯಕ್ರಮ ನಡೆಯುತ್ತದೆ. ಈ ಕಾರ್ಯವನ್ನು ಎಲ್ಲಮ್ಮನ ಜೋಗುತಿಯರು ನೆರವೇರಿಸುತ್ತಾರೆ. ಪಡ್ಡಲಿಗೆಗೆ ಹೋಳಿಗೆ, ಕಡಬು, ಹಪ್ಪಳ ಅನ್ನ ಇವುಗಳನ್ನು ಪಡ್ಡಲಿಗೆಗೆ ಹಾಕಿ ಜೋಗತಿಯರಿಗೆ ದಕ್ಷಿಣೆಯನ್ನು ಕೊಡುತ್ತಾರೆ.

ಎಲ್ಲರೂ ತನ್ನವರೇ ಎನ್ನುವ ಉದಾತ್ತ ಭಾವ ಈ ಹಾಡುಗಳಲ್ಲಿದೆ. ಮಕ್ಕಳು ತನ್ನವರು, ಗಂಡ ತನ್ನವ ಎಂದು ಬಿಡದೆ, ಮಕ್ಕಳಿಗಾಗಿ ಬಂದ ಸೊಸೆ, ಮಕ್ಕಳಿಂದ ಹುಟ್ಟಿದ ಮೊಮ್ಮಕ್ಕಳ ಗೆಳೆಯರು ಎಲ್ಲರೂ ತನ್ನವರೇ; ಗಂಡನನ್ನು ಪಡೆದ ಅತ್ತೆ ಮಾವಂದಿರು, ಗಂಡನ ಒಡಹುಟ್ಟಿದ ಭಾವ, ಮೈದುನ, ನಾದಿನಿಯರೂ ಎಲ್ಲರೂ ತನ್ನವರೇ ಎನ್ನುವ ಭಾವನೆಯನ್ನು ಜನಪದ ಹಾಡುಗಳಲ್ಲಿ ಕಾಣುತ್ತೇವೆ. ಹೆಣ್ಣು ಕೂಸು ಹುಟ್ಟಿತೆಂದರೆ ಗರತಿಯ ಮರಿ ಹುಟ್ಟುಕೊಂಡಂತೆ. ಹೆಣ್ಣು ನಡೆಯಿಸುವ ಸಾಧನೆ ಸಂಪೂರ್ಣವಾಗಿ ಮುಗದಿರಲಾರದು. ಅರ್ಥಪೂರ್ಣ, ಆರಂಭವಾದರೂ ಆಗಿರಬಲ್ಲದು. ವ್ಯಕ್ತಿಯು ಸಂಪೂರ್ಣವಾಗಿ ಭೂಮಿಯಾಗಬೇಕಾದರೆ, ವ್ಯಕ್ತಿತ್ವವನ್ನು ಅದೆಷ್ಟೋ ಸಾರೆ ಕಟ್ಟಬೇಕಾಗುವುದೋ ತಿಳಿಯದು. "ಎಲ್ಲವೂ ನಿನ್ನೊಳಗಿದೆ ಎಲ್ಲರೊಳಗೂ ಇರುವೆ" ಎನ್ನುವ ಮಾಹಾಜ್ಞಾನದ ಪ್ರಾಥಮಿಕ ಪಾಠವಿದೆಂದರೂ ಅದು ಸಣ್ಣ ಮಾತಲ್ಲ. ಅದನ್ನು ಸಂಪಾದಿಸಿದರೆ ಸ್ವಲ್ಪ ಸಂಪಾದಿಸಿದಂತಲ್ಲ. ಈ ಸಾಧನೆ ಆರಂಭವಾಗುವುದು ಯಾವಾಗ? ಮಗಳಾಗಿದ್ದವಳು, ತವರು ಮನೆಯಿಂದ ಸೊಸೆಯಾಗಿ ಹೆಂಡತಿಯಾಗಿ ತವರು ಮನೆಗೆ ಹೋದಾಗ ಈ ಸಾಧನೆ ಆರಂಭವಾಗುವದು. ಆನೆಯು ವಿಂಧ್ಯವನ್ನು ನೆನೆಯುವಂತೆ ಆಕೆ ಮೊದಲು ತವರು ಮನೆಯನ್ನು ನೆನೆಸುವಳೆಂದರೆ ಮುಖ್ಯವಾಗಿ ತಾಯಿ, ತಂದೆ, ಅಣ್ಣ, ಅಕ್ಕ, ತಂಗಿ ಇವರನ್ನು ಕಾಣಲು ಹಂಬಲಿಸುವಳು.

ಆ ಪ್ರೇಮವು ಅಗಲಿಕೆಯಿಂದ ಪರಿಪಕ್ವಗೊಳ್ಳುವದು. ಅಂತೆಯೇ ತವರು ಮನೆಯಿಂದ ಬಳಗದವರ ಗುಣಗಳು ಕಡ್ಡಿಯಷ್ಟಿದ್ದರೂ ಗುಡ್ಡವಾಗಿ ತೋರುವವು. ಆ ಪ್ರೇಮದೃಷ್ಟಿಗೆ ಅಲ್ಪ ಸೌಂದರ್ಯವೂ ಸಹ ಮಹಾ ಸೌಂದರ್ಯವಾಗಿ ಕಣ್ಣಿನ ಮುಂದೆ ಸುಳಿಯ ತೊಡಗುವದು. ಅವರ ಬಡತನವು ಸಹ ಮಹಾಐಶ್ವರ್ಯವಾಗಿ ಗೋಚರಿಸುವದು. ಅವರ ಕಂಠವು ಮಧುರವಾಗಿ ಒಳಗಿವಿಗೆ ಕೇಳಿಸತೊಡಗುವದು. ಹುಸಿ ಕಲಹದಲ್ಲಿ ಅವರಂದು ಆಡಿದ ಬೈಗಳು ಸಹ ಇಂದು ಸುಖಕರವಾದ ಹೂರಣದಂತೆ ಅನಿಸುವವು. ಹಾಲು ಕಾಯುವ ಸವಿಗಾಗಿಯೇ ಕಿಚ್ಚಿನ ಮೇಲೆ ಇರಿಸಿದ್ದರೆ ತೀರ ಉಕ್ಕಿ ಹೊರಚೆಲ್ಲುವಾಗ ಕೆಳಗೆ ಇಳಿಸುವ ಉಪಾಯ ಮಾಡುವಂತೆ ಅಗಲಿಕೆಯ ಪ್ರೇಮಪಾಶಕ್ಕೆ ಅವಶ್ಯಕವಾದರೂ ತೀರ ಅತಿರೇಕದ ಹಂಬಲವುಂಟಾದಾಗ ಕೂಡಿಕೆಯು ಅವಶ್ಯವಾಗಿ ಬೇಕಾಗುತ್ತದೆ.

ತಾಯಿ ಕಾಣದ ಜೀವ ತಾವೂರಿನ ಬಾವೂರಿ

ಭಾಲ ಬಿಸಲಾನ ಅವರೀಯ । ಹೂವಿನ್ಹಾಂಗ

ಬಾಡತೀನ ತಾಯಿ ಕರೆದೊಯ್ಯೊ ॥

ದಿ.ಬಿ.ಎಂ.ಶ್ರೀ ಅವರು ಹೇಳುವ ಮಾತು ಯತಾರ್ಥವಾಗಿದೆ. ಅದೇನೆಂದರೆ "ತನ್ನವನ್ನು ದೇಶ್ಯವೆಂದು ಧಿಕ್ಕರಿಸಿ, ಅನ್ಯಮಾರ್ಗದಲ್ಲಿಯೇ ಸ್ವೇಚ್ಛೆಯಾಗಿ ತಿರುಗುತ್ತ ಕೆರೆಗೆ ನವೀನತೆಯ ಕುತೂಹಲವೂ, ಸಾಮರ್ಥ್ಯವೂ ಹಳಸಿ ನಿಜವಾದ ಸತ್ವವೂ ಇಲ್ಲಿದೆ. ಜನರಿಂದ ದೂರವಾಗಿ ಸಾಹಿತ್ಯವು ನಿಸ್ಸಾರವಾಗುವದು. ಆಗ ಮತ್ತೆ ಹಳೆಯ ಸಾಹಿತ್ಯದ ಪುನರುತ್ಥಾನವಾಗುವದು. ಸಹೃದಯರು ತವರುನಾಡಿನ ತಾಯ ಹಾಡಿನ ಹಾಲನ್ನು ಕುಡಿದು ಸಜೀವರಾಗಬೇಕೆಂದು ಹಿಂದಿರುಗುವರು. ಜನರೊಡನೆ ಜನರಾಗುವರು. ಆ ಭಾಷೆ, ಆ ಛಂದಸ್ಸು ಆ ಜೀವ ಮತ್ತೆ ಹೊಳಪುಗೂಡಿ ಹೆಮ್ಮೆಗೇರುವದು. ಸಾಹಿತ್ಯದ ಏಳಿಗೆಯ ಕಾಲದಲ್ಲೆಲ್ಲ ಪ್ರಪಂಚದ ಎಲ್ಲಾ ಕಡೆಯಲ್ಲಿಯೂ ಹೀಗೆಯೇ ಆಗಿದೆ ಆಗುತ್ತದೆ.

ಸಂಸಾರ ವೇದವು ಸಾಕ್ಷರತೆಯನ್ನು ಅವಲಂಬಿಸಿಲ್ಲವಾದ್ದರಿಂದ ನಾಡಿನಲ್ಲಿ ಅರ್ಧ ಸಂಖ್ಯೆಯಲ್ಲಿದ್ದ ಹೆಣ್ಣು ಮಕ್ಕಳು ಅದನ್ನು ಬಳಸುವರು. ಮನೆಯೇ ಧರ್ಮಾಶ್ರಮವೂ ಮನೆವಾಳ್ತೆಯೇ ಧರ್ಮವೂ ಆಗಿರುವುದರಿಂದ ಆ ಕೊಡಗೂಸುಗಳೂ, ಕನ್ನಿಗೆಯರೂ ಈ ಹಾಡುಗಳನ್ನು ಪಠ್ಯಪುಸ್ತಕದ ಪಾಠಗಳಿಗಿಂತ ಹೆಚ್ಚಾಗಿ ಕಂಠಪಾಠ ಮಾಡುವರು. ದುಡಿಮೆ ಕೆಲಸ, ಬೀಸುವಿಕೆ, ತೊಟ್ಟಿಲ ಜೀಕು, ಲಲ್ಲೆ ಮದುವೆ, ಸೋಬನ ಪ್ರಸಂಗಗಳು ಮುಳುಗಿದರಲ್ಲವೇ ಈ ಹಾಡುಗಳು ಮುಳುಗುವದು? ಸಂಸಾರ ಮುಳುಗಿದವರಲ್ಲವೇ ಸಂಸಾರ ವೇದವು ಅಳಿಯುವದು? ನಿತ್ಯದ ಕೆಲಸವನ್ನೆಲ್ಲ ಮುಗಿಸಿ ಅನುಕೂಲವಾದ ಕಾಲವನ್ನು ಗೊತ್ತುಮಾಡಿ

ಕೊಂಡು ಜಾಣನಾದ ಪುರಾಣಿಕನನ್ನು ಕರೆತಂದು ಪುರಾಣ ಕೇಳುವದು ಬೇರೆ. ಮನೆಯ ಧರ್ಮಾಶ್ರಮದಲ್ಲಿ ಮನೆಯವರೇ ವಟುಗಳಾಗಿ ಸಂಸಾರ ವೇದವನ್ನು ರಸಾನುಭವಾಗಿ ಪಠಿಸಿ, ಉಚ್ಚರಿಸುತ್ತ ಸಾಗುವದರಿಂದ ಸಂಸಾರವಿರುವವರೆಗೂ ಸಂಸಾರ ವೇದಕ್ಕೆ ಸಾವಿಲ್ಲವೆಂದು ಹೇಳಬಹುದು. ಅಂಥ ಅಜರಾಮರವಾದ ಸಾಹಿತ್ಯವನ್ನು ರಚಿಸಿಟ್ಟ ದಿವ್ಯ ಕವಿ ಮಹಿಳೆಯಲ್ಲದೇ ಇನ್ನಾರು?

ಒಡಪುಗಳು

ಜನಪದರು ಕಂಡುಕೊಂಡ ಹಲವು ಪ್ರಕಾರಗಳಲ್ಲಿ "ಒಡಪು" ಒಂದು ಜನಪ್ರಿಯ ಪ್ರಕಾರ. ಪ್ರಧಾನವಾಗಿ ಗ್ರಾಮೀಣ ಪರಿಸರದ ಮದುವೆ, ಸೀಮಂತ ಮುಂತಾದ ಮಂಗಲ ಕಾರ್ಯಗಳಲ್ಲಿ ಸಮಾವೇಶಗೊಂಡ ಸಮುದಾಯಕ್ಕೆ ಮನೋರಂಜನೆ ನೀಡುವ ದೃಷ್ಟಿಯ ಹಿನ್ನೆಲೆಯಲ್ಲಿ ಒಡಪುಗಳ ರಚನೆಗೊಂಡಿರುವಂತೆ ತೋರುತ್ತದೆ. ಇವುಗಳಲ್ಲಿ ಶೃಂಗಾರ ಹಾಸ್ಯ ಒಂದರೊಡನೊಂದು ಬೆರೆತು ಚತುರೋಕ್ತಿಗಳೊಂದಿಗೆ ಇಡೀ ಪರಿಸರವನ್ನು ರಂಗೇರಿಸಿ ಹಾಸ್ಯದ ಹೊನಲಲ್ಲಿ ತೇಲಾಡಿಸುವ ಅಪಾರ ಶಕ್ತಿಯಿದೆ. ಇದು ಜನಪದ ಗದ್ಯ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ.

ಒಡಪುಗಳನ್ನು ಕರ್ನಾಟಕದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಕರೆಯುತ್ತಿರುವದು ಕಂಡುಬರುತ್ತದೆ. ಮಂಡ್ಯ ಪರಿಸರದಲ್ಲಿ "ಜೋಡೆಸರು" ಎಂದು ಕರೆದರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಪ್ರದೇಶಗಳಲ್ಲಿ "ಬೆಡಗು" ಎಂದೂ, ಚಿಕ್ಕಮಂಗಳೂರು ಪರಿಸರದಲ್ಲಿ "ತೊಡಕು" ಎಂದೂ, ಬೆಂಗಳೂರು ಭಾಗದಲ್ಲಿ "ಒಡಚು" ಎಂದೂ ಕರೆಯುತ್ತಾರೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಒಡಪುಗಳನ್ನು ಪ್ರಧಾನವಾಗಿ ಮದುವೆ ಸಮಾರಂಭಗಳಲ್ಲಿ ಹೇಳಲಾಗುತ್ತದೆ. ನವದಂಪತಿಗಳಿಗೆ ಆರತಿ ಎತ್ತಿ, ಗಂಡನ ಹೆಸರು ಹೇಳುವಂತೆ ಹೆಂಡತಿಗೂ, ಹೆಂಡತಿಯ ಹೆಸರು ಹೇಳುವಂತೆ ಗಂಡನಿಗೂ ಒತ್ತಾಯಿಸುವದು ಒಂದು ರೂಢಿ. ನೂತನ ದಂಪತಿಗಳಿಗೆ ಆರತಿ ಎತ್ತುವವರ ಧ್ವನಿಯೊಂದಿಗೆ, ಅಲ್ಲಿ ನೆರೆದವರೆಲ್ಲರೂ ತಮ್ಮ ಧ್ವನಿ ಸೇರಿಸುತ್ತಾರೆ. ಆಗ ನವ ವಧುವರರು ನಾಚಿನೀರಾಗಿ ಪರಸ್ಪರರು ಓರೆ ನೋಟ ಬೀರುತ್ತ ಅತ್ಯಂತ ಅಲಂಕಾರಿಕವಾಗಿ ಚತುರೋಕ್ತಿಗಳೊಂದಿಗೆ ಒಡಪಿಟ್ಟು ಹೆಸರು ಹೇಳಿದಾಗ ಇಡೀ ಪರಿಸರ ಪುಳಕಗೊಳ್ಳುತ್ತದೆ. ಇದು ಇಲ್ಲಿಗೆ ಮುಗಿಯುವುದಿಲ್ಲ. ಆರತಿ ಎತ್ತುವ ಹಿರಿಯೂರ ಕೂಡ ಒಡಪಿಟ್ಟು ಹೆಸರು ಹೇಳಿಯೇ ಆರತಿಯನ್ನು ಕೆಳಗಿಡಬೇಕು. ಅಲ್ಲಿಯವರೆಗೆ ಆರತಿ 'ಮಣೆ'ಯನ್ನು ಕೊಡುವವರಾರು? ಈ ರೂಢಿ ಈಗಿನವರೆಗೆ ಕೆಲವು ಸಲ ಸಮಂಜಸವೆನಿಸಲಿಕ್ಕಿಲ್ಲವೆನಿಸುತ್ತದೆ. ಏಕೆಂದರೆ ದಂಪತಿಗಳು_ನಿತ್ಯ ಪರಸ್ಪರ ಹೆಸರಿನಿಂದಲೇ ಕರೆಯುವಾಗ, ಒಡಪಿಟ್ಟು ಹೆಸರು ಹೇಳುವುದರಲ್ಲಿ

ಔಚಿತ್ಯವೇನಿದೆ ಎನಿಸಬಹುದು. ಮೊದಲು ಸಂಪ್ರದಾಯದಂತೆ ಎರಡು ಮಕ್ಕಳಾದರೂ ದಂಪತಿಗಳು ಪರಸ್ಪರ ಮೈಚಳಿ ಬಿಟ್ಟು ಸಲುಗೆಯಿಂದ ಮಾತನಾಡುತ್ತಿದ್ದುದು ತುಂಬ ಅಪರೂಪ. ಅವಿಭಕ್ತ ಕುಟುಂಬದಲ್ಲಿ ಇದೊಂದು ಸಂಕೋಚದ ವಿಷಯವಾಗಿತ್ತು. ಅಂಥದರಲ್ಲಿ ಪರಸ್ಪರರನ್ನು 'ಹೆಸರಿನಿಂದ' ಕರೆಯುವದಂತೂ ಊಹೆಗೆ ನಿಲುಕದ ಸಂಗತಿಯಾಗಿತ್ತು. ಈ ಕಾರಣದಿಂದ ದಂಪತಿಗಳಲ್ಲಿ ಸಲುಗೆ ಮೂಡಲಿ ಸಂಕೋಚ ದೂರವಾಗಲಿ ಎಂಬ ಉದ್ದೇಶವೂ ಒಗಟುಗಳ ಹಿನ್ನೆಲೆಯಲ್ಲಿ ಅಡಗಿದೆ ಇದರ ಜೊತೆಗೆ ಮನೋರಂಜನೆ ಪ್ರಧಾನವಾಗಿ ಮಂಗಲದ ಸಂದರ್ಭದಲ್ಲಿ ಸಂತಸದಿಂದ ಕಳೆಯುವ ಉದ್ದೇಶವಡಗಿದೆ. ಮದುವೆಯ ವಿವಿಧ ಸಂಪ್ರದಾಯಗಳನ್ನು ಆರತಕ್ಷತೆ ಸೀಮಂತ ಮುಂತಾದ ಸಂದರ್ಭಗಳಲ್ಲಿ ಒಡಪಿಟ್ಟು ಹೆಸರು ಹೇಳುವುದು ಇಂದಿಗೂ ಒಂದು ಸಂಪ್ರದಾಯವಾಗಿ ಮುಂದುವರಿದುಕೊಂಡು ಬಂದಿದೆ. ಇದರಲ್ಲಿ ಹೆಣ್ಣು ಮಕ್ಕಳ ಪಾತ್ರವೇ ವಿಶೇಷವಾಗಿದ್ದು, ಗಂಡು ಮಕ್ಕಳು ವಿನೋದದಲ್ಲಿ ಪಾಲುಗೊಂಡು ಸಂಭ್ರಮ ಪಡುತ್ತಾರೆ.

ಒಡಪುಗಳು:

ಶ್ರೀಮತಿ ಬಸಮ್ಮಾ ಅಪ್ಪಾಸಾಹೇಬ ಚೌಗಲಾ, ವಯಸ್ಸು: ೮೦ ಊರು:ಚಿಂಚಣಿ ತಾ:ಚಿಕ್ಕೋಡಿ

೧. ಶಿವಶಿವ ನಮ್ಮ ಮಾವ
ಶೀಲವಂತಿ ನಮ್ಮತ್ತಿ
ಅಜಪೂರ ಅತ್ತಿಗಿ
ಮಜಪೂರ ನೆಗೆಯಣ್ಣಿ
ಸತ್ಯಬಾವಿ ಸವತಿ
ರುಕ್ಮೀಣಿ ಗೆಳತಿ
ಧೀರಸಾಗರ ತವರು ಮನೆ
ದ್ವಾರಕಾ ಪಟ್ಟಣ ಅತ್ತಿಮನೆ
ಪಾರಿಜಾತ ಹೂವ ಪದರಾಗ
ಕಟಕೊಂಡ ನಾರಿ ಕೈಯಗ
ಕೊಟ್ಟ ನಗತ ಬರತಾರ

೨. ಹರದಾರ‍್ಯಾಗ ಗಿರದಾರಿ
ಗಿರಿದಾರ‍್ಯಾಗ ಗೇಣ

ಗೇಣದಾಗ ಚೋಟಿ

ಚೋಟಿನಾಗ ಕೋರ್ಟ

ಕೋರ್ಟನಾಗ ಕಛೇರಿ

ಕಛೇರ‍್ಯಾಗ ಕುಂತ

ವಿಚಾರ ಮಾಡತಾರ ಮಹಾದೇವ

೩. ಅಶಬ್ದ ಸುಶಬ್ದ ಸರ್ವಶಬ್ದಗಳ ಮೇಲಿರುವುದು

ಆಕಾಶ ರಾಯರ ಮುಖದ ಮೇಲಿರುವದು ಸೂರ್ಯಪ್ರಕಾಶ

೪. ಚಿರಾಪುಂಜಿಯಲ್ಲಿ ಆದದ್ದು ನೂರು ಇಂಚಿನ ಮಳೆ

ರಾಯರ ಹೆಸರಿನಿಂದ ಇಡುವೆನು ಹಸಿರು ಗಾಜಿನ ಬಳೆ

೫. ಚಾಲಿಕುಡಿ ಜೋಲಹೊಡಿ ಮುತ್ತಿನ ಕುದರಿ

ಮುಂದ ಹೊಡಿ ಅಣ್ಣ ಸುರೇಶನ ಮನಿಗ

ಹೆಣ್ಣ ಕರೀಕ ಬರತಾರ ಮಹಾದೇವ

೬. ಕಂಚಿನ ಬಟ್ಟಲ ಕಮಲದ ಹೂವ

ಮಂಚಮ್ಯಾಗ ಕುಂತ ಮಗನ ಆಡಸತಾರ ಮಹಾದೇವ

ಈ ಒಗಟುಗಳನ್ನು ಹೇಳಿದವರು ಶ್ರೀಮತಿ.ಬಸಮ್ಮಾ ಅಪ್ಪಾಸಾಹೇಬ ಚೌಗಲಾ ವಯಸ್ಸು:೮೦ ಊರು: ಚಿಂಚಣಿ ತಾ:ಚಿಕ್ಕೋಡಿ

೭. ಲವಕುಶರನ್ನ ಜೋಪಾನ ಮಾಡಿದ್ದು

ವನಕೆ ತೊಟ್ಟಿಲುಕಟ್ಟಿ

ನಮ್ಮವರ ಹೆಸರು ಹೇಳುವೇನು ನಾ ಕನ್ನಡ ಒಡಪಕಟ್ಟಿ

೮. ಉಪ್ಪಿಟ್ಟು ಉದುರು ಬಾಳ

ಉಳ್ಳಾಗಡ್ಡಿ ಪದರ ಬಾಳ

ನನ್ನಮ್ಯಾಲ ನನ್ನವರ ನೆದರ ಬಾಳ

೯. ಹತ್ತೂ ಬೆರಳಿಗೆ ಹತ್ತುಂಗರ

ನಡುವಿನ ಬೆರಳಿಗೆ ಮುತ್ತಿನ ಉಂಗುರ

ನಮ್ಮವರಿಗೆ ನಾ ವಜ್ರದ ಉಂಗುರ

೧೦. ಮೂರು ಸೇರು ಎಳ್ಳು ಆರು ಸೇರು ಜೊಳ್ಳು
ನಮ್ಮ ರಾಯರು ಹೇಳೋದು ಬರಿಸುಳ್ಳು

೧೧. ತೆಳ್ಳನೆ ರೊಟ್ಟಿ ಬೆಳ್ಳನ ಮೊಸರು
ನೆಳ್ಳಾಗ ಕುಂತ ನ್ಯಾರಿ ಮಾಡತಾರ

೧೨. ಸರಪಳಿ ಇಟ್ಟೇನಿ ಸಾಗಲ್ಹ್ಯಾಂಗ
ಒಡ್ಯಾಣ ಇಟ್ಟೇನಿ ಬಾಗಲ್ಹ್ಯಾಂಗ
ನತ್ತ ಇಟ್ಟೇನಿ ನಗಲ್ಹ್ಯಾಂಗ
ಹಾದ್ಯಾಗ ಕುಂತಾರ ಹಾಯಲ್ಹ್ಯಾಂಗ
ಮಂದ್ಯಾಗ ಕುಂತಾರ ಕರೀಲ್ಹ್ಯಾಂಗ

೧೩. ಪಾಂಡವರು ಕೌರವರು ಆಡಿದ್ದು ಪಗಡಿಯಾಟ
ನಮ್ಮವರ ಕೂಢ ಆಡುವದು ನಾ ಸರಿ ಬೇಸದಾಟ

೧೪. ಕೆರಸಿ ರೊಟ್ಟಿ ಟಪ್ಪಿ ಕರಿಂಡಿ
ಸೊಂಟಕ್ಕೆ ಕಟಗೊಂಡ
ರಂಟಿ ಹೊಡೀತಾರ

೧೫. ಸ್ವಾತಿ ಮಳೆಗೆ ಸಮುದ್ರದಲ್ಲಿ ಹುಟ್ಟವದು ಮುತ್ತು
ರಾಯರಿಗೆ ಹಾಕುವೆನು ಅಮೃತದ ತುತ್ತು

೧೬. ಬೆಕ್ಕು ಬಂತವ್ವ ಉಸ್ಯಾ
ಗಂಡನ ಹೆಸರ ಬಸ್ಯಾ

ಈ ಒಡಪುಗಳನ್ನು ಡಾ.ದಸ್ತಗೀರ ಅಲ್ಲೀಭಾಯಿಯವರು 'ಉತ್ತರ ಕರ್ನಾಟಕ' ಒಡಪುಗಳು ಎಂಬ ಕೃತಿಯಿಂದ ತೆಗೆದುಕೊಳ್ಳಲಾಗಿದೆ.

ಈ ಒಡಪುಗಳಲ್ಲಿ ಅರ್ಥ ಕ್ಲಿಷ್ಟತೆಯಾಗಲಿ, ಗೂಢತೆಯಾಗಲಿ ಇರುವುದಿಲ್ಲ. ಸಾಮಾನ್ಯವಾಗಿ ಇವು ಸರಳವೇ ಆಗಿರುತ್ತವೆ. ಅಂತ್ಯಪ್ರಾಸ ಇಲ್ಲಿ ಕಾಣುವ ಸಾಮಾನ್ಯ ಲಕ್ಷಣ. ಆಕರ್ಷಕವಾದ ಯಾವುದೋ ಒಂದು ಅಂಶವನ್ನು ಹೇಳುತ್ತ ಅದರ ಮಧ್ಯದಲ್ಲಿಯೋ ಕಡೆಯಲ್ಲಿಯೋ ತನ್ನ ಗಂಡ-ಹೆಂಡತಿ ಹೆಸರನ್ನು ಸೇರಿಸಿ ಬಿಡುತ್ತಾರೆ. ಒಡಪುಗಳ ಉದ್ದೇಶ ರಂಜನೆಯೇ ವಿನಾ

ಕಲಾತ್ಮಕತೆಯಾಗಲಿ, ಭಾವಾಭಿವ್ಯಕ್ತಿಯಾಗಲಿ ಅಲ್ಲ. ಲಘು ಹಾಸ್ಯ ಹುಟ್ಟಿಸುವದು ಹಾಗೂ ನೇರವಾಗಿ ಗಂಡನ/ಹೆಂಡತಿಯ ಹೆಸರನ್ನು ಹೇಳುವದನ್ನು ತಪ್ಪಿಸುವದು ಇವುಗಳ ರಚನೆಯ ಉದ್ದೇಶ. ಈಗಿನ ಸಂದರ್ಭದಲ್ಲಿ ಈ ರೂಢಿ ಅಪ್ರಸ್ತುತವೆನಿಸಬಹುದಾದರೂ ಅವುಗಳಿಂದ ದೊರೆಯುವ ರಸಾನಂದ ಇಂದಿಗೂ ಪ್ರಸ್ತುತವಾಗಿಯೇ ಇದೆ. ನಮ್ಮ ಜನತೆಯ ವಿನೋದ ಪ್ರಿಯತೆಗೆ ಇದೊಂದು ನಿದರ್ಶನ ಜೊತೆಗೆ ಅನೇಕ ಒಡಪುಗಳಲ್ಲಿ ಹೆಣ್ಣಿನ ಭಾವಗಳ ನವಿರುತನವನ್ನು ಕಾಣಬಹುದು. ಆಯಾ ಪ್ರದೇಶದ ಆಹಾರ ಪದ್ಧತಿಗಳು, ವಿಶಿಷ್ಟ ಶಬ್ದಗಳು, ವೃತ್ತಿ, ಉದ್ಯೋಗಗಳು ಇಂಥವುಗಳ ಪ್ರಸ್ತಾಪವೂ ಈ ಒಡಪುಗಳಲ್ಲಿರುವುದನ್ನು ಕಾಣಬಹುದಾಗಿದೆ.

ಅಧ್ಯಾಯ ಒಂಬತ್ತು

ಸಮಾರೋಪ

ಅಧ್ಯಾಯ ಒಂಬತ್ತು

ಸಮಾರೋಪ

ಜಾತ್ರೆಗಳು ಕೇವಲ ಧಾರ್ಮಿಕತೆಯನ್ನು ಎತ್ತಿ ಹಿಡಿಯುವ ತಾಣವಲ್ಲ. ಇದು ಬಹು ಆಯಾಮಗಳಲ್ಲಿ ತನ್ನ ಕಾರ್ಯಕ್ಷೇತ್ರಗಳನ್ನು ಒಳಗೊಂಡಂತಹ ವಿಶಿಷ್ಟ ಪ್ರಕಾರವಾಗಿ ಕಂಡುಬರುತ್ತದೆ. ಕರ್ನಾಟಕದ ಬಹುತೇಕ ಭಾಗಗಳಲ್ಲಿ ನಡೆಯುವಂತೆ ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ನಡೆಯುವಂತಹ ಈ ಎಲ್ಲ ಜಾತ್ರೆಗಳು ತನ್ನದೇ ಆದಂತಹ ಮಹತ್ವವನ್ನು ಪಡೆದುಕೊಂಡು ಜನಮಾನಸದಲ್ಲಿ ಅಚ್ಚಳಿಯದ ಭಕ್ತಿ ಭಾವವನ್ನು ಕಾಪಾಡಿಕೊಂಡು ಬರಲಾಗಿದೆ. ಇಂದು ಮಾನವ ಜಾಗತೀಕರಣ ಭರಾಟೆಯಲ್ಲಿ ತನ್ನ ಎಲ್ಲ ಮೂಲ ಸಂಸ್ಕೃತಿ, ಆಚಾರ-ವಿಚಾರಗಳನ್ನು ಕಳೆದುಕೊಂಡು ಯಂತ್ರ ಮಾನವನಂತೆ ಏಕಾಂಗಿಯಾದ ಬದುಕನ್ನು ರೂಪಿಸಿಕೊಳ್ಳ ಹೊರಟಿದ್ದಾನೆ. ಇದರ ಪ್ರತಿಫಲವಾಗಿಯೇ ನಾವಿಂದು ಯುದ್ಧ, ಭಯೋತ್ಪಾದನೆ, ಅತಿಕ್ರಮಣದಂತಹ ಅಮಾನವೀಯವಾದ ಸನ್ನಿವೇಶಗಳನ್ನು ರೂಪಿಸಿಕೊಂಡು ನೈತಿಕ ಮೌಲ್ಯಗಳನ್ನು ಕಳೆದುಕೊಂಡು ಪರಸ್ಪರ ವೈರಿಗಳಾಗಿ ಬದುಕುತ್ತಿರುವುದು. ನಮ್ಮ ಹಿಂದಿನ ಪೀಳಿಗೆಯನ್ನು ಗಮನಿಸಿದರೆ ಅವರದು ಕೂಡು ಬದುಕು. ಅಲ್ಲಿ ಯಾವುದೇ ಭಯದ ವಾತಾವರಣವಿರದೆ ಪ್ರತಿಯೊಂದು ಜಾತಿ, ಜನಾಂಗಗಳು ಸಹೋದರತ್ವದ ಭಾವನೆಯಿಂದ ಬದುಕಿದಂತಹವರು. ಅವರು ಆಚರಿಸುವ ಈ ಜಾತ್ರೆಗಳು ಅವರಲ್ಲಿನ ಪರಸ್ಪರ ನೋವು-ನಲಿವುಗಳನ್ನು ಹಂಚಿಕೊಂಡು ಸೌಹಾರ್ದಯುತ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿವೆ.

ಜಾತ್ರೆಗಳು ಕೇವಲ ಯಾಂತ್ರೀಕೃತವಾದ ಆಚರಣೆಗಳಲ್ಲ. ಇವು ಜನಪದ ಪರಂಪರೆಯು. ಸಾವಿರಾರು ವರ್ಷಗಳಿಂದ ಪಾಲಿಸಿಕೊಂಡು, ಪೋಷಿಸಿಕೊಂಡು ಬಂದಿರುವಂತಹ ನಂಬಿಕೆ, ಆಚರಣೆ, ಸಂಪ್ರದಾಯ, ಮೌಲ್ಯ ಹಾಗೂ ಸಂಸ್ಕೃತಿಯ ಜೀವಂತಿಕೆಯಾಗಿ ಕಂಡುಬರುತ್ತದೆ. ಇದು ನಮ್ಮ ದೇಶದ ಬಹುಮುಖ್ಯವಾದ ಸಾಂಸ್ಕೃತಿಕ ಪಳೆಯುಳಿಕೆಯ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುವ ಪ್ರಮುಖ ತಾಣಗಳಾಗಿ ಜಾತ್ರೆಗಳು ಕಂಡುಬರುತ್ತವೆ. ಮನುಷ್ಯ ಆಧುನಿಕವಾಗಿ ಎಷ್ಟೆಲ್ಲ ಪ್ರಗತಿಯನ್ನು ಪಡೆದಿರಬಹುದು, ವಿಜ್ಞಾನ-ತಂತ್ರಜ್ಞಾನದ ಆವಿಷ್ಕಾರದಿಂದ ಏನೆಲ್ಲಾ ಸಂಶೋಧನೆ ಮಾಡಿರಬಹುದು. ಆದರೆ ಇದುವರೆಗೂ ಸಾವಿರಾರು ವರ್ಷಗಳಿಂದ ಕಾಪಾಡಿಕೊಂಡು ಬಂದಿರುವಂತಹ ಸಾಂಸ್ಕೃತಿಕ ಮೌಲ್ಯಗಳ ಪ್ರತೀಕವಾಗಿರುವ ಜಾತ್ರೆಗಳನ್ನು ಮೀರುವಂತಹ ಪ್ರಯತ್ನ ಅಸಾಧ್ಯವಾದುದು. ಆದ್ದರಿಂದ ಶಿಕ್ಷಣದಿಂದ ಜಾಗೃತಿಯನ್ನು

ಪಡೆದಂತಹ ವರ್ಗವು ಇಂದು ಜಾತ್ರೆ ಹಾಗೂ ದೇವರ ಹೆಸರಿನಲ್ಲಿ ನಡೆಯುವಂತಹ ದೌರ್ಜನ್ಯ ಹಾಗೂ ಮೂಢನಂಬಿಕೆಗಳನ್ನು ವಿರೋಧಿಸುತ್ತಿದೆಯೇ ಹೊರತು ಜಾತ್ರೆಯ ಆಚರಣೆಯ ಬಗ್ಗೆ ಯಾವುದೇ ಚಕಾರವೆತ್ತಿರುವುದು ಕಂಡುಬಂದಿರುವುದಿಲ್ಲ.

ಈ ಕಾರಣದಿಂದಾಗಿಯೇ ಇಂದು ಭಾರತದ ಸಾಂಸ್ಕೃತಿಕತೆಯ ಪ್ರತೀಕವಾಗಿರುವ ಜಾತ್ರೆ, ಸಂಪ್ರದಾಯ, ಹಬ್ಬ-ಹರಿದಿನಗಳ ಕುರಿತಾಗಿ ಪಾಶ್ಚಿಮಾತ್ಯ ಹಾಗೂ ಪೌರಾತ್ಯ ಚಿಂತಕರು ಹಲವಾರು ಅಧ್ಯಯನಗಳನ್ನು ಕೈಗೊಳ್ಳುವ ಮೂಲಕ ಇವುಗಳ ಮಹತ್ವ ಹಾಗೂ ಈ ಆಚರಣೆಗಳಲ್ಲಿ ಅಡಗಿರುವಂತಹ ವೈಶಿಷ್ಯತೆಯ ಕುರಿತಾಗಿ ಹಲವಾರು ಅಧ್ಯಯನಗಳನ್ನು ಕೈಗೊಳ್ಳುತ್ತಿರುವುದು ಕಂಡುಬರುತ್ತದೆ. ಹಾಗೆಯೇ ಚಿಕ್ಕೋಡಿ ತಾಲ್ಲೂಕಿನಲ್ಲಿ ನಡೆಯುವಂತಹ ಜಾತ್ರೆಗಳು ಸಹ ತನ್ನದೇ ಆದಂತಹ ವಿಶಿಷ್ಟ ಸಂಪ್ರದಾಯ, ಆಚರಣೆಗಳನ್ನು ಮುಂದುವರೆಸಿಕೊಂಡು ಬಂದಿರುವುದನ್ನು ನಾವು ಗಮನಿಸಲಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಚಿಕ್ಕೋಡಿ ತಾಲೂಕಿನಲ್ಲಿ ನಡೆಯುವ ಜಾತ್ರೆಗಳ ವೈಶಿಷ್ಟ್ಯವನ್ನು ಕುರಿತು ಅಧ್ಯಯನವನ್ನು ಕೈಗೊಂಡಿದ್ದು, ಇಲ್ಲಿ ಚಿಕ್ಕೋಡಿಯ ಭೌಗೋಳಿಕ ಪರಿಸರವನ್ನು ಪರಿಚಯಿಸುವ ಮೂಲಕ, ಜಾತ್ರೆಗಳ ಉಗಮ ಮತ್ತು ವಿಕಾಸ, ಈ ಭಾಗದಲ್ಲಿ ನಡೆಯುವಂತಹ ವಿವಿಧ ಪ್ರಸಿದ್ಧ ಜಾತ್ರೆಗಳನ್ನು ಆಯ್ದುಕೊಂಡು ಅವುಗಳ ಕುರಿತು ಸುದೀರ್ಘವಾದ ಚರ್ಚೆ ನಡೆಸಲಾಗಿದೆ. ಇವುಗಳ ಆಚರಣೆ ಕುರಿತಾಗಿ ವಿವಿಧ ಜಾತಿ, ಪಂಗಡ, ಧರ್ಮದ ಅನುಭವಿಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ಹಾಗೆಯೇ ವಿಭಿನ್ನ ತಾಣಗಳಾಗಿ ಜಾತ್ರೆಗಳನ್ನು ಅಧ್ಯಯನಕ್ಕೆ ಗುರಿಪಡಿಸಲಾಗಿದೆ. ನಂತರದಲ್ಲಿ ಜಾತ್ರೆಯ ಸಮಯದಲ್ಲಿ ನಡೆಯುವಂತಹ ವಿಭಿನ್ನ ಜನಪದ ಆಚರಣೆಗಳನ್ನು ಇಲ್ಲಿ ಪರಿಚಯಾತ್ಮಕವಾಗಿ ಗುರುತಿಸಲಾಗಿದೆ. ಒಟ್ಟಾರೆಯಾಗಿ ಈ ಮಹಾಪ್ರಬಂಧದಲ್ಲಿ ಚಿಕ್ಕೋಡಿ ತಾಲೂಕಿನ ಜಾತ್ರೆಗಳ ಸಮಗ್ರ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಫಲಿತಗಳು

೧. ಮೌಖಿಕ ಸಂಸ್ಕೃತಿ ನಮ್ಮದು, ಆಚರಣಾ ಜ್ಞಾನ ಪ್ರಧಾನ ಸಮಾಜ ನಮ್ಮದು, ಪೀಳಿಗೆಯಿಂದ ಪೀಳಿಗೆಗೆ, ಕಿವಿಯಿಂದ ಕಿವಿಗೆ, ಬಂದ ಆಚರಣೆಯ ಇನ್ನೂ ಚಾಲ್ತಿಯಲ್ಲಿರುವದನ್ನು ನಾವು ಕಾಣುತ್ತೇವೆ. ಹಾಗೆಯೇ ನನ್ನ ಅಧ್ಯಯನದ ಈ 'ಸೂಫಿ' ಶರಣರ ಕೇಂದ್ರವಾದ ದರ್ಗಾಗಳಲ್ಲಿ ನಡೆಯುವ ಆಚರಣೆಗಳ ಮೇಲೆ ಹೇಳಿದ ಮಾತುಗಳನ್ನೇ ಸಮರ್ಥಿಸುತ್ತವೆ.

ಬಹುಸಂಸ್ಕೃತಿಯ ಭಾರತೀಯ ಸಮಾಜದಲ್ಲಿ ಆಚರಣೆಗಳ ವೈವಿಧ್ಯತೆಯಿದ್ದಂತೆಯೇ ಸಾಮ್ಯತೆಯು ಇರುವದನ್ನು ಕಾಣುತ್ತೇವೆ. ಇದಕ್ಕೆ ಐತಿಹಾಸಿಕ, ಭೌಗೋಳಿಕ, ಸಾಮಾಜಿಕ, ರಾಜಕೀಯ ಬದಲಾದ ಅವಸ್ಥೆಗಳು ಕಾರಣವಾಗುತ್ತವೆ. ಹಿಂದೂ ಸಮಾಜದಲ್ಲಿಯೂ ಮಹಿಳೆಯರಿಗೆ ಹತ್ತು ಹಲವು ಕಡೆಗೆ ನಿಷೇಧವಿರುವದನ್ನು ಕಾಣುತ್ತೇವೆ. ಮಹಿಳೆ ಅರ್ಚಕಿಯಾಗಿ ಪುರೋಹಿತಳಾಗಿ, ನಾವು ಮಹಿಳೆಯನ್ನು ಇಂದಿಗೂ ಕಾಣುವುದಿಲ್ಲ. ತಂದೆಯ ಕೊನೆಯ ಸಂಸ್ಕಾರದ ವಿಧಿಯನ್ನು ಹೆಣ್ಣು ಮಗಳು ಮಾಡಿದ್ದೇಯಾಲ್ಲಿ ಅದು ವರ್ತಮಾನ ಪತ್ರಿಕೆಯ ದಪ್ಪಕ್ಷರದ ಮುಖ ಪುಟದ ಸುದ್ದಿಯಾಗುತ್ತದೆ. ಸೈದ್ಧಾಂತಿಕವಾಗಿ ಇದಕ್ಕೆ ಕಾರಣಗಳನ್ನು ಯಾವ ಶಾಸ್ತ್ರ ಗ್ರಂಥಗಳೂ ನೀಡುವುದಿಲ್ಲ. ಆದರೂ ಸಮಾಜ ಇದನ್ನು ಒಪ್ಪಿಕೊಂಡೆ ಮುಂದುವರಿಯುತ್ತದೆ.

ಆಚರಣೆಗಳು ಕಾಲಕಾಲಕ್ಕೆ ಕೆಲವೊಮ್ಮೆ ಹಳೆಯದು ಕಳೆದು ಹೋಗಿ ಹೊಸ ವಿಧಾನಗಳ ಸೇರ್ಪಡೆಯಾಗಿ ತಮ್ಮಲ್ಲಿಲ್ಲದ ಆಚರಣೆಗಳನ್ನು ಒಳಪಡಿಸಿ ಮುಂದು ವರೆಯುವುದನ್ನು ನಾವು ಕಾಣುತ್ತೇವೆ.

ಇಲ್ಲಿನ ದರ್ಗಾದಲ್ಲಿ ಗರ್ಭಗೃಹವನ್ನು ಮಹಿಳೆಯರು ಪ್ರವೇಶಿಸುವಂತಿಲ್ಲ. "ಕುರಾನ"ನಲ್ಲಿ ಇದರ ಪ್ರಸ್ತಾಪ ಇಲ್ಲವಾದರೂ ಆಚರಣೆಯಲ್ಲಿ ಮಾತ್ರ ಉಳಿದುಕೊಂಡಿದೆ. "ಸೂಫಿ" ಮತ್ತು "ಇಸ್ಲಾಂ" ಇವೆರಡರ ಮಧ್ಯ "ಸೂಫಿ" "ಇಸ್ಲಾಂ" ಧರ್ಮದಲ್ಲಿ ಪ್ರವೇಶ ಮಾಡಿದ್ದು ಈಗ ಹಿತಿಹಾಸ.

"ಇಸ್ಲಾಂ" ಧರ್ಮದಲ್ಲಿ ಹೆಣ್ಣಿನ ಸ್ಥಾನಮಾನದ ಕುರಿತು ಇಲ್ಲಿ ಪ್ರಸ್ತಾಪಿಸುವುದು ಅಪ್ರಸ್ತುತವಾದರೂ ದರ್ಗಾದಲ್ಲಿ ಮಹಿಳೆಯರಿಗೆ ಪ್ರವೇಶ ನಿಷೇಧ ಇದರ ಒಂದು ಪರಿಣಾಮವೇ ಆಗಿದೆ. ಬಹುಶಃ ನೋಬೆಲ್ ಪಾರಿತೋಷಕ ವಿಜೇತೆ ಮಲಾಲಾ ಕೂಡ ಇಂತಹ ನಿಷೇಧವನ್ನು ಅನುಭವಿಸುತ್ತಿದ್ದಾಳೆನ್ನುವದು ಜ್ವಲಂತ ಸಾಕ್ಷಿ. ಆದರೆ ಅನಕ್ಷರಸ್ಥ ಅಥವಾ ಉನ್ನತ ಶೀಕ್ಷಣದ ಕೊರತೆಯಿಂದಾಗಿ ಈ ಭಾಗದ ಮಹಿಳೆಯರು ಈ ವ್ಯವಸ್ಥೆಯನ್ನು ಒಪ್ಪಿಕೊಂಡು ಬಿಟ್ಟಿದ್ದಾರೆನ್ನುವದು ಅಷ್ಟೇ ಕಟುಸತ್ಯ.

೨. ಪುರುಷ ಪ್ರಧಾನ ಸಮಾಜ ಈ ಹೊತ್ತಿಗೂ ತನ್ನ ಪ್ರತಿಷ್ಠೆಗಾಗಿ ಅಸ್ತಿತ್ವ ಉಳಿಸಿಕೊಳ್ಳಲು ನಮ್ಮರಿವಿಗೆ ಬರಲಾರದೆ ಸಂಚು ನಡೆಯುತ್ತಲೇ ಇದೆ. ಇದು ವಾಸ್ತವತೆಯ ಕಟುಸತ್ಯ. ಎಷ್ಟೇ ಕಲಿತ ಮನೆತನದ ಆಧುನಿಕ ವಿಚಾರ ಧಾರೆಗಳನ್ನು ಅಳವಡಿಸಿಕೊಂಡಿದ್ದಾರೆಂದು ಭಾವಿಸಿದರೂ ಅಂತರಂಗದಲ್ಲಿ ತಮ್ಮ ಸ್ವಂತಕ್ಕೆ ಎಲ್ಲವನ್ನೂ ಒಪ್ಪಿಕೊಳ್ಳುವುದಿಲ್ಲ.

ಕರೋಶಿಯಂತಹ ಒಂದು ಸಾಧಾರಣ ಗ್ರಾಮದಲ್ಲಿ ಮೈಯಲ್ಲಿ ಬಂದ ದೆವ್ವ ಬಿಡಿಸುವ ಆಚರಣೆಯು ಇಂತಹ ಸಾಮಾಜಿಕ ಸ್ಥಿತ್ಯಂತರಗಳ ಉದಾಹರಣೆಯಾಗಿದೆ.

ಮಹಿಳೆಯೊಬ್ಬಳು ತನ್ನೆಲ್ಲಾ ಆಶೋತ್ತರಗಳನ್ನು ಅಂತರಗಂದಲ್ಲಿಯೇ ಅದುಮಿಟ್ಟುಕೊಳ್ಳುವ ಸನ್ನಿವೇಶಗಳೇ ಹೆಚ್ಚು. ಇದಕ್ಕೆ ಕೌಟುಂಬಿಕ ನಿರ್ವಹಣೆಗೆ ಅನಿವಾರ್ಯ ಎನ್ನುವ ವಾತಾವರಣವನ್ನು ಸೃಷ್ಟಿಸಿ ಸಮಜಾಯಿಸಿ ನೀಡುವ ಉತ್ತರವೂ ಆಗಿದೆ. ದೌರ್ಜನ್ಯಕ್ಕೊಳಗಾಗಿ, ನಲುಗಿ ಹೋದ ಆ ಮಹಿಳೆಗೆ ಬಂದಿರಬಹುದಾದ ಸಿಟ್ಟನ್ನು, ವಿರೋಧವನ್ನು ನುಂಗಿ ಮೇಲ್ನೋಟಕ್ಕೆ ಸಮಾಧಾನಿಯಾಗಿರುತ್ತಾಳೆ.

ಒಂದರ್ಥದಲ್ಲಿ ಕೆಲವೊಂದು ಬಾರಿ ಅಂತರ್ಮುಖಿಯಾಗಿ ಮೌನ ವಹಿಸುತ್ತಾಳೆ. ಆವಾಗ ದೆವ್ವ ಅವಳಿಗೆ ಆಯುಧವಾಗಿ ಕಾಣಿಸಿಕೊಂಡರೂ ಆಶ್ಚರ್ಯ ಪಡಬೇಕಾಗಿಲ್ಲ. ಮೈಯಲ್ಲಿ ದೆವ್ವ ಆವರಿಸಿದಾಗ ಸುತ್ತಲಿನ ಮೀಸೆ ಹೊತ್ತ ಎಂತಹ ಗಂಡಸು ಗಡಗಡನೆ ನಡುಗುವದನ್ನು ಕಂಡು ಅವಳು ಖುಷಿ ಪಡುತ್ತಿರುತ್ತಾಳೆ. ಇದನ್ನು ನಂಬುವ ಸಮಾಜಕ್ಕೆ ಅವಳು ಥ್ಯಾಂಕ್ಸ್ ಹೇಳಿಯೇ ಹೇಳುತ್ತಾಳೆ. ಇನ್ನು ದೆವ್ವ ಬಿಡಿಸುವ ನಾಟಕದಲ್ಲಿ ಅವಳ ಪಾತ್ರ ಬಹಳ ಪ್ರಮುಖ.

ನಿಜವಾಗಿಯೂ ತನಗೆ ದೆವ್ವ ಆವರಿಸಿತ್ತು; ಅದರ ಬಿಡುಗಡೆ ಅಷ್ಟು ಸುಲಭ ಸಾಧ್ಯವಿಲ್ಲ ಎನ್ನುವದನ್ನು ಸಮರ್ಥವಾಗಿ ಪ್ರದರ್ಶಿಸುತ್ತಾಳೆ. ಒಮ್ಮೆ ಕೊಲೆ ಆರೋಪದಲ್ಲಿ ಸೆರೆಮನೆ ವಾಸ ಶಿಕ್ಷೆ ಅನುಭವಿಸಿ ತನ್ನೂರಿಗೆ ಮರಳಿದ ಆರೋಪಿ ಊರು ಜನರ ಮನಸ್ಸಿನಲ್ಲಿ ಸದಾ ಭಯವನ್ನೇ ಹುಟ್ಟಿಸಿರುತ್ತಾನೆ. ಇದೇ ಮಾದರಿಯಲ್ಲಿ ದೆವ್ವ ಮೈಯಿಂದ ಕಳಚಿ ಮನೆಗೆ ಮರಳಿದ ಆ ಮಹಿಳೆಯು ಎಲ್ಲರ ಮೊದಲಿನ ಅವಸ್ಥೆಯನ್ನು ಕೆದಕಿರುತ್ತಾಳೆ. ಈಗ ತನಗೆ ದೊರೆತ ಮರ್ಯಾದೆ, ತನಗೆ ಎಲ್ಲರೂ ಹೆದರುವರು ಎನ್ನುವ ಸಂಗತಿಯೇ ಮತ್ತೇ ಬದುಕು ನಡೆಸಲು ಆಧಾರವಾಗುತ್ತದೆ.

ವಿರೋಧ ವ್ಯಕ್ತಪಡಿಸಲು ಅಸಾಧ್ಯವಾದ ಇಂತಹ ಅಸಹಾಯಕ ಮಹಿಳೆಯರು ದೆವ್ವದ ಮೊರೆ ಹೋಗುವದು ತಪ್ಪೋ ಸರಿಯೋ ಎನ್ನುವದಕ್ಕಿಂತ ಮಾನಸಿಕ ಅವಸ್ಥೆಯೊಂದರ ಉದಾಹರಣೆಯಾಗಿ ದೆವ್ವ ಹಿಡಿದು ಮಹಿಳೆ ಕರೋಶಿ ದರ್ಗಾದಲ್ಲಿ ಕಾಣುತ್ತಾಳೆ.

೩. ಪ್ರೀತಿ ಮತ್ತು ವಿಚಾರಗಳ ಬೆಸುಗೆಯೇ ಜನಪದ ಸಂಸ್ಕೃತಿ. ಜನಪದರು ತೆರೆದ ಮನಸ್ಸು ಪ್ರತಿಯೊಬ್ಬರೂ ಹುಟ್ಟುವಾಗ ವಿಶ್ವಮಾನವರಾಗಿ ಹುಟ್ಟುತ್ತಾರೆ. ಬೆಳೆಯುತ್ತ

ಬೆಳೆಯುತ್ತ ಅವನಿಗೆ ಜಾತಿ, ಕೋಮಿನ ವಿಷವನ್ನು ಉಣಿಸುತ್ತ ಹೋಗುತ್ತೇವೆ. ಆಗ ಆತ ಅಲ್ಪಮಾನವನಾಗುತ್ತಾನೆ ಎಂದು ಕುವೆಂಪು ಹೇಳಿರುವದರಲ್ಲಿ ಅರ್ಥವಿದೆ. ಅಂತಹ ಒಂದು ಮಾನವೀಯ ಸಂದರ್ಭವೊಂದನ್ನು ಮಾದಿಗ ಚೆನ್ನಯ್ಯನ, 'ಚಮ್ಮಾಳಿ'ಗೆ ಸೇವೆಯನ್ನು ಕೆರೂರ ಗ್ರಾಮದಲ್ಲಿ ಕಾಣುತ್ತೇವೆ.

ರೆಬಕವ್ವೆ/ಜಿನ್ನವ್ವ ತನ್ನ ಮಗನಾದ ಅರಣ್ಯಸಿದ್ಧನು ಕಿಲ್ಲಾರಿಗಳನ್ನು ಮೇಯಿಸುತ್ತ ಅಲಕನೂರಿನ ಕರಿಸಿದ್ಧನ ಹೊಲವನ್ನು ಪ್ರವೇಶಿಸಿದಾಗ ಕರಿಸಿದ್ಧನ ಮೋಸಕ್ಕೆ ಅರಣ್ಯಸಿದ್ಧ ಬಲಿಯಾಗುತ್ತಾನೆ. ಮಗ ಬಾರದೇ ಇದ್ದುದನ್ನು ಕಂಡು ತಾಯಿ ಕಾಡುಮೇಡು ಅಲೆಯುತ್ತ ಮಗನನ್ನು ಹುಡುಕುವಾಗ ಅವಳ ಕಾಲಿಗೆ ರಕ್ತ ಒಸರುತ್ತದೆ. ಅವಳ ಕಷ್ಟ ನೋಡಲಾರದೆ ನಂಬಿಗಸ್ಥ ಮಾದಿಗ ಚೆನ್ನಯ್ಯ ತೊಡೆಯ ಚರ್ಮ ತೆಗೆದು ಅವಳಿಗೆ 'ಚಮ್ಮಾಳಿಗೆ' ಮಾಡಿ ಕೊಡುತ್ತಾನೆ.

ಇಲ್ಲಿ ಗುರುತಿಸಬೇಕಾದದ್ದು ಇಷ್ಟೇ. ಆ ತಾಯಿಯ ಎದೆಯ ನೋವನ್ನು ಅರ್ಥ ಮಾಡಿಕೊಂಡ ಒಬ್ಬ ಅನಕ್ಷರಸ್ತ ದಲಿತ ಚೆನ್ನಯ್ಯನ ಹೃದಯದಲ್ಲಿ ಮಾನವೀಯತೆಯಿದೆ. ಇಂದು ಮಾನವೀಯತೆ ಉಳಿದಿದ್ದರೆ ಅದು ಮುರುಕ ಗುಡಿಸಲುಗಳಲ್ಲಿ. ಹೊಲೊಗಳಲ್ಲಿ ಬೆವರು ಸುರಿಸುವ ರೈರನ ಎದೆಯಾಳದಲ್ಲಿ, ಕಾರ್ಮಿಕರ ಅಂತರಾಳದಲ್ಲಿ, ಮನೆಮನೆ ತಿರುಗಿ ಮುಸುರೆ ಪಾತ್ರೆಗಳನ್ನು ತಿಕ್ಕುವ ಮಹಿಳೆಯ ನಿಟ್ಟುಸಿರಿನಲ್ಲಿ ಜೀವಂತವಾಗಿದೆ. ಒಟ್ಟಾರೆ ಶ್ರಮಿಕ ಜನರ ಅಂತರಂಗ ಮಾನವೀಯತೆಯ ನೆಲೆಯಾಗಿದೆ. ಅಂತಹದೊಂದು ಮಾನವೀಯ ಆಚರಣೆಯ ಹಿಂದಿನ ಮೌಲ್ಯವನ್ನು ನನ್ನ ಅಧ್ಯಯನದೊಳಗೆ ಕಂಡಿರಿಸಿದ್ದೇನೆ.

೪. ಕುಟುಂಬ ಪ್ರೇಮ, ಪರಿಸರ ಪ್ರೇಮ, ನಾಡಿನ ಪ್ರೇಮ ಇವೆಲ್ಲವನ್ನು ಹಳ್ಳಿಯ ಜನಪದ ಮಹಿಳೆಯ ಹಾಡುಗಳಲ್ಲಿ ಕಾಣುತ್ತೇವೆ. ಅಂತಹ ಜನಪದ ಮಹಿಳೆಯ ಹಾಡುಗಳು ನನ್ನ ಅಧ್ಯಯನಕ್ಕೆ ಒಳಪಟ್ಟಿವೆ.

೫. ಚಿಕ್ಕೋಡಿಯು ಮಹಾರಾಷ್ಟ್ರದ ಗಡಿ ಪ್ರಾಂತ್ಯದಲ್ಲಿರುವ ಕಾರಣ ಈ ಭಾಗದಲ್ಲಿ ನಡೆಯುವ ಜಾತ್ರೆ ಉತ್ಸವಗಳಲ್ಲಿ ಕನ್ನಡ ಮತ್ತು ಮರಾಠಿ ಆಚರಣೆಗಳ ಸಮ್ಮಿಶ್ರಣವನ್ನು ಇಲ್ಲಿ ಗುರುತಿಸಲಾಗಿದೆ. ಬ್ರಾಹ್ಮಣರು ಆಡುವ 'ಹದಗಾ' ಮರಾಠಿ ಸಮೂಹ ಗೀತಗಾಯನ ವೈಶಿಷ್ಟ್ಯ ಪೂರ್ಣವಾಗಿದೆ.

೬. ಜಾತ್ರೆಯಲ್ಲಿ ಜರುಗುವ ಆಚರಣೆಗಳಾದ ಡೊಳ್ಳು ಕುಣಿತ, ಗೋಂದಳ, ನಂದಿಕೋಲು ಕುಣಿತ, ಹೊಂಗಾಂಡೋತ್ಸವ, ಚೌಡಿಕೆ ಪದಗಳು, ಹುಟ್ಟಿಗೆ ಉಡುಗೆ, ಜಾತ್ರೆಯಲ್ಲಿ

ಹೇಳುವ 'ಭಾಕಣೂಕ'(ಭವಿಷ್ಯವಾಣಿ), ಪುರವಂತರ ಒಡಬು ಇವೆಲ್ಲವೂ ಚಿಕ್ಕೋಡಿ ತಾಲೂಕಿನ ಜಾತ್ರೆಯ ವೈವಿಧ್ಯತೆಯನ್ನು ಎತ್ತಿ ಹಿಡಿದಿವೆ.

೭. ಜಾತ್ರೆಯಲ್ಲಿ ಜರುಗುವ ಜನಪದ ಕಲಾ ಪ್ರಕಾರಗಳು ಆಧುನಿತೆಯ ರೂಪವನ್ನು ತಾಳಿಕೊಂಡು ಮುಂದುವರಿಯುತ್ತಿವೆ. ಜಾತ್ರೆಯಲ್ಲಿ ಸಹಪಂಕ್ತಿ ಭೋಜನವು ಇಲ್ಲಿನ ಸಾಮರಸ್ಯವನ್ನು ಎತ್ತಿ ಹಿಡಿದಿವೆ.

೮. ವೈಚಾರಿಕ ಚಿಂತನೆಗಳ ಪ್ರಭಾವ ಹಾಗೂ ದಲಿತ ಮತ್ತು ಮಹಿಳಾ ಪರ ಸಂಘಟನೆಗಳ ಪ್ರಭಾವದಿಂದ ಜಾತ್ರೆಯ ಸಮಯದಲ್ಲಿ ದೇವರ ಹೆಸರಿನಲ್ಲಿ ಆಚರಿಸಿಕೊಂಡು ಬರುತ್ತಿದ್ದಂತಹ ಅನಿಷ್ಟ ಪದ್ಧತಿಗಳು ಕ್ರಮೇಣ ಕಣ್ಮರೆಯಾದಂತೆ ಕಂಡು ಬಂದರೂ ಇನ್ನೂ ಕೆಲವು ಕಡೆ ಪ್ರಾಣಿ ಬಲಿಯಂತಹ ಅನಿಷ್ಠ ಪದ್ಧತಿಗಳು ಅಲ್ಲಲ್ಲಿ ಕಂಡು ಬಂದಿವೆ.

೯. ಜಾತ್ರಾ ಸಮಯದಲ್ಲಿ ಓಕುಳಿಯಾಟದಲ್ಲಿ ಡೊಂಬರ ಯುವತಿಯರಿಗೆ ನೀರು ಎರಚಿ ಮನರಂಜನೆ ಪಡೆಯುವ ಯುವಕರ ಗುಂಪು ಒಂದು ಕಡೆಯಾದರೆ. ಇನ್ನೊಂದು ಕಡೆ ಅಲ್ಲಮಪ್ರಭುವಿನ ಜಾತ್ರೆಯಲ್ಲಿ ಪ್ರತಿಯೊಬ್ಬ ಮುತ್ತೈದೆಗೆ ಉಡಿ ತುಂಬಿ, ಮೊದಲ ಪಂಕ್ತಿ ಭೋಜನ ಬಡಿಸಿ ಗೌರವಿಸುವದು ಇನ್ನೊಂದು ಕಡೆ ಕಂಡು ಬರುತ್ತದೆ.

೧೦. ಆಧುನಿಕ ಸಂದರ್ಭದಲ್ಲಿಯೂ ಆಯಾ ಜಾತಿಗೆ ಸಂಬಂಧಿಸಿದಂತಹ ಜನಾಂಗವು ತಮ್ಮ ಮೂಲ ವೃತ್ತಿಗೆ ಅನುಸಾರವಾದ ರೀತಿಯಲ್ಲಿ ಜಾತ್ರೆಯ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿರುವದನ್ನು ಗುರುತಿಸಲಾಗಿದೆ.

೧೧. ಜಾತ್ರೆಗಳು ತಮ್ಮ ಸಾಂಸ್ಕೃತಿಕ ಸಿರಿಯನ್ನು ಪ್ರದರ್ಶಿಸುವ ಮೂಲಕ ತಮ್ಮ ವೈಶಿಷ್ಟ್ಯವನ್ನು ಎತ್ತಿ ಹಿಡಿದಿವೆ.

೧೨. 'ಫ್ಯೂಡಲ್' ಸಂಸ್ಕೃತಿಯೊಳಗೆ ಇಪ್ಪತ್ತು ವರ್ಷಗಳ ಹಿಂದೆ, ಅದಕ್ಕೂ ಹಿಂದೆ ಜಾತ್ರೆಗಳು ನಡೆಯುತ್ತಿದ್ದವು. ಆಧುನಿಕತೆಯ ಪ್ರಭಾವದಿಂದ ಈ 'ಫ್ಯೂಡಲ್' ಸಂಸ್ಕೃತಿಯ ಜಾತ್ರೆಗಳು ಕ್ರಮೇಣ ಕಡಿಮೆಯಾಗಿವೆ.

೧೩. ಹರಕೆ ಹೊತ್ತ ಭಕ್ತರು ಯಕ್ಸಂಬಾ ಗ್ರಾಮದ 'ಬೀರೇಶ್ವರ' ದೇವಸ್ಥಾನದ ಗೋಡೆಗೆ ೧೦೦ಮೀ ಅಂತರದಿಂದ ತೆಂಗಿನಕಾಯಿ ಬೀಸಿ ಒಗೆದು ಒಡೆಯುವದರ ಮುಖಾಂತರ

ತಮ್ಮ ಹರಕೆಯನ್ನು ತೀರಿಸಿಕೊಳ್ಳುತ್ತಾರೆ. ಆಧುನಿಕತೆಯ ಪ್ರಭಾವದಿಂದ, ದಿನಗಳ ಜಾತ್ರೆಗಳ ಜೊತೆಜೊತೆಗೆ ಯಂತ್ರಗಳ ಪ್ರದರ್ಶನ, ಮೋಟರ ಸೈಕಲ್, ಗೊಬ್ಬರ ಮುಂತಾದವುಗಳ ಪ್ರದರ್ಶನ ಮತ್ತು ಜಾಹೀರಾತುಗಳ ಭರಟೆ ಕೂಡ ಕಂಡು ಬರುತ್ತದೆ. ಜೈನಧರ್ಮದ ಪಂಚಕಲ್ಯಾಣ ಪೂಜೆಗಳು ಅತ್ಯಂತ ವಿಜೃಂಭಣೆಯಿಂದ ನೆರವೇರುತ್ತದೆ.

೧೪. ಚಿಕ್ಕೋಡಿ ಭಾಗದಲ್ಲಿ ಪುರುಷ ದೈವಗಳ ಜಾತ್ರೆಗಳು ಸ್ತ್ರೀ ದೈವಗಳ ಜಾತ್ರೆಗಳಿಗಿಂತ ವಿಜೃಂಭಣೆಯಿಂದ ನಡೆಯುತ್ತಿವೆ. ಗ್ರಾಮೀಣ ಕ್ರೀಡೆಗಳಾದ ಕುಸ್ತಿ, ಕಬ್ಬಡ್ಡಿ, ಎತ್ತಿನಗಾಡಿ ಶರ್ಯತ್ತು, ಕುದುರೆ ಶರ್ಯತ್ತು, ಆಧುನಿಕತೆಯ ವೇಗದಲ್ಲಿಯೂ ಕೂಡ ಜಾತ್ರೆಯ ಸಂದರ್ಭದಲ್ಲಿ ಅನನ್ಯತೆಯನ್ನು ಉಳಿಸಿಕೊಂಡಿವೆ.

೧೫. ಇತ್ತೀಚಿನ ದಿನಗಳಲ್ಲಿ ಜಾತ್ರೆಗಳು ರಾಜಕೀಯ ಪ್ರಚಾರದ ತಾಣಗಳಾಗಿ ರೂಪಿತವಾಗುತ್ತವೆ. ಪ್ರಬಲ ರಾಜಕಾರಣಿಗಳು ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವ ದತ್ತಿ ನೀಡಿ ಜಾತ್ರೆಗಳನ್ನು ಏರ್ಪಡಿಸಿರುವದನ್ನು ಇಲ್ಲಿ ಗುರುತಿಸಲಾಗಿದೆ.

೧೬. ಚಿಕ್ಕೋಡಿ ಭಾಗದಲ್ಲಿ ಜರುಗುವ ಜಾತ್ರೆಗಳು ಧರ್ಮಸಮನ್ವಯತೆಯ ಅಡಿಯಲ್ಲಿ ನಡೆಯುತ್ತಿದ್ದು. ಇಲ್ಲಿ ಯಾವುದೇ ಧರ್ಮೀಯರು ಜಾತ್ರೆಗಳನ್ನು ಸರ್ವರೂ ಆಚರಿಸುವ ಪದ್ಧತಿ ರೂಢಿಯಲ್ಲಿದೆ. ಆದರೆ ಸೂಕ್ಷ್ಮ ಅಧ್ಯಯನವು ಇಲ್ಲಿಯೂ ಕೂಡ ಜಾತಿ ವೈವಸ್ಥೆಯ ಪ್ರಭಾವ ಇರುವದನ್ನು ಗುರುತಿಸಿದೆ.

೧೭. ನಶಿಸಿ ಹೋಗುತ್ತಿರಬಹುದಾದ ಕಲೆಗಳಲ್ಲಿ ಇಲ್ಲಿನ ಉರುಸುಗಳಲ್ಲಿ ಈಗಲೂ ಸ್ವರಚಿತ ಹಾಡು, ಕವ್ವಾಲಿ, ಗಝುಲ್, ಸಾಮೂಹಿಕವಾಗಿ ಭಕ್ತಿಯ ಒಂದು ಪ್ರದರ್ಶನವಾಗಿ ಬಿಂಬಿತವಾಗುತ್ತಿರುವದು ಗಮನಾರ್ಹವಾಗಿದೆ. ಈ ನೃತ್ಯಗಾಯನಗಳಲ್ಲಿ ಬರೀ ಮುಸ್ಲಿಂರಷ್ಟೇ ಅಲ್ಲ ಹಿಂದೂ ಯುವಕರು ಭಾಗವಹಿಸುವ ಮೂಲಕ ಧರ್ಮಸಹಿಷ್ಣುತೆಯ ನಿಜವಾಜ ಪ್ರಾಯೋಗಿಕ ಆಚರಣೆಯಲ್ಲಿ ತೊಡಗಿಸಿಕೊಂಡಿರುವದು ವಿಶೇಷ.

೧೮. ಜನಪದ ಸಂಸ್ಕೃತಿಯೊಂದು ರೂಪುಗೊಂಡಿದ್ದು ಜನಪದರಿಂದಲೇ. ಹೀಗಾಗಿ ಅಂತಹ ಜನಪದರ ಅಭಿಪ್ರಾಯ, ಅನಿಸಿಕೆಗಳು, ಅತ್ಯಂತ ಮಹತ್ವಪೂರ್ಣವಾದವು. ಪ್ರತಿಯೊಂದು ಆಚರಣೆಯ ಬಗ್ಗೆ ಅವರ ನಂಬಿಕೆ, ಉತ್ಸಾಹ, ಭಯಕ್ಕೆ ಅನಿವಾರ್ಯತೆ ಇವೆಲ್ಲಕ್ಕೂ ಅವರಿಂದಲೇ ಕಾರಣಗಳನ್ನು ತಿಳಿಯುವದು ಬಹುಮುಖ್ಯ. ಅಧ್ಯಯನದಲ್ಲಿ ಜನಪದರ ಅಭಿಪ್ರಾಯಗಳಿಗೂ ಕೂಡ ನೀಡಿರುವ ಪ್ರಾಮುಖ್ಯತೆಯಿಂದಾಗಿ ಇಡೀ ಅಧ್ಯಯನಕ್ಕೆ ಒಂದು ಹೊಸ ದೃಷ್ಟಿಕೋನ ಒದಗಿಸಿದಂತಾಗಿದೆ.

ಸಾಧ್ಯತೆಗಳು

೧. 'ಸೂಫಿ' ಸಂಸ್ಕೃತಿ ಮತ್ತು 'ಇಸ್ಲಾಂ' ಧರ್ಮ ಎರಡೂ ಕೂಡಿದ್ದು ಯಾವಾಗ? ಹೇಗೆ? ಎನ್ನುವ ಕುರಿತು ಇನ್ನೂ ಹೆಚ್ಚಿನ ಅಧ್ಯಯನವಾಗಬೇಕಿದೆ. ನನ್ನ ಸಂಶೋಧನ ಪ್ರಬಂಧ ಮುಂದೆ ನಡೆಯಬಹುದಾದ ಸಂಶೋಧನೆಗಳಿಗೆ ಒಂದು ಸಾಮಗ್ರಿ ಅಥವಾ ಪರಿಕರ.

೨. 'ಸೂಫಿ' ಮತ್ತು 'ವಚನ' ಸಂಸ್ಕೃತಿಯ ಮಧ್ಯದ ಸಾಮ್ಯತೆ ಅವುಗಳಿಂದ ಸಮಾಜದ ಮೇಲೆ ಉಂಟಾದ ಪರಿಣಾಮ ಕುರಿತು ಅಧ್ಯಯನಕ್ಕೆ ವಿಫುಲ ಅವಕಾಶವಿದೆ.

೩. 'ನಾಥ' ಸಂಪ್ರದಾಯ ಮತ್ತು ಇಲ್ಲಿನ ಉಪಸಂಸ್ಕೃತಿಗಳ ಮೇಳೈವಿಕೆ ಕುರಿತು ಸೂಕ್ಷ್ಮ ಅಧ್ಯಯನ ನಡೆಯಬೇಕಿದೆ.

೪. ಉಪ ಸಂಸ್ಕೃತಿಗಳ ಮೂಲ ಆಚರಣೆಗಳು ಮೇಲ್ವರ್ಗದ ಸಂಸ್ಕೃತಿಯ ಆಚರಣೆಗಳ ಅನುಕರಣೆ ಕುರಿತು ಸಂಶೋಧಕರು ಸಂಶೋಧನೆ ಕೈಕೊಳ್ಳಬಹುದಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು

೨. ವಕ್ತೃ ವಿವರ

೩. ಛಾಯಾಚಿತ್ರಗಳು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೧. ಡಾ. ಅನಿತ ಕಮತಿ, ಪ್ರೊ. ಚಂದ್ರಕಾಂತ ಪೋಕಳೆ (ಸಂ), 'ಸೀಮೆ', ೧೯೭೭.

೨. ಅಂಬಳಿಕೆ ಹಿರಿಯಣ್ಣ, 'ಹಬ್ಬ ಜಾತ್ರೆಗಳು', ಜಾನಪದ ವೀಕ್ಷಣೆ, ಪ್ರಜ್ವಲ ಪ್ರಕಾಶನ, ಮೈಸೂರು, ೧೯೮೭.

೩. ಅರವಿಂದ ಮಾಲಗತ್ತಿ, 'ಜಾನಪದ ಶೋಧ'.

೪. ಇಬ್ರಾಹಿಂ ಮುಲ್ಲಾ, ಕರ್ನಾಟಕದ ಉರುಸುಗಳು, ಅಂಜುಮನ್ ಪದವಿ ಮಹಾವಿದ್ಯಾಲಯ, ಧಾರವಾಡ, ಪ್ರಕಟಣೆ–೨೦೧೪.

೫. ಚನ್ನಣ್ಣ ವಾಲೀಕಾರ, ಹೈದರಾಬಾದ್ ಕರ್ನಾಟಕದ ಗ್ರಾಮ ದೇವತೆಗಳು ೧೯೯೮.

೬. ಚನ್ನಣ್ಣ ವಾಲೀಕಾರ, ೧೯೯೭, ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ.ಧಾರವಾಡ.

೭. ಚಪ್ಪರಬಂದ ಅರ್. ಯು. ಮತ್ತು ಗುಲಜಾಂ ಯಾಸ್ಮಿನ್, "ಬಿಜಾಪುರ ಜಿಲ್ಲೆಯ ಜಾತ್ರೆಗಳು", ತ್ವರಿತ ಮುದ್ರಣ ಆಪಸೆಟ್ ಪ್ರಿಂಟರ್ಸ್, ಕಾಗದಗೇರಿ, ಗದಗ.

೮. ಚಂದ್ರಶೇಖರ ಕಂಬಾರ, ಕನ್ನಡ ಜನಪದ ವಿಶ್ವಕೋಶ, ಬೆಂಗಳೂರು.

೯. ಚಂದ್ರಶೇಖರ ದಾಮ್ಲೆ, 'ಜಾತ್ರೆ' ಸಮಾಜಶಾಸ್ತ್ರ ಸಂಘ, ನೆಹರು ಮೆಮೋರಿಯಲ್ ಕಾಲೇಜು, ಸುಳ್ಯ.

೧೦. ಚಂದ್ರಶೇಖರ ದಾಮ್ಲೆ, ಗತಿಬಿಂಬ, ಸುಳ್ಯ, ೧೯೯೧, ಸಮಾಜಶಾಸ್ತ್ರ ಸಂಘ ನೆಹರು ಮೆಮೋರಿಯಲ್ ಕಾಲೇಜು, ಸುಳ್ಯ.

೧೧. ಚಂದ್ರಶೇಖರ ದಾಮ್ಲೆ, 'ಜಾತ್ರೆಗಳ ಒಂದು ಜಾನಪದೀಯ ಅಧ್ಯಯನ' ನೆಹರು ಮೆಮೋರಿಯಲ್ ಕಾಲೇಜು ಸುಳ್ಯ, ೧೯೯೫.

೧೨. ಚಿದಂಬರಯ್ಯ ಅಳಿಲಘಟ್ಟ, ೨೦೦೯, ದೇವರು ಹಾಗೂ ಪ್ರಕೃತಿಯಲ್ಲಿ ದೇವತಾರಾಧನೆ, ಹೇಮಂತ ಸಾಹಿತ್ಯ ಪ್ರಕಾಶನ, ರಾಜಾಜಿನಗರ, ಬೆಂಗಳೂರು.

೧೩. ಚಿದಾನಂದಮೂರ್ತಿ ಎಂ, ೧೯೯೬, ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೪. ಚಿದಾನಂದ ಮೂರ್ತಿ, ೧೯೮೮, ಗ್ರಾಮೀಣ, ಬಾಪ್ಕೋ ಪ್ರಕಾಶನ, ಬೆಂಗಳೂರು.

೧೫. ಚಿನ್ನಪ್ಪ ಗೌಡ, ಕೆ., ಭೂತಾರಾಧನೆ, ಮದಿಪು ಪ್ರಕಾಶನ, ಮಂಗಳಗಂಗೋತ್ರಿ, ೧೯೯೧.

೧೬. ಜವರೇಗೌಡ ದೇ., ಜಾತ್ರೆಗಳು, ಜಾನಪದ ವಾಹಿನಿ! ಪ್ರ.ಡಿ.ವಿ.ಕೆ. ಮೂರ್ತಿ, ಮೈಸೂರು ೧೯೮೬.

೧೭. ಜೋಗನ್ ಶಂಕರ್, ೧೯೯೫, ಗ್ರಾಮ ಸಮಾಜ, ಜೀವನ ಪ್ರಕಾಶನ, ಬೆಂಗಳೂರು.

೧೮. ತಪಸ್ವೀಕುಮಾರ್ ನಂ., 'ನಮ್ಮ ಜನಪದ ನಂಬಿಕೆಗಳು', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ.ಮೈಸೂರು.

೧೯. ತಿಪ್ಪೇಸ್ವಾಮಿ. ಜಿ.ಆರ್, ಕೋಲಾರಮ್ಮ, ೧೯೯೬.

೨೦. ತಿಪ್ಪೇರುದ್ರಸ್ವಾಮಿ ಹೆಚ್, ೧೯೯೮, ಶರಣರ ಅನುಭಾವ ಸಾಹಿತ್ಯ, ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು.

೨೧. ನಲ್ಲೂರು ಪ್ರಸಾದ್, ನಲ್ಲೂರು ದೊರೆಕಾಳಿ, ೧೯೮೧.

೨೨. ನಾಗರತ್ನಕುಮಾರಿ. ಬಿ.ಎಸ್, ಊರಮ್ಮ ಮಾರಮ್ಮ, ೧೯೯೪.

೨೩. ನಾಗರಾಜ ಡಿ.ಆರ್., ೨೦೦೧, 'ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ', ಅಕ್ಷರ ಪ್ರಕಾಶನ, ಸಾಗರ.

೨೪. ನಾಗರಾಜಯ್ಯ. ಹಂ.ಪ, ಕರ್ನಾಟಕ ಜಾತ್ರೆಗಳು. ೧೯೮೫.

೨೫. ನಾಗಲೋಟಿಮಠ ಸ.ಜ., ೨೦೦೧, ಉತ್ತರ ಕರ್ನಾಟಕದಲ್ಲಿ ಪ್ರಾಣಿ ಬಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೬. ನಾಗೇಗೌಡ ಹೆಚ್.ಎಲ್., ೧೯೯೮ (ಸಂ), ಕನ್ನಡ ಜಾನಪದ ಕೋಶ, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೨೭. ನಾಗೇಶ ಹೆಬ್ಬಾಲೆ, ೨೦೧೧, ದಲಿತ ಸ್ತ್ರೀ ದೈವಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨೮. ನಾಯಕ್ ಎಸ್.ಆರ್, 'ಜಾತ್ರೆಗಳ ಸ್ವರೂಪ' ಜಾನಪದ ಸಾಂಬಾರು ಬಜ್ಜಲು ಜಾನಪದ ಪ್ರಕಾಶನ, ಹೊನ್ನಾವರ, ೧೯೯೨.

೨೯. ನಾಯಕ್ ಡಿ.ಟಿ., ೧೯೮೭, ಕರ್ನಾಟಕ ಶಕ್ತಿ ದೇವತೆಗಳು, ಬೆಂಗಳೂರು.

೩೦. ನೇಗಿನ ಹಾಳ. ಎಂ.ಬಿ (ಸಂ), ಜಾನಪದ ಸಾಹಿತ್ಯ ದರ್ಶನ, ಭಾಗ–೨ ಜಾನಪದ ನಂಬಿಕೆಗಳು.

೩೧. ಪ್ರೇಮಾನಂದ, ೧೯೯೭, ವಿಜ್ಞಾನ ಮತ್ತು ಪವಾಡಗಳು (ಅನು), ನವಕರ್ನಾಟಕ ಪ್ರಕಾಶನ, ಬೆಂಗಳೂರು.

೩೨. ಬಸವರಾಜ ನೆಲ್ಲಿಸರ, ಗ್ರಾಮದೇವತೆಗಳು, ೧೯೮೩.

೩೩. ಬಸವರಾಜ ಸಬರದ, ೨೦೦೯, ಜನಪದ ದೈವಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೪. ಬಸವರಾಜ ಸಬರದ, ಶೂನ್ಯ ಸಂಪಾದನೆ ಸವಾಲುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ಬಸವರಾಜ ಸಬರದ, ೧೯೯೮, ಗುಲ್ಬರ್ಗಾ ಜಿಲ್ಲೆಯ ಅನುಭಾವಿ ಕವಿಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೬. ಬೋರಲಿಂಗಯ್ಯ. ಹಿ.ಚಿ, ಎಜ್ಜನಿ ಚೌಡಮ್ಮ, ೧೯೩೬.

೩೭. ಮಂಜುನಾಥ ಬೇವಿನಕಟ್ಟಿ, ೧೯೯೭, ಜನಪದ ನಂಬಿಕೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೮. ಮಂಜುನಾಥ ಬೇವಿನಕಟ್ಟಿ, ೨೦೦೯, 'ಕರ್ನಾಟಕ ಜನಪದ ಸ್ತ್ರೀದೈವಗಳ ಸಾಂಸ್ಕೃತಿಕ ಪದಕೋಶ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ಮಹಾದೇವ ಶಂಕನಪುರ, ಮಾರಿಹಬ್ಬಗಳು, ೨೦೦೧.

೪೦. ಮಹದೇವ ಸಿ (ಸಂ), ೨೦೧೨, 'ಮೈಲಾರ್', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಮೋಹನ್ ಎಸ್., ೨೦೧೦, ನಾಗಾರಾಧನೆ, ಪರಂಪರೆ ಮತ್ತು ಸ್ಥಿತ್ಯಂತರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೪೨. ಯಳನಾಡು ಅಂಜನಪ್ಪ, ೨೦೦೮ ಧರ್ಮ ಮತ್ತು ಮುಕ್ತ ವಿಚಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೩. ರಂಗಾರೆಡ್ಡಿ ಕೋಡರಾಂಪುರ, ೨೦೧೦, ಜನಪದ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೪. ರಮೇಶ ಸ. ಚಿ. ೨೦೧೦, 'ಕರ್ನಾಟಕದ ಜನಪದ ಆಚರಣೆಗಳು' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೪೫. ರವೀಂದ್ರನಾಥ ಕೆ. ಮತ್ತು ಮಂಜುನಾಥ ಬೇವಿನಕಟ್ಟಿ, ೨೦೧೦, ಜೈನ ಟೀಕಾ ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ರವೀಂದ್ರನಾಥ ಕೆ. ಮತ್ತು ಡಾ.ಸುಬ್ಬಣ್ಣ ರೈ, ೨೦೧೧, "ಕರ್ನಾಟಕ ಜೈನ ಮಠಗಳು ಮತ್ತು ಕನ್ನಡ ಸಾಹಿತ್ಯ", ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೭. ರಹಮತ್ ತರೀಕೆರೆ, ೨೦೦೬, 'ಕರ್ನಾಟಕದ ನಾಥ ಪಂಥ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೮. ರಹಮತ್ ತರೀಕೆರೆ, ೨೦೦೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೯. ಲಕ್ಷ್ಮೀದೇವಿ ಎಸ್, ಗ್ರಾಮ ಮತ್ತು ಶಿಷ್ಟದೇವತೆಗಳು, ಚಿತ್ಕಲಾ ಪ್ರಕಾಶನ, ಕುಪ್ಪಂ, ೨೦೦೩.

೫೦ ಲಕ್ಷ್ಮೀದೇವಿ ಎಲ್. ಮತ್ತು ಸುಬ್ಬಣ್ಣ ರೈ, ೨೦೧೧, ಜೈನ ವಾಙ್ಮಯ ಮತ್ತು ಕನ್ನಡ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೧. ಲಿಂಗಯ್ಯ. ಡಿ, ಬೋರೇದೇವರು, ೧೯೩೬, ಕರ್ನಾಟಕ ಗ್ರಾಮದೇವತೆಗಳು, ೧೯೮೪.

೫೨. ಲಿಂಗಯ್ಯ .ಡಿ, ೧೯೮೪, ಕರ್ನಾಟಕ ಗ್ರಾಮದೇವತೆಗಳು, ಬೆಂಗಳೂರು.

೫೩. ವಸಂತಕುಮಾರ್ ಎಂ.ಸಿ, ಮಳಲಿಗಿಡ್ಡಮ್ಮ, ೧೯೩೦.

೫೪. ವಿರೇಂದ್ರ ಸಿಂಪಿ (ಸಿಂಪಿ ಲಿಂಗಣ್ಣ) (ಸಂ), ೨೦೦೭, ಸಮಗ್ರ ಜನಪದ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೫. ಶಾರದಾ ಮತ್ತು ಮಲ್ಲೇಪುರ ವೆಂಕಟೇಶ್, ೨೦೦೬, ಕರ್ನಾಟಕದಲ್ಲಿ ಜೈನಧರ್ಮ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೬. ಶಿವಕುಮಾರ ಸ್ವಾಮಿ. ಸಿ.ಎಸ್, ಕರ್ನಾಟಕ ಜಾತ್ರೆಗಳು, ೧೯೮೮.

೫೭. ಶ್ರೀಧರಮೂರ್ತಿ. ೧೯೮೧, ಕರ್ನಾಟಕ ಗ್ರಾಮದೇವತೆಗಳ ಪ್ರಶ್ನಾವಳಿ, ಪುನರ್ವಸು ಪ್ರಕಾಶನ, ಬೆಂಗಳೂರು.

೫೮. ಶೇಷನವರತ್ನ, ೧೯೯೮, ಜಾಗತಿಕ ಧರ್ಮಗಳು, ಸಮಾಜ ಪುಸ್ತಕಾಲಯ, ಧಾರವಾಡ.

೫೯. ಸಂಗೀತಾ ಸಪ್ತಸಾಗರ, ಸರಕಾರಿ ಮಹಾವಿದ್ಯಾಲಯ, ಸದಲಗಾ

೬೦. ಸಿದ್ಧಲಿಂಗಯ್ಯ, ೨೦೦೭, ಜನಸಂಸ್ಕೃತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೬೧. ಸಿದ್ಧಲಿಂಗಯ್ಯ, ೧೯೯೭, ಗ್ರಾಮದೇವತೆಗಳು, ಮೂಲ ಭಾರತಿ ಪ್ರಕಾಶನ.

೬೨. ಸುಮಿತ್ರಾ ಕುಂಬಾರ, ೨೦೧೨, ಅಲ್ಲಮನ ಆಡುಂಬೊಲ ಸಾರ್ಥಕ ಪ್ರಕಾಶನ, ಚಿಂಚಣಿ

೬೩. ಹಂಪ ನಾಗರಾಜಯ್ಯ, ೧೯೮೫, ಕರ್ನಾಟಕ ಜಾತ್ರೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೬೪. ಡಾ. ಹಿರೇಮಠ ವ್ಹಿ.ಬಿ. (ಸಂ), 'ಪ್ರಭಾಂಕಲಿ', ಯಾರ್ಬಲ್ ಆಫ್‌ಸೆಟ್ ಪ್ರಿಂಟರ್ಸ್ ಇಂಡಸ್ಟ್ರೀಯ ಎಸ್ಟೇಟ್, ಬೆಳಗಾವಿ.

೬೫. ಹಳ್ಳಿಕೇರಿ ಎಫ್.ಟಿ(ಸಂ), ೨೦೧೩, 'ಹಾಲುಮತ ವ್ಯಾಸಂಗ', ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೬. ಹಿರೇಮಠ ಎನ್.ಎಸ್., ೧೯೯೩, ಜಾತ್ರೆಗಳು, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ–೨, ಸಮತಾ ಪ್ರಕಾಶನ, ಹೊಸಪೇಟೆ.

೬೭. ಹಿರೇಮಠ. ಎಸ್.ಎಸ್, 'ಕೊಪ್ಪಳ ಜಿಲ್ಲೆಯ ಜತ್ರೆಗಳು' ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೦.

೬೮. ಹಿರೇಮಠ ಎನ್.ಎಸ್., ೨೦೦೫, ಜನಪದ ಸಮಾಜ ಸಂಸ್ಕೃತಿ, ಸೂರ್ಯ ಪ್ರಕಾಶನ, ಮಲ್ಲಾಡಿಹಳ್ಳಿ.

೬೯. ಹೀರೆಮಠ. ಎಸ್.ಎಸ್, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ, (ಭಾಗ–೦೨)

English refrence Books.

70. Abbe J.A. Dubois – hindu manners, customs and ceremonious, 1897.

71. Aiyangar. K – 'Some contributions of south India to Indian culture'. Cosmo publications New Delhi – 1981.

72. Ali Mumtaz Khan –'scheiuld castes and their status'.

73. Alexander Hikrappe – the science of folklore.

74. Andrew lang – myth, Ritual: and religion.

75. Bhatta charya – Indian mother Goddess – 1971.

76. Branis law – magic, science and religion and other essars, 1948.

77. Chaturvedi. B.K – God and Goddesses of India – 07, Durga 1996.

78. Emile durkheim –'the elimentary forms of the religious life' – 1961.

79. Henry white head. D.D – the village God's of south India (1921).

80. Jha. D.N – ancient India.

81. Kosambi. D.D – the culture and civilization of ancient India histoarieal out lines.

82. Kosambi. D.D – An introduction to the study of Indian history.

83. Kurup. K.K.N –Aryan and Dravidian elements In Malabar folk-lore, Kerala historical society trivendrum, 1977.

84. Lynn, Gatwood – Devi and the spouse Goddesses, women sexu-ality and marriage in India.

85. Ramachandra Rao. S.K – the folk origions of Indian temples.

86. Romila Thapar – Exile and kingdom 'Some thoughts on the Ramayana' Bangalore. The mythic society, 1978.

87. Shyam kishorelal – female divinities in hindu mythology, and ritual.

88. Sibendu mannaq – mother Goddess chandi: l's social ritual im-pact of falk life.

89. Srinivas M.N – dimensions of social change In India -1972.

90. Swami Harshananda – hindu Gods and Goddesses, 2002.

91. Thomas B. coburm –Devi mahatmeya: the cryastallization of the Goddess tradition.

92. Tiwari. J.N – Goddess cults in ancient India with special refrence to the first seven countries A.D.

ಪತ್ರಿಕೆಗಳು:

೯೩. ವಿಜಯ ಕರ್ನಾಟಕ ದಿನ ಪತ್ರಿಕೆ ೧೩.೦೯.೨೦೧೨

೯೪. ಕನ್ನಡ ಪ್ರಭ ದಿನಪತ್ರಿಕೆ ೧೮-೦೯-೨೦೧೨

೯೫. ಸಂಯುಕ್ತ ಕರ್ನಾಟಕ ದಿನ ಪತ್ರಿಕೆ ೨೫-೧೧-೨೦೧೨

ವಕ್ತೃ ವಿವರ

ವಕ್ತೃ ವಿವರ

ಕ್ರಸಂ.	ಹೆಸರು	ವಯಸ್ಸು	ಊರು
೧.	ಶ್ರೀ ಅಲ್ಲಮ್ಮಪ್ರಭು ಮಹಾಸ್ವಾಮಿಗಳು	೫೦	ಚಿಂಚಣಿ
೨.	ಪ್ರೊ. ಶಿವಯೋಗಿ ಅಂಗಡಿ	೪೦	ನಿಪ್ಪಾಣಿ
೩.	ಶ್ರೀ. ರಾಜು ಸವದತ್ತೆ	೪೦	ಯಡೂರು
೪.	ಶ್ರೀಮತಿ ಸವಿತಾ ಸುರೇಶ ಚೌಗಲಾ	೪೫	ಚಿಂಚಣಿ
೫.	ಪ್ರೊ. ಶ್ರೀಮತಿ ಪ್ರೇಂಕಜ ಟಾಕಳೆ	೨೮	ನಿಪ್ಪಾಣಿ
೬.	ಪ್ರೊ. ಶ್ರೀಮತಿ ಕೆ.ಡಿ.ಜೋಶಿ	೫೫	ನಿಪ್ಪಾಣಿ
೭.	ಪ್ರೊ. ವಿಜಯ ಧಾರವಾಡ	೫೦	ನಿಪ್ಪಾಣಿ
೮.	ಶ್ರೀಮತಿ ಸಮೀರ ಬಾಗೇವಾಡಿ	೪೦	ನಿಪ್ಪಾಣಿ
೯.	ಶ್ರೀ ಖಲೀಜಾ ಅಹ್ಮದ ಮಕಾನದಾರ	೬೦	ಕರೋಶಿ
೧೦.	ಶ್ರೀ ನೂರ ಮುಜಾವರ	೬೦	ಸದಲಗಾ
೧೧.	ಶ್ರೀ ಬಂಡಾ ಸರದಾರ	೫೫	ಖಡಕಲಾಟ
೧೨.	ಶ್ರೀ ಮುರಳೀಧರ ಕುಲಕರ್ಣಿ	೫೫	ಖಡಕಲಾಟ
೧೩.	ಶ್ರೀ ಸಂಜಯ ಕುಮಾರ ಕಂಬಾಳೆ	೪೦	ಖಡಕಲಾಟ
೧೪.	ಶ್ರೀ ಶಕೀಲ ಮಾದಾರ	೪೫	ಚಿಕ್ಕೋಡಿ
೧೫.	ಶ್ರೀ ಅಪ್ಪಾಲಾಲ ಗುಲಾಬ ಮಕಾನದಾರ	೪೫	ಕಾರದಗಾ
೧೬.	ಶ್ರೀ ಅಪ್ಪಾಸಾಹೇಬ ಸತ್ಯಪ್ಪಾ ಲಾಟಕರ	೮೦	ಲಖನಾಪೂರ
೧೭.	ಶ್ರೀ ಪ್ರವೀಣ ಇಂಗಳೆ	೩೦	ಸದಲಗಾ
೧೮.	ಭಜರಂಗ ಸಹದೇವ ಧರ್ಮರ	೮೦	ಜನವಾಡ

೧೯.	ಶ್ರೀ ಬಾಬಾಸಾಹೇಬ ನಿವೃತ್ತಿ ಘಾಟಗೆ	೭೦	ಜನವಾಡ
೨೦.	ಶ್ರೀ ಸುಭಾಷ ಲಕ್ಷ್ಮಣ ಪಾಟೀಲ	೪೦	ಜನವಾಡ
೨೧.	ಶ್ರೀ ಜ್ಯೋತಿಬಾ ನರಸಿಂಗ ಚೌಗಲಾ	೫೦	ಜನವಾಡ
೨೨.	ಶ್ರೀ ರೇವಪ್ಪಾ ರತ್ನಪ್ಪಾ ಮಗದುಮ್ಮ	೬೦	ಜನವಾಡ
೨೩.	ಶ್ರೀ ಕಲ್ಲಪ್ಪಾ ರಂ. ಪಾಟೀಲ	೫೦	ಜನವಾಡ
೨೪.	ಶ್ರೀ ಅನೀಲ ರಾಮಗೌಡಾ ಜಾಂಗಡೆ	೬೦	ಜನವಾಡ
೨೫.	ಶ್ರೀ ಆದಗೌಡಾ ಅಪ್ಪಾ ಸದಲಗೆ	೫೦	ಜನವಾಡ
೨೬.	ಶ್ರೀಮತಿ ತಂಗೆವ್ವಾ ಯಶವಂತ ಘಾಟಗೆ	೪೮	ಜನವಾಡ
೨೭.	ಪ್ರೊ. ಶ್ರೀಮತಿ ಸನಿತಾ ಜಾಧವ	೩೦	ಪಟ್ಟಣಕುಡಿ
೨೮.	ಪರಮಪೂಜ್ಯ ಮಲ್ಲಿಕಾರ್ಜುನ ಸ್ವಾಮೀಜಿ	೭೫	ಭೋಜ
೨೯.	ಡಾ. ಮಹೇಶ ಗುರನಗೌಡರ	೪೦	ಬೆಳಗಾವಿ
೩೦.	ಶ್ರೀ ರಾಜೇಂದ್ರ ಕಂಗಳೆ	೪೦	ನಿಪ್ಪಾಣಿ
೩೧.	ಪ್ರೊ. ಶ್ರೀಮತಿ ಶಿವಲೀಲ ಪಾಟೀಲ	೨೫	ಕೆರೂರ
೩೨.	ಶ್ರೀ ಶ್ರೀಪಾದ ಕುಂಬಾರ	೪೦	ಚಿಕ್ಕೋಡಿ
೩೩.	ಪ್ರೊ. ಉದಯ ಕೋಟಿವಾಲೆ	೪೨	ಚಿಕ್ಕೋಡಿ
೩೪.	ಪ್ರೊ. ಶ್ರೀಮತಿ ಶ್ರೀದೇವಿ	೩೫	ಧಾರವಾಡ
೩೫.	ಶ್ರೀ ಬಾಳಗೌಡಾ ನಾರಾಯಣ ಪಾಟೀಲ	೫೦	ಕೆರೂರ
೩೬.	ಶ್ರೀ ಚಿದಾನಂದ ಸಿದ್ದಪ್ಪಾ ಒಡೆಯರ್	೫೦	ಕೆರೂರ
೩೭.	ಶ್ರೀ ಭೀಮಗೌಡಾ ಅ. ಪಾಟೀಲ	೫೦	ಕೆರೂರ
೩೮.	ಶ್ರೀ ಮಲ್ಲಿಕಾರ್ಜುನ ಜ್ಯೋತಿಗೌಡಾ ಪಾಟೀಲ	೬೦	ಕೆರೂರ
೩೯.	ಶ್ರೀ ರಾಮು ಮಲ್ಲಪ್ಪಾ ಜಾಂಗಟೆ	೫೦	ಕೆರೂರ

೪೦.	ಶ್ರೀ ಸಿದ್ರಾಮ ಮೋನಪ್ಪ ಗಡದಿ	೫೦	ಕೆರೂರ
೪೧.	ಶ್ರೀ ಜ್ಯೋತಿಗೌಡಾ ಪಾಟೀಲ	೪೫	ಕೆರೂರ
೪೨.	ಶ್ರೀ ನರಗೌಡ ರಾಯಗೌಡ ಪಾಟೀಲ	೪೦	ಕೆರೂರ
೪೩.	ಶ್ರೀ ಚನಗೌಡಾ ಮಲಗೌಡಾ ಪಾಟೀಲ	೫೦	ಕೆರೂರ
೪೪.	ಪ್ರೊ. ಸೂರಿ	೪೦	ಚಿಕ್ಕೋಡಿ
೪೫.	ಶ್ರೀ ಪಿ.ಎ. ಕಂಬಾಳೆ	೫೦	ನೇಜ
೪೬.	ಶ್ರೀ ರಮೇಶ ವಾಲಿ	೪೨	ಹತ್ತರವಾಟ
೪೭.	ಶ್ರೀ ವಿಜಯ ಮುಗಳಿ	೪೦	ರಾಂಪೂರ
೪೮.	ಶ್ರೀ ಶವಾನಂದಾ ಅ. ಚೌಗಲಾ	೪೦	ಚಿಂಚಣಿ
೪೯.	ಶ್ರೀಮತಿ ಸುಮಿತ್ರಾ ಕುಂಬಾರ	೬೦	ಚಿಂಚಣಿ
೫೦.	ಡಾ. ಹೆಚ್.ಸಿ. ಚನ್ನಪ್ಪಗೋಳ	೪೦	ಅಥಣಿ
೫೧.	ಶ್ರೀಮತಿ ಕಾವೇರಿ ವಿ. ಸೋಲ್ಲಾಪುರೆ	೨೪	ಕರೋಶಿ
೫೨.	ಶ್ರೀ ವಿಶ್ವನಾಥ ಭೀ. ಸೋಲ್ಲಾಪುರೆ	೩೦	ಕರೋಶಿ

ಛಾಯಾಚಿತ್ರಗಳು

ಛಾಯಾಚಿತ್ರಗಳ ವಿವರ

೧. ದೂದ್‌ಗಂಗಾ ನದಿಯಲ್ಲಿ ದೊರೆತ ನಂದಿ ವಿಗ್ರಹ, ಉಗಮೇಶ್ವರ ದೇವಾಸ್ಥಾನ, ಭೋಜ್‌ಗ್ರಾಮ

೨. ಕಾರದಗಾ ಸದಲ್ಲಾ ಖಡಖ್‌ಲಾಟ್ ಮುಸ್ಲಿಂ ಸನ್ಯಾಸಿಗಳು

೩. ಜೈನ ಬಸದಿ ಮಾನಸಸ್ಥಂಭ, ಭೋಜ್ ಗ್ರಾಮ

೪. ಲಖಾನಾಪುರದ ದೇವದಾಸಿಯರು, ಯಲ್ಲಮ್ಮನ ಹಾಡುಗಳನ್ನು ಹಾಡುವ ಸಂದರ್ಭ

೫. ಯಡೂರು ವಿರಭದ್ರಸ್ವಾಮಿ ದೇವಸ್ಥಾನ

೬. ಯಕ್ಸಂಬಾದಲ್ಲಿ ಡೊಳ್ಳುಕುಣಿತ

೭. ಖಡಕಲಾಟ ಮರ್ದಗೈಬಿ ಟ್ರಸ್ಟ್ ಕಮಿಟಿ ಸದಸ್ಯರು

೮. ದೆವ್ವದ ಆಚರಣೆ

೯. ನೋಂಪಿ(ಲೋಪಿ) ಆಚರಣೆ

೧೦. ಉಗಮೇಶ್ವರ ಜಾತ್ರೆಯ ಬಗ್ಗೆ ಸಂದರ್ಶನ, ಪರಮಪೂಜ್ಯ ಮಲ್ಲಿಕಾರ್ಜುನಸ್ವಾಮೀಜಿ, ಭೋಜ ಗ್ರಾಮ

೧೧. ಪಲ್ಲಕ್ಕಿ ಉತ್ಸವ, ಹಾಲಸಿದ್ದನಾಥ ಜಾತ್ರೆ, ಅಪ್ಪಾಚಿವಾಡಿ ಗ್ರಾಮ

೧೨. ಅರಣ್ಯ ಸಿದ್ದೇಶ್ವರ ಸ್ವಾಮಿ, ಕಾಡಾಪುರ

೧೩. ಯಡೂರು ವೀರಭದ್ರೇಶ್ವರ ರಥ

೧೪. ಸಪ್ತಮಾತೃಕೆಯರು, ಜನವಾಡ-ಮಠ

೧೫. ಅರಣ್ಯ ಸಿದ್ದೇಶ್ವರ ಜಾತ್ರೆಯಲ್ಲಿ ಡೊಳ್ಳುಕುಣಿತ

೧೬. ಯಕ್ಸಂಬ ಬೀರೇಶ್ವರ ದೇವಸ್ಥಾನ

೧೭. ಕರೋಶಿ ಅಮವಾಸ್ಯೆಯಲ್ಲಿ ಕೋಳಿಬಲಿ ಆಚರಣೆ

೧೮. ಜನವಾಡ ಮಹಾದೇವಸ್ವಾಮಿ ಮಠದ ಎತ್ತುಗಳು

೧೯. ಚಿಂಚಣಿ ಅಲ್ಲಮಪ್ರಭು ಜಾತ್ರೆಯಲ್ಲಿ ಮಾದರ ಸಮಾಜದವರು ಚಾಂದನಿ ಕಟ್ಟಲು ಹಗ್ಗ ಪೂರೈಸುತ್ತಿರುವುದು

೨೦. ಚಿಕ್ಕೋಡಿ ಮೋಹರಂ ಆಚರಣೆ

೨೧. ಪಟ್ಟಣಕುಡಿ ಜಾತ್ರೆಯಲ್ಲಿ ಪುಗುಡಿ ಆಡುವ ಮಹಿಳೆಯರು

೨೨. ಶ್ರೀ ಖೀಲ ಅಹ್ಮಮದ್ ಎಂ. ಮಕಂದರ್ ದರ್ಗಾ (ಅಷ್ಠಿ ಸಂದರ್ಶನ)

೨೩. ಜಾತ್ರಾ ವೀಕ್ಷಣೆ, ನಾಗರಮೊನ್ನೋಳಿ ಗ್ರಾಮ, ಸಂಶೋಧಕಿ

೨೪. ಶಮನಾಪೀರ್ ದರ್ಗಾ, ಸದಲಗಾ

೨೫. ಅರಣ್ಯ ಸಿದ್ದೇಶ್ವರ ಸ್ವಾಮಿ, ಕೆರೂರು

೨೬. ೫೦೦ ವರ್ಷದ ಹಿಂದಿನ ನಗಾರಿ, ಶ್ರೀ ನೂರ್ ಮುಜಾವರ್

೨೭. ಜನವಾಡ ಮಹಾದೇವಸ್ವಾಮಿಯ ಹಸ್ತಪ್ರತಿ

೨೮. ಜನವಾಡ ಮಹಾದೇವಸ್ವಾಮಿಯ ಧರ್ಮದ ಮಠ, ಟ್ರಸ್ ಕಮಿಟಿ ಸದಸ್ಯರು

೨೯. ಅಂಕಲಿ ಸಿದ್ದೇಶ್ವರ ಜಾತ್ರೆಯ ಒಂದು ನೋಟ

೩೦. ಮಹಾದೇವ ಸ್ವಾಮಿ ಬಗ್ಗೆ ಮಾಹಿತಿ ಕೊಡುವ ಜನವಾಡ ಮಠದ ಭಕ್ತರೊಂದಿಗೆ ಸಂದರ್ಶನ

೩೧. ಜಾನಪದ ಹಾಡುಗಳನ್ನು ಹೇಳಿದ ಶ್ರೀಮತಿ ಬಸಮ್ಮ ಅಪ್ಪಾಸಾಹೇಬ ಚೌಗಲಾ ಸಾ. ಚಿಂಚಣಿ ಮತ್ತು ಸಂಶೋಧಕಿ

೩೨. ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡಿದ ಓಂಕಾರ ಮಹಾದೇವ ಬೆಂಡವಾಡೆ, ವಿಜಯ ಸುಭಾಸ ಚೌಗಲಾ ಹಾಗೂ ಸಂಶೋಧಕಿ

ಛಾಯಾಚಿತ್ರಗಳು



೧. ದೂದ್‌ಗಂಗಾ ನದಿಯಲ್ಲಿ ದೊರೆತ ನಂದಿ ವಿಗ್ರಹ, ಉಗಮೇಶ್ವರ ದೇವಾಸ್ಥಾನ, ಭೋಜಗ್ರಾಮ



೨. ಕಾರದಗಾ ಸದಲಗಾ ಖಡಕಲಾಟ ಗ್ರಾಮದ ಮುಸ್ಲಿಂ ಸನ್ಯಾಸಿಗಳು ಮತ್ತು ಸಂಶೋಧಕಿ



೩. ಜೈನ ಬಸದಿ ಮಾನಸ್ತಂಭ, ಬೋಜ ಗ್ರಾಮ



೪. ಲಖಾನಾಪುರದ ದೇವದಾಸಿಯರು, ಯಲ್ಲಮ್ಮನ ಹಾಡುಗಳನ್ನು ಹಾಡುವ ಸಂದರ್ಭ ಮತ್ತು ಸಂಶೋಧಕಿ



೫. ಯಡೂರು ವಿರಭದ್ರಸ್ವಾಮಿ ದೇವಸ್ಥಾನ



೬. ಯಕ್ಸಂಬಾ ಬೀರೇಶ್ವರ ಜಾತ್ರೆಯಲ್ಲಿ ಡೊಳ್ಳು ಕುಣಿತ



೭. ಖಿಡಕಲಾಟ ಮರ್ದಗೈಬಿ ಟ್ರಸ್ಟ್ ಕಮಿಟಿ ಸದಸ್ಯರು ಮತ್ತು ಸಂಶೋಧಕಿ



೮. ದೆವ್ವದ ಆಚರಣೆ, ಸಂಶೋಧಕಿ ಹಾಗೂ ಮಾಹಿತಿ ನೀಡುವವರು



೯. ನೋಂಪಿ(ಲೋಪಿ) ಆಚರಣೆ ಜೈನಧರ್ಮ



೧೦. ಉಗಮೇಶ್ವರ ಜಾತ್ರೆಯ ಬಗ್ಗೆ ಸಂದರ್ಶನ. ಪರಮಪೂಜ್ಯ ಮಲ್ಲಿಕಾರ್ಜುನಸ್ವಾಮೀಜಿ, ಭೋಜ ಗ್ರಾಮ ಮತ್ತು ಸಂಶೋಧಕಿ



೧೧. ಪಲ್ಲಕ್ಕಿ ಉತ್ಸವ, ಹಾಲಸಿದ್ದನಾಥ ಜಾತ್ರೆ, ಅಪ್ಪಾಚಿವಾಡಿ ಗ್ರಾಮ



೧೨. ಅರಣ್ಯ ಸಿದ್ದೇಶ್ವರ ಸ್ವಾಮಿ, ಕಾಡಾಮರ



೧೩. ಯಡೂರು ವೀರಭದ್ರೇಶ್ವರ ರಥ



೧೪. ಸಪ್ತಮಾತೃಕೆಯರು, ಜನವಾಡ-ಮಠ



೧೫. ಅರಣ್ಯ ಸಿದ್ದೇಶ್ವರ ಜಾತ್ರೆಯಲ್ಲಿ ಡೊಳ್ಳುಕುಣಿತ



೧೬. ಯಕ್ಸಂಬ ಬೀರೇಶ್ವರ ದೇವಸ್ಥಾನ



೧೭. ಕರೋಶಿ ಅಮವಾಸ್ಯೆಯಲ್ಲಿ ಕೋಳಿಬಲಿ ಆಚರಣೆ



೧೮. ಜನವಾಡ ಮಹಾದೇವಸ್ವಾಮಿ ಮಠದ ಎತ್ತುಗಳು



೧೯. ಚಿಂಚಣಿ ಅಲ್ಲಮಪ್ರಭು ಜಾತ್ರೆಯಲ್ಲಿ ಮಾದರ ಸಮಾಜದವರು ಚಾಂದನಿ ಕಟ್ಟಲು ಹಗ್ಗ ಪೂರೈಸುತ್ತಿರುವುದು ಮತ್ತು ಸಂಶೋಧಕಿ



೨೦. ಚಿಕ್ಕೋಡಿ ಮೋಹರಂ ಆಚರಣೆ



೨೧. ಪಟ್ಟಣಕುಡಿ ಜಾತ್ರೆಯಲ್ಲಿ ಪುಗುಡಿ ಆಡುವ ಮಹಿಳೆಯರು



೨೨. ಅಹ್ಮದ್ ಎಂ. ಮಕಾನದಾರ ದರ್ಗಾ ಟ್ರಸ್ಟಿ ಕರೋಶಿ ಮತ್ತು ಸಂಶೋಧಕಿ



೨೩. ಜಾತ್ರಾ ವೀಕ್ಷಣೆ, ನಾಗರಮುನ್ನೋಳಿ ಗ್ರಾಮ ಮತ್ತು ಸಂಶೋಧಕಿ



೨೪. ಶಮನಾಪೀರ್ ದರ್ಗಾ, ಸದಲಗಾ



೨೫. ಅರಣ್ಯ ಸಿದ್ದೇಶ್ವರ ಸ್ವಾಮಿ, ಕೆರೂರು



೨೬. ೫೦೦ ವರ್ಷದ ಹಿಂದಿನ ನಗಾರಿ, ಶ್ರೀ ನೂರ್ ಮುಜಾವರ್ ಮತ್ತು ಸಂಶೋಧಕಿ



೨೭. ಜನವಾಡ ಮಹಾದೇವಸ್ವಾಮಿಯ ಹಸ್ತಪ್ರತಿ



೨೮. ಜನವಾಡ ಮಹಾದೇವಸ್ವಾಮಿಯ ಧರ್ಮರ ಮಠ, ಟ್ರಸ್ ಕಮಿಟಿ ಸದಸ್ಯರು ಮತ್ತು ಸಂಶೋಧಕಿ



೨೯. ಅಂಕಲಿ ಸಿದ್ಧೇಶ್ವರ ಜಾತ್ರೆಯ ಒಂದು ನೋಟ



೩೦. ಮಹಾದೇವ ಸ್ವಾಮಿ ಬಗ್ಗೆ ಮಾಹಿತಿ ಕೊಡುವ ಜನವಾಡ ಮಠದ ಭಕ್ತರೊಂದಿಗೆ ಸಂದರ್ಶನ ಮತ್ತು ಸಂಶೋಧಕಿ



೩೧. ಜಾನಪದ ಹಾಡುಗಳನ್ನು ಹೇಳಿದ ಶ್ರೀಮತಿ ಬಸಮ್ಮ ಅಪ್ಪಾಸಾಹೇಬ ಚೌಗಲಾ ಸಾ. ಚಿಂಚಣಿ ಮತ್ತು ಸಂಶೋಧಕಿ



೩೨. ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡಿದ ಓಂಕಾರ ಮಹಾದೇವ ಬೆಂಡವಾಡೆ, ವಿಜಯ ಸುಭಾಸ ಚೌಗಲಾ ಹಾಗೂ ಸಂಶೋಧಕಿ

